








# ಗಿರಿಜನ ಕಾವ್ಯ

ಸಹಸ್ರಮಾನ ಜಾನಪದ : ೪

# ಗಿರಿಜನ ಕಾವ್ಯ

ಸಂಪಾದಕರು

ಪ್ರೊ. ಕಾಳೇಗೌಡ ನಾಗವಾರ

ಪ್ರೊ. ಹಿ ಚಿ ಬೋರಲಿಂಗಯ್ಯ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

**GIRIJANA KAVYA**

REPRESENTATIVE POETRY TRIBLE

KARNATAKA

EDITED BY

**PROF. KALEGOWDA NAGAVARA**

**PROF. HI CHI BORALINGAIAH**

PUBLISHED BY

K. SUDHINDRA

REGISTRAR

KARNATAKA JANAPADA AND

YAKSHAGANA ACADEMY

KANNADA BHAVANA

J.C. ROAD, BANGALORE - 560 002

FIRST EDITION : 2000, PAGES : XXXVI + 454

ಹಕ್ಕುಗಳು : **ಕರ್ನಾಟಕ ಜಾನಪದ ಮತ್ತು**

**ಯಕ್ಷಗಾನ ಅಕಾಡೆಮಿ**

ಬೆಲೆ: **ರೂ. 300** (ಮೂರುನೂರು ರೂಪಾಯಿಗಳು)

ಸಂಪಾದಕರು

**ಪ್ರೊ. ಕಾಳೇಗೌಡ ನಾಗವಾರ**

**ಪ್ರೊ. ಹಿ ಚಿ ಬೋರಲಿಂಗಯ್ಯ**

ಮುಖಪುಟ ವಿನ್ಯಾಸ

**ಮಯೂರ ಶ್ರೀನಿವಾಸ್**

ಪ್ರಕಾಶಕರು

**ಕೆ. ಸುಧೀಂದ್ರ**

**ರಿಜಿಸ್ಟ್ರಾರ್**

ಕರ್ನಾಟಕ ಜಾನಪದ ಮತ್ತು

ಯಕ್ಷಗಾನ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ

ಬೆಂಗಳೂರು - ೫೬೦ ೦೦೨

**ಅಕ್ಷರ ಜೋಡಣೆ ಮತ್ತು ಮುದ್ರಣ**

ಮಯೂರ ಪ್ರಿಂಟ್ ಆ್ಯಡ್ಸ್

ಬೆಂಗಳೂರು - 20 ✆ - 3342724

# ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ನಾಡಿನ ಎಲ್ಲಾ ಬಗೆಯ ಜನಪದ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ತುಂಬು ಹಂಬಲವನ್ನುಳ್ಳ ಸಾಂಸ್ಕೃತಿಕ ಸಂಸ್ಥೆಯಾಗಿದೆ. ಪ್ರಕೃತಿಯ ಕಂದಮ್ಮಗಳಾದ ಹಳ್ಳಿಗಾಡಿನ ಜನತೆಯು ಹೃದಯವಂತಿಕೆಯಿಂದ ರೂಪಿಸಿರುವ ಈ ಜಗತ್ತು ಅತ್ಯಂತ ಮಹತ್ವಪೂರ್ಣವೂ, ವೈವಿಧ್ಯಮಯವೂ ಆಗಿರುವ ಸೂಕ್ಷ್ಮತಮ ಸಾಂಸ್ಕೃತಿಕ ಸಂಪತ್ತನ್ನು ಹೊಂದಿದೆ. ನೂರಾರು ಪ್ರದರ್ಶನ ಕಲೆಗಳು, ಚೇತೋಹಾರಿಯಾದ ದೃಶ್ಯಕಲೆಗಳು, ವಸ್ತ್ರವಿನ್ಯಾಸ, ಅಪೂರ್ವ ಗುಡಿಕೈಗಾರಿಕೆಗಳು, ದಟ್ಟಅರಣ್ಯದ ನಡುವೆ ಇರುವ ಗಿರಿಜನರ ಬದುಕು ಹಾಗೂ ಜೀವವೈವಿಧ್ಯತೆಯಿಂದ ನಿತ್ಯಸಮೃದ್ಧವಾಗಿರುವ ನಮ್ಮ ಜನಪದ ಸಂಸ್ಕೃತಿಯ ಸೃಜನಶೀಲತೆಗೆ ವಿಚಿತ್ರತರ ಆಧುನಿಕತೆಯಿಂದಾಗಿ ಧಕ್ಕೆಯುಂಟಾಗತೊಡಗಿದೆ.

ಈ ಸಂದಿಗ್ಧ ಕಾಲಘಟ್ಟದಲ್ಲಿ ದುಡಿಮೆಗಾರರ ಲೋಕದ ದಟ್ಟ ಜೀವನಪ್ರೀತಿಯ ತಿರುಳಾಗಿರುವ ಚೈತನ್ಯಪೂರ್ಣ ಅಂಶಗಳಿಗಾಗಿ ಹಾರೈಸಿ ಅರ್ಥವತ್ತಾದುದನ್ನು ಕಟ್ಟಕ್ಕರೆಯಿಂದ ನಾವೆಲ್ಲ ಉಳಿಸಿಕೊಂಡು ಜೀವಂತವಾಗಿ ಬೆಳೆಯಬೇಕಾಗಿದೆ. ಈ ಬಗೆಯ ಆರೋಗ್ಯಕರ ಸಾಂಸ್ಕೃತಿಕ ವಾತಾವರಣದ ಹೆಮ್ಮೆಯ ಸಂಗಾತಿಗಳಾಗಿ ಪರಸ್ಪರ ದುಡಿಯಬೇಕೆಂಬ ಸಾಮೂಹಿಕ ಹೊಣೆಗಾರಿಕೆಯು ನಮ್ಮೆಲ್ಲರ ಕಣ್ಣಮುಂದಿನ ಆದರ್ಶವಾಗಬೇಕಾಗಿದೆ.

ಕರ್ನಾಟಕ ಜಾನಪದ ಅಕಾಡೆಮಿಯು ಕೇವಲ ಕನ್ನಡ ಜಾನಪದಕ್ಕಷ್ಟೇ ಸೀಮಿತವಾದುದಲ್ಲ ; ಹಿಂದಿನಿಂದಲೂ ಕನ್ನಡ ನೆಲದ ಅವಿಭಾಜ್ಯ ಅಂಗವಾಗಿಯೇ ನೆಲೆಗೊಂಡಿರುವ ಇಲ್ಲಿನ ತುಳು, ಕೊಡವ, ಕೊಂಕಣಿ, ಉರ್ದು, ಲಂಬಾಣಿ ಮುಂತಾದ ಬಹುಭಾಷಿಕ ಸಮುದಾಯದ ಸಾಂಸ್ಕೃತಿಕ ವಲಯಗಳಲ್ಲಿನ ಸೂಕ್ಷ್ಮಗಳು ಹಾಗೂ ಪರಸ್ಪರ ಕೊಳು-ಕೊಡುಗೆಗಳನ್ನು ಕುರಿತು ಅಧ್ಯಯನ ನಡೆಸುವುದು ನಮ್ಮ ಪ್ರಮುಖ ಕರ್ತವ್ಯವಾಗಿದೆ.

ಜನತೆಯ ಅನುಭವದ ಸಂಪತ್ತಿನ ಹಿನ್ನೆಲೆಯಲ್ಲಿ ರೂಪುಗೊಂಡಿರುವ ಈ ಜ್ಞಾನನಿಧಿಯಲ್ಲಿ ಒಂದು ನಾಡಿನ ಮೌಲ್ಯ, ವಿವೇಕ ಮತ್ತು ಆದರ್ಶಗಳು ಅಡಗಿರುತ್ತವೆ. ಆದರೆ, ಆಧುನಿಕತೆಯ ಅತಿಯಾದ ಧಾವಂತದಲ್ಲಿರುವ ನಮ್ಮಿಂದಾಗಿ, ಪಂಚಭೂತಗಳ ತಾಯ್ತನದ ಮಡಿಲಾಗಿರುವ ಜನಪದ ಸಂಸ್ಕೃತಿಯು ತತ್ತರಿಸತೊಡಗಿದೆ. ವಿಸ್ಮೃತಿಗೆ ಒಳಗಾಗುತ್ತಿರುವ ಸಮುದಾಯಕ್ಕೆ ಸ್ಥಳೀಯ ಜ್ಞಾನಸಂಪತ್ತಿನ ಮಹತ್ವವನ್ನು

ಮನದಟ್ಟು ಮಾಡಬೇಕಾದ ಅವಶ್ಯಕತೆಯು ಇದೀಗ ಎಂದಿಗಿಂತ ಹೆಚ್ಚಾಗಿದೆ.

ನಾಡಿನ ಜನಪದ ಕಲೆ, ಸಾಹಿತ್ಯ, ಪರಂಪರೆಯಿಂದ ಬಂದಿರುವ ಜ್ಞಾನ ಹಾಗು ಒಟ್ಟು ನಮ್ಮ ಜನಸಮುದಾಯದ ಸಂಸ್ಕೃತಿಯ ಉದಾತ್ತ ಮೌಲ್ಯಗಳ ಪುನರುತ್ಥಾನದ ಹಾದಿಯಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ತನ್ನ ಪಯಣವನ್ನು ಆರಂಭಿಸಿದೆ.

ಪ್ರಕೃತಿಯ ಮಡಿಲಲ್ಲಿ ಆಡಿ ಬೆಳೆದು, ಗಾಣದೆತ್ತಿನಂತೆ ನಿರಂತರವಾಗಿ ದುಡಿಯುತ್ತಲೇ ಬಂದು ಉದ್ದಕ್ಕೂ ಅಕ್ಷರವಂಚಿತರಾಗಿರುವ ನಮ್ಮ ಜನಪದ ಕಲಾವಿದರು ವಾಸ್ತವವಾಗಿ ಗಂಧರ್ವಲೋಕದ ಗೆಣೆಕಾರರಾಗಿದ್ದಾರೆ. ತಾಯಿಯ ತೊಟ್ಟಿಲಿನ ಅಕ್ಕರೆ ನೀಡಿರುವ ಇವರ ಸುತ್ತಣ ಜಗತ್ತು ಗಂಧವತಿಪೃಥ್ವಿಯ ಸಕಲ ಸಲ್ಲಕ್ಷಣಗಳನ್ನು ಒಳಗೊಂಡಿರುವ ಪಂಚಭೂತಗಳ ವಂಚನೆರಹಿತ ಗುಣಧರ್ಮದ ಆಗರವಾಗಿದೆ. ನೂರಾರು ವರ್ಷಗಳ ಹಿಂದಿನಿಂದಲೂ ಬಾಯಿಂದ ಬಾಯಿಗೆ ಹರಿದು ಬರುತ್ತಿರುವ ಈ ಕಲಾವಿದರ ಸಾಹಿತ್ಯ ಸಂಪತ್ತು ನಮ್ಮೆದುರು ಸಾಗರದಂತೆ ವ್ಯಾಪಿಸಿದೆ.

ಮಾನವನ ಬದುಕಿನ ವಿವಿಧ ಕಾಲಘಟ್ಟಗಳಲ್ಲಿ ರೂಪುಗೊಂಡ ಪರಂಪರಾನುಗತವಾದ ಜ್ಞಾನ, ವಿಸ್ತಾರವಾದ ಅನುಭವದ ಒಡಲಿನಿಂದ ಮೂಡಿಬಂದ ಸೂಕ್ಷ್ಮಾತಿಸೂಕ್ಷ್ಮ ಚಿಂತನೆ, ಬದುಕಿನಂಗಣದಲ್ಲಿನ ಚಿರಂತನ ಮೌಲ್ಯಗಳ ತಡಕಾಟ ಹಾಗೂ ಆಕಾಶದ ಕೆಳಗಿನ ಎಲ್ಲ ಬಗೆಯ ಚಿತ್ರ ವಿಚಿತ್ರ ಅಪರೂಪದ ಸಂಗತಿಗಳಿಗೂ ಕಾಲಕಾಲಕ್ಕೆ ಅಭಿವ್ಯಕ್ತಿ ನೀಡುತ್ತಾ ಬಂದಿರುವ ಅಪೂರ್ವ ಕಾವ್ಯರೂಪಗಳ ಗಣಿಯಾಗಿದೆ ಈ ಗಿರಿಜನ ಕಾವ್ಯ ಸಂಕಲನ.

ಸತ್ಯ ಮತ್ತು ಸೌಂದರ್ಯಕ್ಕಾಗಿ ನಿರಂತರವಾಗಿ ಹಾರೈಸಿದ ಮತ್ತು ಆ ಮೂಲಕ ತಮ್ಮ ಸಮಸ್ತ ಬದುಕನ್ನೇ ಇನ್ನಿಲ್ಲದಷ್ಟು ಆನಂದಮಯವಾಗಿಸಿಕೊಂಡ ಗಿರಿಕಂದರಗಳ ಸಾಕ್ಷಾತ್ ಕಂದಮ್ಮಗಳ ತೀವ್ರ ಸಂವೇದನೆಯ, ಅರಿವಿನ ಪ್ರಶಾಂತಲೋಕ ಇದಾಗಿದೆ.

ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸೋಮನಹಳ್ಳಿ ಮಲ್ಲಯ್ಯ ಕೃಷ್ಣ ಅವರನ್ನು ಭೇಟಿಯಾಗಿ ಈ ಸಹಸ್ರಮಾನ ಜಾನಪದ ಸಂಪುಟಗಳ ಉಪಯುಕ್ತತೆಯ ಬಗ್ಗೆ ವಿವರಿಸಿದಾಗ, ಅತ್ಯಂತ ಸಂತೋಷದಿಂದ ಅವರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗೆ ವಿಶೇಷ ಅನುದಾನ ನೀಡಿದರು. ಮುಖ್ಯಮಂತ್ರಿಗಳ ಉದಾರ ಮನಸ್ಸು ಮತ್ತು ಸದಭಿರುಚಿಯ ಕಾರಣಕ್ಕಾಗಿ ನಾನು ಅವರಿಗೆ ತುಂಬುಹೃದಯದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಹಾಗೆಯೇ ಹಿರಿಯರೂ, ಹಿತೈಷಿಗಳೂ ಆಗಿರುವ ಶ್ರೀ ವೈ.ಕೆ. ರಾಮಯ್ಯನವರು

ಈ ಸಂಬಂಧದಲ್ಲಿ ನೆರವಾಗಿರುವುದನ್ನು ಕೃತಜ್ಞಪೂರ್ವಕವಾಗಿ ಸ್ಮರಿಸುತ್ತೇನೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸನ್ಮಾನ್ಯ ಸಚಿವರಾದ ಶ್ರೀಮತಿ ರಾಣಿ ಸತೀಶ್ ಅವರು, ಕಾರ್ಯದರ್ಶಿಗಳಾದ ಶ್ರೀ ಅ.ರಾ. ಚಂದ್ರಹಾಸಗುಪ್ತ ಅವರು ಹಾಗು ನಿರ್ದೇಶಕರಾದ ಶ್ರೀ ಕೆ.ಸಿ. ರಾಮಮೂರ್ತಿ ಅವರು ಈ ಬಗ್ಗೆ ನನಗೆ ಹೆಚ್ಚಿನ ಸಹಕಾರ ನೀಡಿದ್ದಾರಲ್ಲದೆ ಗಿರಿಜನ ಉಪಯೋಜನೆ ಅಡಿಯಲ್ಲಿ ಧನಸಹಾಯಮಾಡಿ ಈ ಕೃತಿ ಪ್ರಕಟವಾಗಲು ಕಾರಣರಾಗಿದ್ದಾರೆ. ಈ ಸಹಕಾರಕ್ಕಾಗಿ ನಾನು ಕೃತಜ್ಞ.

ದೀಪಾವಳಿಯ ಶುಭಾಶಯಗಳೊಡನೆ,

೨೮.೧೦.೨೦೦೦

**ಪ್ರೊ. ಕಾಳೇಗೌಡ ನಾಗವಾರ**
ಅಧ್ಯಕ್ಷರು.
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ



# ಪ್ರಸ್ತಾವನೆ

## ಹಿ.ಚಿ. ಬೋರಲಿಂಗಯ್ಯ

**ಕಾ**ವ್ಯವನ್ನು ಕುರಿತಾದ ಚರ್ಚೆ ನಮ್ಮಲ್ಲಿ ವ್ಯಾಪಕವಾಗಿಯೇ ನಡೆದಿದೆ. ಭಾರತೀಯ ಕಾವ್ಯ ಮತ್ತು ಕನ್ನಡ ಕಾವ್ಯಗಳ ಗೊತ್ತುಗುರಿಗಳನ್ನು ನಿರ್ಧರಿಸುವಲ್ಲಿ ಚಿಂತನೆ ನಡೆಸಿರುವ ಭಾರತೀಯ ಪುರಾತನ ಲಾಕ್ಷಣಿಕರು ಮತ್ತು ಕನ್ನಡದ ಕಾವ್ಯವೀಮಾಂಸಕರು ತಮ್ಮ ಚಿಂತನೆಗೆ ಬಳಸಿಕೊಂಡದ್ದು ಕೇವಲ ಶಿಷ್ಟ ಕಾವ್ಯವನ್ನು ಮಾತ್ರ. ಶಿಷ್ಟ ಅಂದರೆ ಕೇವಲ ಬರವಣಿಗೆಯ ರೂಪದ್ದು ಎಂದಷ್ಟೇ ಭಾವಿಸಬೇಕಾಗಿಲ್ಲ. ಲಿಪಿ ಬಲ್ಲವರು ರೂಪಿಸಿದ ಸಂಪ್ರದಾಯವಾದೀ ಚೌಕಟ್ಟಿನೊಳಗಿನ ಎಲ್ಲ ಒಪ್ಪಿತ ಮೌಲ್ಯಗಳ ಸಂಚಯವೇ ಶಿಷ್ಟ. ಈ ದೇಶದ ಸಾವಿರಾರು ವರ್ಷಗಳ ಇತಿಹಾಸದಲ್ಲಿ, ಈ ಶಿಷ್ಟ ಧೋರಣೆಯ ಸಮುದಾಯಗಳು ಮತ್ತು ಅವರನ್ನು ಪ್ರತಿಪಾದಿಸುವ ಸನಾತನವಾದೀ ಚಿಂತಕರು ತಮ್ಮದೇ ಶ್ರೇಷ್ಠ, ತಾವು ಹೇಳುವುದೇ ಅಂತಿಮ ಎಂಬ ಏಕಮುಖ ದಾರಿಯಲ್ಲಿ ನಡೆದಿದ್ದಾರೆ. ಅವರ ದೃಷ್ಟಿಯಲ್ಲಿ ಅದೇ ಹೆದ್ದಾರಿ; ಉಳಿದವೆಲ್ಲ ಉಪ ಅಥವಾ ಕಾಲುದಾರಿಗಳು ಮಾತ್ರ. ಅವರ ಚಿಂತನೆಗಳಿಗೆ ಪರ್ಯಾಯವಾಗಿ ಸಾಗುವ ಅಥವಾ ಸಮಾನಾಂತರವಾದ ಇತರೆ ದಾರಿಗಳ ಇರುವಿಕೆಯನ್ನು ಅವರು ಒಪ್ಪುವುದಿಲ್ಲ.

ಈ ಮಾತು ಸಂಸ್ಕೃತಿಯ ವಿಚಾರದಲ್ಲಿಯೂ ನಿಜ. ಸ್ಥಾಪಿತ ಮೌಲ್ಯಗಳನ್ನು ಸಾರುವ ಒಂದು ವರ್ಗದ ಸಂಸ್ಕೃತಿಯೇ ನಿಜವಾದ ಸಂಸ್ಕೃತಿ, ಉಳಿದುದೆಲ್ಲ ಅದರ ಪ್ರಭಾವದಿಂದ ರೂಪಿತವಾದದ್ದು ಎಂಬ ಧೋರಣೆ ಕೆಲವರದಾಗಿತ್ತು. ಇಡೀ ಭಾರತಕ್ಕೆ ಒಂದು ಸಂಸ್ಕೃತಿ ಇದೆ. ಅದೇ 'ಭಾರತೀಯ ಸಂಸ್ಕೃತಿ' ಎಂಬ ಏಕಮುಖೀ ಚಿಂತನೆ ಈ ಅಭಿಪ್ರಾಯಕ್ಕೆ ಕಾರಣವಿರಬಹುದು. ಆದರೆ, ಈಗ ಒಂದು ದೇಶಕ್ಕೆ ಒಂದೇ ಸಂಸ್ಕೃತಿ ಎಂಬುದಿರುವುದಿಲ್ಲ, ಅದರಲ್ಲೂ ಭಾರತದಂಥ ದೇಶ ಬಹುಮುಖೀ ಸಂಸ್ಕೃತಿಯನ್ನು ಪ್ರತಿನಿಧಿಸುವ ಒಂದು ಸಂಕೀರ್ಣ ಭೂಪ್ರದೇಶವಾಗಿದ್ದು ಕೆಲವರು ಊಹಿಸುವಂಥ ಒಂದೇ ಸಂಸ್ಕೃತಿ ಇರಲು ಸಾಧ್ಯವಿಲ್ಲ ಎಂಬ ತಿಳುವಳಿಕೆ ಗಟ್ಟಿಗೊಳ್ಳುತ್ತಿದೆ. ಈ ವಿಶಾಲ ನೆಲದ ವಿವಿಧ ಭಾಷೆಗಳು, ಅಲ್ಲಿನ ಜನ, ಅವರ ಆಚಾರ-ವಿಚಾರಗಳು, ರೂಪಿಸಿಕೊಂಡ ಮೌಲ್ಯ, ಅವರ ಲೋಕದೃಷ್ಟಿ ಇತ್ಯಾದಿಗಳನ್ನು ಅವಲೋಕಿಸಿದಾಗ ಸಾವಿರಾರು ಸಂಸ್ಕೃತಿ ವಿಶೇಷಗಳು ಕಣ್ಣಮುಂದೆ ತಾಕಲಾಡಿ ನಮ್ಮಲ್ಲಿ ದಿಗ್ಭ್ರಮೆ ಹುಟ್ಟಿಸುತ್ತವೆ. ವಾಸ್ತವವಾಗಿ ಸ್ಥಳೀಯವಾದ ನೆಲದ ಗುಣ ಪಡೆದ, ಆಯಾ ಜನತೆಯ ಉಸಿರಿನೊಡನೆ ಬೆಳೆದುಬಂದ ಈ ಸಾಂಸ್ಕೃತಿಕ ವಿಶೇಷಗಳು ಭಾರತೀಯ ಸಂಸ್ಕೃತಿಯ ಜೀವಕೋಶಗಳೇ ಹೊರತು 'ಭಾರತಕ್ಕೆ ಒಂದೇ ಸಂಸ್ಕೃತಿ' ಎಂಬುದು ಪೂರ್ಣಸತ್ಯವಲ್ಲ ಎಂಬುದನ್ನು ನಾವೆಲ್ಲ ಮನಗಾಣಬೇಕಾಗಿದೆ.

ಭಾರತದ ಬಹುಮುಖ್ಯ ಕಾವ್ಯಗಳೆಂದು ಪರಿಗಣಿಸಲ್ಪಟ್ಟ ರಾಮಾಯಣ ಮತ್ತು ಮಹಾಭಾರತಗಳು ಒಬ್ಬ ಕರ್ತೃವಿನಿಂದ ರಚಿಸಲ್ಪಟ್ಟ ಕೃತಿಗಳಾದರೂ ಜನಸಾಮಾನ್ಯರ ನಡುವೆ ಅವು ವಿಸ್ತಾರಗೊಂಡ

ರೀತಿ ವಿಸ್ಮಯ ಹುಟ್ಟಿಸುವಂಥದ್ದೇ. ಮೂಲತಃ ದೇವಭಾಷೆ ಎಂದು ಪರಿಗಣಿಸಲ್ಪಟ್ಟ, ಆದರೆ ಜನಸಾಮಾನ್ಯರ ನಡುವೆ ಇಂದು ಇಲ್ಲವಾಗಿರುವ ಭಾಷೆಗಳಲ್ಲಿ ರಚಿಸಲ್ಪಟ್ಟ ಈ ಕಾವ್ಯಗಳನ್ನು ವಿವಿಧ ದೇಶಭಾಷೆಗಳು ಅನುವಾದಿಸಿಕೊಂಡವು ಅಥವಾ ಪುನರ್‌ಸೃಷ್ಟಿ ಮಾಡಿಕೊಂಡವು. ಆಯಾ ನೆಲದ ಗುಣ ಸ್ವಭಾವಗಳನ್ನು ತಮ್ಮ ತಮ್ಮ ಶಕ್ತ್ಯಾನುಸಾರ ನಮ್ಮ ಕವಿಗಳು ಈ ಕಾವ್ಯಗಳಲ್ಲಿಯೇ ಪ್ರತಿಬಿಂಬಿಸಿದರಾದರೂ ತಮ್ಮವರಲ್ಲದ, ಇನ್ನೊಂದು ಭಿನ್ನ ಪ್ರದೇಶದ ವೈದಿಕವೀರರ ಕಥನವನ್ನಾಗಲೀ, ದಶವತಾರದ ಹಿನ್ನೆಲೆಯನ್ನಾಗಲೀ, ಆರ್ಯ ಸಂಸ್ಕೃತಿಯ ಗುಣ ವಿಶೇಷಗಳನ್ನಾಗಲೀ ಅಥವಾ ಅವರ ಸ್ಥಾಪಿತ ಮೌಲ್ಯಗಳನ್ನಾಗಲೀ ಬದಲಿಸಲು ಸಾಧ್ಯವಾಗಲಿಲ್ಲ. ಅಖಿಲ ಭಾರತ ಪರಂಪರೆಯಲ್ಲಿ ಹರಿದು ಬಂದ ಈ ಎರಡು ಪುರಾಣಗಳು ಆಳುವ ವರ್ಗಗಳ ನಡುವಿನ ದ್ವೇಷ-ವೈಷಮ್ಯಗಳನ್ನು, ಪ್ರೀತಿ ಪ್ರೇಮಗಳನ್ನು ಆ ಮೂಲಕ ಸಾಮ್ರಾಜ್ಯಶಾಹಿ ವಿಸ್ತರಣೆಯನ್ನು ಕೇಂದ್ರವಾಗಿ ಇಟ್ಟುಕೊಂಡವುಗಳು. ಇವುಗಳನ್ನೇ ಮೌಲ್ಯಗಳೆಂದು ಒಪ್ಪಿ ನಮ್ಮ ದೇಶಭಾಷಾ ಕಾವ್ಯಗಳೂ ಪೋಷಿಸಿಕೊಂಡು ಬಂದವು. ಪಂಪನ ಭಾರತದಿಂದ ಹಿಡಿದು ಕುವೆಂಪುರವರ ರಾಮಾಯಣ ದರ್ಶನದವರೆಗೆ ಈ ಮಾತು ನಿಜ ಎಂದೇ ನನ್ನ ನಂಬಿಕೆ.

ಆದರೆ ಇದಕ್ಕೆ ಪ್ರತಿಯಾಗಿ ಸ್ಥಳೀಯ ಸಾಂಸ್ಕೃತಿಕ ವೀರರ ಕಥನಗಳನ್ನು, ಪವಾಡ ಪುರುಷರು, ಬೈರಾಗಿಗಳು, ಸಾಧಕರ ಮಹಿಮೆಗಳನ್ನು, ಅವರ ಜೀವನಪ್ರೀತಿಯ ವಿಶೇಷಗಳೆನಿಸಿದ ಮದ್ಯ, ಮಾಂಸ, ಮೈಥುನ ಭಂಗಿ ಸೇವನೆಯಂಥ ನಿರಾಕರಿಸಲಾಗದ ವಿಚಾರಗಳನ್ನು, ಸ್ತ್ರೀ ಪ್ರಧಾನವಾದ ದ್ರಾವಿಡ ಮೂಲದ ಮೌಲ್ಯಗಳನ್ನು ಹಾಗೂ ಈ ಮೂಲಕ ತಮ್ಮದೇ ನೆಲದ ಗುಣವನ್ನು ಸಹಜವಾಗಿ ಹೊರಸೂಸುವ ದೀರ್ಘ ಕಥಾನಕಗಳು ನಮ್ಮಲ್ಲಿವೆ. ಈ ಕಥನಗಳೇ ನಿಜವಾದ ಅರ್ಥದಲ್ಲಿ ನಮ್ಮ ಸಂಸ್ಕೃತಿಯ ಇತಿಹಾಸವನ್ನು ನಿರೂಪಿಸಬಲ್ಲವಂಥ ಶಕ್ತಿ ಪಡೆದವುಗಳು. ರಾಜಮಹಾರಾಜರ ಆಳ್ವಿಕೆಯ ವಿಧಾನಗಳೇ ನಮ್ಮ ಭವ್ಯ ಇತಿಹಾಸ ಎಂದು ಸಾರುತ್ತ ಬಂದಿರುವ ನಮ್ಮ ಬಹುಪಾಲು ಇತಿಹಾಸಕಾರರ ಕಣ್ಣು ತೆರೆಸಿ ಜನಸಾಮಾನ್ಯರ ಇತಿಹಾಸಕ್ಕಾಗಿ ಒತ್ತಾಯಿಸಬಲ್ಲ, ಆ ಬಗೆಗಿನ ಅರಿವು ಮೂಡಿಸಬಲ್ಲ ಶಕ್ತಿ ಈ ಕಥನಗಳಿಗಿದೆ. ಪರಂಪರಾಗತವಾದ ಶಿಷ್ಟ ಮನಸ್ಸಿನ ನಂಬಿಕೆಗಳಿಗೆ ತದ್ವಿರುದ್ಧವಾದ ಈ ಕಥನಗಳು, ತಮ್ಮದೇ ಮಾಲ್ಯಗಳನ್ನು, ಜೀವನ ದೃಷ್ಟಿಯನ್ನು ಆ ಮೂಲಕ ಒಂದು ನಿರ್ದಿಷ್ಟ ನೆಲದ ಲೋಕದೃಷ್ಟಿಯನ್ನು ಹಾಗೂ ಅವರ ವಿವೇಕವನ್ನು ಹೇಳುತ್ತವೆ. ಜನಸಾಮಾನ್ಯರ ನಡುವಿನ ಸರಳ ವ್ಯಕ್ತಿತ್ವದ ಈ ಕಥನಗಳ ನಾಯಕರು ಸಂದರ್ಭ ಬಂದಾಗ ಮಾತ್ರ ತಮ್ಮ ಅಗಾಧತೆಯನ್ನು ಮೆರೆಯಬಲ್ಲವರು. ಸ್ವಾಭಿಮಾನಕ್ಕೆ ಕುಂದು ಬಂದಾಗ ಉಗ್ರವಾಗಿ ಪ್ರತಿಭಟಿಸಿ ನಿಲ್ಲಬಲ್ಲವರು. ಈ ನಾಯಕರಾದರೂ ಎಂಥವರು? ಮಾದಿಗನೆಂದು ಹೇಳಲಾಗುವ ಮಾದಪ್ಪ, ಹೊಲೆಯನೆಂದು ಕರೆಯಲಾಗುವ ಮಂಟೇಸ್ವಾಮಿ, ದನಕಾಯುವ ಬದುಕಿನ ಜುಂಜಪ್ಪ, ಕುರಿಕಾಯುವ ಕಾಯಕದ ಮೈಲಾರಲಿಂಗ, ಕಾಡು ಮತ್ತು ನಾಡಿನ ನಡುವೆ ಸಂಬಂಧ ಸ್ಥಾಪಿಸಿಕೊಳ್ಳಬಲ್ಲ ಇವರು ಪ್ರಕೃತಿಯಲ್ಲಿನ ದುಷ್ಟಮೃಗಗಳನ್ನು ಒಲಿಸಿಕೊಂಡು ಅವುಗಳನ್ನು ಸ್ನೇಹದಿಂದ ಕಾಣಬಲ್ಲವರು ಬೇಟೆಗಾರರಂತೂ ಅಲ್ಲ.

ನಾಗರಿಕ ಸಮಾಜದ ಅಥವಾ ಪ್ರಭುತ್ವದ ದಬ್ಬಾಳಿಕೆಯಿಂದ ತಮ್ಮನ್ನು ನಂಬಿದ ಜನವರ್ಗಗಳನ್ನು ರಕ್ಷಿಸಬಲ್ಲವರು. ರಾಜ್ಯ ಆಳುವವರಂತೂ ಅಲ್ಲ. ದುಷ್ಟರು ಅಥವಾ ಹೆಡ್ಡರನ್ನು ಪಳಗಿಸಬಲ್ಲವರು, ಕೊಲ್ಲುವವರಲ್ಲ.

ಆದರೆ, ಇಂಥ ದೇಶೀ ಮೌಲ್ಯಗಳನ್ನು ರೂಢಿಸಿಕೊಂಡ ನಮ್ಮ ಸ್ಥಳೀಯ ನಾಯಕರ ಜೀವನಗಾಥೆಗಳು ಶಿಷ್ಟರ ಗಮನಕ್ಕೆ ಬರಲೇ ಇಲ್ಲ. ಶಿಷ್ಟರು ಅಂದರೆ ಕೇವಲ ಸಂಸ್ಕೃತ ಕಲಿತು ಕಾವ್ಯವನ್ನು, ಕಾವ್ಯ ಮೀಮಾಂಸೆಯನ್ನು ಬರೆದ ಪಂಡಿತರು ಮಾತ್ರವಲ್ಲ. ಭಾರತೀಯ ಶಿಷ್ಟಕಾವ್ಯಗಳ ಜೊತೆಗೆ ಪಾಶ್ಚಾತ್ಯ ವಿಮರ್ಶಾ ತತ್ತ್ವಗಳನ್ನು ಓದಿಕೊಂಡ ಆಧುನಿಕ ವಿಮರ್ಶಕರು ಕೂಡ ದೇಶೀಯವಾದ ಮೌಖಿಕ ಕಾವ್ಯದ ವಿಚಾರದಲ್ಲಿ ಸಾಂಪ್ರದಾಯಿಕ ಶಿಷ್ಟರಂತೆಯೇ ವರ್ತಿಸಿದರು. ಭಾರತೀಯ ಸಾಂಸ್ಕೃತಿಕ ಲೋಕದ ಬಹುಮುಖ್ಯ ಭಾಗವಾದ ಈ ಮೌಖಿಕ ಕಾವ್ಯ ಈ ಆಧುನಿಕ ವಿಮರ್ಶಕರಿಗೂ ಮುಖ್ಯವಾಗಲಿಲ್ಲ ಯಾಕೆ ಎಂಬುದು ಆಶ್ಚರ್ಯಕರವಾದ ವಿಚಾರ. ಆದರೆ, ಪಾಶ್ಚಾತ್ಯ ಮೌಖಿಕ ಮಹಾಕಾವ್ಯಗಳೆನಿಸಿದ **ಕಲೇವಾಲಾ**, **ಗಿಲ್ಗಮೇಷ್** ಮತ್ತು **ಬೋವುಲ್ಫ್**‌ನಂಥ ಕಾವ್ಯಗಳನ್ನು ಅಪ್ಪಟವಾದ ಮತ್ತು ನಿಜವಾದ ಕಾವ್ಯ ಎಂದು ಪರಿಗಣಿಸಿದ ಪಾಶ್ಚಾತ್ಯ ವಿಮರ್ಶಕರು ಮತ್ತು ವಿದ್ವಾಂಸರು ತಮ್ಮ ವಿಮರ್ಶೆಯಲ್ಲಿ ಅವುಗಳಿಗೆ ತಕ್ಕ ಸ್ಥಾನ ಕಲ್ಪಿಸಿದರು. ಬಹುಶಃ ಇಂಥ ನಿಷ್ಪಕ್ಷಪಾತ ಧೋರಣೆ ಇದ್ದುದರಿಂದಲೇ ಸಿ.ಎಂ. ಬೋವ್ರನಂಥ ಒಬ್ಬ ಪ್ರಮುಖ ವಿದ್ವಾಂಸ ಮೌಖಿಕ ಮಹಾಕಾವ್ಯ ಮತ್ತು ಶಿಷ್ಟ ಮಹಾಕಾವ್ಯದ ಬಗ್ಗೆ ಚರ್ಚಿಸುತ್ತಾ "ಈ ಎರಡು ಬಗೆಯ ಮಹಾಕಾವ್ಯಗಳಲ್ಲಿ ವಾಚಕ ಮಹಾಕಾವ್ಯವೇ (Oral epic) ಶುದ್ಧವಾದ, ಸಹಜ ಸ್ಫೂರ್ತವಾದ, ನೇರವಾದ, ನಿರರ್ಗಳವಾದ, ನಾಗರೀಕತೆಯಿಂದ ಕಲುಷಿತವಾಗದ ಕವಿವಾಣಿ"[1] ಎಂದು ಘೋಷಿಸಿದ. ಪ್ರಸಿದ್ಧ ಕವಿ ಮತ್ತು ಲೇಖಕ ಏಟ್ಸ್ ತನ್ನ ನಾಡಿನ ಜಾನಪದದ ಬಗೆಗೆ ಅಪಾರ ಪ್ರೀತಿ ಮತ್ತು ಗೌರವದಿಂದ ಬರೆದ. ಫಿನ್‌ಲೆಂಡಿನ ಇಡೀ ಜನತೆ ತನ್ನ ನಾಡಿನ ಮೌಖಿಕ ಮಹಾಕಾವ್ಯವಾದ 'ಕಲೇವಾಲ'ವನ್ನು ರಾಷ್ಟ್ರೀಯ ಕಾವ್ಯವೆಂದು ಗೌರವಿಸಿ, ಆ ಮೂಲಕ ರಾಷ್ಟ್ರದ ಆತ್ಮವಿಶ್ವಾಸವನ್ನು ಕಾವ್ಯದ ಮೂಲಕ ಕಂಡುಕೊಂಡಿತು. ಆದರೆ ನಮ್ಮಲ್ಲಿ ಮಾತ್ರ ಮೌಖಿಕ ಕಾವ್ಯವನ್ನು ಕುರಿತಾದ ನಿರ್ಲಕ್ಷ್ಯದ ಧೋರಣೆ ಯಾಕೆ ಬೆಳೆದು ಬಂತು ?







ನಮ್ಮ ಪರಂಪರೆಯನ್ನು ನಾವೇ ಮರೆತ ಬಗೆಯನ್ನು ಇದೀಗ 'ವಿಸ್ಮೃತಿ' ಎಂಬ ಪರಿಭಾಷೆಯ ಮೂಲಕ ಅರ್ಥೈಸುವ ಪ್ರಯತ್ನವನ್ನು ಅನೇಕ ವಿಮರ್ಶಕರು ಮಾಡತೊಡಗಿದ್ದಾರೆ. ಮತ್ತೆ ಕೆಲವರು ಇದನ್ನೇ ಭ್ರಮಾತ್ಮೀಕರಣ ಎಂದು ಕರೆಯತೊಡಗಿದ್ದಾರೆ. ಬ್ರಿಟಿಷ್ ವಸಾಹತುಶಾಹಿ ಕಾರಣದಿಂದಾಗಿ ನಮ್ಮ ಸಂಸ್ಕೃತಿಯ 'ಜ್ಞಾನಪರಂಪರೆ'ಗಳನ್ನು ನಾವು ಮರೆತಿದ್ದೇವೆ ಎಂದು

ಅರ್ಥೈಸಲಾಗುವ ವಸಾಹತು ವಿರೋಧಿ ಧೋರಣೆಕಾರರು ಸಂಸ್ಕೃತಿಯ ಬಗೆಗಿನ ನಮ್ಮ ಮರೆವನ್ನು ವಿಸ್ಮೃತಿ ಎಂದು ಕರೆದರೆ, ಸಾವಿರಾರು ವರ್ಷಗಳಿಂದ ಈ ದೇಶದಲ್ಲಿ ನಡೆದ ವೈದಿಕಶಾಹಿ ಸಾಂಸ್ಕೃತಿಕ ದಬ್ಬಾಳಿಕೆಯನ್ನು ಎಡವಾದಿಗಳು 'ಭ್ರಮಾತ್ಮೀಕರಣ ಕ್ರಿಯೆ' ಎಂದು ಅರ್ಥೈಸುತ್ತಾರೆ. ಆದರೆ ವಾಸ್ತವವಾಗಿ ಈ ವಿಸ್ಮೃತಿ ಮತ್ತು ಭ್ರಮೆ ಉಂಟಾಗಿರುವುದು ಯಾರಿಗೆ? ಇವತ್ತಿಗೂ ತಮ್ಮ ದೇಶೀ ಚಿಂತನೆ ಮತ್ತು ಸೃಜನಶೀಲತೆಯನ್ನು ಗಾಢವಾದ ನಂಬಿಕೆ ಹಾಗೂ ಪ್ರೀತಿಯಿಂದ ಉಳಿಸಿಕೊಂಡು ಬಂದಿರುವ ಗಿರಿಜನ ಅಥವಾ ಜನಪದ ಸಮುದಾಯಕ್ಕೆ ಈ ವಿಸ್ಮೃತಿ ಮತ್ತು ಭ್ರಮೆಗಳು ಕವಿದಿವೆಯೋ? ಇಲ್ಲವೇ, ಈ ಎರಡೂ ಪರಿಭಾಷೆಗಳನ್ನು ಹುಟ್ಟುಹಾಕಿರುವ ಚಿಂತಕ ಸಮುದಾಯಕ್ಕೆ ಈ ಭ್ರಮೆ ಕವಿದಿದೆಯೋ? ಇದು ಇವತ್ತಿನ ಸಂದರ್ಭದಲ್ಲಿ ಅಗತ್ಯವಾಗಿ ಪರ್ಯಾಲೋಚಿಸಬೇಕಾದ ವಿಚಾರ. ಯಾಕೆಂದರೆ ಈ ರೀತಿಯ ಚರ್ಚೆಯನ್ನು ಬೆಳೆಸುವ ಮೂಲಕವೇ 'ಗಿರಿಜನ ಕಾವ್ಯ'ದ ಮಹತ್ವವನ್ನು ಅರಿಯಲು ಸಾಧ್ಯವಾಗುತ್ತದೆ ಎಂಬ ನಂಬಿಕೆ ನನ್ನದು.

ವಿಸ್ಮೃತಿ ಚಿಂತನಕಾರರು ಪ್ರಮುಖವಾಗಿ ಬ್ರಿಟಿಷ್ ಆಡಳಿತಶಾಹಿಯನ್ನು ದೂಷಿಸುತ್ತಾರೆ. ಅವರ ಪ್ರಕಾರ "ಸಮಾಜಗಳಿಗೆ ವಿಚಿತ್ರ ರೀತಿಯ ಮರೆವು ಆವರಿಸುತ್ತದೆ. ಅದರಲ್ಲೂ ತಾನು ಚಿಂತಿಸುತ್ತಿದ್ದ, ಪ್ರತಿಕ್ರಿಯಿಸುತ್ತಿದ್ದ, ಭಾವಿಸುತ್ತಿದ್ದ ಕ್ರಮಗಳು ಮರೆತು ಹೋಗುವುದು ದೊಡ್ಡ ದುರಂತವೇ ಸರಿ. ವಸಾಹತುಶಾಹಿ ನಂತರದ ಭಾರತೀಯ ಸಮಾಜಕ್ಕೆ ಈ ರೀತಿಯ ವಿಸ್ಮೃತಿ ಈಗ ಆವರಿಸಿಬಿಟ್ಟಿದೆ. ನಮ್ಮ ಸಮಾಜದೊಳಗೆ ಅಂತರ್ಗತವಾಗಿದ್ದ ವೈವಿಧ್ಯಮಯ, ವೈಚಾರಿಕ ರಚನೆಗಳು ಮರೆತು ಹೋಗಿರುವುದರಿಂದ ಈಗ ಲಭ್ಯವಿರುವ ಚಿಂತನ ಕ್ರಮಗಳು ಪೂರ್ಣವಾಗಿ ಪಶ್ಚಿಮಮುಖಿಯಾಗಿಬಿಟ್ಟಿವೆ. ನಮ್ಮನ್ನು ಕಾಡುತ್ತಿರುವ ಬಿಕ್ಕಟ್ಟುಗಳನ್ನು ಅವುಗಳ ಮೂಲಕ ಸಮಗ್ರವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ.

"ಕನ್ನಡಿಗಳೋ, ದೀಪಗಳೋ ಆಗದ ಚಿಂತನೆಗಳು ನಿರುಪಯುಕ್ತ. ಈಗ ನಮ್ಮನ್ನು ಕಿತ್ತು ತಿನ್ನುತ್ತಿರುವ ಹಲವಾರು ಸಮಸ್ಯೆಗಳನ್ನು ಎದುರಿಸಲು ಉಪಯುಕ್ತವಾಗುವಂತಹ ಪರ್ಯಾಯ ಚಿಂತನಕ್ರಮಗಳನ್ನು 'ಅಕ್ಷರ ಚಿಂತನ' ವಿಮರ್ಶಾತ್ಮಕವಾಗಿ ಮಂಡಿಸುತ್ತದೆ. ಈಗ ಪ್ರತಿಷ್ಠಿತವಾಗಿರುವ ಅಧಿಕಾರಸ್ಥವಾಗಿರುವ, ಬಲಿಷ್ಠವಾಗಿರುವ ಚಿಂತನ ಕ್ರಮಗಳಿಗಿಂತ ಬೇರೆಯದನ್ನು ಹುಡುಕುವ ಈ ಪುಸ್ತಕಮಾಲೆ ಈ ಪಶ್ಚಿಮದಲ್ಲೂ ಭಿನ್ನಮತೀಯವಾಗಿರುವಂತಹುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತದೆ."[2]

ಪ್ರಖ್ಯಾತ ವಿಮರ್ಶಕರ ಈ ಮಾತುಗಳಲ್ಲಿ ಕೇವಲ ಪಶ್ಚಿಮದಿಂದ ಉಂಟಾದ ವಿಸ್ಮೃತಿಯ ಬಗೆಗಿನ ಕಾಳಜಿ ಮತ್ತು ದುಗುಡ ಇದೆಯೇ ಹೊರತು, ಭಾರತದಲ್ಲಿಯೇ ಉಂಟು ಮಾಡಿದ ವ್ಯವಸ್ಥಿತ ವಿಸ್ಮೃತಿಯ ಬಗ್ಗೆ ಪ್ರಸ್ತಾಪವೇ ಇಲ್ಲ. ಈ ಇನ್ನೂರು ವರ್ಷಗಳ ಅವಧಿಯಲ್ಲಿ ಘಟಿಸಿದ, ಉಂಟಾದ ವಿದ್ಯಮಾನಗಳಿಂದ ಕವಿದ ವಿಸ್ಮೃತಿ ಅವರಿಗೆ ತುಂಬಾ ಮುಖ್ಯವಾಗಿ ಕಾಣುತ್ತದೆ.

ಆದರೆ, ಕಳೆದ ಎರಡು ಸಾವಿರ ವರ್ಷಗಳಿಂದ ವೈದಿಕ ಪ್ರಭಾವದ ಮೂಲಕ ಸತತವಾಗಿ ಆವರಿಸುತ್ತಾ ಬಂದ ವಿಸ್ಮೃತಿಯ ಬಗ್ಗೆ ಇವರು ಏನನ್ನೂ ಹೇಳದಿರುವುದು ಆಶ್ಚರ್ಯಕರ ಸಂಗತಿಯೇ ಆಗಿದೆ.

'ಭ್ರಮಾತ್ಮೀಕರಣ'ವಾದಿಗಳು ಚಿಂತಿಸುವ ಕ್ರಮ ಇದಕ್ಕಿಂತ ಭಿನ್ನವಾದುದು. ಭ್ರಮಾತ್ಮೀಕರಣದಲ್ಲಿ ಹಲವು ಬಗೆಗಳಿವೆ. ಅಕ್ಷರ ಬಲ್ಲವರು ಅನಕ್ಷರಸ್ಥರ ಮೇಲೆ ಹೇರುವ ಭ್ರಮೆ, ಆಳುವವರ್ಗ ಸಾಮಾನ್ಯ ಪ್ರಜೆಗಳ ಮೇಲೆ ಹೇರುವ ಭ್ರಮೆ. ಮೇಲುವರ್ಗ ಕೆಳವರ್ಗಗಳ ಮೇಲೆ ಹೇರುವ ಭ್ರಮೆ. ಈ ಮೂರು ರೀತಿಯ ಕ್ರಿಯೆಗಳು ಆಳದಲ್ಲಿ ಒಂದೇ ಬಗೆಯ ಉದ್ದೇಶವುಳ್ಳಂಥವು. ಅಂದರೆ ಈಗಿರುವ ಸ್ಥಿತಿಗತಿಗಳ ಅಥವ ತತ್ತ್ವದರ್ಶನಗಳ ವಿಮರ್ಶೆ ಮಾಡಬಲ್ಲ ಶಕ್ತಿ ತಮಗೆ ಮಾತ್ರ ಇದೆ ಎಂದು ಅವು ಭಾವಿಸುತ್ತವೆ. ಒಂದು ವೇಳೆ ತಮಗೆ ಸರಿಯಿಲ್ಲ ಅನ್ನಿಸಿದ್ದನ್ನು ತಿದ್ದುವ ಹಕ್ಕು ತಮಗೆ ಮಾತ್ರ ಇದೆ ಎಂಬ ಸ್ವತಃ ಭ್ರಮೆಗೆ ಈ ವೈದಿಕರು ಒಳಗಾಗುತ್ತಾರೆ. ತಮ್ಮಷ್ಟಕ್ಕೆ ತಾವೇ ಒಂದು Greater Traditionಗೆ ಸೇರಿದವರು ಎಂದು ಅವರು ಘೋಷಿಸಿಕೊಳ್ಳುತ್ತಾರೆ. ಅವರು ಭಾವಿಸಿರುವ Little Tradition ಒಪ್ಪಲಿ ಬಿಡಲಿ ತಮ್ಮ ಜ್ಞಾನ ಸರಕುಗಳನ್ನು ಮಾರಾಟಮಾಡುತ್ತಾರೆ. ಇಂಥ ಭ್ರಮಾತ್ಮೀಕರಣದ ಪ್ರಕ್ರಿಯೆಯನ್ನು ಕುರಿತು ಅನೇಕ ಎಡಪಂಥೀಯ ವಿದ್ವಾಂಸರು ತಮ್ಮ ಆತಂಕಗಳನ್ನು ವ್ಯಕ್ತಪಡಿಸಿದ್ದಾರೆ. "ಭ್ರಮಾತ್ಮೀಕರಣಕ್ಕೆ ಎರಡು ಆಯಾಮಗಳಿವೆ. ಭ್ರಮಾತ್ಮೀಕರಣಗೊಳಿಸುವ ಕ್ರಿಯೆ ಮತ್ತು ಭ್ರಮಾತ್ಮೀಕರಣಕ್ಕೆ ಒಳಪಟ್ಟ ಸ್ಥಿತಿ. ಈ ನಾಡಿನಲ್ಲಿ ಅಕ್ಷರಸ್ಥರು ಮತ್ತು ಮೇಲ್ಜಾತಿಯ ಜನರು ಅನಕ್ಷರಸ್ಥರ ಮತ್ತು ಕೆಳಜಾತಿಯ ಜನರ ಲೋಕದೃಷ್ಟಿಯನ್ನು ಭ್ರಮಾತ್ಮೀಕರಣಕ್ಕೆ ಒಳಪಡಿಸಿದ್ದಾರೆ. ಐತಿಹಾಸಿಕ ಕಾರಣಗಳಿಗಾಗಿ ಕೀಳರಿಮೆಗೆ ಒಳಗಾಗಿರುವ ಅನಕ್ಷರಸ್ಥರು ಮತ್ತು ಕೆಳಜಾತಿಯ ಜನರು ಭ್ರಮಾತ್ಮೀಕರಣಕ್ಕೆ ಒಳಪಟ್ಟಿದ್ದಾರೆ ಕೂಡ. ಭ್ರಮಾತ್ಮೀಕರಣಕ್ಕೆ ಒಳಪಡಿಸುವ ಕ್ರಿಯೆ ಎಂದರೆ, ಬೇರೆಯವರನ್ನು ಗೊಂದಲಕ್ಕೀಡು ಮಾಡುವುದು. ತಮ್ಮವರಲ್ಲದವರಿಂದ ಏನನ್ನೋ ಮರೆಮಾಡುವುದು. ಸೂಕ್ಷ್ಮವಿವರಗಳನ್ನು ಗೋಜಲುಗೊಳಿಸುವುದು. ಅನುಭವ-ಕ್ರಿಯೆ-ಪ್ರಕ್ರಿಯೆಗಳನ್ನು ಮುಚ್ಚಿಟ್ಟು ನಿಗೂಢಗೊಳಿಸುವುದು. ನೈಜ ಸಂಗತಿಗಳನ್ನು ವಿರೂಪಗೊಳಿಸುವುದು. ನೈಜ ಸಂಗತಿಗಳು ಹಾಗೂ ವಾಸ್ತವ ವಿಷಯಗಳ ಮೇಲೆ ಪರದೆ ಎಳೆದ ಕಾರಣವಾಗಿ ತೆರೆಮರೆಯಲ್ಲಿ ನಿಜಕ್ಕೂ ಏನೂ ಘಟಿಸುತ್ತದೆ ಎಂಬ ವಿವೇಚನೆ ತಪ್ಪಿಹೋಗಿ ಭ್ರಮೆ ವಾಸ್ತವಗಳ ಕುರಿತಾಗಿ ವಿವೇಕವೂ ಇಲ್ಲವಾಗುತ್ತದೆ. ಅನುಭವ ಕ್ರಿಯೆ, ಪ್ರಕ್ರಿಯೆಗಳ ನಿಜರೂಪಗಳನ್ನು ಪ್ರದರ್ಶಿಸುವ ಬದಲಾಗಿ ಇಲ್ಲಿ ಮಿಥ್ಯಾಕಲ್ಪನೆಗಳನ್ನು ಒದಗಿಸಲಾಗುತ್ತದೆ. ನಿಜಗಳ ಬದಲು ಮಿಥ್ಯೆಗಳು ಮುನ್ನೆಲೆಯಲ್ಲಿ ವಿಜೃಂಭಿಸುತ್ತವೆ."[3]

ಈ ಸಂಬಂಧದಲ್ಲಿ ಪ್ರಖ್ಯಾತ ಚಿಂತಕ ಡಿ.ಡಿ. ಕೊಸಾಂಬಿ ಅವರ ತೀಕ್ಷ್ಣರೂಪದ ಪ್ರತಿಕ್ರಿಯೆಯನ್ನು ಇಲ್ಲಿ ಉಲ್ಲೇಖಿಸಲೇ ಬೇಕಾಗುತ್ತದೆ: "ಬ್ರಾಹ್ಮಣರ ಪುರಾಣಗಳಿಗೂ ವರ್ಣವ್ಯವಸ್ಥೆಗೂ ನಾಗರೀಕ ಕೃಷಿ ಸಮಾಜವನ್ನು ವಿಸ್ತರಿಸಿಕೊಳ್ಳುವಲ್ಲಿ ಬಲಪ್ರಯೋಗದ ಅವಶ್ಯಕತೆ ಇಲ್ಲದೆಯೇ ಅದು, ಇವುಗಳು ಉಪಯುಕ್ತವಾಗಿ ಕಂಡಿತೆಂಬುದರಿಂದಲೇ ಅವು ಇಷ್ಟು ಬಲವಾಗಿ ಉಳಿದುಬಿಟ್ಟಿವೆ.

ಪುರಾಣಗಳಲ್ಲಿನ ಅಮೋಘವಾದ ಅಸಂಬದ್ಧತೆಗಳಿಗೆ, ಕಾಳಿಯನ್ನು ಬೋಳಿಯನ್ನಾಗಿಸಬಲ್ಲ ಬ್ರಾಹ್ಮಣ ಕುತರ್ಕಗಳಿಗೆ ಇವೇ ಮೂಲಾಧಾರವಾಗಿವೆ"[4] ಎನ್ನುತ್ತಾರೆ ಕೋಸಾಂಬಿ. ಹಿಂಸೆಯ ಬದಲಿಗೆ ಸಾಮರಸ್ಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮ್ಮಿಲನ ಎಂಬ ಆಯುಧವನ್ನೇ ಬಳಸಿ. ಅರಣ್ಯವಾಸಿಗಳನ್ನು ಅಧೀನಗೊಳಿಸಿಕೊಂಡ ಸಾಧನೆ ಬ್ರಾಹ್ಮಣ ಜಾತಿಯದು. ಒಂದೊಂದು ಅರಣ್ಯವಾಸಿ ಬುಡಕಟ್ಟನ್ನು ಅಥವಾ ಸಮುದಾಯವನ್ನು ಅಧೀನಗೊಳಿಸಿಕೊಳ್ಳುವಲ್ಲಿಯೂ ಒಂದು ಕುಲವನ್ನು, ಒಂದು ಪುರಾಣವನ್ನು, ಒಂದು ಬ್ರಾಹ್ಮಣಗೋತ್ರವನ್ನು, ಒಂದು ಆಚಾರ ಸಂಬಂಧೀ ಬದಲಾವಣೆಯನ್ನು ಹುಟ್ಟುಹಾಕುತ್ತಲೇ ಹೋಗಬೇಕಾಯಿತು. ಈ ವಿಧಾನದ ಪರಿಣಾಮವೆಂದರೆ, ತುದಿ ಮೊದಲಿಲ್ಲದ ಗೊಂದಲ ಲೋಕಗಳಂತೆ ಕಾಣುವ ಬ್ರಾಹ್ಮಣ ಪುರಾಣ ಗಾಥೆಗಳು, ಎಂದಿಗೂ ಮುಗಿಯದ ಆಚಾರ ಸಂಪ್ರದಾಯಗಳು ಒಂದು ದೊಡ್ಡಹೊರೆಯಾಗಿ ಬೆಳೆದು ಸಮಾಜವು ಇನ್ನೊಂದು ಹೆಜ್ಜೆ ಮುಂದಿಡುವುದೂ ಅಸಾಧ್ಯವೆನಿಸುವ ತಡೆಯನ್ನು ನಿರ್ಮಿಸಿಬಿಟ್ಟಿವೆ. ಹಿಂದೊಮ್ಮೆ ಸಾಮಾಜಿಕ ಅಗತ್ಯಗಳಾಗಿ ರೂಪತಳೆದ ಆಚಾರಗಳು, ಬಂಡೆಕಲ್ಲುಗಳಾಗಿ, ಬ್ರಾಹ್ಮಣರ ಹೊಟ್ಟೆ ಹೊರೆಯುವ ಉಪಾಯವಾಗಿ ಮಾತ್ರ ಉಳಿದು, ಇನ್ನಾವುದಕ್ಕೂ ಬಳಕೆಗೆ ಬಾರದ ಹೊರೆಯಾಗಿ ಉಳಿದುಬಿಟ್ಟಿದೆ."

ವಿಸ್ಮೃತಿ ಮತ್ತು ಭ್ರಮೆಯ ಚಿಂತನೆಗಳನ್ನು ಕುರಿತು ಚರ್ಚಿಸೋಣ ನಮ್ಮೆಲ್ಲ ಪುರಾತನ ದೌರ್ಬಲ್ಯಗಳನ್ನು ಜಾಣತನದಿಂದ ಬ್ರಿಟಿಷ್ ವಸಾಹತುಶಾಹಿ ಮೇಲೆ ಹಾಕುತ್ತಿರುವ ನಾವು ಇನ್ನಾದರೂ ವಸ್ತುನಿಷ್ಠವಾಗಿ ನಮ್ಮ ಬೆನ್ನನ್ನು ನಾವೇ ಪರಿಶೀಲಿಸಿಕೊಳ್ಳಬೇಕಾಗಿದೆ. ರಾಜಕೀಯವಾಗಿ ನಾವೆಲ್ಲ ಒಂದೇ ದೇಶದವರು ಎಂಬುದು ನಿಜ. ಆದರೆ ಸಾಂಸ್ಕೃತಿಕವಾಗಿ ವಿಭಿನ್ನ ಜೀವನ ಶೈಲಿಯನ್ನು ಇಟ್ಟುಕೊಂಡವರು. ಈ ಸತ್ಯದ ಪಾತಳಿಯ ಮೇಲೆಯೇ ವಸಾಹತುಶಾಹಿಯನ್ನು ಕುರಿತು ಚಿಂತಿಸಬೇಕಾಗಿದೆ. ಬಹುಮುಖ್ಯವಾಗಿ ನಾವು ಪ್ರಭಾವಿತವಾದದ್ದು ಹಾಗೂ ಪಡೆದುಕೊಂಡದ್ದು ಮತ್ತು ಕಳೆದುಕೊಂಡದ್ದು ಎರಡೂ ರೀತಿಯ 'ಶಾಹಿ'ಗಳ ಮೂಲಕ, ಇವತ್ತಿನ ಭಾರತವನ್ನು ಪ್ರಭಾವಿಸುವಲ್ಲಿ, ರೂಪಿಸುವಲ್ಲಿ ಹಾಗೂ ವಿರೂಪಗೊಳಿಸುವಲ್ಲಿ ಪ್ರಧಾನ ಪಾತ್ರವಹಿಸಿದ ಆ ಎರಡು ಯಾವುವೆಂದರೆ ಒಂದು-ವೈದಿಕಶಾಹಿ, ಎರಡು-ಬ್ರಿಟಿಷ್ ಅಥವಾ ಪಾಶ್ಚಾತ್ಯ ವಸಾಹತುಶಾಹಿ. ಇಲ್ಲಿ ನಾವು ಯೋಚಿಸಬೇಕಾದುದೆಂದರೆ : ಇತಿಹಾಸದ ಹಲವು ಹಂತಗಳಲ್ಲಿ ಘಟಿಸಿದ ವೈದಿಕೀಕರಣದ ಮೂಲಕ ಇಲ್ಲಿನ ಸ್ಥಳೀಯ ಸಮುದಾಯಗಳ ಸಂಸ್ಕೃತಿ ವಿಶೇಷಗಳು ಅರ್ಥಾತ್ ವಿವಿಧ ಲೋಕದೃಷ್ಟಿಗಳು ಮಣ್ಣುಮುಸುಕಿದ ವಜ್ರದಂತೆ ಅಡಗಿರುವುದನ್ನು ಜಾಣಮರೆವುಗಾರರಿಗೆ ತೋರಿಸಿಕೊಡಲು ಸಾಧ್ಯವಿಲ್ಲವೇ ? ಹಾಗೂ ವಿದೇಶಿ ಸಿದ್ಧಾಂತಗಳ ನೆರಳಿನಲ್ಲಿ ಅಥವಾ ಬ್ರಿಟಿಷ್ ವಸಾಹತುಶಾಹಿ ಸೃಷ್ಟಿಸಿದ ಭ್ರಮೆಗಳಲ್ಲಿ ನರಳುತ್ತಾ ನಮ್ಮದನ್ನು ಅರ್ಥಮಾಡಿಕೊಳ್ಳಲು ವಿಫಲರಾಗಿರುವ ಇಂಗ್ಲಿಷ್ ಮೋಹಿಗಳಿಗೆ ಕನ್ನಡದ ದೇಶೀ ಸತ್ವವನ್ನು ಅರ್ಥಮಾಡಿಸಲು ಸಾಧ್ಯವಿಲ್ಲವೇ ? ಒಂದು ಕಡೆಯಿಂದ ಇಂಗ್ಲಿಷ್ ವಿದ್ವಾಂಸರು ಮತ್ತು ಇಂಗ್ಲಿಷ್ ಮೋಹಿಗಳ ದಾಳಿ, ಮತ್ತೊಂದು ಕಡೆಯಿಂದ ವೈದಿಕಶಾಹಿಗಳ ವೈಭವೀಕೃತ ಭ್ರಮಾತ್ಮೀಕರಣ

ಇವುಗಳಿಂದಾವರಿಸಿದ ವಿಸ್ಮೃತಿಗಳಿಂದ ಬಿಡುಗಡೆಗೊಳ್ಳಬೇಕಾದ ಇಂದಿನ ತುರ್ತು. ಇಂಥ ಗಂಭೀರ ವಿಷಯಗಳ ಬಗ್ಗೆ ಇನ್ನಷ್ಟು ಚರ್ಚೆ ಅಗತ್ಯ ಎಂಬುದು ನನ್ನ ಅನಿಸಿಕೆ.

'ವಿಸ್ಮೃತಿ' ವಾದದ ಮಂಡನೆಕಾರರು ವಸಾಹತುಶಾಹಿ ವಿರುದ್ಧ ಹೇಗೆ ತಮ್ಮ ಆತಂಕವನ್ನು ವ್ಯಕ್ತಪಡಿಸಿದರೋ ಹಾಗೇ 'ಭ್ರಮಾತ್ಮೀಕರಣ'ವಾದದ ಮಂಡನೆಕಾರರು ಕೂಡ ಇನ್ನೊಂದು ಬಗೆಯಲ್ಲಿ ವೈದಿಕಶಾಹಿಯ ಬಗ್ಗೆ ತಮ್ಮ ತೀವ್ರ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಪಶ್ಚಿಮದ ವಸಾಹತುಶಾಹಿಯನ್ನು ವಿರೋಧಿಸುವವರಾಗಲೀ, ವೈದಿಕ ವಸಾಹತುಶಾಹಿಯನ್ನು ವಿರೋಧಿಸುವವರಾಗಲೀ ಸತ್ಯವನ್ನಲ್ಲದೆ ಬೇರೇನನ್ನು ಹೇಳುತ್ತಿಲ್ಲ ಎಂಬ ಅರಿವು ನನಗಿದೆ. ಇಬ್ಬರೂ ಇತಿಹಾಸದ ಅಲಕ್ಷ್ಯವನ್ನು, ನಮ್ಮ ನಮ್ಮ ಮರೆವನ್ನು ಒತ್ತಿ ಒತ್ತಿ ಹೇಳಿದ್ದಾರೆ. ಆದರೆ ಅವರ ಆತಂಕಗಳು ಅಷ್ಟು ಸೀರಿಯಸ್ ಅಲ್ಲ ಎಂಬುದು ನನ್ನ ಸ್ಪಷ್ಟವಾದ ವಾದ. ಈ ಎರಡೂ ರೀತಿಯ ಸ್ಕೂಲಿನವರೂ ತಮ್ಮ ತಮ್ಮ ವಾದಗಳನ್ನು ಮಂಡಿಸುವಾಗ ಬುಡಕಟ್ಟು ಸಂಸ್ಕೃತಿಯ ವಾಸ್ತವಾಂಶಗಳನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂಬುದು ನನ್ನ ಆರೋಪ. ಅಂದರೆ ಇವರೆಲ್ಲ ತಮ್ಮ ವಿಚಾರಗಳ ಸಂದರ್ಭದಲ್ಲಿ ಸಾಮಾಜಿಕ ಮತ್ತು ರಾಜಕೀಯ ಅಂಶಗಳನ್ನು ಪ್ರಧಾನ ಆಕರಗಳನ್ನಾಗಿಸಿ ತಮ್ಮ ಸಿದ್ಧಾಂತಗಳನ್ನು ಕಟ್ಟುತ್ತಾರೆಯೇ ಹೊರತು, ಸೂಕ್ಷ್ಮಾತಿ ಸೂಕ್ಷ್ಮವಾದ ಸಂಸ್ಕೃತಿಯ ಒಳ ಪ್ರವಾಹಗಳನ್ನು ಗುರುತಿಸುವಲ್ಲಿ ವಿಫಲರಾಗಿದ್ದಾರೆ. ಅನಂತ ದೂರಕ್ಕೂ ಮೈಯೊಡ್ಡಿ ಮಲಗಿದ ಸಾಗರದೊಳಗೆ ಒಂದು ಸಮುದ್ರವನ್ನು ಮತ್ತೊಂದು ಸಮುದ್ರವನ್ನೂ ಬೆಸೆಯುವ ಗಂಗಾ ಮಾರ್ಗವಿರುವಂತೆ, 'ಹಿಂದೂ' ಸಂಸ್ಕೃತಿ ಎಂಬ ಈ ಮೈಲ್ಮೈ ಕಡಲಿನ ಆಂತರ್ಯದಲ್ಲಿ ಅದರ ವೈದಿಕ ಅಲೆಗಳ ವಿರುದ್ಧ ಹರಿಯುವ, ಹರಿಯುತ್ತಿರುವ ತೀವ್ರ ಸ್ವರೂಪದ ಪ್ರವಾಹಗಳಿವೆ. ಅದೊಂದು ರೀತಿಯಲ್ಲಿ ಪರ್ವತದ ಒಡಲಿನ ಅಗ್ನಿ. ಸಾಧಾರಣ ಮಾತಿನಲ್ಲಿ ಹೇಳುವುದಾದರೆ ನಾವೀಗಾಗಲೇ ಹೇಳಿದಂತೆ ಅದು ಬೂದಿ ಮುಚ್ಚಿದ ಕೆಂಡ. ಅಂದೊಂದು ರೀತಿಯಲ್ಲಿ ನೀರು ಮತ್ತು ಬೆಂಕಿಗಳ ಸರಸ. ನೀರಿನಿಂದ ಎಂಥ ಬೆಂಕಿಯನ್ನು ಆರಿಸಬಹುದು. ಆದರೆ ಚಂಡಮಾರುತ ಎದ್ದ ಸಮಯದಲ್ಲಿ ನೀರಿನ ಒಳಗಿನಿಂದಲೇ ಬೆಂಕಿ ಉದಿಸುತ್ತದೆ. ಆದ್ದರಿಂದ ಎಲ್ಲಕ್ಕಿಂತ ನೇಚರ್ ದೊಡ್ಡದು, ಉಳಿದವೆಲ್ಲ ತಾತ್ಕಾಲಿಕ ಎಂಬ ಭಾವನಾವಾದಕ್ಕೆ ತಲುಪಿ ಇಷ್ಟು ಮಾತುಗಳನ್ನು ಆಡಿಬಿಟ್ಟಿದ್ದೇನೆ.

ಈ ಭ್ರಮಾತ್ಮೀಕರಣ ಎಂಬುದು ಪಾಶ್ಚಾತ್ಯ ವಸಾಹತುಶಾಹಿಯಿಂದಲೇ ಆಗಿರಲಿ, ಇಲ್ಲವೇ ನಮ್ಮ ಒಳಗಿನ ಶಕ್ತಿಗಳಿಂದಲೇ ಆಗಿರಲಿ, ಅದು ಎಲ್ಲ ಕಾಲಕ್ಕೂ ನಿಜವಲ್ಲ. ತತ್ಕಾಲದ ಪ್ರಭಾವಕ್ಕೆ ಸಂಬಂಧಪಟ್ಟದ್ದು. ತತ್ಕಾಲ ಅಂದರೆ ಇಂದು ನಾಳೆಗೆ ಮಾತ್ರ ಎಂದು ಅರ್ಥವಲ್ಲ. ಅದು ನೂರು ವರ್ಷ, ಸಾವಿರ ವರ್ಷವೂ ಇರಬಹುದು. ಯಾಕೆಂದರೆ ಈ ೨೦೦೦ನೇ ಇಸವಿಯಲ್ಲಿ ನಡೆಸುತ್ತಿರುವ ಈ ಚಿಂತನೆ ಕಳೆದ ಐದು ಲಕ್ಷವರ್ಷಗಳ ಭೂಮಿಯ ಇತಿಹಾಸಕ್ಕೆ ಸಂಬಂಧಿಸಿದ್ದು ಎನ್ನುವಾಗ, ನಮ್ಮ ಈ ತತ್ಕಾಲದ ವಾದಗಳ ಪಾಡೇನು ?

ಸ್ಥಳೀಯ ಸಂಸ್ಕೃತಿಗಳ ಒಳಪ್ರವಾಹಗಳನ್ನು ತಡೆಹಿಡಿಯುವುದಂತೂ ಸಾಧ್ಯವಿಲ್ಲ. ಅದು ದೇಹದ ರಕ್ತದೊಡನೆ ಬೆರೆತದ್ದು. ಹೊರಗಿನದು ಸದ್ಯದ ಪುಷ್ಟಿಗಾಗಿ ನೀಡುವ ಕೇವಲ ಗ್ಲೂಕೋಸ್‌ನಂತೆ. ಇದಕ್ಕೆ ತೀರ ಇತ್ತೀಚಿಗಿನ ಉದಾಹರಣೆ ನಮ್ಮ ವೀರಶೈವ ಧರ್ಮ. ಹನ್ನೆರಡನೇ ಶತಮಾನದ ಆದರ್ಶಕ್ಕೆ ಅನೇಕ ಕೆಳವರ್ಗಗಳು ಬೆಂಬಲಕೊಟ್ಟವು ನಿಜ. ಆದರೂ ಅದೂ ಒಂದು ಸಾಂಸ್ಥಿಕ ರೂಪ ಪಡೆದು, ಆದರ್ಶದ ಚೌಕಟ್ಟು ಜಾತಿಯಾಗಿ ಪರಿವರ್ತನೆಯಾದಾಗ ಅನೇಕಾನೇಕ ಕೆಳವರ್ಗಗಳು ಅದರಿಂದ ಹಿಂದೆ ಸರಿದವು. ತಮ್ಮದಲ್ಲದ ಜೀವನಕ್ರಮ ಮತ್ತು ಆಹಾರಕ್ರಮ ಅವರಿಗೆ ಹಿಡಿಸಲಿಲ್ಲ. ಕೃತಕವಾಗಿ ಸೃಷ್ಟಿಗೊಂಡ ಹೇರಿಕೆಯ ನಿಯಮಗಳನ್ನು ಸಹಿಸಲಿಲ್ಲ. ಇದರ ಪರಿಣಾಮವೇ ಮಂಟೇಸ್ವಾಮಿ ಮತ್ತು ಮಲೆಮಾದೇಶ್ವರ ಸಂಪ್ರದಾಯಗಳು. ಕಲ್ಯಾಣದ ಶರಣರು ಮಾಂಸ, ಮದ್ಯ ಇತ್ಯಾದಿ ಜೀವನಪ್ರೀತಿಯ ವಿಚಾರಗಳನ್ನು ತೊರೆದರು. ಹಲವು ಕಟ್ಟುಪಾಡುಗಳನ್ನು ಹಾಕಿಕೊಳ್ಳುವ ಮೂಲಕ ತಮ್ಮನ್ನು ತಾವೇ ನಿಯಂತ್ರಿಸಿಕೊಂಡರು. ಒಂದು ರೀತಿಯಲ್ಲಿ ಬ್ರಾಹ್ಮಣರ ಶಿಷ್ಟ ಸಂಸ್ಕೃತಿಗಿಂತ ತಾವೇನು ಕಡಿಮೆ ಎಂಬ ರೀತಿಯಲ್ಲಿ ಎಲ್ಲವನ್ನು ವರ್ಜಿಸಿ ಇನ್ನೊಂದು ರೀತಿಯ ಶಿಷ್ಟವೇ ಆದರು. ಇಂಥ ಸಾಂಸ್ಕೃತಿಕ ಅಧಿಪತ್ಯವನ್ನು ಒಪ್ಪಿಕೊಂಡು ಹಾಗೂ ಅದನ್ನು ಮೀರುವ ಕುರುಹಿಗಾಗಿ 'ಲಿಂಗ' ಎಂಬ ಭೌತಿಕ ಸಂಕೇತವನ್ನು ಬಹಿರಂಗವಾಗಿ ಕಟ್ಟಿಕೊಂಡರು. ಈ ಎಲ್ಲ ಸಂಗತಿಗಳ ಮೂಲಕ ಒಂದು ಬಂಧನದ ಗೆರೆಗೆ ಒಳಪಟ್ಟರು. ಆದರೆ ಇಂಡಿಯಾದ ಕೆಳವರ್ಗದ ಅಥವಾ ಬುಡಕಟ್ಟು ಜನರು ಮದ್ಯ, ಮಾಂಸ, ಬಂಗಿ ಹಾಗೂ ಮೈಥುನಗಳಂಥ ಚೈತನ್ಯದಾಯಕ ವಿಚಾರಗಳನ್ನು ಎಂದೂ ತ್ಯಜಿಸಿದವರಲ್ಲ. ಆದ್ದರಿಂದ ಅಂಥ ಕಟ್ಟುಪಾಡುಗಳಿಂದ ಸಿಡಿದು ಹೊರಬಂದು ಮತ್ತೆ ತಮ್ಮ ಪ್ರೀತಿಯ ಕಾಡುಗಳನ್ನೇ ಆಶ್ರಯಿಸಿದ ಸಂಕೇತಮೂರ್ತಿಗಳಾಗಿ ಇವತ್ತು ಮಲೆಮಾದೇಶ್ವರ ಮತ್ತು ಮಂಟೇಸ್ವಾಮಿ ನಮಗೆ ಕಂಡುಬರುತ್ತಾರೆ. ನಾವೆಲ್ಲ ಹಿಂದೂ ಎಂಬ ಕಲ್ಪನೆ ಕೂಡ ಇಂಥದ್ದೇ. ನಮ್ಮ ವಿದ್ವಾಂಸರ ಆಶಯಗಳ ಪ್ರಕಾರ ಇದೀಗ ವಿಸ್ಮೃತಿಯಿಂದ ಹೊರಬರುತ್ತಿರುವ ಸ್ಥಳೀಯ ಜ್ಞಾನಪರಂಪರೆ ಮತ್ತು ಬಹುಮುಖೀ ಸಂಸ್ಕೃತಿಗಳ ನೈಜತತ್ವಗಳು ಈ ಹಿಂದೂ ಎಂಬ ಭ್ರಮಾತ್ಮಕ ಕಲ್ಪನೆಯನ್ನು ಛಿದ್ರಗೊಳಿಸುವ ನಿಟ್ಟಿನಲ್ಲಿವೆ. ಅಂದಾಕ್ಷಣ ಇದು ನಾಳೆಯೇ ನಡೆದು ಹೋಗುತ್ತದೆಂದಲ್ಲ. ಕಾಲ ಪಕ್ವಗೊಂಡಾಗ ಅಂಥ ಪ್ರಕ್ರಿಯೆಗಳು ತಮ್ಮಷ್ಟಕ್ಕೆ ತಾವೇ ನಡೆದುಹೋಗುತ್ತವೆ. ಇದು ಅಕ್ಷರ ಯುಗವಾದ್ದರಿಂದ ಸಂಶೋಧಕರ ಈ ರೀತಿಯ ಹುಡುಕಾಟವೂ ಇಂಥ ಪ್ರಕ್ರಿಯೆಗೆ ಹೆಚ್ಚು ಚಾಲನೆ ನೀಡುತ್ತದೆ ಎಂಬುದು ನನ್ನ ನಂಬಿಕೆ. ವಾಸ್ತವವಾಗಿ ಹೇಳಬೇಕೆಂದರೆ ಹೊರ ಜಗತ್ತಿನ ದೃಷ್ಟಿಯಲ್ಲಿ ಸದ್ಯಕ್ಕೆ ಮರೆತಂತಿರುವ ನೈಜ ತತ್ವಗಳನ್ನು ಮತ್ತೊಮ್ಮೆ ನೆನಪಿಸುವ ಕ್ರಿಯೆ ಇದು. ಸಂಬಂಧಪಟ್ಟ ಸಮುದಾಯಗಳು ಅಥವಾ ಜನವರ್ಗ ವಿಸ್ಮೃತಿಗೊಂಡಿದ್ದಾರೆ ಎಂಬುದು ಸರಿಯಲ್ಲ. ವಾಸ್ತವವಾಗಿ ಸಂಸ್ಕೃತಿ ಚಿಂತಕರು ಮತ್ತು ಜನಪದ ಅಧ್ಯಯನಕಾರರ ವಿಸ್ಮೃತಿ ಇದು.

ಭಾರತದ ಬುಡಕಟ್ಟುಗಳ ಮೇಲೆ ಬ್ರಿಟಿಷರು ಮತ್ತು ಇಂಡಿಯಾದ ಮಹಾ ನೇಮಿನಿಷ್ಠರು ಉಂಟು ಮಾಡಿದ ಪ್ರಭಾವ ಹಾಗೂ ಅದರಿಂದ ಅವರ ನಂಬಿಕೆ ಮತ್ತು ಮೌಲ್ಯಗಳ ಮೇಲಾದ

ಅಪಚಾರವನ್ನು ಗಿರಿಜನರ ಒಡನಾಡಿಯಾಗಿ ಬಾಳಿದ ಮಾನವತಾವಾದಿ ವೆರಿಯರ್ ಎಲ್ವಿನ್ ತಮ್ಮ ಸ್ವಂತ ಅನುಭವದಿಂದ ಹೀಗೆ ವರ್ಣಿಸುತ್ತಾರೆ: "ಇಂಡಿಯಾದಲ್ಲಿ ಸೌಂದರ್ಯದ, ಅಷ್ಟೇ ಅಲ್ಲ ಸತ್ಯದ ಮುಖ್ಯ ಶತ್ರುವೆಂದರೆ, ಅದರಲ್ಲಿಯೂ ಗುಡ್ಡಗಾಡುಗಳಲ್ಲಿ, ಮಹಾನೇಮಿನಿಷ್ಠತೆ (ಪುರಿತಾನಿಸಂ). ಮನೋಧರ್ಮದಿಂದಲೇ ಆಗಲಿ, ಐತಿಹಾಸಿಕ ಅಥವಾ ಸಾಂಪ್ರದಾಯಿಕವಾಗಿಯೇ ಆಗಲಿ ಇಂಡಿಯಾ ಮಹಾ ನೇಮಿನಿಷ್ಠವಾದ ದೇಶವಲ್ಲ ಎಂದು ಒತ್ತಿ ಹೇಳುತ್ತೇನೆ. ಈ ಮಹಾನೇಮಿನಿಷ್ಠತೆ ಬಂದುದು ಪಶ್ಚಿಮದಿಂದ ; ಕೊಂಚಮಟ್ಟಿಗೆ ಪ್ರಾಟೆಸ್ಟೆಂಟ್ ಪಾದ್ರಿಗಳಿಂದ. ಈ ಪಾದ್ರಿಗಳು ಗಾಂಧೀಜಿಯವರ ಮೇಲೆ ಅವರಿಗೆ ಅರಿವಿಲ್ಲದಂತೆಯೇ ಪ್ರಭಾವ ಬೀರಿದ್ದಾರೆ ಎಂದು ನನಗೆ ಸಂದೇಹ. ಈಗ ಈ ದೇಶದಲ್ಲಿ ಸ್ವಾಭಿಮಾನದ ಹಾಗೂ ಸ್ವಧರ್ಮಾಭಿಮಾನದ ಮಹಾನೇಮಿನಿಷ್ಠತೆ ಇದೆ. ಇದು ಜೀವನದ ಎಷ್ಟೋ ಸೌಂದರ್ಯೋಪಾಸಾನಾ ಸಂಬಂಧವಾದ ಮೌಲ್ಯಗಳಿಗೆ ಕುಠಾರಪ್ರಾಯವಾಗಿದೆ. ಹಳ್ಳಿಯ ಜನಸಾಮಾನ್ಯರ ದೃಷ್ಟಿಯಲ್ಲಿ ನೋಡಿದರೆ ಇದು ಅವರ ಸುಖಕ್ಕೆ ಹುಳಿ ಹಿಂಡುತ್ತಿದೆ.

ಗಿರಿಜನರಲ್ಲಿ ಏನು ಸಿಗುವುದೋ ಅದನ್ನು ಕಸಿದುಕೊಳ್ಳಲು ತಮ್ಮ ಇಡೀ ಜೀವನವನ್ನು ಮುಡುಪಾಗಿಟ್ಟು ಸಮಾಜದಲ್ಲಿ ದೊಡ್ಡವರೆನಿಸಿಕೊಂಡ ಅನೇಕ ಜನರಿದ್ದಾರೆ. ಅವರು ಗಿರಿಜನರನ್ನು ಶಾಖಾಹಾರಿಗಳನ್ನಾಗಿ ಮಾಡಲು ಹೋಗಿ ಮಾಂಸಾಹಾರದ ಬದಲೂ ಬೇರೆ ಯಾವುದನ್ನು ಅವರಿಗೆ ಕೊಡಲಿಲ್ಲ. ಪಾನ ನಿರೋಧವನ್ನು ಜಾರಿಗೆ ತಂದು ಅವರಿಗೆ ಮದುವೆ ಮುಂಜಿಗಳಲ್ಲಿ ಆನಂದವೀಯುವ ಬೇರೊಂದನ್ನು ನೀಡಲಿಲ್ಲ. ಅವರ ಸರಳ ಉಡುಪು ಅಸಹ್ಯವೆಂದು ಹೇಳಿ, ಅವರ ಮೇಲೆ ಹೊಸ ಆರ್ಥಿಕ ಹೊರೆಯನ್ನು ಹೊರೆಸಿದ್ದಾರೆ. ಯುವಕ ಯುವತಿಯರ ಸಹಜ ಪ್ರೇಮ ಸುಖಕ್ಕೆ ಅಡ್ಡಿ ಬಂದಿದ್ದಾರೆ. ಬಡ ಜನರಿಂದ ಬಣ್ಣ, ಅಂದ-ಚೆಂದ ಮತ್ತು ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದು ಕಂಡ ಮಾರ್ಗಗಳಲ್ಲಿ ಶೋಷಣೆ ಮಾಡುವುದರಷ್ಟೇ ಕೆಟ್ಟದ್ದು.

ಗಿರಿಜನರು ಇರುವುದು ಸ್ವಾಭಾವಿಕ ಸನ್ನಿವೇಶದಲ್ಲಿ. ಅಲ್ಲಿ ಸೊಗಸು ಹೊರಹೊಮ್ಮುತ್ತಿರುತ್ತದೆ. ದುರಾದೃಷ್ಟವಶಾತ್ ಬ್ರಿಟೀಷರ ಕೊನೆಯ ಆಡಳಿತ ಕಾಲದಲ್ಲಿ ಇಡೀ ಇಂಡಿಯಾದ ಮೇಲೆ ವಕ್ರತೆಯ ಅಲೆ ಹರಿದುಬಿಟ್ಟಿತು. ಟಾಗೂರರು ಮತ್ತು ಗಾಂಧೀಜಿಯವರು ಎಷ್ಟು ವಿರೋಧಿಸಿದರೂ ಬಹು ಅಗ್ಗದ ವಿದೇಶಿ ವಸ್ತುಗಳನ್ನು ಇಂಡಿಯಾಕ್ಕೆ ತಂದು ಹಾಕಲಾಯಿತು. ಹರ್ಬರ್ಟ್ ರೀಚ್ ಹೇಳುತ್ತಾರೆ -'ಪಾಶ್ಚಾತ್ಯ ಪ್ರಪಂಚ ಅಗಾಧವೂ ಸರ್ವವ್ಯಾಪಕವೂ ಆದ ಅಸಹ್ಯನಾಗರೀಕತೆಯನ್ನು ಬೆಳೆಸಿದೆ. ಆ ನಾಗರೀಕತೆಗೆ ಮರ್ಯಾದೆಯ ಮುಖವಿಲ್ಲ.' ಯಾವುದನ್ನು ಮರೆತರೂ ಸೌಂದರ್ಯವನ್ನು ಮರೆಯಬಾರದು. ಸೌಂದರ್ಯ ಪ್ರತಿಯೊಂದು ಪೀಳಿಗೆಯಲ್ಲಿಯೂ ಉತ್ತೇಜನಗೊಳ್ಳಬೇಕು. ವ್ಯಾಪಾರ ದೃಷ್ಟಿ ಅಥವಾ ಕೆಟ್ಟಅಭಿರುಚಿ ಅದರಲ್ಲಿ ಪ್ರವೇಶಿಸಬಾರದು. ಪ್ರಪಂಚದಲ್ಲಿ ಸೌಂದರ್ಯ ಬಹು ಮುಖ್ಯವಾದದ್ದು. ಅದೇ ಕೊನೆಗೆ ಗೆಲ್ಲಬೇಕು. ಗುಡ್ಡಗಾಡು ಜನ ಅದನ್ನು ಗೆದ್ದಿದ್ದಾರೆ. ಅದು ಹಾಳಾಗದಂತೆ ನೋಡಿಕೊಳ್ಳಬೇಕು. ಆದರೆ ಹಾಗೆ ಮಾಡುವಾಗ ಆ ಗುಡ್ಡಗಾಡು ಜನ ಈ

ಆಧುನಿಕ ಪ್ರಪಂಚದಲ್ಲಿ ಮುಂದುವರಿಯಬಾರದೆಂದು ನನ್ನ ಅಭಿಪ್ರಾಯವಲ್ಲ. ಅವರಿಂದ ಈ ಆಧುನಿಕ ಪ್ರಪಂಚಕ್ಕೆ ಒಂದು ಪ್ರೇರಣೆ ಆಗಬೇಕು ಎಂದು ನನ್ನ ಅರ್ಥ... ಎಲ್ಲಕ್ಕಿಂತ ಮಿಗಿಲೆಂದರೆ, ಸೌಂದರ್ಯ, ಸ್ವಾತಂತ್ರ್ಯ ಮತ್ತು ಸುಖಗಳಿಗಾಗಿ, ಇದ್ದ ಸುಖವನ್ನು ಉಳಿಸುವುದಕ್ಕಾಗಿ, ಕಳೆದ ಸುಖವನ್ನು ತಂದುಕೊಡುವುದಕ್ಕಾಗಿ ಕಾರ್ಯ ಮಾಡುವುದಕ್ಕಿಂತ ಪ್ರೇಮದ ಪ್ರಕಟಣೆ ಬೇರೊಂದಿಲ್ಲ."[5]

ಎಲ್ವಿನರು ಹೇಳುವಂತೆ ಗಿರಿಜನರಲ್ಲಿರುವ ಸತ್ಯ, ಸೌಂದರ್ಯ ಮತ್ತು ಸ್ವಾತಂತ್ರ್ಯವನ್ನು ಕಾಪಾಡುವ ಅಥವಾ ಅವರಲ್ಲಿ ಇದ್ದ ಈ ಮೌಲ್ಯಗಳನ್ನು 'ನಾಗರೀಕ' ಜಗತ್ತಿಗೆ ಪರಿಚಯಿಸುವ ಮೂಲಕ ನಮ್ಮ ದೇಶೀ ಸತ್ವವನ್ನು ಪ್ರತಿಷ್ಠಾಪಿಸುವ ಒಂದು ಅಂಗವಾಗಿ ಈ **ಗಿರಿಜನ ಕಾವ್ಯ** ಸಂಪುಟ ಪ್ರಕಟವಾಗುತ್ತಿದೆ.

ಇತ್ತೀಚೆಗೆ ನಮ್ಮಲ್ಲಿ ಯಥೇಚ್ಛವಾಗಿ ಬಳಕೆಯಾಗುತ್ತಿರುವ **ಉಪಸಂಸ್ಕೃತಿ** ಎಂಬ ಪರಿಕಲ್ಪನೆಯ ಬಗೆಗೆ ಒಂದಿಷ್ಟು ಚಿಂತನೆ ಅಗತ್ಯ ಎಂಬುದು ನನ್ನ ಭಾವನೆ. ಯಾಕೆಂದರೆ, ಬುಡಕಟ್ಟು ಸಂಸ್ಕೃತಿಯ ಆತ್ಮವಿಶ್ವಾಸಿ ಪ್ರಕ್ರಿಯೆಯನ್ನು ಮನಗಾಣಿಸಬೇಕಾದರೆ ಇದೀಗ ಬಹು ಹುಮ್ಮಸ್ಸಿನಿಂದ ನಡೆಯುತ್ತಿರುವ 'ಉಪಸಂಸ್ಕೃತಿ' ಚರ್ಚೆಯನ್ನು ಕೈಬಿಡುವ ಹಾಗಿಲ್ಲ. ಸಾಹಿತ್ಯ ಅಕಾಡೆಮಿಯ ಮೂಲಕ ಉಪಸಂಸ್ಕೃತಿ ಮಾಲೆಯನ್ನು ಆರಂಭಿಸಿ ಅನೇಕ ಬುಡಕಟ್ಟುಗಳ ಬಗ್ಗೆ ಹಲವು ಪುಸ್ತಕಗಳನ್ನು ಹೊರತಂದ ಬರಗೂರು ರಾಮಚಂದ್ರಪ್ಪನವರು, ವಿಶಿಷ್ಟ ಜನವರ್ಗಗಳ ಸಂಸ್ಕೃತಿ ಸ್ವರೂಪವನ್ನು ಕುರಿತು ಹೀಗೆ ಹೇಳುತ್ತಾರೆ-"ಸಾಮಾಜಿಕ, ಆರ್ಥಿಕ ಮತ್ತು ಅಧಿಕಾರದ ನೆಲೆಗಳನ್ನು ನಿಯಂತ್ರಿಸುವ ಸಹಕಾರ ವಲಯಗಳು ಮನ್ನಣೆ ಕೊಡುತ್ತಾ ಬಂದದ್ದು ಮಾತ್ರ ಸಾಹಿತ್ಯ, ಸಂಗೀತ, ಕಲೆ, ನೀತಿ, ನಿಯಮ ಎಂದು ಭಾವಿಸಿ, ಈ ವಲಯಗಳೊಂದಾಗಿ ರೂಪಿಸಿದ ಸಂಸ್ಕೃತಿ ಮಾತ್ರವೇ ಪ್ರಾತಿನಿಧಿಕವೆಂದು ಪ್ರತಿಪಾದಿಸುವುದು, ಸಂಸ್ಕೃತಿಯ ವಿವಿಧ ಬೆಡಗು ಬಣ್ಣಗಳನ್ನು ಬದಿಗೊತ್ತಿದಂತಾಗುತ್ತದೆ. ಅಷ್ಟೇ ಅಲ್ಲ, ಈ ವರ್ಗ ಒಕ್ಕೂಟವು ಸಾಮಾನ್ಯವಾಗಿ ಸ್ಥಿರಗೊಂಡ ನೆಲೆಗಳನ್ನೇ ಸಂಸ್ಕೃತಿಯ ನಮೂನೆಗಳೆಂದು ಪ್ರಚಾರ ಪಡಿಸುತ್ತದೆಯಾದ್ದರಿಂದ ಸಂಸ್ಕೃತಿಯ ಚಲನಶೀಲತೆಯನ್ನೇ ನಿರಾಕರಿಸಿದಂತಾಗುತ್ತದೆ. ಇದರಿಂದ ಸಾಮಾಜಿಕ ಪರಿವರ್ತನ ಶೀಲತೆಯ ಸಹಜಗುಣವನ್ನು ಸಂಪುಟಕ್ಕೆ ಸಿಕ್ಕಿಸಿದಂತಾಗುತ್ತದೆ. ಪ್ರಧಾನ ನೆಲೆಗಳಲ್ಲಿ ಸಂಸ್ಕೃತಿ ಎಂದು ನಂಬುತ್ತಿರುವ ಅಂಶಗಳನ್ನು ಅಧೀನ ನೆಲೆಗಳೂ ಅನುಸರಿಸುವ ಸಂಪ್ರದಾಯ ನಮ್ಮದಾದ್ದರಿಂದ, ಸಾಮಾಜಿಕ ಮತ್ತು ಆರ್ಥಿಕ ನೆಲೆಗಳ ಪ್ರಾಣವಾಗಿರುವ 'ಉಪಸಂಸ್ಕೃತಿ'ಗಳು ಪ್ರತ್ಯೇಕ ಪರಿಕಲ್ಪನಾತ್ಮಕ ಪರಿಭಾವನೆಯಿಂದ ಕೂಡ ಸರಿಯುವಂತಾಗಿದೆ. ಪ್ರಧಾನ ಸಂಸ್ಕೃತಿಯು ಯಾವುದೇ ಒಂದು ದೇಶ-ಪ್ರದೇಶದ ಪ್ರಧಾನ ಜೀವನ ವಿಧಾನವಾಗಿರುವಾಗ, ಇದಕ್ಕೆ ಹೊರತಾಗಿ ಅಥವಾ ಪ್ರಧಾನ ನೆಲೆಯಿಂದ ನಿರ್ಲಕ್ಷಿತವಾಗಿ ಬದುಕುತ್ತಿರುವ ಸಂಸ್ಕೃತಿಗಳು 'ಉಪಸಂಸ್ಕೃತಿ'ಪರಿಕಲ್ಪನೆಯ ಪರಿಧಿಗೆ ಬರುತ್ತವೆ."[6]

'ಪ್ರಧಾನ ನೆಲೆಗಳಲ್ಲಿ ಸಂಸ್ಕೃತಿ ಎಂದು ನಂಬುತ್ತಿರುವ ಅಂಶಗಳನ್ನು ಅಧೀನ ನೆಲೆಗಳೂ ಅನುಸರಿಸುವ ಸಂಪ್ರದಾಯ ನಮ್ಮದು'- ಎನ್ನುವ ಮಾತಿನ ಮೂಲಕ ಈ ಅನುಸರಿಸುವ ಕ್ರಿಯೆಯನ್ನು ಬರಗೂರು

ತೀರಾ ಸರಳಗೊಳಿಸಿಬಿಡುತ್ತಿದ್ದಾರೇನೋ ಅನ್ನಿಸಿಬಿಡುತ್ತದೆ. ಆದರೆ, ಇದ್ದದ್ದು ಇದ್ದಹಾಗೆ ಅನುಸರಿಸುತ್ತಾರೋ ಇಲ್ಲವೇ ತಮ್ಮದನ್ನಾಗಿ ಪರಿವರ್ತಿಸಿಕೊಂಡು ಸ್ವೀಕರಿಸುತ್ತಾರೋ ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಪ್ರಧಾನ ಮತ್ತು ಅಧೀನ ಎಂಬುದು ರಾಜಕೀಯ ಅಥವಾ ಆರ್ಥಿಕ ಪರಿಭಾಷೆಯೇ ಹೊರತು ಸಾಂಸ್ಕೃತಿಕವಾದ ಪರಿಭಾಷೆ ಆಗಲಾರದು. ಪ್ರತಿಯೊಂದು ಸಂಸ್ಕೃತಿಗೂ ತನ್ನದೇ ಆದ ಸ್ವತಂತ್ರ ಅಸ್ತಿತ್ವ ಇರುತ್ತದೆ. ಅದರಷ್ಟಕ್ಕೆ ಅದು ಸ್ವತಂತ್ರ ಸಂಸ್ಕೃತಿ. ಅದಕ್ಕೆ ಅದೇ ಮೂಲ ಸಂಸ್ಕೃತಿ. ಮತ್ತೊಂದು ಸಂಸ್ಕೃತಿಯ ಮೂಲಕ ಇನ್ನೊಂದರ ಅಸ್ತಿತ್ವವನ್ನು ಗುರುತಿಸ ಹೋದರೆ ಆ ಮಾರ್ಗ ತಪ್ಪಾಗಬಹುದು. ಖ್ಯಾತ ವಿದ್ವಾಂಸ ಎಲ್.ಎ. ವೈಟ್ ಹೇಳುವ ಮಾತುಗಳು ಇಲ್ಲಿ ಮುಖ್ಯವಾಗುತ್ತದೆ- “ಸಂಸ್ಕೃತಿ ಎಂಬುದು ಏಕಕಾಲದಲ್ಲಿ ಸಾಂಕೇತಿಕವೂ, ನಿರಂತರವೂ ಸಂಚಯಿತವೂ ಹಾಗೂ ಚಲನಶೀಲವೂ ಆದ ಪ್ರಕ್ರಿಯೆ”[7]

ಇಲ್ಲಿ ಸಂಸ್ಕೃತಿ ಸಿಂಬಾಲಿಕ್ ಆದುದು ಎಂಬ ಮಾತು ಹೆಚ್ಚು ಅರ್ಥಪೂರ್ಣ. ಅಂದರೆ, ಒಂದು ಬಹುಸಂಖ್ಯಾತ ಅಥವಾ ಮೇಲ್ವರ್ಗದ ಸಮುದಾಯದ ವ್ಯಾಪಕ ಪ್ರಭಾವ ಒಂದು ಸಣ್ಣ ಸಮುದಾಯದ ಮೇಲೆ ಆಗಿದೆ ಎಂದು ಇಟ್ಟುಕೊಂಡರೂ ಆ ಸಣ್ಣ ಸಮುದಾಯದ ವಿಶಿಷ್ಟ ಆಚರಣೆಗಳು ಏನನ್ನೋ ಸಂಕೇತಿಸುತ್ತಿರುತ್ತವೆ. ತನ್ನ ನಿರಂತರತೆಯಲ್ಲಿ ಸಂಸ್ಕೃತಿ ಎಂಬುದು ತನಗೆ ಆಪ್ತವಾದ ಹೊರಗಿನದನ್ನು ಪಡೆಯುತ್ತಾ ತನ್ನ ಸಂಚಯದಲ್ಲಿ ಸೇರಿಸಿಕೊಳ್ಳುತ್ತದೆ. ಹಾಗೆ ಸೇರಿಸಿಕೊಂಡ ಸರಕು ಯಥಾವತ್ತಾಗಿ ಇರಲಾರದು. ಅದು ಯಾವುದಕ್ಕೆ ಸೇರುತ್ತದೋ ಆ ಸಮುದಾಯದ ಆಶೋತ್ತರಗಳಿಗನುಗುಣವಾಗಿ ಮಾರ್ಪಾಟು ಹೊಂದಬಹುದು. ಇದ್ದ ಹಾಗೆ ಇರುವುದಿಲ್ಲ. ಹೀಗಾಗಿ ಒಂದು ಸಂಸ್ಕೃತಿ ಎಂಬುದು ನಿರಂತರವಾದುದು. ಹಾಗೆಯೇ ಚಲನ ಶೀಲವಾದುದು. ಹೀಗಾದಾಗ ಒಂದು ಸಂಸ್ಕೃತಿಯಿಂದ ಯಾವುದಾದರೂ ಅಂಶಗಳನ್ನು ಪಡೆದುಕೊಂಡರೆ ಅದು ನೇರ ಅನುಸರಣೆ ಆಗಿರುವುದಿಲ್ಲ. ಬದಲಾಗಿ ಹಾಗೆ ಪಡೆದುಕೊಂಡ ಸಮುದಾಯದ ಆಶೋತ್ತರಗಳಿಗೆ ಅನುಗುಣವಾಗಿ ಮಾರ್ಪಡುತ್ತದೆ. ಹೀಗೆ ಕೊಟ್ಟು ಪಡೆದುಕೊಳ್ಳುವ ಕ್ರಿಯೆಯಲ್ಲಿ ಅಸಮತೋಲನವಿರುತ್ತದೆ ನಿಜ. ಬಹುಸಂಖ್ಯಾತ ಮತ್ತು ಮೇಲ್ವರ್ಗದ ಸಮುದಾಯಗಳು ಕೆಳಗಿನಿಂದ ಪಡೆಯುವುದು ಕಡಿಮೆ. ಕೆಳಗಿನ ಸ್ಥರದಲ್ಲಿರುವಂಥವು (ಶ್ರೇಣೀಕರಣದಲ್ಲಿ ಮಾತ್ರ) ಮೇಲಿನಿಂದ ಪಡೆಯುವುದು ಸ್ವಾಭಾವಿಕ. ಅದು ಹೇರಿಕೆಯಿಂದಲೂ, ವೈಭವೀಕರಣದಿಂದಲೂ ಅಥವಾ ಸಹಜವಾಗಿಯೂ ಆಗಬಹುದು. ಇಷ್ಟಾಗಿಯೂ ಅವು ಹೇಗೆ ಸ್ವೀಕರಿಸುತ್ತವೆ ಮತ್ತು ಯಾವ ರೀತಿಯಲ್ಲಿ ತಮ್ಮಲ್ಲಿ ವಿಲೀನಗೊಳಿಸಿಕೊಳ್ಳುತ್ತವೆ ಎಂಬುದೇ ಮುಖ್ಯ. ಇದಕ್ಕೆ ಉದಾಹರಣೆಯನ್ನು ನೀಡಬೇಕೆಂದರೆ, ಮೇಲ್ವರ್ಗದ ಸಂಸ್ಕೃತಿಗಳು ಪರಿಭಾವಿಸಿದ ರಾಮಾಯಣ ಮಹಾಭಾರತಗಳು ಶೂದ್ರಾತಿಶೂದ್ರರುಗಳಲ್ಲಿ ಏನಾಗಿದೆ ಎಂಬುದನ್ನು ನೋಡಿದಾಗ ಗೊತ್ತಾಗುತ್ತದೆ. ಹಾಗೆ ನೋಡಿದರೆ ಪಾತಿವ್ರತ್ಯವನ್ನು ಸಾರಿ ಹೇಳುವ ರಾಮಾಯಣ, ಬುಡಕಟ್ಟುಗಳ ಕಲ್ಪನೆಯಲ್ಲಿ ಛಿದ್ರಗೊಂಡಿರುವುದನ್ನು ನೋಡಬಹುದು. ಸಂಸ್ಕೃತಿ ಎಂಬುದು ಚಲನಶೀಲವಾದುದು ಎಂಬುದು ನಿಜ. ಮೂರು ಸಾವಿರ ವರ್ಷಗಳಿಂದ ನಿರಂತರವಾಗಿ ವೈದಿಕ ಮೌಲ್ಯಗಳ ಹೇರಿಕೆ

ಆಗುತ್ತಾ ಬಂದಿದ್ದರೂ, ಇಂದಿಗೂ ತಮ್ಮತನವನ್ನು ಆಂತರಿಕವಾಗಿ ಉಳಿಸಿಕೊಂಡು ಬಂದ ಅನೇಕ ಸಮುದಾಯಗಳ ಸತತ ಸಂಘರ್ಷ ಮಾತ್ರ ನಮ್ಮಲ್ಲಿ ಹೆಮ್ಮೆಯನ್ನುಂಟು ಮಾಡುತ್ತದೆ. ಹೀಗೆ, ಹೊರಗಿನದನ್ನು ಎಷ್ಟು ಬೇಕೋ ಅಷ್ಟು ಪಡೆದು ವಿಕಾಸಗೊಳ್ಳುತ್ತಲೇ ತನ್ನ ಆಂತರಿಕ ಪ್ರವಾಹವನ್ನು ಹಾಗೇ ಕಾಪಾಡಿಕೊಳ್ಳುವ ಪ್ರಕ್ರಿಯೆಯನ್ನು ಗಮನಿಸಿದಾಗ ಇಲ್ಲಿ ಯಾವುದೂ ‘ಉಪಸಂಸ್ಕೃತಿ ಎಂಬುದಿಲ್ಲ, ಹಾಗೆ ನಾಶವಾಗಲು ಒಪ್ಪದ ಅನನ್ಯತೆ ಗಿರಿಜನರಲ್ಲಿದೆ, ಆ ಅನನ್ಯತೆಯ ವಿವಿಧ ರೂಪವೇ ಈ **ಗಿರಿಜನ ಕಾವ್ಯ** ಎಂಬುದನ್ನು ಒಪ್ಪಬೇಕಾಗುತ್ತದೆ. ಆದ್ದರಿಂದ, ಅನ್ಯ ಸಂಸ್ಕೃತಿಗಳ ಪ್ರಭಾವದಿಂದ ಪಡೆಯಬೇಕಾದ್ದನ್ನು ಪಡೆಯುತ್ತಾ ತನ್ನೊಳಗೆ ವಿಲೀನಗೊಳಿಸಿಕೊಳ್ಳುತ್ತಾ ಸ್ಥಿರದ ಸಂಚಯಿತ ಮೊತ್ತಕ್ಕೆ ಸೇರಿಸಿಕೊಳ್ಳುತ್ತಾ ಹೋಗುವುದೇ ಸಂಸ್ಕೃತಿಯ ಲಕ್ಷಣ. ಭ್ರಮಾತ್ಮಕ ಪ್ರಭಾವಗಳು ಕೇವಲ ತಾತ್ಕಾಲಿಕ ಅಷ್ಟೆ.

ಇದುವರೆಗೆ ಗಿರಿಜನ ಸಂಸ್ಕೃತಿಯ ಪ್ರಾಧಾನ್ಯತೆಯನ್ನು, ಅನನ್ಯತೆಯನ್ನು ಕುರಿತು ವಿಶ್ಲೇಷಿಸಲಾಯಿತು. ಈ ಅನನ್ಯತೆಯ ಸಮರ್ಥ ರೂಪಗಳೆನಿಸಿದ ಗಿರಿಜನ ಸಮುದಾಯದ ಕಾವ್ಯ ಪ್ರಕಾರಗಳು ನಮ್ಮ ದೇಶಿ ಜ್ಞಾನಪರಂಪರೆಯನ್ನು ಪುನರ್‌ಶೋಧನೆಗೆ ಒಳಪಡಿಸಲು ನಮ್ಮನ್ನು ಒತ್ತಾಯಿಸುತ್ತವೆ. ಇಲ್ಲಿ, ಕಾವ್ಯವೆಂದರೆ ಅದು ಕೇವಲ ಕಾವ್ಯವಲ್ಲ. ನಮ್ಮ ಕಾವ್ಯಮೀಮಾಂಸಕರು, ನಿರ್ದಿಷ್ಟಪಡಿಸಿದ ಸಾಂಪ್ರದಾಯಿಕ ಗುಣಗಳು ಅಲ್ಲಿ ಇಲ್ಲದಿರಬಹುದು. ಆದರೆ, ಗಿರಿಜನ ಕಾವ್ಯ ಪ್ರಕಾರವೊಂದು ಒಂದು ಜನವರ್ಗದ ಅಲಿಖಿತ ಇತಿಹಾಸವಾಗಬಹುದು ಹಾಗೆಯೇ ಒಂದು ಸಮುದಾಯದ ಸ್ಮೃತಿ ಮತ್ತು ಅನುಭವಗಳನ್ನು ಭಾಷೆಯ ರೂಪದಲ್ಲಿ ಕಟ್ಟಿಕೊಡುವ ಸೃಜನ ರೂಪಕವೂ ಆಗಿರಬಹುದು. ತನ್ನ ಸುತ್ತಲ ಜಗತ್ತನ್ನು ಕುರಿತು ಸಮುದಾಯವೊಂದು ಕಂಡುಕೊಂಡ ದರ್ಶನ ಈ ಕಾವ್ಯಗಳಲ್ಲಿ ವ್ಯಕ್ತವಾಗುತ್ತದೆ. ಹಾಗೆಂದು ಈ ಗಿರಿಜನ ಕಾವ್ಯ ಪ್ರಜ್ಞಾಪೂರ್ವಕವಾಗಿ ಕಟ್ಟಿದ್ದಲ್ಲ. ಒಟ್ಟು ಸಮುದಾಯದ ನಿರಂತರ ಅನುಭವ ರೂಢಿಸಿಕೊಟ್ಟ ಜ್ಞಾನಪರಂಪರೆ ಅದು. ಸತತ ಆಲೋಚನೆ ಮತ್ತು ಅದಕ್ಕೆ ಸ್ಪಂದಿಸಿದ ಸೃಷ್ಟಿಶೀಲ ಸಮುದಾಯಗಳು ಕಟ್ಟಿಕೊಂಡ ಸಂಕಥನಗಳು ಅವು. ತಮ್ಮ ಸುತ್ತಲ ಪ್ರಕೃತಿ ಹೇಗೋ ಹಾಗೆ ಸೆಣಸಾಟದ ಜೀವನದ ಜೊತೆ ನಿರಂತವಾಗಿ ನಡೆಸಿದ ಅನುಸಂಧಾನದ ಫಲ ಈ ಕಾವ್ಯರೂಪಗಳು.

ನಮ್ಮ ಶಿಷ್ಟ ಪುರಾಣಗಳು ಅಥವಾ ಕಾವ್ಯಗಳು ಕಟ್ಟಿಕೊಡುವ ಏಕರೂಪಿಯಾದ ಭಾರತೀಯ ಮೌಲ್ಯಗಳು ಇಲ್ಲಿ ಕಾಣಿಸಿಗದಿರಬಹುದು. ಹಾಗೆಯೇ ನಮ್ಮ ತತ್ತ್ವದರ್ಶನಕಾರರು ಮತ್ತು ಚಾರ್ವಾಕರು ಬೋಧಿಸುವ ಚರ್ವಿತ ಚರ್ವಣವಾದ ಪ್ರತಿವಾದಗಳೂ ಈ ಕಾವ್ಯಗಳಲ್ಲಿ ಇಲ್ಲದಿರಬಹುದು. ಆದರೆ, ಒಂದು ನಿರ್ದಿಷ್ಟ ಭೂಪ್ರದೇಶದ ವಿಶಿಷ್ಟ ಸಂಸ್ಕೃತಿ ವಲಯವೊಂದರಲ್ಲಿ

ಭೌತಿಕವಾಗಿ ಮತ್ತು ಆಂತರಿಕವಾಗಿ ಕಂಡುಬರುವ ಅನನ್ಯ ಲೋಕದೃಷ್ಟಿಯ ಸೃಜನರೂಪಗಳಾಗಿ ಈ ಕಾವ್ಯಗಳನ್ನು ನಾವು ನೋಡಬೇಕು. ಆದ್ದರಿಂದ ಈ ಪ್ರಾತಿನಿಧಿಕ ಕಾವ್ಯರೂಪಗಳನ್ನು ಸಾಂಸ್ಕೃತಿಕವಾದ ಸಾಮಾಜಿಕವಾದ ಹಾಗೂ ರಾಜಕೀಯವಾದ ಬಹುನಿಟ್ಟಿನಿಂದ ನಾವು ನೋಡುವುದು ಅನಿವಾರ್ಯವಾಗುತ್ತದೆ. ಆಗ, ಈ ದೇಶದಲ್ಲಿ ಸಂಸ್ಕೃತಿಯ ಎಷ್ಟೆಲ್ಲ ಪರ್ಯಾಯ ಹೆದ್ದಾರಿಗಳು ಹೇಗೆ ಹೇಗೆ ಸಾಗುತ್ತಿವೆ ಮತ್ತು ಕೂಡುತ್ತಿವೆ ಹಾಗೂ ಮತ್ತೆ ವಿಘಟಿತವಾಗಿ ಹೊರಡುತ್ತಿವೆ ಎಂಬ ಸತ್ಯದ ದರ್ಶನವಾಗುತ್ತದೆ. ಈ ಸತ್ಯದರ್ಶನ ಸಂಪ್ರದಾಯವಾದೀ ಸಂಸ್ಕೃತಿ ಮಿಮಾಂಸಕಾರರ ಅಹಂಕಾರಗಳನ್ನು ಮುರಿಯುತ್ತದೆ.

ಯಾವುದೇ ಮುಂದುವರೆದ ನಾಗರಿಕ ಸಂಸ್ಕೃತಿ ಕೂಡ ತನ್ನಲ್ಲಿ ಕ್ಲೀಷೆ ಉಂಟಾದಾಗ ಅಥವಾ ಸವಕಲು ಅಂಶಗಳೇ ಪುನರುಕ್ತಿಯಾಗತೊಡಗಿದಾಗ ಎರಡು ರೀತಿಯ ಕ್ರಿಯೆಗಳಿಗೆ ಒಳಗಾಗುತ್ತದೆ. ಒಂದನೆಯದು : ತನ್ನಲ್ಲಿ ಇಲ್ಲದ ಹೊಸದಕ್ಕಾಗಿ ತುಡಿಯುವ ಮೂಲಕ ಹೊರಗಿನ ಚಮತ್ಕಾರಗಳಿಗೆ ಮಾರುಹೋಗುತ್ತದೆ. ಎರಡನೆಯದು: ತನ್ನದೇ ಸಂಸ್ಕೃತಿಯ ಅಂತಃಸತ್ವವನ್ನು ನೆನಪಿಸಿಕೊಂಡು ತನ್ನ ಪುರಾತನ ಸೊಗಡಿಗೆ ಹೊಸ ರೂಪ ಕೊಡುವ ಮೂಲಕ ನವನವೋನ್ಮೇಶಶಾಲಿನಿಯಾಗಲು ಹಾತೊರೆಯುತ್ತದೆ. ಉದಾಹರಣೆಗೆ ಸಮಕಾಲೀನವಾದ ಸಂಗೀತ ರೂಪವನ್ನೇ ನೋಡಿ ಅಥವಾ ನೃತ್ಯ ಮುಂತಾದ ಪ್ರದರ್ಶನ ಕಲೆಗಳನ್ನೇ ನೋಡಿ. ಪಾಶ್ಚಾತ್ಯದಿಂದ ಎರವಲು ಪಡೆಯುತ್ತವೆ. ಇಲ್ಲವೇ ಜಾನಪದ ಸೊಗಡಿಗೆ ಮರಳುತ್ತವೆ. ಮೊದಲನೆಯ ಕ್ರಿಯೆ ತಾತ್ಕಾಲಿಕವಾದದ್ದು. ಎರಡನೆಯದು ನಿರಂತರವಾದದ್ದು. ಆದ್ದರಿಂದಲೇ ಗಿರಿಜನ ಕಾವ್ಯ ನಮ್ಮ ಲೇಖಕರಿಗೆ, ಕವಿಗಳಿಗೆ ಹೊಸ ಶಕ್ತಿಯನ್ನು ತುಂಬಬಲ್ಲುದು. ಸಂಗೀತಕ್ಕೆ ಹೊಳಪಿನ ಲೇಪನೀಡಬಲ್ಲದು. ಪ್ರದರ್ಶನಕ್ಕೆ ರಂಗುತುಂಬಬಲ್ಲದು. “ಕನ್ನಡದ ಶ್ರೇಷ್ಠ ಭಾವಗೀತೆಗಳಲ್ಲಿ ಕಂಡುಬರುವ ಉತ್ಕಟವಾದ ನಾಟಕೀಯತೆಯ ಅಂಶದ ಹಿಂದೆ ಕಥನಕಾವ್ಯದ ಪರಂಪರೆಯ ಬೆಂಬಲವಿದೆ.”[8] ಎಂಬ ವಿಮರ್ಶಕರ ಮಾತು ಸತ್ಯವಾದದ್ದು. ಯಾಕೆಂದರೆ ಜನಪದ ಪರಂಪರೆಯ ಕಾವ್ಯ ಕೇವಲ ಓದಿಕೊಳ್ಳುವ ಕಾವ್ಯವಲ್ಲ. ಅದು ಏಕಕಾಲದಲ್ಲಿ ಕೇಳಿಸಿಕೊಳ್ಳುವ ಮತ್ತು ಕಣ್ಣಿಂದ ಸಾಕಾರವಾಗಿ ದೃಶ್ಯರೂಪದಲ್ಲಿ ಸವಿಯುವ ಬಹುರೂಪೀ ನೆಲೆಯದ್ದು. ಈ ಸಂದರ್ಭದಲ್ಲಿ ಮಹಾಕಾವ್ಯದ ಸ್ವರೂಪವನ್ನು ಕುರಿತು ನಡೆದಿರುವ ಕೆಲವು ಚರ್ಚೆಗಳನ್ನು ಗಮನಿಸುವುದು ಸೂಕ್ತ. ಯಾಕೆಂದರೆ ಈ ಮೂಲಕ ಮೌಖಿಕ ಕಾವ್ಯದ ಅನನ್ಯತೆಯನ್ನು ಮತ್ತಷ್ಟು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಾಧ್ಯ. ಮಹಾಕಾವ್ಯದ ಸ್ವರೂಪವನ್ನು ಕುರಿತು ಡಾ. ಜಿ.ಎಸ್. ಶಿವರುದ್ರಪ್ಪ ಹೀಗೆ ಹೇಳುತ್ತಾರೆ-“ಭಾವಗೀತೆ ಹಾಡಿದ್ದು, ಮಹಾಕಾವ್ಯ ವಾಚಿಸಿದ್ದು, ನಾಟಕ ಅಭಿನಯಿಸಿದ್ದು-ಎಂದು ಈ ಮೂವರ ವ್ಯತ್ಯಾಸವನ್ನು ಸ್ಥೂಲವಾಗಿ ಹೇಳಬಹುದು. ಭಾವಗೀತೆಗೂ ಮಹಾಕಾವ್ಯಕ್ಕೂ ಹೋಲಿಕೆಗೆ ಎದ್ದು ಕಾಣುವ ವ್ಯತ್ಯಾಸ ಅವುಗಳ ಗಾತ್ರವನ್ನು ಕುರಿತದ್ದು. ಒಂದು ಆಕಾರದಲ್ಲಿ ಹ್ರಸ್ವ ಮತ್ತೊಂದು ದೀರ್ಘ. ಭಾವಗೀತೆಯಲ್ಲಿ ಹರಳುಗೊಂಡ ಒಂದು ಭಾವ ಅಥವಾ ಹುರಿಗೊಂಡ ಹಲವು ಭಾವಗಳಿದ್ದರೆ, ಮಹಾಕಾವ್ಯ ಅನೇಕ ಭಾವಗಳ ಒಂದು ಸಂಕುಲ. ಅನೇಕ ಪಾತ್ರಗಳು, ಅನೇಕ ಘಟನೆಗಳು, ಅದನ್ನು

ತುಂಬಿಕೊಂಡಿವೆ. ನಾಟಕದಲ್ಲೂ ಅಷ್ಟೆ. ಮಹಾಕಾವ್ಯ ಎನ್ನುವುದು ಭಾವಗೀತೆಯಂತೆ ಒಂದೇ ತುತ್ತಿನಲ್ಲಿ ಆಸ್ವಾದಿಸಲಾಗದ, ನಾಟಕದಂತೆ ಒಂದೇ ಕೂತಿನಲ್ಲಿ ನೋಡಿ ಮುಗಿಸಲಾಗದ, ಒಂದು ಸುದೀರ್ಘ ಕಥನರೂಪ. ಆದುದರಿಂದಲೇ ಮಹಾಕಾವ್ಯವನ್ನು ಹಲವು ದಿನಗಳ ಕಾಲ ಓದಬೇಕಾಗುತ್ತದೆ ಅಥವಾ ಪಾರಾಯಣ ಮಾಡಬೇಕಾಗುತ್ತದೆ. ಮಹಾಕಾವ್ಯ ಎಂದರೆ, ಗಂಭೀರವಾದ ಛಂದಸ್ಸಿನಲ್ಲಿ ರಚಿತವಾದ ಒಂದು ಸುಧೀರ್ಘವಾದ ಕಥನಕಾವ್ಯ ಎನ್ನುವುದೇ ಬಹುಜನ ಸಮ್ಮತವಾದ ಸೂತ್ರವಾಗಿದೆ."[9] ಆದರೆ ಜನಪದ ಮಹಾಕಾವ್ಯದಲ್ಲಿ ಈ ಮಾತು ಸುಳ್ಳಾಗುತ್ತದೆ. ಜನಪದ ಮಹಾಕಾವ್ಯ ಕೇವಲ ಓದುವುದು ಅಥವಾ ವಾಚಿಸುವುದಲ್ಲ. ವ್ಯಕ್ತಿಗತವೂ ಅಲ್ಲ. ಇದು ಇಡೀ ಒಂದು ಸಮೂಹಕ್ಕೆ ಸೇರಿದ್ದು. ಹಾಗೆ ನೋಡಿದರೆ ಜನಪದ ಮಹಾಕಾವ್ಯ ಸುದೀರ್ಘ ಭಾವಗೀತೆಯೂ ಹೌದು, ಕಲಾವಿದರ ನಡುವಿನ ನಾಟಕ ರೂಪದ ನಿರಂತರ ಸಂಭಾಷಣೆಯೂ ಹೌದು. ಅಭಿನಯಪೂರ್ವಕ ದೃಶ್ಯಕಲೆಯೂ ಹೌದು. ಈ ದೃಷ್ಟಿಯಿಂದ ಪ್ರಸಿದ್ಧ ವಿಮರ್ಶಕ ಟಿ.ಎಸ್. ಎಲಿಯಟ್ ಹೇಳುವ ಒಂದು ಅಂಶ ಮುಖ್ಯವಾಗುತ್ತದೆ. "ಯಾವ ಒಂದು ಅಭಿವ್ಯಕ್ತಿ ಪ್ರಕಾರ, ಸಣ್ಣದೋ ಅಥವಾ ದೊಡ್ಡದೊ ಆದ ಸಹೃದಯ ಸಮೂಹವೊಂದನ್ನು ಉದ್ದೇಶಿಸಿ ಮಾತನಾಡಿದಂತೆ ಇರುತ್ತದೋ ಅದು ಮಹಾಕಾವ್ಯ"[10] ಅದೇ ನಮ್ಮ ಭಾರತೀಯರ್‍ಯಾರೂ "ಮಹಾಕಾವ್ಯ ಸಮೂಹದ ಎದುರಿಗೆ ಮಾತನಾಡುವಂಥದ್ದು" ಎಂದು ಹೇಳಿಲ್ಲ ಎಂಬುದು ಇಲ್ಲಿ ಮುಖ್ಯ.

ಇನ್ನೂ ಸ್ವಲ್ಪ ಮುಂದೆ ಹೋಗಿ ಜಿ.ಎಸ್. ಶಿವರುದ್ರಪ್ಪನವರು ಮಹಾಕಾವ್ಯ ಮತ್ತು ನಾಟಕ ಒಂದೇ ಅಲ್ಲ ಎಂಬುದನ್ನು ಹಲವರ ಮಾತುಗಳ ಮೂಲಕ ಪುಷ್ಟೀಕರಿಸಲು ಪ್ರಯತ್ನಿಸುತ್ತಾರೆ. "ಮಹಾಕಾವ್ಯದ ಕವಿ ತನ್ನ ಕಥೆಯ ಘಟನೆಗಳು ಹಿಂದೆ ನಡೆದವೆಂಬಂತೆ ನಿರೂಪಿಸಿದರೆ, ನಾಟಕಕಾರ ಅವುಗಳು ನಮ್ಮೆದುರಿಗೆ ನಡೆಯುತ್ತಿವೆ ಎಂಬಂತೆ ತೋರಿಸುತ್ತಾನೆ. ಅಷ್ಟೇ ಅಲ್ಲ ಮಹಾಕಾವ್ಯ ನಾಟಕದಂತೆ ಅಲ್ಲ. ಅಲ್ಲಿ ನಟರಿಲ್ಲ, ಹಿನ್ನೆಲೆಯ ದೃಶ್ಯಗಳಿಲ್ಲ. ಆದರೆ ಅವೆಲ್ಲದರ ಅಭಾವವನ್ನು ತುಂಬಿಕೊಡುವ ಜವಾಬ್ದಾರಿ ಅವನದು" ಎಂದು ಹೇಳುತ್ತಾರೆ. ಆದರೆ ಇಲ್ಲಿ ಅರಿಸ್ಟಾಟಲ್‌ನ ಒಂದು ಸೂಚನೆ ಸತ್ಯಕ್ಕೆ ಹೆಚ್ಚು ಹತ್ತಿರವಾಗುತ್ತದೆ ಎಂಬುದು ನನ್ನ ನಂಬಿಕೆ. "ಮಹಾಕಾವ್ಯ ನಾಟಕದ ಅಂಶಗಳನ್ನು ತನ್ನಲ್ಲಿ ಒಳಗೊಳ್ಳದಿದ್ದರೆ ಸೊಗಸಲಾರದು, ನಿಜವಾದ ಮಹಾಕಾವ್ಯ ನಾಟಕೀಯವಾದ ಸಂವಾದ ಭಾಗಗಳನ್ನು ತನ್ನಲ್ಲಿ ಅಳವಡಿಸಿಕೊಂಡಾಗ ಮಾತ್ರ ಸೊಗಸುತ್ತದೆ"[11] ಎಂದು ಅರಿಸ್ಟಾಟಲ್ ಹೇಳುತ್ತಾನೆ. ಅರಿಸ್ಟಾಟಲ್‌ನ ಈ ಮಾತು ಜನಪದ ಕಾವ್ಯಕ್ಕೆ ಹೆಚ್ಚು ಹತ್ತಿರವಾಗುತ್ತದೆ.

ಭಟ್ಟತೌತ ತನ್ನ 'ಕಾವ್ಯಕೌತುಕ'ದಲ್ಲಿ "ನಾಟಕ ರೂಪವನ್ನು ತಾಳದ ಹೊರತು ಕಾವ್ಯ ಆಸ್ವಾದಿಸದು" ಎಂದು ಹೇಳುತ್ತಾನೆ. ಕಾವ್ಯ ನಾಟಕದ ಅಂಶಗಳನ್ನು ತನ್ನಲ್ಲಿ ಒಳಗೊಳ್ಳಬೇಕು ಎಂಬುದು ಅರಿಸ್ಟಾಟಲನ ಮಾತು. ಆದರೆ ನಾಟಕದ ರೂಪವನ್ನು ತಾಳದ ಹೊರತು ಅದು ಮಹಾಕಾವ್ಯವಾಗದು ಎಂಬ ಭಟ್ಟತೌತನ ಮಾತು ಮೌಖಿಕ ಮಹಾಕಾವ್ಯಗಳಿಗೆ ಇನ್ನೂ ಹೆಚ್ಚು ಹತ್ತಿರವಾಗುತ್ತದೆ.

ಜನಪದ ಮಹಾಕಾವ್ಯ ಭಾವಗೀತೆ ಹೇಗೋ ಹಾಗೇ ನಾಟಕವೂ ಹೌದು. ಆದರೆ ಕೇವಲ ಭಟ್ಟತೌತ ಹೇಳುವಂತೆ ಅದು ನಾಟ್ಯರೂಪವನ್ನು ತಾಳಿದ ಸಂಭಾಷಣಾ ರೂಪದ ಕಾವ್ಯವಲ್ಲ. ಬದಲಾಗಿ ಜನಪದ ಮಹಾಕಾವ್ಯವೆಂಬುದು 'ಕಥೆ, ಭಾವಗೀತಾತ್ಮಕ ಶೈಲಿ ಎರಡನ್ನೂ ರೂಢಿಸಿಕೊಂಡ ದೃಶ್ಯಕಾವ್ಯ. ಅಂದರೆ ಶಿಷ್ಟ ಕಾವ್ಯವನ್ನು ಕೇವಲ ಓದುವಂತೆ ಅಥವಾ ವಾಚನ ಮಾಡುವಂತೆ ಇಲ್ಲಿ ಏಮುಖವಾದ ಅಭಿವ್ಯಕ್ತಿ ಇರುವುದಿಲ್ಲ. ಮಹಾಕಾವ್ಯವನ್ನು ಹಾಡುವ ಗಾಯಕರು ಕನಿಷ್ಠ ಮೂವರಿಂದ ಗರಿಷ್ಠ ಎಂಟುಜನ ಇರುತ್ತಾರೆ. ಹಾಡುತ್ತಾ ಹಾಡುತ್ತಾ ತಮ್ಮ ತಮ್ಮೊಳಗೇ ಪಾತ್ರಗಳಾಗಿ ಅಭಿನಯಿಸಿ, ಸಂಭಾಷಿಸಿ ಸಾಮೂಹಿಕಗಾನವನ್ನು ನಡೆಸಿಕೊಡುತ್ತಾರೆ. ಈ ಲಕ್ಷಣವನ್ನು ಶಿಷ್ಟಕಾವ್ಯದಲ್ಲಿ ನೋಡಲು ಸಾಧ್ಯವೇ ಇಲ್ಲ. ಆದ್ದರಿಂದ ಜನಪದ ಮಹಾಕಾವ್ಯವೆಂಬುದು ಭಾವಗೀತೆ, ಕಾವ್ಯ ಹಾಗೂ ನಾಟಕ ಈ ಮೂರು ಹೌದು. ಈ ಕಾರಣಕ್ಕಾಗಿಯೇ ಜನಪದ ಮಹಾಕಾವ್ಯಗಳನ್ನು ಬೇರೆಯದೇ ಮಾನದಂಡದಿಂದ ಅಳೆಯಬೇಕಾಗುತ್ತದೆ. ಆದ್ದರಿಂದ ಈ ಮಹಾಕಾವ್ಯ ಪ್ರಕಾರವನ್ನು ಸಂಪೂರ್ಣ ಕೈಬಿಟ್ಟು ಮಾಡಿದ ಮಹಾಕಾವ್ಯ ವಿಮರ್ಶೆಗಳು ಅಷ್ಟರ ಮಟ್ಟಿಗೆ ಅಪೂರ್ಣವಾಗಿವೆ ಎನ್ನದೇ ವಿಧಿಯಿಲ್ಲ.

ಇನ್ನು ಶಿಷ್ಟಕಾವ್ಯ ಮತ್ತು ಮೌಖಿಕ ಕಾವ್ಯಗಳ ನಡುವಿನ ವ್ಯತ್ಯಾಸವನ್ನು ಈಗಲೇ ನೋಡುವುದು ಒಳ್ಳೆಯದು. ಶಿಷ್ಟಕಾವ್ಯ ಒಂದು ನಿರ್ದಿಷ್ಟ ಕಾಲದಲ್ಲಿ ನಿರ್ದಿಷ್ಟ ವ್ಯಕ್ತಿಯಿಂದ ರಚಿತವಾದದ್ದು. ಆದರೆ ಜನಪದ ಕಾವ್ಯ ಪ್ರತಿನಿತ್ಯವೂ ಪುನರ್‌ಸೃಷ್ಟಿಯಾಗುತ್ತಲೇ ಹೋಗುತ್ತದೆ. ಶಿಷ್ಟಕಾವ್ಯ ಒಬ್ಬ ವ್ಯಕ್ತಿಯ ಕಲ್ಪನಾಶಕ್ತಿಯ ಮಿತಿಯುಳ್ಳದ್ದು. ಅವನ ಕಲ್ಪನಾ ಪ್ರತಿಭೆಯ ಹಿಂದೆ ಒಂದು ಸಮುದಾಯ, ಒಂದು ಸಮಾಜ ಅಥವಾ ಚಾರಿತ್ರಿಕ ಸಂದರ್ಭವೊಂದು ಇರುತ್ತದೆ ಎಂಬುದು ನಿಜವಾದರೂ ಇಲ್ಲಿ ಅದು ಕನ್ನಡಿಯ ಪ್ರತಿರೂಪದಂತೆಯೇ ಹೊರತು ಅದರಷ್ಟಕ್ಕೆ ಅದೇ ಸತ್ಯವಲ್ಲ. ಆದರೆ ಜನಪದಕಾವ್ಯ ನೇರವಾಗಿ ಒಂದು ಸಾಮೂದಾಯಕ ಸೃಷ್ಟಿ. ಅದಕ್ಕೆ ಕೂಡ ಚಾರಿತ್ರಿಕ ಅಥವಾ ಸಾಮಾಜಿಕ ಹಿನ್ನಲೆಯೊಂದು ಇರುತ್ತದೆಂಬುದು ನಿಜವಾದರೂ ಸಮುದಾಯದ ಅಂದಂದಿನ ಬೇಕುಬೇಡಗಳು ಇಲ್ಲಿ ಪ್ರಾಧಾನ್ಯತೆ ಪಡೆಯುತ್ತವೆ. ಈ ಸಮಕಾಲೀನ ಹಾಗೂ ತತ್ಕಾಲಿನ ಸೌಲಭ್ಯ ಶಿಷ್ಟ ಕಾವ್ಯಕ್ಕೆ ಇರಲು ಸಾಧ್ಯವಿಲ್ಲ. ಆದ್ದರಿಂದಲೇ ಜನಪದ ಕಾವ್ಯ ಅಂದಿನದೂ ಆಗಿರುತ್ತದೆ, ಇಂದಿನದೂ ಆಗಿ ಮಾರ್ಪಡುತ್ತದೆ. ನಮ್ಮ ಶಿಷ್ಟ ಮಹಾಕಾವ್ಯಗಳು ಒಪ್ಪಿಕೊಂಡಿರುವ ಹಾಗೆ ಅಷ್ಟಾದಶ ವರ್ಣನೆಗಳು, ಮೌಖಿಕ ಕಾವ್ಯದ ಉದ್ದೇಶವಲ್ಲ. ಕಂಡದ್ದನ್ನು ಕಂಡಹಾಗೆ ಹೇಳುವ ಪರಿಪಾಠ ಇದರದ್ದು. ಶಿಷ್ಟ ಮಹಾಕಾವ್ಯಗಳಲ್ಲಿನ ನಾಯಕರು ಹೇಗಿರಬೇಕೆಂಬುದನ್ನು ಲಾಕ್ಷಣಿಕ ವಿಶ್ವನಾಥ ಹೀಗೆ ಹೇಳುತ್ತಾನೆ. "ಧೀರೋದ್ಧಾತ್ತ ಗುಣಾನ್ವಿತನಾದ ಒಬ್ಬ ದೇವತೆಯೋ, ಸದ್ವಂಶಜನಾದ ಒಬ್ಬ ಕ್ಷತ್ರಿಯನೆ ನಾಯಕನಾಗಬಹುದು: ಅಥವಾ ಒಂದೇ ವಂಶದಲ್ಲಿ ಹುಟ್ಟಿದ ಹಲವು ರಾಜರೂ ನಾಯಕರಾಗಬಹುದು".

ಇದು ಬಹುತೇಕ ನಮ್ಮೆಲ್ಲ ಕನ್ನಡ ಕವಿಗಳ ಅಭಿಪ್ರಾಯವೂ ಹೌದು ಎನ್ನುವುದಕ್ಕೆ ಅವರು ರಚಿಸಿರುವ ಕಾವ್ಯಗಳೇ ಉದಾಹರಣೆ. ಬಹುಶಃ ಆ ಬಲವಾದ ನಂಬಿಕೆಯಿಂದಲೇ ದಶಾವತಾರದ ಆಚೆಗೆ ನಮ್ಮ ಅನೇಕ ಕವಿಗಳು ಬರಲಾರದೇ ಹೋದರು. ಆದರೆ ಈ ಪರಂಪರಾಗತವಾದ ಶಿಷ್ಟ ಮನಸ್ಸಿನ ನಂಬಿಕೆಗಳಿಗೆ ತದ್ವಿರುದ್ಧವಾದದು ಜನಪದ ಮಹಾಕಾವ್ಯ.

ಮಾತಿಗಿಂತ ಮೊದಲು ಸಂಗೀತವಿತ್ತು ಎಂಬುದು ಒಂದು ನಂಬಿಕೆ. ಗಿರಿಜನರ ವಿಚಾರದಲ್ಲಂತೂ ಇದು ಸತ್ಯ. ಅವರಲ್ಲಿ ಇವತ್ತಿಗೂ ಮಾತಿಗಿಂತ ಹಾಡಿಗೆ ಮತ್ತು ಸಂಗೀತಕ್ಕೆ ಹೆಚ್ಚು ಬೆಲೆ. ಅವರ ಮಾತೇ ಕಾವ್ಯ ಎಂಬುದನ್ನು ನಾವು ಅರಿಯಬೇಕಾದಲ್ಲಿ, ಕಾಡುಗೊಲ್ಲರ ಜುಂಜಪ್ಪನ ಕಾವ್ಯವನ್ನು ನೋಡಬೇಕಾಗುತ್ತದೆ. ಅಕ್ಷರ ಕಲಿತ ಶಿಷ್ಟ ಕವಿಗಳು ಪ್ರಜ್ಞಾಪೂರ್ವಕವಾಗಿ, ಎಚ್ಚರಿಕೆಯಿಂದ, ಪೂರ್ವೋದ್ದೇಶಗಳಿಂದ ಭಾಷೆಯನ್ನು ಬಳಸುತ್ತಾರೆ. ಆದರೆ ಗಿರಿಜನರು ಕಾವ್ಯದ ಭಾಷೆಯನ್ನೂ ಕೂಡ ಮಾತಿನಂತೆ ಸಹಜವಾಗಿ ಬಳಸುತ್ತಾರೆ. ಆದ್ದರಿಂದಲೇ ದೇಶಿ ಪರಂಪರೆಯ ಇಂಥ ಜೀವಂತ ಅಂಶಗಳು ನಮ್ಮ ಹೊಸ ಸಾಹಿತ್ಯ ಪ್ರಕಾರಗಳಿಗೆ ವಿಶಿಷ್ಟವಾದ ಸೊಗಡನ್ನು ಕೊಡುವ ಪ್ರಕ್ರಿಯೆಯನ್ನು ನಾವು ಕಾಣಬಹುದು. ಗಿರಿಜನರು ವಾಸಿಸುವ ಜಗತ್ತು ಚಿಕ್ಕದಾದರೂ, ಅವರು ತಮ್ಮ ಕಾವ್ಯದಲ್ಲಿ ಸೃಷ್ಟಿಸಿಕೊಂಡ ಜಗತ್ತು ಅನಂತವಾದದ್ದು. ಸೂರ್ಯ ಚಂದ್ರ ಮತ್ತು ನಕ್ಷತ್ರಗಳ ಕೆಳಗಿರುವ ಲೋಕವೆಲ್ಲ ಅವರದೇ. ಆದ್ದರಿಂದಲೇ ಅವರ ಸೃಷ್ಟಿ ಪುರಾಣಗಳು ಅವರ ಜೀವನ ವಿಕಾಸದ ದರ್ಶನಗಳಂತೆ ನಮಗೆ ಗೋಚರವಾಗುತ್ತದೆ. ಈ ಬಗೆಯ ಅನನ್ಯತೆಗಳ ಕಾರಣದಿಂದಲೇ ಈ ಕಾವ್ಯಗಳ ಸಂಪಾದನೆ ಒಂದು ನಿಟ್ಟಿನಿಂದ ಜ್ಞಾನಪರಂಪರೆಗಳ ಶೋಧನೆಯೂ ಹೌದು, ಆಧುನಿಕರ ಪುನರ್‌ಸೃಷ್ಟಿ ಕ್ರಿಯೆಗೆ ಶಕ್ತಿ ತುಂಬುವ ಜ್ಞಾನಕೋಶಗಳೂ ಹೌದು. ಆದ್ದರಿಂದ ಇಲ್ಲಿ ಸಂಪಾದಿಸಿಕೊಟ್ಟಿರುವ ಈ ಕಾವ್ಯಭಾಗಗಳು ಅಥವಾ ಮಹಾಕಾವ್ಯದ ಪ್ರಾತಿನಿಧಿಕ ತುಣುಕುಗಳು ಕೇವಲ ಕಾವ್ಯಗಳಾಗಿರದೆ ಸಮುದಾಯಗಳ ಚಾರಿತ್ರಿಕ ಸಂಕಥನಗಳಾಗಿವೆ. ಇವುಗಳನ್ನು ಓದಲು ಅಥವಾ ಆಲಿಸಲು ತಾಳ್ಮೆ ಮತ್ತು ಪೂರ್ವಸಿದ್ಧತೆ ಎರಡೂ ಬೇಕಾಗುತ್ತದೆ.

ಇಲ್ಲಿಯವರೆಗೆ ಗಿರಿಜನ ಕಾವ್ಯದ ಸ್ವರೂಪವನ್ನು ಕುರುತು ಚರ್ಚಿಸಲಾಯಿತು. ಈಗ ಈ ಸಂಪುಟಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿರುವ ವಿವಿಧ ಜನಸಮುದಾಯಗಳನ್ನು ಪ್ರತಿನಿಧಿಸುವ ಕಾವ್ಯಗಳ ಸ್ವರೂಪವನ್ನೂ ಕುರಿತು ಹೇಳುವ ಪ್ರಯತ್ನ ಮಾಡುತ್ತೇನೆ. ಆರಂಭದಲ್ಲಿಯೇ

ಸ್ಪಷ್ಟಪಡಿಸಬೇಕಾದ ಮಾತೊಂದಿದೆ. ಇಲ್ಲಿ ಆಯ್ಕೆ ಮಾಡಲಾಗಿರುವ ಯಾವ ಕಾವ್ಯವೂ ಅಥವಾ ಕಾವ್ಯ ಭಾಗವೂ ತನ್ನಷ್ಟಕ್ಕೆ ತಾನು ಪರಿಪೂರ್ಣವಲ್ಲ. ಇಲ್ಲಿನ ಪ್ರತಿಯೊಂದೂ ಮತ್ತೊಂದರ ಭಾಗ. ಪ್ರಾತಿನಿಧಿಕವಾಗಿ ಅವರ ಸಮುದಾಯದ ಹುಟ್ಟನ್ನು ಹೇಳುವ ಅಥವಾ ಅವರ ದೈವ ಹಾಗೂ ಸಾಂಸ್ಕೃತಿಕ ನಾಯಕರನ್ನು ಪ್ರಸ್ತಾಪಿಸುವ, ಇಲ್ಲವೇ ಸಮುದಾಯದ ವೃತ್ತಿ ಹಾಗೂ ಅವರ ಆಶಯಗಳನ್ನು ಸಾಂಕೇತಿಕವಾಗಿ ಹೇಳುವ ಕಥಾಭಾಗಗಳನ್ನು ಆಯ್ಕೆ ಮಾಡಲಾಗಿದೆ. ಆದ್ದರಿಂದ ಇಲ್ಲಿನ ಕಾವ್ಯ ಭಾಗಗಳು ಎಲ್ಲಿಂದಲೋ ಆರಂಭವಾಗಿ ಮತ್ತೆಲ್ಲಿಯೋ ದುತ್ತನೆ ಮುಗಿಯುವುದೂ ಉಂಟು. ಈ ಸಂಪುಟಕ್ಕೂ ಪುಟಗಳ ಮಿತಿ ಇರುವುದರಿಂದ ಹಾಗೂ ಈ ಮೂಲಕ ಗಿರಿಜನ ಕಾವ್ಯದ ಆಶಯಗಳನ್ನು ಸಾಂಕೇತಿಕವಾಗಿ ಪರಿಚಯಿಸುವ ಆಶಯವನ್ನು ಮಾತ್ರ ನಾವು ಹೊತ್ತಿರುವುದರಿಂದ, ಈ ರೀತಿಯ ಸಂಕ್ಷಿಪ್ತತೆ ಅನಿವಾರ್ಯವಾಗಿದೆ. ಆದ್ದರಿಂದ ಆಸಕ್ತರು ಇಲ್ಲಿ ಪ್ರೇರಿತರಾಗಿ ಮೂಲ ಕಾವ್ಯದ ಕಡೆಗೆ ಹೊರಳಲಿ ಎಂಬ ಉದ್ದೇಶ ನಮ್ಮದಾಗಿದೆ. ಹೀಗಾಗಿ ಇದೊಂದು ತತ್‌ಕ್ಷಣದ ಕೈಪಿಡಿ ಎಂದಷ್ಟೆ ಹೇಳಲು ಬಯಸುತ್ತೇನೆ. ಇಷ್ಟು ಪೀಠಿಕೆಯ ಹಿನ್ನೆಲೆಯಲ್ಲಿ ಇಲ್ಲಿನ ಕೆಲವು ಕಾವ್ಯ ಭಾಗಗಳ ಹಿಂದಿನ ತಾತ್ವಿಕತೆಯನ್ನು ಅರುಹಲು ಪ್ರಯತ್ನಿಸುತ್ತೇನೆ.

ಕರ್ನಾಟಕದ ಪಶುಸಂಗೋಪನ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದ ಪ್ರಮುಖ ಜನವರ್ಗಗಳೆಂದರೆ ಗೊಲ್ಲರು ಮತ್ತು ಕುರುಬರು. ಗೊಲ್ಲರಲ್ಲಿ ಕಾಡುಗೊಲ್ಲರು ಮತ್ತು ಊರುಗೊಲ್ಲರೆಂಬ ಎರಡು ಪ್ರಭೇದಗಳಿವೆ. ಕುರುಬರಲ್ಲಿಯೂ ಈ ಪ್ರಭೇದಗಳಿವೆ. ಊರುಗಳು ನಿರ್ಮಾಣವಾಗಲು ಆರಂಭಿಸಿದ ಆನಂತರದ ಹಂತದಲ್ಲಿ, ಆಕರ್ಷಣೆಗೆ ಒಳಗಾಗಿ ಊರು ಸೇರಿರಬಹುದಾದ ಹಾಗೂ ಆ ಮೂಲಕ ಒಂದು ಕಡೆ ನೆಲೆನಿಂತಿರಬಹುದಾದ ಈಗಿನ ಊರುಗೊಲ್ಲರು ಮತ್ತು ಊರುಕುರುಬರು ಈಗಲೂ ಪಶುಸಂಗೋಪನಾ ವೃತ್ತಿಯನ್ನೇ ಅವಲಂಬಿಸಿದ್ದಾರಾದರೂ, ಬೇಸಾಯದಲ್ಲಿಯೂ ಹಿಂದೆ ಬಿದ್ದಿಲ್ಲ. ಊರು ಸೇರಿದ ಕಾರಣಕ್ಕಾಗಿ ತಮ್ಮೊಡನೆ ಬಾಳುವ ಇತರೆ ಜನವರ್ಗಗಳ ಸಂಸ್ಕೃತಿಯ ಜೊತೆ ಬೆರೆತಿದ್ದಾರೆ ಕೂಡ. ಆದರೆ ಕಾಡುಕುರುಬರು ಮತ್ತು ಕಾಡುಗೊಲ್ಲರ ಜೀವನವಿಧಾನ ಮತ್ತು ಸಂಸ್ಕೃತಿ ಇಂದಿಗೂ ವಿಶಿಷ್ಟವಾದುದೇ ಆಗಿದೆ.

ಕರ್ನಾಟಕದ ಒಳನಾಡಿನ ಮಧ್ಯಭಾಗವೆನ್ನಬಹುದಾದ ತುಮಕೂರು, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳ ಕೆಲವು ಭಾಗಗಳಲ್ಲಿ ವಿಶೇಷವಾಗಿ ಕಂಡುಬರುವ ಕಾಡುಗೊಲ್ಲರು ತಮ್ಮ ವಾಸಕ್ಕಾಗಿ ಆಯ್ಕೆ ಮಾಡಿಕೊಂಡಿರುವ ಭೂ ಪ್ರದೇಶಗಳು ಕೂಡ ಅಷ್ಟೆ ವಿಶಿಷ್ಟವಾಗಿವೆ. ಕುರುಚಲು ಕಾಡುಗಳ, ಸಾಮಾನ್ಯ ಗುಡ್ಡ-ಬೆಟ್ಟಗಳ, ಹುಲ್ಲುಗಾವಲುಗಳೇ ಪ್ರಧಾನವಾದ ಈ ಪ್ರದೇಶ ಇವರ ವೃತ್ತಿಗೆ ಪೂರಕವಾದದ್ದು. ಊರುಗಳ ಸಂಸ್ಕೃತಿಗೆ ಪರ್ಯಾಯವಾಗಿ ತಮ್ಮದೇ 'ಹಟ್ಟಿ'ಗಳ ಸಂಸ್ಕೃತಿಯನ್ನು ಪೋಷಿಸುತ್ತಾ ಯಾವ ಕಾರಣಕ್ಕೂ ಊರಿನ ಕಲಾಪಗಳ ಜೊತೆ ಒಂದಾಗದ ಇವರು, ಊರಿನ ಜನರನ್ನು ಮೈಲಿಗೆಯವರು ಎಂದೇ ಕರೆಯುತ್ತಾರೆ. ಜುಂಜಪ್ಪನ ಕಾವ್ಯವನ್ನು ಅವಲೋಕಿಸಿ ಹೇಳುವುದಾದರೆ ಬಹುಶಃ ಮೊದಲಿಗೆ ಪೂರಾ ಅಲೆಮಾರಿಯಾಗಿಯೇ ಜೀವನ ಸಾಗಿಸುತ್ತಿದ್ದ ಇವರು ಕ್ರಮೇಣ 'ಹಟ್ಟಿ'ಗಳನ್ನು ಕಟ್ಟಿಕೊಂಡಂತೆ ಕಾಣುತ್ತದೆ.

ಈ ಕಾವ್ಯದಲ್ಲಿ ಎರಡು ಅಂಶಗಳು ಮುಖ್ಯವಾಗುತ್ತದೆ. ಒಂದು ಕಡೆ ಕಾಡುಗೊಲ್ಲರನ್ನು ಸಹಿಸದ ಬೇಟೆಗಾರ ಸಮೂಹ. ಅಂದರೆ ಬಹುಶಃ ಅವರು ಬೇಡರು ಮತ್ತು ಮ್ಯಾಸಬೇಡರಿರಬಹುದೆಂಬ ಸುಳಿವುಗಳು ಕಾವ್ಯದಲ್ಲಿ ದೊರೆಯುತ್ತವೆ. ಮತ್ತೊಂದು ಕಡೆ ಇವರ ಹುಲ್ಲುಗಾವಲುಗಳನ್ನು ಕ್ರಮೇಣ ಬೇಸಾಯ ಭೂಮಿಯನ್ನಾಗಿ ಪರಿವರ್ತಿಸುತ್ತಾ ಬಂದ ಕೃಷಿ ವರ್ಗಗಳು. ಇವರ ನಡುವೆ ಕಾಡುಗೊಲ್ಲರು ತಮ್ಮ ಅಸ್ತಿತ್ವಕ್ಕಾಗಿ ಪರದಾಡುತ್ತಾರೆ. ಇಷ್ಟಲ್ಲದೆ, ತಮ್ಮದೆ ಕುಲದ ಇತರೆ ಬೆಡಗುಗಳ ಅಸೂಯೆಯನ್ನು ಗೆಲ್ಲುವುದು ಕೂಡ ಕಥೆಯ ಪ್ರಮುಖ ಅಂಶವಾಗುತ್ತದೆ. ಮಾರನವರ ಗೊಲ್ಲರ ದನಗಳು ಬೆಳೆದು ಹೆಚ್ಚಾಗುವುದನ್ನು ಕಂಬೇರಗೊಲ್ಲರು ಸಹಿಸುವುದಿಲ್ಲ. ಜುಂಜಪ್ಪನಿಗೂ, ಅವನ ಸೋದರ ಮಾವಂದಿರಿಗೂ ಸದಾ ನಡೆಯುವ ಹೋರಾಟ ಇಂಥದ್ದೇ.

ಬಹುಶಃ ಮೂಲದಲ್ಲಿ ಶೈವರಾಗಿದ್ದ ಕಾಡುಗೊಲ್ಲರು ನಂತರದ ಅವಸ್ಥಾಂತರಗಳಲ್ಲಿ ವೈಷ್ಣವರಾಗಿರುವಂತೆ ಕಾಣುತ್ತದೆ. ಇವರ ದೈವಗಳಾದ 'ಸಿತ್ತುರು ಲಿಂಗ' ಮತ್ತು 'ಕಾಟುಮಲಿಂಗ' (ಚಿತ್ರದೇವರು, ಕಾಟುಮದೇವರು) ಶಿವನ ಅಪೇಕ್ಷೆಯಂತೆ ಭೂಲೋಕಕ್ಕೆ ಬಂದವರು. ಇವರು ಭೂಮಿಗೆ ಬಂದಾಗ ಇವರ ಬಂಗಾರದ ರಥವನ್ನು ಕಸಿದುಕೊಳ್ಳಲು ಯತ್ನಿಸುವ ಬ್ರಾಹ್ಮಣನಿಗೆ ಇವರು ಕಲಿಸುವ ಪಾಠ ತುಂಬ ಮಾರ್ಮಿಕವಾಗಿದೆ. ಈ ಇಬ್ಬರು ದೈವಗಳ ನಂತರ ಕಾಡುಗೊಲ್ಲರಲ್ಲಿ ಆರಾಧಿಸಲ್ಪಡುವ ದೈವಗಳೆಂದರೆ ಜುಂಜಪ್ಪ ಮತ್ತು ಎತ್ತಪ್ಪ.

ಪ್ರಸ್ತುತ ಇಲ್ಲಿ ನೀಡಲಾಗಿರುವ ಕಾವ್ಯಭಾಗ ಕಾಡುಗೊಲ್ಲರ ಕುಲ ಭೂಲೋಕಕ್ಕೆ ಹೇಗೆ ಪ್ರವೇಶವಾಯಿತು ಮತ್ತು ಯಾವರೀತಿಯಲ್ಲಿ ವಿಕಸನವಾಯಿತು ಹಾಗೂ ಆ ಸಂದರ್ಭದಲ್ಲಿ ಎದುರಿಸಿದ ಕಷ್ಟಗಳೇನು ಎಂಬುದನ್ನು ತಿಳಿಯಹೇಳುತ್ತದೆ.

ಈ ಜುಂಜಪ್ಪನ ಕಾವ್ಯ ಇತರ ಕಾವ್ಯಗಳಂತಲ್ಲ ಮಂತ್ರದ ರೀತಿಯ ವೇಗವಾದ ಗದ್ಯ ಹಾಗೂ ದೀರ್ಘವಾಗಿ ಎಳೆದು ಗಮಕದಂತೆ ಹಾಡಬಲ್ಲ ಪದ್ಯ ಈ ಕಾವ್ಯದ ವಿಶೇಷ. ಆದ್ದರಿಂದ ಇದಕ್ಕೆ ಗಣೆಯ ಹಿನ್ನೆಲೆ ಇದ್ದರೆ ಸಾಕು. ತಾಳದ ಅಗತ್ಯವಿಲ್ಲ. ಕಾವ್ಯದ ಭಾಷೆಯೂ ಅಷ್ಟೆ, ಮಧ್ಯ ಕರ್ನಾಟಕದ ಒಂದು ವಿಶಿಷ್ಟ ರೂಪ ಅದಕ್ಕಿದೆ.

ಕುರುಬರು ಬೀರಪ್ಪನ ಆರಾಧಕರು. ಕರ್ನಾಟಕದಾದ್ಯಂತ ಕುರುಬರು ತಮ್ಮ ವಾಸದ ನೆಲೆಗಳನ್ನು ಕಂಡುಕೊಂಡಿದ್ದಾರೆ. ಆದರೆ, ಉತ್ತರ ಕರ್ನಾಟಕದ ಅದರಲ್ಲಿಯೂ ಬೆಳಗಾವಿ ಮಹಾರಾಷ್ಟ್ರದ ಗಡಿಯ ಭಾಗದ ಕುರುಬರು ಈಗಲೂ ತಮ್ಮ ಕುರಿಗಳನ್ನು ಮೇಯಿಸಲು ನೀರಿನ ಹಾಗೂ ಸಮೃದ್ಧ ಆಹಾರದ ಭಾಗಗಳನ್ನು ಆರಿಸಿ ಹೊರಡುತ್ತಾರೆ. ಇವರನ್ನು ಅಲೆಮಾರಿ ಕುರುಬರು ಎಂದೂ ಕರೆಯುತ್ತಾರೆ. ಇವರು ಮಾಳಿಂಗರಾಯನನ್ನು ತಮ್ಮ ಆರಾಧ್ಯದೈವವಾಗಿ ಪೂಜಿಸುತ್ತಾರೆ. ಮಾಳಿಂಗರಾಯ ಬೀರಪ್ಪನ ಪ್ರಥಮ ಶಿಷ್ಯ ಎಂಬ ನಂಬಿಕೆಯೂ ಇದೆ. ಈ ಭಾಗದ ಕುರುಬರು ಹಾಡುವ ಮಾಳಿಂಗರಾಯ ಕಾವ್ಯದ ಆಯ್ದ ಭಾಗವನ್ನು ಸಂಕ್ಷೇಪಗೊಳಿಸಿ ಇಲ್ಲಿ ನೀಡಲಾಗಿದೆ. ಬಳ್ಳಾರಿ, ಹಾವೇರಿ ಹಾಗೂ ಧಾರವಾಡ ಜಿಲ್ಲೆಗಳ ಕುರುಬರು ಮೈಲಾರ ಲಿಂಗನನ್ನು ತಮ್ಮ

ಆರಾಧ್ಯದೈವವನ್ನಾಗಿ ಪೂಜಿಸುತ್ತಾರೆ. ಈ ಭಾಗದ ಕುರುಬರು ಹಾಡುವ ಮೈಲಾರಲಿಂಗನ ಕಾವ್ಯದ ಮೊದಲ ಭಾಗವಾದ **ಕುರುಬರ ಸಂಧಿ**ಯನ್ನು ಇಲ್ಲಿ ನೀಡಲಾಗಿದೆ. ಅತ್ಯಂತ ಸರಳವಾಗಿರುವ ಈ ಕಾವ್ಯವನ್ನು ಅರ್ಥಮಾಡಿಕೊಳ್ಳಲು ಕಷ್ಟವೇನೂ ಆಗಲಾರದು. ಈ ಸಂದರ್ಭದಲ್ಲಿ ಜಾನಪದದ ವಿಶಿಷ್ಟ ಸಾಂಸ್ಕೃತಿಕ ವೀರ ಎಂದೇ ಹೆಸರಾದ ಮೈಲಾರಲಿಂಗನ ಬಗ್ಗೆ ಒಂದಿಷ್ಟು ಹೇಳಲೇ ಬೇಕಾಗುತ್ತದೆ. ಮೈಲಾರಲಿಂಗನು ಕೋಮಾಲೆಯನ್ನು ಮತ್ತು ಮಾಳವ್ವನನ್ನು ಪಡೆಯುವ ಕ್ರಿಯೆಯೇ ಇಡೀ ಕಾವ್ಯದ ಜೀವಾಳ. ಇಲ್ಲಿನ ವಿಶೇಷ ಏನೆಂದರೆ ಹಾಗೆ ಪಡೆಯುವಾಗ ಮೈಲಾರಲಿಂಗ ಅನುಸರಿಸುವ ಮಾರ್ಗಗಳು ತುಂಬ ಸಹಜವಾದುವುಗಳಾಗಿವೆ. ಒಬ್ಬ ಕುರಿ ಕಾಯುವ ಅಮಾಯಕ ತನ್ನ ಆಸೆ ನೆರವೇರಿಸಿಕೊಳ್ಳಲು ಅತ್ಯಂತ ಸಹಜವಾಗಿ ಹೆಣ್ಣುಗಳಿಗೆ ಗಂಟುಬೀಳುತ್ತಾನೆ. ಉಗಿದರೆ ಉಗಿಸಿಕೊಳ್ಳುತ್ತಾನೆ. ಒದೆದರೆ ಒದೆಸಿಕೊಳ್ಳುತ್ತಾನೆ. ತಿಪ್ಪೇಗುಂಡಿಯಲ್ಲಿ ಮಲಗಿ ಏಳುತ್ತಾನೆ. ಆದರೆ ಆಕೆ ಸಿಗುವವರೆಗೂ ಬಿಡುವವನಲ್ಲ. ನಮ್ಮ ಮಹಾಭಾರತ ಕಾವ್ಯದಲ್ಲಿ ಇಂಥ ಹೆಣ್ಣಿನ ಅಪಹರಣ ಪ್ರಸಂಗಗಳು ಬರುತ್ತವೆ. ಆದರೆ ಅಲ್ಲೆಲ್ಲಾ ಅಪಹರಿಸಲ್ಪಡುವವರು ಈಗಾಗಲೇ ಅಪಹರಣಕಾರರ ಪರವಾಗಿರುತ್ತಾರೆ. ಆದರೆ, ನಮ್ಮ ಮೈಲಾರಲಿಂಗನ ಪ್ರಸಂಗ ಹಾಗಲ್ಲ. ಗಂಟು ಬಿದ್ದ ಹೆಣ್ಣನ್ನು ಗೆಲ್ಲುವ ಚಾತುರ್ಯ ಇಡೀ ಕಾವ್ಯದ ತುಂಬಾ ಹರಡಿಕೊಂಡಿದೆ.

ಕಾಡುಕುರುಬರು ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಮಾತ್ರ ಕಂಡುಬರುವ ಒಂದು ಅಪ್ಪಟ ಬುಡಕಟ್ಟು ಜನವರ್ಗ. ಇವರಿಗೂ ಮೈಲಾರಲಿಂಗನಿಗೂ, ಅಥವಾ ಬೀರಪ್ಪನೀಗೂ ಯಾವುದೆ ಸಂಬಂಧಗಳಿರುವಂತೆ ತೋರುವುದಿಲ್ಲ. ವಾಸ್ತವವಾಗಿ ಕಾಡು ಕುರುಬರು, ಜೇನುಕುರುಬರು ಮತ್ತು ಮುಳ್ಳುಕುರುಬರು ಅತ್ಯಂತ ಹಿಂದಿನಿಂದ ಕರ್ನಾಟಕದ ದಕ್ಷಿಣ ಭಾಗದ ಬೃಹತ್ ಅರಣ್ಯಗಳಲ್ಲಿ ಜೀವನ ಸಾಗಿಸುತ್ತಿರುವ ಆದಿವಾಸಿಗಳು. ಊರ ಕುರುಬರು ಮೂಲತಃ ಅಲೆಮಾರಿಗಳಾಗಿದ್ದು ಮಹಾರಾಷ್ಟ್ರ ಮತ್ತಿತರ ಭಾಗಗಳಿಂದ ವಲಸೆ ಬಂದು ನೆಲಸಿದವರು ಎಂಬ ಪ್ರತೀತಿ ಇದೆ. ಆದ್ದರಿಂದ ಊರು ಕುರುಬರು ಮತ್ತು ಕಾಡುಕರುಬರ ನಡುವೆ ಅಂಥ ಸಾಂಸ್ಕೃತಿಕ ಸಂಬಂಧಗಳು ಇಲ್ಲ. ಕಾಡುಕುರುಬರ ಸ್ಥಳ ಮತ್ತು ವೃತ್ತಿಗೆ ಸಂಬಂಧಿಸಿದ ಕೆಲವು ಹಾಡುಗಳನ್ನು ಮಾತ್ರ ಇಲ್ಲಿ ನೀಡಲಾಗಿದೆ.

ಕರ್ನಾಟಕದ ಬೇಡರಲ್ಲಿಯೂ ಎರಡು ರೀತಿಯ ಪಂಗಡಗಳಿವೆ. ವಿಜಯನಗರದ ಪತನಾನಂತರ ಅನೇಕ ಪಾಳೆಯಪಟ್ಟುಗಳನ್ನು ಕಟ್ಟಿಕೊಂಡು ಸ್ಥಳೀಯವಾಗಿ ಆಡಳಿತ ನಡೆಸಿದ ಊರ ಬೇಡರ ಅನೇಕ ಮನೆತನಗಳು ಈಗಲೂ ಕರ್ನಾಟಕದಲ್ಲಿವೆ. ಮೂಲತಃ ಬೇಟೆಗಾರರಾಗಿದ್ದ ಇವರು ಕೂಡ ಯಾವುದೋ ಒಂದು ಹಂತದಲ್ಲಿ ಊರುಗಳನ್ನೇ ತಮ್ಮ ನೆಲೆಯನ್ನಾಗಿ ಕಂಡುಕೊಂಡರು. ಈ ರೀತಿಯ ಊರುಸೇರಿದ ಬೇಡರು ಕರ್ನಾಟಕದ ಅನೇಕ ಭಾಗಗಳಲ್ಲಿ ಕಂಡುಬರುತ್ತಾರೆ. ಆದರೆ, ಇವರಿಗಿಂತ ಭಿನ್ನವಾಗಿ ಕಾಡುಗಳಲ್ಲಿಯೇ ತಮ್ಮ ಆವಾಸ ಕಂಡುಕೊಂಡ ಮ್ಯಾಸಬೇಡರು ಇವತ್ತಿಗೂ ನಾಗರಿಕ ಜಗತ್ತಿನಿಂದ ಅತೀತವಾಗಿಯೇ ಉಳಿದಿದ್ದಾರೆ.

ಬೇಡರ ಈ ಎರಡು ಗುಂಪುಗಳನ್ನು ಇಂದಿಗೂ **ಊರನಾಯಕರು** ಮತ್ತು **ಮ್ಯಾಸನಾಯಕರು** ಎಂದು ಕರೆಯುವುದನ್ನು ನೋಡಿದರೆ ಇಬ್ಬರಿಗೂ ಇರುವ ವ್ಯತ್ಯಾಸ ಸ್ಪಷ್ಟವಾಗಿ ಗೊತ್ತಾಗುತ್ತದೆ.

ಮ್ಯಾಸಬೇಡರ ಜೀವನ ಮತ್ತು ಸಂಸ್ಕೃತಿ ಅತ್ಯಂತ ವೈಶಿಷ್ಟ್ಯಪೂರ್ಣವಾದವುಗಳು. ಕಾಡನ್ನೇ ಅವಲಂಬಿಸಿ ತಮ್ಮ ಪಶುಸಂಗೋಪನೆಯನ್ನು ನಿರಂತರವಾಗಿ ನಡೆಸಿಕೊಂಡು ಬಂದ ಇವರು, ನಿಸರ್ಗದ ಜೊತೆ ಅವಿನಾಭಾವ ಸಂಬಂಧ ಇಟ್ಟುಕೊಂಡವರು. ಮ್ಯಾಸಬೇಡರ ನಾಯಕನೆನಿಸಿದ ಗಾದ್ರಿಪಾಲನ ಕಾವ್ಯ, ಅವರು ನಿಸರ್ಗದ ಜೊತೆ ನಡೆಸಿದ ಅನುಸಂಧಾನಕ್ಕೆ ಜೀವಂತ ಸಾಕ್ಷಿ. ಬಳ್ಳಾರಿ, ಚಿತ್ರದುರ್ಗದ ನಡುವಿನ ಸಂಡೂರು ಅರಣ್ಯಗಳಿಂದಾವೃತವಾದ ಜರಮಲೆ ಸೀಮೆ ಗಾದ್ರಿಪಾಲನ ಪಶುಪಾಲನೆಯ ಸ್ಥಳ. ಅದು ಹುಲಿಗಳ ಆವಾಸಸ್ಥಾನ. ಹುಲಿಗಳು ಮನುಷ್ಯರ ಹಸುಗಳನ್ನು ಕೊಲ್ಲುವುದು. ಅಲ್ಲಿ ಮನುಷ್ಯರು ಹುಲಿಗಳ ಸಂತತಿಯನ್ನು ನಾಶಮಾಡುವುದು ನಡದೇ ಇರುತ್ತದೆ. ಇಂಥ ಒಂದು ಪರಸ್ಪರ ಸಾಂಪ್ರದಾಯಿಕ ದ್ವೇಷವನ್ನು ಹೋಗಲಾಡಿಸಿ ಪರಸ್ಪರ ಪ್ರೀತಿಯ ಒಪ್ಪಂದಕ್ಕೆ ಬರುವುದು ಗಾದ್ರಿಪಾಲನಾಯಕ ಕಾವ್ಯದ ತಿರುಳು. ಆಧುನೀಕರಣಗೊಂಡ ಕಲುಷಿತ ಮನಸ್ಸು ನಿಸರ್ಗದ ನೆಮ್ಮದಿಯನ್ನು ಕಲುಕುವ ಮೂಲಕ ಪ್ರಾಣಿಗಳು ಮತ್ತು ಮನುಷ್ಯರ ನಡುವಿನ ಸಂಬಂಧಕ್ಕೆ ಇತಿಶ್ರೀ ಹಾಡುವ ಸತ್ಯವನ್ನು ಹೇಳಹೊರಟ ಈ ದುರಂತ ಕಥೆ ಮ್ಯಾಸಬೇಡರ ಲೋಕದೃಷ್ಟಿಯನ್ನು ಅನನ್ಯವಾಗಿ ಚಿತ್ರಿಸುತ್ತದೆ. ಮ್ಯಾಸಬೇಡರ ಸಾಂಸ್ಕೃತಿಕ ನಾಯಕ ಮತ್ತು ಅವರ ಆರಾಧ್ಯದೈವ **ನಾಯಕನ ಹಟ್ಟಿ ತಿಪ್ಪೇರುದ್ರಸ್ವಾಮಿ** ಯ ಕಥನವನ್ನು ಕೂಡ ಇಲ್ಲಿ ನೀಡಲಾಗಿದೆ.

ಉತ್ತರಕನ್ನಡ ಜಿಲ್ಲೆಯ ಭಟ್ಕಳ ಮತ್ತು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕುಗಳಲ್ಲಿ ಕಂಡು ಬರುವ ಗೊಂಡರು ದಟ್ಟಾರಣ್ಯಗಳಲ್ಲಿ ವಾಸಿಸುವ ಒಂದು ವಿಶಿಷ್ಟ ಜನವರ್ಗ. ಮೂಲತಃ ಕುಮುರಿ ಬೇಸಾಯಗಾರರಾಗಿದ್ದ ಗೊಂಡರು ಇಂದೂ ಕೂಡ ಕೃಷಿಕರೇ ಆಗಿ ಮುಂದುವರೆದಿದ್ದಾರೆ. ಜಟ್ಟಿಗ. ಕೋಗ್ತಿ, ಹುಲಿಗಿರ್ತಿ. ಹಂದಿಗಿರ್ತಿ ಮುಂತಾಗಿ ಮೂಲದೈವಾರಾಧನೆಯ ಪಳಯುಳಿಕೆಗಳು ಇವರಲ್ಲಿ ಇನ್ನೂ ಇವೆ. ಈಗ ತಿರುಪತಿ ವೆಂಕಟರಮಣನ ಭಕ್ತರಾಗಿ ಮಾರ್ಪಾಟು ಹೊಂದಿದ್ದಾರೆ. ಅಚ್ಚಕನ್ನಡ ಭಾಷೆಯ ಗೊಂಡರು ಅನೇಕ ವಿಧವಾದ ಕಾವ್ಯಗಳನ್ನು ಕಟ್ಟಿ ಹಾಡುತ್ತಾರೆ. ಗೊಂಡರು ಹಾಡುವ ರಾಮಾಯಣದ ಒಂದು ಸಂಕ್ಷಿಪ್ತ ಭಾಗವನ್ನು ಇಲ್ಲಿ ನೀಡಲಾಗಿದೆ. ಮೂಲ ರಾಮಾಯಣಕ್ಕಿಂತ ಭಿನ್ನವಾದ ಹಲವು ಘಟನೆಗಳು ಇಲ್ಲಿ ಬರುತ್ತವೆ. ಸಂಪೂರ್ಣವಾಗಿ ಕಾಡಿನಲ್ಲಿಯೇ ಆರಂಭವಾಗಿ ಕಾಡಿನಲ್ಲಿಯೇ ಮುಗಿಯುವ ರಾಮಾಯಣ ಅದು. ಇಲ್ಲಿ ಬರುವ ಸೀತೆ ಅತ್ಯಂತ ಸ್ವಾಭಿಮಾನಿ. ತನಗೆ ಇಷ್ಟವಾದ ಜಿಂಕೆಯನ್ನು ತಂದು ಕೊಡಲೇಬೇಕೆಂದು ಹಠ ಹಿಡಿಯುತ್ತಾಳೆ. ಅದು ಮಾಯಾಜಿಂಕೆ ಎಂದು ಎಷ್ಟು ಹೇಳಿದರೂ ಅವಳು ಕೇಳುವುದಿಲ್ಲ. ಆದರೆ ಇಲ್ಲಿನ ಭಿನ್ನ ಪಾಠವೆಂದರೆ ಸೀತೆ ಜಿಂಕೆಯನ್ನು ಇಲ್ಲಿ ಬಯಸುವುದು ಅದರ ಸುಂದರ ಚರ್ಮದಿಂದ ತನ್ನ ಎದೆಗೆ ಒಪ್ಪುವ ಕುಪ್ಪುಸ ಮಾಡಿಕೊಳ್ಳಬೇಕೆಂಬ ಸಹಜ ಆಸೆಯಿಂದ ಮಾತ್ರ. ಬುಡಕಟ್ಟಿನ ಹೆಣ್ಣುಮಗಳೊಬ್ಬಳು ಜಿಂಕೆಯ ಚರ್ಮವನ್ನು ಮತ್ತೇಕೆ ಬಯಸುತ್ತಾಳೆ? ಆದರೆ ಗಂಡನಾದ ರಾಮ ಅವಳ ಆಸೆಯನ್ನು ನಿರಾಕರಿಸುತ್ತಾನೆ. ಆಗ ಅವಳು ಆ ಜಿಂಕೆಯನ್ನು ತಂದುಕೊಡದಿದ್ದ ಪಕ್ಷದಲ್ಲಿ 'ನೀನು ರಾಮನೂ ಅಲ್ಲ, ನನ್ನ ಗಂಡನೂ ಅಲ್ಲ, ಇನ್ನು ಮೇಲೆ ನನಗೂ ನಿನಗೂ ಸಂಬಂಧವೂ ಇಲ್ಲ' ಎಂಬ

ಕಟುನುಡಿಯನ್ನು ಹೇಳಿ ಅವನನ್ನು ತೊರೆಯಲು ಸಿದ್ಧಳಾಗುತ್ತಾಳೆ. ಶಿಷ್ಟ ರಾಮಾಯಣದ ಮಹಾಪತಿವ್ರತಾ ಸ್ತ್ರೀಯಾದ, ಗಂಡನ ಯಾವ ಮಾತನ್ನೂ ಮೀರದ ಸಾಧ್ವೀಮಣಿಯಾದ ಆ ಸೀತೆಯೆಲ್ಲಿ? ಗೊಂಡರ ಈ ಸೀತೆಯಲ್ಲಿ? ಬುಡಕಟ್ಟು ಸಮಾಜವೊಂದರ ಸ್ವಾಭಿಮಾನಿ ಹೆಣ್ಣಾಗಿ ಸೀತೆಯನ್ನು ಇಲ್ಲಿ ಚಿತ್ರಿಸುವ ಮೂಲಕ ಮಾತೃಪ್ರಧಾನ ವ್ಯವಸ್ಥೆಯ ಹೆಣ್ಣಿನ ಪಾರಮ್ಯವನ್ನು ಗೊಂಡರು ನಿರೂಪಿಸಿದ್ದಾರೆ. ಗೊಂಡರ ರಾಮಾಯಣದಲ್ಲಿ ಇಂಥ ಎಷ್ಟೋ ವಿರುದ್ಧ ಆಶಯಗಳ ಘಟನೆಗಳು ನಡೆಯುತ್ತವೆ. ಲಕ್ಷ್ಮಣನಿಗೇ ಇಲ್ಲಿ ಹೆಚ್ಚು ಪ್ರಾಶಸ್ತ್ಯ. ಅಂಥ ಒಂದೆರಡು ಘಟನೆಗಳನ್ನು ಮಾತ್ರ ತುಂಡರಿಸಿ ಇಲ್ಲಿ ನೀಡಲಾಗಿದೆ. ಇದರ ಜೊತೆಗೆ ಅವರ ಮೂಲ ದೈವಾರಾಧನೆಯ ಪಳಯುಳಿಕೆ ಎನಿಸಿದ ನಾಗದೇವತೆಯ ಹಾಡೊಂದನ್ನು ನೀಡಲಾಗಿದೆ.

ಇದೇ ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಒಕ್ಕಲಿಗರು ತಮ್ಮ ಸಾಂಸ್ಕೃತಿಕ ವೈಭವಕ್ಕೆ ಹೆಸರಾದ ಒಂದು ವೈಶಿಷ್ಟ್ಯಪೂರ್ಣ ಜನಾಂಗ. ಇವರಲ್ಲಿರುವ ನ್ಯಾಯ ವ್ಯವಸ್ಥೆಯಾಗಲಿ, ಯಾವುದೇ ಹಿಂಸಾತ್ಮಕವಲ್ಲದ ಆರೋಗ್ಯಪೂರ್ಣ ಆಚರಣೆಗಳಾಗಲಿ, ಸರಳ ಸುಂದರವಾದ ವೇಷಭೂಶಣಗಳಾಗಲಿ ಹಾಗೂ ಇಂದಿನ ಸಮಾಜಕ್ಕೂ ಆದರ್ಶವಾಗಬಲ್ಲ ಪಂಚಾಯಿತಿ ವ್ಯವಸ್ಥೆಯಾಗಲಿ ಅಧ್ಯಯನಕಾರರಿಗೆ ವಿಶೇಷವಾದ ಮಾಹಿತಿಗಳನ್ನು ಒದಗಿಸುತ್ತವೆ. ಹೊನ್ನಾವರದಿಂದ ಕಾರವಾರದವರೆಗೆ ಸಮುದ್ರ ಮತ್ತು ಹಿನ್ನೀರಿನ ಕುರುಚಲು ಕಾಡುಗಳ ನಡುವೆ ತಮ್ಮ ಕೊಪ್ಪ ಮತ್ತು ಸೀಮೆಗಳನ್ನ ನಿರ್ಮಿಸಿಕೊಂಡಿರುವ ಹಾಲಕ್ಕಿಗಳ ಹಾಡಿನ ಭಂಡಾರ ಬಹುದೊಡ್ಡದು. ಇವರು ತಮ್ಮ ಸೃಷ್ಟಿಯಮೂಲ ಕರ್ತ ಎಂದು ಭಾವಿಸಿರುವ ಮಾದೇವರಾಯನ ಮೇಲೆ ಕಟ್ಟಿರುವ ಹಾಡುಗಬ್ಬಗಳ ಪಾಠಾಂತರಗಳೇ ನೂರಾರುಬಗೆಯಲ್ಲಿ ಸಿಗುತ್ತವೆ. ಇವರ ಸೀತೆ ಕಮಿ ಮತ್ತು ಪಾಂಡವ ಕಮಿ (ಕಮಿ - ಕವಿತೆ) ಅವರಿಗಿರುವ ಪುರಾಣ ಪಜ್ಞೆಯನ್ನು ತೋರ್ಪಡಿಸುತ್ತವೆ. ಮಣ್ಣಿನಲ್ಲಿ ಮಾಡಿದ ಗುಮಟೆಯ ಲಯಬದ್ಧ ತಾಳಕ್ಕೆ ಅನುಗುಣವಾಗಿ ಇವರ ಸುಗ್ಗಿಹಾಡುಗಳು ರಾಶಿರಾಶಿಯಾಗಿ ಹೊರಹೊಮ್ಮುತ್ತವೆ. ಒಟ್ಟಿನಲ್ಲಿ ಹಾಲಕ್ಕಿ ಒಕ್ಕಲಿಗರ ಹಾಡು, ಕಥೆ, ಪುರಾಣಗಳು ಬೇರೆಲ್ಲಿಯೂ ಸಿಗದಷ್ಟು ಯಥೇಚ್ಛ. ಹಾಲಕ್ಕಿ ಒಕ್ಕಲಿಗರ ದಾಯಾದಿಗಳೆಂದೇ ಹೇಳಿಕೊಳ್ಳುವ ಮುಕ್ರಿಯರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಾಲಕ್ಕಿಯವರಿಗಿಂತಲೂ ಹಿಂದುಳಿದ ಒಂದು ಜನವರ್ಗ. ಆರ್ಥಿಕವಾಗಿ ಎಷ್ಟೇ ಬಡಪಾಯಿಗಳಾದರೂ ಒಂದು ಸಾಂಸ್ಕೃತಿಕ ಚೌಕಟ್ಟಿನಲ್ಲಿ ಜೀವನ ಸಾಗಿಸುವ ಮುಕ್ರಿಯರ ಕಥನ ಗೀತೆಗಳು ಅವರು ನಂಬುವ ಅನೇಕ ಮೌಲ್ಯಗಳನ್ನು ನಿರೂಪಿಸುತ್ತವೆ. ಇವರ **ಯಲುರಾಜನ ಮಡದೀ** ಕಥನ ಗೀತೆ ಮತ್ತು ಅದರ ಜೊತೆಯಲ್ಲಿಯೇ ನೀಡಲಾಗಿರುವ 'ಗದ್ದೆನೇಟ್ಟಿಯ ಹಾಡು ಮತ್ತು ಭತ್ತ ಬೇಡುವ ಹಾಡು' ಈ ಮೇಲಿನ ಮಾತುಗಳಿಗೆ ಸಾಕ್ಷಿಯಾಗಿವೆ.

ದಕ್ಷಿಣ ಕನ್ನಡ ಜಿಲ್ಲೆ ಕರ್ನಾಟಕದ ಒಂದು ವಿಶಿಷ್ಟ ಭಾಷಾವಲಯ ಹೇಗೋ ಹಾಗೆಯೇ ಒಂದು ವಿಶಿಷ್ಟ ಸಾಂಸ್ಕೃತಿಕ ಕೇಂದ್ರವೂ ಹೌದು. ಈ ತುಳು ವಲಯ ಕೇವಲ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ತನ್ನ ಭಿನ್ನತೆಯನ್ನು ಮೆರೆಯುವುದಿಲ್ಲ, ಬದಲಾಗಿ ಸಾಂಸ್ಕೃತಿಕವಾಗಿಯೂ ಹಲವು

ವೈವಿಧ್ಯಗಳನ್ನು ಪರಂಪಾರಗತವಾಗಿ ರೂಪಿಸಿಕೊಂಡು ಬಂದಿದೆ. ಇಲ್ಲಿನ ಯಕ್ಷಗಾನ ಮತ್ತು ಭೂತಾರಾಧನೆ ಹೇಗೆ ತುಳುನಾಡಿನ ಅರ್ಥಪೂರ್ಣ ಸೃಜನೆಗಳೋ ಹಾಗೆಯೇ ತುಳು ಪಾಡ್ದನಗಳು ಕೂಡ ಅತ್ಯಂತ ಭಿನ್ನವಾದ ಸೃಜನ ರೂಪಗಳಾಗಿವೆ. ದಕ್ಷಿಣ ಕನ್ನಡದ ಹಲವು ಜನವರ್ಗಗಳು ತಮ್ಮ ಮನೆಭಾಷೆಯನ್ನಾಗಿ ಸ್ವೀಕರಿಸಿರುವ ತುಳುವಿನಲ್ಲಿ ಇತರ ಭಾಷೆಗಳಲ್ಲಿರುವಂತೆ ಕಾವ್ಯಗಳಿರುವುದು ಸಹಜವೆ. ಆದರೆ ದಕ್ಷಿಣ ಕನ್ನಡದ ತುಳುಪಾಡ್ದನಗಳ ವೈವಿಧ್ಯ ನಮ್ಮಲ್ಲಿ ಬೆರಗು ಹುಟ್ಟಿಸುತ್ತದೆ. ಮೇರ ಜನಾಂಗದ ಕರಂಗೋಲುವಿನಂತಹ ಕೃಷಿ ಆಚರಣಾ ಸಂಬಂಧವಾದ ಪಾಡ್ದನಗಳಾಗಲೀ, ಕೊರಗತನಿಯ ಎಂಬ ಭೂತಾರಾಧನೆ ಹಿನ್ನೆಲೆಯ ಪಾಡ್ದನವಾಗಲೀ, ಅಳಿಯಕಟ್ಟಿನ ವಿಶಿಷ್ಟ ಸಂಪ್ರದಾಯದ ಹಿನ್ನೆಲೆಯಲ್ಲಿ ಅನೇಕ ವಿಧವಾದ ಕಷ್ಟ-ಕೋಟಲೆಗಳಿಗೆ ಎರಗವಾಗಬೇಕಾಗಿಬಂದ 'ಸಿರಿ' ಎಂಬ ಹೆಣ್ಣಿನ ಕಥನ ರೂಪದ ಪಾಡ್ದನವಾಗಲೀ ತುಳುಭಾಷೆಯ ಸಮರ್ಥ ಸೃಜನ ಶಕ್ತಿಗೆ ಉದಾಹರಣೆಗಳಾಗಿ ನಿಲ್ಲುತ್ತವೆ. ಇವು ಕೇವಲ ಕಥೆಯನ್ನು ನಿರೂಪಿಸುವ ಕಥನಗಳಾಗಿರದೆ ಒಂದು ವಿಶಿಷ್ಟ ಭೂಪ್ರದೇಶದ ಸಾಮಾಜಿಕ, ಆರ್ಥಿಕ ಹಾಗೂ ಶ್ರೇಣೀಕರಣ ವ್ಯವಸ್ಥೆಯ ಹಿನ್ನೆಲೆಯಲ್ಲಿ ರೂಪುಗೊಂಡ ಹಲವು ಅವಸ್ಥಾಂತರಗಳನ್ನು ಚಿತ್ರಿಸುವ ಐತಿಹಾಸಿಕ ಮಹತ್ವದ ಸಂಕಥನಗಳೂ ಆಗಿವೆ. ದಕ್ಷಿಣ ಕನ್ನಡದಾದ್ಯಂತ ಯಥೇಚ್ಚವಾಗಿ ಪ್ರಚಲಿತವಿರುವ ನೂರಾರು ಪಾಡ್ದನಗಳ ಪರವಾಗಿ ಸಾಂಕೇತಿಕವಾಗಿ ಆಯ್ಕೆ ಮಾಡಲಾದ ಕೆಲವನ್ನು ಮಾತ್ರ ಸಂಕ್ಷಿಪ್ತವಾಗಿ ಇಲ್ಲಿ ನೀಡಲಾಗಿದೆ. ಕನ್ನಡ ಓದುಗರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಅನುವಾದಗಳ ಸಮೇತ ಇದ್ದ ಪಾಡ್ದನಗಳನ್ನೇ ಇಲ್ಲಿ ಆಯ್ಕೆ ಮಾಡಲಾಗಿದೆ. ದುಡಿಯ ಸದ್ದಿನ ಹಿನ್ನೆಲೆಯಲ್ಲಿ ಸುದೀರ್ಘವಾಗಿ ಹಾಡುವ ಪಾಡ್ದನಗಳಲ್ಲದೆ, ದುಡಿಯ ನೆರವಿಲ್ಲದೇ ಹೆಂಗಸರೇ ಹಾಡುವ ಪಾಡ್ದನಗಳೂ ಉಂಟು.

**ಎರವರು** ಕೊಡಗಿನ ವಿರಾಜಪೇಟೆ ಮತ್ತು ಮಡಿಕೇರಿ ತಾಲ್ಲೂಕುಗಳಲ್ಲೂ ಯಥೇಚ್ಛವಾಗಿ ಕಾಣಸಿಗುವ ಒಂದು ಜನವರ್ಗ. ದಟ್ಟಾರಣ್ಯವೇ ಸದಾ ಇವರ ವಾಸಸ್ಥಳ. ಆದಿಯಿಂದಲೂ ಆಹಾರ ಸಂಗ್ರಹಣೆ ಮತ್ತು ಬೇಟೆಯಿಂದ ಜೀವನ ಸಾಗಿಸಿದ ಒಂದು ಪುರಾತನ ಜನವರ್ಗ ಇದು. ಇತ್ತೀಚಿನ ದಿನಗಳಲ್ಲಿ ಎಸ್ಟೇಟುಗಳಲ್ಲಿ ದಿನಗೂಲಿಗಳಾಗಿ ಮತ್ತು ಅರಣ್ಯದ ಕೂಲಿಗಳಾಗಿ ಕೆಲಸ ಮಾಡುತ್ತಾರಾದರೂ ಸ್ವಂತ ಭೂಮಿಯಿಂದ ನಿರಂತರವಾಗಿ ವಂಚಿತರಾದವರು. **ಯರವ** ಎಂಬ ತಮ್ಮದೇ ಆದ ಉಪಭಾಷೆಯನ್ನು ಇವರು ಕಳೆದ ಶತಮಾನದವರೆಗೂ ಉಳಿಸಿಕೊಂಡಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಅದು ಬಳಕೆಯ ಭಾಷೆಯಾಗಿ ಉಳಿದಿಲ್ಲ. ಆದರೂ **ಬಾಯುನ** ಎಂಬ ಕಾವ್ಯವನ್ನು ಯರವ ಭಾಷೆಯಲ್ಲಿ ಹಾಡುತ್ತಾರೆ ಎಂದು ಹೇಳಲಾಗುತ್ತಿದ್ದರೂ, ಆ ಕಾವ್ಯವನ್ನು ಇದುವರೆಗೂ ಯಾರೂ ಸಂಗ್ರಹಿಸಿದಂತೆ ಕಾಣುತ್ತಿಲ್ಲ. ಕೊಡವ ಭಾಷೆ ಮತ್ತು ಕನ್ನಡ ಎಲ್ಲರಿಗೂ ಬರುತ್ತದೆ. ಅವರು ಕನ್ನಡದಲ್ಲಿ ಹಾಡುವ **ಚಿಕ್ಕಮ್ಮ** ಎಂಬ ಪುಟ್ಟ ಕಾವ್ಯಭಾಗವನ್ನು ಮಾತ್ರ ಇಲ್ಲಿ ನೀಡಲಾಗಿದೆ. ದುಡಿಯ ನಾದಕ್ಕೆ ಅನುಗುಣವಾಗಿ ಹಾಡು ಹೇಳುತ್ತಾ ಗಂಡಸರು-ಹೆಂಗಸರಾದಿಯಾಗಿ ಇವರು ಮಾಡುವ ನರ್ತನ ಸೊಗಸಾಗಿರುತ್ತದೆ.

**ಇಲ್ಲಿಗರು** ಬೆಂಗಳೂರು ಗ್ರಾಮಾಂತರ ಮತ್ತು ತುಮಕೂರು ಜಿಲ್ಲೆಯ ವಿಶಿಷ್ಟ ಜನವರ್ಗ. ಮೈಸೂರು ಜಿಲ್ಲೆಯ ಸೋಲಿಗರು, ಕಾಡುಕುರುಬರು ಮತ್ತು ಬೆಟ್ಟಕುರುಬರಂತೆ ಇವರೂ ಅತ್ಯಂತ ಪುರಾತನ ಮೂಲನಿವಾಸಿಗಳಲ್ಲಿ ಒಬ್ಬರು ಎಂದು ಹೇಳಲಾಗುತ್ತಿದೆ. ಸೋಲಿಗರಿಗೂ ಇವರಿಗೂ ಅನೇಕ ಸಾಮ್ಯಗಳೂ ಇವೆ. ಸೋಲಿಗರಂತೆ ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸಿ ನಾಡಿಗೆ ಮಾರಾಟ ಮಾಡುವುದು ಇವರ ಮೊದಲ ವೃತ್ತಿ. ಈಗ ಅಲ್ಲಲ್ಲಿ ಅಷ್ಟಷ್ಟು ಜಮೀನು ಮಾಡುವ ಕುಟುಂಬಗಳೂ ಇವೆ. ಒಂದು ಕಾಲಕ್ಕೆ ಬೇಟೆಯಲ್ಲಿಯೂ ಕೂಡ ಇವರು ನಿಷ್ಣಾತರು. ಈಗ ಅದಕ್ಕೆ ಅವಕಾಶವಿಲ್ಲ. ಇವರ ಸಾಂಸ್ಕೃತಿಕ ಜೀವನ ವಿಚಿತ್ರವಾದದ್ದು. ಸತ್ತವರ ಸಮಾಧಿಗಳೇ ಇವರ ಆರಾಧನಾ ಸ್ಥಳ. ಹಿರಿಯರ ಪೂಜೆ ಮತ್ತು ಹಬ್ಬ ಇವರ ಆದ್ಯತೆಗಳಲ್ಲಿ ಒಂದು. ಮೊದಲಿಗೆ ನಿಸರ್ಗದ ಸೂರ್ಯ ಚಂದ್ರ ಹಾಗೂ ಇತರ ಗ್ರಹಗಳನ್ನು ಒಲಿಸಿಕೊಳ್ಳುವ ರೂಪದ ಮಾಟ ಮಂತ್ರಗಳಿಗೆ ಮೊರೆ ಹೋಗಿದ್ದ ಕುರುಹುಗಳೂ ಇವರ ಆಚರಣೆಗಳಲ್ಲಿ ಕಾಣಸಿಗುತ್ತವೆ. ಆನಂತರ ಮಾತೃವಿನ ಆರಾಧನೆ ಹಾಗೂ ತದನಂತರದಲ್ಲಿ ತೀರಿಕೊಂಡ ಪಿತೃಗಳನ್ನೇ ದೈವಗಳೆಂದು ಪರಿಗಣಿಸಿದ್ದಾರೆ. ಇಲ್ಲಿಗರ ಕಾವ್ಯ ಅವರ ದೈವಗಳನ್ನು ಕುರಿತ ಪರಿಭಾವನೆಯೇ ಆಗಿದೆ.

**ಅಡವಿಚುಂಚರು** ಮೂಲತಃ ಆಂಧ್ರದ ಬೆಟ್ಟಗುಡ್ಡಗಳಿಂದ ಕರ್ನಾಟಕದ ಗಡಿಯವರೆಗೂ ಪಸರಿಸಿದವರು. ಇಲ್ಲಿಗರಿಗೂ ಅಡವಿ ಚುಂಚರಿಗೂ ಅಂತಹ ವ್ಯತ್ಯಾಸವೇನೂ ಇಲ್ಲ. ಅರಣ್ಯದಲ್ಲಿ ಲಭ್ಯವಿರುವ ಆಹಾರ ಸಂಗ್ರಹಣೆ ಮತ್ತು ಬೇಟೆ ಇವರ ಮೂಲ ವೃತ್ತಿ. ಬೇಟೆಯಲ್ಲಿ ಇವರು ಅನುಸರಿಸುವ ನಿಪುಣತೆ ಅತ್ಯಂತ ವೈಶಿಷ್ಟ್ಯವಾದುದ್ದು. ಇವರು ಮೂಲತಃ ತೆಲುಗಿನವರಾಗಿದ್ದು, ಕನ್ನಡ ಮಾತನಾಡಲು ಕಲಿತಿದ್ದಾರೆ. ಆಂಧ್ರ ಕರ್ನಾಟಕದ ಗಡಿ ಪ್ರದೇಶಗಳಾದ ಕೋಲಾರದ ಅನೇಕ ತಾಲ್ಲೂಕುಗಳು ಮತ್ತು ತುಮಕೂರು ಜಿಲ್ಲೆಯ ಪಾವಗಡದಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಇವರು ವೃತ್ತಿಗೆ ಸಂಬಂಧಿಸಿದ ಹಾಡುಗಳಲ್ಲದೆ ಸೃಷ್ಟಿ ಪುರಾಣಕ್ಕೂ ಸಂಬಂಧಿಸಿದ ಕಾವ್ಯವನ್ನು ಹಾಡುತ್ತಾರೆ. ಪ್ರಸ್ತುತ **ಇಕೋತಿದೇವಿ ಪುರಾಣವು** ಸೃಷ್ಟಿಯನ್ನು ಕುರಿತು ಅಡವಿಚಂಚರಿಗೆ ಇರುವ ಲೋಕದೃಷ್ಟಿಯನ್ನು ಸಾರಿಹೇಳುತ್ತದೆ.

ಲಂಬಾಣಿ ಜನವರ್ಗ ಭಾರತದಾದ್ಯಂತ ಕಂಡುಬರುವ ಒಂದು ಅಲೆಮಾರಿ ಸಂಸ್ಕೃತಿಯ ಸಮುದಾಯ. ಮೂಲತಃ ರಾಜಾಸ್ತಾನದವರಾದ ಲಂಬಾಣಿಗಳು ಸ್ಥಳೀಯ ವಸ್ತುಗಳ ಮಾರಾಟವನ್ನು ಕೈಗೊಂಡು ಭಾರತದಾದ್ಯಂತ ಪಸರಿಸಿದವರು. ಹೀಗಾಗಿ ಕಾಡಿಗೂ ಮತ್ತು ನಾಡಿಗೂ ಸಂಪರ್ಕ ಕಲ್ಪಿಸಿದವರು. ಕಾಲಾಂತರದಲ್ಲಿ ಇಂತಹ ಆರ್ಥಿಕ ಚಟುವಟಿಕೆಗಳಿಂದ ದೂರಸರಿದ ಲಂಬಾಣಿಗರು ಕರ್ನಾಟಕ ಮತ್ತು ಆಂಧ್ರವೇ ಮೊದಲಾಗಿ ದೇಶದ ಅನೇಕ ಭಾಗಗಳಲ್ಲಿ ತಮ್ಮ ಖಾಯಂ ನೆಲೆಯನ್ನು ಕಂಡುಕೊಂಡರು. ಇತ್ತೀಚೆಗೆ ಕೃಷಿ ಚಟುವಟಿಕೆಗಳಿಗೆ ತಮ್ಮನ್ನು ತೊಡಗಿಸಿಕೊಂಡಿರುವರಾದರೂ ಭೂಮಿಯ ಒಡೆತನ ಇಲ್ಲವಾದ ಕಾರಣ ಅಪಾರವಾದ ಸಂಕಷ್ಟದಲ್ಲಿ ಇದ್ದಾರೆ. ಅವರ ಆರ್ಥಿಕ ಬದುಕು ಎಷ್ಟೇ ದುಸ್ತರವಾಗಿರಲಿ ಸಾಂಸ್ಕೃತಿಕ ಬದುಕು ಅತ್ಯಂತ ಶ್ರೀಮಂತವಾಗಿಯೇ ಇದೆ.

ಇವರ ಹಬ್ಬ ಆಚರಣೆ ಮತ್ತು ಹಾಡುಗಳು ವಿಶಿಷ್ಟ ಸಮುದಾಯೊಂದರ ಒಳನೋಟವನ್ನು ಬಿಂಬಿಸುತ್ತವೆ. ಲಂಬಾಣಿಯರು ಅನೇಕ ಕಥನ ಗೀತೆಗಳನ್ನು ಹಾಡುತ್ತಾರೆ. ಅವರ ಸಾಂಸ್ಕೃತಿಕ ವೀರನಾದ ಸೇವಾಲಾಲನನ್ನು ಕುರಿತಾದ ಮಹಾಕಾವ್ಯವು ಅವರಲ್ಲಿ ಚಾಲ್ತಿಯಲ್ಲಿದೆ. ಆದರೆ ಇದುವರೆಗೂ ಅದರ ಪೂರ್ಣ ಪಾಠವನ್ನು ಸಂಗ್ರಹಿಸಲಾಗಿಲಿಲ್ಲ. ಮೂಲತಃ ಲಂಬಾಣಿ ಭಾಷೆಯಲ್ಲಿಯೇ ಕಾವ್ಯವನ್ನು ಹಾಡಲಾಗುತ್ತದೆ. ಸೇವಾಲಾಲನ ಕಾವ್ಯದ ಒಂದು ಭಾಗವನ್ನು ಸಾಂಕೇತಿಕವಾಗಿ ಇಲ್ಲಿ ನೀಡಲಾಗಿದೆ.

ಮೇಲಿನ ಜನವರ್ಗಗಳಲ್ಲದೆ ಉತ್ತರ ಕನ್ನಡದ ಸಿದ್ಧಿಯರು, ಉತ್ತರ ಕರ್ನಾಟಕ ಭಾಗದಲ್ಲಿ ಅಲ್ಲಲ್ಲಿ ಕಾಣಸಿಗುವ ಹಗಲು ವೇಷದವರು, ಕರ್ನಾಟಕದಾದ್ಯಂತ ಚದುರಿದಂತೆ ಕಾಣಸಿಗುವ ದೊಂಬರು ಮುಂತಾದ ವಿಶಿಷ್ಟ ಜನವರ್ಗದ ಕಾವ್ಯರೂಪಗಳನ್ನು ಆಯ್ಕೆಮಾಡಿ ಈ ಸಂಪುಟದಲ್ಲಿ ಸೇರಿಸಲಾಗಿದೆ.

ಈ ಮೇಲೆ ವಿವರಿಸಿದ ಎಲ್ಲ ಜನವರ್ಗಗಳ ಸಂಸ್ಕೃತಿ ಮತ್ತು ಕಾವ್ಯವನ್ನು ಕುರಿತಾದ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಈ ಮುಂದೆ ನೀಡಲಾಗಿರುವ ಗ್ರಂಥಗಳನ್ನು ಅಭ್ಯಸಿಸಬೇಕೆಂದು ಮನವಿಮಾಡಿಕೊಳ್ಳುತ್ತೇನೆ. ಈಗ ಬರೆಯುತ್ತಿರುವ ಪ್ರಸ್ತಾವನೆಗೆ ಒಂದು ಮಿತಿ ಇರುವ ಕಾರಣ ಕಾವ್ಯ ಹಾಡಿರುವ ಪ್ರತಿ ಜನವರ್ಗದ ಸವಿಸ್ತಾರ ಪರಿಚಯ ಮಾಡಿಕೊಡಲು ಸಾಧ್ಯವಾಗಿಲ್ಲ. ಆದ್ದರಿಂದಲೇ ಹೆಚ್ಚಿನ ಓದಿಗೆ ಪೂರಕವಾಗುವ ಗ್ರಂಥಗಳು ಎಂಬ ಶೀರ್ಷಿಕೆಯಲ್ಲಿ ಗ್ರಂಥಗಳ ಪಟ್ಟಿಯನ್ನು ನೀಡಲಾಗಿದೆ. ಆಸಕ್ತರು ಅವುಗಳ ಉಪಯೋಗವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.

---

ಉಲ್ಲೇಖಗಳು :

1. ಡಾ. ಜಿ.ಎಸ್. ಶಿವರುದ್ರಪ್ಪ -ಮಹಾಕಾವ್ಯ ಸ್ವರೂಪ
2. ಡಾ. ಡಿ.ಆರ್. ನಾಗರಾಜ್ - ಅಕ್ಷರ ಚಿಂತನ
3. ಪ್ರಶಾಂತ್ ಮಾಡ್ತ - ಉಲ್ಲೇಖ : ಡಾ. ಪುರುಷೋತ್ತಮ ಬಿಳಿಮಲೆ - ಕೂಡುಕಟ್ಟು.
4. ಡಿ.ಡಿ. ಕೊಸಾಂಬಿ ಚಿಂತನೆಗಳು -(ಅನು) ಎಚ್.ಎಸ್. ಶ್ರೀಮತಿ- ಪ್ರಾಚೀನ ಭಾರತದ ಚರಿತ್ರೆ.
5. ಪೆರಿಯರ್ ಎಲ್ವಿನರ ಗಿರಿಜನ ಪ್ರಪಂಚ - (ಅನು) ಎಚ್.ಎಲ್. ನಾಗೇಗೌಡ
6. ಬರಗೂರು ರಾಮಚಂದ್ರಪ್ಪ -ಸಂಸ್ಕೃತಿ -ಉಪಸಂಸ್ಕೃತಿ
7. White, L.S. - American Socialogical, Review.
8. ಡಾ. ರಾಜೇಂದ್ರಚೆನ್ನಿ - ದೇಶೀ ದರ್ಶನಗಳು
9. ಡಾ. ಜಿ.ಎಸ್. ಶಿವರುದ್ರಪ್ಪ- ಮಹಾಕಾವ್ಯ ಸ್ವರೂಪ
10. -ಅದೇ-
11. - ಅದೇ -

## ಹೆಚ್ಚಿನ ಓದಿಗೆ ಪೂರಕವಾಗುವ ಗ್ರಂಥಗಳು

| | |
|---|---|
| ೧. **ಕರ್ನಾಟಕ ಬುಡಕಟ್ಟುಗಳು** (ಎರಡು ಸಂಪುಟಗಳು) | ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು. |
| ೨. **ಗಿರಿಜನ ಸಂಸ್ಕೃತಿ** (ಪ್ರಾತಿನಿಧಿಕ ಬುಡಕಟ್ಟು ಲೇಖನಗಳ ಸಂಪುಟ) | ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು. |
| ೩. **ಬುಡಕಟ್ಟು ಮಹಾಕಾವ್ಯ ಮಾಲೆಯ ಕಾವ್ಯಗಳು** | ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. |
| ೪. **ಉಪಸಂಸ್ಕೃತಿ ಮಾಲೆಯ ಗ್ರಂಥಗಳು** | ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. |
| ೫. **ಅಕ್ಷರ ಚಿಂತನ ಮಾಲೆಯ ಗ್ರಂಥಗಳು** | ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ. |
| ೬. **ಕರ್ನಾಟಕ ಜನಪದ ಕಲೆಗಳ ಕೋಶ** | ಹಿ ಚಿ ಬೋರಲಿಂಗಯ್ಯ ಪ್ರಸಾರಾಂಗ (1996), ಕನ್ನಡ ವಿಶ್ವವಿದ್ಯಾಲಯ, ಹಂಪಿ. |
| ೭. **ಕಾಡು ಕಾಂಕ್ರಿಟ್ ಮತ್ತು ಜಾನಪದ** | ಹಿ ಚಿ ಬೋರಲಿಂಗಯ್ಯ ಅಕ್ಷರ ಪ್ರಕಾಶನ (1995), ಹೆಗ್ಗೋಡು. |
| ೮. **ಗಿರಿಜನ ನಾಡಿಗೆ ಪಯಣ** | ಹಿ ಚಿ ಬೋರಲಿಂಗಯ್ಯ ರಾಗಿರೊಟ್ಟಿ ಪ್ರಕಾಶನ (1992), ಬೆಂಗಳೂರು. |

## ಗಿರಿಜನ ಕಾವ್ಯ - ಆಕರಗಳು


೧. **ಅಡವಿಚೆಂಚರ ಸಂಸ್ಕೃತಿ** — ಸಂ : ಪ್ರಹ್ಲಾದ ಬೆಟಗೇರಿ
ಕರ್ನಾಟಕ ಸಾಹಿತ್ಯ ಅಕಾಡೆಮಿ (1993)

೨. **ಇಲ್ಲಿಗರ ಸಂಸ್ಕೃತಿ** — ಸಂ : ಬಿ. ಸಿದ್ಧಗಂಗಯ್ಯ ಕಂಬಾಳು
ಕರ್ನಾಟಕ ಸಾಹಿತ್ಯ ಅಕಾಡೆಮಿ (1993)

೩. **ಎರವರ ಸಂಸ್ಕೃತಿ** — ಸಂ : ಡಾ. ಪಿ.ಎನ್. ಹರೀಶ್
ಕರ್ನಾಟಕ ಸಾಹಿತ್ಯ ಅಕಾಡೆಮಿ (1993)

೪. **ಕಾಡ್ಯನಾಟ** — ಸಂ : ಎ.ವಿ. ನಾವಡ, ಆರ್.ಆರ್.ಸಿ
ಉಡುಪಿ.

೫. **ಕಾಡು ಕುರುಬರು ಮತ್ತು ಜೇನು ಕುರುಬರ ಸಂಸ್ಕೃತಿ** — ಸಂ : ಎ.ಸಿ. ಲಲಿತ
ಕರ್ನಾಟಕ ಸಾಹಿತ್ಯ ಅಕಾಡೆಮಿ (1993)

೬. **ಗುಮಟೆ ಪದಗಳು** — ಸಂ : ಡಾ. ಎಲ್.ಆರ್. ಹೆಗಡೆ
ಬೆಂಗಳೂರು ವಿಶ್ವವಿದ್ಯಾಲಯ (1978)

೭. **ಗೊಂಡರ ಪದಗಳು** — ಸಂ : ಡಾ.ಎಲ್.ಆರ್. ಹೆಗಡೆ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೮. **ಗೊಂಡರ ರಾಮಾಯಣ** — ಸಂ : ಡಾ. ಹಿ.ಚಿ. ಬೋರಲಿಂಗಯ್ಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ (1999)

೯. **ಜನಪದ ಗೀತಾಂಜಲಿ** — ಸಂ : ಡಾ. ದೇ. ಜವರೇಗೌಡ
ಸಾಹಿತ್ಯ ಅಕಾಡೆಮಿ, ನವದೆಹಲಿ

೧೦. **ಜುಂಜಪ್ಪ** — ಸಂ : ಚೆಲುವರಾಜು
ಕನ್ನಡ ವಿಶ್ವವಿದ್ಯಾಲಯ, ಹಂಪಿ (1995)

೧೧. **ತುಳು ಪಾಡ್ದನ ಸಂಪುಟ** — ಸಂ : ಡಾ. ಅಮೃತ ಸೋಮೇಶ್ವರ
ಕನ್ನಡ ವಿಶ್ವವಿದ್ಯಾಲಯ, ಹಂಪಿ (1988)

೧೨. **ದೇವರ ಎತ್ತಯ್ಯ** — ಸಂ : ಬಿ.ವಿ. ನಾಗರಾಜ್
ಆಪ್ತ ಪ್ರಕಾಶನ (1988)

೧೩. **ದೊಂಬರ ಮದಾಲ್ಸಿ ಪದಗಳು** — ಸಂ : ಡಾ. ಎಚ್.ಎಂ. ಮಹೇಶ್ವರಯ್ಯ
ಡಾ. ಎ. ಮರಿಗೆಪ್ಪ
ಸಹಿತಾ ಪ್ರಕಾಶನ, ಧಾರವಾಡ (1981)

೧೪. **ಮಲೆ ಕುಡಿಯರು** — ಸಂ : ಡಾ. ಬಿ.ಎ. ವಿವೇಕ ರೈ
ಡಿ.ಯದುಪತಿಗೌಡ

ಮಂಗಳೂರು ವಿಶ್ವವಿದ್ಯಾಲಯ (1996)

೧೫. **ಮಾಳಿಂಗರಾಯನ ಕಾವ್ಯ** ಸಂ : ಗಂಗಾಧರ ದೇವಜ್ಞ
ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೬. **ಮ್ಯಾಸಬೇಡರ ಕಥನಗಳು** ಸಂ : ಎ.ಎಸ್. ಪ್ರಭಾಕರ್
ಕನ್ನಡ ವಿಶ್ವವಿದ್ಯಾಲಯ, ಹಂಪಿ (1999)

೧೭. **ಮ್ಯಾಸಬೇಡರ ಸಂಸ್ಕೃತಿ** ಸಂ : ಡಾ. ಕೃಷ್ಣಮೂರ್ತಿ ಹನೂರು
ಕರ್ನಾಟಕ ಸಾಹಿತ್ಯ ಅಕಾಡೆಮಿ (1993)

೧೮. **ಮುಕ್ರಿ ಮತ್ತು ಹೊಲೆಯರ ಪದಗಳು** ಸಂ : ಡಾ. ಎಲ್.ಆರ್. ಹೆಗಡೆ
ಬೆಂಗಳೂರು ವಿಶ್ವವಿದ್ಯಾಲಯ (1979)

೧೯. **ಮುಗೇರರು** ಸಂ : ಡಾ. ಅಭಯ ಕಾಕ್ರಾಡಿ
ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ಮಂಗಳೂರು.

೨೦. **ಮೈಲಾರ ಲಿಂಗನ ಕಾವ್ಯ** ಸಂ : ಡಾ. ಮಂಜುನಾಥ ಬೇವಿನಕಟ್ಟಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೧. **ಮೈಲಾರ ಲಿಂಗ ಈರಬಡಪ್ಪ** ಸಂ : ಕರಾಕೃ
ಜನಪದ ಸಾಹಿತ್ಯ ಅಕಾಡೆಮಿ (1967)

೨೨. **ಸಂತ ಸೇವಾಲಾಲ** ಸಂ : ಡಾ. ಹರಿಲಾಲ ಪವಾರ
ಗ್ರಾಮೀಣ ಸಾಹಿತ್ಯ ಮಾಲೆ, ಶ್ರೀ ಜಗದ್ಗುರು
ತೋಂಟದಾರ್ಯ ಸಂಸ್ಥಾನ ಮಠ,
ಡಂಬಳ, ಗದಗ (1988)

೨೩. **ಸಿದ್ಧಿಯರ ಸಂಸ್ಕೃತಿ** ಸಂ : ಹಿ.ಚಿ. ಬೋರಲಿಂಗಯ್ಯ
ಕರ್ನಾಟಕ ಸಾಹಿತ್ಯ ಅಕಾಡೆಮಿ (1993)

೨೪. **ಸಿರಿ ಪಾಡ್ದನ** ಸಂ : ಎ.ವಿ. ನಾವಡ
ಕನ್ನಡ ವಿಶ್ವವಿದ್ಯಾಲಯ, ಹಂಪಿ (1997)

೨೫. **ಸುಗ್ಗಿ ಹಬ್ಬ** ಸಂ : ಡಾ. ಎನ್.ಆರ್. ನಾಯಕ್
ಆರ್.ಆರ್.ಸಿ, ಉಡುಪಿ (1999)

೨೬. **ಹಗಲುವೇಷದವರ ಸಂಸ್ಕೃತಿ** ಸಂ : ಯಳನಾಡು ಆಂಜನಪ್ಪ
ಕರ್ನಾಟಕ ಸಾಹಿತ್ಯ ಅಕಾಡೆಮಿ (1993)

## ಗಿರಿಜನ ಕಾವ್ಯ


ಪರಿವಿಡಿ

ಅಧ್ಯಕ್ಷರ ಮಾತು

ಪ್ರಸ್ತಾವನೆ



ಗೊಲ್ಲರ ಕಾವ್ಯ ೧



ಬೇಡರ ಕಾವ್ಯ ೬೭



ಕುರುಬರ ಕಾವ್ಯ ೧೨೫



ಹಾಲಕ್ಕಿ ಒಕ್ಕಲಿಗರ ಕಾವ್ಯ ೨೨೩



ಮುಕ್ರಿಯರ ಕಾವ್ಯ ೨೪೭



ಗೊಂಡರ ಕಾವ್ಯ ೨೬೭



ತುಳು ಕಾವ್ಯ ೩೦೩



ಕಾಡುಕುರುಬರ ಕಾವ್ಯ ೩೪೯



ಹಗಲುವೇಷದವರ ಪದಗಳು ೩೬೧



ದೊಂಬರ ಪದಗಳು ೩೭೧



ಎರವರ ಕಾವ್ಯ ೩೭೭



ಇಲ್ಲಿಗರ ಕಾವ್ಯ ೩೮೩



ಸಿದ್ಧಿಯರ ಕಾವ್ಯ ೩೯೫



ಅಡವಿಚೆಂಚರ ಕಾವ್ಯ ೪೦೨



ಲಂಬಾಣಿ ಕಾವ್ಯ ೪೨೫

ಸಂಪಾದಕರ ಪರಿಚಯ ೪೫೦

ಕಾವ್ಯಗಳ ಆಕರ ೪೫೪


ಆಲೋಚನೆ - ಪುನರಾಲೋಚನೆಗಳ ನಡುವೆ ಜಾನಪದದ ಅಂತರಂಗಕ್ಕೆ ವಿಶಾಲವಾದ ಅರ್ಥದಲ್ಲಿ ಸಂಕೇತವಾಗಬಲ್ಲ ಲಾಂಛನವನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ರೂಪಿಸಿತು: ವಾಸ್ತವವಾಗಿ ಜಾನಪದವು ಗಂಧವತಿ ಪೃಥ್ವಿಯ ಸಕಲ ಸಲ್ಲಕ್ಷಣಗಳನ್ನು ಒಳಗೊಂಡಿರುವ, ಪಂಚಭೂತಗಳ ವಂಚನೆರಹಿತ ಗುಣಧರ್ಮದ ಆಗರವಾಗಿದೆ. ಭರತಖಂಡದ ಪ್ರಾಚೀನತಮ ಜಾನಪದದ ತುಂಬುಮನಸ್ಸು ನಿರ್ಮಿಸಿರುವ ನಿತ್ಯಮಂಗಳಕರವಾದ ಶಿವತತ್ತ್ವದ; ಅರ್ಧನಾರೀಶ್ವರ ಗುಣದ, ಸಕಲ ಜೀವರಾಶಿಗಳ ಬಗೆಗಿನ ಅಪಾರ ಅಂತಃಕರಣದ ಶಿವ ಮತ್ತು ಜಾನಪದದ ವೈವಿಧ್ಯಮಯ ಸೂಕ್ಷ್ಮಗಳನ್ನು ಒಂದೇ ಸಮನೆ ಧ್ಯಾನಿಸಿದ ಪರಿಶುದ್ಧ ಮನಸ್ಸಿನ ಅಂತರಾಳದಿಂದ ಹೊರಹೊಮ್ಮುವ ವಿಶಾಲ ಪ್ರಸನ್ನತೆಯ ಸಾಕ್ಷಾತ್ ಪ್ರತೀಕವಾದ ಬುದ್ಧದೇವ ಹಾಗೂ ಕಾಡಿನ ಬೇಡರ ಹುಡುಗನಾಗಿ ಹುಟ್ಟಿ-ಬೆಳೆದು, ಜ್ಞಾನದ ಬಗೆಗಿನ ಅಪರಿಮಿತ ಆಕಾಂಕ್ಷೆಯಿಂದ ನಿರಂತರ ಶ್ರಮ ಮತ್ತು ಪ್ರತಿಭಾಸಂಪನ್ನತೆಯ ಹಾದಿಯಲ್ಲಿ ಸಾಗಿ ತುತ್ತತುದಿಯನ್ನು ತಲುಪಿದ, ನಮ್ಮ ಸಮಾಜದ ಎಲ್ಲ ತಬ್ಬಲಿಗಳ ಪ್ರತಿನಿಧಿಯಾದ ಏಕಲವ್ಯನನ್ನು ನೆನಪಿಸುವ, ಜಾನಪದದ ಮಹತ್ವವನ್ನು ನಿರಂತರವಾಗಿ ವಿಸ್ತರಿಸುತ್ತಿರುವ ಸೃಜನಶೀಲ ರೂಪಕ ಇದಾಗಿದೆ.

**– ಕಾಳೇಗೌಡ ನಾಗವಾರ**

ಮೈತ್ರಿ ಮತ್ತು ಕರುಣಾಭಾವಗಳಿಂದ ಲೋಕದ ಸಕಲ ಜೀವಿಗಳ ಹಿತಕ್ಕಾಗಿ ಧ್ಯಾನಸ್ಥವಾಗಿರುವ ಪ್ರಸನ್ನ ಮುಖಭಾವ, ಸೃಷ್ಟಿಶೀಲತೆಯ ಸಂಕೇತವಾದ ವೃಕ್ಷ, ಲೋಕವನ್ನು ಸದಾ ಬೆಳಗುವ ಸೂರ್ಯ–ಚಂದ್ರರು ; ಜನಪದರ ಸಂಭ್ರಮದಲ್ಲಿ ಪಾಲ್ಗೊಂಡ ಅವರ ನಿತ್ಯಸಂಗಾತಿಗಳಾದ ಸಕಲ ಜೀವರಾಶಿಗಳು ಸೂಕ್ಷ್ಮ ವಿನ್ಯಾಸಗಳೊಂದಿಗೆ ಈ ಪ್ರತೀಕದಲ್ಲಿ ಅಪೂರ್ವವಾಗಿ ಸಂಯೋಜಿಸಲ್ಪಟ್ಟಿವೆ. ಪ್ರಕೃತಿಯಂತೆ ನಿತ್ಯವೂ ಹೊಸತಾಗುವ ಸತ್ವಗಳನ್ನು ಒಳಗೊಂಡು, ನಿರಂತರ ತುಂಬಿ ತುಳುಕುವ ಹೊಳೆಯಂತೆ ವಿಸ್ತಾರವೂ ಪಾರದರ್ಶಕವೂ ಆಗಿರುವ ಇದು ಎಲ್ಲ ಮನಸ್ಸುಗಳ ಏಕತೆಯನ್ನು ಸಂಕೇತಿಸುತ್ತದೆ. ಮಾನವೀಯ ತಳಹದಿಯ ಮೇಲೆ ರೂಪುಗೊಂಡಿರುವ ಈ ಲಾಂಛನವು ಅಕಾಡೆಮಿಯ ಚಟುವಟಿಕೆಗಳ ವಿಕಾಸಶೀಲ ಪ್ರತಿಮೆಯಾಗಿದೆ.

**– ಜಿ ವಿ ಆನಂದಮೂರ್ತಿ**

# ಗೊಲ್ಲರ ಕಾವ್ಯ



## ಗೊಲ್ಲರ ಕುಲದ ಹುಟ್ಟಿನ ಸಂದು

ಕಾಟುಮುಲಿಂಗ ಸಿತ್ತುರು ದೇವರು
ಒಳ್ಳೆ ಆನಂದವಾಗಿ
ಸರಿ ಗಂಗಮಾಳಮ್ಮ
ಅರಣ್ಯದಲ್ಲಿದ್ರು ಸಿತ್ತುನಗಿರಿ ಎಂಬ ಕಾಡಿನಲ್ಲಿ
ಅವರಿದ್ದಂತ ಕಾಲದಲ್ಲಿ
ದ್ವಾರಕದಲ್ಲಿ ವೈಕುಂಠದಲ್ಲಿ
ಶ್ರೀವಿಷ್ಣು ಲಕ್ಷ್ಮಿ ಕುಂತಗಂಡು
ಸರಿ ತಾಂಬೂಲ ಹಾಕ್ಕೆಂತ ಕುಂತಿದ್ರು
ಕುಂತಿದ್ದಾಗ
ಲಕ್ಷ್ಮಿ
ನಾನು ಮುಂದಗಡೆ ಕಂಸಾಸುರನ ಕೊಲ್ಲೋದಕ್ಕೆ
ಮುಂದೆ ಕೃಷ್ಣನ ಅವುತಾರ ಎತ್ತಬೇಕಾಗ್ತಾತೆ
ಕಂಸಾಸುರ
ಹಡ್ಡ ಮಕ್ಕಳನ್ನೆಲ್ಲ ನನ್ನ ಖಡ್ಗಕ್ಕೆ ಅವುತಿ ಕೊಡ್ತೀನಂತ
ತನ್ನ ತಂಗಿ ಅತ್ರ ಭಾಷೆ ತಗಂಬಿಟ್ಟವುನೆ
ನಾನು ಖಡ್ಗಕ್ಕೆ ಇಂಗೆ ಮ್ಯಾಕೆ ಎಸೆದ್ ತಕ್ಷಣ
ನಾನೋಗಿ ಸಮುದ್ರ ಸೇರಬೇಕು
ಸಮುದ್ರಗುಂಟ ಹೋಗಿ
ಗೊಲ್ರು ಯಶೋದಮ್ಮ ಅಂಬಳುಮನೆ ಸೇರಿ
ಕಂಸಾಸುರನ ಸಂಹಾರ ಮಾಡೋದಕ್ಕೆ
ನಾನು ದೊಡ್ಡವನಾಗಿ ಬೆಳೀಬೇಕು
ಗೊಲ್ದುರು ಅಂಬ ಕುಲನ
ನಾನು ತಯಾರು ಮಾಡಬೇಕು ಲಕ್ಷ್ಮಿ

ಅಂದು ವಿಷ್ಣು ಮಾಹಾಲಕ್ಷ್ಮಿಗೆ ಹೇಳಿದ
ಯಾವ ರೀತಿ ತಯಾರು ಮಾಡ್ತೀರಿ ಸ್ವಾಮಿ?
ಯಂಗೂ ಇಲ್ಲಿ
ಗೋವರ್ಧನ ಗಿರಿ ಎಂಬ ಒಂದು ಕಾಡಿದೆ
ಅಲ್ಲಿ ಬೆಟ್ಟ ಇದೆ
ಗೋವರ್ಧನ ಗಿರಿ ಊರು
ಊರೊಳಗೊಬ್ಬ ಮಹಾರಾಜ ಅವನೆ
ಮಹಾರಾಜನಿಗೆ ಮಗಳಾಗಿ ನೀನು ಹುಟ್ಟು
ಊರು ಮುಂದೆ ಒಬ್ಬ ಬಡವ
ಗುಡ್ಲು ಕಟ್ಟಿಕೊಂಡು ಮನೆ ಒಳಗವ್ನೆ
ಆ ಗುಡ್ಲು ಮನೆ ಒಳಗಿರೋ
ಬಡವನ ಹೊಟ್ಟೆ ಒಳಗೆ
ನಾನು ಮಗನಾಗಿ ಹುಟ್ಟುತೀನಿ
ನೀನು ಅಲ್ಲಿ ಬೆಳೆ
ನಾನು ಇಲ್ಲಿ ಬೆಳೀತೀನಿ
ಇಬ್ಬರೂ ಪ್ರಾಯಕ್ಕೆ ಬಂದ ಮೇಲೆ
ಮುಂದಿನ ಕತೆ ನಾನು ಹೇಳಿಕೊಡ್ತೀನಿ
ನೀನು ಕೇಳು ಅಂತ ವಿಷ್ಣು ಲಕ್ಷ್ಮಿಗೆ ಹೇಳ್ದ
ಸರಿ ಆಗಲೇಳಿ ಸ್ವಾಮಿ ಅಂದ್ಲು
ಹಾಗೆ ಮಾಯದಿಂದ ಆ ತಾಯಿ
ಆ ಗೋವರ್ಧನ ಗಿರಿ ರಾಜನಿಗೆ ಮಕ್ಕಳಿರಲಿಲ್ಲ
ಗರ್ಭಿಣಿ ಆಗಿಬಿಟ್ಳು ಅವನೆಂಡ್ತಿ
ಗರ್ಭಿಣಿ ಆಗಿ ಮಹಾಲಕ್ಷ್ಮಿ ಜನಿಸಿದಳು
ಮಹಾಲಕ್ಷ್ಮಿ ಜನಿಸದಕ್ಕಿಂತ ಪಸ್ಟು
ಶ್ರೀ ಕೃಷ್ಣ ಒಂದು ಗುಡಿಸಲೊಳಗೆ
ಒಬ್ಬ ಬಡವುನ ಹೆಂಡ್ತಿ ಹೊಟ್ಟೆ ಒಳಗೆ
ಕೃಷ್ಣಪರಮಾತ್ಮ ಮನ್ಸನಾಕಾರವಾಗಿ ಹುಟ್ಟಿದ
ಲಕ್ಷ್ಮಿದೇವಿ ಮಹಾರಾಜನ ಮಗಳಾಗಿ ಹುಟ್ಟಿದ್ಳು
ನಾನು ಗಂಡು ಹುಡುಗ

ಬಡವರ ಮನೆ ಹುಡುಗನಾಗಿ ಬೆಳದ್ರೂ ಪರವಾಯಿಲ್ಲ
ಹೆಂಣ್ಮಗಳು ಮಹರಾಜನ ಮಗಳಾಗಿ ಹುಟ್ಟಿದ್ರೆ
ಸುಖವಾಗಿರ್ತೀಯ ಅಂತೆಳ್ಬಿಟ್ಟು
ಮಹಾರಾಜರಿಗೆ ಮಗಳ್ನ ಮಾಡಿದ
ಮಹಾಲಕ್ಷ್ಮೀನ ವಿಷ್ಣು
ಆ ಮಹಾತಾಯಿ ಅಲ್ಲಿ ಬೆಳೆದ್ಲು
ಇವನು ಆ ಬಡವುನ ಹೊಟ್ಟೇಲಿ ಹುಟ್ಟಿ



ಗೋಲಿ ಗೆಜ್ಜುಗ ಆಡಿಕೊಂಡು
ಗಾಳಿ ಧೂಳನಲ್ಲಿ ಬೆಳೆದುಬಿಟ್ಟ ಶ್ರೀಕೃಷ್ಣ
ಬೆಳೆದು ಕಾಲವತಾರಗಳು ಕಳೀತಾ ಇರುವಾಗ
ಒಂದಾನೊಂದು ದಿವಸ
ಈಯಮ್ಮ ಮಹಾರಾಜನ ಮಗಳು
ಲಕ್ಷ್ಮೀದೇವಿ ಋತುಮತಿಯಾದಳು
ಋತುಮತಿಯಾಗತ್ತಿದ್ದಂಗೆ ಆಯಮ್ಮಂಗೆ
ಸೂತಗಗೀತಕ ಎಲ್ಲಾ ಕಳದ್ರು
ಎಲ್ಲಾ ಆಗ್ತಲೆ ಸ್ನಾನ ಮಾಡಿಸಿ
ತಲೆ ಬಾಚಿ ಹೂವ ಮುಡಿಸಿ
ಸಿಂತೋಳಗಿಕ್ಕಾರು ಮಹಾಲಕ್ಷ್ಮೀನ
ಮಹಾರಾಜರ ಮಗಳ್ನ
ಸಿಂತೋಳಗಿಟ್ರೆ
ಒಂದೇ ಒಂದು ಮಲ್ಲಿಗೆ ಹೂವಿನ ತೂಕಕ್ಕಿದ್ಲು ಲಕ್ಷ್ಮೀದೇವಿ
ಒಂದೇ ಒಂದು ಮಲ್ಲಿಗೆ ಹೂವಿನ ತೂಕಕ್ಕಿದ್ದವಳಿಗೆ
ಮೇಲ್ಮಾಡಿ ಮೇಲೆ ಇರ್ತಿದ್ದಳಲ್ಲ
ಸುತ್ತ ಮನೆಸುತ್ತ ಬಿಸಗತ್ತಿ ಕಾವುಲು
ಕಾವಲುವಿರುವಾಗ ಮೇಲು ಮಹಡಿ ಮ್ಯಾಲೆ
ಶ್ರೀ ಕೃಷ್ಣ ಪತ್ತೆಯೇ ಇಲ್ದಂಗೆ ಬಂದು ಬಿಟ್ಟು
ಮೇಲ್ ಮಾಡಿ ಮೇಲೆ ಬಂದು ಶ್ರೀ ಕೃಷ್ಣ
ಆಯಮ್ಮ ಪಕ್ಕದಾಗೆ ಮಲ್ಕಂಡು
ರೂಥಿ ಮಾಡಿದ್ನೂ
ಆಯಮ್ಮ ಗರ್ಭಿಣಿ ಆಗಿಬಿಟ್ಳು
ಎರಡು ಮಲ್ಲಿಗೆ ಹೂವಿನ ತೂಕ ಆಗಿಬಿಟ್ಳು ಲಕ್ಷ್ಮಿದೇವಿ ॥

ಎರಡು ಮಲ್ಲಿಗೆ
ಹೂವಿನ ತೂಕವಾದಳು

ಮಹಾಲಕ್ಷ್ಮಿ

ಮಹಾರಾಜುನ
ಮನಿಯಾಗೆಗಳಿಗಾಗೋ ॥
ಆಗ ದಾದೇರು ನೀರೊಯ್ದು ಆಯಮ್ಮಗೆ
ಅರಿಶಿನ ಕುಂಕುಮ ಇಟ್ಟು
ಸರಿ ತಲೆಬಾಚಿ ಹೂಮುಡಿಸಿ
ಎಲ್ಲಾ ರಡಿ ಮಾಡಿ ಸಿಂತೋಳಿಗಿಟ್ರು
ಅವತ್ತು ಎರಡು ಮಲ್ಲಿಗೆ ಹೂವಿನ ತೂಕ ಬಂದುಬಿಟ್ಟು
ದಾದೇರೆಲ್ಲಾ ಆಶ್ಚರ್ಯ ಪಟ್ಟುಬಿಟ್ರು
ಈ ಹುಡುಗಿ ಪ್ರಾಯದುಡಿಗಿ ಆದ್ರೂ
ಒಂದೇ ಮಲ್ಲಿಗೆ ಹೂವಿನ ತೂಕ ಇದ್ದವುಳು
ಎರಡು ಮಲ್ಲಿಗೆ ಹೂವಿನ ತೂಕ ಬಂದು ಬಿಟ್ಟಲ್ಲ
ಅಲ್ಲಿಗೆ ಗರ್ಭಿಣಿ ಇರಬಹುದು ಅಂತ ಲೆಕ್ಕ
ಈ ಮಾತು ಮಹಾರಾಜನಿಗೆ ತಿಳಸದಿದ್ರೆ
ನಮ್ಮನ್ನ ಸುಮ್ನೆ ಬಿಡದಿಲ್ಲ
ಇವಳಿಗಾಗೋ ಶಿಕ್ಷೆ ನಮಗಾಕ್ತೈತೆ ಅಂತ್ಹೇಳಿ
ದಾದಿಯರು ಗೋವರ್ಧನಗಿರಿ
ಮಹಾರಾಜನಿಗೋಗಿ ಹೇಳಿದರು ॥

ಮಹಾರಾಜ,
ಇಷ್ಟು ದಿವುಸ ನಿನ್ನ ಮಗಳು

ಸ್ನಾನ ಮಾಡಿಸಿ ತಲೆಬಾಚಿ ನಾವೆಲ್ಲ ಮಾಡಿ
ಸಿಂತೋಲಿಗೆ ಕುಂಡ್ರಿಸಿದರೆ
ಒಂದು ಮಲ್ಲಿಗೆ ಹೂವಿನ ತೂಕ ಇರುತ್ತಿದ್ಲು
ಈವತ್ತು ಎರಡು ಮಲ್ಲಿಗೆ ಹೂವಿನ ತೂಕ
ಬಂದುಬಿಟ್ಟಾಳಲ್ಲ ಏನಿರಬಹುದು ಕಾರಣ ?
ಅಂತ ಕೇಳಿದ್ರು
ಸರಿ ಅಂಗಿದ್ಮೇಲೆ ಅವುಳು ನನಿಗೆ ಮಗಳಲ್ಲ
ಮನೇ ಸುತ್ತ
ಅರಮನೆ ಸುತ್ತ ಬಿಸಗತ್ತಿ ಕಾವುಲಿದ್ರು

ಮೇಲ್ಮಾಡಿ ಮೇಲೆ ನನ್ನ ಮಗಳಿರೊದು
ಅಂತಾ ಸ್ಥಳದಲ್ಲಿಯಾವೋನು ಬಲಿಕ್ಕೆ ಸಾಧ್ಯವಿಲ್ಲ.
ಇವುಳೇ ಎಲ್ಲಾದ್ರೂ ಕಾಡಿನಲ್ಲೋಗಿ
ಎಲ್ಲಾದ್ರು ಪ್ರವೇಶ ಮಾಡಿ
ಎರಡು ಮಲ್ಲಿಗೆ ಹೂವಿನ ತೂಕ ಆಗಿರಬೌದು
ಎರಡು ಮಲ್ಲಿಗೆ ಹೂವಿನ ತೂಕ ಆಗಿದ್ರೆ
ಅವಳು ನನಗೆ ಮಗಳಲ್ಲ ಅಂಗಿದ್ಮೇಲೆ
ಕಣ್ ಕಟ್ಟಿ ಕಾಡಿಗ್ ಬಿಟ್ ಬಿಡ್ರಿ ಅವ್ಳನ
ಅಂತ ರಾಜ ಅಪ್ಪಣೆ ಮಾಡ್ದ
ಅಪ್ಪಣೆ ಮಾಡ್ತಿದ್ದಂಗೇನೆ
ಬೆಳಿಗ್ಗೆ ಎದ್ದು ಕಾಡಿಗ್ ಬಿಟ್ಟುಬರಾಕೆ
ಎಲ್ಲ ರೆಡಿಮಾಡ್ತಿದ್ರು
ಅವತ್ತು ರಾತ್ರಿ ಶ್ರೀಕೃಷ್ಣ ಪರಮಾತ್ಮ ಮೇಲ್ ಮಾಡಿಗೆ ಬಂದ
ಮಹಾಲಕ್ಷ್ಮಿ
ನೊಡಿದೋ ನಿಮ್ಮಪ್ಪ ಮಾಡೋಕೆಲಸ
ಕಣ್ ಕಟ್ಟಿ ಕಾಡಿಗ್ ಬಿಡಾಕೆ ರಡಿ ಮಾಡವುನೆ
ಅಂದ ಶ್ರೀಕೃಷ್ಣ
ಹೌದು ಸ್ವಾಮಿ
ಅವರೆಲ್ಲು ರಡಿ ಮಾಡಿ ನಿನ್ನ ಕೆಳಗಿಳಿಸ್ಕಂಡು
ಹೋಗೋವರಗು ಸುಮ್ನೆ ಇರು
ಕೆಳಗಿಳಿಸ್ಕಂಡು ಹೋದ್ಮೇಲೆ
ದಾದೇರಿಗೆ ಹೇಳು
ನಮ್ಮಪ್ಪಾಜಿ ಹತ್ರ ಒಂದು ಮಾತೈತೆ
ಆಡಿ ಬರ್ತೀನಿ ಬಿಡ್ರಿ ಅನ್ನು
ಬಿಟ್ಟು ಬಿಡ್ತಾರೆ
ಹೋಗು,
ತಂದೆ
ಮೇಲ್ ಮಾಡಿ ಮೇಲೆ ನಾನಿರಾದು
ಅರಮನೆ ಸುತ್ತ ಬಿಸಗತ್ತಿಪಾರ ಕಾವುಲು

ಯಾರು ಬಂದಿರಲಿಲ್ಲ
ನಾನಿರೋ ಸ್ಥಳಕ್ಕೆ ವಾಸಮಾಡೋಕೆ ?
ಯಾರೂ ಬಂದಿದ್ರು
ದೈವಮಾಯದಿಂದ ನಾನು ಗರ್ಭಿಣಿ ಆಗಿರಬೌದು
ಇದು ನಿಮಗೆ ಗೊತ್ತಾಗದಿದ್ದರೆ
ಗೋವರ್ಧನ ಗಿರಿಯೆಂಬ ಕಾಡಿನಲ್ಲಿ
ವಿಷ್ಣುವಿನ ದನಗಳಿವೆ
ಸೂಲಾಗಿಲ್ಲದ
ಹಸುವಿನ ಪಡ್ಡೆ ಹಿಡಕಂಡು ಬರ್ರಿ
ಮೂಗು ಹಸುವಿನ ಪಡ್ಡೇನೆ
ಹಿಡಕಬಂದು
ಮೈತೊಳದು ಅರಿಶಿಣ ಕುಂಕುಮ ಇಟ್ಟು
ಪೂಜೆ ಮಾಡಿ
ನನಗ್ಯಾವ ರೀತಿ ಮಾಡ್ತಿದ್ರೊ
ಊರಾಗಿರೋ ಜನ ಎಲ್ಲ
ಗೋವರ್ಧನ ಗಿರಿ ಬೆಟ್ಟದಲ್ಲಿರೋ
ದನ ಹಿಡಿಯೋದಿಕ್ಕೆ ಬೇಕಾದಷ್ಟು ಪಾಟು ಬಿದ್ರು
ಸಿಕ್ಕಲಿಲ್ಲ ನರಮನಸರ ಕೈಗೆ
ಊರು ಮುಂದೆ ಬಡವುನ ಮಗನಾಗಿ
ಹುಟ್ಟಿದ್ನಲ್ಲ ಶ್ರೀಕೃಷ್ಣ
ತಾನೇ ಬಂದು ನಾನು ಹಿಡಕಂಬತ್ತಿನ ಮಾವ ಅಂತ
ಒಪ್ಪಗಂಬಿಟ್ಟ ದೊರೆ ಮುಂದೆ
ಸರಿ,
ಇವುನು ನನ್ನ ಮಗಳ ಗಂಡ
ಅಂಬೋದು ಗೊತ್ತಿಲ್ಲ ರಾಜನಿಗೆ
ಹಿಡಕಂಬತ್ತಿನ ಮಾವ ಅಂದ
ಹೋಗಪ್ಪ ಅಂದ
ಹಿಡಕಂಬಂದ್ರೆ ನನಗೇನು ಕೊಡ್ತೀಯ
ನನ್ನ ಮಗಳ್ನ ಕೊಟ್ಟು ಮದುವೆ ಮಾಡ್ತೀನಪ್ಪಾ



ಹಾ,
ಇದು ಒಳ್ಳೆ ಮೇಲು ಅಂತೇಳ್ಬಿಟ್ಟು ಶ್ರೀಕೃಷ್ಣ
ಸರಿ ಹೋಗಿಬಿಟ್ಟು ಗೋವರ್ಧನ ಗಿರಿ ಕಾಡಿಗೆ
ಹೋಗಿಬಿಟ್ಟು ಅವನಿಗ್ಯಾವುದುಬೇಕೋ ಅದನ್ನ
ಸೂಲಾಗಿಲ್ಲದ ಹಸುವಿನ ಕರುವ ಹಿಡಕಂಡು ಬಂದ
ಹಿಡಕಂಬಂದು ಕೊಟ್ಟ
ಇವರ ಕೈಗೆ ಕೊಡುತ್ತಿದ್ದಂಗೆ
ಸರಿ,
ಮೈತೊಳೆದು ಅರಿಶಿನ ಕುಂಕುಮ ಇಟ್ಟು
ಪೂಜೆ ಮಾಡಿದ್ರು
ಪೂಜೆ ಮಾಡಿ ಸಿಂತೋಳಿಗಿಟ್ರು
ಒಂದೇ ಒಂದು ಮಲ್ಲಿಗೆ ಹೂವಿನ ತೂಕಕ್ಕಿತ್ತು ಅದು
ಹಸುವಿನಕರ
ಅವಾಗ
ಮೂರು ತಿಂಗಳಿಗಾಗುವಷ್ಟು ಹುಲ್ಲು
ನೀರು ಹಾಕಿಬಿಟ್ರು
ನೆಲಮಾಳಿಗೆಯಲ್ಲಿ ಹಾಕಿಬಿಟ್ಟು ಮುಚ್ಚಳಿಕೆ ಹಾಕಿಬಿಟ್ರು ॥

ಗರ್ಭಿಣಿಯಾಯಿತಣ್ಣ
ಹಸುವಿನ ಕರುವಣ್ಣ
ಹರಿಹರನೇ
ಶಂಕರನೇ
ಶಿವನೆ
ಗರ್ಭಿಣಿಯಾಯಿತಣ್ಣಾ
ಹಸುವಿನಾ ಕರುವಣ್ಣಾ
ಹರಹರನೇ ಶಿವುನೆ ಶಂಕರನೆಲ್ಲ
ಬೆಳಗಾಯಿತು ಸ್ವಾಮಿ
ಮೂರು ತಿಂಗಳಾಯಿತು
ಈಚೆಗೆ ತೆಗುದಾರಯ್ಯೋ
ಅದನ್ನು ಮೈತೊಳೆದು
ಅರಿಶಿನ ಕುಂಕುಮ ಇಟ್ಟು
ಪೂಜೆ ಮಾಡಿ
ಸಿಂತೋಳಿಗಿಟ್ಟಾರಣ್ಣ ಗಳಿಗ್ಯಾಗೋ ॥

ಸಿಂತೋಳಿಗಿಟ್ಟಾರಣ್ಣ
ಅವಾಗ ಎರಡು ಮಲ್ಲಿಗೆ
ಹೂವಿನ ತೂಕವಿತ್ತಣ್ಣ
ಹಸುವಿನ ಕರುವಿಗಯ್ಯಾ
ಎರಡು ಮಲ್ಲಿಗೆ ಹೂವಿನ ತೂಕ
ಇರುವುದಣ್ಣ ಹಸುವಿನ ಕರುಗಳಿಗ್ಯಾಗೋ ॥

ಆಗಲೇ ಲಕ್ಷ್ಮೀನು
ಈ ಹಸುವಿನ ಕರುವನ್ನು
ಸುಖವಾಗಿ ಸಾಕಿರೆಂದು
ಹೇಳಿದನೋ
ಗೋವರ್ಧನ ಗಿರಿಯ ಮಹಾರಾಜ ಗಳಿಗ್ಯಾಗೋ ॥

ಹೇಳುತ್ತಿದ್ದಂಗೆ
ಸುಖವಾಗಿ ಸಾಕುತ್ತಿದ್ದಾರೋ
ಆರುಮೂರೊಂಬತ್ತು
ತಿಂಗುಳು ತುಂಬಿತು ಸ್ವಾಮಿ

ಆರುಮೂರೊಂಬತ್ತು
ತಿಂಗುಳು ತುಂಬುತ್ತಿದ್ದಂಗೆ
ನವಮಾಸೊಂಬತ್ತು
ತಿಂಗುಳು ತುಂಬೋದಣ್ಣ
ಅಷ್ಟೊತ್ತಿಗೆ ಸೋಮಾರದು ದಿನವಯ್ಯ
ಸಾಯಂಕಾಲ ಶಂಕರನೆ
ಹಸುವಿನ ಕರುವೊಂದು
ಗಂಡು ಮಗುವನ್ನು
ಹಡಿಯೊದೊ ಸ್ವಾಮಿ ಗಳಿಗಾಗೋ ॥
ಸಿಕ್ಕಮನೆ ಹಿಟ್ನೊತ್ತು ಅಂಬೋ
ಎಷ್ಟೋತ್ತಿನಾಗ ಮಹಾಲಕ್ಷ್ಮಿ
ಒಂದು ಗಂಡು ಮಗುವನ್ನು ಹಡಿದಾಳಣ್ಣ ಗಳಿಗಾಗೋ ॥

ಸಂಜೆ ಉಂಬೊತ್ತಿಗೆ ಹುಟ್ಟಿದೋನಿಕೆ ಸನ್ಮುತ್ತಿ ಎಂದು
ಹೆಸರಿಟ್ಟರು ಶಂಕರನೆ
ಸಿಕ್ಕಮಾನೆ ಹಿಟ್ನೊತ್ತಿಗೆ
ಹುಟ್ಟಿದನಲ್ಲಾ
ಮಹಾಲಕ್ಷಿ ಮಗುವಿಗೆ
ಸಿಕ್ಕಮುತ್ತಿ ಎಂದು
ಹೆಸರಿಟ್ಟರಯ್ಯೋ ಗಳಿಗಾಗೋ ॥

ಕೆಲವಾರು ದಿನುಗಳು ಕಳಿದೀತಣ್ಣ
ಒಂದು ವರ್ಷವಾಯಿತು ಮೇಲೆ ಸಿಕ್ಕಮುತ್ತಿ
ಸನ್ಮುತ್ತಿ ಅಂಬೋ ಮಕ್ಕಳು ಹುಟ್ಟಿ
ಒಂದು ವರ್ಷವಾಗುತ್ತಿದ್ದಂಗೇ

ತಿರುಗಿ ಗರ್ಭಿಣಿ ಅದರಯ್ಯಾ
ಮಹಾಲಕ್ಷ್ಮಿ ಹಸುವಿನ ಕರುವುಗಳಿಗಾಗೋ ||

ಗರಬು ಗರ್ಭಿಣಿಯಾಗಿ
ಕೆಲವಾರು ದಿನಗಳು ಕಳಿಯುತ್ತುಲೆ

ಹಸಿವಿನ ಕರುವು
ಒಂದು ಹೆಣ್ಣು ಮಗನ ಹಡೀತು
ಮಹಾಲಕ್ಷ್ಮೀನು
ಒಂದು ಹೆಣ್ಣು ಮಗನ ಹಡುದ್ಲು
ಅವು ಪ್ರಾಯಕ್ಕೆ ಬರೋವರಿಗೂ ಸಾಕಿದ್ರು
ಪ್ರಾಯಕ್ಕೆ ಬರೋವರೆಗೂ ಸಾಕಿ
ಪ್ರಾಯ ಸಮರ್ಥರಾದ ಮೇಲೆ
ಆ ಮಕ್ಕಳಿಗೆ ಮದುವೆ ಮಾಡಿದುರು
ಹಸುವಿನ ಕರೀನ ಮಗಳ್ನ
ಲಕ್ಷ್ಮಿ ಮಗ್ಗೆ ಮದ್ವೆ ಮಾಡಿದ್ರು
ಲಕ್ಷ್ಮೀ ಮಗಳ್ನ ಹಸುವಿನಕರು
ಮಗಂಗೆ ಮದ್ವೆ ಮಾಡಿದ್ರು
ಅವರಿಬ್ಬರಿಗೆ ಗೋವಿಂದು ಬೆರಕೆ ಮಾಡಿದ್ರು
ಬೆರಕೆ ಮಾಡಿ ಸಿಕ್ಕುಮುತ್ತಿ ಸನ್ಮುತ್ತಿ
ಎಂಬ ಮಕ್ಕಳಿಗೆ ಮದುವೆ ಆಗ್ತಿದ್ದಂಗೆ
ಸರಿ ಸಿತ್ತುರುದೇವುರು ಕಾಟಮುದೇವುರು ಬಂದು
ಮಹಾರಾಜನಿಗೆ ಕೇಳಿದರು
ಅಯ್ಯ,
ಗೋವರ್ಧನಗಿರಿ ಮಹಾರಾಜ
ನಮಗೆ ಪೂಜೆ ಮಾಡದಕ್ಕೆ ಪೂಜಾರಪ್ಪಿಲ್ಲ
ಅಂತ ಶ್ರೇಷ್ಠವಾದ ಮಕ್ಕಳಾರೂ ಇಲ್ಲ
ನಿನ್ನ ಮನೆವೊಳಿಗೆ ಸಿಕ್ಕುಮುತ್ತಿ ಸನ್ಮುತ್ತಿ
ಹಸುವಿನ ಕರುವಿನ ಹೊಟ್ಟೆಯೊಳಗೆ ಹುಟ್ಟರಲ್ಲಾ
ಅವರೇ ಶ್ರೇಷ್ಠವಾದ ಮಕ್ಕಳು

ಅವರ್ನ ಪೂಜೆ ಮಾಡದಕ್ಕೆ
ಕಳಿಸಿ ಬಿಡಬೇಕು ನಮ್ಮಿಂದೆ ಅಂತ ಕೇಳ್ಕಂಡ್ರು
ಸರಿ ಆಗಲಿ ಸ್ವಾಮಿ
ದೇವುತುರೆ ಬಂದು ಕೇಳಿದಾಗ
ನಾವು ಕಳಸಲ್ಲ ಅಂಬೋದಕ್ಕೆ ಸಾಧ್ಯವೇನು ಸ್ವಾಮಿ
ಅಂತೇಳಿ ಸಿಕ್ಕುಮುತ್ತಿ ಸನ್ಮುತ್ತಿನ
ಸಿತ್ತುರು ದೇವರು ಕಾಟುಮು
ದೇವುರು ಹಿಂದೆ ಕಳಿಸಿದ ಮಹಾರಾಜ ॥

ಆ ಮಕ್ಕಳ್ನ ಕರಕಂಡು
ಸಿತ್ತುರು ದೇವುರು ಕಾಟಮು ದೇವರು
ಸಿತ್ತನಗಿರಿಯೆಂಬ ಕಾಡಿಗೋಗಿ ಅಲ್ಲಿ ಬಂಗಾರದ ಗೊಡಗು
ಬಂಗಾರದ ಗೊಡಗಿಗೆ ಸುತ್ತ
ಕಾರೇ ಮುಳ್ಳು ಕವಳೇ ಮುಳ್ಳು ಹಾಕಿ ಬೇಲಿ ತಿರುವಿ
ಸರಿ ಎರಡು ಗುಡಿಸಲು ಕಟ್ಟಿಗೆಂಡು
ಸಣ್ಣೇರು ಗೊಲ್ರೋನು ಸಣ್ಣಮುತ್ತಿ
ಸರಿ ಸಿಕ್ಕುಮುತ್ತಿ ಎಂಬಾನು ಕಲ್ಡೇರು ಗೊಲ್ರೋನು
ಸಿತ್ರುದೇವುರು ಕಾಟುಮುಲಿಂಗನ್ನ
ಎರಡು ಕಟ್ಟೆ ಮನೆ ಮಾಡಿಕಂಡ್ರು
ಕಾಟುಮುಲಿಂಗನ
ಕಟ್ಟೇಮನೆ ಸಣ್ಣೇರು ಗೊಲ್ಲರೋನದು
ಸರಿ ಸಿತ್ತುರುದೇವುರು ಕಟ್ಟೇಮನೆ
ಕಲ್ಡೇರು ಗೊಲ್ದುರೋನ್ದು
ಸರಿ
ಕಟ್ಟೆ ಮನೆಗಳು ಮಾಡಿಕಂಡು
ಅವರು ಕೆಲುವಾರು ದಿನ ಕಾಲ ಕಳೀತಿದ್ರು ॥

ಕಾಲ ಕಳೆಯುತಲಿರುವಾಗ
ದೇವುರು ಕೃಪೆಯಿಂದ
ಕೆಲವಾರು ದಿನಗಳು

ಕಳೆದರೂ ಶಂಕರನೆ
ಅವುರಿಬ್ಬರಿಂದ
ನಮ್ಮ ಗೊಲ್ಲರ ಕುಲ
ಬೆಳೆದೆಯಿಯ್ಯೋಗಳಿಗಾಗೋ ॥

ಗೋವಿನೊಟ್ಟೆವೊಳಗೆ
ಹುಟ್ಟಿದ ಕಾಗಾಲೆ
ಕುಲುವಣ್ಣ ನಮ್ದಯ್ಯ
ಗೊಲ್ಲೋರು ಅಂಬಾ
ನಂದುನು ಗೋಕುಲವಣ್ಣ
ಆವಾಗ ಬೆಳಿದಿತಯ್ಯೋಗಳಿಗಾಗೋ ॥

ಬೆಳೆದೋಗುತ್ತಿದ್ದಂಗೆ
ದೇವರು ಕೃಪೆಯಿಂದ
ಹರಹರನೆ ಶಂಕರನೆ
ಅಂತಂಬಗಳಿಗೇಒಳುಗೆ
ಕಲ್ಡೇರು ಗೊಲ್ಲರು ಒಳಗೆ
ಎಲ್ದುಬೆಡಗು ಮಾಡಿಕಂಡಿರಣ್ಣ ಗಳಿಗಾಗೋ ॥

ಮಹರಾಜನತ್ರ
ಬಾಳೆತ್ತಿನುದಂಡಕಾಗಿ
ಅಣ್ಣ ತಮ್ಮಗಳಿಬ್ಬರು
ಅಣ್ಣ ಆಗಿದ್ದವುನು
ಆಗನೆ ತಾಳಿಕೊಟ್ಟನು ಸ್ವಾಮಿ ದಂಡಕ್ಕೆ
ಆಗಲೆ ತಮ್ಮಾ ಆಗಿದ್ದವುನು
ತಾಳಿ ಬಿಚ್ಚಿಕೊಡುಲಿಲ್ಲ
ಆವಾಗ ಭಗುವಂತ
ಇವನು ಮಾತಿಗೂ ತಪ್ಪದೋನು
ಮಾರ್ನಾರು ಗೊಲ್ಲರೋನು
ಅಂದು

ಹೆಸರಿಟ್ಟನವುನೀಗೆ
ಕಟ್ಟೆಕಟ್ಟಾಲೊಯ್ದಾರೋ
ಹಾಲೂ ಕಲಿಯಾಲಿಲ್ಲ
ಕಲ್ಡೇರು ಗೊಲ್ರೀಗೂ
ಮಾರ್ನಾರು ಗೊಲ್ರೀಗೂ
ಕಳೆಯದಂತಾಯಿತಯೋ ಗಳಿಗಾಗೋ ||

ಆವಾಗ ಇವುರ್ದೆ
ಒಂದು ಕುಲುವಾಗೀತೋ
ಅವುರದ್ದೇ ಒಂದು ಕುಲುವಾಗೀತೋ
ಸಿತ್ತುರು ದೇವುರುನ
ಇಬ್ಬರು ಅಣ್ಣ ತಮ್ಮಗಳು
ಅರ್ಧರ್ಧ ಭಾಗ ಮಾಡಿಕೊಂಡರು
ಪೂಜೆ ಮಾಡದುಕೆ ಗಳಿಗಾಗೋ ||

ಪೂಜೆನೆ ಮಾಡದುಕೆ
ಭಾಗಾಮಾಡಿಕಂಡಾರು
ಕೆಲುವಾರು ದಿನಗಳು
ಕಳೆದೋಯಿತು ಶಂಕರನೆ
ಅವರೊಟ್ಟೆವಳಗಣ್ಣ
ದ್ಯಾವುರು ದೈಮಾರನೆಂಬ ಒಬ್ಬ
ಮಗನುಟ್ಟಿದನಯ್ಯೋ ಗಳಿಗಾಗೋ ||

ದ್ಯಾವುರುದೈಮಾರುನಿಗೆ
ಇಬ್ಬರು ಗಂಡು ಮಕ್ಕಳುಟ್ಟಿದರು ಸ್ವಾಮಿ
ದ್ಯಾವುರು ದೈಮಾರುನಿಗೆ
ಇಬ್ಬರು ಗಂಡು ಮಕ್ಕಳುಟ್ಟಿದುರಣ್ಣ
ಅವರೀಗೆ ಕರಿಯಲ್ಲಿ ಕೆಂಪಲ್ಲಿ
ಎಂದು ಹೆಸರಿಟ್ಟರು ಶಂಕರನೆ ಗಳಿಗಾಗೋ ||

ಹೆಸರಿಟ್ಟರು ಶಂಕರನೆಗೆ
ಅವರಿಗೇಳು ಜನ
ಗಂಡು ಮಕ್ಕಳುಟ್ಟಿದರಣ್ಣ ಗಳಿಗಾಗೋ ॥

ಕರಿಯಲ್ಲಿ ಅಂಬೊನಿಗೆ
ಒಬ್ಬನೆ ಮಗುನಣ್ಣ
ಕೆಂಪಲ್ಲಿ ಅಂಬೊನಿಗೆ
*ಆರು ಜನ ಗಂಡುಮಕ್ಕಾಳು*
*ಆ*ಗಾಲೆ ಸಣ್ಣಸಾಲೆದಟ್ಟೇನು
ಶಿವುಸಾಲೆ ದಟ್ಟೇನು ಪಟ್ಟೆದಟ್ಟೇನೆಂದು
ಆರು ಜನ ಗಂಡು ಮಕ್ಕಳಣ್ಣ
ಕರಿಯಲ್ಲಿ ಎಂಬೂನಿಗೆ
ಮಾರು ಮುತ್ತಣ್ಣನೆಂಬ
ಒಬ್ಬನೆ ಮಗುನಯ್ಯೋ ಗಳಿಗಾಗೋ ॥

ಕೆಂಪಲ್ಲಿ ಅಂಬೊನಿಗೆ
ಆರು ಜನ ಗಂಡುಮಕ್ಕಾಳೋ
ಕರಿಯಲ್ಲಿ ಅಂಬೋನಿಗೆ
ಮಾರುಮುತ್ತಣ್ಣನೆಂಬ
ಒಬ್ಬನೇ ಮಗನಯ್ಯೋ ಗಳಿಗಾಗೋ ॥

ಒಬ್ಬಾ ಮಗನನ್ನ
ಕಾಡಿನೊಳಗಣ್ಣ
ನೂರಾರು ದನಗುಳುನ
ಆಳಿದ್ದರವುರಣ್ಣ
ದನಗುಳುನ ಕಾಯೋದಿಕೆ
ಮಾರುಮುತ್ತಣ್ಣನ್ನು
ಕಾಡಿಗಾಕ್ಯವುರಯ್ಯೋ ಗಳಿಗಾಗೋ ॥

ಇನ್ನಾರು ಜನ
ಒಬ್ಬ ತಂದೆ ಮಕ್ಕುಳಣ್ಣ
ಮನೆಯೊಳಗಿರುವರಣ್ಣ

ಕೆಂಪಲ್ಲಿ ಎಂಬೋನು ಮಕ್ಕೊಳು
ಆರು ಜನ ಶಂಕರನೆ
ಸಣ್ಣಸಾಲೆದಟ್ಟೆನೂ
ಸಿಕ್ಕಸಾಲೆ ದಟ್ಟೇನೂ
ಪಟ್ಟೆದಟ್ಟೇನಣ್ಣ
ಆಗಲೆ ಶಂಕರನೆ
ಕೆಂಪಲ್ಲಿ ಅಂಬಜ್ಜನ ಮಕ್ಕಳಯ್ಯೋ ॥

ಅವರು ಮನೆಯೊಳಗಿದ್ದ
ಆರು ಜನಕೆ
ಮದುವೆನೆ ಮಾಡಿದುರಯ್ಯಾ
ಮದುವೆನೆ ಮಾಡಿದರೋ
ವಂಶ ವೆ ಬೆಳೀಲಿಲ್ಲಣ್ಣ
ಆರು ಜನುಕ್ಕಯ್ಯ
ವಂಶಾವೆ ಬೆಳದಿಲ್ಲವಯ್ಯೋ
ಮದುವೆ ಆದರೂ ಕೂಡ ಗಳಿಗಾಗೋ ॥



ಆವೊಬ್ಬ ಮಗುನಣ್ಣ
ಕರಿಯಲ್ಲಿ ಅಂಬೊ ಅಜ್ಜನ ಮಗುನಣ್ಣ
ಆ ಮಾರುಮುತ್ತಣ್ಣ ಎಂಬೂನು
ಕಾಡಿನೊಳು ಗೆಲ್ಲಯ್ಯೋ
ದನಗಳು ಕಾಯಿಕೊಂಡು
ಗೆಡ್ಡೆಗೆಣಸುಗುಳು
ಹಣ್ಣುಹಂಪಲು ತಿಂದಕಂಡು
ಕಾಡಿನೊಳಗಿದ್ದಾನು
ಕಾಗಾಲೆ ಕರಿಯಲ್ಲಿ ಅಂಬ ಅಜ್ಜುನ ಮಗನಯ್ಯ
ಕಾಡಿನೊಳುಗಿದ್ದನು
ಗೌರಸಂದ್ರದ ಮಾರಮ್ಮನ
ಕಣಿಯನ್ನ ಕೇಳದಿಕೆ
ಹೋಗೋರು ಸ್ವಾಮಿ ಗಳಿಗಾಗೋ ||

ಗೌರಸಂದ್ರದು ಮಾರಿಗೆ
ಕಣಿಯನ್ನು ಕೇಳುವಾಗ
ಆಯಮ್ಮಳುತಾಳೆ
ಕೇಳಿರಲೆ ದಗಡಿ ಮಕ್ಕಳಿರಾ
ದ್ಯಾವುರು ದೈಮಾರುನೆಂಬ
ಅಜ್ಜನು ಹೊಟ್ಟೆ ಒಳಗೆ
ಕರಿಯಲ್ಲಿ ಕೆಂಪಲ್ಲಿ ಎಂಬೋ
ಇಬುರಜ್ಜಗಳುಟಿಟದುರಲ್ಲಿ
ಕರಿಯಲ್ಲಿ ಅಂಬೊನಿಗೆ
ಒಬ್ಬನೆ ಮಗುನಲ್ಲ
ಕೆಂಪಲ್ಲಿ ಎಂಬೂನಿಗೆ
ನೀವು ಆರು ಜನ ಗಂಡು ಮಕ್ಕಳು
ಆವಾಗ ಕೇಳೀರಣ್ಣ
ಧರಣೇನೆ ಮೇಲೀಗ

ಕರಿಯಲ್ಲಿ ಅಂಬ ಅಜ್ಜನು ಮಗನೀಗೆ
ಮಾರುಮುತ್ತಣನಿಗೆ
ಮದುವೆನೆ ಮಾಡಿದುರೆ
ನಿಮ್ಮ ವಂಶ ಬೆಳಿತೈತೆಂದು
ಗೌರಸಂದ್ರುದಮಾರಮ್ಮಾ
ಹೇಳಿದುಳಯ್ಯೊ ಗಳಿಗಾಗೋ ॥

ಅವಾಗ ಆಗಲೇಳಮ್ಮ ತಾಯಿ
ಮದುವೆನೆ
ಮಾಡುತೀವಿ ನನ್ನ ತಮ್ಮನಿಗೆ ಅಂದೇಳಿ
ಪಟ್ಟಕು ಕೈಕೊಟ್ಟು
ಅಂದೋರೆ ಬಂದರಣ್ಣ
ಬರುವಾಗ ಭಗುವಂತೋ
ಮದಿವೇ ಮಾಡುತೀವಂದು
ಒಪ್ಪಿಗಂಡು ಅವರೂರಿಗೆ ಬರುವಾಗ
ಅವುರ ತಾತ
ದ್ಯಾವುರು ದೈಮಾರನೆಂಬೋ
ಒಬ್ಬ ಅಜ್ಜಿದ್ದನಣ್ಣ ಗಳಿಗಾಗೋ ॥

ಆ ದ್ಯಾವುರು ದೈಮಾರೂನೂ
ದೇವರು ಕರಣುದಿಂದ
ಜೀವ ಬಿಟ್ಟಾನಣ್ಣ ಆವಜ್ಜ ಗಳಿಗಾಗೋ ॥

ದ್ಯಾವುರು ದೈಮಾರುನೆಂಬ ತಾತ
ಸತ್ತು ಹೋದನು ಶಂಕರನೆ
ಅವನು ಸತ್ತದಕ್ಕೆ ಸೂತಕ ಸಂಬಂಧ
ಕಳಕಂಬುದಕ್ಕೆ ಏರ್ಪಾಟು ಮಾಡುವಾಗ
ಸಿತ್ತುರು ದೇವುರಣ್ಣ
ಕಾಟುಮುಲಿಂಗನಮ್ಮ
ಏನೆಂದು ಹೇಳಾರೂ ಗಳಿಗಾಗೋ ॥

ಆ ದ್ಯಾವುರು ದೈಮಾರುನ್ನ
ಊಣಾಕಬ್ಯಾಡಿರೋ ಕಂದಮ್ಮ
ಆಗಲೆ ತಳುಕಿನ ಗುಡ್ಡುಕ್ಕೆ ಹೊತ್ತಕಂಡು ಹೋಗಿ
ಗುಂಡಿನೊಳಗೆ ಒಂದು
ಬಂಡೆ ಮೇಲಾಕಿ
ಅರೆಯಬೇಕಣ್ಣ ಗಳಿಗಾಗೋ ॥

ಅರೆದೋರು ಅವನ ಎದೆಯೊಳಗೆ
ನೆಣವೆ ಕರಗಿ ಹಾಲೂಗಿಬರುತೈತಣ್ಣ
ಆ ಹಾಲು ತಂದು
ದನಿನ ಮೇಲೆ ಕುರಿ ಮೇಲೆ
ಚೆಲ್ಲಿದುರೆ ಕೇಳಣ್ಣ
ಜನಿಗೆ ಕುರಿಗಾಳಂದು
ಹೆಸುರಾಗುತೈತ್ತಯ್ಯೊ
ಬಾಣಂತೇರು ಹೆತ್ತಾಗ
ಮೂರು ತಿಂಗಳು ಸೂತಗ ಕಳಕಂಡು
ದೇವಸ್ಥಾನದೊಳಿಕೆ ಕರಕಂಬುವಾಗ
ಆ ಜನಿಗೆ ದನುಗಳಾಲು ಗಂಜಾಗುಲಿ
ಜನಿಗೆ ಕುರಿಗಳಾಲು ಗಂಜಾಗಲಿ ತಂದು
ಕುಡಿಸಿದರೆ ಬಾಣತಿಗೆ
ಸೂತಗನೆ ಹರಿತೈತಣ್ಣಾ
ಜನಿಗೆ ಹರಿತೈತಯ್ಯಾ
ಅಷ್ಟೊಂದು ಮಾಡಿರೆಂದು
ಸಿತ್ತುರುದೇವುರು
ದ್ಯಾವುರು ದೈಮಾರಜ್ಜನಿಗೆ ಅಂತ ಹೆಸರಾಗುತೈತಣ್ಣಾ
ಅಷ್ಟು ಕೆಲಸಮಾಡಿರಿ ಕಂದಮ್ಮ ಎಂದು
ಮಕ್ಕಳು ಆರು ಜನಕೆ ಹೇಳ್ಯಾರೋ
ಆಗನೆ ಶಿವನೆ ಕರುಣದಿಂದ
ಸ್ವಾಮೀನೆ ಗಳುಗೆವೊಳಗೆ

ತಳುಕಿನ ಗುಡ್ಡಕೆ
ಹೊತಗಂಡು ಹೋಗೋರಣ್ಣ
ಸತ್ತನೆ ಹೆಣುವನ್ನು
ದ್ಯಾವುರು ದೈಮಾರುನ್ನ
ತಳುಕಿನ ಗುಡ್ಡದಾಗೆ
ಅರುದಾರೈಯೋ ಗಳಿಗಾಗೋ ॥

ಅರದು ಹಾಲು ತಗುದು
ತಂದರು ಭಗವಂತ
ಏಳು ದನಗಳು ಮ್ಯಾಲೆ
ಏಳು ಕುರಿಗಳ ಮ್ಯಾಲೆ
ದ್ಯಾವುರು ದೈಮಾರನ್ನ ಎದೆಯಾಗುಳ
ನೆಣವ ಎರುಕಿಸ್ಯಾರೋ
ಆವಾಗ ಜನಿಗೆ ಕುರಿಗಾಳೋ
ದನಗಳೆಂಬ ಜನಿಗೆ
ಹೆಸರಾಯಿತಣ್ಣ
ದ್ಯಾವುರು ದೈಮಾರಜ್ಜನಿಗೆಯ್ಯೋ ॥

ಅಂತಂಬುಗಳಿಗೆ ವಳಿಗೆ
ಜನಿಗೆನೆ ಕಳಿದೀತು ಸ್ವಾಮಿ
ಕಾಲವೆ ಮೀರಿತಣ್ಣ
ಆವಾಗ ಗೊಲ್ದುರಿಗೆಲ್ಲಾ
ಜನಿಗೆ ಬಂದೀತಣ್ಣ ಗಳಿಗಾಗೋ ॥

ಜನಿಗೇನೆ ಆಗುತ್ಲೆ
ದಿನುವೇನೆ ಕಳಿಯೋದಮ್ಮ
ಕಾಲವೇ ಮೀರಿತಯೋ
ಒಂದಾನೊಂದು ದಿನ
ಆಗಲೆ ಈವುನಿಗೂ ಒಂದು ದಿನ
ಮದುವೆ ಮಾಡಬೇಕೆಂದು
ಮಾರುಮುತ್ತೆಣ್ಣ

ದನ ಕಾಯ್ಕಂಡಿದ್ದವನಿಗೆ
ಅವರು ಆರುಜನ ಅಣ್ಣಗಳು
ಅರಣ್ಯಕೆ ಹೋಗೆವುರೆ
ದನಗಳು ರೊಪ್ಪದು ಮುಂದೆ
ಕೈಜೋಡಿಸಿ ನಿಂತಾರೋ ಅವುರ ತಮ್ಮನಿಗೆ
ತಲೆಯೆತ್ತಿ ನೋಡಿದರೋ
ದ್ಯಾವುರು ದೈಮಾರುನು
ನೋಡುತಲೆ ಅಣ್ಣಯ್ಯವು
ನೀವಿಲ್ಲಿತನಕ ಬಂದ ಕಾರಣವೇನೋ
ಹೇಳಿರೋ ಅಣ್ಣಯ್ಯ
ಅಂದು ಕೇಳಿದನಣ್ಣೋ ಗಳಿಗಾಗೋ ||

ಏನಿಲ್ಲಾ ಕಂದಮ್ಮಾ
ನಮ್ಮಪ್ಪಗುಳು ಕರಿಯಲ್ಲಿ ಕೆಂಪಲ್ಲಿ
ಅಂಬಾ ಅಜ್ಜುಗಳಿಗು ನಾವು
ಆಗಲೆ ನಾವು ಏಳು ಜನ
ಗಂಡು ಮಕ್ಕಳುಟ್ಟಿದಿವಣ್ಣ
ಏಳು ಮರಗಳು ಹುಟ್ಟಿ
ಮರಗಳು ಬಿದ್ದೋದಂಗಾಗುತ್ತೈತಣ್ಣೊ ಗಳಿಗಾಗ್ಯೋ ||

ಮರಹುಟ್ಟಿ ಮರಬಿದ್ದರೆ
*ಫಲವೇನು ಬರುತ್ತೈತೋ ನನಕಂದ*
ನಿನ್ನಗೂ ಮದುವೆ ಮಾಡಿದುರೆ
ನಮಗೆಲ್ಲ ವಂಶ ಬೆಳಿತೈತಂತೆ
ಮದುವೆಯಾಗುತೀಯೇನಪ್ಪ ಅಂದು
ಕೇಳಿದುರು ಸ್ವಾಮಿ ಗಳಿಗಾಗೋ ||

ಅಣ್ಣಯ್ಯ
ಬ್ರಹ್ಮ ನನ್ನಣೇಲಿ
ಲಗ್ನ ಬರೆದಿಲ್ಲ
ನನಗ್ಯಾತ್ಕಪ್ಪ ಮದುವೆ

ನೀವಾಗಿರೋದೇ ಸಾಕು
ನಾನುಟ್ಟಿದುಕೆ ಬೆಳೆದುದುಕೆ
ನರಮನ್ಸರ ಮುಖ ನೋಡದಂತೆ
ಅರಣ್ಯ ಸೇರಕಂಡು ಅರಣ್ಯದಲ್ಲಿದ್ದೀನಿ
ಮದುವೆ ಏನಕ್ಕೆ ಅಣ್ಣಯ್ಯ
ಅಪ್ಪಾ
ನೀನು ಮದುವೆ ಏನಕೆ ಅಂತ ಮಂಡಿಗೆ ನಿಂತರೆ
ಮಕ್ಕಳಾಗಬಾರದೆ ನಮ್ಮ ವಂಶ ಬೆಳೀಬಾರದೆನಯ್ಯಾ
ನಿನ್ನಿಂದ ನಮ್ಮ ವಂಶ ಬೆಳಿಬಾರದೇನೋ ಕಂದಾ
ನೀನು ಮದುವೆ ಆಗೇ ಆಗಬೇಕಪ್ಪ
ಅಂತ
ಮುಷ್ಟಗರ ಹಿಡಿದು ಕುಂತಗಂಡ್ರು
ಮುಷ್ಟಗರ ಹಿಡ್ಡುಕುಂತ್ಗೊಂಬುತ್ತಿದ್ದಂಗೆ
ಹೋಗಪ್ಪ ಸಾವಿರಾರು ಸಭೆವೊಳಗೆ
ನಾನು ಮಾತ್ರ ಒಂದು ಲಗ್ನಕ್ಕೆ ನಿಂತ್ಕಂಬದಿಲ್ಲ
ನನ್ನ ಕೈಯಗೆ ಬಾಕೈತೆ
ಆ ಬಾಕ್ ಕೊಡ್ತೀನಿ
ಆ ಬಾಕ್‌ಗೆ ಹೆಣ್ಣುಪಡೆದು
ನೀವು ದಾರೆಮೂರ್ತ ಮಾಡ್ಕಂಡು ಬರಬೇಕು ಅಷ್ಟೆ
ನಾನು ಮಾತ್ರ ಮದುವೆಗೆ ಬಂದು
ಸಾವಿರಾರು ಜನರ ಮಧ್ಯೆ ನಿಂತಗನದಿಲ್ಲ
ನನಗೆ ನಾಚಿಗೆ ಆಗತೈತೆ
ಕಾಡ್ನಾಗ ಹುಟ್ಟಿ ಕಾಡ್ನಾಗೆ ಬೆಳಕಂಡಿರೋನು ನಾನು
ಗಡ್ಡದಲ್ಲಿ ಗೀಜಗನ ಹಕ್ಕಿ ಗೂಡಿಕ್ಕಾವೆ
ಅವನಿಗೆ ಅರಣ್ಯದಲ್ಲಿ
ಇಂದ್ಗೆಡೆ ಈರ ಜಡೆ ವಾಲಿಬೆಳದುಬಿಟ್ಟವೆ
ಅರಣ್ಯದಲ್ಲಿ ಹಣ್ಣು ಹಂಪಲು ತಿಂದುಕೊಂಡು
ದನ ಕಾಯ್ಕಂಡು ಇದ್ದವನು
ಅದಕ್ಕೆ ನಾಚಿಗೆ ಇಕ್ಕಂಡು ಬರದಿಲ್ಲಾ ಅಂದು ಬುಟ್ಟ ॥

ಹೋಗಲಿ ನಿನ್ನ ಕೈಯಾಗಿರೋ ಬಾಕನ ಕೊಡಯ್ಯ ಅಂತ ಕೇಳಿದ್ರು
ಅದನ್ನ ಕೊಡ್ತೀನಿ ತಗಂಡು ಹೋಗ್ರಿ ಅಂತೇಳಿಬಿಟ್ಟು
ಕಬ್ಬುಣದ ಬಾಕನ್ನ ಕೊಟ್ಟಬಿಟ್ಟ
ಅವರ ಹಿರಿಯಣ್ಣನ ಕೈಗೆ ಪಟ್ಟೆದಟ್ಟೇನು ಕೈಗೆ ॥

ಆಗಲೆ ಶಂಕರನೆ
ಬಾಕಿಗೂ ಮೂರ್ತವ
ಮಾಡ್ತೀವಂದು
ಅವನ ಕೈಯಾಳಗಿದ್ದಂತ
ಕಬ್ಬುಣದ ಬಾಕನ್ನು
ತಂದಾರೊ ಸ್ವಾಮೀಗ
ಆಗಲೆ ತಂದವುರ ಮನೆಯಾಳಗಿಟ್ಟಾರಯ್ಯೋ ಗಳಿಗಾಗೋ ॥

ಗೋವರ್ಧನ ಗಿರಿಯತ್ತುರ ಆಗಲೆ ಸ್ವಾಮಿ
ಸಿತ್ತುನಗಿರಿಯಿಂದ
ಸಿತ್ತುರುನು ದೇವುರಟ್ಟಿಯಿಂದ
ಆಗಾಲೆ ಸ್ವಾಮೀಗ
ಕಾಟುಮುಲಿಂಗನಟ್ಟಿಗೆ
ಹೆಣ್ಣೆಗೋಗಾರಯ್ಯ ಗಳಿಗಾಗೋ ॥

ಸಣ್ಣರು ಗೊಲ್ದುರು
ಹೆಣ್ಣುಮಗಳು
ದೇವುರು ಕರುಣದಿಂದ
ಆ ಸಾತೆಮ್ಮ ಅಂದಿರುವೋಳೋ ಗಳಿಗಾಗೋ ॥

ಸಾತೆಮ್ಮ ಇರುವಳಣ್ಣ
ಸಣ್ಣರು ಗೊಲ್ದುರ ಹೆಣಮಗಳು
ಆಗಲೆ ಕಾಟಮುಲಿಂಗನು ಪೂಜಾರಿ
ಸಣ್ಣುಮುತ್ತಪ್ಪನು ಮಗುಳಯ್ಯೋ
ಹಟ್ಟಿ ಹುದಿ ಬಾಗಿಲಿಗೋಗುತಾಲೆ
ಓಹೋ ಬನ್ನಿರಿ ಮಾವ
ದೂರ ಬಂದೀರಂದು

ಪೂಜಾರಿ ಸಣ್ಣುಮುತ್ತಪ್ಪ
ಮನಿಗೆ ಕರಕಂಡು ಹೋಗಿ
ರತುನು ಗಂಬಳಿ ಗದ್ದಿಗೆ ಹಾಕಿ
ಆಗಲೆ ಶಂಕರನೆ
ಏನಪ್ಪ ಬಂದ ಕಾರುಣುವಂದು
ಕೇಳೋನೋ ಸ್ವಾಮಿಗಳಿಗಾಗೋ ॥

ಏನಿಲ್ಲವಯ್ಯೋ
ಸಣ್ಣಮುತ್ತಪ್ಪ ಮಾವ
ನಮ್ಮನೆ ತಮ್ಮನಿಗೊಂದೆಣ್ಣುಬೇಕಾಗಿತ್ತೊ
ಹೆಣ್ಣಿಗೂ ಬಂದೀವಂದೊ
ಹೇಳಿದರೋ ಸ್ವಾಮಿ ಗಳಿಗಾಗೋ ॥

ಒಳ್ಳೆದು ಕೇಳಿರಣ್ಣಾ
ನಿಮ್ಮಿಗೂ ಶಾಸ್ತ್ರಸಂಬಂಧವೆಲ್ಲ
ಸರಿಯಾಗಿ ಬಂದಾರೆ
ಮಾರ್‍ನೋರು ಗೊಲ್ದೊರು ನೀವಯ್ಯ
ಸನ್ನೊರು ಗೊಲ್ಡುರು ನಾವು
ನಮಗೂ ನಿಮಗೂ ನೆಂಟಸ್ತನವೈತಣ್ಣ
ಶಾಸ್ತ್ರಸಂಬಂಧ ಸರಿಯಾಗಿ ಬಂದರೆಣ್ಣ
ನನ್ನ ಮಗಳು
ಸಾತೆಮ್ಮನ ಕೊಡುತೀನಿ
ಮಾಡಿಕೊಂಡು ಹೋಗಿರಿ ಮಾವ ಅಂದು
ಸಣ್ಣು ಮುತ್ತಪ್ಪ ಹೇಳಿದುನೈಯ್ಯೋ ಗಳಿಗಾಗೋ ॥

ಹೇಳುತಿದ್ದಂಗೆ
ಆಗುಲಿ ಮಾವ ಬರುತೀವಂದೇಳಿ
ಅವತ್ತು ರಾತ್ರಿ ಅವುರ
ಮನೆಯೊಳಗಿರುವರು ಸ್ವಾಮಿ
ಮನೆಯೊಳಗಿದ್ದಿನ್ನ
ಬೆಳಗಾಗುತಲೆ ಎದ್ದು

ಸಿತ್ತುರು ದೇವುರಟ್ಟಿಗೋಗ್ಯಾವುರಯ್ಯ
ಸಿತ್ತುನು ಗಿರಿಗಳಿಗಾಗೋ ॥

ಹೋಗೇನೆ ಭಗುವಂತೋ
ಕೆಲವಾರು ದಿನ ಕಳೆದೀತೋ
ಶಾಸ್ತ್ರಕೇಳದಿಕೆ
ಎಲ್ಲೆಲ್ಲಿಗೋಗು ಬೇಕು ನಾವು
ಆ ಹೆಣ್ಣಾಗಿಬರುತೈತಿಲ್ಲಂತ
ಶಾಸ್ತ್ರ ಕೇಳದಿಕೆ
ಎಲ್ಲಿ ಹೋಗಲಿನಾವಂದು
ಸಿಂತೆ ಮಾಡುತ್ತಿದ್ದಾರೊ ॥

ನಡಿರೊ ಬ್ರಾಹ್ಮಣನೋಗಿ
ಪುರೋಹಿತನ್ನ ಕೇಳಿ ಬರೋಣವೆಂದು ಮಾತಾಡುವಾಗ
ಸಿತ್ತೂರು ದೇವುರು ಹೇಳಿದ
ಲೇ ಆರೂರು ಬತುವ ಅಳುದು
ಅವರ ಮಗಳು ಗಂಗಮಾಳಮ್ಮನ್ನ
ನಾನೇ ಮದುವೆ ಆಗಿದ್ದೀನಿ
ನೀವ್ಯಾಕೆ ಬಾಂಬ್ರ ಹತ್ತರಕೆ
ಪುರೋಹಿತರನ್ನ ಕೇಳಾದಕೆ ಹೋಗ್ತೀರೋ
ಪಂಚಾಂಗ ಕೇಳ ಬ್ಯಾಡಿರೋ ಕಂದಮ್ಮ
ಆಗಲೆ ಬ್ರಾಹ್ಮರ ಮಗಳ ನಾನು ಮದುವೆ ಆಗಿರೋದು
ಬತ್ತ ಹಳೆದಿರೋದಕೆ ನಮ್ಮೇಲೆ ಅವರಿಗೆ ಸಿಟ್ಟೈತಣ್ಣ
ಹೋಗಬ್ಯಾಡ್ರಿ ಬ್ರಾಹ್ಮರತ್ತುರಕೆ ಅವುತ್ತುರಕೆ
ನಾನೇಳಿದಂಗೆ ಮಾಡಿರೆಂದು
ಸಿತ್ತುರು ದೇವುರು ಇವರಿಗೇಳುತಾನೆ ಶಿವುನೀಗೋ

ಅದನೇಳೊ ಸ್ವಾಮಿ
ನೀನೆಂಗೆಳುತ್ತೀರೋ ಅಂಗೆ
ಮಾಡುತ್ತಿವಂದು ಕೇಳುತಾರೋ ಶಂಕರನೆ ॥

ಒಂದು ಚೆಂಬು ನೀರು
ಒಂದು ಬೆಲ್ಲದುಂಡೆ
ಒಂದಿಷ್ಟು ಅಡಿಕೆ
ಒಂದಿಷ್ಟು ವೀಳ್ಯೆದೆಲೆ
ಒಂದಿಷ್ಟು ಅರಿಶಿನ ಕುಂಕುಮ
ಆಗಲೆ ಒಂದಂಗುದಾರ ತಕ್ಕಂಡು
ನಿಮ್ಮೂರು ಹಟ್ಟಿ ಮುಂದುಲು
ಹಳ್ಳದೊಳಗೆ ಒಂದು ಉಗುಣೆ ಗಿಡವೈತೆ
ಆ ಉಗುಣೆ ಗಿಡುದತ್ತುರುಕೆ ಹೋಗಿರಣ್ಣ
ಉಗುಣೆ ಗಿಡುದ ಬುಡಕೆ
ಒಂದು ಚೆಂಬು ನೀರಾಕೆ
ಅರಿಶಿನ ಕುಂಕುಮ ಇಟ್ಟು ಪೂಜೆ ಮಾಡಿ
ಬೆಲ್ದುಂಡೆ ಮುರುದಿಕ್ಕೆ
ಮೂಡುಗಡೆ ಕೊಡುದಿರಾ ಬಳ್ಳಿನೋಡಿ
ಹೊತ್ತುಟ್ಟಕಡಿಕೆ ಒಡೆದಿರುವ ಬಳ್ಳಿ ನೋಡಿರಣ್ಣ
ಅದರ ಕುಡಿಗೆ ಅಂಗದಾರ ಕಟ್ಟಿ
ಮಳಕೊಂದು ಮಳಕೊಂದು
ಮೂರು ಗೆರೆಯನ್ನ ಹಾಕೀರಿ
ನನ್ನ ಪಾದನೆನಸಿ
ಆ ಹೆಣ್ಣಾಗಿ ಬರುವಂಗಿದ್ರೆ
ಸ್ವಾಮಿ ಸಿತ್ತೂರು ದೇವುರೇ
ಬೆಳಕರಿದು ಬರುವುದರಲ್ಲಿ
ಈ ಮೂರುಗೆರೆ ತಡಾದು
ಆಚೆಗೆ ಉಗುಣೆ ಬಳ್ಳಿ ಬೆಳೆದಿರಲಿ
ಹೆಣ್ಣು ನಮಗೆ ಆಗಿ ಬರದಂತೆ ಇದ್ರೆ
ಒಂದಿಷ್ಟೆ ಇಷ್ಟ ಬೆಳೆದು
ಅಲ್ಲೆ ಇರಲಿ ಅಂತ ಶಾಪ ಇಕ್ಕಿ ಬನ್ನಿರಣ್ಣ
ಬೆಳಿಗ್ಗೆ ಉಗುನೆ ಬಳ್ಳಿ ಮೂರುಗೆರೆನು
ತಡಾದು ಆಚೆಗೆ ಬೆಳದಿದ್ದರೆ

ಹೋಗಿ ಹೆಣ್ಣು ಮಾಡಿಕೊಂಡು ಬರ್ರಿ
ಇಲ್ಲದಿದ್ರೆ ಮಾಡಕಂಡು
ಬರಬೇಡ್ರಿ ಅಂದು
ಸಿತ್ತುರು ದೇವುರು
ಬಾಂಬ್ರ ಹತ್ತಿರ ಕಳಸದಂತೆ
ತೀರ್ಮಾನ ಹೇಳಿದನೋ ಶಿವನೀಗೋ ॥

ಆಗಲೆ ಶಂಕರನೆ
ಆವೊತ್ತು ಸಾಯಿನುಕಾಲ
ಒಂದು ಚೆಂಬು ನೀರು
ಬೆಲ್ಲದುಂಡೆ ಅಡಿಕೆ ಎಲೆ
ಅರಿಶಿನ ಕುಂಕುಮ
ತಕ್ಕಂಡು ಶಂಕರನೆ
ಒಂದಂದ್ಗಾರ ಮಾಡಿಕಂಡು ಹೋಗಿ
ಅದುಕೆ ಉಗುಣೆ ಗಿಡುಕೆ ಪೂಜೆ ಮಾಡವುರೆ
ಕುಡಿ ಮೂಡಗಡಿಕೆ
ಹೊತ್ತುಟ್ಟಕಡಿಗೆ ಒಡೆದಿರೋ ಬಳ್ಳಿ ನೋಡಿ
ಮೂರು ಗೆರೆಯನ್ನು ಒಡೆದಾರೋ ಸ್ವಾಮಿ ಶಿವುನಿಗೋ ॥

ಮೂರು ಗೆರೆಯನ್ನು ಒಡೆದು
ಮನಿದೇವರು ಸಿತ್ತುರು ದೇವುರು
ಪಾದ ನೆನಸಿ ಸ್ವಾಮಿ
ಆ ಹೆಣ್ಣು ನಮ್ಮೀಗೆ
ಆಗಿ ಬರುವಂಗಿದ್ದರೆ
ಹರಹರನೆ ಸ್ವಾಮಿ ಶಂಕರನೆ
ಆ ಉಗುಣೆ ಬಳ್ಳಿ ಮೂರು ಗೆರೆಯನ್ನು
ತಡಾದು ಆಚುಗೆ ಬೆಳದಿರಲಿ ಸ್ವಾಮಿ
ಹೆಣ್ಣು ನಮಗೆ ಆಗಿ ಬರದಂಗಿದ್ದರೆ
ಇಲ್ಲೆ ಇರಲಿ ಮುಂದಕೆ ಬೆಳೆದಂತಿವೆ
ಅಂತ ಆಶೀರ್ವಾದ ಮಾಡಿ
ಬಂದವುರ ಮನೆಯೊಳಗೆ ಮನುಗವುರೋ ಸ್ವಾಮಿ ಶಿವನಿಗೋ ॥

ಮುಂಗೋಳಿ ಕೂಗ್ಯಾವಣ್ಣ
ಮೂಡಲು ಕೆಂಪೇರ್‍ಯಾವು
ತ್ವಾಟಾದಾಗುಳು ಪುಷ್ಪ
ಕಳಕಳುನೆ ನಗುವೋದೊ
ಎದಿಯನೆಮೇಗುಳಲಿಂಗ
ಶಿವಪೂಜೆಗೊಂಬೋತ್ತಿನಾಗ
ಬಂದನೆ ನೋಡುತಾರೆ
ಉಗುಣೆ ಬಳ್ಳಿ ಮೂರು ಗೆರೆಯನ್ನು
ತಡಾದು ಆಚೆಗೆ ಬೆಳೆದೈತಯೋ ಗಳಿಗಾಗೋ ॥

ಲೇ ಹೆಣ್ಣು ಆಗಿ ಬರುತೈತೆ
ನಡಿರಣ್ಣ ಮಾಡಿಕಂಡು ಬರೋನ ಅಂದು
ಒಬ್ಬರಿಗೊಬ್ಬರು ಮಾತಾಡಿಕೊಂಡು
ದೇವುರು ಕರುಣದಿಂದ
ಆಗಲೆ ಹೊರಟವುರಯ್ಯ
ದೇವುರು ಕೃಪೆಯಿಂದ
ಸನ್ನರು ಗೊಲ್ದುರವನು
ಸನ್ಮತ್ತಪ್ಪನು ಮನಿಗೆ ॥

ಹೋಗಿ ಮಾವ ನಿಮಗೆ
ಏನೇನು ಆಗಬೇಕು ಹೇಳಿರಣ್ಣ
ಎಲ್ಲಾ ಹೊಂಚುತೀವಿ ನಮಗೆ
ಶಾಸ್ತ್ರ ಸಂಬಂಧ ಎಲ್ಲ ಸಂಭಂದೈತಿ
ಹೆಣ್ಣಾಗಿ ಬರುತೈತಿ
ಅಂಬೋ ಪಟ್ಟೇದಟ್ಟಿ
ಎಂಬೋನು ಹೇಳಿ ಶಿವನಿಗೋ ॥

ಹೇಳುತ್ತಿದ್ದಂಗೆ ದೇವುರು ಕರುಣದಿಂದ ಸ್ವಾಮಿ
ಆಗಾಲೆ ಅಕ್ಕಿ ಒಡವೆ ವಸ್ತ್ರ

ಆಭರಣಗಳೆಲ್ಲ ಮಾತಾಡವರೆ
ತಾಯಿ ಸಾತೆಮ್ಮನಿಗೆ
ಮದುವೆ ಮಾಡದುಕೆ
ಜುಂಜಪ್ಪ ಅವರು ತಾತ ಅಜ್ಜಿಗೆ
ಮದುವೆ ಮಾಡದುಕೆ
ಎಲ್ಲ ಏರ್ಪಾಟು ಮಾಡುತಾರೊ ಸ್ವಾಮಿ ಶಿವುನೀಗೋ ||

ಆಗಲಿ ಕರಿಯಲ್ಲಿ ಕೆಂಪಲ್ಲಿ ಎಂಬ
ಅಜ್ಜುಗಳು ಜುಂಜಪ್ಪಗೆ
ಮೂರನೆ ತಲೆ ತಾತುಗಳಣ್ಣ
ದ್ಯಾವುರು ದೈಮಾರ ಅಂಬೊನು
ಜುಂಜಪ್ಪನಿಗೆ ಆಗಲೇ
ನಾಲ್ಕನೆ ತಾತಣ್ಣ ಗಳಿಗಾಗೋ ||

ಆಗಲೆ ಭಗುವಂತ
ದೇವುರು ಕರುಣದಿಂದ
ಆಗಲೆ ಅಕ್ತೀನೆ ಹಣುವಣ್ಣ
ಆಯಮ್ಮನಿಗೆ
ವಡವೆ ವಸ್ತ್ರಾಭರಣಗಳೆಲ್ಲ
ಮಾತಾಡವುರಯ್ಯಗಳಿಗಾಗೋ ||

ಮಾತಾಡಿ ಭಗುವಂತ
ದಿನವೇನೆ ಕಳುದೀತಮ್ಮ
ಕಾಲವೆ ಮೀರಿತಯ್ಯ
ಭಾನುವಾರದು ದಿನುಲಣ್ಣ
ಗಂಡು ಕರುಕಂಡು ಬರುತೀವಿ
ಸೋಮಾರದ ದಿನವಯ್ಯ
ದಾರೆ ಮೂರ್ತವಾಗುಬೇಕು
ದಾರೆ ಮೂರ್ತವಾಗುಬೇಕು
ಅಂದೇನ ಹೇಳವುರಣ್ಣ

ದಿನವೇ ಕಳುದೀತಣ್ಣ
ಭಾನುವಾರದು ದಿನವಯ್ಯ
ಸಿತ್ತರು ದೇವುರು
ದೇವಸ್ಥಾನದು ಮುಂದೆ
ದೇವಸ್ಥಾನಕು ಬೇಕಾದು
ಬಾಬತ್ತುಗಳೆಲ್ಲ ಕೊಟ್ಟಾರು
ಕಟ್ಟಾಗ ಎಲೆ ಅಡಿಕೆಯಮ್ಮಾ
ಮೂರು ದುಡ್ಡು ಕಾಣಿಕೆ
ದೇವುರು ಹಸೇನೆ
ಹಚ್ಯಾರು ದೇವಸ್ಥಾನದ ಮುಂದೆ
ದೇವರಸೆ ಹಚ್ಚಿ ಮನೆಗೆ ಬಂದು
ನಾಗುರು ಪೂಜೆ ಮಾಡಿ
ಮನೆಗಾಸೆ ಹಚ್ಯಾರಣ್ಣ
ದೇವುರು ಕರುಣಾದಿಂದ
ಭಾನುವಾರದ ಸಾಯನುಕಾಲ
ಆಗಾಲೆ ಎಲ್ಲಾರ್ರೂ ಹಿರಿಯೇನು ॥

ಪಟ್ಟೆದಟ್ಟಿ ಅಂಬೋನು
ಆ ಕಬ್ಬಿಣದ ಬಾಕ ಕೈಯಲ್ಲಿ ಹಿಡಕಂಡು ಹೋಗ್ತಾನಣ್ಣ
ಕಬ್ಬಿಣದು ಬಾಕಿಗೆ ಜೋತ್ರ ಪಂಚೆ ಹಾಕೈವುರೆ
ಕಂಬಿ ಪೇಟೆ ಸುತ್ತವರೆ
ಆಗಲೆ ಗಂಡು ಬರೋದಿಲ್ಲ
ಮದುವೆ ಆಗದುಕ್ಕೆ ಅಂದುದಕ್ಕೆ
ಆವನ ಕೈಯಾಗುಳ ಕಬ್ಬುಣದ ಬಾಕ ತಗಂಡು

ಅದಕು ಮದುವೆ ಮಾಡದುಕೆ
ಕಾಟುಮುಲಿಂಗು ನಟ್ಟೀಗೆ
ಸಣ್ಣದು ಗೊಲ್ದುರು ಮನೀಗೆ
ಮದುವಿಗೆ ಹೊರಟವರಣ್ಣ
ಪಟ್ಟಾದಟ್ಟೇನು

ಎಲ್ಲಾರ್ಗು ಹಿರಿಯೇನು
ಬಾಕು ಕೈಯಲ್ಲಿ ಹಿಡಕಂಡು
ಹಟ್ಟಿ ವುದಿಬಾಕುಲಿಗೆ ಹೊಗಿ ನಿಂತವುರೋ ಶಿವುನಿಗೋ ॥

ಗಂಡನ್ನ ಎದಿರಿಗಂಬ ಕೊಂಡು ಹೋಗದುಕ್ಕೆ
ಬಂದಾರೆ ಹೆಣ್ಣೆನೋರು
ಈವಜ್ಜ ಕೈಯೊಳುಗೆ ಕಬ್ಬಿಣದ ಬಾಕು ಹಿಡದನಲ್ಲ
ಕಾರಣವೇನಿರಬಹುದು
ಗಂಡೆಲ್ಲಿ ಬಂದಿಲ್ಲ ಅಂದಕ್ಕಂಡು
ಇವುನಿಗೆ ಮಾಡ್ಕಂತನೇನೋ ನೊಡನೆಂದು
ಎದುರುಗೊಂಬು ಕಂಡು ಕರಕಂಡೋಗಿ
ಅರಮನೆ ಒಳೀಕೆ ರತುನು ಗಂಬಳಿ ಗದ್ದುಗೆ ಹಾಕಿ
ಮನೆದುಂಬಿಸಿಗಂಡರಣ್ಣ ಗಳಿಗಾಗೋ ॥

ಮನೆದುಂಬಿಸಿಗಂಡ್ರೆ
ಕಬ್ಬುಣುದ ಬಾಕು ತಗಂಡು ಹೋಗಿ
ಆ ಕರೇಕಂಬಳಿ ಗದ್ದುಗೆ ಮೇಲಿಕ್ಕಿದನೋ ಸ್ವಾಮಿ
ಇಕ್ಕತ್ತಿದ್ದಂಗೆ ಊರಾಗಳಜನ ಇದೇನಲ ಸನ್ನಮುತ್ತಪ್ಪ
ನಮ್ಮ ತಮ್ಮ ಮಾರುಮುತ್ತಣ್ಣಗೆ
ಹೆಣ್ಣು ಕೊಡ್ರಿ ಅಂತ ಕೇಳಿ
ಕಬ್ಬಿಣದ ಬಾಕು ಹೊತ್ತುಗಂಡು ಬಂದವುರಲ್ಲೋ
ಕಬ್ಬಿಣದ ಬಾಕಿಗೆಂಗಯ್ಯ
ನಾವು ಕೊಟ್ಟು ಮದುವೆ ಮಾಡಾದು
ಈ ಸಾತಮ್ಮನ್ನ

ಚಂದ್ರ ತುಟಿ
ಹಾಲುಗೆನ್ನೆ
ಕಣ್‌ಮೆಣ್ ರೂಪು
ಅವುಳ ಹಣೆಯ ಮೇಲ್ಕೈತಿ
ಇಂತೆಂಬ ಹೆಣ್ಣು ಮಗುವನ್ನಯಂಗೆ ಕೊಟ್ಟು
ನಾವು ಮದುವೆ ಮಾಡಬೇಕಯ್ಯಗಳಿಗಾಗೋ ॥

ಅಂದಿವುರು ಮಾತುಗಳಾಡುತ್ತಾರಣ್ಣ
ದೇವುರು ಕೃಪೆಯಿಂದ
ಹರಹರನೇ ಶಂಕರನೆ ಗಳಿಗಾಗೋ ||

ಮಾತುಗಳಾಡ್ಯೋರಮ್ಮಾ
ಸ್ವಾಮಿನೆ ಕೃಪೆಯಿಂದ
ಹರಹರನೆ ಸ್ವಾಮಿಗಳಿಗಾಗೋ
ಆಗಲೆ ದೇವುರು ಕೃಪೆಯಿಂದ
ಕೇಳೀರಿ ದೇವುತೆಗಳಿರಾ
ಮದುವೆ ಆಗಲೇ ಜುಂಜಪ್ಪ ಅವರಜ್ಜಿ ತಾತನಿಗೆ ||

ಏನಯ್ಯಾ
ನಾವು ಕೊಡೋದಿಲ್ಲಯ್ಯ
ಈ ಕಬ್ಬಿಣದ ಬಾಕಿಗೆ ಹೆಣ್ಣು ಅಂದು
ಆಗಲೆ ಧಿಕ್ಕಾರವಾಗಿ ಮಾತಾಡುತಾರೆ ಶಿವುನೀಗೇ

ಮೊದಾಲೇ ನೆನುದೇವ್ರೋ
ಮದುನಾರಿ ವೀರಾನ
ಮದುಗುದು ಗುಡ್ಡದ ಕಲಿಬೀರೋ
ಧಿಕ್ಕಾರವಾಗಿ ಮಾತಾಡಿದುರಣ್ಣಾ
ಆವಾಗ ಅವರಣ್ಣುಗಳು
ಆರು ಜನುವು ಹೋಗಿ
ನಡಿರಪ್ಪಾ ನಮ್ಮ ಬಾಕ್ ತಕ್ಕಂಡು
ನಮ್ಮೂರಿಗೋಗುನ
ಇವರು ಹೆಣ್ಣು ಕೊಡುವುದಿಲ್ಲೆಂದು
ಹೊಗೆವುರೋ ಶಂಕರನೆ ||

ಹೋಗಿ ಬಾಕನ್ನ
ಎದುರು ಗ್ವಾಡಿಗಿಟ್ಟಿರುವ ಬಾಕೆತ್ತಿದಿಕೆ
ಭೂಮಿ ಬಿಟ್ಟೇಳದಿಲುವಣ್ಣಾ
ಆವಾಗ ಅವರ ಊರುಗಳು

ಜನ ಏನು ಮಾಡಿದುರು
ನೀವು ಅದೆ ಕೆಲಸಗೆ ಇಂಗೆ ಆಡ್ತಿರೇನಯ್ಯ
ಬಾಕು ಎತ್ತಿಗೊಂಡು ಹೋಗಲಾರದನ
ನಾವೇ ಎತ್ತಿ ಕೊಡುತ್ತೀವಿ ವಾರಿಗೋಗುರಯ್ಯ
ಅಂದು ವಾರಿಗೆ ದಬ್ಬಿ
ಊರಾಗುಳು ಜನವೆಲ್ಲ ಹೋಗಿ ಕಿತ್ತರು
ಎದುರುಗ್ವಾಡೆಗಿಕ್ಕಿರುದ ಬಾಕು
ಭೂಮಿ ಬಿಟ್ಟು
ಮ್ಯಾಲಕ್ಕೇಳದಿಲ್ಲವಲ್ಲೋ ಸ್ವಾಮಿ ಶಿವನಿಗೋ

ಆ ಬಾಕೀಗೆ ಆಚಾರಿ
ಕಣ್ಣು ಮಾಡಿದುನಣ್ಣ
ಬಾಕಿನು ಕಣ್ಣೊಳಗೆ
ನೀರೆ ಸುರಿದೋಗುತಾವೋ ಗಳಿಗಾಗೋ ॥

ನೋಡಿದರು ಜನುರೆಲ್ಲ
ಅರೆ ಇದು ಯಾವುದೋ
ದೇವುರು ಕಣಯ್ಯ
ಬಾಕಲ್ಲ ಇದು
ಅನ್ಯಾಯಮಾಡಿ ತಿರಸ್ಕಾರ
ಮಾತಾಡಿದಿವಿ
ಆಗಲೆ ಸ್ವಾಮಿ
ನೀನು ದೇವರೆಂಬುದು ಗುರುತಿಲ್ಲ
ಕಬ್ಬಿಣದ ಬಾಕಂದು ತಿಳುಕಂಡು ನಾವು
ಹೀಯಾಳಿಸಿ ಹೀನವಾದ
ಮಾತುಗಳಂದವು ಸ್ವಾಮಿ
ಹೆಣ್ಣು ಕೊಡುವುದಿಲ್ಲ ಅಂದು
ಎದ್ದು ದಾರೆ ಮೂರ್ತಕು ಬಾರಪ್ಪ
ಕಣ್ಣಾಗು ನೀರಾಕ ಬ್ಯಾಡ ಹೆಣ್ಣು ಕೊಡುತೀವೆಂದು

ಆವಾಗ ಅವುರ ಊರಾಗಿನ ಜನುವೇ
ಅಸಾಸಡ್ಡನ್ನ ಬೀಳುತ್ತಾರಣ್ಣ ಗಳಿಗಾಗೋ ॥

ಆಗ ಎಲ್ಲಾರಿಗೂ
ಹಿರಿಯೋನು ಹಿರಿಯಣ್ಣ
ಪಟ್ಟೇದಟ್ಟೇ ಅಂಬೋನು
ಆ ಕಬ್ಬಿಣುದು ಬಾಕು
ಕೈಯೊಳು ಹಿಡುಕಂಡು
ಎಲ್ಲಾ ಶಾಸ್ತ್ರಗಳು
ಅವುನೆ ಮಾಡಿದನಯ್ಯೋ ಗಳಿಗಾಗೋ ॥

ಅಗೆನ ಮಾಡಿದುನಣ್ಣ
ದಿನುವೇನೆ ಕಳೆದೀತಯ್ಯ
ಸೋಮಾರುದು ದಿನ
ಹೊತ್ತುಟ್ಟಿ ಬರುವಾಗ
ತಾಯಿ ಸಾತ್ಯಮ್ಮನಿಗೂ
ಮಾರ ಮುತ್ತಣ್ಣನ ಬಾಕಿಗೂ
ಧಾರೆನೆ ಒಯ್ದುರೋಗಳಿಗಾಗೋ ॥

ಬಾಕಿಗು ಸಾತಮ್ಮನಿಗೂ
ಮೂರ್ತವೆ ಮಾಡಿದುರಣ್ಣ
ಆವಾಗ ಭಗುವಂತೂ
ಆದಿನ
ಅವುರ ಮನೆಯೊಳಗಿದ್ದರು ಸ್ವಾಮಿ
ತಿರುಗಿ ಮಾರನೆ ಬೆಳಿಗ್ಗೆ
ಹೆಣ್ಣು ಗಂಡು ಕರಕಂಡು
ಗಂಡಿನೂರಿಗೆ ಹೋಗೋರೋ
ಸಿತ್ತುರು ದೇವುರಟ್ಟೀಗೆ
ಸಿತ್ತುನುಗಿರಿ ಹಟ್ಟಿಗೆ
ಹೋಗಿ ಅವತ್ತು ರಾತ್ರಿ
ಅವುರ ಮನೆಯೋಳಿಗಿದ್ದರಣ್ಣ

ಸಾತೆಮ್ಮನಿಗು
ಮಾರಿಮುತ್ತಣ್ಣನ ಬಾಕಿಗೂ
ತಿರುಗಂಚಿ ಬರುಗಂಚಿ
ಮುಗುಸಿಗಂಡಾರಯ್ಯೋ ಗಳಿಗಾಗೋ ॥

ತಿರುಗಂಚಿ ಮುಗುಸಿಗಂಡು
ಆಗಲೆ ಮದುವ್ಯಾದು
ಮೂರು ತಿಂಗಳುವರಿಗೂ
ತವರುಮನೆಯೊಳಗೆ
ಬಿಡಬೇಕಾಗಿತ್ತು
ಆವಾಗಿನು ಕಾಲದೊಳಗೆ ಹೆಣ್ಮಕ್ಕಳ್ನ ಗಳಿಗಾಗೋ ॥

ಮೂರು ತಿಂಗಳು ಆದ ಮೇಲೆ
ಗಂಡನ ಮನಗೆ ಕರೆತರುತ್ತಿದ್ದರಣ್ಣ
ಮದುವ್ಯಾದ ವೇಲೆ ಮೂರು ದಿನದವರಿಗೂ
ಆಗಲೇ ತವುರು ಮನೆಯೊಳುಗೆ
ಸಾತಮ್ಮನ ಬಿಟ್ಟಾವುರೋ ಸ್ವಾಮಿ ಗಳಿಗಾಗೋ ॥

ದಿನವೇನೆ ಕಳೆದೀತಣ್ಣ
ಕಾಲವೇ ಮೀರಿತಯ್ಯೋ
ಮೂರು ತಿಂಗಳು ತುಂಬಿತಣ್ಣಾ
ಏಳು ಜನುಕೆ ದೊಡ್ಡೋನು
ಪಟ್ಟೇದಟ್ಟೇನಣ್ಣ
ಆಗಲೆ ಹೋಗಿನ್ನ
ಕಳುಸಿಕೊಡಿರಯ್ಯ ನಿಮ್ಮ ಮಗಳನ್ನ
ನಮ್ಮ ಅರುಮನಿಗೆ
ಆವತ್ತು ಹಬ್ಬಹುಣ್ಣ್ಯಾ ಮಾಡಿ
ಊಟಕ್ಕಿಟ್ಟು ಮಾವುನಿಗೂ
ತಾಯಿ ಸಾತೆಮ್ಮನಿಗೂ
ಬೆಳಗಾಗುತ್ತಿದ್ದಂಗೆ

ಪಲ್ಲಕ್ಕಿ ಪಾಲಿಕೆ ಮಾಡಿ
ಸಾತೆಮ್ಮನ ತಂದು
ಗಂಡುನ ಮನೆಗೆ ಬಿಟ್ಟು
ಸನ್ಮತ್ತಪ್ಪ ಶಂಕರನೆ
ಬೆಳಗ್ಗೆ ಎದ್ದು ಮಾವ
ನಮ್ಮ ಮಗುಳಲುವಯ್ಯ
ನಿಮ್ಮ ಮಗುಳಣ್ಣ
ಚೆನ್ನಾಗಿ ನೋಡಿ ಕೊಳ್ಳಿರಪ್ಪಾ
ಒಬ್ಬಳೆ ಮಗಳೆಂದು
ಚನ್ನಾಗಿ ಸಾಕಿದ್ದೆನಾನಂದೇಳಿ
ಸನ್ಮತ್ತಪ್ಪ ಅವರೂರಿಗೋದಾನು ಗಳಿಗಾಗೋ ॥

ಜುಂಜಪ್ಪನ ಅವರಜ್ಜಿನ
ಗಂಡನಮನೆಗೆ ಬಿಟ್ಟು ಸಾತಮ್ಮನ
ಊರಿಗೋದಾನುಸ್ವಾಮಿಗಳಿಗಾಗೋ ॥

ಕೆಲವಾರು ದಿನ
ಆರುಜನ ವಾರಿಗಿತ್ತಿರು
ಆಯಮ್ಮನಿಗೆ ಮನೆವೊಳಗೆ
ಆರುಜನ ಮಾವುಗಳಣ್ಣ
ಕೆಲವಾರು ದಿನ
ಚನ್ನಾಗಿಟ್ಟಕಂಡಿದ್ದರು ಸಾತಮ್ಮನ್ನ
ಬರ್‍ತಾ ಬರ್‍ತಾ ಆಯಮ್ಮನಿಗೆ
ಕೊಡುಬಾರುದ ಕಷ್ಟಕೊಡುತಾರಯ್ಯೋ ಮನಿವೊಳಗೆ
ಗಂಡ ಮನೆಯೊಳಗಿಲ್ಲುವಣ್ಣ
ಸಾತೆಮ್ಮನಿಗಣ್ಣ ॥

ಬೆಳಿಗ್ಗೆ ಎದ್ದು ಕಸಮುಸುರೆ ಬಾಸಬೇಕಾಯ್ತುಮ್ಮ
ಆಮೇಲೆ ನೆಲವಲೆ ಸಾರಿಸಿ ಗುಡಿಸಿ
ಇವುರಿಗೂ ನೀರ ಕಾಸಿ ಸ್ನಾನಮಾಡಿಸಿ
ಮಡಿ ಬಟ್ಟೆಗಳ ಕೊಟ್ಟು

ಅಡಿಗೆ ಮಾಡಿ ಊಟಕ್ಕಿಟ್ಟು ಲೇಪುದಿಂಬಾಕಬೇಕು
ವಾರುಗಿತ್ತಿಯರಿಗು ಮಾವುಗಳ್ಗ
ಲೇಪುದಿಂಬುಗಳಾಕಿದರೆ ಅವುರವುರು
ಗಂಡ ಹೆಂಡತಿಗಳೆಲ್ಲ ಜತೆಯಲ್ಲಿ ಮನಿಗಿದ್ದಾಗ
ಈಯಮ್ಮ ಅವರಿಗೆ ತಾಂಬೂಲ ಕೊಟ್ಟು
ನಿದ್ರೆಬರವರಿಗೂ
ವಾರುಗಿತ್ತಿಯರಿಗು ಮಾವುಗಳಿಗೂ
ಕಾಲುಗಳಿಗಿಸಕಬೇಕಣ್ಣ ಗಳಿಗಾಗೋ ॥

ಅರೆಕ್ಷಣ ಪುರುಸೊತ್ತಿಲ್ಲದಂತ
ಬದುಕನೆ ಮಾಡಿಸುತಾರೆ
ವಾರುಗಿತ್ತಿರು ಮಾವುಗಳು
ತಾಯಿ ಸಾತೆಮ್ಮನಿಗೆ ಗಳಿಗಾಗೋ ॥

ಗಂಡ ಮನೆಯೊಳಗಿಲ್ಲುವಣ್ಣ
ಆಯಮ್ಮನ ಹೇಳೋರು ಕೇಳೋರು
ಇಲದಾಗಾಯಿತು ಸ್ವಾಮಿ
ಆಗಲೇ ಇವುರು
ಕಂಬೇರು ಗೊಲ್ಲೋರು
ಹೆಣ್ಣುಮಗಳೊಬ್ಬಳ್ನ
ಸಣಕಂಬವ್ವ ಎಂಬುವಳ್ನ
ಮದುವೇನ ಆಗಿದ್ನಣ್ಣ
ಆಯಮ್ಮ ಒಂದೆ ಒಂದು ನಿಮುಸ
ಕುಂಡ್ರುಸ್ದಂಗೆ ಬದುಕು ತೋರಿಸುತಾಳೆ
ಅವರ ಹಿರಿಯ ಮಾವನೆಂಡ್ತಿ
ಸಣಕಂಬವ್ವ ಗಳಿಗಾಗೋ ॥
ದಿನವೇನೆ ಕಳಿಯೋದಣ್ಣ
ಕಾಲವೆ ಮೀರಿತಯ್ಯಾ
ಮದುವ್ಯಾಗಿ ಎರಡು ವರುಷ
ಆಗಿತು ಸಾತೆಮ್ಮನಿಗೆ

ಅವರ ಮಾವುನ್ನ ಕೇಳುತಾಳೋ
ಸಾತೆಮ್ಮ ಗಳಿಗಾಗೋ ॥

ಮಾವ ನನ್ನ ಗಂಡನಿಗೆ ಸ್ವಲ್ಪ ಊಟ ತಗಂಡೋಗಿ
ಬುತ್ತಿ ಇಟ್ಟುಬತ್ತೀನಿ
ಸರಿ ನನ್ನ ಗಂಡ ಇರೋ ಜಾಗ ತೋರಿಸಿರಿ
ಅಂತ ಕೇಳಿದ್ಲು ಸಾತಮ್ಮ
ಇವನೇನು ಮಾಡ್ದ
ಹಿರೇಮಾವ ಪಟ್ಟೆದಟ್ಟೇನು
ಇವಳ ಗಂಡಿರೋ ಜಾಗ ತೋರಿಸಿಬಿಟ್ಟರೆ
ದಿನಾ ಹೋಗಾದು ಬರಾದೆ ಸರಿಯಾಗ್ತತೆ
ಈ ಕೆಲಸ ಎಲ್ಲಾ
ನಮ್ಮ ಹೆಂಡ್ತೇರು ಮಾಡಬೇಕಾಗುತ್ತೆ
ಗಂಡ ಇರೋ ಜಾಗ ತೋರಸಬಾರ್ದು ಇವ್ಳಗೆ ಅಂತೇಳ್ಬಿಟ್ಟು
ಏನಮ್ಮಾ
ನಿನ್ನ ಗಂಡ ಇರೋ ಜಾಗಕ್ಕೆ
ಹೋಗಾಕ್ಕೆ ನಿನ್ನ ಕೈಲಿ ಸಾದ್ಯವಿಲ್ಲ
ವಿಪರೀತ ಹುಲಿ ಕರಡಿಗಳು ಸಾರಂಗ
ಘೋರ ಅರಣ್ಯದಲ್ಲಿ ನಿನ್ನ ಗಂಡ ಇರಾದು
ಸರಿ ದನಕಾಯ್ಕಂಡು
ಅರಣ್ಯದಲ್ಲವನೆ ಗೆಡ್ಡೆಗೆಣಸು ತಿಂದಕಂಡು
ಬೆಂದಿದ್ದು ಅವುನು ತಿಂಬೋದಿಲ್ಲ
ಹೋಗಬೇಡ ಕಣಮ್ಮ
ಅಲ್ಲಿ ಹುಲಿಕರಡಿಗಳ ಕಾಟ ಅಂತೇಳ್ದ

ಅವುನ ಗಡ್ಡವಾಲಿ
ನೆಲಕೇನೆ ಮುಟ್ಟತಾವು ಸ್ವಾಮಿ
ಗಡ್ಡದೊಳಗೆ
ಗೀಜುಗುನಹಕ್ಕಿ ಗೂಡಿಕ್ಯವಯ್ಯೋ
ಕಾಡಿನೊಳಗೆ ಸೇರವುನೆ

ದನ ಕಾಯ್ಕಂಡು
ಆಗಲೆ ಮಾರು ಮುತ್ತಣ್ಣ
ಜುಂಜಪ್ಪ ತಾತಗಳಿಗಾಗೋ ॥

ಅಂದು ಭಯಪಟ್ಟರು ಶಂಕರನೆ
ಇಂತಂಬ ಪ್ರಾಣವು
ಇಲ್ಲಿ ಇರುವುದಿಕಿಂಟ ॥

ಕಾಡಿನೊಳಗೆ ಹುಲಿಕರಡಿಗಳೆ ತಿಂದಾಕುಲೇಳು ನನ್ನ
ಇನ್ನಾಕಿರಬೇಕೆಂದು ಸಾತೆಮ್ಮ
ಬೆಳಿಗ್ಗೆ ಆಗಾಲೆ ಮುಂಗೊಳಿ ಕೂಗುವಾಗಲೆ ಎದ್ದು

ನೆಲ ಒಲೆ ಸಾರಿಸಿ ಗುಡಿಸ್ಯಾವುಳಣ್ಣ
ತಾಯಿನೇ ಸಾತೆಮ್ಮ
ಸಾರಿಸಿ ಗುಡಿಸ್ಯಾಳೇ
ಎಲ್ಲಾ ತೈನಪುಮಾಡಿ
ಇವರಿಗೂ ನೀರು ಕಾಸೆರುದವುಳೊ
ಸಾತೆಮ್ಮ ಶಂಕರನೆ
ನೀರನು ಕಾಸೆರುದು
ಎರಡೂ ವಾರಗಿತ್ತೆರಿಗೂ ಮಾವುಗಳಿಗೆ
ಅಡಿಗೆ ಮಾಡಿ ಊಟಕ್ಕಿಟ್ಟು
ತಾಂಬೂಲವಾಕ್ಕೆಂಡಾಗಲೆ
ಕೈಕಾಲುಗಳಿಸಿಕೆವುಳೆ
ಗಂಡನಿಗೆ ಬುತ್ತಿ ಹೊತ್ತುಗಂಡು
ಬುತ್ತಿ ಗೂಡನೆ ತಕ್ಕಂಡು
ಹೋಗುತಾಳೆ ಆಯಮ್ಮನು
ಗಂಡಿರುವ ಸ್ಥಳಕೆ ಗಳಿಗಾಗೋ ॥

ಅಡವಿನೆ ಒಳುಗಮ್ಮಾ
ಅರಣ್ಯದೊಳುಗಯ್ಯೋ
ಹೋಗುತಾಳೆ ಸಾತೆಮ್ಮ

ದಾರಿನೆ ತೊಪ್ಪೀತು
ಮಾರ್ಗಾವೆ ತೊಪ್ಪೀತೋ
ಮೆಳಿಮಂಜುರುದೊಳುಗಣ್ಣ
ಗಿಡುಗಳುನೆ ಕೂಗಿ ಮಾತಾಡಿಸಿಗಂಡು
ಹೋಗುತಾಳೋ ಸಾತೆಮ್ಮ ಗಳಿಗಾಗೋ ॥

ಕಾರೆಯ ಗಿಡುಗಳಿರೋ
ಕವುಳೀಯಾಗಿಡುಗಳಿರಾ
ನಮ್ಮ ಸ್ವಾಮಿ ಮಾರುಮುತ್ತಣ್ಣನು
ದನುಗಳು ರೊಪ್ಪ ಎಲ್ಲೈತಿ ಹೇಳಿರಯ್ಯ ॥

ಈಸಲ ಗಿಡುಗಳಿರೋ
ಆಸಲು ಗಿಡಗಳಿರೋ
ನಮ್ಮ ಸ್ವಾಮಿ ದನುಗಳು
ರೊಪ್ಪ ಎಲ್ಲೈತಿ ಹೇಳಿರಯ್ಯ ॥

ಬನ್ನಿಯ ಗಿಡಗಳಿರೋ
ಹೊನ್ನಿಯ ಗಿಡುಗಳಿರೊ
ನಮ್ಮ ಸ್ವಾಮಿಯದನುಗಳ
ರೊಪ್ಪ ಎಲ್ಲೈತಿ ಹೇಳಿರಯ್ಯೋ ॥
ತಂಗಡೆಯ ಗಿಡಗಳಿರೋ
ಬಂದ್ರೆಯಗಿಡಗಳಿರೋ
ಮಾರುಮುತ್ತಣ್ಣನ ದನುಗುಳು
ರೊಪ್ಪ ಎಲ್ಲೈತೆ ಹೇಳಿರಯ್ಯಾ ॥
ಅಂದು ಗಿಡುಗಳನ್ನ ಕೂಗಿಕಂಡು
ಒಡನೆ ಮಾತಾಡಿಸಿಕೆಂಡು
ಹೋಗುತಾಳೆ ಸಾತಮ್ಮ
ಹೋಗುವಾಗ ಗೌರಸಂದ್ರ ಮಾರಮ್ಮ
ಕಣಿಹೇಳೋ ಕೊರವಂಜಿಯಾಗಿ
ಹೋಗಿದ್ದಳು ಒಕ್ಕಲು ಮೇಲೆ
ಆ ಕಾಡಿನುಗುಂಟ ಬರುತಾಳೋ ॥

ಮೊದಲೇ ನೆನದೇವು
ಮದುನಾರಿ ವೀರಾನ
ಮದುಗುದುಗುಡ್ಡದ ಕಲಿಬೀರೋ
ಮದುಗುದುಗುಡ್ಡದ
ಕಲಿಬೀರೋ ಜುಂಜಪ್ಪನ
ಮೊದಲೇ ಸೊಲ್ಲಾಗಿ ನೆನುದೇವೋ ॥

ಅಂತಾಂಬಾಗಳಿಗೆಯೊಳಗೆ
ದೇವರ ಕೃಪೆಯಿಂದ
ಹೋಗುತಾರೂ ಶಂಕರನೆ
ಗೌರಸಂದ್ರದು ಮಾರಮ್ಮ
ಕಣಿ ಹೇಳೊ ಕೊರುವಂಜಿಯಾಗಿ
ಮೂಗುತಿ ಮುಂಬಾರ
ಎಣೆಗಂಟೂ ಹಿಂಬಾರ
ತಲೆಮೇಲೆ ಪುಟ್ಟಿಗೆಮ್ಮ
ಕೈಯೊಳಗೆ ನಾಗುದುಬೆತ್ತ
ತೊಳಿಗೊ ಸೆಲಿಗೆಯಮ್ಮ
ಕೈಯಿಗೂ ಬಂಧಿಯಣ್ಣ
ಬುಗುಡಿ ಸಿಂತಾಕುದು ಕೊರಳೊಳು
ಗೌರುಸಂದ್ರುದುಮಾರಮ್ಮಾ
ಕಣಿ ಹೇಳೋ ಕೊರವಂಜಿಯಾಗಿ
ಬರುತಾಳೊ ಶಂಕರನೆ
ಕಾಡಿನೊಳಗಯ್ಯೋ ಗಳಿಗಾಗೋ ॥

ಜುಂಜಪ್ಪನ ಅಜ್ಜಿ ಸಾತೆಮ್ಮ
ಕಂಡಳು ಗೌರಸಂದ್ರದ ಮಾರಮ್ಮನ
ಬುಡಬುಡನೆ ಓಡಿ ಹೋಗಿ
ಬುತ್ತಿಗೂಡೆ ಅಲ್ಲಿಳಿಸವುಳೇ
ಆಯಮ್ಮನು ಪಾದ ಹಿಡುಕಂಡು
ಹೇಳಮ್ಮ ಕೊರುವಂಜಿ

ಹೇಳಮ್ಮ ಮಾತಾಯಿ
ಮೂರು ಮಾತು ಕಣಿಯಮ್ಮಾ ||

ಕೇಳೆ ಯರಿಮುಂಡೆ ಸಾತೆಮ್ಮ ನನ್ನನೆ
ಗಂಡುನಿಗೆ ಏಳು ಜನ
ಹಣೆತೇರು ಕೇಳಮ್ಮ
ನನ್ನ ಗಂಡ ಕೊರುಮನಮ್ಮ
ನನ್ನ ಆರುಜನ ವಾರುಗಿತ್ತೇರು
ಮುಂದುಗಡೆ ಹೋದರು ತಾಯಿ
ಹಿಂದುಲಿಂದ ನಾನೋದಾರೆ
ಇಷ್ಟೋತ್ತಾದುರೂ ಬರಲಿಲ್ಲ
ನೀನು ಏನುಮಾಡುತ್ತಿದ್ದೆ ಅಂದು
ಆರು ಜನ ವಾರುಗಿತ್ತಿರುತಾವಮ್ಮ
ಕತ್ತೆಕಟ್ಟುವಂತ ಗೊಟಕು ಕಟ್ಟಿ
ನನ್ನ ಹೊಡಿಸಿಬಿಡುತಾನೆ ಸಾತೆಮ್ಮ
ನಿನ್ನಿಗು ಕಣಿ ಹೇಳಿಕಂಡು ಕೂತ್ಕಂಡರೆ
ಟೈಮಾಗುತ್ತೈತಮ್ಮ
ನಾಳೆನೆ ಇಷ್ಟೊತ್ತಿಗೆ
ನಾನಿಲ್ಲಿಗು ಬರುತಿನಿ
ನೀನಿಲ್ಲೇ ಇದ್ದುರು
ಕಣಿಯನ್ನು ಹೇಳುತೀನಂದು
ಹೇಳುತಾಳಣ್ಣ ಮಾಯಿಕಾತೀ
ಗೌರುಸಂದ್ರುದು ಮಾರಮ್ಮ ಶಿವುನಿಗೋ ||

ಆಗಲೆ ಕೇಳಮ್ಮ
ಮಹಾತಾಯಿ ಕೊರವಂಜಿ
ನಿನ್ನನೆ ಪಾದದು ಮುಂದೆ
ನನ್ನ ನಾಲಿಗೆ ಇರುಕಂಡು
ಪ್ರಾಣ ಬಿಡುವದು ಮೇಲಲ್ಲವೇನಮ್ಮೋ
ಹೇಳೇತೀರಬೇಕಮ್ಮ

ಮೂರೇ ಮಾತು ಕಣಿಯೆಂದು
ಮಂಡಿಗೂ ನಿಂತಾವುಳೋ ಸಾತೆಮ್ಮ ಗಳಿಗಾಗೋ ॥

ಆಗಲೆ ಕಣಿಯನ್ನ ಹೇಳುತಾಳೆ
ಮಾರಮ್ಮ ಶಂಕರನೆ
ಕೇಳು ಕೇಳೆ ಸಾತೆಮ್ಮ
ನಿನ್ನಯಗಂಡನು
ಹುಟ್ಟಿದುದಕೆ ಬೆಳೆದುದಕೆ
ಇಪ್ಪತ್ತು ನಾಲ್ಕು ವರುಷ
ಮದವೆನೆ ಆಗಿದಿ ನೀನು
ನರಮಾನುವುರ ಮಕವನ್ನ
ತಲೆಯೆತ್ತಿ ನೋಡಿದವುನಲ್ಲವಮ್ಮ ಅವುನು
ಕಾಡಿನೊಳಗೆ ಸೇರಿಕಂಡ
ಗೆಡ್ಡೆಗೆಣಸು ತಿಂದಕಂಡು
ಹಣ್ಣು ಹಂಪ್ಲು
ಕಾರೆ ಹಣ್ಣು ಕವುಳೀ ಹಣ್ಣು ತಿಂದಕಂಡು
ಕಾಲಕಳುದವುನವುನು
ಕಾಡೀನಾಗುಳು ಹುಲಿಯಂತೆ
ಅವುನಮ್ಮ ನಿನುಗಂಡೋ
ಹೋಗಿ ಅವುನೆದಿರಿಗೆ
ನೀನು ನಿಂತಗ ಬ್ಯಾಡವೆ ಸಾತೆಮ್ಮ ॥

ಬುತ್ತಿ ಗೂಡೆಯನ್ನ ಅಲ್ಲಿಳಿಸಿ ಬಿಡು
ದನಗಳ ರೊಪ್ಪದ ಮುಂದೆ
ಬುತ್ತಿಗೊಡೆ ಇಳಿಸಿ ಬೇಲಿಪದೆರೆಗೋಗಿ ನಿಂತಗ
ಬೇಲಿಪೊದೆ ಮರೆಗೋಗಿ ನಿಂತಾಗ
ನಿನ್ನ ಗಂಡ ತಲೆ ಎತ್ತಿನೋಡಿ
ಬುತ್ತಿ ತಗಂಡು ಹೋಗಿ ಊಟಮಾಡಿ
ತಾಂಬೂಲ ಹಾಕ್ಕೊಂಡು
ದನ ಕರಕಂಡು ಮೇಸಕೆ ಹೊರಟೋಗ್ತನೆ

ಅವುನು ಮುಂದೆ ಹೋದಾಗ ನೀನು
ಅವನ ಬೆನ್ನು ನೋಡಿ ಸಂತೋಷ ಪಟ್ಟು
ಬುತ್ತಿಗೂಡೆ ತಗಂಡು ಮನಿಗೆ ಬಾರಮ್ಮ
ಅಂತ ಗೌರಸಂದ್ರ ಮಾರಮ್ಮ ಕಣಿ ಹೇಳಿದ್ಲು
ಇದೇ ದಾರಿ ಹೋಗಮ್ಮ ಅಂತ
ದಾರಿತೋರಿಸಿದ್ಲು ಆಯಪ್ಪನ
ದನಗಳ ರೊಪ್ಪದತ್ರಕ್ಕೆ ಹೋಗದಕ್ಕೆ

ಆವಾಗ ಹೊರಟನು ಸ್ವಾಮಿ
ದೇವರು ಕರುಣದಿಂದ
ಆಯಮ್ಮ ಬುತ್ತೀನಗೂಡೆ
ಹೊತಗಂಡು
ಗಂಡನ ಹತ್ತುರಕೆ
ಹೋಗೆವಳೆ ಸಾತಮ್ಮ
ದೂಡ್ಡೊದಿಬಾಕಾಲೂಳಗೆ
ಬುತ್ತಿಗೂಡೆ ಇಳೆಸವುಳಣ್ಣ
ಇಳಿಸಿ ಬೇಲಿಪೊದೆಯಾನೆ
ಮರೆಯಲ್ಲಿ ಹೋಗಿ ನಿಂತವುಳೊ
ಜಂಜಪ್ಪನಜ್ಜಿ ಸಾತೆಮ್ಮ ಗಳಿಗಾಗೋ ||

ಆಗಲೆ ಸ್ವಾಮಿ
ತಲೆಯೆತ್ತಿ ನೋಡಿದುನಣ್ಣ
ಶಂಕರ ಹುಟ್ಟಿದಗ ಬೆಳುದಾಗಿಂಟ
ತಾಯಾಲು ಬಿಟ್ಟಾಗಿಂಟ
ಕಾರೇಹಣ್ಣು ಕವುಳಿಹಣ್ಣು
ಕಾಡಿನಾಗುಳು ಗೆಡ್ಡೆಗೆಣಸು ತಿಂದುಕಂಡಿದ್ದೆ
ಈವತ್ತು ಮುಸುರೆ ನಾನೆಂಗೂಟ ಮಾಡುಲೆಂದು
ಸಿಂತೆ ಮಾಡುತಾನೋ
ಮಾರುಮುತ್ತಣ್ಣ ಶಿವುನೀಗ

ಆಗನಾನು ಊಟ ಮಾಡಲಿಲ್ಲ
ಅಂದೂರು ಅವಳು
ಬಾವಿಗೂ ಕೆರಿಗೂ ಬಿದ್ದು ಸತ್ತುರೂ
ಸ್ತ್ರೀ ಹತ್ಯ ಶಿಶು ಹತ್ಯಗೋ ನಾನು ಒಳಗಾಗುತೀನಿ
ಸ್ತ್ರೀಯಳನ ಕೊಲ್ಲುಬಾರದೆಂದು
ಶಿವುನೇಳೆವುನಣ್ಣ
ಇದೇನು ಮಾಡಲಿ ಸ್ವಾಮಿ
ಅಂದೇನೆ ಮಹಾದೇವ
ಪರಮೇಶ್ವರನೇ ನೀನೇ ದಿಕ್ಕು ನನಿಗಂದೆದ್ದು
ಹೋಗಿ ಬುತ್ತಿ ಇಟಗಂಡು ಊಟಮಾಡ್ಯಾವುನೋ
ಮಾರುಮುತ್ತಣ್ಣ ಜುಂಜಪ್ಪನ ತಾತಗಳಿಗಾಗೋ ॥

ಊಟ ಮಾಡಿ ಶಂಕರನೆ
ಗಂಡುಗೊಡಲಿ ಹೆಗಲ ಮೇಲಿಟಗಂಡು
ದನಗಳು ಮೇಸದುಕೆ
ಹೊರಟುವುನೋ ಸ್ವಾಮಿ
ಒಳ್ಳೆ ದೊಡ್ಡುಲಿ ಹೋದಂಗೆ
ಹೋಗುತಾನಣ್ಣ ಗಳಿಗಾಗೋ
ಹಿಂದಿನಿಂದ ಗಂಡನು ಬೆನ್ನ ನೋಡಿ
ತಾಯಿನೆ ಸಾತೆಮ್ಮ
ಆಗಲೆ ಬರುತಾಳಯ್ಯೊ ಗಳಿಗಾಗೋ ॥

ಅರುಮನಿಗೆ ಬಂದಾರೆ
ಆರು ಜನವಾರುಗಿತ್ತೇರು
ಆರು ಜನ ಮಾವುಗಳು
ಎಲ್ಲೆಲ್ಲಿ ಮನಿಗ್ಯಾವುರೋ
ಅಲ್ಲೆ ಮನಿಗೆವುರಣ್ಣ
ಅತ್ತಲು ಕಡ್ಡಿ ತಗದು ಇತ್ತಾಗಿಲ್ಲವಯ್ಯೋ ॥

ನೆಲವಲೆ ಸರಿಸಿ ಗುಡಿಸವುಳೆ
ಬಂದು ಸಾತೆಮ್ಮ

ದನಗಳೊಳುಗೆ
ಹಾಲು ಕರದು ಹೆಪ್ಪಾಕೊಳು
ಮಾತಾಯಿ ಶಂಕರನೆ
ಅಡಿಗೆನೆ ಮಾಡ್ಯಾವುಳಯ್ಯ
ವಾರಗಿತ್ತೀರೆಗೆ ಮಾವುಗಳ್ಗೆ
ಊಟಾಕಿಟ್ಟಾವಳಣ್ಣ
ಲೇಪು ದಿಂಬಾಕೆವುಳೆ
ಅಡಿಕೆಲೆ ಕೊಟ್ಟವಳೆ ಅವುರಿಗೆ
ತಾಂಬುಲ ಹಾಕ್ಯಂಡವುರು
ಕುಂತಿರುವಾಗ ವಾರಗಿತ್ತಿಯರು ಮಾವುಗಳಿಗೆ
ಒಬ್ಬರಿಗೆ ತಪ್ಪಿದರೆ ಒಬ್ಬರಿಗೆ
ಕೈಕಾಲು ಇಸುಕುತು ಕುಂತಾಳಮ್ಮ ಗಳಿಗಾಗೋ ||

ಅವತ್ತು ಮೂರು ವರ್ಷ ಆಯಿತು
ಅಯಮ್ಮನ ಗಂಡನು ಮನೀಗೆ ಬಂದು
ಗಂಡ ತವರು ಮನೆಯಿಂದ
ಬರುವಾಗ ಉಟ್ಟಂತ ಹೊಸಸೀರೆ
ಅವತ್ತು ತಲೆಬಾಸಿದ್ದು
ಅವತ್ತು ತಲಿಗೆಣ್ಣೆ ಹಚ್ಚಿದ್ದು
ಆವತ್ತು ಮೈಗೆ ನೀರಾಕಿದ್ದು
ಅವರಪ್ಪನ ಮನೆಯೊಳುಗೆ
ಮೂರು ವರುಷವಾಗೈತೆ
ಆಯಮ್ಮ ಗಂಡನ ಮನೆಗೆ ಬಂದು
ಏಳು ಮಾರುದ್ದಮಂಡೆ
ಆಯಮ್ಮನಿಗೆ ವಾಲಿಬೆಳೆದಾವೆ ಸ್ವಾಮಿ
ಆ ಕೂದಲ ಬುತ್ತಿಗೂಡೆ ಎಷ್ಟಗಲ ಐತೋ
ಅಷ್ಟಗಲ ಉಂಗುರುಟ್ಟಾಳೋ ಕೂದಲು ಶಿವನೀಗೋ


ಬುತ್ತಿಗೂಡೆ ಹೊತ್ತುಗಂಡು
ಸಾತೆಮ್ಮ ಗಂಡಿರುವ ಸ್ಥಳಕ್ಕೆ ಹೋಗುವಾಗ

ತಲೆಯೆತ್ತಿ ನೋಡಿದುನಣ್ಣ
ಮಾರುಮುತ್ತಣ್ಣ ಗಳಿಗಾಗೋ ॥

ಹರಹರ ಶಂಕರನೆ
ನಮ್ಮತ್ತಿಗೇರು ನಮ್ಮಣ್ಣಗಳು
ಇನ್ನೆಂತ ಕಷ್ಟಕೊಟ್ಟಿರಬಹುದು ಇವುಳೀಗೆ
ಆಗಲೆ ಶಂಕರನೆ
ತಲೆಯನ್ನ ಬಾಸಿಗಂಡಿಲ್ಲ
ಮಂಡರುಗಬ್ಬೆ ತೊರೋದಿಲ್ಲ
ತಲೆಯೆಳುಗಂಗೈತಲ್ಲಾ
ಈ ಹೆಣ್ಣು ನನ್ನೆಸರಿನು ಮೇಲೆ
ಬಂದು ನಮ್ಮನೆಯೊಳಗೆ
ಗೋಳಾಡುತ್ತಿದ್ದುರೂ ನನ್ನಿಗೂ
ಶಂಕರನು ಒಳ್ಳೇದು ಮಾಡೋದಿಲ್ಲ ॥

ನಮ್ಮಪ್ಪುಗಳು ಸಂಪಾದಿಸಿದ
ವಜ್ರ ವೈಡೂರವು ನನಗೆ ಬ್ಯಾಡ
ಈ ನಮ್ಮಪ್ಪುಗಳು ಕೊಟ್ಟ ದನುಗಳು ನನಗೆ ಬ್ಯಾಡ
ನಮ್ಮಣ್ಣಗಳೆ ಹೊಡಿಕೊಂಡು ಹೋಗಿ ಬದುಕೆಂಬಲಿ
ಈ ಕರುಮನೋಡಬಾರದು ನಾನಂದು
ಸಿಪ್ಪುಗೊಡಲಿ ಹೆಗಲ ಮೇಲಿಟುಗಂಡು
ಹೊತ್ತುಟ್ಟ ಮೊಕನಾಗಿ
ಓಡೋಗುತಾನಣ್ಣ ಮಾರುಮುತ್ತಣ್ಣ ಶಿವುನೀಗೋ

ನಮ್ಮ ಸ್ವಾಮೀನೆ ಹೋಗುತಾನೆ
ನಾನಿನ್ಯಾಕಿರಬೇಕೆಂದು
ಆಯಮ್ಮ
ಬುತ್ತಿಗೂಡೆ ಅಲ್ಲಿಟ್ಟವುಳೆ
ಗಂಡನು ಬೆನ್ನತ್ತಿ
ಓಡೋಡಿ ಹೋಗುತಾಳಣ್ಣ ಗಳಿಗಾಗೋ ॥



ಸೂರ್ಯ ಅಸ್ತಮಾಯ ಆಗೋವರಗೂ ಓಡೋದ್ರು
ಗಂಡ ಹೆಂಡತಿ ಇಬ್ರೂನು
ದನಗಳು ಆಯಪ್ಪನ ಹಿಂದೆ ಹೋಗಲಿಲ್ಲ
ಹುಟ್ಟಿದಾಗಿಂದ ಮೇಸಿದ್ದ ದನ ರೋಪ್ಪದಾಗೆ ಅವೆ
ಹೋದ ಅಂತ ಹೋಗಲಿಲ್ಲ
ಅಣ್ಣತಮ್ಮಗಳೂ ಹೋಗಲಿಲ್ಲ
ಕೂಡಿದ್ದ ಜೀವ ಆಗಿದ್ದಕೆ
ಈಯಮ್ಮ ಬೆನ್ನತ್ತಿ ಹೊದ್ಲು
ಸೂರ್ಯ ಮುಣಕಿದ ಮೇಲೆ ಹಿಂದಿರುಗಿ ನೋಡ್ತಾನೆ
ಹಿಂದೆನೆ ಬರುತಾ ಇದ್ಲು ಆಯಮ್ಮ

ಶಂಕರಾ
ನಾನಾಳಿದು ದನುಗಳು ಬರಲಿಲ್ಲ
ಹಿಂದೆಮುಂದೆ ಹುಟ್ಟಿದ ಅಣ್ಣ ತಮ್ಮಗಳು ಬರಲಿಲ್ಲ
ನಮ್ಮಪ್ಪಗೆ ನಾನೊಬ್ಬನೆ ಮಗ
ಇನ್ನ್ಯಾರವರು ಅಣ್ಣತಮ್ಮಗಳು
ಸಿಕ್ಕಪ್ಪನು ಮಕ್ಕಳು ಇದ್ರೆಷ್ಟು ಬಿಟ್ರೆಷ್ಟು

ಶಂಕರ
ಅವುರವುರು ಸಂಪಾದನೆ ಮಾಡಿರೋ
ವಜ್ರ ವೈಡೂರ್ಯ ನನಗೆ ಬ್ಯಾಡ
ಈ ದನುಗಳೂ ಬ್ಯಾಡ ಅಂತೇಳಿ
ಆ ಸಾತೆಮ್ಮನ ಮೇಲೆ ಕರುಣೆ ಉಂಟಾಯ್ತು ಆವಾಗ
ಆವಾಗ ಓಡೋಗಿ ಬಾಚಿ ತಬ್ಬಿಕಂಡು
ಗೋಳಾಡಿ ಗಂಡ ಹೆಂಡತಿ ಇಬ್ರೂನು
ಅಲ್ಲಿ ಮುತ್ತುಗದು ಸೊಪ್ಪು ಬಂದ್ರೆ ಸೊಪ್ಪು ಕಡುದು
ಸೊಪ್ಪಿನ ಗುಡ್ಲು ಕಟ್ಟಿಬಿಟ್ರು
ಇಬ್ಬರೂ ಕಾಲವರಣೆ ಮಾಡೋದಕೆ ಅರಣ್ಯದಲ್ಲಿ

ಸೊಪ್ಪಿನ ಗುಡಿಸಲುಕಟ್ಟಿ
ಕಾರೆಹಣ್ಣು ಕವಳೆ ಹಣ್ಣು ತಿಂದುಕಂಡು

ಕಾಲಾವರಣ ಮಾಡಿಕೊಂಡು
ಗಂಡ ಹೆಂಡತಿ ಇಬ್ಬರು
ಆ ಗುಡುಲೊಳಿಗೆ
ಇರುವರಣ್ಣಾ ಗಳಿಗಾಗೋ ॥

ಗೂಡುಲೊಳಗಿರುವಾಗ
ತಾಯಿ ಸಾತೆಮ್ಮನಿಗೆ
ನೀರು ನಿಂತಾವು ಸ್ವಾಮಿ
ಗರ್ಭಿಣಿಯಾದಳಣ್ಣ
ಸಾತೆಮ್ಮ ಸ್ವಾಮಿ ಶಿವುನೀಗೋ ॥

ಗರ್ಭಿಣಿಯಾಗುತ್ತಿದ್ದಂಗೆ
ಆರು ಮೂರೊಂಬತ್ತು
ತಿಂಗಳು ತುಂಬಿತಣ್ಣ
ಸಾತೆಮ್ಮನಿಗೆಲ್ಲಯೋ
ಜನನವಾಗದುಕ್ಕೆ
ಕಷ್ಟಉತುಪತಿಯಾಗಿತಣ್ಣ
ಆಗಲೆ ಭಾನುವಾರ
ರಾತ್ರಿ ಕಾಲದೊಳಗಯ್ಯೋ ॥

ಮಾರುಮುತ್ತಣ್ಣ
ಇವುಳಿಗೆ ಹೆರಿಗೆ ಆಗದುಕ್ಕೆ ಕಷ್ಟ ಉತ್ಪತ್ತಿ ಆತು
ನಮ್ಮದು ನಂದನುಗೋಕುಲ
ಹೆರಿಗೆ ಸೂತಕ ನನ್ನ ಮೇಲೆ ಬೀಳಕಿಲ್ಲ ನೆರಳು
ಅಂದೇಳಿ ಆ ಕಡೆ ಹೋಗುಬಿಟ್ಟು
ಆ ಗಿಡದ ಮರೆ ಕುಂತಗಂಬಿಟ್ಟ ಮಾರು ಮುತ್ತಣ್ಣ
ಈಯಮ್ಮ ಗುಡಿಸಲೊಳಗೆ ಒಬ್ಬಳೇ ಗೋಳಾಡ್ತಾಳೆ

ಶಿವನೆ ಶಂಕರನೆ
ಪಾರ್ವತಿ ಪರುಮೇಶ್ವರುನೆ
ತಾಯಿಲ್ಲೊ ತಂದಿಲ್ಲೊ

ಬಂಧಿಲ್ಲೊ ಬಳಗಿಲ್ಲೊ
ಅರಣ್ಯದೊಳಗಿದ್ದೀನಿ ಶಿವುನೆ
ನೀನೆ ನನ್ನ
ಕಾಪಾಡು ಬೇಕೆಂದಳು ಸಾತಮ್ಮ
ಜರುಣೂದು ನೋವಿಗೆ
ತಟಗಳಲಾರದೆ ಗಳಿಗಾಗೋ ॥

ಆಗಲೆ ಶಂಕರನೆ
ಜರಣ ಮರಣ ರಗಿತ
ಶಂಕರ ಜಂಗುಮನಣ್ಣ
ಕೈಲಾಸದೊಳಗೆ
ಶಿವುನು ಪಾರ್ವತಿಯಮ್ಮ
ಮುನ್ನೂರರವತ್ತು ಕೋಟಿ ಲಿಂಗಾನ
ಪೂಜೆನೆ ಮಾಡೆವುರಯ್ಯೋ
ಪಗುಡೆ ಆಡುತ ಕುಂತಾವುರೋ
ಶಂಕರನು ಪಾರ್ವತಿದೇವಿ ಗಳಿಗಾಗೋ ॥

ಕೈಲಾಸದೊಳಗಯ್ಯೋ
ಶಿವುನು ಪಾರ್ವತಿಯಮ್ಮ
ಪಗಡೆ ಆಡುತ ಕುಂತಿರುವಾಗ
ದೇವುರು ಕೃಪೆಯಿಂದ
ಈಯಮ್ಮನು ಸದ್ದು
ಪಾರ್ವತಿದೇವಿ ಕಿವಿ ಕರುಣಕು
ಕೇಳೀತಯ್ಯ ಗಳಿಗಾಗೋ ॥

ಜಾಗೃತಿ ಎದ್ದಳು ಪಾರ್ವತಿ ದೇವಿ
ದಡುದಡುನೆ ಕೈಲಾಸದು
ದ್ವಾರುಬಾಗಿಲಿಗೆ ಬಂದು ನೋಡುತಾಳೆ
ಕಾಡಿನೊಳುಗಣ್ಣ
ಪರಮ ಪತುವ್ರತೆ ಸಾತೆಮ್ಮ

ಗೋಳಾಡುತ್ತಾಳೆ
ಹೆರಿಗೆ ನೋವು ಬಂದೋ ॥

ಆಶಿರುವಾದ ಮಾಡಿದುಳೋ
ಪಾರ್ವತಿ ದೇವಿಯಮ್ಮ
ಕೈಲಾಸದು ದ್ವಾರಿ ಬಾಗಿಲೊಳು ನಿಂತು
ಆಶಿರುವಾದ ಮಾಡುತುಲೆ
ಜನನವಾಯಿತು
ಗಂಡು ಮಗುವಯ್ಯೋ ॥

ಜನನವಾಗಿತಣ್ಣ
ಗಂಡುಮಗುವೆಲ್ಲಮ್ಮ
ಅಲ್ಲಿ ಬಿಸಿ ನೀರಿಲ್ಲ ಶಂಕರನೆ
ಕಾಲೀಗೂ ಮೆಟ್ಟಿಲ್ಲುವಣ್ಣ
ಕಿವಿಗೆ ಹತ್ತಿ ಇಲ್ಲವಯೋ
ಕಾಡಿನೊಳುಗೈಯೋ ॥

ಮೂರು ದಿನವಾಗುತ್ತಿದ್ದಂಗೆ
ಆವತ್ತು ಬಾಣಂತಿ ಮಗುವು
ನೀರಾಕೆಂಬೇಕಣ್ಣ
ಸ್ವಾಮಿ ನೀರಾಕಬೇಕಿಲ್ಲಿ
ತೊಟ್ಟು ನೀರಿಲ್ಲ ಕಾಡಿನೊಳುಗೆ
ಏನೂ ಮಾಡಲಿ ಸ್ವಾಮಿ ನಾವೀಗ
ಕೇಳೇ ಸಾತಿ ನೀನು
ಅನುಮಾನ ಪಡುಬ್ಯಾಡ
ದೇವೇಂದ್ರನ ತೋತುರಣೆ
ಮಾಡುತಿನಿ ನಾನೀಗ
ಕುಂಭ ದ್ರೋಣಿ
ಮಳೆಯನೆ ಸುರಿಯತೈತೆ
ಕಾಡಿನೊಳಗೆ
ಮಡಗು ನೀರು ನಿಲ್ಲುತೈತಮ್ಮ

ಮಡಿಗಿ ನೊಳಗೋಗಿ
ಮಗುವು ಬಾಣಂತಿ ಸ್ನಾನ ಮಾಡೀರಿ
ಅಂದಾನೋ ಸ್ವಾಮಿ ಗಳಿಗಾಗೋ ॥

ಆಗಾಲೆ ನಿಂತುಗಂಡು
ಆ ದೇವೇಂದ್ರನು ತೋತುರುಣೆ
ಮಾಡಿದುನಣ್ಣ
ಮಾರು ಮುತ್ತಣ್ಣ
ಆಗಲೆ ಶಂಕರನೆ
ಕುಂಭದ್ರೋಣಿ ಮಳೆಯನೆ ಸುರಿಯೋದಯ್ಯೋ ಗಳಿಗಾಗೋ ॥

ಆ ಮಡುಗಿನೊಳಗೋಗಿ
ಮಗುವು ಬಾಣಂತಿ
ಸ್ನಾನ ಮಾಡಿದುರಣ್ಣಾ ॥

ಆವತ್ತ ಅವರಿಗೆ ಕಾಡಲ್ಲಿ ಮೆಟ್ಟಿಲ್ಲದೆ
ಕಿವಿಗೆ ಹತ್ತಿ ಇಕ್ಕೆಮದಕ್ಕೆ ಅವಕಾಶವಿಲ್ಲದೆ ಸೇರಿದ್ದಕ್ಕಾಗಿ
ನಮ್ಮ ಜನ ಗೊಲ್ದುರು
ಸರಿ ಈಗಲೂ ಕಾಲಿಗೆ ಮೆಟ್ಟಾಕಕಿಲ್ಲ
ಕಿವಿಗೆ ಹತ್ತಿ ಇಕ್ಕಕಿಲ್ಲ
ಬಾಣಂತೀರು ಜನಿಗೆ ಕುಳುದು
ಸೂತಗ ಕಳಕಂಬೊವರಗೂ
ಚಪ್ಪಲಿ ಆಕೆಮದಂಗೆ ಇರಬೇಕು

ಮಳೆ ಹೊಯಿತಲಿರುಲಣ್ಣಾ
ಊರುಬಿಟ್ಟು ಆಚೆಗೆ
ಗುಡುಸಲು ಕಟ್ಟುತಾರೆ
ಅಲ್ಲಿಗೆ ಹೊಯ್ಯಾ ಮಳೆಯಾಗೆ
ಮಗುವನ್ನ ಮೊರುದಾಗಾಕ್ಯಂಡು
ಗುಡಿಸಲೊಳು ಗಾಯಮ್ಮ
ಊರು ಬಿಟ್ಟ ಕಡೆ

ಮೂರು ತಿಂಗಳು ವಾಸ
ಮಾಡಬೇಕಯ್ಯ ಗಳಿಗಾಗೋ ॥

ಆಗಲೆ ಶಂಕರನೆ
ದೇವುರು ಕರುಣಾದಿಂದ
ಅಷ್ಟೆಲ್ಲ ಮಾಡಿದುರಣ್ಣ
ಆಯಮ್ಮ ಕಾಡಿನೊಳುಗೆ
ಮೂರು ತಿಂಗಳಾಯಿತು ಆ ಮಗುವಿಗೆ ಗಳಿಗಾಗೋ ॥

ಮೂರು ತಿಂಗಳ ಆಗತಿದ್ದಂಗೆ ಸೂತಕ ಕಳಕಂಡು
ಗಂಡ ಹೆಂಡತಿ ಇಬ್ಬರೂ ಒಂದೇ ಗುಡಿಸಲಲ್ಲಿ
ಕಾಲಾವರಣ ಮಾಡೋದಕೆ ರೆಡಿಯಾದ್ರು
ಒಂದೇ ಗುಡಿಸಲಲ್ಲಿ ಇರುವಾಗ
ಈಯಪ್ಪ ಹಣ್ಣು ಹಂಪಲು ಬಿಡಿಸಕೆಂಬಂದು
ಸಾತಮ್ಮ ಒಬ್ಬಳಿಗೆ ಕೊಟ್ಟು
ಈಯಪ್ಪ ತಿಮ್ಮದಂಗೆ ಸುಮ್ನೆ ಇರನು
ಆಗ ಆಯಮ್ಮ ನೋಡಿದ್ಲು
ಸ್ವಾಮಿ
ಬಿಡಿಸಿದ ಹಣ್ಣೆಲ್ಲ ತಂದು ನನಗೇ ಕೊಡ್ತೀರ
ನೀವು ತಿನ್ನುದಿಲ್ಲಾ
ನಿಮ್ಮ ಹೊಟ್ಟೆಗೆ ಆಧಾರಬ್ಯಾಡವೇ ಶಂಕರಾ
ಬ್ಯಾಡಾ ಸ್ವಾಮಿ
ನಡೀರಿ ಇಬ್ಬರೂ ಬಿಡಿಸಿಕಂಡು ತಿಂಬಾನ ಅಂತೇಳಿಬಿಟ್ಟು
ಅವನ ತಲೆಮೇಲಿದ್ದಂತ ಹಚ್ಚಡ ಕಂಬಿ ಪೇಟವನ್ನು
ಮಗುವಿಗೆ ಜೋಲಿಕಟ್ಟಿ ಆ ಗುಡಿಸಲಲ್ಲಿ
ಹಣ್ಣು ಬಿಡಸದುಕಂತ ಹೋದುರು
ಇಬ್ಬರು ಮೂರುತಿಂಗಳು ಮಗನಗುಡಿಸಲಲ್ಲಿ ಬಿಟ್ಟು
ಹಣ್ಣು ಬಿಡಸದಕೇಂತ ಈಚೆಗೆ ಬರುತ್ತಿದ್ದಂಗೆ
ಅವರಿಗೆ ಮರಣಗಾಲ ಒದಗಿ ಬಂತು
ಸರಿ ಮುಂದಲ ಗಿಡದಲ್ಲಿ ಹಣ್ಣು ಚನ್ನಾಗಿದಾವೆ ಸ್ವಾಮಿ

ಅಲ್ಲೋಗಿ ತಿಂಬಾಣ ಅಂತ ಅಷ್ಟು ದೂರ ಹೋದ್ರು
ಅಲ್ಲಿಂದ ಮುಂದ್ಲಗಿಡ ನೋಡಿದ್ರೆ
ಇನ್ನು ಪರಿಮಳದ ಹಣ್ಣು ಕಾಣಿಸ್ತವೆ
ಸ್ವಾಮಿ ಆಗಿಡದಲ್ಲಿ ಹಣ್ಣು ಚಂದಾಗವೆ ಅಂದೇಳೀ
ಶಂಕರನು ಪರಮೇಶ್ವರು ಶಾಪದಿಂದ
ಮಗುವಿನ ಗೀಲನ್ನು ಮರೆತು

ಆ ಗಿಡದಲ್ಲಿ ಹಣ್ಣು ಚನ್ನಾಗವೆ
ಈ ಗಿಡದಲ್ಲಿ ಹಣ್ಣು ಚೆನ್ನಾಗವೆಂದು
ಸಾವಿರಾರೆಜಿನ
ಹೋರಟೋದರು ಸ್ವಾಮಿ
ಸೂರ್ಯಮುಣುಕಾದರಿಗೂ ಗಳಿಗಾಗೋ ॥

ಸೂರ್ಯನ ಅಸ್ತುಮ್ಯಾಯಾ ಆದನು ಶಂಕರನೆ
ದೇವುರು ಕೃಪೆಯಿಂದ
ಅಸ್ತಮನಾದನು ಸೂರ್ಯ
ಆಗುತ್ತಿದ್ದಂಗೆ ಮಗುವು ಜ್ಞಾಪುನಕು ಬಂದೀತು ॥

ಶಂಕರಾ
ನಮ್ಮಣ್ಣಗಳಿಗೆ ಆರು ಜನಕ್ಕೂ ಮದುವೆ ಆಗಿದ್ರೂ
ವಂಶ ಬೆಳೆಸಿರಲಿಲ್ಲ
ನಾನು ಮದುವೆ ಆಗಿದ್ದಕೆ ವಂಶ ಬೆಳೆಸಿದ ಶಂಕರ
ಆ ಮಗುವಿನ ಗೀಳು ಮರೆತು ಅರಣ್ಯಕ್ಕೆ
ಆ ಹಣ್ಣು ಈ ಹಣ್ಣು
ಅಂತ ಹಣ್ಣುಗಳ ಫಲಾರ ನೋಡಿಕೊಂಡು ಬದುಬಿಟ್ಟುವಲ್ಲಿ
ಸಾತಮ್ಮ
ಈಗ ನಮ್ಮ ಮಗು ಹುಲೀನೆ ತಿಂತೊ ಕರಡೀನೆ ತಿಂತೋ
ವಂಶಾ ಕಳಕಂಡು ಮೇಲೆ ನಾವಿದ್ದು ಫಲವೇನು ?
ಈ ಪಾಟಿ ಅರಣ್ಯದಲ್ಲಿ ಹುಲಿ ಕರಡಿ ಜೀಕರಸ್ತವೆ
ಘೋರ ಅರಣ್ಯ ಇದರಲ್ಲಿ ಮಗ ಇನ್ನು ಐತಾ
ಯಾವ ಹುಲಿ ಕರಡಿ ತಿಂದು ಬಿಡ್ತೋ

ಅಂದು ಕೈ ಕೈ ತಬ್ಬಿಕಂಡು
ಗೊಳಾಡಿಕೊಂಡು
ಹೋಗುತಾರಣ್ಣ ಗಳಿಗಾಗೋ ॥

ಹೋಗುತಾ ಹೊಗುತಾ
ಅಮವಾಸೆ ಕತ್ತಲು ಶಂಕರನೆ
ಒಂದು ಬೆಟ್ಟದಾ
ಜರುಗೀನು ಬಂದಾರೋ ಗಳಿಗಾಗೋ ॥

ಬೆಟ್ಟದಾ ಜರುಗಿಗು ಬಂದು
ಕೈಕೈ ತಬ್ಬಿಕಂಡು ಗೊಳಾಡುವಾಗ
ಜಾರಿ ಬೆಟ್ಟುದು ಮೇಲಿಂದ
ಕೆಳುಗಡೆಕೆ ಬಿದ್ದಾರಣ್ಣಾ ಗಳಿಗಾಗೋ ॥

ಬಿದ್ದಾರೆ ಇಬ್ಬುರು
ಪ್ರಾಣ ಹೊರುಟೋಗಿತು ಶಂಕರನೆ
ಬೆಟ್ಟುದು ಮೇಲಿಂದ ಬಿದ್ದು
ಸಾತೆಮ್ಮ ಮಾರುಮುತ್ತಣ್ಣ ಸತ್ತೊದರಲ್ಲಮ್ಮ
ಸತ್ತು ಹಸುರುಗಿಡದ ಮೇಲೆ ಕುಂತುಗಂಡು
ಈಶ್ವರುನ ತಪಸು ಮಾಡ್ಯಾರೋ ಶಿವುನೀಗೋ ॥

ಕೈಲಾಸದಿಂದ ಸಕ್ಕಟ್ಟು ಸರೀವೂತು ಅರ್ಜುಮ ರಾತ್ರಿ ಹೊತ್ತಿನಲ್ಲಿ
ಆ ಪರಮೇಶ್ವರ ನರಲೋಕಕ್ಕೆ ಸಂಚರಣೆ ಬರ್ತಾ ಇದ್ದ ಪರಮೇಶ್ವರ

ಉತ್ತುತ್ತೆ ಹಣ್ಣಿನ
ಪಳುಒಳುಗೆ ಒಳುಗಮ್ಮ
ಉತ್ತುಮುರ ರಥುವಯ್ಯೋ
ಪಾರ್ವತಿ ಪರಮೇಶ್ವರನ ರಥುವಣ್ಣ
ಕೈಲಾಸದಿಂದ ನರಲೋಕುಕೊ ಸಾಗಿ ಬರುತೈತೋ ॥

ಆರುತಿ ಬೆಳಗುವೆನೋ
ಹರನಿಗೊಂದು ಆರುತಿ ಬೆಳಗುವೆನೋ

ನರರಿಗೆ ಅರಿಯದ
ಬೆಡಗಿನ ಶಿವನಿಗೊಂದು
ಆರುತಿ ಬೆಳಗುವೆನೋ ॥

ಲೋಕ ಲೋಕಕ್ಕೆ ಒಡೆಯಾ
ನಮ್ಮ ಶಿವ ಪಾತಳಗಂಗೆಯ ಪುರುಷ
ನಮ್ಮ ಶಿವ ಪಾತಳಗಂಗೆಯ ಪುರುಷ
ಆರತಿ ಬೆಳಗುವೆನೋ ॥

ಹರನಿಗೊಂದು ಆರತಿ ಬೆಳೆಗುವೆನು
ಮುತ್ತಿನ ಆರತಿ ಮಾಡಿ
ನಾ ಬೇಡುವೆ ನಾಕಂಡ್ಲ ಪರಶ್ರಿವನ
ನಾಬೇಡುವೆ ನಾಕಂಡ್ಲ ಪರಶಿವನ
ಆರತಿ ಬೆಳಗುವೆನೋ
ಹರನಿಗೊಂದು ಆರತಿ ಬೆಳಗುವೆನೊ
ನರರಿಗೆ ಅರಿಯದ
ಬೆಡಗಿನ ಶಿವನಿಗೊಂದು ಆರತಿ ಬೆಳಗುವೆನು ॥

ಹೂವಿನ ಆರತಿ ಮಾಡಿ
ನಾ ಬೇಡುವೆ ಮುಕ್ಕಣ್ಣರ ಶಿವನ
ನಾ ಬೇಡುವೆ ಮುಕ್ಕಣ್ಣರ ಶ್ರಿವನ
ಆರುತಿ ಬೆಳಗುವೆನೊ
ಶಂಕರಗೆ ಆರತಿ ಬೆಳಗುವೆನೋ ॥


ನೀಲಕಂಠನೆ ಪರಮೇಶ್ವರ
ಜಂಗು ಲಿಂಗವಧರಿಸಿ
ಜಂಗಮರಿಗ್ವಾಲುದಂತ
ಮುಕ್ಕಣ್ಣ ಪರಶಿವಗಾರುತಿ ಬೆಳಗುವೆನೋ ॥

ಶಿವಶಂಕರ ಶ್ರೀ ಪಾರ್ವತಿ ರಮಣನಿಗೆ
ಆರುತಿ ಬೆಳಗುವೆನು

ಎಡೆಯೂರವಾಸನಿಗೆ
ಆರುತಿ ಬೆಳಗುವೆನೋ ॥

ಜಯ ಸಿದ್ದಲಿಂಗೇಶನಿಗೆ
ಆರುತಿ ಬೆಳಗುವೆನೋ
ಮಸಾಣ ರುದ್ರನಿಗೆ
ಆರುತಿ ಬೆಳಗುವೆನೋ
ಜಡೆಯ ಮಲ್ಲೇಶನಿಗೆ
ಆರುತಿ ಬೆಳಗುವೆನೋ ॥

ಮಲ್ಲಯ್ಯ ಮಾದೇಶ್ವರಿನಿಗೆ
ಆರುತಿ ಬೆಳಗುವೆನೋ
ಶಿವ ಶಂಕರ ಶ್ರೀಗೌರಿಯ ರಮಣನಿಗೆ
ಆರುತಿ ಬೆಳಗುವೆನೋ
ವೀರುಭದ್ರನ ತಂದೆ ಶ್ರೀ ಪರಮೇಶ್ವರನಿಗೆ
ಆರುತಿ ಬೆಳಗುವೆನೋ ॥



## ದೇವರ ಎತ್ತಯ್ಯ

ಪಟ್ಟಣ ಎಲ್ಲ
ತಿರುಗಿ
ಕೇಳಾನಲ್ಲೋ
ಅಕ್ಕ ಮಾರಿಯ
ಕಣಿಗಳ

ದೇವರ ಎತ್ತಯ್ಯ
ಆವಿನ ಗೂಡಿನಾಗ
ತಾಯಿ ಮೂಡುವಳೆ
ಕರಿಯವ್ವ
ಮೂಡಿದ ಕಲ್ಲ
ಕುಟ್ಟಿರ ಕಾರಣಾದಿಂದ
ಆವೆಲ್ಲ ಮಡಿದು
ಮಲಗಾವೆ

ಮೈಗದ ಗೌಡ
ರಾಮಶಾಲೆ ಹೊನ್ನ
ಮಡಲೊಯ್ಯೋ
ಕಟ್ಟಿಕೊಂಡು
ರಾಜ್ಯವನ್ನೆಲ್ಲ
ತಿರುಗಾನೋ

ಅಪ್ಪ ಎತ್ತಯ್ಯನ
ಎತ್ತಿನ ಗೂಡಿನಾಗೆ
ಅಕ್ಕ ಹುಟ್ಟುವಳೆ

ಕರಿಯವ್ವ

ಹುಟ್ಟಿದ ಎಲ್ಲ
ಕಿತ್ತ ಕಾರಣದಿಂದ
ಎತ್ತೆಲ್ಲ ಮಡಿದು
ಮನಗವ್ವೆ

ಮೈಗದ ಗೌಡ
ಪಡಸಾಲೆ ಹೊನ್ನ
ಮಡ್ಲಿಯ್ಯೋ
ಪಡಸಾಲೆ ಹೊನ್ನ
ಮಡಿಲಿ
ಕಟ್ಟಿಕೊಂಡು
ಪಟ್ಟಣ ಎಲ್ಲ
ತಿರುಗಾನೋ

ರಾಜ್ಯವನ್ನೆಲ್ಲ
ತಿರುಗು
ಕೇಳಾನಲ್ಲೊ
ತಾಯಿ ಮಾರೀಯ
ಕಣಿಗಳ

ಮುತ್ತಿನ ಕುಕ್ಕೆ
ನೆತ್ತಿ ಮ್ಯಾಲೆ
ಇಟ್ಕೊಂಡು
ಬಿತ್ತಾರಿ ಕೊರಮಿ
ಬರ್‍ತಾಳೆ
ಮೈಗದ ಗೌಡ

ಮುತ್ತೀನ ಗದ್ದೀಗೆ
ಒದಿರಾಸೋ
ಕೇಳಾನಲ್ಲೋ

ಅಕ್ಕ ಮಾರಿಯಾ
ಕಣಿಗಳ

ಅಕ್ಕಮಾರಿಯ
ಕಣಿಯ
ಕೇಳೇನೆಂದು
ಸತ್ತೆತ್ತಿನ ಪ್ರಾಣ
ಉಳಿಸಮ್ಮ

ಸತ್ತೆತ್ತಿನ ಪ್ರಾಣ
ಉಳಿಸಿದರೆ
ನಿನ್ನೀಗೆ
ಹತ್ತೇಳು ಅಂಕಣದ
ಗುಡಿಕಟ್ಟಿ
ಬೇವಿನಳ್ಳಿ ಅಕ್ಕ
ನಿಮ್ಮ ಪರಿಸಿ
ಮೆರಿಸೇನು

ಚಿನ್ನದ ಕುಕ್ಕೆ
ಕೆನ್ನೇ ಮೇಲೆ
ಇಕ್ಕಂಡು
ಬಿನ್ನಾಣಿ
ಕೊರಮಿ
ಬರುತಾಳೆ

ಮೈಗದ ಗೌಡ
ಹೂವಿನ ಗದ್ದೀಗೆ
ಒದಿರಾಸೋ
ಕೇಳನಲ್ಲೋ
ತಾಯಿ ಮಾರೀನ
ಕಣಿಗೊಳ

ಕೇಳೇನೆಂದು
ಹೋದೆತ್ತಿನ ಪ್ರಾಣ
ಉಳಿಸಮ್ಮ
ಉಳಿಸಿದರೆ
ನಿನ್ನೀಗೆ
ಆರೇಳು ಅಂಕಣದ
ಗುಡಿಗಟ್ಟಿ ತಾಯಿ
ನಿಮ್ಮ ಪರಿಸೆ
ಮೆರೆಸೇನು

ಅಕ್ಕ ಕರಿಯವ್ವ
ಮುತ್ತ ಮಡಿಲ
ತುಂಬಿ
ಎತ್ತಿನ ಇಂಡಿಗೆ
ನಡೆದಾಳು

ಬೇವಿನಳ್ಳಿ
ಸೊಪ್ಪಾಗ ಇಳಿಯ
ತೆಗೆದಾಳು
ಎತ್ತ ಎಬ್ಬುರಿಸಿ
ಹೊಡೆದಾಳು

ತಾಯಿ ಕರಿಯವ್ವ
ಹೂವ ಮಡಿಲ ತುಂಬಿ
ಆವು ಇಂಡಿಗೆ ನಡೆದಾಳು
ಬೇವಿನಹಳ್ಳಿ ಕಾಯಾಗೆ
ಇಳಿಯ ತೆಗೆದಾಳು
ಆವ ಎಬ್ಬಿರಿಸಿ
ಹೊಡೆದಾಳು

(ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಬೇವಿನಹಳ್ಳಿಯಲ್ಲಿನ ಕರಿಯಮ್ಮನ ಮಹಿಮೆ ಕುರಿತ ಹಾಡು)

# ಬೇಡರ ಕಾವ್ಯ



## ಗಾದ್ರಿಪಾಲನಾಯಕ

ಎಲ್ಲಾಗಿನ್ನಾ ಮೊದಲೇ ಬಲ್ಲೋಳೆ ಬಲಾಗಂಬೆ
ಎಳ್ಳು ಜೀರಿಗಿಯಾ ಬೆಳಾವೊಳೇ । ಗುಮ್ಮಾಮ್ಮಾನಾ
ಬಲ್ಲೋಳೆ ಮೊದಲೇ ಬಲಾಗಂಬೆ ॥ ಸೋಬಾನವೇ॥

ಆಕೆಗಿನ್ನಾ ಮೊದಲೇ ಆಕರಿ ಬಲಾಗಂಬೆ
ಕತ್ತಿ ಜೀರಿಗಿಯ ಬೆಳಾವೊಳೇ । ಗುಮ್ಮಾಮ್ಮಾನಾ
ಆಕಿಯಾ ಮೊದಲೇ ಬಲಾಗಂಬೆ ॥ ಸೋಬಾನವೇ ॥

ವಾಲಿ ತೊಡಿಯ ಮ್ಯಾಲೆ ಗ್ಯಾನ ನಿಮ್ಮಾಮ್ಯಾಲೆ
ಮ್ಯಾಲೊಂದು ಸೊಲ್ಲೆ ಮೊದಲರಿಯೇ । ಪಾಲಯ್ಯ
ಬಾರದಾ ಪದುನಾ ಬರಾಕೊಡು ॥ ಸೋಬಾನವೇ॥

ಬಾರದಾ ಪದುಗಾಳು ವಾಲಿಮ್ಯಾಲೇ ಐದಾವೇ
ವಾಲಿತತ್ತಾರೋ ಬೆನಾವಣ್ಣಾ । ಗ್ಯಾನಾರುಳ್ಳ
ನಾರಿಗೆ ಪದುನಾ ಬರಾಕೊಡೋ ॥ಸೋಬಾನವೇ॥

ಒತ್ತಿಗೆ ತೊಡಿಯ ಮ್ಯಾಲೇ ಸಿತ್ತಾ ನಿಮ್ಮಾಮ್ಯಾಲೆ
ಮತ್ತೊಂದೆ ಸೊಲ್ಲ ಮೊದಲರಿಯೆ । ಪಾಲಯ್ಯ
ತಪ್ಪಿದಾ ಪದುನಾ ಬರಾಕೊಡೋ ॥ ಸೋಬಾನವೇ ॥

ತಪ್ಪಿದಾ ಪದೂಗಾಳೂ ಒತ್ತಿಗೆ ಮ್ಯಾಲೈದಾವೇ
ವತ್ತಿಗೆ ತತ್ತಾರೋ ಬೆನಾವಣ್ಣಾ । ಗ್ಯಾನಾರುಳ್ಳ
ನಿಸ್ತ್ರರರಿಗೆ ಪದುನಾ ಬರಾಕೊಡೋ ॥ ಸೋಬಾನವೇ ॥

ಅಲ್ಲಲ್ಲಿ ನೋಡದಾ ಗ್ಯಾನ ಯರುಡಾಗದ ಜೋಡಿ
ನಾವಿಬ್ಬರೂ ಆಗುಲದಾಂಗಾಡಿವೇ । ವಾಲಿಗೊಜ್ಜರುವಾ
ಬಿಗುದಾಂಗೇ ॥ ಸೋಬಾನವೇ ॥

ಅತ್ತಿತ್ತ ನೋಡದಾ ಚಿತ್ತಾ ಎರುಡಾಗದಾ ಜೋತೆ
ನಾವಿಬ್ಬರೂ ಅಗುಲದಂಗಾಡೀವೀ । ಕಟ್ಟಿಗೊಜ್ಜುರುವಾ
ಬಿಗುದಂಗೇ ॥ ಸೋಬಾನವೇ ॥

ಬೆಂಕಿಯ ಹಡೂದಾಳೇ ಎಂಟೂಗುಂಡ್ಯೆ ಗುರುನಾ
ಗಂಟಾಲ ಗಲುಗಾ ತಿರುವೋರೇ ।ಪಾಲಯ್ಯನ
ಬಂಟೆ ಮಲ್ಲಮ್ಮ ಹಡುದಾಳೆ ॥ಸೋಬಾನವೇ॥

ಜಾಣೆಯ ಹಡೂದಾಳೆ ಏಳುಗುಂಡಿ ಗುರುನಾ
ನಾಲಿಗೆಲಲುಗ ತಿರುವೂರೇ । ಪಾಲಯ್ಯನ
ಜಾಣೆ ಮಲ್ಲಮ್ಮ ಪಡುದಾಳೇ ॥ಸೋಬಾನವೇ॥

ಕಬ್ಬಿಣದ ಉಯ್ಯಾಲೆ ಜೋಗ್ಹೋಲ ಕೆಯ್ದಾರೇ
ಇಬ್ಬರೂ ತೂಗಿದರೇ ಅಸುನಲ್ಲೆ । ಮಲ್ಲಮ್ಮ
ಹೆಬ್ಬುಲಿ ಮಗುನಾ ಹಡುದಾಳೇ ॥ಸೋಬಾನವೇ॥

ಮಾಣಿಕ್ಯದಾ ಉಯ್ಯಾಲೇ ಮಾಡಲ ಕೈದರೇ ನಾಲರು
ತೂಗಿದುರೇ ಅಸುನಲ್ಲೆ । ಮಲ್ಲಮ್ಮ
ಮಾಗಾಯಿ ಮಗುನಾ ಪಡುದಾಳೇ ॥ಸೋಬಾನವೇ॥

ಎತ್ತುನಾ ಗೂಡಾಗೆ ಹುಟ್ಯಾನೇ ಪಾಲಯ್ಯ
ಹುಟ್ಟೇಳು ದಿನುಕೇ ಶಿವಪೂಜಿ । ನನ್ನಿವಾಳ
ಶೆಟ್ಟಿರಂದುಲುವಾ ಕಳುವ್ಯಾರೋ ॥ಸೋಬಾನವೇ॥

ಆವಾನೂ ಗೂಡಾಗೇ ಆಡ್ಯಾನೇ ಪಾಲಯ್ಯ
ಆಡೇಳು ದಿನಕೇ ಶಿವಪೂಜೆ । ನನ್ನಿವಾಳ
ದೊರೆಗಳಂದುಲುವಾ ಕಳೀವ್ಯಾರೇ ॥ಸೋಬಾನವೇ॥

ಕಾರೀ ಕಳ್ಳೀ ಕಡುದೂ ಕರೀಯ ಗೂಡಾ ಕಟ್ಟಿ
ಕಿರುಬಳ್ಳಿಲಾಲು ಕರಾವೊರೇ । ಪಾಲಯ್ಯ
ಮ್ಯಾಸ ಮಾನ್ಯರಿಗೆ ತಿಳಿಯಾವೇ ॥ಸೋಬಾನವೇ॥



ಗುಬ್ಬಿಸಿಕಳ್ಳೀ ಕಡುದೂ ಬಗ್ಗಿಸಿ ಗೂಡುಕಟ್ಟೀ
ಹೆಬ್ಬಟ್ಟಿಲಾಲು ಕರುವೊರೇ । ಪಾಲಯ್ಯನ
ಬುದ್ಧಿ ಮಾನ್ಯರಿಗೇ ತಿಳಿಯಾವೇ ॥ಸೋಬಾನವೇ॥

ದುಡ್ಡೀನಾ ದೂಪಾ ಒಯ್ದು ದೊಡ್ಡೋರೇ ಬಲಾಗಂಬೆ
ದೊಡ್ಡಿಬ್ಬಿನಾಗೇ ಇರಾವೊರೇ । ಪಾಲಯ್ಯನ ದೊಡ್ಡೊರೇ
ಮೊದಲೇ ಬಲಾಗಂಬೇ ॥ಸೋಬಾನವೇ॥

ವಾಸನಿ ದೂಪಾ ಒಯ್ದು ಅಕ್ಯಾನೇ ಬಲಾಗಂಬೆ
ಸಾಲೊಬ್ಬಿನಾಗೇ ಇರಾವೋರೇ । ಪಾಲಯ್ಯನ ಸ್ವಾಮಿಯಾ
ಮೊದುಲೇ ಬಲಾಗಂಬೇ ॥ಸೋಬಾನವೇ॥

ಅಣ್ಣಾನ ದಿನಾ ಬಂತು ಹೊನ್ನು ಎತ್ತಾನು ಬನ್ನಿ
ಅಣ್ಣಾ ತಮ್ಮಗಳು ಒಡಾಗೂಡೀ । ಗಾದಾನೂರೂ
ಹೊನ್ನಿಗಿ ತಮ್ಮಯ್ಯ ಹೊಣೆಯಾದಾ ॥ಸೋಬಾನವೇ॥

ಅಪ್ಪನಾ ದಿನಾ ಬಂತು ರೊಕ್ಕಾ ಎತ್ತಾನೂ ಬನ್ನಿ
ಅಪ್ಪಾ ಮಕ್ಕಳೂ ಒಡಗೂಡಿ । ಗಾದಾನೂರೂ ।
ರೊಕ್ಕುಕ ತಮ್ಮಯ್ಯ ಹೊಣೆಯಾದಾ ॥ಸೋಬಾನವೇ॥

ಅಲ್ಲಿ ಇಲ್ಲಿ ಉರಿಮೆ ವಲ್ಲಾನೇ ಪಾಲಯ್ಯ
ಎಲ್ಲಾ ಜೆಲ್ಲಿಗಳೂ ಹೊಳೂದಾವೇ ।ಗಾದಾನೂರೂ
ಕಂಚೀನಾ ಉರಿಮೆ ಬರಾಲೊಂದೇ ॥ಸೋಬಾನವೇ॥

ಅತ್ತಲಿತ್ತಾ ಉರಿಮೆ ಒಪ್ಪಾನೇ ಪಾಲಯ್ಯ
ಎತ್ತಾ ಜಿಲ್ಲೆಗಳು ಹೊಳುದಾವೇ ।ನನ್ನಿವಾಳ
ಒಕ್ಕಲ ಉರಿಮೆ ಬರಾಲೊಂದೇ ॥ಸೋಬಾನವೇ॥

ಆರುವಾರಾ ಕೊಟ್ಟು ನೀಲಿಯ ಸತ್ತರಿಕೆ ಮ್ಯಾಲೆ
ದುರುಗುದಲೆ ಅಣುದಾರೇ । ಸತ್ತರಿಕೆ
ಸ್ವಾಮಿಗ್ವಾಲಾಲೀ ಇಡೂದಾರೇ ॥ಸೋಬಾನವೇ॥

ಅತ್ತುವಾರಾ ಕೊಟ್ಟು ಮುತ್ತಿನಾ ಸತ್ತುರಿಕೆ ಮತ್ತೆ
ದುರುಗುದಲೆ ಅಣುದಾರೇ । ಸತ್ತುರಿಕೆ
ಅಪ್ಪಾಗ್ವಾಲಾಲಿ ಇಡುದಾರೇ ॥ಸೋಬಾನವೇ॥

ಹಲಗೆಯನ್ನಾ ಮ್ಯಾಲೇ ಅರೂ ನಿಂಬೆಹಣ್ಣು
ಅಣ್ಣಾನ ಹೊರಡೂಸ ಹಿರಿಯರೇ । ನನ್ನೀವಾಳಾ
ಸಣ್ಣಗೋಸೀಕ್ಯಾರಿ ವಳೀ ತಂಕಾ ॥ಸೋಬಾನವೇ॥

ಪೆಟ್ಟಿಗನ್ನಾ ಮೇಲೇ ಹತ್ತೂ ನಿಂಬೆಹಣ್ಣು
ಅಪ್ಪಾನ್ನೊರಡೂಸ ಹಿರಿಯೋರೇ । ನನ್ನೀವಾಳ
ಸಿಕ್ಕಗೋಸಿಕ್ಯಾರೆ ವಾಳೀ ತಂಕಾ ॥ಸೋಬಾನವೇ॥

ಆರುರುಮೆ ಇಲ್ಲದಲೆ ಅಣ್ಣಯ್ಯ ವರೂಡಾನೇ
ಸಣ್ಣ ನನ್ನೀವಾಳ ಹೊರಾಪ್ಯಾಟಿ । ಬಾಡಿಗೆ
ಇನ್ನೊಂದೇ ಆಳು ಬಿಡಿರಣ್ಣಾ ॥ಸೋಬಾನವೇ॥

ಹತ್ತುರುಮೆ ಈವುದಲೆ ಅಪ್ಪಯ್ಯ ವರೂಡನೇ
ಸಿಕ್ಕ ನನ್ನೀವಾಳಾ ಹೊರೂಪ್ಯಾಟಿ । ಬಾಡಿಗೆ
ಮತ್ತೊಂದೇ ಆಳು ಬಿಡೀರಣ್ಣಾ ॥ಸೋಬಾನವೇ॥

ಅಣ್ಣಾನವರುವೋರು ಹೆಣ್ಣುಳ್ಳ ಮೈಯ್ಯೋರು
ಸಣ್ಣಾ ರುದ್ರಾಕ್ಷಿ ಕೊರಳೋರೇ । ಪಾಪಯ್ಯ
ಅಣ್ಣಯ್ಯಗೆಗುಲು ಕೊಡುಬಾರೋ ॥ಸೋಬಾನವೇ॥

ಅಪ್ಪಾನವರುವೋರು ತುಪ್ಪುಳ್ಳಾ ಮೈಯ್ಯೋರು
ಸಿಕ್ಕ ರುದ್ರಾಕ್ಷಿ ಕೊರಳೋರೇ । ಪಾಪಯ್ಯ
ಅಪ್ಪಯ್ಯಗೆಗುಲಾ ಕೊಡುಬಾರೋ ॥ಸೋಬಾನವೇ॥

ಪೆಟ್ಟಿಗೊರುವಣ್ಣಾಗೆ ಬಟ್ಟ ಮುತ್ತು ಬಾಬೂಲೆ
ಪಟ್ಟೇದುಟ್ಟಾರೆ ನಡಾವೀಗೇ । ಓಬಯ್ಯ
ಪೆಟ್ಟಿಗೆ ಹೊರುವ ಮಗಾನೀಗೇ ॥ಸೋಬಾನವೇ॥

ಕಂಬಿಗೊರುವಣ್ಣಾಗೆ ಮುಂಗೈಯಲೆ ಮೂರರಿವೆ
ಕೆಂದಾಗಾಯವರ ನಡಾವೀಗೆ । ಪಾಪಯ್ಯ
ಕಂಬಿಯ ಹೊರುವಾ ಮಗಾನಿಗೇ ॥ಸೋಬಾನವೇ॥

ಅಣ್ಣಾ ಹೊರಟಾನೊಂದೂ ಅಂದವಿಲ್ಲೂರಾಗೇ
ಅಂಬಾರುಕ ಮಟ್ಟಿದಕುನವೇ । ದಗ್ಗಂಬಾವು
ನೀಲಿಯ ಗುಡುಗು ಹಿಡಿಸ್ಯಾರೇ ॥ಸೋಬಾನವೇ॥

ಅಪ್ಪಾ ಹೊರಟಾನಂದೂ ಒಪ್ಪವಿಲ್ಲೂರಾಗೇ
ಭೂಲೋಕಕು ಮುಟ್ಟಿದಗುನಾವೇ । ದಗ್ಗಂಬವೂ
ಭೂಸೊಕ್ಕುರುಗುಡುಗು ಹಿಡಿಸ್ಯಾರೇ ॥ಸೋಬಾನವೇ॥

ಆವಾನೂ ಕರಕೊಂಡೂ ದೇವಾರೊರಿಸಿಕೊಂಡು
ಎಲ್ಲಿಗೆ ಪಾಲಯ್ಯ ನಿಮ ಪಯಣಾ । ಗೋಸೀ ಕ್ಯಾರಿ
ನೆಲ್ಲಿಯ ಮರುನ ತ್ರನವೀಗೆ ॥ಸೋಬಾನವೇ॥

ಎತ್ತನಾ ಕರಾಕೊಂಡು ಪೆಟ್ಟಿಗೊರಸೀಕೊಂಡೂ
ಎತ್ತ ಪಾಲಯ್ಯ ನಿಮ ಪಯಣಾ । ಗೋಸೀ ಕ್ಯಾರಿ
ಉತ್ತತ್ತಿ ಮರನಾ ತ್ರನವೀಗೇ ॥ಸೋಬಾನವೇ॥

ಎದ್ದನು ಎದ್ದಂಗೆ ಎದ್ದಲ್ಲೊ ಪಾಲಯ್ಯ
ಇದ್ದನಾಲರುನಾ ಕರಾಕೊಂಡೂ । ಗೋಸೀಕ್ಯಾರೇ
ಎದ್ದೆಲ್ಲ ಅರುವಾ ಜಲಾಧೀಗೇ ॥ಸೋಬಾನವೇ॥

ಹೋದೋನು ಹೋದಂಗೇ ಹೋದೆಲ್ಲೋ ಪಾಲಯ್ಯ
ಆದ ನಾಲರನಾ ಕರಾಕೊಂಡು । ಗೋಸೀಕ್ಯಾರೇ
ಹೋದೆಲ್ಲೊ ಅರುವಾ ಜಲಾಧೀಗೇ ॥ಸೋಬಾನವೇ॥

ಜಲಜಲದೀ ಬೆವೆತನಲ್ಲೇ ಪಾಲಯ್ಯ ಜಲದಿ ಬಿಟ್ಟೇಳನಲ್ಲೇ
ಅರವತ್ತಾ ಜಡಿಯೂ ಕೊಡವೂತ । ಗೊಸೀಕೆರೆಯಾ
ಅರಿವೆ ಹೊದ್ದುಕೊಂಡು ಸೀರಿಯ ಒಲುಸುತಾ
ಪರವತ್ತಾಗಿಳಿದಾ ಜಾಲದೀಣೆ ॥ಜಲಜಲದೀ॥
ಅಂಚೆ ಹೊದ್ದುಕೊಂಡು ಸಿಂತೇ ವಾಲಿಸುತಾ
ಪಂಜುಳ್ಳ ಜಡೆಯ ಕೊಡವೂತಾ ।ಗೋಸೀಕ್ಯಾರಿ
ಸಂಪತ್ತಿಲಲಿದಾ ಜಾಲದೀಗೇ ॥ಜಲ ಜಲದೀ॥
ಆಚಲಗಡ್ಡೇ ಗಂಗೇ ಈಚಲಗಡ್ಡಿಗೆ ಬಾರೇ
ಆಕಾಸದ ಗಂಗೇ ತೆರಿಹೋಯ್ಯೋ । ಪಾಲಯ್ಯ
ಆವಿನ ಹಿಂಡಾ ಕಾಡಿಯಾಸೇ॥ಜಲ ಜಲದೆ॥
ಹಿಂದಲಗಡ್ಡೀಗಂಗೀ ಮುಂದಲಗಡ್ಡೀಗೆ ಬಾರೇ

ಅಂಬಾರದ ಗಂಗೇ ತೆರೆಹೊಯ್ಯೋ । ಪಾಲಯ್ಯ
ಎತ್ತಿನಾ ಹಿಂಡೆ ತೆರಿಯಾಸೆ ॥ಜಲ ಜಲದೀ॥

ಬಾಳೀಹಣ್ಣಿನಂಗೆ ಬಾಗಿರುವ್ರೋ ಗಂಗಮ್ಮ
ತಾವೆ ಕೊಡು ನಮ್ಮ ಒಡಿಯಾ । ಪಾಲಯ್ಯಗೇ
ಬೆಳ್ಳಿಯ ಹಾದಿ ತೂಳುದಾರೇ ॥ಜಲ ಜಲದೀ॥

ನಿಂಬೇ ಹಣ್ಣಿನಂಗೆ ತುಂಬಿರುವ ಗಂಗಮ್ಮ
ಇಂಬೆಕೊಡು ನಮ್ಮ ಒಡಿಯಾ । ಪಾಲಯ್ಯಾಗೇ
ಬಂಗಾರದ ಹಾದಿ ತೂಳುದಾರೇ ॥ಜಲ ಜಲದೀ॥

ಬಾವಿಯ ದಡುದಲ್ಲಿ ಬಾಳಿಯ ಮರನುಟ್ಟೀ
ಆಕಳುಸುತಾವೇ ಹುಲಿಕರಡೀ । ಪಾಲಯ್ಯ
ತೂಕಡಿಸಿ ಹೊಳಿಯಾ ಈಳುದಾನೇ ॥ಜಲ ಜಲದೀ॥

ಗಂಗೀಯ ದಡದಲ್ಲಿ ನಿಂಬಿಯಾ ಮರನುಟ್ಟೀ
ರಂಗುಳುಸುತಾವೇ ಹುಲಿಕರಡೀ । ಪಾಲಯ್ಯ
ವಂದಿಸೀ ಹೊಳಿಯ ಈಳುದಾನೇ ॥ಜಲ ಜಲದೀ॥

ಅಂಬಾರದಾ ಮಳಿ ಬಂದೂ ಮುಂಬಾರದ ಕೆರೆ ತುಂಬಿ
ಕೊಂಬಿಲಚ್ಯಾಡಾ ತೆರೀಕಟ್ಟೀ । ಗೊಸೀಕ್ಯಾರೀ
ಹಿಂದಲ ಗೂಡಾಗೇ ಶಿವಪೂಜಿ ॥ಜಲ ಜಲದೀ॥

ಆಕಾಸದಾ ಮಳೀ ಬಂದೊ ಭೂಪಾಲನ ಕ್ಯರಿತುಂಬಿ
ತೋಪಿನಚ್ಯಾಡ ತ್ಯಾರಿಕಟ್ಟೀ । ಗೊಸೀಕ್ಯಾರಿ
ಅಸನ ಕೂಡಾಗೇ ಶಿವಪೂಜೇ ॥ಜಲ ಜಲದೀ॥

ಆರುಸಾವಿರ ಲಿಂಗ ಹೋಗಿ ಮೈತೊಳೀವಾಗ
ಬಾವಿಯ ಕ್ವಲ್ಲೀ ಕದಿಲಾವೇ । ಪಾಲಯ್ಯ
ಹೋಗಿ ಮೈ ತೊಳವ್ರೋ ರಾವಸೀಗೇ ॥ಜಲ ಜಲದೀ॥

ಹತ್ತು ಸಾವಿರಲಿಂಗ ವಕ್ಕಿ ಮೈತೊಳಿವಾಗ
ಕಟ್ಟೀಯ ಕ್ವಲ್ಲೀ ಕದಿಲಾವೇ । ಪಾಲಯ್ಯ
ವಕ್ಕಿ ಮೈ ತೊಳೆವ್ರೋ ರಾವಸೀಗೇ ॥ಜಲ ಜಲದೀ॥

ಆರೂ ಕಂಬೀ ಆಲೂ ಎಳ್ಳುಕ್ಕೆ ಬಂದಾವೇ
ಸ್ವಾಮಿ ಪಾಲಯ್ಯ ಶಿವಪೂಜೆ । ಕುಡವತ್ತಿಗೇ
ಗೌಡಾ ಪಾಪಣ್ಣ ಕಾಳಿವ್ಯಾನೇ ।।ಜಲ ಜಲದೀ।।

ಅತ್ತ ಕಂಬೀ ಹಾಲು ಗೊತ್ತಿಗ್ಗೆ ಬಂದಾವೇ
ಅಪ್ಪ ಪಾಲಯ್ಯ ಶಿವಪೂಜೆ । ಕುಡವತ್ತಿಗೇ
ಗೌಡಾ ಪಾಪಣ್ಣ ಕಾಳಿವ್ಯಾನೇ ।।ಜಲ ಜಲದೀ।।

ಹುಬ್ಬಳ್ಳೀಯಲಿಂದಾ ಉಬ್ಬಿಬಂದಾವ ಬೆಳ್ಳೀ
ಹೆಜ್ಜ್ಯಾಗೆ ಎತ್ತು ತೋರುವ್ಹೋರೇ । ಪಾಪಯ್ಯಗೆ
ಅಗ್ಗಿಲ್ಲದಪವಾ ಕೋಡಿರಣ್ಣಾ ।।ಜಲ ಜಲದೀ।।

ಹರಿಹಾರಾಲಿಂದ ಅರುದು ಬಂದವ ಬೆಳ್ಳೀ
ನಡಿಗ್ಯಾಗ ಎತ್ತೀ ತೋರುವ್ಹೋರೇ । ಪಾಪಯ್ಯಗೆ
ತಡವಿಲ್ಲದಡವಾ ಕೊಡಿರಣ್ಣಾ ।।ಜಲ ಜಲದೀ।।

ಎತ್ತು ತಂದಣ್ಣಾಗೆ ಮತ್ತಿನೋ ಉಡುಗಾರೋ
ಪುತ್ರನೊದ್ದೀರವ್ಹೋ ದೇಸಲೇಯೋ । ಸಂದಿರಗಾಯಿ
ಎತ್ತುತಂದಣ್ಣಾ ಉಡುಗೋರಾ ।।ಜಲ ಜಲದೀ।।

ಆವು ತಂದಣ್ಣಾಗೇ ಮ್ಯಾಲೇನಾ ಉಡಗೋರಾ
ಬಾಲನೊದ್ದಾರವ್ಹೋ ದೇಸಲೇಯೋ ।ಸಂದಿರಗಾಯಿ
ಆವೆತಂದಣ್ಣಾ ಉಡಗೋರಾ ।।ಜಲ ಜಲದೀ।।

ನಿಲ್ಲೋ ನಿಲ್ಲೋ ಪಾಲ ನಿಲ್ಲೋ ಸೆನ್ನಿಗ ಪಾಲ
ಮಲ್ಲಿಗೆ ಹೂವಾ ಸಾರನೀರೇ । ಬರುತಾವೇ
ನಿಲ್ಲೋ ಪಾಲಯ್ಯ ಮುಡೀವಂತೆ ।।ಜಲ ಜಲದೀ।।

ತಾಳೋ ತಾಳೋ ಪಾಲ ತಾಳೋ ಸೆನ್ನಿಗ ಪಾಲ
ಶಾವಂತಿಗೆ ಹೂವೇ ಸಾರನೀರೆ । ಬರುತಾವೇ
ತಾಳೋ ಪಾಲಯ್ಯ ಮುಡೀವಂತೆ ।ಜಲ ಜಲದೀ।।

ಹಿಂದಲ ಪಾದದ ಮ್ಯಾಲೇ ಮುಂದಲ ಪಾದಾನೂರು
ಜಂಗೀಸೀ ಹೂವಾ ಮುಡಿಸೋರೇ । ಕೈಯಾಗೇ
ಉಂಗುರಾ ಬಂದಾವೆ ಊಡುಗೋರು ॥ಜಲ ಜಲದೀ॥

ಆಚೆ ಪಾದುದ ಮ್ಯಾಲೆ ಈಚೆ ಪಾದಾನೂರಿ
ದಾಟಿಸಿ ಹೂವೇ ಮುಡಿಸೊರೇ । ಪಾಪಯ್ಯಗೆ
ಅಚ್ಚಡ ಬಂದಾವೇ ಉಡುಗೋರೆ ॥ಜಲ ಜಲದೀ॥

ನಿಲ್ಲೋ ನಿಲ್ಲೋ ಪಾಲ ನಿಲ್ಲೋ ಸೆನ್ನಿಗ ಪಾಲ
ಮಲ್ಲಿಗೆ ಹೂವೇ ಸಾರನೀರೆ । ಬರುತಾವೇ
ನಿಲ್ಲೋ ಪಾಲಯ್ಯ ಮೂಡಿವಂತೀ ॥ಜಲ ಜಲದೀ॥

ತಾಳೋ ತಾಳೋ ಪಾಲ ತಾಳೋ ಸೆನ್ನಿಗ ಪಾಲ
ಶಾವಂತಿಗೆ ಹೂವೆ ಸಾರನೀರೆ । ಬರುತಾವೇ
ತಾಳೋ ಪಾಲಯ್ಯ ಮೂಡಿವಂತೀ ॥ಜಲ ಜಲದೀ॥

ಆಕಾಸ ಕಾಡ್ಯಾವೇ ಕಾತೇನೀಲದ ಗರಡೇ
ದಾಸನ ಕಂಡಾರೇ ಬಾರೀ ಹೇಳೇ । ಆಡೋದು
ದುಪದೋಕುಳಿಯ ದೀನಾ ಬಂತು ॥ಜಲ ಜಲದೀ॥

ಅಣ್ಣಾ ನಿಮು ದಾಸಾರು ಎಣ್ಣೆ ಬಾನಾ ಉಂಡು
ಸಣ್ಣಾ ಭೂತಾಳ ಕೈಯಲಿಡುದೆ । ಮುಡಾನಾಡ
ಅಣ್ಣಗಾಡಾರೆ ಆರಿಸಾವೆ ॥ಜಲ ಜಲದೀ॥

ಎಕ್ಕಿಯ ಎಲೆ ಹಾಸಿ ಇಕ್ಕ್ಯಾರೆ ಬೆಲ್ಲಾವೋ
ಇಪ್ಪತ್ತಾಲದ ಸಸಿ ನೆಟ್ಟು । ಪಾಲಯ್ಯ
ಸಿಕ್ಕಾ ದಾಸುರಿಗೆ ನ್ಯಾರುಳಾಗಿ ॥ಜಲ ಜಲದೀ॥

ಆಲಾದ ಎಲಿ ಹಾಸಿ ನೀಡ್ಯಾರೋ ಬೆಲ್ಲಾವೋ
ಹನ್ನೊಂದಾಲಾದ ಸಸಿ ನೆಟ್ಟು । ಪಾಲಯ್ಯ
ಸಣ್ಣ ದಾಸರಿಗೇ ನ್ಯಾರುಳಾಗಿ ॥ಜಲ ಜಲದೀ॥

ಅಪ್ಪ ನಿಮು ದಾಸಾರು ತುಪ್ಪ ಬಾನಾ ಉಂಡು
ಸಿಕ್ಕ ಭೂತಾಳ ಕೈಯಲಿಡುದೆ । ಮುಡಾನಾಡ
ಅಪ್ಪಗಾಡಾರೇ ಆರಿಶಾವೆ ॥ಜಲ ಜಲದೀ॥

ಅಣ್ಣ ನಿಮು ದಾಸಾರು ಎಣ್ಣೆ ಬಾನಾ ಉಂಡು
ಸಣ್ಣಾ ಭೂತಾಳ ಕೈಯಲಿಡುದೇ । ಮುಡಾನಾಡ
ಅಣ್ಣಗಾಡಾರೇ ಆರಿಶಾವೇ ॥ಜಲ ಜಲದೀ॥

ಹೊನ್ನೀನಾ ಉರುಮೆ ಇನ್ನೆಲ್ಲಿ ವೊಯಿಸ್ಯಾರೆ
ಸಣ್ಣಗೋಸಿ ಕ್ಯಾರೀ ವಾಳಿಯಾಲಿ । ಬಗುತಾರೂ
ಹೊನ್ನು ಕೊಟ್ಟೆ ಉರುಮೆ ವೋಯಿಸ್ಯಾರೇ ॥ಜಲ ಜಲದೀ॥


ಮುತ್ತನಾ ಡಗಮು ಮತ್ತೆಲ್ಲಿ ವೋಯಿಸ್ಯಾರೆ
ಸಿಕ್ಕಗೋಸೀ ಕ್ಯಾರೀ ವಾಳಿಯಾಲಿ । ಬಗುತಾರು
ಮುತ್ತು ಕೊಟ್ಟು ಡಗಮು ವೋಯಿಸ್ಯಾರೆ ॥ಜಲ ಜಲದೀ॥

ಆಚೆ ಗಡ್ಡಿಗಂಗೀ ಈಚೆ ಗಾಡ್ಡಿಗೆ ಬಾರೆ
ಆಕಾಸುದು ಗಂಗೀ ತೆರೀ ಹೊಯ್ಯೋ । ಪಾಲಯ್ಯ
ಹಾವೀನಾ ಹಿಂಡು ಕಡೀಯಾಸೆ ॥ಸೋಬಾನವೇ॥

ಇಂದುಲ ಗಡ್ಡೀ ಗಂಗೀ ಮುಂದಲ ಗಡ್ಡಿಗೆ ಬಾರೆ
ಅಂಬಾರುದ ಗಂಗೀ ತೆರೀ ಹೊಯ್ಯೋ । ಪಾಲಯ್ಯ
ಆವಿನ ಹಿಂಡೇ ಕಡೀಯಾಸೆ ॥ಸೋಬಾನವೇ॥

ಬಾಳೇ ಹಣ್ಣೀನಂಗೆ ಬಾಗಿರವೋ ಗಂಗಮ್ಮ
ತಾವೇ ಕೊಡು ನಮ್ಮ ಒಡೀಯಾ । ಪಾಲಯ್ಯಗೆ
ಬಾಳೀಯ ಹಣ್ಣು ಶಿವಾ ಪೂಜೆ ॥ಸೋಬಾನವೇ॥

ನಿಂಬೆ ಹಣ್ಣೀನಂಗೆ ತುಂಬಿರುವ ಗಂಗಮ್ಮ
ಇಂಬೇ ಕೊಡು ನಮ್ಮ ಒಡೀಯಾ । ಪಾಲಯ್ಯಗೆ
ನಿಂಬೆಯ ಹಣ್ಣು ಶಿವಾ ಪೂಜೆ ॥ಸೋಬಾನವೇ॥



ಹಿಂಡು ಹಾವಿನ ಗೊಲ್ಲ ಮುಂದೆ ಬಾರೋ ಪಾಲಯ್ಯ
ಕೆಂದೋರಿ ಬೆನ್ನ ವರಸೂತಾ । ತಿಪ್ಪೇನೂರು
ಕಂದಮ್ಮಾಳಾನೆ ಒರಾಗೂಡೋ ॥ಸೋಬಾನವೇ॥

ಎತ್ತು ಹಾವಿನ ಗೊಲ್ಲ ಮುಂದೆ ಬಾರೋ ಪಾಲಯ್ಯ
ಬಟ್ಟೋರಿ ಬೆನ್ನೇ ವರಾಸುತಾ । ತಿಪ್ಪೇನೂರು
ಪುತ್ರಮ್ಮಳಾನೇ ವರಾಗೂಡೋ ॥ಸೋಬಾನವೇ॥

ಜಾಜೀ ಅನ್ನೋ ಹೂವು ನಾರೀ ಮಂಚುಕ ತುಂಬಿ
ನಾನೂರು ದೀಪ ಪಟಾ ಮಾಡೆ । ಅಜ್ಜಾಮಲ್ಲಿ
ನಾನೂರು ಲಿಂಗ ಸಯಾವಾಗೇ ॥ಸೋಬಾನವೇ॥

ಮಲ್ಲಿಗೆ ಅನ್ನೋ ಹೂವು ಕನ್ನೇ ಮಂಚುಕ ತುಂಬಿ
ಮುನ್ನೂರು ದೀಪ ಪಟಾ ಮಾಡಿ । ಅಜ್ಜಾ ಮಲ್ಲಿ
ಮುನ್ನೂರು ಲಿಂಗ ಸಯಾವಾಗಿ ॥ಸೋಬಾನವೇ॥

ರಾಯರಿಗೆ ರಾಜ ಬೀದಿ ಪಾಲಯ್ಯ
ತಾ ಬರುವ ತೇರು ಬೀದಿ

ಅರುಗೀದಾ ಹೊಲುದಾಗೆ ಸುರುಹೊನ್ನಿನ ಗಿಡುದಾಗೆ
ಬಳಿಯಾರಜ್ಜುಣದ ಬಯಲಾಗೆ । ಪಾಲಯ್ಯ
ಉರುಮೀಯಾ ಸಾಲು ನ್ಯಾಡುದಾನೇ ॥ರಾಯರಿಗೆ।

ಬಿತ್ತಿದಾ ಹೊಲುದಾಗೆ ಉತ್ರಾಣೀ ಗಿಡುದಾಗೆ
ಬಿಟ್ಟಾರಜ್ಜುಣದ ಬಯಲಾಗೆ । ಪಾಲಯ್ಯ
ಸತ್ತುರಿಕೆ ಸಾಲು ನ್ಯಾಡುದಾನೆ ॥ರಾಯರಿಗೆ॥

ಆಲುದ ಕಾಯಂಗೆ ತೋಳ ತುಂಬಾ ಗೆಜ್ಜೆ
ವಾಲುಗುದ ನಡುವೇ ಬರುವೋರೇ । ಪಾಲಯ್ಯನ
ವಾಲುಗದರೆಂತ ದೋನುಕೋರೇ ॥ರಾಯರಿಗೆ॥

ಹತ್ತಿಯಾ ಕಾಯಂಗೆ ತೆಕ್ಕಿ ತುಂಬಾ ಗೆಜ್ಜೆ
ಒಕ್ಕಲ ನಡುವೇ ಬರುವೋ । ಪಾಲಯ್ಯ
ಒಕ್ಕಲಿನ್ನಂತೆ ದೋನುಕೋರೇ ॥ರಾಯರಿಗೆ॥

ಹಾವಿನ ಮುಂದೇ ಬರುವ ಗೇರು ಗಂಧದು ತಮ್ಮ
ಹಾವಿನ ಪಾಲಯ್ಯ ಮಗನೋ । ಕೊರಳಾಗಿರುವೋ
ಹೂವಿನ ಮಾಲೆ ನಾಮ್ಮುದಯ್ಯೋ ॥ರಾಯರಿಗೆ॥

ಎತ್ತಿನ ಮುಂದೇ ಬರುವೋ ಸುಕ್ಕಾ ಬಟ್ಟಿನ ತಮ್ಮ
ಎತ್ತಿನ ಪಾಲಯ್ಯ ಮಗನೋ । ಕೊರಳಾಗಿರುವೋ
ಮುತ್ತಿನ ಮಾಲೇ ನಾಮ್ಮುದಯ್ಯೇ ॥ರಾಯರಿಗೆ॥

ಚಂದಗಣ್ಣೀನಯ್ಯ ಗಂಗಿಗೋಗಿ ಬರುವಾಗ ಗಂಜೀಯಾ ಸೀರೇ ನ್ಯಾಡಮೂಡಿ
ಗಂಭೀರ ಕಾಣೇ ಮಡಿವಾಳ ಸಿಳ್ಳಾಕ್ಯಾರೆ । ಪಾಲಯ್ಯ
ಗಂಜಿಯಾ ಮೇಲೇ ನ್ಯಾಡುದಾನೆ ॥ರಾಯರಿಗೆ॥
ಬಟ್ಟಗಣ್ಣಿನಯ್ಯ ಉತ್ತಾಕೋಗಿ ಬರುವಾಗ
ಉತ್ತಮಾ ಕಾಣೇ ಮಡಿವಾಳ । ಸಿಳ್ಳಾಕ್ಯಾರೆ
ಪಟ್ಟೇದು ಸೀರೇ ನ್ಯಾಡಮೂಡೆ ॥ರಾಯರಿಗೆ॥

ಜಾಡಿಸಿ ಹಾಕ್ಯಾರೆ ಈರಾ ಮದ್ದಲಿ ಸಪ್ಲೀ
ಜನವೆಲ್ಲ ಮುಂದೆ ಗವುದಾವೇ । ಮೆಕ್ಕಿಮವ್ವಾ
ಈರ ಮುದ್ದುರಿ ವಾಸುಸಪ್ಲಿ ॥ರಾಯರಿಗೆ॥

ಜಗ್ಗೀಸಿ ಹಾಕ್ಯಾರೆ ಲಿಂಗ ಮುದ್ದಲಿ ಸಪ್ಲಿ
ಜನವೆಲ್ಲ ಮುಂದೆ ಹವುದಾರೇ । ಮೆಕ್ಕಿಮವ್ವಾ
ಈರ ಮುದ್ದುರೆ ವಾಸು ಸಪ್ಲಿ ॥ರಾಯರಿಗೆ॥

ಮಲ್ಲಾನೇ ಬರುವಾಗ ಸೆಲ್ಲ್ಯಾರೇ ಮಲ್ಲೀಗಿ
ಮಲ್ಲಾರ ಪಾಲಯ್ಯ ಬರುವಾಗೋ । ಸಿಳ್ಳಾಕ್ಯಾರೆ
ಹಳ್ಳಾಲ್ಲಾ ಮುಂದೆ ಹವುದಾರೆ ॥ರಾಯರಿಗೆ॥

ಆತಾನು ಬರುವಾಗ ನಾತಾವೇ ಮಲ್ಲಿಗೆ
ಆತಾನೆ ಪಾಲಯ್ಯ ಬರುವಾಗ । ಸಿಳ್ಳಾಕ್ಯಾರೆ
ಪ್ಯಾಟ್ಯೆಲ್ಲ ಮುಂದೆ ಹವುದಾವೆ ॥ರಾಯರಿಗೆ॥

ಅವೇನೇ ಬಂದಾವೇ ಪಾಲಯ್ಯ ಬರಲಿಲ್ಲ
ಸಾಲೇಳೆಜೆಮ್ಮೆ ತುರುವಾನೂರು । ಅಬ್ಬೇಲೆ
ಸಾಲೇಗೂಡಿಕ್ಕೆ ಕರೂದಾರೆ ॥ಸೋಬಾನಾವೇ॥

ಎತ್ತಾನೇ ಬಂದಾವೇ ಪಾಲಯ್ಯ ಬರಲಿಲ್ಲ
ಸುತ್ತೇಳೆಜೆಂಬಿ ತುರುವಾನೂರು । ಅಬ್ಬೇಲೆ
ಸುತ್ತೇ ಗೂಡಿಕ್ಕೆ ಕರೂದಾರೆ ॥ಸೋಬಾನಾವೇ॥

ಉದ್ದೀನಾ ಕಾಳಂಗೆ ತಿದ್ದಿರಿ ಕೂಡಿನ ಬಸುವಾ
ಎದ್ದಾನೆ ಭೂಮಿ ಧರಣೀ ಮ್ಯಾಲೆ । ಗಾದರೆ
ನುಗ್ಗೆ ತುಗ್ಗಾಲಿ ನೆರಾಳೀಗೆ ॥ಸೋಬಾನಾವೇ॥

ಕಡ್ಲೀಯಾ ಕಾಳಂಗೆ ಕೊಡುದರೆ ಕೂಡಿನ ಬಸುವಾ
ನಡುದಾನೆ ಭೂಮಿ ಧರಣೀಮ್ಯಾಲೆ । ಗಾದರೆ
ಜಾಲಿ ತುಗ್ಗುಲಿ ನೆರಾಳೀಗೆ ॥ಸೋಬಾನಾವೇ॥

ಆವಿಗೇ ಕೊಡಿರಣ್ಣ ಮ್ಯಾಲೊಂದು ಕಾವಾಲ
ಸಣ್ಣಾಗಾದಾರೆ ಕಡೀಮೀಯ । ಕಾವಲು ಮೇದು
ಆವೇಗಾವುದುಕೇ ಒಳೂದಾವೇ ॥ಸೋಬಾನಾವೇ॥

ಎತ್ತೀಗೆ ಕೊಡಿರಣ್ಣ ಮತ್ತೊಂದು ಕಾವಾಲ
ಸಿಕ್ಕಾಗಾದಾರೆ ಕಡೀಮಿಯ । ಕಾವಲು ಮೇದು
ಎತ್ತೇ ಗಾವುದಕೇ ಒಳೂದಾವೇ ॥ಸೋಬಾನಾವೇ॥

ಎತ್ತೆಲ್ಲಿ ಕಾದೆಣ್ಣ ಮುತ್ತೆಲ್ಲಿ ಮುಡಿದೆಣ್ಣಾ
ಎತ್ತಿಗೆ ನೀರೆಲಿ ಕುಡಾಸೀದ । ಗಂಜೀಗಟ್ಟೆ
ಸತ್ಯವ್ವನೆಂಬ ವಳೆಯೀಲೀ ॥ಸೋಬಾನಾವೇ॥

ಆವೆಲ್ಲಿ ಕಾದೆಣ್ಣ ಹೂವೆಲ್ಲಿ ಮುಡಿದೆಣ್ಣಾ
ಆವಿಗೆ ನೀರೆಲ್ಲಿ ಕುಡಾಸೀದ । ಗಂಜೀಗಟ್ಟಿ
ತಾಯವ್ವನೆಂಬೋ ವಳೀಯೇಲಿ ॥ಸೋಬಾನಾವೇ॥

ಅಣ್ಣಾ ನಿಮ್ಮಾ ಕಾಲು ಬೆಣ್ಣೀಗಿನ್ನಾ ಮಿದುವು
ಇನ್ನೆಲ್ಲಿ ತುಳಿದು ಎಳೀ ಮುಳ್ಳು । ಗಾದರೆ
ಸಣ್ಣ ತುಗ್ಗೂಲಿ ನೆರಾಳಲ್ಲಿ ॥ಸೋಬಾನಾವೇ॥

ಅಪ್ಪಾ ನಿಮ್ಮಾ ಕಾಲು ತುಪ್ಪಾಗಿನ್ನಾ ಮಿದುವು
ಮತ್ತೆಲ್ಲಿ ತುಳಿದು ವಸಾ ಮುಳ್ಳು । ಗಾದರೆ
ಸಿಕ್ಕ ತುಗ್ಗೂಲಿ ನೆರಾಳಲ್ಲಿ ॥ಸೋಬಾನಾವೇ॥

ಎತ್ತಿನಾರ ಹಿಂದೆ ಹತ್ತಿ ಬಂದಳು ಮಿಕ್ಕಿಮವ್ವ
ಹಿತ್ತಾಳೆ ಸೆಂಬೇ ಬಲಾಗೈಲೆ ।ಮಿಂಚೇರಿ
ಗೊತ್ತೊಳ್ಳೇದಂದೇ ನೆಲೇಗೊಂಡೆ ॥ಸೋಬಾನಾವೇ॥

ಹಾವಿನಾರ ಹಿಂದೆ ತಾ ಬಂದಳು ಮಿಕ್ಕಿಮವ್ವ
ತಾವುರದ ಸೆಂಬೇ ಬಲಾಗೈಲಿ । ಮಿಂಚೇರಿ
ತಾವೊಳ್ಳೇದಂದೇ ನೆಲೇಗೊಂಡೆ ॥ಸೋಬಾನಾವೇ॥

ಅಕ್ಕಾನೇ ಮಿಕ್ಕಿಮವ್ವ ಮುತ್ತಿನ ಮುಡಿಯಾ ಮ್ಯಾಲೆ
ಮುಚ್ಚೀಕೊಂಡಾವೆ ಎಳೀನಾಗ । ಮಿಕ್ಕಮವ್ವ
ಮುತ್ತಿನ ಮುಡಿಗೇ ಬಿಸಾಲೊಂದೆ ॥ಸೋಬಾನಾವೇ॥

ತಾಯಾನೇ ಮಿಕ್ಕಿಮವ್ವ ತಾವುರ ಮುಡಿಯಾಮ್ಯಾಲೆ
ತಾವೇ ಗೋಂಡಾವೆ ಎಳೀನಾಗ । ಮಿಕ್ಕಿಮವ್ವ
ತಾವುರದ ಮುಡಿಗೇ ಬಿಸಾಲೊಂದೆ ॥ಸೋಬಾನಾವೇ॥

ಏರೀ ಮ್ಯಾಲೇ ಕಾಗೀ ನೀರು ಗುಕ್ಕೂತಾವೇ
ಸ್ವಾಮಿ ಪಾಲಯ್ಯಲನಾಮುನಿಸೇ । ಗುಡುವಾಗ
ಆವಿನಾ ಹಿಂಡೇ ಎರಾವಂದೇ ॥ಸೋಬಾನಾವೇ॥

ಏರೀ ಮ್ಯಾಲೆ ಕಾಗೀ ನೀರು ಗುಕ್ಕೂತಾವೆ
ಸ್ವಾಮಿ ಪಾಲಯ್ಯ ಅನಾಮುನುಸೇ । ಗುಡುವಾಗ
ಎತ್ತೀನಾ ಹಿಂಡು ಎರಾವುಂದೇ ॥ಸೋಬಾನಾವೇ॥

ಏರೂಲಾರದು ಗುಡ್ಡಾ ಏರ್ಯಾನೇ ಪಾಲಯ್ಯ
ದೂರ ನೋಡ್ಯಾನೇ ತನಾ ಪರಿಸೆ । ಎತ್ತಿನೋರು
ಆಲಾದ ಕೊಂಬೆ ಬರಾಲೊಂದೇ ॥ಸೋಬಾನಾವೇ॥

ಅತ್ತುಲಾರದು ಗುಡ್ಡಾ ಅತ್ತ್ಯಾನೇ ಪಾಲಯ್ಯ
ಸುತ್ತಾ ನೋಡ್ಯಾನೇ ತನಾ ಪರಿಸೆ । ಎತ್ತಿನೋರು
ತುಪ್ಪಾದ ಕೊಂಬೆ ಬರಾಲೊಂದೇ ॥ಸೋಬಾನಾವೇ॥

ಆಲಾದ ಮರದಡಿಯ ಆಲುದ ಕೊಂಬೇ ನಿಳಿವೆ
ಕಾಗಿಯಾ ಸುಗುಣ ಕೇಳೂತಾನೆ । ಪಾಲಯ್ಯ
ಆವಿನ ಹಿಂಡು ಎರಾವೊಂದೇ ॥ಸೋಬಾನಾವೇ॥

ಹತ್ತಿಯ ಮರುದಡಿಯ ತುಪ್ಪುದ ಕೊಂಬೆನಿಳಿವೆ
ಪಕ್ಷಿಯ ಸುಗುಣ ಕೇಳೂತಾನೆ । ಪಾಲಯ್ಯ
ಎತ್ತಿನಾ ಹಿಂಡು ಎರಾವೊಂದೇ ॥ಸೋಬಾನಾವೇ॥

ಆವಿನ ಹೆಜ್ಜೆ ಆವೇನುಬಲ್ಲಾವೆ
ಆವೇ ಕಾವಣ್ಣ ಮಗೂ ಜಾಣಾ । ಪಾಪಯ್ಯ
ಹೋದಾಗ ದಾರಿ ಮಲೀನಾಡ ॥ಸೋಬಾನಾವೇ॥

ಎತ್ತೀನಾ ಹೆಜ್ಜೇ ಎತ್ತೇನು ಬಲ್ಲಾವೆ
ಎತ್ತೇ ಕಾವಣ್ಣ ಮಗೂ ಜಾಣ । ಪಾಪಯ್ಯ
ಹೊಕ್ಕೋಗ ದಾರಿ ಮಲೀನಾಡ ॥ಸೋಬಾನಾವೇ॥

ಆವಿನಾ ಗೂಡಾಗೇ ಆವ್ಯಾಕೆ ಬೆದಿರಾವೆ
ಗಾರೆ ಬಣ್ಣಾದ ಹುಲೀರಾಜ । ಎದುರಾದಾಗ
ಆವೀನಾ ಹಿಂಡು ಬೆದೀರಾವೆ ॥ಸೋಬಾನಾವೇ॥

ಎತ್ತೇನಾ ಗೂಡಾಗೇ ಎತ್ತ್ಯೇಕೇ ಬೆದಿರಾವೆ
ಸುಕ್ಕೇ ಬಣ್ಣಾದ ಹುಲೀರಾಜ । ಎದುರಾದಾಗ
ಎತ್ತೇನಾ ಹಿಂಡೇ ಬೆದೀರಾವೆ ॥ಸೋಬಾನಾವೇ॥

ಅಳ್ಳಳ್ಳು ದೊಪ್ಪದ ಅಡುಗಾದಿರು ಪಾಲಯ್ಯ
ಕಡುಗಾದ ಕಾಲು ಹುಲೀರಾಜ । ಬರಾವಾಗ
ಆವಿನಾ ಹಿಂಡೇ ಬೆದೀರಾವೆ ॥ಸೋಬಾನಾವೇ॥

ಗುಂಡುಗುಂಡು ದೊಪ್ಪದ ಕುಂಡಾದಿರು ಪಾಲಯ್ಯ
ಪೆಂಡೇದ ಕಾಲು ಹುಲೀರಾಜ । ಬರುವಾಗ
ಎತ್ತೀನಾ ಹಿಂಡೇ ಬೆದೀರಾವೆ ॥ಸೋಬಾನಾವೇ॥

ಹೆಬ್ಬುಲಿ ಬೇಟೆಕಾರ ಪಾಲಯ್ಯ
ಎದ್ದು ನಾಂಟ್ಯವನಾಡಿದ ॥
ಪೆಂಡೆದನ್ನಾಕಾಲು ಹುಲಿರಾಜರು ಬರುವಾಗ

ಗುಂಡು ನಿನ್ನ ಕಾವಾಲಾ ಅರಿಯಾವೇ
ಹೆಬ್ಬುಲಿ ಬೇಟೆಕಾರ ಪಾಲಯ್ಯ
ಎದ್ದು ನಾಂಟ್ಯವ ನಾಡಿದ ॥

ತಗ್ಗು ತಗ್ಗು ದೊಪ್ಪಾದ ತಗ್ಗಾದಿರು ಪಾಲಯ್ಯ
ಗಗ್ಗುರುದಾ ಕಾಲು ಹುಲಿರಾಜ । ಬರುವಾಗ
ಗುಂಡು ನಿಮ್ಮ ಕಾವಾಲ ಅರಿಯಾವೇ ॥ಹೆಬ್ಬುಲಿ ಬ್ಯಾಟೆಕಾರ॥

ಗುಂಡು ಗುಂಡು ದೊಪ್ಪಾದ ಕುಂಡಾದಿರು ಪಾಲಯ್ಯ
ಪೆಂಡೇದ ಕಾಲು ಹುಲೀರಾಜ । ಬರುವಾಗ
ತಗ್ಗು ನಿಮ್ಮ ಕಾವಾಲ ಅರಿಯಾವೇ ॥ಹೆಬ್ಬುಲಿ ಬ್ಯಾಟೆಕಾರ॥

ಹುಲಿಗೇ ಭಾಷೇ ಕೊಟ್ಟು ಹುಲಿ ಮಕ್ಕಳು ಕೊಂದಾರೆ
ಹುಲಿಗಿನ್ನಾ ವೀರ ಕಲೀವೀರ । ಪಾಲಯ್ಯ
ಹುಲಿಯಾಗ ಎದುರೇ ಮಾಡಿಗಾನೆ ॥ಹೆಬ್ಬುಲಿ ಬ್ಯಾಟೆಕಾರ॥

ನರಿಗೇ ಭಾಷೇ ಕೊಟ್ಟು ನರಿ ಮಕ್ಕಳು ಕೊಂದಾರೆ
ನರಿಗಿನ್ನಾ ವೀರಾ ಕಲಿವೀರ । ಪಾಲಯ್ಯ
ನರಿಯಾಗ ಎದುರೇ ಮಾಡಿಗಾನೆ ॥ ಹೆಬ್ಬುಲಿ ಬ್ಯಾಟೆಕಾರ ॥

ಹಾಲೆಲ್ಲಿ ಹಾಲೆಲ್ಲಿ ಹಾಲೋಮೀಸಾಲೆಲ್ಲ
ಹಾಲೇ ಮಿಂಚೇರಿ ಬಯಲಾಗ । ಪಾಲಯ್ಯ
ಹಾಲೊಯ್ದಿ ಸೆರಿಯಾ ಬೀಡಿಸಯ್ಯ ॥ಹೆಬ್ಬುಲಿ ಬ್ಯಾಟೆಕಾರ॥

ಕಾಯಲ್ಲಿ ಕಾಯಲ್ಲಿ ಕಾಯೇನೇ ಸಾಲೆಲ್ಲಿ
ಕಾಯೇ ಮಿಂಚೇರಿ ಬಯಲಾಗ । ಎತ್ತಿನೂರು
ಕಾಯೋಡದೆ ಸೆರಿಯಾ ಬಿಡೀಸಯ್ಯ ॥ಹೆಬ್ಬಲಿ ಬ್ಯಾಟೆಕಾರ॥

ಅಪ್ಪಾ ನಿಮು ಬಂಟುಗುಳೂ ಅಡಿವಿ ಪಾಲಾದರೆ
ಅಡಿವೆಲ್ಲ ರಾಮಾ ರಗೂತಾವೆ । ಗಂಜೀಗಟ್ಟಿ
ಮ್ಯಾಲಂದೂಳೀಗೆ ಬರಾಲಿಲ್ಲ ॥ಸೋಬಾನವೇ॥

ಅಪ್ಪಾನಿಮು ಬಂಟುಗಳೂ ಗಿಡುಕೊಬ್ಬಾರಾದರೇ
ಗಿಡವೆಲ್ಲ ರಾಮಾ ರಗೂತಾವೆ । ಗಂಜೀಗಟ್ಟಿ
ಮತ್ತೊಂದೂಳೀಗಿ ಬರಾಲಿಲ್ಲ ॥ಸೋಬಾನವೇ॥

ಓಣ್ಯಾಗೆ ಪಾಲಯ್ಯ ಜಾರಿ ಬಿದ್ದೈದಾನೆ
ಓಣ್ಯೆಲ್ಲಾ ರಾಮಾ ರಗೂತಾವೆ । ಮಲ್ಲಮ್ಮ
ವಾರೆಲಿಡತನ್ನಿ ಕುದಾರಿಯಾ ॥ ಸೋಬಾನವೇ॥

ಹಟ್ಟ್ಯಾಗೆ ಪಾಲಯ್ಯ ಸುತ್ತೀ ಬಿದ್ದ್ಯದಾನೆ
ಹಟ್ಟ್ಯೆಲ್ಲಾ ರಾಮಾ ರಗೂತಾವೆ । ಮಲ್ಲಮ್ಮ
ವತ್ತೇಲಿಡ ತನ್ನಿ ಕುದಾರಿಯಾ ॥ಸೋಬಾನವೇ॥

ಆವೀನಾ ಗುಡಾಗೆ ತಾವುಡಾವಾ ತೆರಿಕಟ್ಟೆ
ಬಾಲಾಗೆ ಮಲಿಯಾ ಕೊಡಾವೊಳೆ । ಕಾಮವ್ವ
ನಿಮ್ಮ ಆವಿನ ಪಾಲಯ್ಯ ಮಡೀಗ್ಯಾನೆ ॥ಸೋಬಾನವೇ॥

ಎತ್ತೇನೇ ಗುಡಾಗೆ ಅಚ್ಚಡದ ತೆರಿಕಟ್ಟಿ
ಪುತ್ರಾಗೆ ಮಲಿಯಾ ಕೊಡವ್ವೋಳೆ । ಕೆಂಚವ್ವ
ನಿಮ್ಮ ಎತ್ತಿನ ಪಾಲಯ್ಯ ಮಡಿಗಾನೆ ॥ಸೋಬಾನವೇ॥

ಮಡಗಿದರೇ ಮಡುಗಾಲೀ ಮಡಿಯ ತಗುಡೀಡಾಲಿ
ನಿಲುವಾಗನ್ನಡಿ ಬಲಾಗೈಲಿ । ಮಿಂಚೇರಿ
ಎಳಿ ಮಾವಿನಾಗೆ ಮೆರಿಯಾಲಿ ॥ಸೋಬಾನವೇ॥

ಮಡಿದರೇ ಮಡುಗಾಲಿ ಮುಡಿಯಾ ತಗುದೀಡಾಲಿ
ಬಟ್ಟಿಗನ್ನಡಿ ಬಲಾಗೈಲಿ । ಮಿಂಚೇರಿ
ಸಸಿ ಮಾದಿನಾಗೆ ಮೆರಿಯಾಲಿ ॥ಸೋಬಾನವೇ॥

ಅಂದನೂರು ಗಂಜೀಗಟ್ಟಿ ರಂಬೇರು ಮಜ್ಜಿಗೆ ಮಾರಿ
ಕಂದವಾಡಂಬೋ ಕಣೇಮ್ಯಾಗೆ । ಕಾಮವ್ವ
ಗಂಡಾನಾ ಸುದ್ದಿ ನೆರೀವಾಳೆ ॥ಸೋಬಾನವೇ॥

ಅಂದನೂರು ಗಂಜೀಗಟ್ಟಿ ರಾಯರು ಮಜ್ಜಿಗೆ ಮಾರೀ
ಹಾಲಾವಾಡಂಬೋ ಕಣೇಮ್ಯಾಗೆ । ಕಂಚ್ಚವ್ವ
ರಾಯಾನಾ ಸುದ್ದಿ ನೆರೀವಾಳೆ ॥ಸೋಬಾನವೇ॥

ಕರಿಯಾ ಆಕಾಳಾಲು ಕಿರಿಯ ತಪ್ಪಾದಂಗೇ
ಕಿರುದನು ಪಾಲಯ್ಯ ಕರಾದೊಯ್ಯೋ । ಹುಲಿರಾಜ
ಎಲ್ಲೋದರು ನಮ್ಮ ಬಿಡಾದಯ್ಯ ॥ಸೋಬಾನವೇ॥

ಅಚ್ಚಾ ಆಕಾಳಾಲು ಸತ್ತ್ಯೋ ತಪ್ಪಾದಂಗೇ
ಸಿಕ್ಕನು ಪಾಲಯ್ಯ ಕರಾದೊಯ್ಯೊ । ಹುಲಿರಾಜ
ಎತ್ತೋದರು ನಮ್ಮ ಬಿಡಾದಯ್ಯ ॥ಸೋಬಾನವೇ॥

ಉಪ್ಪಿರಿಗೆ ಉಪ್ಪಿರಿಗೆ ಮೇಲೆರಡು ಉಪ್ಪಿರಿಗೆ
ಉಪ್ಪಿರಿಗೆ ಕೆಳಗೇ ಮೆರಾವಣಿಗೇ ।ಆಗೂಲಾವಾಗಾ
ಅಪ್ಪಾ ಬಂದಾನೇ ಮಕಾ ತೋರೇ ॥ಸೋಬಾನವೇ॥

ಅಪ್ಪಾ ಬಂದಾರಾನೇ ಕೊಪ್ಪ ತಂದಾರೇನೇ
ಒಪ್ಪುಣದಾ ಪುರುಷ ಸೇರೀ ಸೂರೆ । ಆಗಲುವಾಗ
ಅಪ್ಪಾನಾ ಗೊಡವೀ ನಮೀಗೇನೇ ॥ಸೋಬಾನವೇ॥

ವಾವಿರಿಗೇ ವಾವಿರಿಗೇ ಮೇಲೆಲ್ಡು ವಾವಿರಿಗೇ
ವಾವಿರಿಗೆ ಕೈಳುಗೇ ಮೆರಾವಣಿಗೆ । ಆಗುಲುವಾಗಾ
ಮಾವ ಬಂದಾನೇ ಮಕಾ ತೋರೇ ॥ಸೋಬಾನವೇ॥

ಮಾವ ಬಂದಾರೇನೇ ವಾಲೀ ತಂದಾರೇನೇ
ವಾರುಣಾದಾ ಪುರುಷಾ ಸೆರೀ ಸೂರೇ । ಆಗುಲವಾಗಾ
ಮಾವಯ್ಯನ ಗೊಡವೀ ನನೀಗೇನೇ ॥ಸೋಬಾನವೇ॥

ಓಣ್ಯಾಗೇ ಕಾಮವ್ವ ನ್ಯಾರನ್ನ ಹೆಂಗೂಸ
ನೀರಿಗೋದೋಳೇ ಬರಾಲಿಲ್ಲಾ । ಗಂಜೀಗಟ್ಟೀ
ಓಣ್ಯಗೆ ಕಾಮವ್ವ ಮಯಾವಾಗೆ ॥ಸೋಬಾನವೇ॥

ಅಟ್ಟ್ಯಾಗಿ ಕಾಮವ್ವ ಗುಟ್ಟನ್ನು ಹೆಂಗೂಸಾ
ಕುಟ್ಟಕೋದೋಳೇ ಬರಾಲಿಲ್ಲಾ । ಗಂಜೀಗಟ್ಟೀ
ಅಟ್ಟ್ಯಾಗೆ ಕಾಮವ್ವ ಮಯವಾಗೆ ॥ಸೋಬಾನವೇ॥

ಓಡಿ ಹೋದಾರೆಂದು ಕಾಡು ಆಕುಸುಬ್ಯಾಡಾ
ಓಡಿ ಹೋಗೋರಾ ಮಗೂಳಲ್ಲಾ । ಮಾವಾಕಟ್ಟೀ
ಜೋಡಿ ಹೊಂಡುಗಳ ತಗೂಸಯ್ಯ ॥ಸೋಬಾನವೇ॥

ಕದ್ದು ಹೋದಾರಂದು ದಿಡ್ಡು ಆಕುಸು ಬ್ಯಾಡ
ಕದ್ದು ಹೋಗೋರಾ ಮಗೂಳಲ್ಲ । ಮಾವಾಮಲ್ಲಿ
ದಿಡ್ಡಿ ಹೊಂಡುಗಳು ತಗೂಸಯ್ಯ ॥ಸೋಬಾನವೇ॥

ಓಡಿ ವೋದರೊಂದು ರಾಡುವಾಕುಸು ಬ್ಯಾಡಾ
ಓಡಿ ವೋಗೋರಾ ಮಗುಳಲ್ಲ । ಮಾವಕಟ್ಟಿ
ಜೋಡಿ ಚಂಡಗಳೂ ತಗೂಸಯ್ಯ ॥ಸೋಬಾನವೇ॥

ಅಸಿಯಾ ತುಗ್ಗುಲಿ ಸಿಕ್ಕಿ ಬಿಸಿಬಿಸಿ ಬೇಯ್‌ವಾಗ
ಹೊಸ ಮಗಳು ಕಾಮವ್ವ ಮೆರಿವಾಗ । ಅಗ್ನಿದೇವಿ
ಕುಸುಲಾರದು ನಗುವೆ ನಗೂತಾಳೆ ॥ಸೋಬಾನವೇ॥

ಬೆಣ್ಣಿ ತುಗ್ಗುಲಿ ಬೆಣ್ಣೀಸಿಸೆಕ್ಕಿ ಬೇಯ್‌ವಾಗ
ಸಣ್ಣಾಳ ಕಂಚವ್ವ ಮೆರೀವಾಗ । ಅಗ್ಗಿನಿದೇವಿ
ಹೂವಾರದ ನಗುವೇ ನಗುತಾಳೆ ॥ಸೋಬಾನವೇ॥

ಮೆರೆಯ ಮೆರೆಯೆಂದರೆ ನಾನೆಂಗೆ ಮೆರಿಯಲೆ
ಮೆರವಣಿಗೆ ಕಡ್ಡಿ ಮಡುಲಾಗಿಟ್ಟುಕೊಂಡು । ಮೆರಸ ಬಂದಾರೆ
ಜವಾದೊರು ॥ಸೋಬಾನವೇ॥

ಕುಣಿಯೆ ಕುಣಿಯಂದಾರೆ ನಾನೆಂಗೆ ಕುಣಿಯಾಲೆ
ಕುಣುವುಣಿಗೆ ಕಡ್ಡಿ ಮಾಡುಲಾಗೆ । ಇಟ್ಟುಕೊಂಡು
ಕುಣುಸಾ ಬಂದಾರೇ ಜವಾದೋರು ॥ಸೋಬಾನವೇ॥
ಅಪ್ಪಾನೇ ಮಾತನಾಡೋ ಸಿಕ್ಕದು ನನ್ನೀವಾಳಾ
ಎತ್ತಿನ ಮನೆಗಾರ ತಪ್ಪುದಲೇ ಮಾತನಾಡೋ ।

ಸತ್ತೊನೂ ಬಾರಯ್ಯ ಎತ್ತಿಕೊಂಡು ಆದರಿಸಿ
ನೆತ್ತೀಲೇ ಧೂಳಾ ಕೊಡವೀರೀ । ಅಪ್ಪನೇ ಮಾತನಾಡೋ
ಪಾಲಯ್ಯ ಸತ್ಯವೇ ಪಡದ ಶಿವನಲ್ಲಿ ॥ಅಪ್ಪನೇ ಮಾತನಾಡೋ॥

ತೀರಿದಾ ಪಾಲಯ್ಯ ಏಳು ಕುಂಡಾಲಿರಿಸಿ
ಮಾರೀಲಿ ದೂಳಾ ಕೊಡಾವಿರಿ । ಪಾಲಯ್ಯ
ಕೀರೂತಿ ಪಡದಾ ಶೀವನಲ್ಲಿ ॥ ಅಪ್ಪನೇ ಮಾತನಾಡೋ ॥

ಸತ್ತಾನೆ ಪಾಲಯ್ಯ ಎತ್ತಿಕೊಂಡಾಡಿಸಿ
ಸಪ್ಪಳಾಗೊಂಡ ನೆಗೀಮಾರಿ । ಪಾಲಯ್ಯ
ಸತ್ತೇವ ಪಡೆದು ಶಿವನಲ್ಲಿ ॥ ಅಪ್ಪನೇ ಮಾತನಾಡೋ ॥

ಈರಿಗ ಪಾಲಯ್ಯ ಕೀರುತಿನಿಲ್ಲೈತೋ
ಸಾವಳಗೊಂಡೆ ನೆಗಿಮಾರಿ । ಪಾಲಯ್ಯ
ಕೀರುತಿ ಪಡೆದಾ ಶೀವನಲ್ಲಿ ॥ ಅಪ್ಪನೇ ಮಾತನಾಡೋ ॥

ಕತ್ತಿ ಪಾಲಯ್ಯಾಗೆ ಕಡಗಲ ಕಾಮವ್ವಗೇ
ಮುತ್ತಿನಾರುತಿ ಶೀವನಿಗೇ । ಹೊನ್ನಿನಾ
ಟೆಕ್ಕಿಲುರುಗೆಜ್ಜೆಬಾಸುವಾಗೆ ॥ ಅಪ್ಪನೇ ಮಾತನಾಡೋ ॥

ಹಲಗೆ ಪಾಲಯ್ಯಗೆ ಕಡಗಲ ಕಂಚವ್ವಗೆ
ಹವಳದಾರುತಿ ಶಿವನಿಗೇ । ಹೊನ್ನಿನಾ
ಟೆಕ್ಕೆಲಾರು ಗೆಜ್ಜೆ ಬಾಸುವಾಗೇ ॥ ಅಪ್ಪನೇ ಮಾತನಾಡೋ ॥

ಆರೋಸುತ್ತಿನಾ ಕ್ವಾಟೆ ಹಾರೀ ಬಂದಯ್ಯಾಗೆ
ಆರೂತಿ ಹೂವು ಎದಾರಿಗೆ ಅವನಂತ ಸೆಲುವಾ
ಹೂವೇ ಸೂರಾಡಿ ಮಠಕೋ ಬರಲು
ಆರೂತಿ ಹೂವೇ ಎದೆಗೂಡಿಸಿಕಟ್ಟಿ ಹಾರೀ
ಬಂದಂತ ವಡೀಯಾಗೆ ॥ ತಾನೆಂತಾ ಚೆಲುವಾ ॥

ಹತ್ತುಸುತ್ತಿನ ಕ್ವಾಟೆ ಹತ್ತಿ ಬಂದಯ್ಯಾಗೆ
ಸತ್ತರಿಕೆಹೂ ಎದಾರಿಗೆ । ಹುಣಿಸಿಕಟ್ಟಿ
ಹತ್ತಿ ಬಂದಂತಾ ವಡೀಯಾಗೆ ॥ ತಾನೆಂತಾ ಚೆಲುವಾ ॥

ವಾರುಣಿಗಿತ್ತೇಕುರೆಲ್ಲ ಹೋಗಿತಿಪ್ಪೇನೇರೀ
ವಾಲೀ ಬೀಳುದೀ ಹರಿಹಾರ । ನನ್ನೀವಾಳ
ಪಾಲಯ್ಯ ಬರುವ ರವಾಸೀಗೆ ॥ ತಾನೆಂತಾ ಚೆಲುವಾ ॥

ಒಪ್ಪಣಿಗೆ ತೇರಲ್ಲಾ ಒಕ್ಕಿತ್ತಿತ್ತೇನೆರೀ
ಕುಪ್ಪಿ ಬೀಳುದೇ ಹರಿಹರಾ । ನನ್ನೀವಾಳ
ಅಪ್ಪಯ್ಯ ಬರುವ ರವಾಸಿಗೇ ॥ ತಾನೆಂತಾ ಚೆಲುವಾ ॥

ಹಳ್ಳಾವಾ ಇಳಿವಾಗ ಸೆಲ್ಲೆವೆ ಪಾದದಗೆಜ್ಜೆ
ಉಗ್ಗಂಟ್ಯಾದುಡಿಗೆ ಸಡೀಲ್ಯಾವೆ । ಮೆಕ್ಕಿಮವ್ವ
ಹಳ್ಳವಾ ಇಳಿವಾ ರವಾಸೀಗೆ ॥ ತಾನೆಂತಾ ಚೆಲುವಾ ॥

ಹಳ್ಳವಾ ಇಳಿವಾಗ ಸೆಲ್ಲೆವೆ ಪಾದುದಗೆಜ್ಜೆ
ಉಟ್ಯಾಂಗದುಡುಗಿ ಸಡಿಲ್ಯಾವೇ । ಮಿಕ್ಕಿಮವ್ವ
ಬೆಟ್ಟಾವಾ ಇಳಿವಾ ರವಾಸೀಗೆ ॥ ತಾನೆಂತಾ ಚೆಲುವಾ ॥

ಹೊಳಿಗೇ ಹೋಗುವಾಗ ಹೊಂಬಾಳಾಲ್ಲ್ಯಾಡಾವೆ
ಹೊಳಿಗೋಗಿ ಗುಡಿಗೇ ಬರುವಾಗ । ಪಾಲಯ್ಯ ನಿಮ್ಮ
ತಡದಾ ಮಳಿಯಂಗೆ ಬೆವೂತಾನಾ ॥ ತಾನೆಂತಾ ಚೆಲುವಾ ॥

ಕೆರೆಗೋಗುವಾಗ ಕ್ಯಾದಿಗಾಲ್ಲ್ಯಾಡಾವೇ
ಕೆರೆಗೋಗಿ ಗುಡಿಗೇ ಬರುವಾಗ । ಪಾಲಯ್ಯ ನಿಮ್ಮ
ತಡದಾ ಮಳಿಯಾಂಗೇ ಬೆವೂತಾನೆ ॥ ತಾನೆಂತಾ ಚೆಲುವಾ ॥

ಅಣ್ಣಯ್ಯ ಬರುವಾಗ ಇನ್ನ್ಯಾರೂ ನಡಿಗಾರೆ
ಸಣ್ಣ ನನ್ನೀವಾಳಾ ದೊರೆಗಾಳು । ಮನಿಯಾಗೆ
ಹೊನ್ನಿನ ಕರುಗನ ನಡೀದಾವೆ ॥ ತಾನೆಂತಾ ಚೆಲುವಾ ॥

ಅಪ್ಪಯ್ಯ ಬರುವಾಗ ಮತ್ತ್ಯಾರೂ ನಡಿಗಾರೆ
ಸಿಕ್ಕ ನನ್ನೀವಾಳ ದೊರೆಗಾಳೂ । ಮನಿಯಾಗೆ
ಮುತ್ತಿನ ಕರುಗನ ನಡೀಗಾವೆ ॥ ತಾನೆಂತಾ ಚೆಲುವಾ ॥

ಆನೆಗಳೂ ಉರಿಮೆಗಳೂ ಸಾಲಿಟ್ಟು ಬರುವಾಗ
ಗಿಂಡಿಯ ಹುಡುಗಾ ಕಡೆಗೋಗಾ । ನನ್ನೀವಾಳಾ
ಅಣ್ಣಯ್ಯಗಾರೂತಿ ಬೆಳೆಗೇನೆ ॥ ತಾನೆಂತಾ ಚೆಲುವಾ ॥

ಸತ್ತರಿಕೆ ಸತ್ತರಿಕೆ ಸಾಲಿಟ್ಟೊ ಬರುವಾಗ
ಕತ್ತಿಯಾ ಹುಡುಗಾ ಕಡೀಗೋಗು । ನನ್ನೀವಾಳಾ
ಅಪ್ಪಯ್ಯಗಾರೂತಿ ಬೆಳಾಗೇನೆ ॥ ತಾನೆಂತಾ ಚೆಲುವಾ॥

ಬಾಗುವಲ್ಲಾ ಮ್ಯಾಲೆ ಏನೇನೋ ಬರುದಾರೆ
ಬಾದ್ದೂರನೆಂಬೋ ಸಲಗೆತ್ತು । ಪಾಲಯ್ಯ ನಿಮ್ಮ
ಬಾಗಾಲಾಮ್ಯಾಲೆ ಬರೂದಾರೆ ॥ ತಾನೆಂತಾ ಚೆಲುವಾ ॥

ಕಂಬಿಯ ಮ್ಯಾಲೇ ಏನೇನೋ ಬರುದಾರೆ
ಗಂಬೀರಾನೆಂಬೋ ಸಲಗೆತ್ತು । ಪಾಲಯ್ಯ ನಿಮ್ಮ
ಕಂಬಿಯ ಮ್ಯಾಲೆ ಬರೂದಾರೆ ॥ ತಾನೆಂತಾ ಚೆಲುವಾ ॥

ಬಾಗುಲ ಮ್ಯಾಲೆ ಏನೇನೋ ಬರುದಾರೆ
ಬಾದ್ದುರಾನೆಂಬೋ ಸಲಗೆತ್ತು । ಪಾಲಯ್ಯ ನಿಮ್ಮ
ಬಾಗಾಲಾಮ್ಯಾಲೆ ಬರುದಾರೆ ॥ ತಾನೆಂತಾ ಚೆಲುವಾ ॥

ಗುಡಿಯ ಸುತ್ತ ಮುತ್ತು ದಡಿಯಲಚ್ಕೊದು ದೋರೆ
ಗುಲುಗುಂಜೆ ತಾತೆ ಮಣಿಯೋರೇ । ಬಗುತಾರೇ
ಗುಡಿಮುಂದೇ ಪರಿಸೆ ನ್ಯರೀಸ್ಯಾರೇ ॥ ತಾನೆಂತಾ ಚೆಲುವಾ ॥

ಗುಡಿಯ ಸುತ್ತಮುತ್ತಾ ಸಾದಿನಚ್ಚುಡುದೋರು
ಗುಡಿಲೇಕಾತಂತೆ ಮಣಿಯೋರೇ । ಬಗುತಾರೂ
ಗುಡಿ ಮುಂದೇ ಪರಿಸೆ ನ್ಯರೀಸ್ಯಾರೇ ॥ ತಾನೆಂತಾ ಚೆಲುವಾ ॥

ಅಣ್ಣಾನ ಪಗಿಳ್ಳಾಗೇ ಇನ್ನೋನು ಗದ್ದಲೇ
ಇನ್ನೇತ್ತಿನೋರು ಹಿರಿಯೋರು । ಬಾಟ್ಟೂರಿಗೇ
ಗಗ್ಗಾರಾಂತ ಹಿರಿಯೂರು ॥ ತಾನೆಂತಾ ಚೆಲುವಾ ॥

ಅಪ್ಪಾನಾ ಪಗಿಳ್ಯಾಗೆ ಇನ್ನೇನುಗದ್ದಲೇ
ಮನ್ನೇತ್ತಿನೋರು ಹಿರಿಯೋರು । ಕ್ಯಾಂದೋರಿಗೆ
ಗಗ್ಗಾರಾಂತ ಹಿರಿಯೂರು ॥ ತಾನೆಂತಾ ಚೆಲುವಾ ॥

ದೂಳೇ ದುಮ್ಮದುಮ್ಮೇ ಪಾಲಯ್ಯ
ಬಾಳೇ ನುಗ್ಗು ಮಗ್ಗೇ ನಲ್ಲೆತ್ತು ಬರುವಾಗ
ಪಾಲಯ್ಯ ನಿಮ್ಮ ನಲ್ಲತ್ತಿ ಪಗಳೀ ಹೋಗುವಾಗ ॥ ದೂಳೇ ದುಮ್ಮಾ ದುಮ್ಮೇ॥
ಬೆಟ್ಟತ್ತಿ ಬರುವಾಗ ಪಟ್ಟೇ ಸಾಲಾಗಿದ್ದೆ
ಮುತ್ತಿನಾರೂತೀ ಈಡಾದಿದ್ದೆ । ಪಾಲಯ್ಯನಿಮ್ಮ
ಬಟ್ಟೆತ್ತಿ ಪಗಳಿ ಹೋಗುವಾಗ ॥ ದೂಳೇ ದುಮ್ಮಾ ದುಮ್ಮೇ ॥
ಬಾಗುತಾ ಬಂದಾವೇ ಬಾಗಿಗೊಂಬಿನೆತ್ತು
ತೂಗುತಾ ಬಂದಾವೇ ಯಾಳೀಹೋರೀ । ಪಾಲಯ್ಯ ನಮ್ಮ
ಊಜಾದ ಮನಿಗೆ ನ್ಯಾಡೂದಾವಾ ॥ದೂಳೇ ದುಮ್ಮಾ ದುಮ್ಮೆ॥

ತಗ್ಗೂತಾ ಬಂದಾವೇ ನುಗ್ಗಿ ಗೊಂಬಿನೆತ್ತು
ನುಗ್ಗುತಾ ಬಂದಾವೇ ಯಾಳೀಹೋರೀ । ಪಾಲಯ್ಯ ನಿಮ್ಮ
ಉಗ್ರಾಣದ ಮನಿಗೆ ನ್ಯಾಡುದಾವಾ ॥ ದೂಳೇ ದುಮ್ಮಾ ದುಮ್ಮೇ ॥

ಅಪ್ಪನಾ ಪಗಿಳಾಗೆ ಒಪ್ಪದ ಗಿರಿತಂಕಾ
ಸಾಲಗಿನ್ನಿತಂಕಾ ಸ್ವಾಮಿ ಪಾಲಯ್ಯನ । ಗುಡಿತಂಕಾ
ಎತ್ತಿನೂರು ಬಾಲಮತಯಾಗ ನಾಡಿಸ್ಯಾರೆ ॥ ದೂಳೇ ದುಮ್ಮಾ ದುಮ್ಮೇ

ಸಾಲೂ ಬೇತಂಕಾ ಸಾಲು ದೇವಿತಂಕಾ
ಸ್ವಾಮಿ ಪಾಲಯ್ಯನ ಗೂಡಿತಂಕಾ । ಎತ್ತಿನೂರೂ
ಪುತ್ರಮತಿಯಾಗ ನಾಡಿಸ್ಯಾರಾ ॥ ದೂಳೇ ದುಮ್ಮಾ ದುಮ್ಮೇ ॥

ಅಣ್ಣನಾ ಪಗಿಳ್ಯಾಗೇ ಬಣ್ಣದಾ ಪಗಿಳ್ಯಾಗೇ
ವಾಲಾಡಿ ಬೆಳವಾ ಎಳೀಬೇವೂ । ಮರದಡಿಯ
ಆಡಿ ಪಾಪಯ್ಯ ಕಾರುದಾನೆ ॥ ದೂಳೇ ದುಮ್ಮಾ ದುಮ್ಮೇ ॥

ಅಪ್ಪಾನ ಪಗಿಳ್ಳಾಗೆ ಒಪ್ಪಾದ ಪಗಿಳ್ಯಾಗೇ
ಒತ್ತ್ಯಾಡಿ ಬೇಳವೋ ಎಳಿ ಬೇವು । ಮರದಡಿಯ
ಎತ್ತಿ ಪಾಪಯ್ಯನಾ ಕರುದಾನೇ ॥ ದೂಳೇ ದುಮ್ಮಾ ದುಮ್ಮೇ ॥

ಗಂಟೆ ಮಾತಾಡುತಾವೇ ಪಾಲಯ್ಯ ನಿಮ್ಮ
ಗಿಡಯಾಗೆ ಸುಂಕೆ ಬೋರಾಡುತಾವೇ

ಬಾಗಿಲ ಕಟ್ಟಿದಯ್ಯಾಗೆ ಬಾಳೆಹಣ್ಣು ಕೊಡುವೇ
ಮ್ಯಾಲೇ ಜೋಳಿಗೆ ಹಣ ಕೊಡುವೇ । ಪಾಪಯ್ಯ
ಬಾಗಿಲ ಕಟ್ಟಿದಾ ಬಾಡಗೀಗೇ ॥ ಗಂಟೆ ಮಾತಾಡುತಾವೆ ॥

ಹೊಸ್ತಿಲ ಕಟ್ಟಿದಯ್ಯಾಗೇ ಉತ್ತಾತ್ತಣ್ಣಾ ಕೊಡುವೇ
ಮತ್ತೆ ಜೋಳಿಗೆ ಹನಾ ಕೊಡುವೇ । ಪಾಪಯ್ಯ
ಹೊಸ್ತಲ ಕಟ್ಟಿದಾ ಬಾಡಗೀಗೆ ॥ ಗಂಟೆ ಮಾತಾಡುತಾವೆ ॥

ಹೂವ ಇಲ್ಲ ಒಂದೂ ಹೂವಿಗೋಗೊದೀರಾ
ಹೂವಾ ಪಾಲಯ್ಯನ ಗುಡಿ ಹಿಂದೆ । ಸೂರ್ಯಕಾಂತಿ
ಹೂವರಳಿ ಬಾಯಿ ಬೀಡುತಾವೇ ।। ಗಂಟೆ ಮಾತಾಡುತಾವೆ ।।

ಮಗ್ಗೆ ಇಲ್ಲವೊಂದು ಮಗ್ಗಿಗೋಗಲುದೀರಾ
ಮಗ್ಗೆ ಪಾಲಯ್ಯನ ಗುಡಿ ಹಿಂದೆ । ಸೂರ್ಯಕಾಂತಿ
ಮೊಗ್ಗರಳಿ ಬಾಯಿ ಬೀಡುತಾವೆ ।। ಗಂಟೆ ಮಾತಾಡುತಾವೆ ।।

ಅಲ್ಲಿ ಇಲ್ಲೀ ಹೂವ್ವಾ ವಲ್ಲಾನೇ ಪಾಲಯ್ಯ
ಅಲ್ಲಿ ನನ್ನಿವಾಳಾ ಅಳಿಗೇಲಿ । ಕಾಲ್ಲೇದುವ್ವು
ಮಲ್ಲಿಗೆ ಸರವೊಂದೇ ಮೂಡುದಾನೆ ।। ಗಂಟೆ ಮಾತಾಡುತಾವೆ ।।

ಅತ್ತಲಿತ್ತಾಲುವ್ವ ವಪ್ಪಾನೆ ಪಾಲಯ್ಯ
ಸಿಕ್ಕ ನನ್ನೀವಾಳಾ ಅಳಿಗೇಲಿ । ಕಾಲ್ಲೇದುವ್ವು
ಮುತ್ತಿನ ಸರವೊಂದೇ ಮಾಡುದಾನೆ ।। ಗಂಟೆ ಮಾತಾಡುತಾವೆ ।।

ಪೂಜಾರಿ ತಂದಾ ಹೂವು ಪೂಜೆಗೆ ಸಾರವೊಂದು
ಸ್ವಾಮಿ ಪಾಲಯ್ಯ ಮನಮುನುದೆ । ಪಾಲಯ್ಯ
ಹೋಗಿ ವೂಂಬಾಳೆ ಕಾಡಿಸ್ಯಾನೆ ।। ಗಂಟೆ ಮಾತಾಡುತಾವೆ ।।

ಒಕ್ಕಲು ತಂದಾ ಹೂವೂ ಪಕ್ಕಿಗೆ ಸಾಲವೊಂದು
ಅಪ್ಪ ಪಾಲಯ್ಯ ಮನಮುನುದೆ । ಪಾಲಯ್ಯ
ಹೊಕ್ಕಿ ವೂಂಬಾಳೆ ಕಾಡಿಸ್ಯಾನೆ ।। ಗಂಟೆ ಮಾತಾಡುತಾವೆ ।।

ಪೂಜಾರಿ ತಂದಾ ಹೂವೂ ಪೂಜೆಗೆ ಸಾಲವೊಂದು
ಸ್ವಾಮಿ ಪಾಲಯ್ಯ ಮನಮುನಿದೆ । ಪಾಲಯ್ಯ
ಹೊಕ್ಕಿ ಹೊಂಬಾಳಿ ಕಡಿಸ್ಯಾನೇ ।। ಗಂಟೆ ಮಾತಾಡುತಾವೆ ।।

ದಾಸೀವಾಳದುವ್ವಾ ಬಾಸಿ ಮಟ್ಟೀಕಟ್ಟಿ
ದಾಸಾರ ಕೂಟೆ ಕಳಿವೇನೇ । ನನ್ನೀವಾಳಾ
ಸ್ವಾಮಿ ಪಾಲಯ್ಯ ಊಲಪೀಗೆ ।। ಗಂಟೆ ಮಾತಾಡುತಾವೆ ।।

ಮದ್ಯನದಾ ಮಲ್ಲಿಗೆ ಬಾಸಿ ಮಟ್ಟೀಕಟ್ಟಿ
ಸಂಪನ್ನರ ಕೂಟೇ ಕಾಳುವೇನೇ । ನನ್ನೀವಾಳಾ
ಸ್ವಾಮಿ ಪಾಲಯ್ಯನ ಊಲಪೀಗೆ ॥ ಗಂಟೆ ಮಾತಾಡುತಾವೆ ॥

ಗಂಧಗಂಧದ ನಾತ ಗಂಧದ ಹೊಗಿನಾತ
ಗಂದದೆಣ್ಣೇಲಿ ನ್ಯಾಲುಗಾರೆ । ಮಾಡ್ಯಾರೆ
ತಂದೆ ಪಾಲಯ್ಯನ ಗುಡಿಯಾಗೇ ॥ ಗಂಟೆ ಮಾತಾಡುತಾವೆ ॥

ಧೂಪ ಧೂಪದ ನಾತ ಧೂಪದ ಹೊಗಿನಾತ
ಧೂಪದ ಎಣ್ಣೆಲಿ ನ್ಯಾಲುಗಾರೆ । ಮಾಡ್ಯಾರೆ
ಸ್ವಾಮಿ ಪಾಲಯ್ಯನ ಗೂಡಿಯಾಗೇ ॥ ಗಂಟೆ ಮಾತಾಡುತಾವೆ ॥

ಧೂಪದ ವಗಿ ಹೋಗಿ ಆಕಾಸಕೆ ಮುಟ್ಯಾವೆ
ತಂದೆ ಪಾಲಯ್ಯ ಶಿವಪೂಜೆ । ಕೂಡವತ್ತಿಗೆ
ಅಕಾಶದ ಗಂಟೆ ಢಣಾಲೊಂದೇ ॥ ಗಂಟೆ ಮಾತಾಡುತಾವೆ ॥

ಗಂಧದ ಹೋಗಿ ಹೋಗಿ ಅಂಬಾರಕ ಮುಟ್ಯಾವೆ
ಸ್ವಾಮಿ ಪಾಲಯ್ಯ ಶಿವಪೂಜೆ । ಕೊಡವತ್ತೀಗೆ
ಅಂಬಾರದ ಗಂಟೆ ಢಣಾಲೊಂದೇ ॥ ಗಂಟೆ ಮಾತಾಡುತಾವೆ ॥

ಮದ್ದರಾಕೂಟೆ ಕಳಿವ್ಯಾನೆ ನನ್ನೀವಾಳಾ
ಸ್ವಾಮಿ ಪಾಲಯ್ಯಗೆ ಉಲುಪಿಗೆ । ಮದ್ದನದ
ಮಲ್ಲಿಗೆ ನಿಂತು ಮಟ್ಟೆದಟ್ಟಿ ॥ ಗಂಟೆ ಮಾತಾಡುತಾವೆ ॥

ಕಟ್ಟೆಮೇಲೋಗುತಾ ಹೊತ್ತುಗಳೂ ನೋಡುತಾ
ಒಪ್ಪಕೊಂದೆಜ್ಜೆ ನೆಡುವೂತಾ । ಪಾಲಯ್ಯ
ಅಪ್ಪಗೆ ಹೂವೂ ಕೊಯ್ದಾನೇ ॥ ಗಂಟೆ ಮಾತಾಡುತಾವೆ ॥

ಏರಿಮ್ಯಾಲೋಗುತಾ ಎಳ್ಳೀವು ನೋಡುತಾ
ಜಾವಕೊಂದೆಜ್ಜೆ ನೇಡವೂತಾ । ಪಾಪಯ್ಯ
ಸ್ವಾಮಿಗೆ ಹೂವು ಕೊಯ್ದಾನೆ ॥ ಗಂಟೆ ಮಾತಾಡುತಾವೆ ॥

ಆಯಾವುಳ್ಳ ತ್ವಾಟಕ್ಕೆ ಚಂದವುಳ್ಳೇಣಿ ವಾಕಿ
ಸಾದಿನಚ್ಚಾಡ ಮುಡಾಲೊಡ್ಡಿ । ಪಾಪಯ್ಯ
ಸ್ವಾಮಿಗೆ ಹುವ್ವೂ ಕೊಯ್ವಾನೆ ॥ ಗಂಟೆ ಮಾತಾಡುತಾವೆ ॥

ಅಂದವುಳ್ಳಾ ತ್ವಾಟಕ್ಕೆ ಸಂದವುಳ್ಳೇಣೀ ವಾಕಿ
ಗಂಜಿನ ಅಚ್ಚಾಡ ಮುಡಾಲೊಡ್ಡಿ । ಪಾಪಯ್ಯ
ಸ್ವಾಮಿಗೇ ಹೂವ್ವೂ ಕೊಯ್ವಾನೆ ॥ ಗಂಟೆ ಮಾತಾಡುತಾವೆ ॥

ರಾಗಿ ರಾಗಿ ಪೂಜೆ ರಾಗಿ ರನ್ನದ ಪೂಜೆ
ರಾಯರು ಕಟ್ಟಿಸಿದ ವಸಪೂಜೆ । ಪಾಲಯ್ಯ
ರಾಯರಿನ್ನೆಂತಾ ದಾನೀಕೋರೇ ॥ ಗಂಟೆ ಮಾತಾಡುತಾವೆ ॥

ಅಕ್ಕಿ ಅಕ್ಕಿ ಪೂಜೆ ಅಕ್ಕಿ ರನ್ನದ ಪೂಜೆ
ಒಕ್ಕಲು ಕಟ್ಟಿಸಿದ ವಸಪೂಜೆ । ಪಾಲಯ್ಯ
ಒಕ್ಕಲಿನ್ನೆಂತಾ ದನಿಕೋರೇ ॥ ಗಂಟೆ ಮಾತಾಡುತಾವೆ ॥

ಎಲಿಯ ಪೂಜೆಯ ಮಾಡಿ ಬೊಳ್ಳೆರಡು ನೊಂದಾವೆ
ಸಣ್ಣನ ಪೂಜಾರಿ ಸ್ಯಾದಿರಾನೇ । ಪಾಪಯ್ಯ
ಹೋಗಿ ತೂಗ್ಯಾನೆ ಶೀವುಗಂಟೆ ॥ ಗಂಟೆ ಮಾತಾಡುತಾವೆ ॥

ಅಕ್ಕಿ ಪೂಜೆಯ ಮಾಡಿ ಬೊಟ್ಟೆರಡು ನೊಂದಾವೇ
ಸಿಕ್ಕನು ಪೂಜಾರಿ ಸ್ಯಾದಿರಾನೆ । ಪಾಪಯ್ಯ
ಒಕ್ಕಿ ತೂಗ್ಯಾನೆ ವಸುಗಂಟೆ ॥ ಗಂಟೆ ಮಾತಾಡುತಾವೆ ॥

ಒಡಿಯಾ ಟೆಂಗಿನ ಕಾಯಿ ಇಡಿಯ ಟೆಂಗಿನಕಾಯಿ
ಬಡುವಾರು ತಂದ ಎಳಿಗಾಯಿ । ಪಾಪಯ್ಯ
ತೋಳೆ ಈಡಾಡಿ ವಾಡುದಾನೆ ॥ ಗಂಟೆ ಮಾತಾಡುತಾವೆ ॥

ಇಡಿಯಾ ಟೆಂಗಿನಕಾಯಿ ಒಡಿಯಾ ಟೆಂಗಿನಕಾಯಿ
ವಕ್ಕಾಲು ತಂದಾ ವಾಸುಕಾಯಿ । ಪಾಪಯ್ಯ
ರಟ್ಟೆ ಈಡಾಡಿ ವಾಡುದಾನೆ ॥ ಗಂಟೆ ಮಾತಾಡುತಾವೆ ॥

ಗಂಡಾದ ಭೂಸುಕ್ರ ಇನ್ನ್ಯಾರಿಗೆ ಸಲ್ಲೋದೆ
ಇನಕೊಸ್ತುರೂರಾ ಮಗನು । ಪಾಲಯ್ಯಗೆ
ಸಿನ್ನದ ಭೂಸುಕ್ರ ಸೋಲ್ಲಬೋದೆ ॥ ಗಂಟೆ ಮಾತಾಡುತಾವೆ ॥

ಮುತ್ತೀನ ಗದ್ದುಗೆ ಮತ್ತ್ಯಾರಿಗೆ ಸಲ್ಲೋದೆ
ಮುತ್ತೇತ್ತಿನೋರ ಮಗನು । ಪಾಲಯ್ಯಗೆ
ಮುತ್ತಿನ ಗದ್ದಿಗೆ ಸಲ್ಲುವೋದೆ ॥ ಗಂಟೆ ಮಾತಾಡುತಾವೆ ॥

ಎಲ್ಲಿಂದ ಬಂದಾರೆ ಮಲ್ಲಿಗೆ ಮುಡಿ ದಾಸಾರು
ನೆಲ್ಲಕ್ಕಿನಂಗೀ ಸೂಲವುಲ್ಲು । ದಾಸಾರು
ಎಲ್ಲಿಂದ ಗಿರಿಗೇ ಈಳುದಾರೆ ॥ ಗಂಟೆ ಮಾತಾಡುತಾವೆ ॥

ಎತ್ತಿಂದ ಬಂದಾರೆ ಮುತ್ತಿನ ಮುಡಿ ದಾಸಾರು
ಕೊಚ್ಚಕ್ಕಿ ನಂಗೇ ಸೂಲವುಲ್ಲು । ದಾಸಾರು
ಎತ್ತಿಂದ ಗಿರಿಗೆ ಈಳುದಾರೆ ॥ ಗಂಟೆ ಮಾತಾಡುತಾವೆ ॥

ಅಣ್ಣಾ ನಿಮ್ಮ ದಾಸಾರು ಎಣ್ಣೆಬಾನಾ ಉಂಡು
ಸಣ್ಣ ಬೂತಾಳ ಕೈಯಲ್ಲಿಡುದೇ । ಮೂಡಾನಾಡ
ಅಣ್ಣಗಾಡಾರೇ ಆರಿಸ್ಯಾವೇ ॥ ಗಂಟೆ ಮಾತಾಡುತಾವೆ ॥

ಅಕ್ಕಾ ನಿಮ್ಮ ದಾಸಾರು ತುಪ್ಪಾಬಾನಾ ಉಂಡು
ಸಿಕ್ಕ ಬೂತಾಳ ಕೈಯಲ್ಲಿಡದು । ಮೂಡಾನಾಡ
ಅಪ್ಪಾಗಾಡಾರೇ ಆರಿಸ್ಯಾವೇ ॥ ಗಂಟೆ ಮಾತಾಡುತಾವೆ ॥

ಎಲ್ಲಿಂದ ಬಂದಾರೆ ಮಲ್ಲಿಗೆ ಮುಡಿ ದಾಸಾರು
ನೆಲ್ಲಕ್ಕಿನಂಗೇ ಸೂಲವುಲ್ಲು । ದಾಸರು
ಎಲ್ಲಿಂದ ಗಿರಿಗೆ ಈಳುದಾರೆ ॥ ಗಂಟೆ ಮಾತಾಡುತಾವೆ ॥

ಎಲ್ಲಿಂದ ಬಂದಾರೆ ಮುತ್ತಿನ ಮುಡಿದಾಸರು
ಕೊಚ್ಚಕ್ಕಿನಂಗೇ ಸೂಲವಲ್ಲದ । ದಾಸರು
ಎಲ್ಲಿಂದ ಗಿರಿಗೇ ಈಳುದಾರೆ ॥ ಗಂಟೆ ಮಾತಾಡುತಾವೆ ॥

ಆಲಾದ ಎಲಿ ಹಾಸಿ ನೀಡ್ಯಾರೇ ಬೆಲ್ಲಾವು
ಹನ್ನೊಂದು ಆಲಾದ ಸಸಿನೆಟ್ಟೀ । ಪಾಲಯ್ಯ
ಸಣ್ಣ ದಾಸರಿಗೆ ನ್ಯಾರುಳಾಗೆ ॥ ಗಂಟೆ ಮಾತಾಡುತಾವೆ ॥

ಎಕ್ಕಿಯ ಎಲಿ ಹಾಸಿ ನೀಡ್ಯಾರೇ ಬೆಲ್ಲಾವು
ಇಪ್ಪತ್ತು ಆಲಾದ ಸಸಿನೆಟ್ಟೀ । ಪಾಲಯ್ಯ
ಸಿಕ್ಕದಾಸರಿಗೇ ನ್ಯಾರುಳಾಗೆ ॥ ಗಂಟೆ ಮಾತಾಡುತಾವೆ ॥

ಹೊನ್ನಿನಾ ಉರುಮೆ ಇನ್ನೆಲ್ಲಿ ವೈಸಾರೆ
ಸಣ್ಣ ನನ್ನೀವಾಳಾ ಬಾಯಿಲಾಗೇ । ಪಾಲಯ್ಯ
ಹೊನ್ನಕೊಟ್ಟೆ ಉರಿಮೆ ವೋಯಿಸಾರೆ ॥ ಗಂಟೆ ಮಾತಾಡುತಾವೆ ॥

ಮುತ್ತೆನಾ ಉರಿಮೆ ಮತ್ತೆಲ್ಲಿ ವೈಸಾರೆ
ಸಿಕ್ಕ ನನ್ನೀವಾಳಾ ಬಾಯಿಲಾಗೆ । ಪಾಲಯ್ಯ
ಮುತ್ತು ಕೊಟ್ಟೆ ಡಗಮು ವೋಯಿಸಾರೆ ॥ ಗಂಟೆ ಮಾತಾಡುತಾವೆ ॥

ತ್ವಾಟ ಸುತ್ತಾ ಮುತ್ತಾ ಯಾಕಮ್ಮ ಕೈಪಂಜು
ದೊರಿಯೆ ಪಾಲಯ್ಯ ವಾರಹೊಂಟು । ಮುಂದಾಗಿ
ದೊರಿಗಳ ಶಾಲಾಮು ಕೊಡಿರಮ್ಮ ॥ ಗಂಟೆ ಮಾತಾಡುತಾವೆ ॥

ತಾಯಿ ನನ್ನೀವಾಳಾ ಹೊಗಿ ನೋಡನು ಬನ್ನಿ
ರಾಗಿಯ ಎದುರೆ ದಾಣಲೊಂದೆ । ಕ್ವಾಟಿಯ
ಸಣ್ಣನ ಪಾಲಯ್ಯ ವಾರಿಹೊಂಟು ॥ ಗಂಟೆ ಮಾತಾಡುತಾವೆ ॥
ಅಕ್ಕಾ ನನ್ನೀವಾಳಾ ವೊಕ್ಕಿನೋಡಲು ಬನ್ನಿ
ಅಕ್ಕಿ ಆರಿದುರೆ ದಾಣಲೊಂದೆ । ಕ್ವಾಟಿಯಾ
ಸಿಕ್ಕನು ಪಾಲಯ್ಯ ವಾರಿಹೊಟು ॥ ಗಂಟೆ ಮಾತಾಡುತಾವೆ ॥
ಸಣ್ಣ ಸಣ್ಣ ಪದವಾ ಸಣ್ಣ ಭರಣಿಗೆ ತುಂಬೀ
ಸಣ್ಣ ಮುದ್ದೂರಿ ಬಿಗದತ್ತಿ । ಪಾಲಯ್ಯ
ಸಣ್ಣನಿಗರ್ಪಿಸಿದೆ ಪಾದನೂರು ॥ ಗಂಟೆ ಮಾತಾಡುತಾವೆ ॥

ದೊಡ್ಡ ದೊಡ್ಡ ಪದವಾ ದೊಡ್ಡ ಬರಣಿಗೆ ತುಂಬೀ
ದೊಡ್ಡ ಮುದ್ದೂರಿ ಬೀಗದತ್ತಿ । ಪಾಲಯ್ಯ
ದೊಡ್ಡನಿಗರ್ಪಿಸಿದೆ ಪಾದನೂರು ॥ ಗಂಟೆ ಮಾತಾಡುತಾವೆ ॥

ಅಣ್ಣಾ ನಿಮ್ಮ ಹಾಡೀವಿ ಅಣ್ಣ ನಿಮ್ಮ ಪಾಡೀವಿ
ಅಣ್ಣಾ ನಿಮ್ಮ ನಿದ್ರೆ ಕಾಳದೀವಿ । ಪಾಲಯ್ಯ
ಬಣ್ಣದ ಮಂಚುದಲೇ ಪಾವಡಿಸೆ ॥ ಗಂಟೆ ಮಾತಾಡುತಾವೆ ॥

ಅಪ್ಪಾ ನಿಮ್ಮಾ ಡಿವಿ ಅಪ್ಪಾನಿಂಪಾಡೀವಿ
ಅಪ್ಪಾ ನಿಮ್ಮ ನಿದ್ರೆ ಕಾಳದೀವಿ । ಪಾಲಯ್ಯ
ಪಟ್ಟೆ ಮಂಚದಲೀ ಪಾವಡೀಸೆ ॥ ಗಂಟೆ ಮಾತಾಡುತಾವೆ ॥

ಜಯನೆನ್ನಿರೀ ಜಯ ಮಂಗಳೆನ್ನೀರಿ
ಜಯನೆನ್ನೀರೀ ಜಯ ಮಂಗಳೆನ್ನೀರಿ

ಬಾಗೀರೀ ಬಾಗೀರೀ ಬಾಗಿ ಶರಣೆನ್ನಿರಿ
ಬಾಗಲಾಗೆ ಇರುವ ಒಡಿಯಾಗೆ । ಪಾಲಯ್ಯಗೆ
ಬಾಲೆಯರಾರುತಿ ತುಂಬಿಟ್ಟೀರಿ ॥ ಜಯನೆನ್ನಿರಿ ॥
ಬಗ್ಗಿರಿ ಬಗ್ಗಿರಿ ಬಗ್ಗಿ ಶರಣೆನ್ನಿರಿ
ಮಗ್ಗುಲಾಗ ಇರುವ ಒಡಿಯಾಗೆ । ಪಾಲಯ್ಯ
ಬದ್ರೇರಾರುತಿ ತಂದಿತ್ತೇರಿ ॥ ಜಯನೆನ್ನಿರಿ ॥

ಹಾಲುದಿರಸ ಸೆಂದಾ ನಿಲುದ್ದಿರಿಸೇವಾ
ಬಾಲದಲ್ಲಿ ಚಲುವ ಬಸವಯ್ಯನ । ಪಾದಕೆ
ಯಾಮವಂತರು ಬಂದು ಶರಣೆಂದರು ॥ ಜಯನೆನ್ನಿರಿ ॥

ಇಂಬು ಕಣಸಾ ಶಂಭುಲಿಂಗ ಮುದ್ದರಿಸೆಂದಾ
ಕೊಂಬಿನಲ್ಲಿ ಚಲುವಾ ಬಸವಯ್ಯ । ಪಾದಕೆ
ಲಿಂಗಾವಂತರು ಬಂದು ಶರಣೆಂದರು ॥ ಜಯನೆನ್ನಿರಿ ॥

ಹಸಿ ಅಡಿಕೆ ಗೊನೆಯಂತೆ ಎಸಳು ಕ್ಯಾದಿಗೆಂತೀ
ಹೊಸ ಮುತ್ತಿನಾಗಳರುಳಂತೆ । ಪಾಲಯ್ಯಗೆ
ಸಸಿಗಳಾರುತಿ ತಂದಿಕ್ಕೀರಿ ॥ ಜಯನೆನ್ನಿರಿ ॥

ಹಣ್ಣಡಕಿ ಗೊನೆಯಂತೆ ಸಣ್ಣಕ್ಯಾದಿಗಾಂತೆ
ಸಣ್ಣ ಮುತ್ತಿನಗಳರುಳಂತೆ । ಪಾಲಯ್ಯಗೆ
ಹೆಣುಮಕ್ಕಳಾರುತಿ ತಂದಿಕ್ಕೆರೀ ॥ ಜಯನೆನ್ನಿರಿ ॥

ಕಾಲು ಗಗ್ಗುರಿ ಸೆಂದಾ ನಿಲು ಮುದ್ದರಿ ಸೆಂದಾ
ಬಾಲದಲ್ಲೀ ಚಲುವ ಬಸಯ್ಯನೋರು । ಪಾದಕೆ
ಯಾಮವಂತರು ಬಂದು ಶರಣೆಂದರೆ ॥ ಜಯನೆನ್ನಿರಿ ॥

ಅಣ್ಣಾನ ಹುಡಿ ಮುಂದೆ ಹೆಣ್ಣುಳ್ಳ ಜಾರಿಕೆ
ಕನ್ನೆರು ಧರೆಗೆ ಮುದರಿಡಿ । ಕೈಯಾಗಾಳ
ಹೊನ್ನೀನಾರುತಿ ಈಜಾತುನಾವೆ ॥ ಜಯನೆನ್ನಿರಿ ॥

ಅಪ್ಪಾನ ಗಡಿ ಮುಂದೆ ತುಪ್ಪುಳ್ಳ ಜಾರಿಕೆ
ನಿಸ್ತ್ರೇರು ನರೀಗೆ ಮುದರುಡೀರೆ । ಕೈಯಾಗಳಾ
ಮುತ್ತಿನಾರುತಿ ಈಜಾತುನಾವೇ ॥ ಜಯನೆನ್ನಿರಿ ॥

ತಾಲೀಯ ತಕ್ಕೊಂಡು ಹಾಲೀಗೆ ನಾನೋದೆ
ಅಲಿನಾಗಾಳಾವು ಮಲಿಗಿಡ್ಡಾವೆ । ಈವೂರು
ನಿಂತಾರೆ ಸ್ವಾಮಿ ಶಿವಪೂಜೆಗೆ ॥ ಜಯನೆನ್ನಿರಿ ॥

ಬಿಂದಿಗಿಯ ತಕ್ಕೊಂಡು ಗಂಗೆಗೆ ನಾನೋದೇ
ಗಂಗಾನ್ಯಾಗೊಳಮೀನು ಮಲಗಿದ್ದಾವಾ । ಈವೂರು
ನಿಂತಾರೆ ಸ್ವಾಮಿ ಶಿವಪೂಜೆಗೆ ॥ ಜಯನೆನ್ನಿರೆ ॥

ಜೋಳಿಗೆ ತಕ್ಕೊಂಡು ಪತ್ರಿಗೆ ನಾನೋದೆ
ಪತ್ರಯಗಳ ಕನಡಗ ಮಲಿಗಿದ್ದಾವೇ । ಈವೂರು
ನಿಂತಾರೆ ಸ್ವಾಮಿ ಶಿವ ಪೂಜೆಗೆ ॥ ಜಯನೆನ್ನಿರೆ ॥

ಇಂಡಿಗಿನ್ನಲಸ್ವಾಮಿ ಎನ್ನಕೊ ಸಾವೇಸಿ
ಎಲ್ಲೀರಾಮಾಮಾಡಿ ತೊಪುಲಾಕೆ । ಈ ಊರು
ಪಚ್ಚಪತಿ ಪಾಪನ್ನ ನೀಕಾರುತಿ ॥ ಜಯನೆನ್ನಿರೆ ॥

ಬಾವಿಯ ಸುತ್ತಿಕ್ಕಿ ಬಸವನ ಕೊಂದಯ್ಯಾಗೆ
ದೀರಾ ಮೂರುತಿ ನಮ್ಮಪ್ಪಯ್ಯಗೆ । ನನ್ನೀವಾಳಾ
ನಾಗುರಗೆನ್ನಾರಾರುತಿ ತಂದಿತ್ತಾರೆ ॥ ಜಯನೆನ್ನಿರೆ ॥

## ಹಲಗಲಿಯ ಬೇಡರು

ಹೊತ್ತು ಬಂದಿತು ಮತ್ತ ನೋಡಿರಿ ಕತ್ತಿ ಹಿಡುವ ಜನಕ |
ಸಿಟ್ಟಿನ ಮಂದಿ ಭಂಟರ ಹಲಗಲಿ ಮುಟ್ಟಲಿಲ್ಲ ದಡಕ || ಪ ||

ವಿಲಾತಿಯಿಂದ ಹುಕುಮ ಕಳವಿದರ ಕುಂಪಣಿ ಸರಕಾರ
ಯಲ್ಲ ಜನರನಾ ತರಿಸಿ ಜಾರಿ ಮಾಡಿ ತರಬೇಕ ಹತಾರಾ
ಕತ್ತಿ ಕಟಾರಿ ಕೈ ಚೂರಿ ಚಾಕು ಗುರ್ದಿ ಸುರಾಯಿ ಚಕ್ರಾ
ಬಾಳಿಯ ಬರ್ಜಿ ಬಿಚ್ಚುಗತ್ತಿ ನೋಡ ಬಾಣ–ಬಿಲ್ಲಿನವರಾ
ಪಟಾಕ ಪಿಸ್ತೂಲ ಕರುಲಿ ತೇಗಾ ಚಾಪಗೊಡಲಿ ಶಸ್ತ್ರಾ
ತೋಪು ತುಬಾಕಿ ಹೊಡವು ಮದ್ದಗುಂಡ ಬಿಡಬ್ಯಾಡಿರಿ ಚೂರಾ
ಮುಚ್ಚಿ ಇಟ್ಟವರಿಗೆ ಮೂರು ವರ್ಷದ ಬೇಡಿ ಹಾಕ್ಯಾರ ಪೂರ
ಕೊಡದ ನಿಟಾಯಿ ಮಾಡಿದವರನಾ ಕಡದ ಹಾಕರಿ ತಾರಾ ||ಜ್ಯಾಲ||

ಬೇಡಿದಾ ಕ್ಷಣಕ ತಾವು ತಂದು
ಕೊಡತಾರ ಹಿಡಿ ಹಿಡಿರೆಂದು
ರತ್ನ ಕೊಡತೇವನ್ನರಿ ಒಂದೊಂದು
ತಂದು ಕೊಡುತಾರ ತಮ್ಮ ಕುಸಿಲಿಂದು
ಬಂದಿತು ಹುಕುಮ ಹಿಂಗ ಎಂದು
ಡಂಗರ ಸಾರಿದರ ಮುಂದು
ಶೂರ ಸಿಪಾಯಿ ಜನರ ತಾವು ತಿಳಿದು
ಅಳತಾರು ಕಣ್ಣಿಗೆ ನೀರ ತಂದು || ಯೇರಾ ||
ಬಹಳ ಚಿಂತಿಯಾಗಿ ದುಃಖದಿಂದ ಅವರು ಬಿದ್ದರಣ್ಣ ನೆಲಕ.

## 2

ಕೇಳುತ ಹುಕುಮ ಕೆಲವರ ತಂದೇ ಕೊಟ್ಟಾರ ಆವಾಗ
ಬಹಳ ಬೆಲಿವು ಹೆಚ್ಚಿನ ಹತಾರ ಮುಚ್ಚಿ ಇಟ್ಟರ ಒಳಗ
ಸಾಲ ಸಮದ ಮಾಡಿ ದನಕರ ಮಾರಿ ತಂದಿವ್ನಿ ಹಬ್ಬದಾಗ
ನೋಡ ನೋಡ ಹ್ಯಾಂಗೆ ಕೊಡುನ ಅಂತ ಹುಗಿದಿಟ್ಟಾರ ನೆಲದಾಗ

ಶೂರ ಚಟಗೆಾರರು ಜಾಯಿತ ಸಾಹೇಬ ಬಂದಾರ ಆವಾಗ
ಸಂದಿಯ ಗೊಂದಿ ಒಂದು ಉಳಿಯದಾಂಗ ಹೊಕ್ಕ ಹುಡಿಕೇರ ಮನಿಯಾಗ
ತೆಪ್ಪಿತುಪಾಯಿ ಇನ್ನ ಮಾತರ ಮಾಡುನೆ ಅಂತಾರ ಹ್ಯಾಂಗ
ವೊಬ್ಬರಾಕ್ ಒಬ್ಬರ ಜ್ಯಾಡ ಹೇಳತಾರೆ ವರ್ಮಸಾದಿಸಿದ್ ಹಾಂಗ್ ||ಜ್ಯಾಲ||

ಜ್ಯಾಡಸಿ ಹೋದವೊ ಎಲ್ಲ
ನಾಡ ಒಳಗೆ ಏನು ಉಳಿದಿಲ್ಲ
ಅಜ್ಜ ಮುತ್ತೇರ ಹಿಡುವ ಪಿಸ್ತೂಲ
ಕಸದ ಹೋದರ ಕಟ್ಟಿಯಡಾಲಾ
ಕವಚ ಬೆಳ್ಳಿಯ ಮಕಮಾಲಾ
ರತ್ನದ ಹಿಡಿಕಿವ ಹೋದವು ಎಲ್ಲಾ ||ಯೇರಾ||
ಹೋದ ಹತಾರಕ ಹೊಟ್ಟಿ ಜ್ಯಾನಿ ಹಚ್ಚಿಕೊಂಡ ನಿಂತರ ಸಾವುದಕ

## 3

ಹಲ್ಲ ಕಿತ್ತಿದಾ ಹಾವಿನ ಪರಿಯು ನಮಗ ಆದೀತ್ ಅಲ್ಲಾ
ರಂಡಿ ಮುಸುಕ ಹಾಕಿ ತಿರುಗಿದರ ನಮ್ಮ ಮಾನ ಉಳಿಯುವುದಿಲ್ಲಾ
ಮಗ್ಗಲದಾಗಿನ ಹೆಣತಿ ಕೊಟ್ಟ ಆಂಗ ಆತಿ ಹೇಡಿ ಆದೇವ್–ಅಲ್ಲಾ
ಸತ್ತ ಹೆಣಕ ಶೃಂಗಾರ ಮಾಡಿದ ಪರಿ ಆದಿತಲ್ಲ
ಸಾವಕಾರು ನಮ್ಮ ಜೀವ ಹೋದೀತ್ ಅಂತ ಚಿಂತಿ ಮಾಡೇರ್ ಅಲ್ಲ
ಹಗಲಿ ಮನಿಹೊಕ್ಕ ಹಣ ಹೋದರ ಕೇಳವರ್ ಯಾರಿಲ್ಲ
ಪುಂಡ ಪಾಳೆಯಗಾರ ಪಚ್ಚ್ಯಾ ವಜೀರರು ಪಂತ ಹಿಡಿಯಲಿಲ್ಲಾ
ಚಂಡನಾಳುವ ಧೊರಿ ದೌಲತಾರ್ ಅಂಜಿ ಕುಲಿತಾರ್ ಅಲ್ಲಾ || ಜ್ಯಾಲ ||

ದೇವರ ತಂದ ಪಡಿಪಾಟಾ
ಚಿಂತಿ ಹತ್ತಿ ಆದಾರೇ ನಷ್ಟಾ
ಅಧಿಕಾರ ಉಳಿಯಲಿಲ್ಲ ಯೆಳ್‌ಷ್ಟಾ
ಕೇಡಗಾಲ ಬಂದಿತು ಕನಿಕಷ್ಟಾ
ಭಂಡರಿಗೆ ಬಂದಿತೊ ಭಿಕ್ಷಾಟಾ ||ಯೇರ||
ಪಕ್ಕ ಕಿತ್ತ ಪಕ್ಷಿಗತಿ ಆದ ಚಿಂತಿ ಅದರ ಮನಕ.

**4**

ಹಲಗಲಿ ಅಂಬುವ ಹಳ್ಳಿ ಮುಧೋಳ ರಾಜ್ಯದಾಗ ಇತ್ತು
ಪೂಜಾರಿ ಹಣಮಾ ಬಾಲ ಜಡಗರಾಮ ಮಾಡ್ಯಾರ ಮಸಲತ್ತು
ಕೈಗ ಹತಾರ ಕೊಡಬಾರದೊ ನಾವು ನಾಲ್ಕು ಮಂದಿ ಜತ್ತು
ಹತಾರ ಹೋದ್ ಇಂದಬಾರದ ನಮ್ಮ ಜೀವ ಸತ್ತಾ ಓಗುದು ಗೊತ್ತು
ಸುತ್ತಿನ ಹಳ್ಳಿ ಮತ್ತದೊರಿಗಳಿಗೆ ತಿಳಿಸೇರ ಹಿಂಗ್ ಅಂತು
ಮಾಡರಿ ಜಗಳ ಕೂಡ್ ಇರತೇವು ಕುಮುಕಿ ಯಾವತ್ತು
ಒಳಗಿಂದ್ ಒಳಗ ವಚನ ಕೊಟ್ಟರೇ ಬ್ಯಾಡರೇ ಎಲ್ಲ ಕಲಿತು
ಕಾರಕೂನನ ಕಪಾಳಕ ಬಡದರ ಸಿಪಾಯಿ ನೆಲಕ ಬಿಟ್ಟು || ಜ್ಯಾಲಾ ||

ದುಃಖದಿಂದ ಅವರು ಅಲ್ಲಿಗೆ ಹೋಗಿ
ಸಾಹೇಬಗ ಹೇಳಿದರ ಕೂಗಿ
ಕೇಳಿ ಸಾಹೇಬ ಎದ್ದ ಸಿಟ್ಟಿಗಿ
ತಿರುಗಿ ಹೋದ ಆವಾಗ ಕಳಾದಾಗಿ
ಕರಸಿ ಕೃಷ್ಣನಾಯಕ ಗೌಡ ಕುಂದರಗಿ
ಕರಸ್ಯಾನ ಸಂಧಾನಕ್ಕ–ಆಗಿ ||ಯೇರ||
ಹಟ ಮಾಡಬಾರದು ನಿಮ್ಮ ಹತಾರ ಕೊಡಿರಿ ಸಾಹೇಬನ್–ವಶಕ

**5**

ಹತಾರ ಕೊಡಲಿಕೆ ಹೆಂಗಸಾಗಿ ಬಾಳಿ ಇತ್ತಿಲ್ಲ ಕೈಯಾಗ
ಯಾವ ಬಂದಲಿ ಜೀವ ಹೋದರು ಕೊಡುದಿಲ್ಲ ಸುಮ್ಮಗೆ ಹೋಗಿರಿ ಈಗ
ಅಂದ ಮಾತ ಎಲ್ಲ ಬಂದ ಹೇಳಿದಾನ ಅವಾಗಾ ಸಾಹೇಬಗ
ಸಿಟ್ಟಿಲಿ ಮುಂಗ್ಯೆ ಕಟ್ಟನೆ ಕಡಕೊಂಡ ಹುಕುಮ ಕೊಟ್ಟರ್ ಆಗ

ಕುದುರೆಯ ಮಂದಿ ಕೂಡಿ ಮುತ್ತಿತೊ ಹಲಗಲಿ ಸ್ಥಲದ ಮೇಗ
ಒಳಗಿನ ಮಂದಿ ವೊತ್ತಾರೆಲೆ ಹೋದರ ಮುಂಗಾರಿ ಮಳಿ ಸುರದ್ ಅಂಗ
ಹೊರಗಿನ ಮಂದಿ ಗುಂಡ ಹತ್ತಿ ಕೆರ ತಿರಿಗೆರ ಆವಾಗ
ಕಾಗದ ಬರದ ಕಳೆವರ ಬೇಗನ ದಂಡ ಬರಲ್ ಎಂತಾಹೀಂಗಾ ||ಜ್ಯಾಲಾ||

ದಂಡ ಬಂತ ನೋಡ ತಯಾರ್ ಆಗಿ
ಜಲದ ಮಾಡಿ ಬಂತ ಹಲಗಲಿಗಿ
ಆರ ತಾಸ ರಾತ್ರ್ಯಾಗ ಹೋಗಿ
ಊರಿಗೆ ಹಾಕಿದರ ಮುತ್ತಿಗಿ
ಗುಂಡ ಹೊಡೆದರ ವಿಪರೀತ ಸೂರೆ ಆಗಿ
ಅಂಜಿ ಓಡಾಕೆ–ಹತ್ತಿತ ಮುಂದೆ–ಆಗಿ
ಬೆನ್ನ ಹತ್ತಿ ನೋಡಿದಾರ ಇವರ್–ಆಗಿ
ಬಿದ್ದವ ಹೆಣಗಳು ಸೂರೆ ಆಗಿ ||ಯೇರ||
ಮುತ್ತಿಗಿ ಹಾಕಿ ಅವರು ಕತ್ತಿಲಿ ಕಡದರ ಅಂಜಲಿಲ್ಲ ಯಾತ - ಯಾತಕ

**6**

ಬೆನ್ನ ಹತ್ತಿ ತಿರಿ ತಿರಿವಿ ಕಡದರೊ ಯೇನು ಉಳಿಯದ್ ಆಂಗ
ನಡವಿ ಹಾಕಿ ಕೊಂಡ ಹೊಡದರ ದರಜ ಇಲ್ಲದ್ ಹಾಂಗ
ಕವಾತ ಫೆಯಿರಾ ಸುತ್ತ ಗಟ್ಟಿ ತುಂಬು ನಡಿಶ್ಯಾರ ಆವಾಗ
ತೋಪು ತುಬಾಕಿ ಕರುಲಿ ಪಿಸ್ತೂಲ ಚಾಕ ನಡವಿನಾಗ
ಸಿಡಲಿನ ಹಂತ ಗುಂಡ ಹೊಡವುತ ಕತ್ತಿಲಿ ಕಡೆದರೆ ಒಳತ್ ಆಂಗ
ನಡಗಿತು ಬ್ಯಾಡಕಿ ಕೆನ್ ಧೂಳ ಹಾರಿದ್ ಆಂಗ ಕಡದಾಟವು ಹ್ಯಾಂಗ
ಕೇಡಗಾಲ ಬಂದಿತ ನಡವಿ ಸಿಕ್ಕರೆ ಬಿಡಸವರ್ ಯಾರ್ ಈಗ
ಚಟಕಾರರು ಚಾಟಿ ಮಾಡುತ ನಡದರ ಗುಡದಾಗ ||ಇಳವ||

ಅಗಸಿಗೆ ಬಂದು ನಿಂತು
ಹೆಬಲಕ್ ಸಾಹೇಬ ಬಂದು ತಾವು ನಿಂತು
ಹೇಳತಾರ ಬುದ್ಧಿಯ ಮಾತು
ಕೊಡತೇವ ಕವಲ ಈ ಹೊತ್ತು
ಹೋಗಬೇಡಿರಿ ವ್ಯರ್ಥ ನೀವು ಸತ್ತು ||ಯೇರ||
ಎಂಬೊ ಮಾತಿಗೆ ನಂಬುಗೆ ಸಾಲದ ಹನುಮ ಬಂದ ಮುಂದಕ

## 7

ಜಡಗ ಹೇಳತಾನ ಹೊಡಿ ಇವರನಾ ಘಾತಕರೊ ಇವರಾ
ಇಸ್ವಾಸ ಘಾತಮಾಡಿ ಮಾಡಿ ನಂಬಿಗೆಲಿ ಮಾಡತಾರು ಪಿತೂರ
ಮಾಸಮಾಡಿ ಬಲದೇಶ ತಗೋತರ ಮುಂದೆ ನಮಗೆ ಗೋರಾ
ಅಂದ ಹೊಡದರೆ ಒಂದು ಗುಂಡಿಗೆ ಆದ ಸಾಹೇಬ ಟಾರಾ
ಕಾರ್ ಸಾಹೇಬ ಬೆಂಕಿ ಚೂರ ಆಗಿ ತಾನು ಲೂಟಿ ಮಾಡಂದ ಊರ
ಹುರುಪಿಲಿ ಹೊಡದರ ಮಳಿ ಆದ ಹಂಗ ಗುಂಡ ಸುರದವು ಬರಪೂರ
ಹನಮ ಹೇಳತಾನ ಗುಂಡ ಹೊಡೆದಕೆರ ಕೆಡವುನ್ – ಅಷ್ಟು ಬಾರಾ
ಮುನ್–ನೂರ ಮಂದಿ ಎನ್ನ ಮೇಗೆ ಬಿಟ್ಟ ಆಗ ನೋಡಿರಿ ಜೊರಾ ||ಜ್ಯಾಲಾ||
ಭೀಮನು ಇದಿರಿಗೆ ನಿಂತಾ
ಐನೂರ ಮಂದಿಗೆ ಮಲತಾ
ಬಾಲನು ಮಾಡಿದ ಕಸರತ್ತಾ
ಕುದರಿಯ ಕಡದನೊ ಹತ್ತಾ
ರಾಮನ ಕಡತ ವಿಪರೀತ
ಕಾವಲಿ ಹಾರಿತೊ ರಕ್ತ
ಸಾವಿರ ಆಳಿಗೆ ಒಬ್ಬ ಮಲತಾ
ಕೂಗುತಾನೋ ಕಡಿ - ಕಡೀರ್ - ಎಂತಾ ||ಯೇರ||

ನಾಲ್ಕುಮಂದಿ ಹಿಂಗ ಕಡದ ಸತ್ತರೊ ಭಂಟರ್ ಅನಸೆರ ಜನಕ.

## 8

ಯಾರು ಕೇಳಲಿಲ್ಲ ಆರು ಗುಂಡ ತಾಕಿ ಹನುಮ ಬಿದ್ದ ನೆಲಕ
ಚೀರಿ ಆಡುತ ಜನ ಸುತ್ತಗಟ್ಟಿತೊ ಅಂಜಿಕೊಂಡ ಜೀವಕ
ಶೂರ ಒಬ್ಬ ಬಹಳ ಜೋರ ಮಾಡಿದನ ಹತಾರ ತಗೋ ಉದಕ
ಏರಿ ಬರು ಕುದುರಿ ಕಾಲ ಕಡದನೇ ಸ್ವಾರ ಬಿದ್ದ ನೆಲಕ
ರಾಮಿ ಗುಂಡಿಲಿ ಜೋರ ಮಾಡಿ ಹೊಡದಾಳೊ ಮೂರ ಮಂದಿ ಶಿರಕ
ಆರ ಕುದರಿಯಾ ಕಡದ ಸಿಡದಳೊ ಬಾಲನ ಸೂರಾಯಕ ||ಜ್ಯಾಲಾ||

ಯಾರು ಯಾರು ಇಲ್ಲದಾಯಿತು
ಊರೆಲ್ಲೆ ಲೂಟಿ ಆಗಿ ಹೋತು

ಮಂದಿ ಮನಿಹೊಕ್ಕ ಹುಡುಕಿತು
ದನಕರ ಲಯಾ ಆದಿತು
ಸಣ್ಣಕೂಸಗಳು ಹೋದವು ಸತ್ತು
ಬೆಂಕಿ ಹಚ್ಯ್ಯಾರ ಊರ ಸುಟ್ಟಿತು
ನಷ್ಟ ಆತಿ ನೋಡರಿ ಈವತ್ತು
ನಾ ಹೇಳತೇನ ಈ ಮಾತು ॥ಯೇರ॥

ಇಷ್ಟ್ ಎಲ್ಲ ಅಳವೆ ಆಗೆ ಹೋದಿತೊ ಮುಟ್ಟಲಿಲ್ಲ ಮಾತ್ - ಯಾಕ

**9**

ಕತ್ತಿ ಕುದರಿ ಮುತ್ತು ಮಾಣಿಕ ಯಾವುದು ಬಿಡಲಿಲ್ಲ
ಬೆಟ್ಟ ಬಂಗಾರ ಹರಳಿನುಂಗುರ ಹೊನ್ - ಉಂಗುರ ಗೋಳಾ
ಸರಗಿ ಸರದಲಿ ಬುಗುಡಿ ಬಾವಲಿ ಬಿಡಲಿಲ್ಲಾ
ಕಡಗ ಕಂಕಣ ನಡವಿನ ಡಾಬ ನಡಕಟ್ಟು ರುಮಾಲ
ಕುಬಸ ಸೀರಿ ಹಪ್ಪಳ ಸಂಡಿಗಿ ಕುರ್ಚಿಗಿ ಕುಡಗೋಲಾ
ಕೊಡಲಿ ಕೋವೆ ಕುಡ ಕಬ್ಬಿಣ ಮೊಸರು ಬೆಣ್ಣೆ ಹಾಲಾ
ಉಪ್ಪ ಎಣ್ಣೆ ಅರಿಸಿನಾ ಜೀರಿಗಿ ಅಕ್ಕಿ ಸಕ್ಕರಿ ಬೆಲ್ಲ
ಗಂಗಳ ಚರಗಿ ಮಂಗಳ ಸೂತ್ರ ತಕೊಂಡ ಹೋದರ ಬೀಸುಕಲ್ಲು ॥ಇಳವ॥

ಹಾಳಾಗಿ ಹೋದಿತೆ ಇಷ್ಟು
ವರ್ಣಿಸಿ ಹೇಳಲು ಎಷ್ಟು
ಎಲ್ಲ ತಗೊಂಡರೇ ಸಿಕ್ಕಷ್ಟು
ಸರದ ನಿಂತರೊ ಊರಿಗೆ ಕೊಳು ಕೊಟ್ಟು
ಬೂದಿ ಮಾಡೇರ ಹಲಗಲಿ ಸುಟ್ಟು
ಹಲಗಲಿ ಗುರ್ತ ಎಲ್ಲ ಅಷ್ಟು
ಕಾಣಸ್ತ ಹೋದಿತೇ ಕೆಟ್ಟು
ವರ್ತಿಸಿ ಹೇಳಿದೆನು ಇಷ್ಟು ॥ಯೇರ॥

ಕುರ್ತಕೋಟಿ ಕಲಮೇಶನ ದಯದಿಂದ ಹೇಳುದ ಕೇಳುದಕ.

## ಸಾಂಖ್ಯ ತೊಂಡನ ಕಥೆ

ಗುರುವೆ ನಿಮ್ಮ ಪದದಿರುವಿನಲ್ಲಿ
ಮರತು ಬಿಟ್ಟೆ ಜನ್ಮದ ಬೇರ
ಮರೆತು ಬಿಟ್ಟೆ ಜನ್ಮದ ಬೇರ
ಶಿವಶರಣರಡಿಗೆ ಬಾಗುವೆ ಶೀರಾ

ದಕ್ಷನುದರದಲ್ಲಿ ಸಾಕ್ಷಿತಾ ಜನಿಸಿದ
ದಾಕ್ಷವೇಣಿಗೆ ಮಾಡಿ ನಮಸ್ಕರ
ದಾಕ್ಷವೇಣಿಗೆ ಮಾಡಿ ನಮಸ್ಕರ
ನಾ ದಕ್ಷ ಹುಟ್ಟು ವೈರಿಯ ಕುವರ

ನುತಿಸಿ ಪೇಳುವೆನು ಕ್ಷಿತಿಯೊಳು ಶರಣರು
ಹಿತದಿ ಭಕ್ತಿಯ ಮಾಡುವರ
ಹಿತದಿ ಭಕ್ತಿಯ ಮಾಡುವರಾ
ನಾ ಸತತ ನುಡಿವೆ ಶರಣರ ಸಾರ

ಕ್ರೀಬ ದೇಶದಲ್ಲಿ ಹುಟ್ಟಿದ ಬಡವರ
ಹೊಟ್ಟೆಲಿ ಜನಿಸಿದ ಚದುರ
ಹೊಟ್ಟೆಲಿ ಜನಿಸಿದ ಚದುರಾ
ನಾ ಎಷ್ಟು ಹೇಳ್ಲಿ ಚಮತ್ಕರಾ

ಕಿಂಕರ ತನದಲಿ ಶಂಕರನೋವಿದ
ಸಂಖ್ಯತೊಂಡಿ ಶರಣರ ಪಾರ
ಸಂಖೆ ತೊಂಡಿ ಶರಣರ ಸಾರ
ನಾ ಶಂಖೆಯಿಲ್ಲದೆ ಹೇಳುವೆ ಪೂರ

## ವಚನ

ಕಿರೀಬ ದೇಶದಲ್ಲಿ ಹುಟ್ಟಿದನು ಬಡವರ ಮಗ ಸಾಂಬತೊಂಡಿ. ಆಟ ಪಾಠದಲ್ಲಿ ಮಾಡ್ತಾನೆ ಬಹು ತಿಂದುಂಡಿ. ಅವನ ಭಕ್ತಿ ಪ್ರಚಂಡಿ. ತಂದೆ ತಾಯ್ಗಳು ಹೇಳ್ತಾರೆ ಸಾಂಬತೊಂಡಿಗೆ ಬಡ್ತಾನ ಬಂದೈತೀ ಹೊಟ್ಟಿಗೆ ಕೂಳ್ಗೆ ಮಂದೀ ದನಗಳ ಕಾಯ್ಬೇಕು. ಈ ದಿವಸ ದೊಳಗೆ ಆಗ ಸಂಬತೊಂಡಿ ಹೇಳ್ತಾನ. ನಂದೇನು ಕೆಲಸವಿಲ್ಲಾ ತಂದು ಕೊಡ್ರಿ ಮನಿಯೊಳಗೆ

## ಪದ

ತಂದಿ ಹೋಗಿ ತಾ ಮಂದಿಯ ದನಗಳ
ತಂದು ಕೊಟ್ಟನು ಕಾಯ್ವುದಕೆ
ತಂದು ಕೊಟ್ಟನು ಕಾಯ್ವುದಕೆ
ಕಂದ ನೋಡಿ ಅಂತನು ಆ ಕ್ಷಣಕೆ

ಕಟ್ಟು ಬುತ್ತಿಯನ್ನಟ್ಟು ಅಡಿವಿಗೆ
ಎಷ್ಟೊತ್ತು ಅವ್ವ ನೀ ಕಟ್ಟುದಕೆ
ಎಷ್ಟೊತ್ತು ಅವ್ವ ನೀ ಕಟ್ಟುದಕೆ
ದನ ಅಟ್ಟಿ ತಂದ ಅಪ್ಪ ಆ ಕ್ಷಣಕೆ

ಉಪ್ಪು ಸೊಪ್ಪು ಮಾರಿ ಉಪ್ಪರಿಗೆ ಕಟ್ಟಿಸಿದ್ದೆ
ಉಪ್ಪರಿಗೆ ಭೋಗ ಕಾಣಲಿಲ್ಲ । ಜವರಾಯಾ
ಉತ್ತರಿಸಿ ಹೇಳೋ ಸಡಗರವೇ ೪

ಆಚೆ ಕೇರೀಲೀಗ ರಂಡೇರು ಮಿಂಡೇರು
ಅವರ್ನಾರ ಕರಕೊಂಡು ಹೋಗಬಾರದೇ
ರಂಡೇರು ಮಿಂಡೇರು ಎಂದಿದ್ರು ನಮ್ಮೋರು
ಗಂಡನ ಮಡದಿ ನಡಿ ಮುಂದೆ ೫

ಒಬ್ಬಳನು ಅಳಿಸೀದ ಒಬ್ಬಳನು ನಗಿಸೀದ
ಇಬ್ಬಂದಿಕಾರ ಜವರಾಯ್ನುಮಗ್ಗಲಿಗೆ
ನೆಗ್ಗಲು ಮುಳ್ಳು ಸುರಿಯಾಲಿ ೬

ಜವರಾಯ ಬಂದಾಗ ಬರಿಕೈಲಿ ಬರಲಿಲ್ಲ
ಕುಡುಗೋಲು ಕೊಡಲಿ ಕೈಯಲ್ಲಿ ಹಿಡಿದು
ಒಳ್ಳೊಳ್ಳೆ ಮರನ ಕಡಿಬಂದ
ಫಲ ಬಿಟ್ಟ ಮರನ ಕಡಿಬಂದ ೭

## ಬಡತನ

ಮೂಡಲ ಮುತ್ತಯ್ಯ ನೋಡಯ್ಯ ಬಡತಾನ
ಮೂಡ್ಲಲ್ಲಿ ರಾಗಿ ಮೆಳೆಯುದ್ದ । ಬೆಳೆದರೆ
ಮಾಡುವೆ ನಿನಗೆ ಹರಿಸೇವೆ ೧

ಬಂಗಾರ ಬಳಿಯಿದ್ರೆ ಬೈಬ್ಯಾಡ ಬಡವರಿಗೆ
ಬಂಗಾರ ನಿನಗೆ ಸ್ಥಿರವಿಲ್ಲ । ಮಧ್ಯಾಹ್ನದಾ
ಬಿಸಿಲು ಹೊರಳುವುದು ತಡವಲ್ಲ ೨

ಬಡತನ ಬಂದಾರ ಬಡಿಬ್ಯಾಡ ಬಾಲರನ
ಆಡ್ಯಾಡಿ ಬಂದು ತೊಡಿಮ್ಯಾಲ । ಆಡಿದರ
ಬಡತನವೆಲ್ಲ ಬಯಲಾಗಿ ೩

ಬಡವೆಯ ಮಕ್ಕಳು ನಡೆದರೆ ಸಂತೋಷ
ಹುಡಿಯಾಡಿ ಮನೆಗೆ ಬರುವಾಗ । ತಾಯಿಗೆ
ಬಡತನದ ಜಾನ ಮರೆಯಿತು ೪

ಬಡತನ ನನಗಿರಲಿ ಭಾಳ ಮಕ್ಕಳಿರಲಿ
ಮ್ಯಾಗ ಗುರುವಿನ ದಯೆವಿರಿಲಿ । ನನ ಗುರುವೆ
ಬಡತನದ ಚಿಂತಿ ನಿನಗಿರಲಿ ೫

ಬಡವರು ಸತ್ತರೆ ಸುಡಲಿಕೆ ಸೌದಿಲ್ಲ
ಒಡಲ ಕಿಚ್ಚಿನಲಿ ಹೆಣಬೆಂತೊ । ದೇವರೆ
ಬಡವಂಗೆ ಸಾವ ಕೊಡಬ್ಯಾಡ ೬

## ಚಿಕ್ಕಿ ಉಂಗುರಕೆ ನಾರಿ ಮನ ಸೋತಳೊ!

ಕೋಲು ಕೋಲೇ, ಕೋಲನ್ನ ಕೋಲೆ, ಕೋಲು ಕೋಲೆ || ಪ ||
ಚಿನ್ನದ ಸಿಂಗಿನಾದ, ರನ್ನಾದ ಪಾತರೆ
ಪನ್ನಂಗದ ಹರಿನಾಮ ತಿರಿಶೂಲವೊ । ಸಣ್ಣನಾಮ || ಅಪ ||
ಅಣ್ಣಯ್ಯ ನೀನು ಪಡಿಮಾಡು, ಕೋಲು ಕೋಲೆ. . . .
ಆಚೆ ಕೇರಿಲಿ ಒಬ್ಬ ಜೋಗಿ ದೇವರಾಡುತಾರೆ
ಓಡಿಬನ್ನಿ ದೇವರೆಲ್ಲ ನೋಡಿ ಬರುವಾಣ ಕೋಲು ಕೋಲೆ
ನೋಡಿ ಬನ್ನಿ ಬಾಲರೆಲ್ಲ ಮರದಲ್ಲಿ ಪಡಿದಾನ ತಂದು
ಕೊಳ್ಳೋ ಜೋಗಪ್ಪ ನಿನ್ನ ಪಡಿದಾನ, ಕೋಲು ಕೋಲೆ
ಅಲ್ಲಲ್ಲಿ ದಾನವು ಅಲ್ಲಲ್ಲಿ ಧರ್ಮವು
ತಂದಿಡೆ ನಾರಿ ನೀ ಇತ್ತಿತ್ತವ, ಕೋಲು ಕೋಲೆ
ಅತ್ತತ್ತ ಬಂದರೆ ಅತ್ತೆಮಾವದಿರು ಬೈಯ್ಯುತ್ತಾರೆ
ಕೊಳ್ಳೋ ಜೋಗಪ್ಪ ನಿನ್ನ ಪಡಿದಾನ, ಕೋಲು ಕೋಲೆ

ತ್ತಿತ್ತ ಬಂದರೆ ಅತ್ತೆಮಾವದಿರು ಬೈಯಲಿಕ್ಕೆ
ಆನೆಸಾಲು ಕದ್ದನೇನೆ? ಕುದುರೆ ಸಾಲು ಕದ್ದೇನೇನೆ ?
ಹೆರರ ಹೆಣ್ಣಿಗೆ ನಾಬಿದ್ದನೇನೆ? ಕೋಲು ಕೋಲೆ


ಚಗಡಿ ಕಾಯಂಗೆ ಚಿಗ್ತಾವು ಕಿರಿಜಡೆ
ಭಕ್ತರೊಳಗೆ ನಮ್ಮ ಜೋಗಿ ಚಲುವಾನ ಕೈಯಾಳ
ಚಿಕ್ಕಿ ಉಂಗುರಕೆ ನಾರಿ ಮನಸೋತಳೋ ಕೋಲು ಕೋಲೆ
ಉದ್ದಿನಕಾಯಂಗೆ ತಿದ್ಯಾವೆ ಕಿರಿಜಡೆ
ಸಿದ್ಧರೊಳಗೆ ನಮಜೋಗಿ ಚಲುವಾ ಕೋಲು ಕೋಲೆ

ಸಿದ್ಧರೊಳಗೆ ನಮಜೋಗಿ ಚಲುವಾನ ಕೈಯಾಳ
ಮುದ್ರೆ ಉಂಗುರಕೆ ನಾರಿ ಮನಸೋತಳೊ, ಕೋಲು ಕೋಲೆ
ಇದ್ದ ಬದ್ದ ಬಟ್ಟೆನೆಲ್ಲ ಗಂಟುಮಟ್ಟೆ ಕಟ್ಟಿಕೊಂಡು
ಎದ್ದಾಳು ಜೋಗಿ ದೇವರ್ಹಿಂದುಗಡೆ, ಕೋಲು ಕೋಲೆ

ಕೊತ್ನಗಟ್ಟ ಕೋರಿಗಟ್ಟ ಹತ್ತಲಾರೆ ಇಳಿಯಲಾರೆ
ಹೊತ್ತುಕೊಳ್ಳೆ ನಾರಿ ನನ್ನ ಗಂಟು ಮೊಟ್ಟೆಯ ಕೋಲು ಕೋಲೆ
ಮುದ್ದಿನಂಥ ಮನೆಯಬಿಟ್ಟೆ, ಗೆಜ್ಜೆಕಾಲಿನ ಮಗುವ ಬಿಟ್ಟೆ
ಲಜ್ಜೆಗೆಟ್ಟ ಜೋಗಿಕುಟ್ಟೆ ನಾ ಬರಬಹುದೆ, ಕೋಲು ಕೋಲೆ

ಎಂಟೂರ ತಿರುಗಿದೆ ಸೊಂಟಕೊಂದು ಅಂಬಿಲ್ಲ
ಗಂಟುಮೋರೆ ಜೋಗಿಕೊಟ್ಟೆ ನಾ ಬರಬಹುದೆ, ಕೋಲು ಕೋಲೆ
ಏಳೂರ ತಿರುಗಿದೆ ಹೋಳು ಸೆರೆ ಹುಟ್ಟಲಿಲ್ಲ
ಹಾಳುಮೋರೆ ಜೋಗಿಕುಟ್ಟೆ ನಾ ಬರಬಹುದೇ, ಕೋಲು ಕೋಲೆ

ಬೀಸೋತೋಳು ಬೆರಗಾದೊ ನಡೆಯೊ ಕಾಲು ಹಪ್ಪಳಾದೊ
ಬಾಯಳು ತುಂಬುಲವೆಲ್ಲ ಹುಡಿಹುಡಿ, ಕೋಲು ಕೋಲೆ
ಬಾಯಳು ತುಂಬುಲವೆಲ್ಲ ಹುಡಿಹುಡಿ ಜೋಗಪ್ಪ
ಎಲ್ಲಿ ಜೋಗಪ್ಪ ನಿನ್ನರಮನೆ, ಕೋಲು ಕೋಲೆ
ಕೊತ್ನಗಟ್ಟ ಕೋರಿಗಟ್ಟ ಎಪ್ಪತ್ತು ಏಳುಗಟ್ಟ
ಅಲ್ಲಕಾಣೆ ನಾರಿ ಸುಖದರಮನೆ, ಕೋಲು ಕೋಲೆ



## ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ*

ತಿಪ್ಪೇ ತಿಪ್ಪೆಂದರೆ ತಿಪ್ಪೇಯ ತಿರುಪಣ್ಣ
ತಿಪ್ಪೇಮೇಲಿಪ್ಪೆ ಮರನುಟ್ಟಿ । ತಿಪ್ಪೇಸ್ವಾಮಿ
ತಾವೊಳ್ಳೆದೆಂದು ನೆಲೆನಿಂತ ॥

ಅರಗೀದ ವಲದಲ್ಲಿ ಮರುಗವನೆತ್ತುವರಾರೆ
ಅಳದೀಯ ಕೆಂಜೆಡೆಯ ಕೆಂಪಯ್ಯ । ನಿಮಪಾದ
ಆಗಲೇ ಕಂಡೋರಿಗೇ ಕಯಿಲಾಸ ॥

ಬಿತ್ತೀದ ವಲದಾಗೆ ಪತುರಾವೆತ್ತುವರಾರೇ
ಮುತ್ತೀನ ಕೆಂಜೆಡೆಯ ಕೆಂಪಯ್ಯ ನಿಮಪಾದ
ನಿತ್ತ ಕಂಡೋರಿಗೆ ಕಯಿಲಾಸ ॥

ಬಾಳಿಕಾಯಿ ಬಾಳಿವೂವು ಚಂದ
ಬಜಾರ ಚಂದಾ ಅಟ್ಯ್ಯಾಗೆ ಊರಾಮುಂದ್ಲ
ಯೋಗಿ ತಿಪ್ಪಯ್ನ ಮಟ ಚಂದ ॥

ನುಗ್ಗಿಕಾಯಿ ಚೆಂದ ನುಗ್ಗಿ ವೂ ಚಂದ
ಮಾರೀಯ ಗುಡಿಚಂದ ಅಟ್ಯ್ಯಾಗ ತಿಪ್ಪೇಸ್ವಾಮಿ
ತಾವೊಳ್ಳೇದೆಂದು ನೆಲೆನಿಂತ ॥

ಅಳ್ಳೀಯ ನೊಲಿದೀರಿ ದಿಳ್ಳಿನಾಯ್ಕನ ಅಟ್ಟಿ
ಆರೂಸಾವಿರದ ಎಲಿತ್ವಾಟ ತನುವೀಗೆ
ಸ್ವಾಮಿ ತಿಪ್ಪಯ್ಯ ನೆಲೆ ನಿಂತ ॥

ಕಲ್ಲೇನೆ ಕಟುಗಾರು ಕುಲದಲ್ಲಿ ಪಂಚಾಕಾರ
ಕಲ್ಲೇನ ತಿಮ್ಮಯ್ಯ ಸಿಕರವೇ ಕಟವ್ಯಾರೆ
ನಿಲಿಸ್ಯಾರೆ ತಿಪ್ಪಯ್ನ ಗುಡಿಮ್ಯಾಲೆ ॥

ಮಟದ ಬಾಗುಲ ಮುಂದೆ ನಂದಿಯ ಕೋಲು
ಮಾಟುವುದೇನೆ ತಂಗಿ ಮಟದಾಗೆ । ತಿಪ್ಪೇಸ್ವಾಮಿ
ಬಲಕೈಲೆ ಬಾಳಿ ಎಲಿದೋಟ ॥

ಅಣ್ಣಾನ ಗುಡಿಮುಂದೆ ಇನ್ನೇನು ಬ್ಯಳದಾವೂ
ಸಣ್ಣಾರುದ್ರಾಕ್ಸಿ ಕಿರುನಲ್ಲಿ । ಕಿತ್ತಾಳಿ
ಅಣ್ಣಾನ ಗುಡಿಸುತ್ತ ಬ್ಯಳದಾವು ॥

ಬಪ್ಪಾನೆ ತಿಪ್ಪಯ್ಯ ಬುತ್ತಿವಂಡೊತ್ತಾಗೆ
ಬತ್ತೀದ ಬಾಳೆ ಚಿಗುರಾವೆ । ನಾಯ್ಕನಟ್ಟಿ
ದಿಕ್ಕೊಕ್ಕೈೀದೆಂದು ನೆಲೆನಿಂತ ॥

ಸ್ವಾಮಿ ತಿಪ್ಪಯ್ಯ ಬೋನಾವೂಂಡೊತ್ತಾಗೆ
ಬಾಡೀದ ಬಾಳೆ ಚಿಗುರಾವೆ । ನಾಯ್ಕನಟ್ಟಿ
ತಾವು ಒಳ್ಳೇದೆಂದು ನೆಲೆಗೊಂಡ ॥

ಅಪ್ಪಾನೆ ತಿಪ್ಪಯ್ಯ ಮತ್ತೆಲ್ಲಿದ್ದಾನೆಂದು
ಕಿತ್ತಾಲಿವನವಾ ಬೆದಕೀದ । ನಾಯ್ಕನಟ್ಟಿ
ದಿಕ್ಕೊಳ್ಳೈದೆಂದು ನೆಲೆಗೊಂಡ ॥

ಆವುಕಾವಾರಿಂದ ತಾ ಬಂದ ತಿಪ್ಪಣ್ಣ
ಇತ್ತಾಳೆ ಚೆಂಬು ಬಲಗೈಲಿ ಇಡಕೊಂಡು
ತಾವೊಳ್ಳೇದೆಂದು ನೆಲೆಗೊಂಡ ॥

ಅಂತ ಅಂತರಕೆ ನಿಂತಾವು ನಾಕು ಕಂಬ
ಎಂತ ಬಿನ್ನಣವಾ ಕಟುವ್ಯಾರೆ । ನಾಯ್ಕನಟ್ಟಿ
ಸಂತೋಸದಾ ಸಿಕುರಾವು ॥

ಆಯ್ತುವಾರದಗಲೆಲ್ಲಾ ಸೋಮ್ವಾರದಿರುಳೆಲ್ಲ
ಸ್ವಾಮಿ ತಿಪ್ಪಯ್ಯ ಮದುಮಗ । ನಾಯ್ಕನಟ್ಟಿ
ಬೀದಿಗೊಳಲ್ಲಿ ಮೆರವಣಿಗೆ ॥

ವೊನ್ನು ಮಾರುವ ಸಾಲು ಚಿನ್ನಾ ಮಾರುವ ಸಾಲು
ಎಣ್ಣುಮಕ್ಕಳಿಡುವಂತ ಬಳೆಸಾಲು । ಆದಾವೆ
ತಂದೆ ತಿಪ್ಪಯ್ನ ಗಿರಿಮ್ಯಾಲೆ ॥

ಮುತ್ತು ಮಾರುವ ಸಾಲು ರತ್ನಾ ಮಾರುವ ಸಾಲು
ಮುತ್ತಯಿದೇರಿಡುವ ಬಳೆಸಾಲು । ಆದಾವೆ
ಅಪ್ಪ ತಿಪ್ಪಯ್ನ ಗಿರಿ ಮೇಲೆ ॥

ಮೂಡನಾಡಾಪರಿಸೆ ನೋಡುತಲಿ ಬರುತಾವೆ
ತಂದೇ ಸಿದ್ದಯ್ನ ಗಿರಿಮ್ಯಾಲೆ । ಮರಿಪರಿಸೆ
ಸಂತೇ ಬಾಗಿಲಿಗೇ ಬರುತಾವೆ ॥

ಬಂದೀಯ ಚಿಕ್ಕಮ್ಮ ಬಂದಾಳೆ ನೀರೀಗೆ
ಜಂಬಾರವೇನೆ ಮಟದಾಗೆ । ತಿಪ್ಪೇಸ್ವಾಮಿ
ವಂಬತ್ತು ದಿನದಾ ಮದುಮಗನು ॥

ತೇರನ್ನೆಳಿಯಾಕ ತೆಂಗೀನಗ್ಗಾಬೇಕು
ವೊಂಬಾಳೆ ಬೇಕು ಕಳಸಾಕೆ । ತಿಪ್ಪೇಸ್ವಾಮಿ
ಗೊಂಬೀ ತೇರು ಎಳೆಯಾಕ ॥

ತೇರು ಸುಂಗರವಾಗಿ ಏಳಟ್ಟೆಯರುದ್ರ
ತೇರಿನ ಮ್ಯಾಲಿರುವ ಕಣಸ । ಸುಂದರವಾಗಿ
ಸೂಳೇರ ಬೋಗಿ ರತವೇನು ॥

ತೇರು ಸುಂಗರವಾಗಿ ಬಾಳೆವತ್ತಾಗಿ
ತೇರು ಮುಂದಕ್ಕ ಸಾಗ್ಯಾವೆ । ಪೂಜಾರಿ
ಪಾದಾಕಾಣಿಕೆಯನಿಟ್ಟಾನು ॥

ರುದ್ರಾ ನಿಮತೇರು ಬಗ್ಗುತ್ತ ಬಳಕುತ್ತ
ರುದ್ರಾಕ್ಸಿ ಕಣಿಯುದುರೂತ । ಸಿವಯೋಗಿ
ರುದ್ರ ಬಂದ ತೇರು ವೊಸತೇರು ॥

ತೇರ ಕಟ್ಟುವಾಗ ಯಾರ‍್ಯಾರು ಇರಬೇಕು
ಗ್ರಾಮಾದ ಗೌಡ ದೊರಿಮಗ । ಮಲ್ಲಣ್ಣ
ತೇರೀಗೆ ಎಣ್ಣೆ ಎರಿಸ್ಯಾನು ॥

ತೇರೀಗೆ ಎಣ್ಣೆ ಎರೆಸೀದ ಮಲ್ಲಣ್ಣ
ಗಾಲೀಗೆ ಕಾಯ ವಡಿಸ್ಯಾನು । ಗದ್ದಲಕೆ
ತಂದೆ ತಿಪ್ಪಣ್ಣ ಬೆವತಾನು ॥

ತಂದೆ ತಿಪ್ಪಣ್ಣ ಬೆವತಾನು ಬಸವೇರು
ಮಳೆಗಾಲಕೆ ಮಲ್ಲಿಗೆ ಸಳಿಗಾಲಕೆ । ಕೇದಿಗೆ
ಬೆಟ್ಟಾಬ್ಯಾಸಿಗೆಗೆ ದವನಾವೆ ॥

ಸ್ವಾಮಿ ತಿಪ್ಪಣ್ಣನ ಗಾಜೀನ ಮಟದಲ್ಲಿ
ತೇರುಗಳ ಸಾಗಿ ಬರ ಏಳಿ । ಅಕ್ಕನಾವು
ಯಾಲಕ್ಕಿ ಸೂರೆ ಬಿಡುವಾನು ॥

ತೇರನು ಎಳಿವಾಗ ಸುರಬೆಲ್ಲವ ಬಿಟ್ಟೀ
ತೇರೆಳೆದು ನಲಿಗೆ ನಿಲುವಾಗ । ನಿವ್ವಾಳಿಸಿ
ಆರತಿಯ ಬೆಳುಗೇರು ನಾರೀರು ॥

ಡಂಡಂ ಆದೇನು ಊರಾಗೆ ಡಂಬಾವೇನಮ್ಮ
ದೊಡ್ಡಾನೆ ತಿಪ್ಪಯ್ಯ ರತವೇರಿ । ಬರುವಾಗ
ನಗ್ಗಾರಿ ಅಕ್ಸಾರೆ ಇರಿಯಾರು ॥

ಅಟ್ಟಿ ತಿಪ್ಪಣ್ಣನ ಕಟ್ಟೆ ಮ್ಯಾಲಿರುವೋ
ಉತ್ತುತ್ತಿ ಅಣ್ಣ ಗಿಳಿಕಚ್ಚಿ । ಮತ್ತೆ ತಂದಾವು
ಅಟ್ಟಿರುದ್ರಗೆ ಉಲುಪೀಯ ॥

ಸ್ವಾಮಿ ಸಿಕರದ ಮ್ಯಾಲೆ ಸ್ರೀಗಂಧದ ಮರನುಟ್ಟಿ
ಮರದ ಮ್ಯಾಲೆರಡು ಗಿಳಿಕುಂತು । ನುಡಿದಾವೆ
ಮಾದಿಗರ ಅರುಳಯ್ನ ಸಿವಕತಿಯ ॥

ಮಾದಿಗರ ಅರುಳಯ್ಯ ಸಿವಕತೆ ಏಳೂವಾಗ
ಅರಿವಿಲ್ಲದ ನಾರಿ ಮಲುಗ್ಯಾಳೆ । ವೊಟ್ಟೇಲಿರುವ
ಸಿಸುವು ಕೇಳಿತೋ ಸಿವಕತೆಯ ॥

ಅಣ್ಣಾ ನಿಮತೇರು ಬಣ್ಣಾವಾಗೈದಾವೆ
ಅನ್ನೊಂದು ನೂರು ಪಟವೇರಿ । ತಿಪ್ಪೇಸ್ವಾಮಿ
ಗೊಂಬೀಯ ತೇರು ನಗುತಾವೆ ॥

ಅಪ್ಪಾ ನಿಮತೇರು ವಪ್ಪಾವಾಗೈದಾವೆ
ಚಿತ್ತಾರದ ಗೊಂಬಿ ಮೇಲೇರಿ । ವೊನ್ನಿನ ಕಳಸ
ಅನ್ನೊಂದು ಗಾವುದಕೆ ವಳೆದಾವೆ ॥

ಆ ತೇರು ಈ ತೇರು ಜ್ಯೊತಿಲಿಂಗದ ತೇರು
ಸ್ವಾಮಿ ತಿಪ್ಪಯ್ಯ ವೊಸತೇರು । ಗಾಲಿಮ್ಯಾಲೆ
ಚಿತ್ತಾರದ ಗೊಂಬಿ ನಗುತಾವೆ ॥

ಕುದುರೆ ಅತ್ತಲುಬೇಕು ಪುತ್ರ ಮುಂದಿರಬೇಕು
ರೇಸಿಮೆ ಸೀರೆ ವುಡುಸಬೇಕು । ತಿಪ್ಪೇಸ್ವಾಮಿ
ತೇರಿಗೋಗಿ ಬರಲೂಬೇಕು ॥

ತೇರಾನೆ ಎಳೆವಾಗ ವಾರೇನೆ ನಿಂತಿದ್ದೆ
ಯಾಲಕ್ಕಿಸೂರೆ ಬಿಡುತ್ತಿದ್ದೆ । ತಿಪ್ಪೇಸ್ವಾಮಿ
ತೇರೆಳೆದು ನೆಲಿಗೆ ನಿಲುವಾಗ ॥

ತೇರಿ ಮುಂದೆ ಏನೇನು ಈನೋದ
ಕಾಲಲಿ ಗೆಜ್ಜೆ ಕಯಿಬಾಕು । ತಿಪ್ಪೇಸ್ವಾಮಿ
ನಿಂತಾನೆ ಸಮಾದಿ ಎದುರಿಗೆ ॥

ಸ್ವಾಮಿ ತಿಪ್ಪಯ್ಯೆಗ್ಗೆ ವಡಗಾಯಿ ಇಡುಗಾಯಿ
ದವನದ ಪೆಂಡಿ ವೊರಿವೊರಿ । ತಿಪ್ಪೇಸ್ವಾಮಿ
ದವನ ಸೂರಾಡಿ ಬರುತಾನೆ ॥

ಆಕೋ ಆಕೋ ಕಾಯಿ ಆಕೋ ತೆಂಗಿನಕಾಯಿ
ಆಕೋ ಮದ್ದಾನೆದ ಸವಕೆ । ತಿಪ್ಪಣ್ಣ
ವೋಕಳಿ ಆಡಿ ಬರುವಾಗ ॥

ವಡೆಯ ತಿಪ್ಪಯ್ಯಗ ಕಡಿಯ ಬಾಗಿಲೆರಡು
ನಂದಿಕೋಲೆರಡು ಪಟನೂರು । ತಿಪ್ಪಯ್ಯಾಗ
ನಿವ್ವಾಳಿ ಕಾಯಿ ನೂರಾರು ॥

ಅಂಬಾರದಾ ಮಳಿ ಬಂದು ಮುಂಬಾರದ ಕೆರೆ ತುಂಬಿ
ಗಂದಕಸ್ತೂರಿ ತೆರೆವೊಯ್ದು । ಇರಿಕೆಗೆ
ಆಲಾದ ತೋಪಿಲಿ ಸಿವಪೂಜೆ ॥

ಅಂಬಾರದಗ್ಗಣಿ ತೆಂಗಿನ ತಿಳಿನೀರುಯ್ದು
ಸ್ವಾಮಿತಿಪ್ಪಯ್ಗ ಸಿವಪೂಜೆ । ಗೋಗಲುವಾಗ
ಆಕಾಸದಾ ಗಂಟೆ ದಣಿಕೆಂದಾದು ॥

ಕಾವಿವಸ್ತುರವಿಲ್ಲ ಕಾಲೀಗೆ ಜಂಗಿಲ್ಲ
ಕೋರಾಣ್ಯಕೊಂದೇ ಬರಲಿಲ್ಲ । ತಿಪ್ಪೇಸ್ವಾಮಿ
ಯೋಗಿ ಸಮಾದಿಗೋಗಲುವಾಗ ॥

ಉದ್ದನಮುಕದೋರು ರುದ್ರಾಕ್ಸಿ ಕೊರಳೋರು
ಇದ್ದಾರೇನಮ್ಮ ಮಟದಾಗೆ । ತಿಪ್ಪೇಸ್ವಾಮಿ
ಗದ್ದುಗ್ಗೇಕಾಯಾ ಕಳುವ್ಯಾರೆ ॥

ತೂಗು ಮಂಚದಲಿಂಗ ಸಿವಯೋಗಿಮಾಲಿಂಗ
ತೂಗು ಮಂಚದ ಮಣಿಲಿಂಗ । ನಿಜಕರುಣಿ
ಸಿವಯೋಗಿ ತಿಪ್ಪಯ್ನ ನಿಜಲಿಂಗ ॥

ಅತ್ತುಸಾವಿರಲಿಂಗ ವೊತ್ತಿಲಿ ಮಲುಮತಲಿಂಗ
ಅತ್ತೇಸಾವಿರದ ರವರತ್ನ । ಐದಾವು
ಸ್ವಾಮಿತಿಪ್ಪಯ್ನ ಮಟದಾಗೆ ॥

ಆಲಿಟ್ಟು ನಾನು ಅಳ್ಳದ ನೀರೀಗೋದೆ
ಆಲುಕ್ಕಿ ಅಳ್ಳ ಅರಿದಾವೆ ತಿಪ್ಪೇಸ್ವಾಮಿ
ಮಟ್ಟಬೀದ್ಯಲ್ಲ ಕೆಸುರಾಗಿ ॥

ಕೆಸರಾದರೆ ವೊಸ ಮಣಿಯಾ ಅಕಿಸುವೆ
ಬಸವಾನ ಕಟ್ಟೀ ತುಳುಸೂವೆ । ತಿಪ್ಪೇಸ್ವಾಮಿ
ಬಸವೇರಿ ಆಡೋ ಪದರಂಗ ॥

ಯಾಕೆ ತಿಪ್ಪೇಸ್ವಾಮಿ ಕೋಪಾವು ನನಮ್ಯಾಲೆ
ಬೇಕೆಂದರ ಬ್ಯೆಳ್ಳಿ ಸಿಕುರಾವೆ । ಮಾಡಿಸುವೆ
ಸಾಕುಮಾಡಯ್ಯ ಬಡತಾನ ॥

ಬಡತಾನ ಬಯುಲಾಗಿ ನಮ ಕೈಯಿ ಮೇಲಾಗಿ
ಅಂಬಾರ ಬಾಯಿ ಅಡಿಯಾಗಿ । ತಿಪ್ಪಯ್ನ
ನಂದಾದೀವಿಗೆ ವುರಿಸ್ಯೇವು ॥

ಚಿಕ್ಕೇರಿ ತುಂಬಿದರ ಸಿರಿಕಾಣೆ ನಾಯ್ಕನಟ್ಟಿ
ಮುಕ್ಕಳಿಸಿ ಕೋಡಿ ಅರುದಾವೆ । ತಿಪ್ಪೇಸ್ವಾಮಿ
ಚಪ್ಪಾಳೆ ಬಡದು ನಗುತಾನೆ ॥

ಮಳಿಬಂದ ಮರುದಿನ ಸಿರಿಕಾಣೆ ನಾಯ್ಕನಟ್ಟಿ
ಮದಗೆರಡು ಕೋಡಿ ಅರುದಾವೆ । ತಿಪ್ಪೇಸ್ವಾಮಿ
ಮದಬೂಪವೊರಟ ಕೆರ‍್ಯಾಗೆ ॥

ಅಟ್ಟಿಯ ತಿಪ್ಪಯ್ಯಜಗಲೂರ ಪಾಪಯ್ಯ
ಚಿಕ್ಕೆರೆಕೋಡಿ ಬಸುವಯ್ಯ । ಜೊತಿಕೂಡಿ
ಲೆತ್ತವಾಡ್ಯಾರೆ ಕೆರಿಯಾಗೆ ॥

ತುಂಬಿದ ಕೆರಿಯಾಗ ತೂಗುಮಂಚದ ಮ್ಯಾಲೆ
ವಾಲಾಡಿ ಈಬುತ್ತಿ ದರಿಸ್ಯಾರೆ । ತಿಪ್ಪಯ್ಗೆ
ಮೇಲಾಡಿ ಕಯ್ಯ ಮುಗುದಾರು ॥

ಕೇರಿಯೇರಿಯಮ್ಯಾಲೆ ಕೆಂದೊಳೆದ್ದಾವೆ
ನಂದಿಕೋಲಾಡಿ ನವಿಲಾಡಿ । ತಿಪ್ಪೇಸ್ವಾಮಿ
ಚಂಡಾಡಿ ಮಟಕೆ ವೊರಟಾನೆ ॥

ಏಕಮ್ಮನಾಯ್ಕನಟ್ಟಿ ನೂಕುನೂಗ್ಗಾದವಾಗೆ
ನಾಕುಬಜಾರ ನಡುಗ್ಯಾವೆ । ತಿಪ್ಪೇಸ್ವಾಮಿ
ವೋಕುಳಿಯಾಡಿ ಬರುವಾಗ ॥

ಸ್ವಾಮೀಯ ಮಟಕೆ ವೋದಾರೆ ಬಕುತ್ತಾರು
ಕಂಚಿನ ನಗಾರಿ ನುಡಿಸ್ಯಾರೆ । ತಿಪ್ಪಯ್ಯ
ತೆಪ್ಪಕ್ಕೆ ಅಪ್ಪಾಣೆ ಕೊಡಿಸ್ವಾಮಿ ॥

ಅಪ್ಪಾಣೆ ಕೇಳ್ಯಾರೆ ತ್ವಾಟಕ್ಕೆ ವೊರಟಾರೆ
ತೆಪ್ಪಾದ ಮರನ ಕಡಿದ ಲಗೆಯ । ಮಾಡಿ
ಕಂಡುಗದ ಕಡಲಿ ಪನಿವಾರ ॥

ಕಂಡುಗದ ಕಡಲಿ ಪರವಾರ ದೊರೆಮನಿಯ
ಕಂಬಿಯು ಮುಂದಾಗಿ ವೊರಟೀತು । ತಿಪ್ಪೇಸ್ವಾಮಿ
ತೆಪ್ಪತೆರೆಮ್ಯಾಲೆ ಕೇರ್‍ಯಾಗೆ ॥

ಅಟ್ಟಿತಿಪ್ಪಯ್ಯಗ ಊರೆಲ್ಲ ಬಕುತಾರು
ನಾನೇನ ಬಯ್ಯಾಲಿ ಬಡಮಗಳು । ತಿಪ್ಪಣ್ಣ
ನೂರೊಂದು ಜಡೆಯ ಎಳಿದವನ ॥

ವಡಿಯಾ ತಿಪ್ಪಯ್ಯನ ಬಡವಾನೆಂಬುವರಾರೇ
ಬಲಕೈಲೆ ಬಾಳಿಎಲೆದೋಟ । ಸಿರಿಯೇನು
ರವಿ ಮೂಡಿದಾಂಗ ಕೆರೆ ಏರಿ ॥

ಕೆರೆಏರಿಮ್ಯಾಲೆನುರಿಯ ನುಗ್ಗಲಿಮುಳ್ಳು
ಬರಲಾರೆ ತಿಪ್ಪಯ್ಯ ಗಿರಿದೂರ । ನನ್ನರಕೆ
ಬರುವೋನ ಕೈಯ್ಯಿಲಿ ಕಳುವೇನು ॥

ಬರುವಾರ ಕೈಯ್ಯಿಲಿ ಕಳುವಾದೆ ಎತ್ತಮ್ಮ
ಸುತ್ತಿ ಬನ್ನಿರೋ ಪೌಳಿಯ ಮುಂದೆ
ಒಪ್ಪನಮ್ಮ ನಿನ್ನ ಮಗನರಕೆ ॥

ಎಸರಾನೆ ಇಡುವಾಗ ದ್ಯಸವಂತ ಕಂದಮ್ಮ
ಸುತ್ತಿಟ್ಟು ಬಾರೋ ಪೌಳೀಯ । ಮುಂದೆ
ಬಿಚ್ಚಮ್ಮ ಮಗನ ಕಿರುಜಡೆಯ ॥

ದೇವಾನ ನೆನದರೆ ದಾವುತಿ ನಮಗಿಲ್ಲ
ಆವೆ ಕಚ್ಚಿದರೂನೂ ಇಸವಿಲ್ಲ । ತಿಪ್ಪೇಸ್ವಾಮಿ
ಸ್ಯಾವೇಯ ಮಾಡಿದರೆ ದಣಿವಿಲ್ಲ ॥

ಸ್ವಾಮವಾರ ದ್ಯೆಯ್ಯವೇನು ನಿತ್ತ್ಯದಯ್ಯ
ಮಾರುದ್ರ ನಿಮ್ಮ ಮಗಳಾಗಿ । ಬಂದೇನು
ಆಲು ತಂದೇನು ಸಲಿಸಯ್ಯ ॥

ದುರುಗಾದೂರ ಮುಂದೆ ಸುರವೊನ್ನೆ ಮರನುಟ್ಟಿ
ತುರುವಾನೂರಿಗೆ ಬೇರು ಅರಿದಾವೆ । ನಾಯ್ಕನಟ್ಟಿ
ಕೊನಿಬೀದಿಗೆ ಬೆರುಳು ಕವಿದಾವೆ ॥

ಅಕ್ಕ ನಿಮಕನಸೀಗೆ ಚಿಕ್ಕಾಜಂಗಮ ಬಂದ
ಉತ್ತುತ್ತಿ ಅಣ್ಣು ಮಕ್ಕಳ । ಪಲಕಾಣೇ
ಚಿಕ್ಕಾಜಂಗಮನು ಸಿವಕಾಣೆ ॥

ಅಮ್ಮಾನಮ ಕನಸಿನಾಗೆ ಬಾಲಜಂಗಮ ಬಂದ
ಬಾಳೆಯಣ್ಣು ಬಾಲಾರ । ಪಲಕಾಣೇ
ಬಾಲಜಂಗಮ ಸಿವಕಾಣಿ ॥

ವೊನ್ನು ಹೊನ್ನೆಂದಾರೆ ವೊನ್ನೆಲ್ಲ ವೊಳೆದಾವೇ
ವೊನ್ನೇ ವೊನ್ನಟ್ಟಿಬಯಿಲಾಗಿ । ತಿಪ್ಪೇಸ್ವಾಮಿ
ವೊನ್ನಾಗಿ ಜನಕೆ ವೊಳೆದಾನೆ ॥

ಮುತ್ತು ಮುತ್ತೆಂದಾರೆ ಮುತ್ತೆಲ್ಲ ವೊಳೆದಾವೆ
ಮುತ್ತಿಮುತ್ತಟ್ಟಿ ಬಯಲಾಗಿ । ತಿಪ್ಪೇಸ್ವಾಮಿ
ಮುತ್ತಾಗಿ ಜನಕೆ ವಳೆದಾನೆ ॥

ಸ್ವಾಮಿ ಬರುತಾನೆಂದು ಸಾಗಿ ಬೀದಿಗೆ ಬಂದೆ
ಸ್ವಾಮಿ ನೀನಮಕೈಯ್ಯಿಗೆ ಸಿಗಲಿಲ್ಲ । ಚಿಕ್ಕೆರೆಯಾ
ಯಾಲಕ್ಕಿ ತೋಪಲಿ ನೀ ಮರಿಯಾಗಿ ॥

ರುದ್ರ ಬರುತಾನೆಂದು ಎದ್ದೂ ಬೀದಿಗೆ ಬಂದೆ
ರುದ್ರ ನಮಕೈಯ್ಯೀಗ ಸಿಗಲಿಲ್ಲ । ತಿಪ್ಪೇಸ್ವಾಮಿ
ಇರಿಕೆರಿಯ ರುದ್ರಾಕ್ಸಿ ತೋಪೆಮರಿಯಾಗಿ ॥

ಅಟ್ಟಿ ತಿಪ್ಪೇಸ್ವಾಮಿ ಸತ್ಯಾವಂತನು ಕಾಣೆ
ಸತ್ತಮ್ಮಿ ಆಲು ಕರೆದುಂಡ । ಪವಾಡ
ದಿಕ್ಕುದಿಕ್ಕಿಗೆ ಬೈಳೆದಾವೆ ॥

ಸಣ್ಣಾನೆ ಕುಚ್ಚೀಗೆ ಸಣ್ಣಾಮುತ್ತಾನಾಕಿ
ಪನ್ನಂಗದಾಗೆ ಬರುತಾನೆ । ತಿಪ್ಪಯ್ಯಾಗೆ
ಮಾನ್ಯಾರು ಕೈಯೆತ್ತಿ ಮುಗುದಾರೆ ॥

ದೊಡ್ಡಾನೆ ಕುಚ್ಚೀಗೆ ದೊಡ್ಡಾ ಮುತ್ತಾನಾಕಿ
ವಡ್ಡೋಲಗದಿಂದಲಿ ಬರುವ । ತಿಪ್ಪಯ್ಯಗೆ
ದೊಡ್ಡೋರು ಕಯ್ಯೆತ್ತಿ ಮುಗುದಾರು ॥

ಆಚೆ ವಾಲಗದೋರು ಈಚೆ ಪಾತ್ರದೋರು
ಬಾಕೋರು ತೋಳ ಬಸವೇರು । ಬರುವಾಗ
ಬೂಪತಿಪ್ಪಯ್ಯ ಬೆವತಾನೆ ॥

ವುಚ್ರಯಸು ಸಿಂಗರವಾಗಿ ಎಪ್ಪತ್ತು ಆದಾವೆ
ವುಚ್ರಯಸದ ಮ್ಯಾಲೆ ಕಳಸಾವೆ । ಸಿಂಗರವಾಗಿ
ನಿಸ್ತ್ರೋರಬೋಗಿ ರತವೇರೋ ॥

ಎತ್ತು ಅತ್ತಲುಬೇಕು ಪುತ್ರ ಮುಂದಿರಬೇಕು
ದುತ್ತಾರಿ ಸೀರೆ ಉಡಬೇಕು । ತಿಪ್ಪೇಸ್ವಾಮಿಯ
ವುಚ್ರಯಸು ನೋಡಬೇಕು ॥

ಅಟ್ಟೀಯ ತಿಪ್ಪಯ್ನ ಗೆಜ್ಜೇಯ ಮಟದಾಗೆ
ವುಚ್ರಯಸು ಸಾಗಿ ಬರೇಳುವಾಗ । ಅಕ್ಕ ನಾವು
ಆರುತಿ ಸೂರೆ ಬಿಡುವಾಸ ॥

ವುಚ್ರಾಯಾಕಾಕ್ಯಾರೆ ಅತ್ತು ಸೇರಿನಗಂಟೆ
ವುಚ್ರಾಯದ ಮುಂದೆ ಬಸವಾನೆ । ಕೊರಳಿಗೆ
ಅತ್ತುಸೇರಿನ ವುರಿಗೆಜ್ಜೆ ॥

ಅಟ್ಟೀಯ ತಿಪ್ಪಯ್ಯ ಅಸಿದು ಬರುತಾನೆಂದು
ರಸುಬಾಳೆ ಅಣ್ಣುಸುಲಿದಿಡುವೆ । ಇಂದೆ ಬರುವ
ಬಸವಾಗಿಡುವೆ ನೆಲುಗಡಲೆ ॥

ಅಪ್ಪಾತಿಪ್ಪಯ್ಯಗೆ ಒಪ್ಪಾದ ಮಗಳು ನಾನು
ತುಪ್ಪಾದ ಮೀಸಲು ಕಳುವೇನು । ಮಟದಾಗೆ
ಮುತ್ತೆ ಸೂರಿಟ್ಟು ಬರುವೆನು ॥

ಅಪ್ಪಾತಿಪ್ಪಯ್ಯಗೆ ಒಪ್ಪಾದ ಮಗಳು ನಾನು
ಎಣ್ಣೇಯ ಮೀಸಲು ಕಳುವೇನು । ಮಟದಾಗೆ
ಮುತ್ತೆಸೂರಿಟ್ಟು ಬರುವೇನು ॥

ತಿಪ್ಪಯ್ಯನ ಮಟದಾಗೆ ಕುಪ್ಪೆಸ್ಯಾವಂತಿಗೆ
ತಿಪ್ಪಮ್ಮನೆಂಬೂ ಕರಬಂದು । ಮೇದಾವೆ
ತಿಪ್ಪಯ್ಯಗೇರು ದವನಾಗೇ ॥

ಸ್ವೋಮವಾರದ ದಿನ ಸ್ವಾಮಿ ಮನೆಗೆ ಬಂದ
ಸಾರಿಸುತ್ತಾಲಿದ್ದೆ ನಡುಮನೆ । ತಿಪ್ಪೇಸ್ವಾಮಿ
ಜಾರೀಕೆ ಎಂದಾರಿ ತಿರುಗ್ಯಾರೆ ॥

ಮಾಯಾಕಾರಸ್ವಾಮಿ ಮಾಯವಾಗ್ಯೆದಾನೆ
ದೀವೀಗೆ ತಾರೋ ವುಡುಕಾನೆ । ತಿಪ್ಪೇಸ್ವಾಮಿ
ಮಾಯಾವಾಗ್ಯೆದಾನೆ ಮಟದಾಗೆ ॥

ಅತ್ತೀ ವೂವಿನಂಗೆ ಅಚ್ಚಡವಾನೆಯಿದು
ಚಪ್ಪಾಲಿಲ್ಲಮ್ಮ ಮುನಿಸ್ವಾಮಿ ನಮ್ಮ । ತಿಪ್ಪೇಸ್ವಾಮಿ
ಸುಪ್ಪತ್ತಿಗೆ ಬುಡುಸಿ ಮನುಗ್ಯಾರೆ ॥

ಮಲ್ಲೀಗೂವಿನಂಗ ವಲ್ಲೀಯಾನೆಯಿದು
ಒಪ್ಪಾಲಿಲ್ಲಮ್ಮ ಮುನಿಸ್ವಾಮಿ । ನಮ್ಮ ತಿಪ್ಪೇಸ್ವಾಮಿ
ಪಲ್ಲಕ್ಕೀಲಿ ಕುಂತಾರು ॥

ನಂದಿನಂದಿಗೆ ಮುತ್ತುನಂದಾದೀವಿಗೆ ಬೆಳಕು
ಗಂದಾದ ಕೊರಡಿಗೆ ನೆಲಗಾರೆ । ಮಾಡೀರೆ
ತಂದೆ ತಿಪ್ಪಯ್ನ ಮಟದಾಗೆ ॥

ಸಾಲುಸಾಲು ಮುತ್ತು ಪ್ರಾಣದ್ದೀವಿಗೆ ಬೆಳಕು
ಸಾಣೆಕಲ್ಲಲಿ ನೆಲಗಾರೆಗ್ಯೆದಾರೆ ।
ಸ್ವಾಮಿರುದ್ರಾನ ಮಟದಾಗೆ ॥

ಅಪಾತಿಪ್ಪಯ್ಯಾಗೆ ಚಿಕ್ಕೋನೆ ಪೂಜಾರಿ
ಕುಯ್ಯದ್ದ ಕಡಗಾವಾಗಿ । ಅಚ್ಚಮಲ್ಲಿಗೂವು
ಕೊಯ್ದುಪ್ಪಗಾಕ್ಯಾರೆ ಜಪಮಾಲೆ ॥

ಗಂಗಾಳ ಬೆಳಗಿಟ್ಟೆ ಪುಸ್ಪಾವ ತಂದಿಟ್ಟೆ
ಕಟ್ಟುದೀವಿಗೆ ನಡುವಿಟ್ಟೆ । ತಿಪ್ಪೇಸ್ವಾಮಿ
ಸಿವಪೂಜೆಗೆ ದಯಮಾಡು ॥

ಅಂಗಾರದೋಳಿಗೆ ಮಾಡಿ ಅಂಗೈಯ್ಯಿನಂದಾವೆ
ಬಟ್ಟಾಲು ಬೆಳಗಿ ಸರಣೆಂಬೆ । ತಿಪ್ಪೇಸ್ವಾಮಿ
ಅಪ್ಪಾ ಬಿನ್ನೈಕ್ಕೆ ದಯಮಾಡೋ ॥

ಆತಾನೆ ಬರುವಾಗ ನಾತಾವು ಮಲ್ಲಿಗಿದು
ಸ್ವಾಮಿಯು ತಿಪ್ಪಯ್ಯ ಬರುವಾಗ । ಚಿಕ್ಕೆರೆ
ತೋಪೆಲ್ಲ ಮಂಜು ಕವಿದಾವೆ ॥

ರುದ್ರಾಬಿಸೇಕ ಇದ್ದಲ್ಲಿ ಆದಾವೆ ವಡಿಯಾಗೆ
ಗದ್ದುಗೆಯ ಮೇಲಿರುವ ವಡಿಯಾಗೆ । ಅಲ್ಲವ್ವ
ಸಿರದಾಗೈವೆ ಪಣಿಲಿಂಗ ॥

ಸುರುದುನ್ನೆ ಗುಡಿಕಟ್ಟಿ ಮುಂದೆಬಾವಿ ನೋಡಿ
ಮೇಗಳಲ ಕಲ್ಲು ಮರೆಮಾಡಿ । ತಿಪ್ಪೇಸ್ವಾಮಿ
ದ್ಯಾವರಿಗೆ ಅಗ್ನೀಯ ಕೊಡುತಾನೆ ॥

ಚಂದ್ರಾನೆ ಗುಡಿಕಟ್ಟಿ ಮ್ಯಾಲೆ ಬಾವಿತೋಡಿ
ಇಂದಾನೆ ಕಲ್ಲು ಮರೆಮಾಡಿ । ತಿಪ್ಪೇಸ್ವಾಮಿ
ಲಿಂಗಕ್ಕಗ್ನಿಣ್ಣಿಯ ಕೊಡುತಾನೆ ॥

ವೊತ್ತುಮುಂಚೇಲಿ ಎದ್ದು ಅಪ್ಪಾನ ಮಟಕೋಗಿದ್ದೆ
ಮುತ್ತೀನಾರತಿಯ ಇಡಿದಿದ್ದೆ । ಮಟದಾಗೆ
ತಿಪ್ಪಯ್ಯನೊಟ್ಟಿದ್ದಪರರಿಲ್ಲ ॥

ಏಳುತಲೆ ಎದ್ದು ಸ್ವಾಮಿ ಮಟಕೋಗಿದ್ದೆ
ಕಾಯಿ ಕರ್ಪೂರವ ಇಡಿದಿದ್ದೆ । ಮಟದಾಗೆ
ಪೂಜಾರೊಬ್ಬಿದ್ದಪರರಿಲ್ಲ ॥

ದೇವಾನ ನೋಡೇನು ವಾರೆಯಾಗೋ ಪೂಜಾರಿ
ಏಳುಮಟದ ವಡಿಯಾನ । ತಿಪ್ಪಯ್ಯಗೆ
ಕಾಯಕೊಟ್ಟು ಕಯ್ಯ ಮುಗುದೇನು ॥

ಊರಿಗೋಗೋ ಮುಂದೆ ಯಾರೀಗೆ ಸರಣೆಂಬೆ
ಊರ ಮುಂದಿರುವ ಸರಣಾ । ತಿಪ್ಪಯ್ಯಾಗೆ
ಬಾಗೇವು ನಮ್ಮ ಬುಜಗಾಳು ॥

# ಕುರುಬರ ಕಾವ್ಯ



## ಕುರುಬರ ಸಂದಿ

ಈss ಮಾಯಿಕಾರ
ಕಾಡುಸಿದ್ಧನ ಗುಡಿಗೆ ನೆಲೆಯಾ ನಿಂತಾನ
ದೇವಾರು ದೇವ || ಮುಮ್ಮೇಳ ||

ಈss ಮಾಯಿಕಾರ
ಕಾಡುಸಿದ್ಧನ ಗುಡಿಗೆ ನೆಲೆಯಾ ನಿಂತಾನ
ದೇವಾರು ದೇವ || ಹಿಮ್ಮೇಳ ||

ಏss ಮಾಯಿಕಾರ
ಹಣೆಯಲಿ ಭಂಡಾರ ಧರಿಶ್ಯಾನಾ
ದೇವಾರು ದೇವ || ಮು ||

ಏss ಮಾಯಿಕಾರ
ಹಣೆಯಲಿ ಭಂಡಾರ ಧರಿಶ್ಯಾನಾ
ದೇವಾರು ದೇವ || ಹಿ ||

ಈss ಮಾಯಿಕಾರ
ಕೈಯಲಿ ತ್ರಿಶೂಲ ಹಿಡೂದಾನಾ
ದೇವಾರು ದೇವ || ಮು ||

ಈss ಮಾಯಿಕಾರ
ಕೈಯಲಿ ತ್ರಿಶೂಲ ಹಿಡೂದಾನಾ
ದೇವಾರು ದೇವ || ಹಿ ||

ಈss ಮಾಯಿಕಾರ
ಕೈಯಲಿ ಡಮರುಗ ಹಿಡಿದಾನಾ
ದೇವಾರು ದೇವ || ಮು ||

ಈss ಮಾಯಿಕಾರ
ಕೈಯಲಿ ಡಮರುಗ ಹಿಡಿದಾನಾ
ದೇವಾರು ದೇವ ‖ ಹಿ ‖*

ಸಂಧಿ ಮುಗಿದ ಮ್ಯಾಲೆ
ತಂದರೊಂದೀಳೇವೂ
ಗಂಡನ ಸಂತಾನ ಪಡಿಯುವರೇ
ದೇವಾರು ದೇವ

ಗಂಡು ಮಗನ ಕೊಡೂ
ಧಾನ ಭಾಗ್ಯವ ಕೊಡೂ
ಹಿಂಡೆಮ್ಮೆ ಕೊಡು ಮನಿವಳಗೆ
ದೇವಾರು ದೇವ

ಹಿಂಡೆಮ್ಮಿ ಕೊಡಯ್ಯ
ಮದ್ದಾಲಿ ಗೊರವಯ್ಯ
ಅಂಬಾಲಿ ಮ್ಯಾಲೆ ಶಿವಧ್ಯಾನಾ
ದೇವಾರು ದೇವ

ಅಂಬುವಾಲಿ ಮ್ಯಾಲೆ
ಶಿವಧ್ಯಾನ ಕೊಟ್ಟಾರೇ
ತಿಂಗಾಳ ನಿನ್ನ ಗಿರಿಗೆ ಬರುತಾರೋ
ದೇವಾರು ದೇವ

ಗಿರಿಗೇರಿ ಕಾಯಿ
ಒಡದೇವೋ
ದೇವಾರು ದೇವ

ಗಿರಿಗೆತ್ತಿ ಕೈಯಾ
ಮುಗಾದೇವೋ
ದೇವಾರು ದೇವ

---

* ಈ ರೀತಿಯಲ್ಲಿ ಪ್ರತಿ ಪದ್ಯವನ್ನು ಮುಮ್ಮೇಳ ಮತ್ತು ಹಿಮ್ಮೇಳದಲ್ಲಿ ಪುನರುತ್ತಿಸಿ ಹಾಡಲಾಗುತ್ತದೆ.

ಶಿವನೆ ಸಾಂಬಾಸಿವ ಜಗದೀಶ್ವರ
ಘನ ಗುಡ್ಡದಯ್ಯ ಮಲ್ಲಿಕಾರ್ಜುನ ಮೈಲಾರಲಿಂಗ
ಏಳುಕೋಟಿss ಏಳುಕೋಟಿs
ಬಹುಘರಾಕ್ ಏಳುಕೋಟಿ ಏಳುಕೋಟಿಗೋ ------



## ಚಲತಿ

ಕೋಟಿಗೊಬ್ಬ ಶರಣ
ಪರಶಿವನಾಭರಣ
ಮೈಲಾರದಾಗ ಮೈಲಾರಲಿಂಗನ
ಚರಿತೆಯ ಗುಣಗಾನ
ಮೈಲಾರುದಾಗ ಮೈಲಾರಲಿಂಗನ
ಚರಿತೆಯ ಗುಣಗಾನ

ಆss ಕೈಲಾಸದಿಂದಳಿದು
ಕನ್ನಡ ನಾಡೋಳು ಸಂಚಾರss

ಸಂಚಾರ ಮಾಡುತ್ತಾ
ಬೋದಾಮೃತವನು ಹೇಳ್ಯಾನss

ಪರಮ ಪುಣ್ಯಾವೊ
ಮೈಲಾರ ಗ್ರಾಮಕೆ ಬಂದಾನ
ಸ್ವಾಮಿ ಪವಾಡ ತೋರ್‍ಯಾನ
ಸ್ವಾಮಿ ಪವಾಡ ತೋರಿಶ್ಯಾನ

ಆss ಕೋಟಿಗೊಬ್ಬ ಶರಣಾss
ಪರಿಶಿವನಾಭರಣ
ಮೈಲಾರದೊಳಗ ಮೈಲಾರಲಿಂಗನ
ಚರಿತೆಯ ಗುಣಗಾನ
ಆss ಮೈಲಾರದೊಳಗ ಮೈಲಾರಲಿಂಗನ
ಚರಿತೆಯ ಗುಣಗಾನss

ಆss ಭಕ್ತರಲ್ಲಿ ಕಲೆತು
ನೀತಿಯ ಪಾಠವ ಹೇಳ್ಯಾನss

ಸಕಲ ಕರ್ಮ ಕಳೆದು
ಧರ್ಮದ ದಾರಿಯ ತೋರ್‍ಯಾನss || ಮು ||


ತುಂಗಾsಭದ್ರಾ ದಡದಲಿ ನೆಲಸಿ
ಯೋಗಿ ಆಗ್ಯಾನಾ
ಸ್ವಾಮಿ ತಪವಾಗೈದಾನ
ಸ್ವಾಮಿ ತಪಸ್ಸು ಮಾಡ್ಯಾನಾss

ಆss ಕೋಟಿಗೊಬ್ಬ ಶರಣss
ಪರಶಿವನಾಭರಣ
ಮೈಲಾರದಾಗ ಮೈಲಾರಲಿಂಗನಾ
ಚರಿತೆಯ ಗುಣಗಾನ
ಮೈಲಾರದೊಳಗ ಮೈಲಾರಲಿಂಗನಾ
ಚರಿತೆಯ ಗುಣಗಾನss

ಸಕಲ ಕರ್ಮ ಕಳೆದು
ಧರ್ಮದ ದಾರಿಯ ತೋರ್‍ಯಾನಾss

ಮಾನವ ಜಲ್ಮಕೆ
ಜಯವಾಗಲೆಂದು
ಸಾರಿ ಹೇಳ್ಯಾನ
ಸ್ವಾಮಿ ಪವಾಡ ತೋರಿಶ್ಯಾನ
ಸ್ವಾಮಿ ಪವಾಡ ತೋರಿಶ್ಯಾನ

ಆss ಕೋಟೆಗೊಬ್ಬ ಶರಣಾss
ಪರಶಿವನಾಭರಣ
ಮೈಲಾರದಾಗ ಮೈಲಾರಲಿಂಗನss
ಚರಿತೆಯ ಗುಣಗಾನ
ಮೈಲಾರದಾಗ ಮೈಲಾರಲಿಂಗನ
ಚರಿತೆಯ ಗುಣಗಾನ



ಆss ಮಾಯಿಕಾರ
ಒಂದೊಂದು ಅವುತಾರ ತಾಳುತಾನ
ದೇವಾರು ದೇವ

ಆss ಗೊರವಯ್ಯ
ಒಂದೊಂದು ಅವುತಾರ ತಾಳುತಾನ
ದೇವಾರಾ ದೇವ

ಹರಕ ಕೋರಿಯ
ಧರಿಶ್ಯಾನೆ ಮೈಲಾರಮಲ್ಲ
ಮುರಕಾ ಬೆತ್ತವಿಡಿದಾನೆ

ಆss ಮುರುಕಾ ಬೆತ್ತವಿಡಿದಾನೆ
ಮಾಯಿಕಾರ
ಆರ್ಯಾಣ ಅಡವ್ಯಾಗೆ ಬರುತಾನೆ

ಆರ್ಯಾಣ ಅಡಿವ್ಯಾಗೆ ಬರುತಾನೆ
ಮುದಿಮಲ್ಲ
ಕುರಿಗಳು ನೋಡ್ಯಾನಲ್ಲೆ

ಏss ಏಳುಮಂದಿ ಅಣ್ಣತಮ್ಮರೇss
ಈಗ ಇನ್ನು
ಏಳು ಸಾವಿರದ ಕುರಿಹಿಂಡು

ಏಳು ಸಾವಿರದ ಕುರಿಹಿಂಡುss
ಈಗ ಇನ್ನು
ಆರ್ಯಾಣ ಅಡಿವ್ಯಾಗೆ ಬರುತಾರೆ

ಕುರಿಗಳ ನೋಡ್ಯಾನಲ್ಲೆ
ಮಾಯಿಕಾರ
ಕುರಿಗಳತಲ್ಲೀಗೆ ಹೋಗ್ಯಾನೆ

ಕುರಿಗಳತಲ್ಲೀಗೆ ಬಂದಾನೆ
ಮೈಲಾರಮಲ್ಲ
ಬಿದ್ದು ಬಿದ್ದಂಗ ಮಾಡುತಾನೆ

ಆss ಕುರುಬಾರು
ಏನಂತಾ ತಾವೆ ಕೇಳುತಾರೊ
ದೇವಾರು ದೇವ

ಆss ಕರ್ನಾಗುಂಡೂ
ತಮ್ಮಾಗೇನಂತಾ ಹೇಳುತಾನ
ದೇವಾರು ದೇವ

ಏss ತಮ್ಮಣ್ಣಾ
ಮುದ್ಯಾನ್ನ ಕರಕೊಂಡು ಬಾರೋ
ದೇವಾರು ದೇವ

ಏss ತಮ್ಮಣ್ಣಾ
ಬಿದ್ದು ಬಿದ್ದಂಗ ಈಗ ಮಾಡುತಾನ
ದೇವಾರು ದೇವ

ಏss ತಮ್ಮಣ್ಣಾ
ಊಟಗಳು ತಾನೇ ಮಾಡ್ಯಾನಿಲ್ಲೊ
ದೇವಾರು ದೇವ

ಏss ತಮ್ಮಣ್ಣಾ
ಊಟಗಳ ತಾನೇ ಮಾಡುತಾನ
ದೇವಾರು ದೇವ

ಏss ರಾವಳಗುಂಡೂ
ಮುದ್ಯಾನ್ನ ಕರಕೊಂಬಾರೋ
ದೇವಾರು ದೇವ

ಏss ಮುದಿಯವನೇ
ಊಟಗಳು ಈಗ ಮಾಡತೀಯಾ
ದೇವಾರು ದೇವ

ಏss ಕುರುಬಾರೆ
ಇಟ್ಟಾರೆ ವಟ್ಟೆ ತುಂಬಾ ಇಡಬೇಕೋ
ದೇವಾರು ದೇವ

ಏss ಕುರುಬಾರೆ
ಅರ್ಧ ಹೊಟ್ಟೆಗಳು ಮಾಡಬಾರ್ದು
ದೇವಾರು ದೇವ


ಏಽs ಮುದಿಯವನೇ
ಏಟು ನೀನಿನ್ನ ಉಂಬಾತೀಯೋ
ದೇವಾರು ದೇವ

ಏಽs ಕರ್ಣಾಗುಂಡೂ
ತಮ್ಮಾಗೇನಂತಾ ಹೇಳುತಾನಾ
ದೇವಾರು ದೇವ

ಆಽs ಕರ್ಣಾ ಗುಂಡೂ
ತಮ್ಮಾಗೇನಂತ ನುಡಿಯುತಾನಾ
ದೇವಾರು ದೇವ

ಏಽs ತಮ್ಮಯ್ಯ
ಏಳು ಬುತ್ತಿಗಳು ಕೊಡಾ ಹೋಗೋ
ದೇವಾರು ದೇವ

ಏಽs ತಮ್ಮಣ್ಣ
ಏಳು ಡಬರಿ ಹಾಲು ಹಿಂಡಿಕೊಡೊ
ದೇವಾರು ದೇವ



ಏss ತಮ್ಮಣ್ಣ
ತಿಮ್ಮಲಿದ್ರೆ ಕೊಳ್ಳಿಗೆ ಕಟ್ಟಾಬೇಕೋ
ದೇವಾರು ದೇವ

ಈss ಮುದಿಯವನೆ
ಮರ್ಯಾದಿ ಕಳಿಯಾಕ ಬಂದಾನೀಗ
ದೇವಾರು ದೇವ

ಆss ರಾವಲಗುಂಡೂ
ಏಳು ಬುತ್ತಿಗಳು ಕೊಟ್ಟಾನಲ್ಲಾ
ದೇವಾರು ದೇವ

ಆss ರಾವಲಗುಂಡು
ಏಳು ಡಬರಿ ಹಾಲು ಕೊಟ್ಟಾನಲ್ಲಾ
ದೇವಾರು ದೇವ

ಈss ಮುದಿಯವನೆ
ಒಂದೇ ಸುರ್‍ರಿಗ್ಗೆ ಸುರುದಾಬಿಟ್ಟಾ
ದೇವಾರು ದೇವ

ಈss ಮಾಯಿಕಾರ
ಒಂದೇ ಸುರ್‍ರಿಗ್ಗೆ ಸುರುದಾನಲ್ಲೋ
ದೇವಾರು ದೇವ

ಏss ಕುರುಬಾರೇss
ಹೊಟ್ಟ್ಯಾದರ ನನಗೆ ತುಂಬಾಲಿಲ್ಲೋ
ದೇವಾರು ದೇವ

ಏss ಕುರುಬಾರೇ
ಅರ್ಧ ಹೊಟ್ಟೆಗಳೂ ಮಾಡಬಾರ್ದು
ದೇವಾರು ದೇವ

ಏss ಕುರುಬಾರೇ
ಇಟ್ಟರೆ ಹೊಟ್ಟೆತುಂಬ ಇಡಬೇಕೋ
ದೇವಾರು ದೇವ

ಏss ಕುರುಬಾರೆ
ಮೊದಲೇ ನಿಮ್ಮಿಗೆ ಹೇಳಿದೆನಲ್ಲೋ
ದೇವಾರು ದೇವ

ಆss ಕರ್ಣಾಗುಂಡು
ಅರಮನೆಗೆ ತಾನೇ ಬಂದಾನಲ್ಲ
ದೇವಾರು ದೇವ

ಆss ಕರ್ಣಾಗುಂಡು
ಏಳು ಕಂಡುಗ ಅನ್ನ ಮಾಡಿಸ್ಯಾನ
ದೇವಾರು ದೇವ

ಆss ಕರ್ಣಾಗುಂಡು
ಏಳು ಕೊಡ ಹಾಲು ಹಿಂಡಿಸ್ಯಾನ
ದೇವಾರು ದೇವ

ಆss ಕರ್ಣಾಗುಂಡು
ಬಂಡಿಗೆ ತಾನೇ ಏರ್ಯಾನೆಂದ
ದೇವಾರು ದೇವ

ಆss ಕರ್ಣಾಗುಂಡು
ಬಂಡಿಗೆ ತಾನೇ ಏರಿಕೊಂಡು ಬಂದ
ದೇವಾರು ದೇವ

ಆss ಕರ್ಣಾಗುಂಡು
ಮುದ್ಯಾನಾ ಮುಂದೆ ಇಳಿಸ್ಯಾನಾ
ದೇವಾರು ದೇವ

ಏss ಮುದಿಯವನೆ
ಎಷ್ಟು ಉಂಬಾತಿ ಉಣ್ಣಾ ಈಗ
ದೇವಾರು ದೇವ

ಏss ಮುದಿಯವನೆ
ಮರಯಾದಿ ನಮ್ಮನ್ನ ಕಳದಿದ್ಯಾ
ದೇವಾರು ದೇವ

ಏss ಮುದಿಯವನೆ
ಮರ್ಯಾದಿ ನಮ್ಮನ್ನ ತಗದಿದ್ದೆ
ದೇವಾರು ದೇವ

ಈss ಮಾಯಿಕಾರ
ಯೋಚನಿ ಮಾಡತಾನ ಮನದೊಳಗ
ದೇವಾರು ದೇವ

ಭಂಡಾರ ಚೀಲದಾಕೆ ಬಲಗೈಯ ನಿಟ್ಟಾನೆ
ಮೂರು ಹಿಡಿ ಭಂಡಾರ ತಗುದಾನ
ದೇವಾರು ದೇವ

ಈss ಮಾಯಿಕಾರ
ಅನ್ನದ ರಾಶಿಗೆ ಹಾಕ್ಯಾನಲ್ಲ
ದೇವಾರು ದೇವ

ಈss ಗೊರವಯ್ಯ
ಅನ್ನದ ರಾಶಿಗೆ ಉಗ್ಯಾನಲ್ಲ
ದೇವಾರು ದೇವ

ಈss ಮಾಯಿಕಾರ
ಮೂರೇ ಸುರಿಗ್ಗೆ ಸುರದಬಿಟ್ಟ
ದೇವಾರು ದೇವ

ಏss ಕುರುಬಾರೆ
ಹೊಟ್ಟ್ಯಾದರ ನನಗೆ ತುಂಬಾಲಿಲ್ಲ
ದೇವಾರು ದೇವ

ಏss ಕುರುಬಾರೇ
ಅರ್ಧ ಹೊಟ್ಟೆಗಳು ಮಾಡಬಾರದು
ದೇವಾರು ದೇವ

ಏss ಕುರುಬಾರೇ
ಮೊದಲೇ ನಿಮ್ಮೀಗೆ ಹೇಳಿದೆನಲ್ಲೊ
ದೇವಾರು ದೇವ

ಏss ನಮ್ಮ ತಾತ
ನಮ್ಮ ಕೈಯಲ್ಲಿ ಆಗೋದಿಲ್ಲೊ
ದೇವಾರು ದೇವ

ಏss ನಮ್ಮ ತಾತ
ಸುಮ್ಮನೆ ನೀನು ಎದ್ದೋಗಪ್ಪ
ದೇವಾರು ದೇವ

ಏss ಕುರುಬಾರೇ
ಒಂದೇ ಕುರಿಯನ್ನು ಹಿಡಿಕೊಡ್ರೋ
ದೇವಾರು ದೇವ

ಏss ಕುರುಬಾರೇ
ಸುಮ್ಮನೆ ನಾನು ಹೋಗಾತೀನೋ
ದೇವಾರು ದೇವ

ಆss ಕುರುಬಾರೆ
ಗೊಡ್ಡುಕುರಿ ತಂದು ಹಿಡಾಕೊಟ್ರು
ದೇವಾರು ದೇವ

ಏss ಕುರುಬಾರೆ
ಇದರ ಹಾಲು ನಾನು ಹಿಂಡತೀನೋ
ದೇವಾರು ದೇವ

ಏss ನಮ್ಮ ತಾತ
ಮೂಗಿನ ಮಲೆಯು ಇಲ್ಲವಪ್ಪ
ದೇವಾರು ದೇವ

ಏss ಕುರುಬಾರೇ
ಇದರ ಹಾಲು ನಾನು ಹಿಂಡತೀನೋ
ದೇವಾರು ದೇವ

ಭಂಡಾರದ ಚೀಲದಾಕೆ ಬಲಗೈಯ ನಿಟ್ಟಾನೆ
ಒಂದಿಡಿ ಭಂಡಾರ ತಗೂದಾನ
ದೇವಾರು ದೇವ

ಈss ಮಾಯಿಕಾರ
ಕುರಿಯ ಮ್ಯಾಲಿನ್ನ ಹಾಕ್ಯಾನಲ್ಲೊ
ದೇವಾರು ದೇವ

ಆss ಕುರಿನದರಿ
ಕೆಚ್ಚಲು ಹಾಲು ಬಿಟ್ಟು ಬಿಟ್ಟಿತು
ದೇವಾರು ದೇವ

ಈss ಮಾಯಿಕಾರ
ಗೊಡ್ಡು ಕುರಿ ಹಾಲು ಹಿಂಡುತಾನ
ದೇವಾರು ದೇವ

ಈss ಮಾಯಿಕಾರ
ಉಚ್ಚಂಗಿ ದೋಣಿಗೆ ಹಿಂಡ್ಯಾನಲ್ಲೊ
ದೇವಾರು ದೇವ

ಈss ಮಾಯಿಕಾರ
ಡೋಣಿ ಹಾಲು ತಾನು ಹಿಂಡ್ಯಾನಲ್ಲ
ದೇವಾರು ದೇವ

ಈss ಮಾಯಿಕಾರ
ದೋಣಿ ಹಾಲು ತಾನೇ ಕುಡುದಾನ
ದೇವಾರು ದೇವ

ಈss ಮಾಯಿಕಾರ
ಕುರುಬರಿಗೇನಂತ ಹೇಳುತಾನ
ದೇವಾರು ದೇವ

ಏss ಕುರುಬಾರೆ
ಹೊಟ್ಟೆಗಳು ನಮಗೆ ತುಂಬಿ ಬಿಡತೋ
ದೇವಾರು ದೇವ

ಏss ನಮ್ಮ ತಾತ
ತಣ್ಣಗೆ ನೀನೂ ಹೋಗಿ ಬಾರೋ
ದೇವಾರು ದೇವ

ಏss ಕುರುಬಾರೇ
ತಣ್ಣಗೆ ನಾನು ಹೋಗೋದಿಲ್ಲೋ
ದೇವಾರು ದೇವ

ಏss ಕುರುಬಾರೇ
ನಿಮ್ಮ ರಿಣ ತೀರಿಸಿ ಹೋಗಾತೇನೋ
ದೇವಾರು ದೇವ

ಏss ನಮ್ಮ ತಾತ
ಏನು ಬದಕುಗಳು ಮಾಡತೀಯೋ
ದೇವಾರು ದೇವ

ಏss ಕುರುಬಾರೆ
ಕುರಿಗಳು ನಾನು ಕಾಯತೀನೋ
ದೇವಾರು ದೇವ

ಏss ಕುರುಬಾರೇ
ಮರಿಗಳು ನಾನು ಮೇಸತೀನೋ
ದೇವಾರು ದೇವ

ಏss ನಮ್ಮ ತಾತ
ಕುರಿಗಳ ಮೈಯಿ ತೊಳಕಂಬರ್ತ್ಯಾ
ದೇವಾರು ದೇವ

ಆss ಕುರುಬಾರೆ
ಬಡಿಗೆನ್ನ ತಾವು ಕೊಟ್ಟಾರಲ್ಲಾ
ದೇವಾರು ದೇವ

ಏss ನಮ್ಮ ತಾತ
ಕುರಿಯನ್ನು ನೀನು ಮೆಯಿಸಗಂಡು ಬಾರೊ
ದೇವಾರು ದೇವ

ಏss ನಮ್ಮ ತಾತ
ಕುರಿಗಳ ಮೈಯನ್ನು ತೊಳಕಂಡು ಬಾರೋ
ದೇವರು ದೇವ

ಏss ನಮ್ಮ ತಾತ
ಅರಮನಿಗೆ ನಾವು ಹೋಗಾತೀವೋ
ದೇವಾರು ದೇವ

ಏss ಕುರುಬಾರೆ
ಹೋಗಿನ್ನ ನೀವೂ ಬರ್‍ರಿಪ್ಪ
ದೇವಾರು ದೇವ

ಆss ಕುರುಬಾರೆ
ಅರಮನೆಗೆ ತಾವು ಬಂದಾರಲ್ಲ
ದೇವಾರು ದೇವ

ಈss ಮಾಯಿಕಾರ
ಹೊಳಿಗೆ ಕುರಿಯು ಹೊಡೆಯುತಾನ
ದೇವಾರು ದೇವ

|ಈ| ಮಾಯಿಕಾರ
ಟುರ್‍ರ ಎಂದು ತಾನೇ ಕರೆಯುತಾನ
ದೇವಾರು ದೇವ

|ಈ| ಮಾಯಿಕಾರ
ಟುರ್‍ರ್ ಎಂದು ತಾನೇ ಹೊಡೆಯುತಾನ
ದೇವಾರು ದೇವ

|ಈ| ಮಾಯಿಕಾರ
ಹೊಳೆಯ ದಂಡಿಗೆ ಬಂದಾನಲ್ಲ
ದೇವಾರು ದೇವ

|ಈ| ಮಾಯಿಕಾರ
ಕುರಿಗಳನ್ನೆಲ್ಲ ತರುಬ್ಯಾನಲ್ಲಾ
ದೇವಾರು ದೇವ

|ಈ| ಮಾಯಿಕಾರ
ಒಂದೇ ಕುರಿಯನ್ನು ಹಿಡಕೊಂಡಾನ
ದೇವಾರು ದೇವ

|ಈ| ಮಾಯಿಕಾರ
ಹೊಳಿಗೆ ತಾನೆ ಇಳುದಾನ
ದೇವಾರು ದೇವ

ಹಿಂಗಾಲ ಹಿಡಿದಾನೆ ಮುಂಗೈ ಬಿಗಿ ಮಾಡ್ಯಾನೆ
ಬೀಸಿ ಬೀಸಿ ಬಂಡಿಗೆ ಬಡಿಯುತಾನ
ದೇವಾರು ದೇವ

ಆss ಮಾಯಿಕಾರ
ಬಟ್ಟೆಗಳು ಒಗದಂಗ ಒಗೆಯುತಾನ
ದೇವಾರು ದೇವ

ಆss ಮಾಯಿಕಾರ
ಒಗದು ಗಡ್ಡಿಗೆ ಹಾಕ್ಯಾನಲ್ಲ
ದೇವಾರು ದೇವ

|ಈ| ಮಾಯಕಾರ
ಕುರಿಗಳ ನಿಟ್ಟನ್ನು ಹಾಕ್ಯಾನಲ್ಲ
ದೇವಾರು ದೇವ

ಏss ಮಾಯಿಕಾರ
ಲಕ್ಕಿ ಪೊದ್ಯಾಗ ಹೋಗ್ಯಾನಲ್ಲ
ದೇವಾರು ದೇವ

ಏss ಮಾಯಿಕಾರ
ಲಕ್ಕಿ ಪೊದ್ಯಾಗ ಅಡಗ್ಯಾನ
ದೇವಾರು ದೇವ

|ಈ| ಮಾಯಿಕಾರ
ಲಕ್ಕಿ ಪೊದ್ಯಾಗ ಅಡಗ್ಯಾನಲ್ಲ
ದೇವಾರು ದೇವ

ಆss ಕುರುಬಾರೆ
ಕುರಿಗಳ ಕತ್ತರಸಿ ಕರಕಂಡ ಬಂದ್ರು
ದೇವಾರು ದೇವ

ಅವರೇಳು ಮಂದಿ
ಕುರಿಗಳತಲ್ಲಿಗೆ ಬಂದಾರಲ್ಲ
ದೇವಾರು ದೇವ

ಅವ್ವರೀಗ
ಕುರಿಗಳನ ತಾವೇ ನೋಡುತಾರೆ
ದೇವಾರು ದೇವ

ಏss ಈಗಿನ್ನ
ಕುರಿಗಳು ಎಲ್ಲಾವು ಸತ್ತೋಗ್ಯಾವ
ದೇವಾರು ದೇವ

ಆss ಕುರುಬಾರೇ
ಏನಂತ ತಾವೆ ನುಡಿಯುತಾರ
ದೇವಾರು ದೇವ

ಆss ಚಿಕ್ಕ ತಮ್ಮ
ಅಣ್ಣನಿಗೇನಂತ ಹೇಳೂತಾನ
ದೇವಾರು ದೇವ

ಏss ಅಣ್ಣನವರೇ
ನಮ್ಮ ಬಡಿಗೆನ್ನ ಮೂಲಿಗೆ ಬಿತ್ತು
ದೇವಾರು ದೇವ

ಆss ಹಿರಿಯಣ್ಣ
ಏನಂತ ತಮ್ಮನವರಿಗೆ ಹೇಳುತಾನ
ದೇವಾರು ದೇವ

ಏss ತಮ್ಮಾನವರೇ
ಮುದಿಯನು ಎಲ್ಲೇ ಐದಾನ ಹುಡುಕಾರೀಗ
ದೇವಾರು ದೇವ

ಆss ಕುರುಬಾರೇ
ಲಕ್ಕಿ ಪೊದ್ಯಾಗ ಬಂದರಲ್ಲೋ
ದೇವಾರು ದೇವ

ಆss ಮಾಯಿಕಾರ
ಲಕ್ಕಿ ಪೊದ್ಯಾಗ ಸಿಕ್ಕಾನಲ್ಲ
ದೇವಾರು ದೇವ

ಆss ಕುರುಬಾರೇ
ರಟ್ಟೆ ಹಿಡಿದು ತಾವು ಎಳಕಂಡ ಬಂದ್ರು
ದೇವಾರು ದೇವ

ಏss ಮುದಿಯವನೇ
ಕುರಿಗಳು ಯಂಗಂಗ ಸತ್ತೋಗ್ಯಾವೋ
ದೇವಾರು ದೇವ

ಏss ಕುರುಬರೇ
ಕುರಿಗಳ ಹಣೆ ಬರಹ ಬರೆಯುವಾಗ
ದೇವಾರು ದೇವ

ಏss ಕುರುಬರೇ
ಎದುರಿಗೆ ನಾನು ಇಲ್ಲಲ್ಲಪ್ಪ
ದೇವಾರು ದೇವ

ಏss ಮುದಿಯವನೆ
ಯಂಗೆ ಮಾಡಬೇಕು ಇದರನ್ನ
ದೇವಾರು ದೇವ

ಏss ಮುದಿಯವನೆ
ಮಂದೆ ಮರಿಗಳು ಅರಸುತಾವೆ
ದೇವಾರು ದೇವ

|ಈ| ಮಾಯಿಕಾರ
ಕುರಬರನೇನಂತ ಕೇಳುತಾನ
ದೇವಾರು ದೇವ

ಏss ಕುರುಬರೇ
ಅಣ್ಣ ತಮ್ಮಗಳು ಏಸುಮಂದಿ
ದೇವಾರು ದೇವ

ಏss ಮುದಿಯವನೆ
ಏಳು ಮಂದೇನ್ನ ಐದಿವಪ್ಪ
ದೇವಾರು ದೇವ

ಏss ಕುರುಬರೇ
ಅಕ್ಕ ತಂಗೇರು ಇಲ್ಲವೇನು
ದೇವಾರು ದೇವ

ಏss ಮಾಯಿಕಾರ
ಒಬ್ಬ ತಂಗೆಮ್ಮ ಐದಾಳಪ್ಪ
ದೇವಾರು ದೇವ

ಏss ಕುರುಬರೇ
ಅಲ್ಲೆ ಉಳಕಂಡಿದೆ ದೋಸವಿನ್ನ
ದೇವಾರು ದೇವ

ಏss ಕುರುಬರೇ
ನಿಮ್ಮ ತಂಗಿನ್ನ ಕರಕಂಡು ಬರ್ರೋ
ದೇವಾರು ದೇವ

ಏss ಕುರುಬರೇ
ನಿಮ್ಮ ಕುರಿಗಾಳು ಬದುಕುತಾವೋ
ದೇವಾರು ದೇವ

ಆss ಕರ್ಣಾಗುಂಡೂ
ಅರಮನೆಗೆ ತಾನೇ ಬಂದಾನಲ್ಲ
ದೇವಾರು ದೇವ

ಏss ಕೋಮಾಲೇ
ಕುರಿಹಟ್ಟಿಗೆ ನಾವು ಹೋಗೋನ ಬಾರೇ
ದೇವಾರು ದೇವ

ಏss ಕೋಮಾಲೇ
ಕುರಿಗಳುತಲ್ಲೀಗೆ ಹೋಗೋನ ಬಾರೇ
ದೇವಾರು ದೇವ

ಏss ಕೋಮಾಲೇ
ಕುರಿಗಳು ಎಲ್ಲಾವು ಸತ್ತೋಗ್ಯಾವೆ
ದೇವಾರು ದೇವ

ಏss ಕೋಮಾಲೇ
ನೀನೂ ಬಂದಾರೆ ಬದುಕ್ತಾವಂತೆ
ದೇವಾರು ದೇವ

ಏss ಅಣ್ಣನವರೆ
ಯಾರು ಪಂಚಾಂಗ ಹೇಳಿದರಪ್ಪ
ದೇವಾರು ದೇವ

ಏss ಕೋಮಾಲೇ
ಒಬ್ಬ ಮುದಿಯಾತ ಹೇಳ್ಯಾನಮ್ಮ
ದೇವಾರು ದೇವ

ಏss ಅಣ್ಣನವರೇ
ಕಡುದರೆ ನನ್ನ ಇಲ್ಲೆ ಕಡಿಯೋ
ದೇವಾರು ದೇವ

ಏss ಅಣ್ಣನವರೇ
ಕುರಿಗಳು ತಲ್ಲೀಗೆ ಬರೋದಿಲ್ಲ
ದೇವಾರು ದೇವ

ಆss ಕರ್ಣಾಗುಂಡೂ
ಹಿಂದಕ್ಕೆ ತಿರುಗಿ ಬಂದಾನಲ್ಲ
ದೇವಾರು ದೇವ

ಏss ನಮ್ಮ ತಾತ
ನಮ್ಮ ತಂಗೆಮ್ಮ ಬರೋದಿಲ್ಲಂತೆ
ದೇವಾರು ದೇವ

ಏss ನಮ್ಮ ತಾತ
ಯಂಗ ಮಾಡಬೇಕು ಇದರನಾ
ದೇವಾರು ದೇವ

ಏss ನಮ್ಮ ತಾತ
ಯಂಗ ಮಾಡ ಬೇಕು ಇದರನಾ
ದೇವಾರು ದೇವ

ಏss ಈಗಿನ್ನಾ
ಮಂದಿ ಮರಿಗಾಳು ಅರಸುತಾವ್ರೋ
ದೇವಾರು ದೇವ

ಏss ಕುರುಬರೇ
ನಿಮ್ಮ ತಂಗೀನ್ನ ಈಗ ಇನ್ನ
ದೇವಾರು ದೇವ

ಏss ಕುರುಬರೇ
ದಾರಿ ಹಿಡಿದೋಗಾನಿಗೆ ಮಾಡಿಕೊಡ್ರೊ
ದೇವಾರು ದೇವ

ಏss ಕುರುಬರೇ
ನಿಮ್ಮ ಕುರಿಗಳು ಬದುಕುತಾವ್ರೋ
ದೇವಾರು ದೇವ

ಏss ನಮ್ಮ ತಾತಾ
ನಿನಗೇನ ಬದಲಿ ಕೊಡತೀವ್ರೊ
ದೇವಾರು ದೇವ

ಏss ನಮ್ಮ ತಾತ
ನಮ್ಮ ಕುರಿಗಳು ಬದುಕ್ಸಬೇಕೋ
ದೇವಾರು ದೇವ

ಏss ನಮ್ಮ ತಾತ
ನಮ್ಮ ಕುರಿಗಳು ಬದುಕಬೇಕು
ದೇವಾರು ದೇವ

ಭಂಡಾರದ ಚೀಲದಾಗೆ ಬಲಗೈಯ ನಿಟ್ಟಾನೆ
ಮೂರು ಹಿಡಿ ಭಂಡಾರ ತಗೂದಾನ
ದೇವಾರು ದೇವ

ಆss ಮಾಯಿಕಾರ
ಕುರಿಗಳ ಮೇಲೆಲ್ಲ ಹಾಕ್ಯಾನಲ್ಲಾ
ದೇವಾರು ದೇವ

ಆss ಕುರಿಗಳು
ಎದ್ದೆದ್ದು ತಾವು ಓಡುತಾವ
ದೇವಾರು ದೇವ

ಆss ಕುರುಬರೇ
ಅರಮನೆಗೆ ತಾವೆ ಬರುತಾರ
ದೇವಾರು ದೇವ

|ಈ| ಮಾಯಿಕಾರ
ಹಿಂದಿಂದೆ ತಾನೆ ಹೋಗುತಾನ
ದೇವಾರು ದೇವ

ಅವರೇಳು ಮಂದಿ
ಚಿಕ್ಕ ತಮ್ಮನೆ ನುಡಿಯುತಾರ
ದೇವಾರು ದೇವ

ಏss ಅಣ್ಣನವರೆ
ನಮ್ಮ ತಂಗಿನ್ನ ಕೊಡೋದು ಬ್ಯಾಡೋ
ದೇವಾರು ದೇವ

ಏss ಯಣ್ಣನವರೆ
ತಿರಕಂಡ ತಿನ್ನಾನಿಗೋ ಕೊಡಬಾರದೊ
ದೇವಾರು ದೇವ

ಏss ಯಣ್ಣನವರೆ
ಒಳ್ಳೇರ್ರಿಗೆ ಈಗ  ನೋಡಿಕೊಡ್ರೋ
ದೇವಾರು ದೇವ

ಏss ಯಣ್ಣನವರೆ
ಮುದಿಯನ್ನ ಈಗ ಬಡದಾಕೋಣ್ರೋ
ದೇವಾರು ದೇವ

ಏss ಯಣ್ಣನವರೆ
ಗೋಣಿಸೀಲಕ ಈಗ ಹಾಕನ ನಡಿರೋ
ದೇವಾರು ದೇವ

ಏss ಯಣ್ಣನವರೇ
ಹೊಳಿಗೆ ಈಗ ನಾವು ಹಾಕಿ ಬರೋಣ್ರೋ
ದೇವಾರು ದೇವ

ಆss ಶಬ್ದವನ್ನು
ಮುದಿಯನ ಕಿವ್ಯಾಕ ಬಿದ್ದೈತಲ್ಲೋ
ದೇವಾರು ದೇವ

|ಈ| ಮಾಯಿಕಾರ
ಮಾಯವು ತಾನು ಆಗ್ಯಾನಲ್ಲ
ದೇವಾರು ದೇವ

|ಈ| ಕುರುಬರೇ
ಕುರಿಹಟ್ಟಿಗೆ ತಾವು ಬಂದಾರಲ್ಲ
ದೇವಾರು ದೇವ

|ಈ| ಕುರುಬರೇ
ಮಂದಿ ಮರಿಗಳ ಉಣಸುತಾರ
ದೇವಾರು ದೇವ

|ಈ| ಮಾಯಿಕಾರ
ಕೋಮಾಲೆ ಪಟ್ನಕ್ಕೆ ಬಂದಾನಲ್ಲ
ದೇವಾರು ದೇವ

|ಈ| ಮಾಯಿಕಾರ
ಕೋಮಾಲೆ ಮಂತ್ಯಾಕ ಬಂದಾನಲ್ಲ
ದೇವಾರು ದೇವ

|ಈ| ಮಾಯಿಕಾರ
ಮುಪ್ಪಾನ ಮುದಕ ಆಗ್ಯಾನಲ್ಲ
ದೇವಾರು ದೇವ

|ಈ| ಮಾಯಿಕಾರ
ಕೈಯಲ್ಲಿ ಬಡಿಗೆ ಹಿಡಿದಾನ
ದೇವಾರು ದೇವ

ಆss ಕೋಮಾಲೇ
ಬಂಕದಾಗೆ ತಾನೆ ಕುಂತಾಳಲ್ಲ
ದೇವಾರು ದೇವ

|ಈ| ಮಾಯಿಕಾರ
ಬಿದ್ದು ಬಿದ್ದಂಗ ತಾನೇ ಮಾಡುತಾನ
ದೇವಾರು ದೇವ

ಆss ಕೋಮಾಲೆಗೆ
ಕನ್ನು ಕುರುವ ತನಗೆ ಬಂದೈತಲ್ಲೋ
ದೇವಾರು ದೇವ

ಆss ಕೋಮಾಲೇ
ರಟ್ಟೆಗಳು ತಾನೇ ಹಿಡುದಾಳ
ದೇವಾರು ದೇವ

ಆss ಕೋಮಾಲೆ
ಕಟ್ಟೆ ಮೇಲೆನ್ನ ಕುಂದ್ರುಸ್ಯಾಳ
ದೇವಾರು ದೇವ

ಅವರೇಳ ಮಂದಿ
ಅರಮನೆಗೆ ತಾವೆ ಬರುತಾರ
ದೇವಾರು ದೇವ

ಆss ಕೋಮಾಲೇ
ಏಳು ಅಂಡೇವು ನೀರು ಕಾಸ್ಯಾಳಲ್ಲ
ದೇವಾರು ದೇವ

ಅವರೇಳು ಮಂದಿ
ಅರಮನೆಗೆ ತಾವೇ ಬಂದರಲ್ಲ
ದೇವಾರು ದೇವ

ಅವರೇಳು ಮಂದಿ
ಕೋಮಾಲೆಗೇನಂತ ಕೇಳುತಾರ
ದೇವಾರು ದೇವ

ಏss ಕೋಮಾಲೇ
ಯಾರಮ್ಮ ಈತ ಮುದಿಯವನೇ
ದೇವಾರು ದೇವ

ಏss ಯಣ್ಣನವರೇ
ಬಿದ್ದು ಬಿದ್ದಂಗ ಈಗ ಮಾಡುತ್ತಿದ್ದ
ದೇವಾರು ದೇವ

ಏss ಯಣ್ಣನವರೇ
ಕೈ ಹಿಡಿದು ನಾನು ಕುಂದಿರಿಸೀನೀ
ದೇವಾರು ದೇವ

ಏss ಯಣ್ಣನವರೇ
ಕುರಿಗಳತಲ್ಲೇಗೆ ಬಂದಿದ್ದನೇನೇ
ದೇವಾರು ದೇವ

ಏss ಕೋಮಾಲೇ
ಈತನು ಈಗ ಅಲ್ಲವಮ್ಮ
ದೇವಾರು ದೇವ

ಏss ಕೋಮಾಲೇ
ಆತನು ಬ್ಯಾರೆ ಮುದಿಯಾತಾ
ದೇವಾರು ದೇವ

ಏss ಕೋಮಾಲೇ
ವಳಿಯಾಕೆ ನಾವು ಕರಕೊಂಡು ಹೋಗಾಣ
ದೇವಾರು ದೇವ

ಆss ಮುದಿಯವನ
ವಳಿಯಾಕ ತಾವೆ ಕರಕೊಂಡು ಹೋದ್ರು
ದೇವಾರು ದೇವ

ಆss ಮುದಿಯವನ
ಬಚ್ಚಲಕೆ ತಾವೆ ಕುಂದುರಿಸ್ಯಾರೋ
ದೇವಾರು ದೇವ

ಅವ್ವರೀಗ
ಏಳು ಅಂಡೇವು ನೀರೂ ಹಾಕ್ಯರಲ್ಲ
ದೇವಾರು ದೇವ

ಅವ್ವರೀಗ
ಸ್ನಾನ ಸಂಧ್ಯಾನ ಮಾಡಿಸ್ಯಾರಾ
ದೇವಾರು ದೇವ

ಅವ್ವರೀಗ
ಕರಿಯ ಕಂಬಾಳಿ ಹಾಕ್ಯಾರೀಗಾ
ದೇವಾರು ದೇವ

ಅವ್ವರೀಗ
ಪೂಜೆ ಪುನಸ್ಕಾರ ಮಾಡ್ಯಾರಲ್ಲಾ
ದೇವರು ದೇವ

ಅವ್ವರೀಗ
ಹಾಲು ಹಣ್ಣುಗಳು ಕೊಟ್ಟಾರಲ್ಲಾ
ದೇವಾರು ದೇವ

ಏss ಈಗಿನ್ನ
ತೂಗ ಮಂಚಕ ಹಾಕ್ಯಾರಲ್ಲ
ದೇವಾರು ದೇವ

ಆ ಮುದಿಯವನೇ
ನಿದ್ದೆಗಳು ತಾನೇ ಮಾಡುತಾನ
ದೇವಾರು ದೇವ

ಅವ್ವರೇಳ ಮಂದಿ
ಸ್ನಾನ ಸಂಧ್ಯಾನ ಮಾಡ್ಯಾರಲ್ಲಾ
ದೇವಾರು ದೇವ

ಅವ್ವರೇಳ ಮಂದಿ
ಊಟಗಳು ತಾವೆ ಮಾಡ್ಯಾರಲ್ಲಾ
ದೇವಾರು ದೇವ

ಅವ್ವರೇಳ ಮಂದಿ
ತಂಗಿಗೇನಂತ ಹೇಳುತಾರ
ದೇವಾರು ದೇವ

ಏss ಕೋಮಾಲೇ
ದೇವ್ರು ಬಂದಂಗ ಬಂದಾನಮ್ಮ
ದೇವಾರು ದೇವ

ಏss ಕೋಮಾಲೇ
ದಿವಸ ಸ್ನಾನವ ಮಾಡಿಸಮ್ಮ
ದೇವಾರು ದೇವ

ಏss ಕೋಮಾಲೇ
ದಿವಸ ಪೂಜೆಗಳು ಮಾಡುವಮ್ಮ
ದೇವಾರು ದೇವ

ಏss ಕೋಮಾಲೇ
ದಿನಕ್ಕೊಂದು ಶಾಯ ಅಡಿಗೆ ಮಾಡಿನೀಡು
ದೇವಾರು ದೇವ

ಆss ಕುರುಬರು
ಹಿಂಗೇಳಿ ತಾವೇ ಹೋಗ್ಯಾರಲ್ಲ
ದೇವಾರು ದೇವ

ಆss ಕೋಮಾಲಿ
ದಿವಸ ಸ್ನಾನವ ಮಾಡಿಸ್ಯಾಳ
ದೇವಾರು ದೇವ

ಆss ಕೋಮಾಲಿ
ದಿವಸ ಪೂಜೆಗಳು ಮಾಡುತಾಳ
ದೇವಾರು ದೇವ

ಆss ಕೋಮಾಲಿ
ದಿನಕ್ಕಂದು ಶಾಯ ಅಡುಗೆ ಮಾಡಿಡುತಾಳ
ದೇವಾರು ದೇವ

ಏss ಈಗೀನ್ನ
ಹದಿನಾರು ದಿನಗಳು ಆಗ್ಯಾವಲ್ಲೋ
ದೇವಾರು ದೇವ

ಆss ಮಾಯಿಕಾರ
ಹದಿನಾರು ವರುಸದ ಹಸುಮಗ
ದೇವಾರು ದೇವ

|ಈ| ಮಾಯಿಕಾರ
ಸೂರ್ಯ ಮಿಂಚಾಣ ಮಿಂಚುತಾನ
ದೇವಾರು ದೇವ

|ಈ| ಮಾಯಿಕಾರ
ಭಂಡಾರ ತಾನು ಧರಿಸ್ಯಾನ
ದೇವಾರು ದೇವ

|ಈ| ಮಾಯಿಕಾರ
ಕೋಮಾಲಿನ ಈಗ ಕರುದಾನ
ದೇವಾರು ದೇವ

ಆss ಕೋಮಾಲೆ
ಗೊತ್ತನ್ನ ತಾನು ಹಿಡುದಾಳ
ದೇವಾರು ದೇವ

ಏss ಮೈಲಾರಲಿಂಗ
ಎಂತ ಮೋಸಗಳು ಮಾಡಿಯಲ್ಲೊ
ದೇವಾರು ದೇವ

ಆss ಕೋಮಾಲೆ
ಮುನುಸುಗುಟ್ಟು ಮೂಲಿಗೆ ಕುಂತಾಳಲ್ಲ
ದೇವಾರು ದೇವ

ಏss ಮಾಯಿಕಾರ
ಯೋಚನೆ ಮಾಡುತಾನ ಮನದೊಳಗ
ದೇವಾರು ದೇವ

ಅವರೇಳು ಮಂದಿ
ಅರಮನೆಗೆ ತಾವೇ ಬರುತಾರ
ದೇವಾರು ದೇವ

ಈಗ ನಾನು
ಮನೆಯ ಬಿಟ್ಟೀನ್ನ ಹೋಗಾಬೇಕು
ದೇವರು ದೇವ

ಈss ಕೋಮಾಲೆ
ನನ್ನನ್ನ ತಾನೆ ಗೊತ್ತು ಹಿಡಿದಾಳೆ
ದೇವಾರು ದೇವ

ಈss ಮಾಯಿಕಾರ
ಮನೆಯ ಬಿಟ್ಟಿನ್ನು ಹೋಗ್ಯಾನಲ್ಲ
ದೇವಾರು ದೇವ

ಈss ಮಾಯಿಕಾರ
ಮತ್ತೊಂದು ರೂಪ ತಾಳ್ಯಾನಲ್ಲ
ದೇವಾರು ದೇವ

ಈss ಮಾಯಿಕಾರ
ಮತ್ತೊಂದು ಅವುತಾರ ತಾಳ್ಯಾನಲ್ಲ
ದೇವಾರು ದೇವ

ಈss ಮಾಯಿಕಾರ
ಕುರಿಹಟ್ಟಿಗೆ ತಾನೇ ಬಂದಾನಲ್ಲ
ದೇವಾರು ದೇವ

ಅವರೇಳು ಮಂದಿಗೆ
ಏಳುಸಾವಿರದ ಕುರಿಹಿಂಡು
ದೇವಾರು ದೇವ

ಏss ಈಗಿನ್ನ
ಸಂಬಳದಾಳು ಸಿಕ್ಕೇ ಇಲ್ಲ
ದೇವಾರು ದೇವ

|ಈ| ಮಾಯಿಕಾರ
ಕುರಬರ ತಲ್ಲೀಗೆ ಹೋಗ್ಯಾನಲ್ಲ
ದೇವಾರು ದೇವ

ಏss ಕುರುಬರೆ
ಮಂದೆ ಮರಿಗಳು ಮೇಸತೀನೋ
ದೇವಾರು ದೇವ

ಏss ಕುರುಬರೆ
ಊಟೊಂದೆ ನನಗೆ ಇಡರಪ್ಪ
ದೇವಾರು ದೇವ

ಏss ಕುರುಬರೆ
ರೊಕ್ಕಗಳು ನನಗೆ ಬೇಕಾಗಿಲ್ಲ
ದೇವಾರು ದೇವ

ಅವರೇಳ ಮಂದಿಗೆ
ಏಳು ಸಾವಿರದ ಮರಿಗಳು
ದೇವಾರು ದೇವ

ಏss ಮುದಿಯವನೆ
ಮರಿಗಾಳು ಕಾಯಕ ಹೋಗುವಪ್ಪ
ದೇವಾರು ದೇವ

ಆss ಮುದಿಯವನು
ಮರಿಗಳ ಕಾಯಕ ನಿಂತಾನಲ್ಲ
ದೇವಾರು ದೇವ

ಏss ಈಗೀನ್ನಾ
ಎಂಟೇ ದಿವಸಗಳು ಆಗ್ಯಾವಲ್ಲಾ
ದೇವಾರು ದೇವ

ಈss ಮಾಯಿಕಾರ
ಮರಿಗಳಿಗೆ ಮಾತು ಕಲಿಸುತಾನಾ
ದೇವಾರು ದೇವ

ಈss ಮಾಯಿಕಾರ
ಮರಿಗಳಿಗೆ ಮಾತು ಕಲಿಸ್ಯಾನಾ
ದೇವಾರು ದೇವ

ಏss ಈಗೀನ್ನ
ಕೋಮಾಲೆ ಅವಳು ಬರುತಾಳ
ದೇವಾರು ದೇವ

ಏss ಮರಿಗಾಳೇ
ಇತ್ಯಾಗ ಒಮ್ಮೆ ಓಡೋಗಾಬೇಕು
ದೇವಾರು ದೇವ

ಏss ಮರಿಗಾಳೇ
ಅತ್ತಾಗ ಒಮ್ಮೆ ಓಡೋಗಾಬೇಕು
ದೇವಾರು ದೇವ

ಏss ಮರಿಗಾಳೇ
ಅದೃಶ್ಯ ನೀವು ಆಗಾಬೇಕೂ
ದೇವಾರು ದೇವ

ಆss ಹೊಲುದಾಗ
ನಿಗ್ಗೀನ ಮುಳ್ಳು ಬಹಳಾವಷ್ಟು
ದೇವಾರು ದೇವ

ಈss ಮಾಯಿಕಾರ
ಕುರುಬರ ಏನಂತ ಕೇಳುತಾನ
ದೇವಾರು ದೇವ

ಏss ಕುರುಬಾರೆ
ಬಟ್ಟೆಗಳು ನಾನೇ ವಕ್ಕಬೇಕು
ದೇವಾರು ದೇವ

ಏss ಕುರುಬಾರೆ
ನಿಮ್ಮ ತಂಗಿನ್ನ ಸ್ವಲ್ಪಹೊತ್ತು
ದೇವಾರು ದೇವ

ಏss ಕುರುಬಾರೆ
ಕುರಿಗಳು ಮೇಸಕ ಕಳುಸಿಕೊಡ್ರೋ
ದೇವಾರು ದೇವ

ಏss ಕುರುಬಾರೆ
ಬಟ್ಟೆಗಳು ನಾನು ವಕ್ಕಂತೀನೋ
ದೇವಾರು ದೇವ

ಏss ಮುದಿಯವನೇ
ನಮ್ಮ ತಂಗೀನ್ನ ಕಳಿಸಿಕೊಡತೀವಿ
ದೇವಾರು ದೇವ

ಏss ಕೋಮಾಲೆ
ಕುರಿಗಳು ಮೇಸಕ ಹೋಗುವಮ್ಮ
ದೇವಾರು ದೇವ



ಆss ಕೋಮಾಲೆ
ಮರಿಗಳು ಮೇಸಕ ಬಂದಾಳಲ್ಲ
ದೇವಾರು ದೇವ

ಆss ಮಾಯಿಕಾರ
ಬಾಯಕ ತಾನು ಇಳುದಾನ
ದೇವಾರು ದೇವ

ಈss ಮಾಯಿಗಾರ
ಬಟ್ಟೆಗಳು ತಾನೇ ಒಕ್ಕಂಡಾನ
ದೇವಾರು ದೇವ

ಈss ಮಾಯಿಕಾರ
ಮರಿಗಳಿಗೆ ಮಾತು ಕಲಿಸ್ಯಾನ
ದೇವಾರು ದೇವ

ಆss ಮರಿಗಾಳು
ಇತ್ತಾಗ ಒಮ್ಮೆ ಓಡೋಗ್ಯಾವೊ
ದೇವಾರು ದೇವ

ಆss ಕೋಮಾಲಿ
ಹಿಂದಲಿಂದೆ ತಾನು ಓಡೋಗುತಾಳ
ದೇವಾರು ದೇವ

ಆss ಕೋಮಾಲಿ
ನೆಗ್ಗೀನ ಮುಳ್ಳು ತುಳುದಾಳ
ದೇವಾರು ದೇವ

ಆss ಕೋಮಾಲಿ
ಕಣ್ಣೀರು ತಾನೆ ಹಾಕುತಾಳೋ
ದೇವಾರು ದೇವ

ಆss ಮರಿಗಾಳು
ಇತ್ತಾಗ ಒಮ್ಮೆ ಓಡಿದವು
ದೇವಾರು ದೇವ

ಆss ಕೋಮಾಲೆ
ಹಿಂದಲಿಂದೆ ತಾನು ಓಡಿದಳು
ದೇವಾರು ದೇವ

ಆss ಕೋಮಾಲೆ
ನೆಗ್ಗೀನ ಮುಳ್ಳು ತುಳುದಾಳ
ದೇವಾರು ದೇವ

ಆss ಮರಿಗಾಳು
ಇತ್ತಾಗ ಒಮ್ಮೆ ಓಡೋಗ್ಯಾವ
ದೇವಾರು ದೇವ

ಆss ಕೋಮಾಲಿ
ಇತ್ತಾಗ ಒಮ್ಮೆ ಓಡಿಬಂದ್ಲು
ದೇವಾರು ದೇವ

ಆss ಮರಿಗಾಳು
ಅದೃಶ್ಯ ತಾವು ಆಗ್ಯಾವಲ್ಲೊ
ದೇವಾರು ದೇವ

ಆss ಕೋಮಾಲಿ
ಮುದಿಯನ ತಲ್ಲೀಗೆ ಬಂದಾಳಲ್ಲಾ
ದೇವಾರು ದೇವ

ಏss ಮುದಿಯವನೇ
ಮರಿಗಾಳು ಅದೃಶ್ಯ ಆಗ್ಯಾವಲ್ಲ
ದೇವಾರು ದೇವ

ಏss ಮುದಿಯವನೆ
ನಮ್ಮ ಅಣ್ಣವರು ಬಡಿಯುತಾರ
ದೇವಾರು ದೇವ

ಏss ಮುದಿಯವನೆ
ಏನಂತ ನಾನು ಹೇಳಾಬೇಕೂ
ದೇವಾರು ದೇವ

ಏss ಕೋಮಾಲಿ
ನನ್ನ ನೀ ಮದುವಿ ಮಾಡಿಕಂತೀಯಾ
ದೇವಾರು ದೇವ

ಏss ಕೋಮಾಲಿ
ಮರಿಗಳು ಬರಂಗ ಮಾಡತೀನೇ
ದೇವಾರು ದೇವ

ಏss ಮಾಯಿಕಾರ
ನಿನ್ನ ನಾ ಮದುವಿ ಮಾಡಕಂತೀನಿ
ದೇವಾರು ದೇವ

ಏss ಮಾಯಿಕಾರ
ಮರಿಗಳು ಬರುವಂಗ ಮಾಡುವಪ್ಪ
ದೇವಾರು ದೇವ

ಏss ಕೋಮಾಲಿ
ನಿಮ್ಮ ಅಣ್ಣೋರತಾಕ ಹೋಗೋಣ ಬಾರೆ
ದೇವಾರು ದೇವ

ಅವರೀಗ
ಅಣ್ಣೋರ ತಲ್ಲೀಗೆ ಹೋಗ್ಯಾರಲ್ಲ
ದೇವರು ದೇವ

ಆss ಕೋಮಾಲಿ
ಅಣ್ಣಾರಿಗೇನಂತ ಹೇಳುತಾಳ
ದೇವಾರು ದೇವ

ಏss ಆಣ್ಣನವರೇ
ಮರಿಗಳು ಈಗ ಕಳೆದೋಗ್ಯಾವ
ದೇವಾರು ದೇವ

ಏss ಅಣ್ಣನವರೇ
ಏನು ಮಾಡಬೇಕು ಈಗ ನಾನು
ದೇವಾರು ದೇವ

ಏss ಕೋಮಾಲಿ
ಅರಮನಿಗೆ ನೀನು ಹೋಗಾವಮ್ಮ
ದೇವಾರು ದೇವ

ಆss ಕೋಮಾಲಿ
ಅರಮನೆಗೆ ತಾನೇ ಬಂದಾಳಲ್ಲ
ದೇವಾರು ದೇವ

ಈss ಕುರುಬರು
ಮುದಿಯನ್ನೇನಂತ ಕೇಳುತಾರ
ದೇವಾರು ದೇವ

ಏss ಮುದಿಯವನೆ
ಮಂದಿ ಕುರಿಗಾಳು ಅರಸುತಾವ
ದೇವಾರು ದೇವ

ಏss ಮುದಿಯವನೆ
ಯಂಗ ಮಾಡಬೇಕು ಇದರನ್ನ
ದೇವಾರು ದೇವ

ಏ ಕುರುಬರೇ
ನಿಮ್ಮ ತಂಗಿತಾಕ ದೋಸ ಐತೆ
ದೇವಾರು ದೇವ

ಏss ಕುರುಬರೇ
ದಾರಿ ಹಿಡಿದು ಹೋಗೋನಿಗೆ ಮಾಡಿಕೊಡ್ರೆ
ದೇವರ ದೇವ

ಏss ಕುರುಬರೇ
ನಿಮ್ಮ ಮರಿಗಾಳು ಬರುತಾವ
ದೇವಾರು ದೇವ

ಏss ಮುದಿಯುವನೇ
ಎಲ್ಲಿ ನಾವು ಅವನ್ನ ಹುಡುಕಾಬೇಕು
ದೇವಾರು ದೇವ

ಏss ಮುದಿಯವನೆ
ಮಂದಿ ಕುರಿಗಾಳು ಅರಸುತಾವೊ
ದೇವಾರು ದೇವ

ಏss ಮುದಿಯವನೆ
ನೀನಗೆನ್ನ ನಾವು ಕೊಡಾತೀವೋ
ದೇವರು ದೇವ

ಏss ಕುರುಬರೆ
ಇಳೇವು ನೇಮಚಾರ ಮಾಡಿ ಕೊಡಬೇಕು
ದೇವಾರು ದೇವ

ಏss ಮುದಿಯವನೇ
ಇಳೇವು ನೇಮಚಾರ ಮಾಡಿ ಕೊಡತೀವಿ
ದೇವಾರು ದೇವ

ಏss ಕುರುಬರೆ
ಇಳೇವು ನೀವು ಮಾಡಿಕೊಡಬೇಕು
ದೇವಾರು ದೇವ

ಭಂಡಾರ ಚೀಲದಾಕೆ ಬಲಗೈಯ ನಿಟ್ಟಾನೆ
ಒಂದಿಡಿ ಭಂಡಾರ ತಗೂದಾನೆ
ದೇವಾರು ದೇವ

ಆss ಮಾಯಿಕಾರ
ಭಂಡಾರ ತಾನು ಹಾರಿಸ್ಯಾನ
ದೇವಾರು ದೇವ

ಆss ಮರಿಗಾಳು
ಓಡೋಡಿ ಹಟ್ಟಿಗೆ ಬಂದಾವಲ್ಲೋs
ದೇವಾರು ದೇವ

ಆss ಕುರುಬರೇ
ಮಂದಿ ಮರಿಗಾಳ ಓಡಿಸ್ಯಾರ
ದೇವಾರು ದೇವ

ಏss ಕುರುಬರೇ
ಸಂತೆನಾ ನಾನ ಮಾಡಿಕಂಡ ಬರ್ತೀನಿ
ದೇವಾರು ದೇವ

ಏss ಕುರುಬರೇ
ಇಳೇವು ನೇಮಚಾರ ಮಾಡಿ ಕೊಡಬೇಕು
ದೇವಾರು ದೇವ

|ಈ| ಮಾಯಿಕಾರ
ಊರು ಹೊರಕಾ ಬಂದಾನಲ್ಲ
ದೇವಾರು ದೇವ

|ಈ| ಮಾಯಿಕಾರ
ಹಣೆಯಲಿ ಭಂಡಾರ ಧರಿಶ್ಯಾನ
ದೇವರು ದೇವ

|ಈ| ಮಾಯಿಕಾರ
ಕೋಟು ಪೇಟೆಗಳು ಹಾಕ್ಯಾನಲ್ಲ
ದೇವರು ದೇವಾ

|ಈ| ಮಾಯಿಕಾರ
ಕೀಲ ಕುದುರೆನ್ನ ಹಿಡುದಾನ
ದೇವಾರು ದೇವ

ಚಂದ್ರಗಿರಿ ಸಂತೆವಳಗೆss
ಮಾಯಿಕಾರಮಲ್ಲ
ಸಂತೆಗೆ ಹೋಗುತಾನss

ಆss ಸಂತೆಗೆ ಬರುತಾನ
ಮಾಯಿಕಾರ ಮಲ್ಲ
ಸಂತೆಯ ಮಾಡುತಾನ

ಆss ಜವಳಂಗಡಿಗೆ ಬಂದನಲ್ಲೇ
ಮಾಯಕಾರ ಮಲ್ಲ
ಜವಳಿ ಸಂತೆಯ ಮಾಡ್ಯಾನೆ

ಆss  ಜವಳಿ ಸಂತೆಯ ಮಾಡ್ಯಾನೆ
ಮಾಯಕಾರ ಮಲ್ಲ
ಮಟ್ಟಿಗೆ ಕಟ್ಟ್ಯಾನಲ್ಲೇ

ಆss ಕಿರಾಣಂಗಡಿಗೆ ಬಂದಾನೆ
ಮಾಯಿಕಾರ ಮಲ್ಲ
ಕಿರಾಣಿ ಸಂತಿಯ ಮಾಡ್ಯಾನೆ

ಆss ಅಂಗಡಿ ಬಿಟ್ಟಾನಲ್ಲೇ
ಮಾಯಕಾರ ಮಲ್ಲ
ಹೂವಿನ ಬಜಾರಕೆ ಬಂದಾನೇ

ಆss ಹೂವಿನ ಬಜಾರಕೆ ಬಂದಾನೆ
ಮಾಯಿಕಾರ ಮಲ್ಲ
ಹೂವನ್ನು ಕಟ್ಟಿಶ್ಯಾನೆ

ಆss ಹೂವಗಳ ಕಟ್ಟಿಶ್ಯಾನೆ
ಮಾಯಕಾರ ಮಲ್ಲ
ಎಲೆಯ ಬಜಾರಕ ಬಂದಾನೆ

ಆss ಎಲೆಯ ಬಜಾರಕೆ ಬಂದಾನೆs
ಮಾಯಕಾರ ಮಲ್ಲ
ಎಲಿಯ ಪೆಂಡಿಯ ಕಟ್ಟಿಶ್ಯಾನೆ

ಆss  ಎಲ್ಲಾ ಸಂತಿಯ ಮಾಡ್ಯಾನೆ
ಮಾಯಕಾರ ಮಲ್ಲ
ಮಟ್ಟಿಗೆ ಕಟ್ಟ್ಯಾನಲ್ಲೆ ss

ಆss  ಮಟ್ಟಿಗೆ ಕಟ್ಟ್ಯಾನಲ್ಲೇ ss
ಮಾಯಿಕರ ಮ್ಲಲ
ಕುದುರೆ ಮ್ಯಾಲೆ ಹಾಕ್ಯಾನಲ್ಲ

ಆss  ಕುದುರೆ ಮ್ಯಾಲೆ ಹಾಕ್ಯಾನಲ್ಲೇ ss
ಮಾಯಿಕಾರ ಮಲ್ಲ
ಕುದುರೆ ಮ್ಯಾಲೆ ಏರ್ಯಾನಲ್ಲೇ ss

ಆss ಕುದುರೆ ಮ್ಯಾಲೆ ಏರ್ಯಾನಲ್ಲೇ ss
ಮಾಯಕಾರ ಮಲ್ಲ
ಕೋಮಾಲೆ ಪಟ್ನಕ್ಕೆ ಬಂದಾನೆ

ಆss ಕೋಮಾಲೆ ಪಟ್ನಕ್ಕೆ ಬಂದಾನೆ
ಮಾಯಕಾರ ಮಲ್ಲ
ಕೋಮಾಲೆ ಮಂತ್ಯಾಕ ಇಳುದಾನೆ

ಆss ಕೋಮಾಲೆ ಮಂತ್ಯಾಕ ಇಳುದಾನೆ
ಮಾಯಾಕರ ಮ್ಲಲ
ಪಕ್ಕದಾಗೆ ಸಂತೆ ಇಳಿಶ್ಯಾನೆ

ಆss ಪಕ್ಕದಾಗೆ ಸಂತೆ ಇಳಿಶ್ಯಾನೆ
ಮಾಯಕಾರ ಮಲ್ಲ
ಪಕ್ಕದಾಗ ಕುಂತನಲ್ಲೇ

ಅವರೇಳು ಮಂದಿ
ತಂಗಿಗೇನಂತ ಹೇಳುತಾರ
ದೇವಾರು ದೇವ

ಏss ಕೋಮಾಲೆ
ತಂಬಿಗೆ ನೀರು ಕೊಡು ಹೋಗೆ
ದೇವಾರು ದೇವ

ಏss ಅಣ್ಣನವರೆ
ಏನಾಗಬೇಕು ಆತ ನಮಗೆ
ದೇವಾರು ದೇವ

ಏss ಕೋಮಾಲೆ
ಆತನಿಗೆ ನಿನ್ನ ಕೊಡೋದಮ್ಮ
ದೇವಾರು ದೇವ

ಪ್ರಪಂಚದ ಒಳಗೆ
ಅಣ್ಣನವರೇ
ಗಂಡೇ ಇದ್ದಿಲ್ಲ ಏನು

ಕಣ್ಣೆರಡು ಸೋರಸ್ಯಾವಲ್ಲೋ
ಅಣ್ಣನವರೇ
ಹಲ್ಲೆರಡು ಬಿದ್ದಾವಲ್ಲೋ

ಆss ಹಲ್ಲೆರಡು ಬಿದ್ದಾವಲ್ಲೋ
ಅಣ್ಣನವರೇ
ತಲೆಯು ಬೆಳ್ಳಗಾಗೈತೆ

ಏss ಕೋಮಾಲೆ
ಸತ್ತ್ಯುಳ್ಳವಂತ ಆತನಮ್ಮ
ದೇವಾರು ದೇವ

ಏss ಕೋಮಾಲೆ
ಮಂದಿ ಮರಿಗಾಳ ಬದುಕಿಶ್ಯಾನ
ದೇವಾರು ದೇವ

ಆss ಕುರುಬರೆ
ನೀರ ತಾವೇ ತಂದು ಕೊಟ್ರು
ದೇವಾರು ದೇವ

ಆss ಕೋಮಾಲೆ
ಮುನಿಸುಗುಟ್ಟು ಮೂಲಿಗೆ ಕುಂತಾಳಲ್ಲ
ದೇವಾರು ದೇವ

ಆss ಕುರುಬರೇ
ಮಂದಿನ್ನ ತಾವೇ ಕರುದಾರೆ
ದೇವಾರು ದೇವ

ಆss ಕುರುಬರೆ
ಕಂಬಳಿ ಗದ್ದಿಗೆ ಹಾಕ್ಯಾರಲ್ಲ
ದೇವಾರು ದೇವ

ಏss ಈಗೀನ್ನ
ಇಳೇವ ನೇಮಚಾರ ಮಾಡಿಕೊಟ್ರು
ದೇವಾರು ದೇವ

ಈss ಮೈಲಾರ ಲಿಂಗ
ಅರಗಿನ ಬಾಳೆ ಕೊಟ್ಟಾನಲ್ಲ
ದೇವಾರು ದೇವ

ಆss ಕೋಮಾಲೆಗೆ
ಅರಗಿನ ಬಳೆ ಹಾಕ್ಯಾರಲ್ಲ
ದೇವಾರು ದೇವ

ಆss ಕೋಮಾಲೆಗೆ
ಮುದ್ರೆ ಬಳೆಯನ್ನು ಜಡುದಾರ
ದೇವಾರು ದೇವ

ಅವ್ವ್ಹರೀಗ
ಕುರಿಹಟ್ಟಿಗೆ ತಾವು ಬಂದಾರಲ್ಲ
ದೇವಾರು ದೇವ

|ಈ| ಮೈಲಾರಲಿಂಗ
ಕುರಿಹಟ್ಟಿಗೆ ತಾನೆ ಬಂದಾನಲ್ಲ
ದೇವಾರು ದೇವ

ಏss ಕುರಬರೇ
ಕುರಿ ಉಣ್ಣೆ ಏನು ಮಾಡತೀರೋ
ದೇವಾರು ದೇವ

ಏss ನಮ್ಮ ತಾತ
ಚಂದ್ರಗಿರಿ ಸಂತಿಗೆ ಹೊಡೆಯತೀವೊ
ದೇವಾರು ದೇವ

ಏss ಕುರುಬರೇ
ಚಂದ್ರಗಿರಿ ಸಂತಿಗೆ ಹೊಡೆಯಲು ಬ್ಯಾಡ್ರಿ
ದೇವಾರು ದೇವ

ಏss ಕುರುಬರೇ
ಕಂಬಾಳಿ ನಾನು ನೇಯತೀನೋ
ದೇವಾರು ದೇವ

ಏss ಮುದಿಯವನೆ
ಕಂಬಾಳಿ ನೀನು ನೇಯೋಗಪ್ಪ
ದೇವಾರು ದೇವ

ಆss ಮಾಯಿಕಾರ
ಏಳು ಮಗ್ಗಾಗಳು ಹೂಡೂತಾನ
ದೇವಾರು ದೇವ

ಆss ಮೈಲಾರಲಿಂಗ
ಏಳು ಮಗ್ಗಾಗಳು ಹಾಕ್ಯಾನಲ್ಲ
ದೇವಾರು ದೇವ

ಆss ಮೈಲಾರಲಿಂಗ
ಬಣ್ಣಕ್ಕೊಂದು ಕಂಬಳಿ ಹಾಕ್ಯಾನಲ್ಲ
ದೇವಾರು ದೇವ

ಆss ಮೈಲಾರಲಿಂಗ
ಏಳು ಕಂಬಾಳಿ ನೇಯುದಾನ
ದೇವಾರು ದೇವ

ಆss ಕೋಮಾಲೆಗೆ
ಏನಂತ ತಾನು ಹೇಳಿ ಕಳುಸ್ತಾನ
ದೇವಾರು ದೇವ

ಏss ಕುರುಬರೇ
ನಿಮ್ಮ ತಂಗೀನ ಕಳಿಸಿ ಕೊಡ್ರೋ
ದೇವಾರು ದೇವ

ಏss ಕುರುಬರೇ
ಕಂಬಾಳಿ ತಾನು ಮಾರಿಕಂಡ ಬರ್ತಾಳೆ
ದೇವಾರು ದೇವ

ಏss ಕುರುಬರೇ
ಕಂಬಾಳಿ ನಾನು ನೇಯತೀನ್ರೋ
ದೇವಾರು ದೇವ

ಆss ಕುರುಬರು
ತಂಗಿಗೇ ಅವರು ಹೇಳ್ಯಾರಲ್ಲ
ದೇವಾರು ದೇವ

ಏss ಕೋಮಾಲೆ
ಕಂಬಾಳಿ ನೀನೂ ಮಾರಿಕಂಬಾರೇ
ದೇವಾರು ದೇವ

ಆss ಮಾಯಿಕಾರ
ಕಂಬಾಳಿ ತಾನು ನೇಯುತಾನ
ದೇವಾರು ದೇವ

ಆss ಕೋಮಾಲೆ
ಮಗ್ಗತಲ್ಲೀಗೆ ಬಂದಾಳಲ್ಲ
ದೆವಾರ ದೇವ

|ಈ| ಮಾಯಿಕಾರ
ಕೋಮಾಲೆಗೇನಂತ ಹೇಳುತಾನ
ದೇವಾರು ದೇವ

ಏss ಕೋಮಾಲೆ
ಬಣ್ಣಕ್ಕೊಂದು ಕಂಬಳಿ ನೇಯ್ದೀವಿ
ದೇವಾರು ದೇವ

ಏss ಕೋಮಾಲೆ
ಏಳು ಕಂಬಾಳಿ ಕಟ್ಟೇನೀಗ
ದೇವಾರು ದೇವ

ಏss ಕೋಮಾಲಿ
ಏಳಾಣೆಗೊಂದು ಕೊಡಬೇಕೇ
ದೇವಾರು ದೇವ

ಏss ಕೋಮಾಲಿ
ಒಂಟೆ ಕಂಬಳಿ ಮಾರಬ್ಯಾಡ
ದೇವಾರು ದೇವ

ಏss ಕೋಮಾಲಿ
ಒಪ್ಪಂದ ಇವನ ಕೊಟ್ಟುಬಾರೇ
ದೇವಾರು ದೇವ

|ಈ| ಮಾಯಿಕಾರ
ಹಿಂಗೇಳಿ ಮಟ್ಟೆ ಎತ್ತ್ಯಾನಲ್ಲ
ದೇವಾರು ದೇವ

ಆss ಕೋಮಾಲಿ
ಚಂದ್ರಗಿರಿ ಸಂತಿಗೆ ಬಂದಾಳಲ್ಲ
ದೇವಾರು ದೇವ

ಆss ಕೋಮಾಲಿ
ಕಂಬಳಿ ಬಜಾರಕ ಬಂದಾಳಲ್ಲ
ದೇವಾರು ದೇವ

ಆss ಕೋಮಾಲಿ
ಕಂಬಾಳಿ ಗಂಟು ಇಳಿಸ್ಯಾಳ
ದೇವಾರು ದೇವ

ಆss ಕೋಮಾಲಿ
ಗಂಟುಗಳ ತಾನೆ ಬಿಚ್ಯಾಳಲ್ಲಾ
ದೇವಾರು ದೇವ

ಏss ಹೀಗಿನ್ನ
ಒಬ್ಬ ಯಜಮಾನ ಬಂದಾನಲ್ಲಾ
ದೇವಾರು ದೇವ

ಏss ತಂಗೆಮ್ಮ
ಕಂಬಾಳಿ ಬೆಲೆಯು ಎಷ್ಟು ಈಗ
ದೇವಾರು ದೇವ

ಏss ನಮ್ಮ ತಾತ
ಏಳಾಣೆಗೊಂದು ಕೊಡತೀನೊ
ದೇವಾರು ದೇವ

ಏss ನಮ್ಮ ತಾತ
ಒಂಟಿ ಕಂಬಾಳಿ ಕೊಡದಿಲ್ಲ
ದೇವಾರು ದೇವ

ಏss ನಮ್ಮ ತಾತ
ಒಪ್ಪಂದ ನಾನು ಕೊಡತೀನೋ
ದೇವಾರು ದೇವ

ಏss ತಂಗೆಮ್ಮ
ಒಪ್ಪಂದ ನನಗ ಬೇಕಾಗಿಲ್ಲ
ದೇವಾರು ದೇವ

ಏss ಈಗೀನ್ನ
ನಮ್ಮ ತಾತ ಅದನ ಹೇಳಿ ಕಳಿಶ್ಯಾನ
ದೇವಾರು ದೇವ

ಈss ಮಾಯಿಕಾರ
ಕುರುಬರನೇನಂತ ಕೇಳುತಾನ
ದೇವಾರು ದೇವ

ಏss ಕುರುಬರೇ
ಗುಡ್ಡದ ಮಲ್ಲಪ್ಪನ ಜಾತರೀಗೆ ಹೋಗಾತೀನಿ
ದೆವಾರ ದೇವ

ಏss ನಮ್ಮ ತಾತ
ತಣ್ಣಗ ನೀನೂ ಹೋಗಿ ಬಾರೋ
ದೇವಾರು ದೇವ

ಆss ಮಾಯಿಕಾರ
ಊರು ಹೊರಾಕ ಬಂದಾನಲ್ಲ
ದೇವಾರು ದೇವ

ಆss ಮಾಯಿಕಾರ
ಕೀಲ ಕುದುರಿನ್ನ ಹಿಡುದಾನ
ದೇವಾರು ದೇವ

ಆss ಮಾಯಿಕಾರ
ಕೋಟು ಪೇಟಗಳು ಹಾಕ್ಯಾನಲ್ಲ
ದೇವಾರು ದೇವ

ಆss ಮಾಯಿಕಾರ
ಕುದುರೆ ಮ್ಯಾಲೆನ್ನ ಏರ್ಯಾನಲ್ಲ
ದೇವಾರು ದೇವ

ಆss ಮಾಯಿಕಾರ
ಚಂದ್ರಗಿರಿ ಸಂತೀಗೆ ಬಂದಾನಲ್ಲ
ದೇವಾರು ದೇವ

ಆss ಮಾಯಿಕಾರ
ಕಂಬಳಿ ಬಜಾರಕೆ ಬಂದಾನಲ್ಲ
ದೇವಾರು ದೇವ

ಆss ಮಾಯಿಕಾರ
ಕಂಬಳಿ ತಲ್ಲೀಗೆ ಬಂದಾನಲ್ಲ
ದೇವಾರು ದೇವ

|ಈ| ಮಾಯಿಕಾರ
ಮತ್ತೊಂದು ರೂಪ ಆಗ್ಯಾನಲ್ಲ
ದೇವಾರು ದೇವ

ಆss ಕೋಮಾಲೆ
ಗುರುತುಗಳ ತನಗೆ ಸಿಗವಲ್ಲದು
ದೇವಾರು ದೇವ

|ಈ| ಮಾಯಿಕಾರ
ಏಳು ಕಂಬಾಳಿ ಮುಗುಸ್ಯಾನ
ದೇವಾರು ದೇವ

|ಈ| ಮಾಯಿಕಾರ
ಬೆಳ್ಳಿ ರೂಪಾಯ ಎಣಿಸ್ಯಾನ
ದೇವಾರು ದೇವ

|ಈ| ಗೊರವಯ್ಯ
ಒಪ್ಪಂದ ತಾನೇ ಮುಗುಸ್ಯಾನ
ದೇವಾರು ದೇವ

|ಈ| ಮಾಯಿಕಾರ
ಕುದುರೆ ಮ್ಯಾಲನ್ನ ಹಾಕ್ಯಾನಲ್ಲ
ದೇವಾರು ದೇವ

ಆss ಮಾಯಿಕಾರ
ನಿಜರೂಪ ತಾನೇ ತಾಳ್ಯಾನಲ್ಲ
ದೇವಾರು ದೇವ

|ಈ| ಮಾಯಿಕಾರ
ಕೋಮಾಲಿನ ತಾನೇ ಕರೆಯುತಾನ
ದೇವಾರು ದೇವ

|ಈ| ಮಾಯಿಕಾರ
ರಟ್ಟೆಗಳು ತಾನೆ ಹಿಡಕೊಂಡ
ದೇವಾರು ದೇವ

|ಈ| ಮಾಯಿಕಾರ
ಕುದುರೆ ಮ್ಯಾಲನ್ನ ಹಾಕೊಂಡಾನ
ದೇವಾರು ದೇವ


|ಈ| ಮಾಯಿಕಾರ
ತನ್ನ ಗುಡ್ಡಕ್ಕ ಹೊತ್ತಗಂಡು ಬಂದ
ದೇವಾರು ದೇವ

|ಈ| ಮಾಯಿಕಾರ
ತನ್ನ ಗುಡ್ಡಕ್ಕೆ ಕರಕಂಡ ಬಂದ
ದೇವಾರು ದೇವ

|ಈ| ಮಾಯಿಕಾರ
ಗುಡ್ಡದಾಗೆ ತಾನೆ ನಿಂದಿರಿಶ್ಯಾನೆ
ದೇವಾರು ದೇವ

ಆss ಮಾಯಿಕಾರ
ತನ್ನ ಗುಡಿ ಮುಂದಕ ಬಗಲು ಹೋದ
ದೇವಾರು ದೇವ

ಹೀಂಗs ಮೈಲಾರಲಿಂಗ ತನ್ನ ಗುಡಿಮುಂದಕ ಬಗಲು ಹೋದ. ಸ್ವಂತ ಹೆಂಡತಿ ತುಪ್ಪದ ಮಾಳಮ್ಮ ಎರಡು ತಂಬಿಗೆ ನೀರು ತಗಂಡು ಬಂದ್ಲು. ಎರಡು ತಂಬಿಗೆ ಯಾರಿಗೆ ತಗಂಬಂದಿಯಾ ನಾನಿರುವವನು ಒಬ್ಬನೆ ಎನ್ನುತ್ತಾನೆ ಮೈಲಾರಲಿಂಗ. ನಿನ್ನ ಹಿಂದೆ ಬಂದೀದಾಕಿಗೆ ಒಂದು ಚೆಂಬು ನಿನಗ ಒಂದು ಚೆಂಬು. ತಾನೊಂದು ತೊಳಕಂಡು ಗುಡಿಯಾಕ ಹೋದ. ಆ ಕೋಮಾಲೆ ಕದಗಳು ಮುಟ್ಟಿದರೆ ಶಬ್ದ ಆಗುವಂತೆ ಮಾಡಿದ್ದಾಳೆ. ಇವರು ಗುಡಿಯಲ್ಲಿ ಮಲಗಿದ್ದಾಗ ಮೈಲಾರಲಿಂಗಪ್ಪ ಎದ್ದು ಗಂಗಿತಾಕೆ ಬರದಕೆ ಬಾಗಿಲು ತೆಗೆಯುತ್ತಾನೆ. ಆ ಬಾಗಿಲು ಶಬ್ದ ಜಾಸ್ತಿ ಆಗಿ ಮಾಳಮ್ಮನು ಎದ್ದಾಳೆ. ಎಲ್ಲಿಗೆ ಹೋಗುತ್ತೀರಿ ಅಂತಾ ಮೈಲಾರಲಿಂಗಪ್ಪನನ್ನು ಕೇಳಿದಳು. ಮೈಲಾರಲಿಂಗಪ್ಪನು ಸೆಕೆ ಆಗುವುದರಿಂದ ಹೊರಗ ಹೋಗಿ ಮಲಗೋನು ಅಂತಾ ಹೋಗ್ತಾ ಐದೀನಿ ಅಂತ ಹೇಳ್ತಾನ. ನಾನು ಬರ್ತೀನಿ ಹೊರಗ ಅಂತಾ ಮಾಳಮ್ಮ ಅಂತಾಳ. ಇನ್ನೊಂದು ದಿವಸ ಮೈಲಾರಲಿಂಗನ ಒಳಗ ಮನಿಗಿಸಿ ಬೀಗ ಹಾಕಿ ತಾನು ಹೊರಗೆ ಮಲಗಿದ್ದಾಳೆ. ಗಂಗಿ ಮಾಳಮ್ಮತಾಕ ಹೋಗದಂಗ ಗಂಟು ಬಿದ್ದಾಳೆ. ಮೈಲಾರಲಿಂಗಪ್ಪನು ಎದ್ದು ಭಂಡಾರ ಚೀಲದಾಕೆ ಬಲಗೈನಿಟ್ಟು ಮೂರಿಡಿ ಭಂಡಾರ ತೆಗೆದು ದೊಡ್ಡ ಗುಂಡುಗೆ ಒಗದಾನ. ಆ ಗುಂಡು ಸೀಳೈತೆ. ಆ ಸೀಳಿದ ಗೂಡಿನಲ್ಲಿ ಗಂಗೀತಾಕ ಬಂದಾನಲ್ಲ. ಇಲ್ಲಿಗೆ ಕತೆ ಮುಗಿಯಿತು.







## ಮಾಳಿಂಗರಾಯ

ಗುರು ಶಿಷ್ಯರು ಇಬ್ರು ಜೋಡಣ್ಣಾss
ಅನಾದಿಯಿಂದ ಅವರವರ ಅವತಾರss
ಯಾವುದಿತ್ತು ಕೇಳ್ರಣ್ಣss
ನಿರ್ವಿಕಾರಾಗಿ ಇದ್ದ ಬೀರಣ್ಣs
ಜ್ಞಾನಾಗಿ ಬೆಳದಿದ್ದೋ ಮಾಳಣ್ಣಾs

ಪಂಚತತ್ವ ಪರಿಪೂರ್ಣಾs
ಕೂಡಿದಾಗs
ಬಯಲಿನ ಬಯಲಿದ್ದಾರೇನಾs
ಪರಬ್ರಹ್ಮ ಅನಿಸಿದ ಬೀರಣ್ಣಾs
ಆದಿ ಬಸವಣ್ಣಾಗಿ ಮಾಳಣ್ಣಾs

ನೀರೇ ನಿರಂಕಾರದಲೀ
ನಿಜ ರೂಪ ತೋರಿ ಬಂದ್ರುs
ಅವರೇನಾs

ಎಷ್ಟೋ ಕಾಲ ಕೂಡಿ ಬಂದಾರೇನಾs
ಗುರು ಶಿಷ್ಯರ ಕೇಳಿರಿ ವರಣಾs
ಎಷ್ಟು ಪರೀಲಿ ಹಾಡಿದರಪ್ಪಾs
ಸದಾ ಶಿವ ಒಬ್ಬ ತಾನs
ಹಾಲಮತಕs
ಮೂಲ ದೇವರೇನಾs

ಪದ್ಮಗೊಂಡಾಗಿ ಬಂದೋs
ಮಾಳಣ್ಣಾs
ಪದುಮಗೊಂಡನ ಗುರುs
ಆದಿನಾಥಾಗಿ ಬಂದಿದ್ದs
ಗುರುವ ಬೀರಣ್ಣಾs

ಶಿವಗೇನೊ ಅನಿಸಿದ ಮಾಳಣ್ಣಾs
ವೀರಭದ್ರಾಗಿ ಇದ್ದೋs
ಬೀರಣ್ಣಾs
ಶಿವಗಣದ ಅಧಿಪತಿ ಆಗಿ
ಇರತಿದ್ರೋs
ಕೈಲಾಸ ಅವರ ಠಿಕಾಣಾs

ದೇವಗೇನೋ ಅನಿಸಿದ ಮಾಳಣ್ಣಾs
ದೇವ ಲೋಕಕೆ ಅವನ ವರನಾs
ವರನ ಕೇಳೀs
ಗುರು ಅಗ್ನಿಸುರನಾದಾs
ಕೇಳರಿ ಗುರು ಬೀರಣ್ಣಾs

ಅವತಾರ ಕಳಿತ ಬಂದಾರೇನಾs
ಜಗ ಉದ್ಧಾರ ಕರ್ತೃ ಅವರೇನಾs
ವೀರಭದ್ರನ ಅವತಾರ ಬಿಟ್ಟು
ಹುಟ್ಟಿ ಬಂದುs
ಅವತರಿಸಿದ ಬೀರಣ್ಣಾs

ಗಿಳಿರಾಮ ಆಗಿದ್ದ ಮಾಳಣ್ಣಾs
ನೋಡಿ ಕೊದಲಿಗಿ ನಂದ್ಯಾನ ವನಾs
ನಂದ್ಯಾನ ವನದಾಗs
ಬೀರಪ್ನ ಸಂಗಡಾss
ಜೋಡಾಗಿ ಇದ್ದೋ ಮಾಳಣ್ಣಾs

ದೇವರ ಗೆಳೆಯಽ
ಬಪ್ಪಣ್ಣಾ ಮಾಳಣ್ಣಾಽ
ಶಿವಗೊಂಡಿದ ಗುರು ಬೀರಣ್ಣಾಽ
ಮುಂಗಿ ಪಟ್ಟಣ ಊರಽ
ಮೂರೂರ ಸೀಮಿಯಲೀಽ
ಐಕ್ಯ ಆಗಿದ್ದೊ ಬಪ್ಪಮ್ಣಾಽ

ಅವತಾರ ಮುಗಸಿದೋ ಬಪ್ಪಣ್ಣಾಽ
ಮುಂದ ಅನಸಿದ ಸಿದ್ಧ ಮಾಳಣ್ಣಾಽ
ಆದಿಕಾಲದಿಂದಽ
ಗುರುವ ಶಿಷ್ಯರುಽ
ಜೋಡಾಗಿ ಇದ್ರು ಅವರೇನಾಽ
ಗುರು ಶಿಷ್ಯರ ವರಣಾಽ

ಕವಿ ಅಡಿವೆಪ್ಪ ಮಾರಾಯ್ರು ಕೂನಾಽ
ಹುಲಜಂತಿ ಮಠದಲೀಽ
ಸಾರೀ ಹೇಳ್ತಾರಽ
ಕೇಳರಿ ಅವರ ಕಥನಾಽ

****

ಹಾಲಮತ
ಹೆಂಗಾಯ್ತು ಹಾಲಮತೋಽ
ತಿಳಿಕೊಂಡಿದ್ರ ಮಾತಿನ ಮರ್ಮಾಽ
ತಿಳಿದೀತೋಽ

ಬಲ್ಲವರೆಲ್ಲ ತಿಳಕೋರೀಽ
ಇದರ ಮಾತಿನ ಅರ್ಥೋಽ
ಅರ್ಥ ತಿಳಿಯದೇಽ
ವ್ಯರ್ಥ ಹಾಡಿದರಽ
ಗುರುತೆಂಗ ಆಗೋದೋಽ

ಪ್ರಥಮದಲ್ಲಿ ಸೃಷ್ಟಿ
ನಿರ್ಮಾಣ ಆದೀತೋಽಽ
ಎಂಬತ್ನಾಲ್ಕು ಲಕ್ಷ
ಜೀವರಾಶಿ ಹುಟ್ಟೀತೋಽಽ
ನಾಲ್ಕು ಕಾಣಿ ತಯಾರಾಗಿ ಬತ್ತೋಽಽ
ಅಂಡಜಾ ಪಿಂಡಜಾಽ
ಜಲಜಾ ಉದ್ವಿಜಾಽ
ಬೆಳಿ ಬಾರಲೇ ಬತ್ತೋಽಽ

ಸೋಸಿ ನೋಡಿ
ಜಾತಿ ಮಾಡಿ
ಪರ ಪರತೋಽಽ
ಗಂಡಕ ಹೆಣ್ಣ ಒಂದಽ
ಜೋಡಿ ಆದೀತೋಽಽ

ಇಪ್ಪತ್ತೊಂದು ಲಕ್ಷ
ಪಿಂಡಾಂಡ ಪರತೋಽಽ
ಪಿಂಡಾಂಡ ಜಾತಿ
ಹಾಲ ಕುಡಿದ ಮುಂದಽ
ಅನಸಿತೋ ಹಾಲಮತೋಽಽ

ಯಾವ್ಯಾವ ಜಾತಿ
ಹೆಂಗ ಆದೀತೋಽಽ
ಕುರಬರಗಿ ಯಾಕಽ
ಹಾಲಮತದವರಂತೋಽಽ
ತಿಳಿದಷ್ಟು ಹಿರಿಯರು
ಹೇಳೀದ ಮಾತೋಽಽ

ದಂಥೆದಿಂದ ಮುಂದಽಽ
ಜಾತಿ ಪಂಗಡವಾಯ್ತೋಽಽ
ಮಾನವ ಕುಲಕಂತೋಽಽ

ಮೂಲ ಬಡ್ಡಿಯಲ್ಲಿSS
ಆದ ಹಾಲಮತೋSS

ಪಿಂಡಾಂಡ ಜಾತೀS
ಹಾಲುಕುಡದ ಬೆಳದಿತೋSS
ಮಾನವನಲ್ಲಿ ಭೇದS
ಸುರುವ ನಡದಿತೋSS
ನಾ ಶ್ರೇಷ್ಟ ನೀ ಶ್ರೇಷ್ಟ ಅನ್ನುತS
ಜನ ಮುಂದS
ಮತಗಳ ಬೆಳಸೀತೋSS

ದಂಧೆದಿಂದ ಅವರS
ಜಾತಿನ ಎಬಿಸಿತೋSS
ತಮ್ಮ ತಮ್ಮಲ್ಲಿ ತಾವುS
ವಿಚಾರ ಮಾಡೂತೋSS

ಶಿವನ ಧ್ಯಾನಾ ಯಾವತ್ತಿತೋSS
ಮುಕೈಸುರನ ಕುರು
ತಿಳಿದವನೆ ಜಾಣಾS
ಕರದರ ಕುರು ಬಂತೋSS

ಭಗವಂತನ ಮ್ಯಾಲ
ಭಕ್ತಿ ಯಾವತ್ತೋSS
ನಂಬಿದ ಕುರುಬನS
ನೀತಿ ಸುದ್ದಿತ್ತೋSS
ಗುರುವಿನ ಮೇಲೆS
ಹಂಬಲ ಬಾಳಿತ್ತೋSS

ಹಾಲಿನಂತ ಇವನS
ಅಂತಃಕರಣ ನೋಡಿ
ಅಂದಾರ ಹಾಲಮತೋSS

ಇಲ್ಲಿಗಿ ಒಂದ ಸಂಧ ಮುಗದಿತೋss
ಕುರು ತಿಳಿದವನs
ಕತಿ ಮುಂದ ಉಳದಿತೋss

ಅಡಿವೆಪ್ಪ ಮಾರಾಯಾs
ಹೇಳಿದ ಮಾತೋss
ಹಾಲಮತಕ ಮೇಲs
ಗದ್ದಗಿ ಹುಲಜಂತಿs
ಹಿರಿಯರು ಕೊಟ್ಟ ಮಾತೋss

****

ದೇವರ ಮಾತೋss
ಆಡ್ವವರs ತಂತೋss
ಶಿವ ಪಾರ್ವತೀs

ಕೂಡ್ಯಾರೋ ಕಾಂತೋss
ಪಾರ್ವತಿ ಶಂಭುಗs
ಹೇಳ್ಯಾಳೋ ಮಾತೋss

ಭೂಮಂಡಲದಾಗ
ಕಾಡ ರುದ್ರ ಭೂಮಿ
ನೋಡಿ ಬರುವುನಂತೋss

ಶಿವಪಾರ್ವತಿ
ಜೋಡಿ ಸತಿ ಪತಿ
ಇಳಿದ ಬಂದರೋs
ಸತ್ಯ ಯುಗದ ಮಾತೋss

ಹಕ್ಕಿ ಪಿಕ್ಕಿ
ಸುಳುವ ಇಲ್ಲದಂಗಾಯ್ತೋss
ಕೆಟ್ಟ ಕಾಡ ರುದ್ರ ಭೂಮಿ
ನೋಡ್ಯಾಳೊ ದೇವೀs
ಮನಾ ನಿರಾಶವಾಯ್ತೋss

ಅಂತರ ಜ್ಞಾನದಿಂದಽ
ತಿಳಿಕೊಂಡ ಮಾತೋಽಽ
ಮಾಯಾದ ವನಾಽ
ಒಂದು ಮಾಡಬೇಕಂತೋಽಽ
ಆಗಿಂದಾಗ ವನಾ ತೈಯಾರಾಯ್ತೋಽಽ

ಮಾಯದ ವನಾ ನೋಡಿಽ
ಸಂತೋಷ ಪಡದಾಳ ದೇವಿ
ಮನಾ ಹರುಷವಾಯ್ತೋಽಽ
ದೇವರ ಮಹಿಮಾಽ
ಕೇಳುವವರ ತಂತೋಽಽ

ಶಿವನ ಚೈತನ್ಯ
ಕುಲಮಿ ಇಂಚ ಹೊಡದಂಗಾಯ್ತೋಽಽ
ಪಾರ್ವತಿಗೆ ಮೋಹ ಹೆಚ್ಚವಾಯ್ತೋಽಽ
ಮೋಹ ಹೆಚ್ಚಾಗೀಽ
ಮಲಿಹಾಲ ಸುರಿತಾವೋಽ
ಇದು ಹೆಂತ ವಿಪರೀತೋಽಽ
ದೇವರಽ ಮಾತೋಽಽ
ಕೇಳ್ರಿ ಇವತ್ತೋಽಽ
ಪಾರ್ವತಿ ಮನಕ
ಹುಚ್ಚ ಹಿಡದೀತೋಽಽ
ಭೂದೇವಿ ಕರದ
ಹೇಳ್ಯಾಳೋ ಶಾಂತೋಽಽ
ಮೋಹ ಹೆಚ್ಚಾಗಿ
ಮಲಿಹಾಲ ಸುರಿತಾವೋಽಽ
ಹೆಂಗ ಮಾಡುನಂತೋಽಽ

ಇಬ್ಬರು ಕೂಡಿ ಮಾತಾಡಿಕೋತೋಽಽ
ಮಣ್ಣಿನ ಕಾಯಾ
ಮಣ್ಣಿಗಿ ಕೊಡುವುನಂತೋಽಽ

ಹುಟ್ಟಿಸಿ ಬಿಡುವುನಂದ
ಮಾತೋಽಽ

ಮೂರ ತರದ ಮಣ್ಣ
ತಗೊಂಡ ಜೋಡು ಗೊಂಬಿ
ತಯ್ಯಾರ ಮಾಡ್ಯಾಳ ಸ್ವಂತೋಽಽ
ಮಾಯಕ ಮಾದೇವ
ಮೆಚ್ಚಿದ ಮಸ್ತೋಽಽ
ಜೀವಕಳೆ ತುಂಬಿಸಿ ಬಿಟ್ಟ
ಆ ಹೊತ್ತೋಽಽ

ಹೆಸರ ಇಟ್ಟಾಳ ಹಾಡುತೋಽಽ
ಮೋಹ ಹಾಲಿನಲ್ಲಿ
ಹುಟ್ಟಿ ಬಂದೀರಿ ನೀವು
ಮುದಗೊಂಡ ಮುದ್ದವ್ವಂತೋಽಽ

ಭಗವಂತನ ಮ್ಯಾಲ
ಭಕ್ತಿ ಯಾವತ್ತೋಽಽ
ಸತಿ ಪತಿ ಮಾಡೀಽ
ಬಿಟ್ಟ ಭಗವಂತೋಽಽ

ದೇವರ ಮಹಿಮಾ
ಮಾನವಗ್ಹಿಂಗ ತಿಳದಿತೋಽಽ
ಮುದಗೊಂಡ ಮುದ್ದವ್ವ
ಈಶ್ವರನ ಕುರು
ತಿಳಕೊಂಡ್ರೊ ಸ್ವಂತೋಽಽ

ಹಾಲಿನಂತ ನನ್ನ
ಅಂತಃ ಕರುಣಿತ್ತೋಽಽ
ಹಾಲಿನಲ್ಲಿ ನಿಮ್ಮ
ಜಲ್ಮ ಆಗೈತೋಽಽ

ನಿಮ್ಮ ಹಿಂದೆ
ಬೆಳಿಲೆಪ್ಪ ಹಾಲಮತೋss

ಇಷ್ಟು ಮಾತ್ರ ವರವ ಕೊಟ್ಟು
ಪರಮೇಶೂರ ಹೋಗಿದs
ಭಗವಂತೋss
ಇಲ್ಲಿಗೆ ಒಂದು
ಸಂಧ ಮುಗದಿತೋss
ಮುದ್ದಗೊಂಡನ ಕತಿ
ಮುಂದ ಉಳಿದಿತೋss
ನುಡಿಗಿ ನುಡಿ
ಪೋಣಿಸಿದಂಗ ಬಂತೋss
ಹಾಲುಮತಕ ಗದ್ದಗೀs
ಹುಲಜಂತಿ ಅಡಿವೆಪ್ಪ
ಹೇಳಿದ ಮಾತೋss

****

ಆದಿ ಕಾಲದಲ್ಲಿ
ಮುದ್ದವ್ವ ಮುದಗೊಂಡs
ಪರಮೇಶುರನs
ಮಾನಸ ಪುತ್ರರಾಗಿ
ಬೆಳಿತಾ ಇದ್ದಾಗs
ಆರೇಳ್ನೂರು ವರುಷ
ದಿನಾ ಉಡುಗಿದವು
ಮುದ್ದವ್ವ ಸಂತಾನಿಲ್ಲದ್ದಕ್ಕಾಗಿ
ಸತತ ಅಕೀ ಮನಾ
ಮರಗತಾ ಇತ್ತು
ಭಗವಂತಾ ಅವರs
ಭಕ್ತೀಗಿ ಪ್ರಸನ್ನವಾಗೀs

ಆ ಜಾಗೃತಪುರವೆಂಬ
ಪಟ್ಟಣದಲ್ಲಿ ಬಂದs
ಅವರ ಭಕ್ತಿಗಿ ಒಲಿದುs
ಏಳು ಉತ್ತತ್ತಿ ಹಣ್ಣನ್ನು
ಆ ಮುದ್ದವ್ವ ಉಡಿಯಲ್ಲಿ ನೀಡೀs
ಬಕ್ಷಣ ಮಾಡು ತಾಯಿ
ಅಂತ್ಹೇಳಿ ಅವ ಸ್ವರ್ಗಲೋಕಕ್ಕs
ಹೋಗಿ ಬಿಟ್ಟು
ಆ ಏಳು ಉತ್ತತ್ತಿ ಹಣ್ಣನ್ನs
ಬಕ್ಷಣ ಮಾಡಿದ ಕೂಡ್ಲೆs
ಅವಳ ಉದರದಿಂದs
ಯೋಳು ಮಂದಿs
ಪುತ್ರರು ಹುಟ್ಟಿದ್ರು
ಅವರು ಯಾರು ಅಂದ್ರs
ಆದಿಗೊಂಡ ಅನಾದಿಗೊಂಡ
ಕಾಲಿಲಕ್ಕೊಂಡ ಕೂಡು ಒಕ್ಕಲಿಗ್ಯಾ ಖ್ಯಾಮಗೊಂಡ
ದ್ಯಾಮಗೊಂಡ ನ್ಯಾಮಗೊಂಡ
ಕಡೀ ಹುಟ್ಟಿ ಕತ್ತು
ಉಂಡಾಡಿ ಗೌಡ ಪದುಮಗೊಂಡs
ಆ ಉಂಡಾಡಿ ಪದುಮಗೊಂಡ
ಎಂಬುವನೇ ಆ ಮಾಳಿಂಗರಾಯನs
ಮುಂದಿನ ಅವತಾರs
ಆದಿಕಾಲದಲ್ಲಿ ಬಸವಣ್ಣಾs
ಆದಿ ಅವತಾರ ಬಿಟ್ಟು
ಪದುಮಗೊಂಡನs ಅವತಾರ ತೋಟ್ಟಾs

****

ಮಾಳಿಂಗರಾಯನ ವಂಶ
ಆಡುವವರ ತಂತೋss

ಕೇಳರಿ ಸಿದ್ಧಾಂತೋಽಽಽ
ಕಳ್ಳಿಗಿ ಕಳ್ಳಾಽ
ತೊಡಕ ಬಿದ್ದಿತೋಽಽಽ
ಬೆಳಿಯುತ ಬಂದಿತೋಽಽಽ
ಹಾಲಮತೋಽಽಽ

ಮುದ್ದಗೊಂಡನ ಬೆಳೆ
ಬೆಳೆಯುತ ನಡಿತೋಽ
ಭವದಾಗಽ
ಕೇಳರಿ ವಿಪರೀತೋಽಽಽ

ಜಾಗ್ರತಪುರ ಇವರ ಪಟ್ಟಣವಿತ್ತೋಽಽಽ
ಜಗತ್ಯಕೆ ಎಲ್ಲಾ ಜಾಹೀರಾತೋಽಽಽ
ಪದುಮಗೊಂಡನ ಕತಿ
ಕೇಳ್ರೆಪ್ಪಾ ಕುಂತೋಽಽಽ

ಐದು ಮಂದಿ ಸತಿಯರಽ
ಯಾರಿದ್ರೋ ಅವಾಗೋಽಽಽ
ಮಹಾನ ಪತಿಯ ಹೊರತೋಽಽಽ
ಸತಿ-ಪತಿ ಸದ್ಗತಿ ಸಂಪತ್ತೋಽಽಽ
ಪ್ರೀತಿ ಲೋಭದಿಂದಽ
ಕಾಲ ಕಳಿಯುತ್ತೋಽಽಽ

ಮಕ್ಕಳ ಹಡದಾರ ರೂಪವಂತೋಽಽಽ
ಸಿದ್ಧ ಮಾಳಪ್ನ ವಂಶ ಹಬ್ಬಿತೋಽಽಽ
ಇದೇ ಬಡ್ಡಿ ಮಾತೋಽಽಽ

ದೇವರಾಜ ಎಂಬುವ
ಹುಟ್ಟಿ ಬಂದ ಕರತೋಽಽಽ
ಅವನಿಂದ ದೂಪಕ ದೀಪಕ ಅಂತೋಽಽಽ

ವಂಶ ಬೆಳಿಯುತ ಮುಂದ ಬಂತೋಽಽ
ದೂಪಕ ರಾಯನಿಂದೋಽಽ
ಆಣಕ ಜಾಣಕ ರಾಯಾರು ಹುಟ್ಯಾರಂತೋಽಽ

ಆಣಕನ ವಿಸ್ತಾರಾ
ಕೇಳರೀ ಇವತ್ತೋಽಽ
ಜಾಣಕನ ಮನೆತನಾ ನಷ್ಟವಾದಿತೋಽಽ
ಅಣ್ಣ ತಮ್ಮ ಇದ್ರು ಸತ್ಯವಂತ್ರೋಽಽ

ಆಣಕನ ಹೊಟ್ಟಿಲೇ ಸೇರಿ ಬಿಂಪ್ರಾಯಾಽ
ಹುಟ್ಟಿ ಬಂದನೋ ಕರತೋಽಽ
ಆನಿಗೊಂದಿಗಿ ಇವನ ರಾಜಕಿತ್ತೋಽಽ
ಆಲಕ ಪಾಲಕ ಎಂಬುವರಂತೋಽಽ
ಹುಟ್ಟಿ ಬಂದ್ರೋಽ
ಇದು ಬಡ್ಡಿ ಮಾತೋಽಽ

ಆಲಕನಿಂದ ಕರಿಗೌಡ ಕೆಂಚಗೌಡಽ
ಪಟ್ಟದ ಒಡಿಯರ ಮಾತೋಽಽ
ಕರಿಗೌಡರ ಕೇಳರೀ ಮಾತೋಽಽ
ಆನಿಗೊಂದಿ ಬಿಟ್ಟು
ಬಂದಾರ ಆ ಹೊತ್ತೋಽಽ

ಗುರುವಿನ ಕಿಲ್ಲಾರ್ಕ ಆ ಹೊತ್ತೋಽಽ
ಗುರುವಿನ ಗೋವುಗಳ ಕಾಯುತ್ತೋಽಽ
ಗುರುವಿನ ಕಿಲ್ಲಾರ ಕಾವುತ್ತೋಽಽ
ತುಕ್ಕಪ್ಪರಾಯ್ಗ ಸೋಮರಾಯ್ಗಽ
ಜನುಮ ಕೊಟ್ಟರೋಽ
ಚಲುವ ಚಂದ್ರ ಜೋತೋಽಽ

ಸಿದ್ಧ ಮಾಳಪ್ಪನ ವಂಶದ ಮಾತೋಽಽ
ಪದುಮಗೊಂಡನಿಂದ ಬೆಳದೀತೋಽಽ
ಮಾಳಪ್ನ ಕತಿ ಮುಂದ ಉಳದೀತೋಽಽ

ಸಿದ್ಧ ಮಾಳಿಂಗರಾಯಾs
ಹುಟ್ಟುವ ಕತಿ ಭಾಗಾs
ಕೇಳರಿ ಇವತ್ತೋss
****

ನರರಿಗೆ ಗತಿ ಇಲ್ಲs
ಗುರುವಿನ ಹೊರತೋss
ಮೂಲ ಬಡ್ಡಿ ಮಾತೋss
ಸಿದ್ಧ ಮಾಳಪ್ಪನs
ಹುಟ್ಟಿದ ಕತಿ ಭಾಗಾs
ಕೇಳಿ ಆಗರಿ ಶಾಂತೋss II ಸಿದ್ಧ ಮಾಳಪ್ಪನs.....II

ಅರಸ ತುಕ್ಕಪ್ಪರಾಯಾs
ತಮ್ಮ ಸೋಮರಾಯಾs
ಪಟ್ಟದ ಒಡಿಯಾರ ಮಾತೋss
ಮಕ್ಕಳಿಲ್ಲದಕ ಮನಸs ಮರಗತಿತ್ತೋs
ದಿನಕೆರಡು ಹೊತ್ತೋss

ಇತ್ತ ಕಾರ್ಬಾರಾss
ತಮ್ಮಗ ನೇಮಿಸೀss
ತುಕ್ಕಪ್ಪ ಹೊಂಟ ನಿಂತೋss
ಬಿಲ್ಲಾಳ ಗುಡದಾಗs
ಬಂದು ತುಕ್ಕಪ್ಪಗೌಡs
ಜಪಾ ಮಾಡುತ ಕುಂತೋss II ಬಿಲ್ಲಾಳ ಗುಡದಾಗs...II

ಮಹಾನ ಪತಿವ್ರತೀs
ಮೌಲಿ ಸುಂದರೀss
ಅಮೃತಬಾಯಿ ಮಾತೋss
ಪತಿಯ ಸಂಗಾಟ
ಹೊಂಟ ನಡದಾಳೋss
ಆರ್ಯಾಣಕ ಆ ಹೊತ್ತೋss
ಹೆಂತಾ ಹಣೆಬರಾss

ಬ್ರಹ್ಮ ಬರದಾನೋss
ಜೋಡಿ ಸತಿಯ ಪತ್ಯೋss
ಕೆಟ್ಟ ಕಾಂತರಾss
ಗುಡ್ಡ ಗವ್ವರದಾಗss
ಒಳಗೆ ಹೋಗಿ ಕುಂತೋss ॥ ಕೆಟ್ಟ ಕಾಂತರಾ...॥

ಗುಡ್ಡದನಿಯಲೀss
ನಿಂತ್ರೋ ಕೊನೆಯಲೀss
ತಪ ಮಾಡುತ ಕುಂತೋss
ಸಿಂಹ ಶಾರ್ದೂಲಾss
ಮಿಕ್ಕ ಜಾತಿ ಬಳಗಾss
ಅವರಿಗಿ ದೊರಿಯಿತೋss
ಹನ್ನೆರಡು ವರುಷಾss
ಹಗಲು ಇರಳುs
ತಪಾ ಜೋರ ನಡಿತೋss
ಗುಡದಾಗs
ತಪಾ ಜೋರ ನಡಿತೋss
ದೇವಲೋಕದಾಗs
ಇಂದ್ರ ದೇವರಿಗೀss
ನಡಗ ಹತ್ತಿತೊss ॥ ದೇವಲೋಕದಾಗ...॥

ಎನ್ನ ಪದವಿ ಹೊಗ್ತದಂತs
ಇಂದ್ರಾದೋ ಗಾಬರೀss
ರಂಭಾ ದೇವಿನ್ನ ಕರದೋss
ಹೇಳ್ತಾನೋ ಮಾತೋss
ಮಾತ ಕೇಳಿ ರಂಭಾ ನಡದಾಳೋss
ಆಶ್ರಮ ಮುಂದು ನಿಂತೋss
ನಿತ್ತ ಚಣದಾಗ ಬೆಳಕ ಬಿದ್ದಿತೋss
ಚಲುವ ಚಂದರ ಜೋತೋss ॥ ನಿತ್ತ ಚಣದಾಗ...॥

ಇಪ್ಪತ್ತು ಮೂರು ದಿವಸಾs
ಮಳಿಯ ನಡದಿತ್ತೋss
ಸಿಡಿಲ ಕಡಲ ಬಿತ್ತೋss

ತಪದ ಬಲದಿಂದs
ಬಿದ್ದಿರೊ ಸಿಡಿಲಾs
ಮಟ್ಟನೇ ಮಾಯಾತೋss
ಹನ್ನೆರಡು ವರುಷಾss
ತಪಗೈದ ಮ್ಯಾಲss
ದೇವರಿಗೆ ಅರುವಾಯ್ತೋss
ಕೈಲಾಸದಾಗs
ಶಂಕರಗ ಅರುವಾಯ್ತೋss
ಅವರ ಭಕ್ತಿಗೀs
ಮೆಚ್ಚಿ ಶಂಕರಾss
ಬಂದಿದ್ದ ಭಗವಂತೋss ॥ ಅವರ ಭಕ್ತಿಗಿ....॥

ಜಪಮಣಿ ಮಾಣಿಕ ಮಣೀss
ಎರಡು ಹಾರಗಳ
ಕೊಟ್ಟಿದ ಭಗವಂತೋss
ಇದರಾನ ಸೇವಾs
ಮಾಡುತ ನಡಿರೋss
ಬಂಜೀತನ ಹಿಂಗೀತೋss
ಇಷ್ಟಮಾತ ಅವರಿಗೀs
ಕೊಟ್ಟು ಪರಮೇಶೂರs
ಹೋಗಿದ ಭಗವಂತೋss
ಬಾರಾಮತಿ ಪಟ್ಟಣದಾಗs
ಬಂದು ತುಕ್ಕಪ್ಪಗೌಡಾs
ಜಪಾ ಮಾಡುತ ಕುಂತೋss ॥ ಬಾರಾಮತಿ....॥

ಜಪಮಣಿಯಿಂದ
ಜಗನ್ನಾತನವತಾರs
ಜಕ್ಕಪ್ಪರಾಯಂದು ಆಯ್ತೋss
ಮಾಣಿಕ ಮಣಿಯಿಂದs
ಬಸವನ ಅವತಾರs
ಮಾಳಪ್ಪಂದು ಆಯ್ತೋss
ಮೃತ್ಯ ಲೋಕದಾಗs
ಹುಟ್ಟಿ ಬಂದಾರೇನೋss
ಜಗ ಉದ್ಧಾರವಾಯ್ತೋss
ಹಾಲಮತಕ ಮೇಲs
ಗದ್ದಾಗಿ ಹುಲಜಂತೀs
ಅಡಿವೆಪ್ಪ ಹೇಳಿದ ಮಾತೋss ॥ ಹಾಲಮತಕ...॥

****

ಜಕ್ಕಪ್ಪ ಮಾಳಪ್ಪ ಜೋಡೀss
ಜನಸಿ ಬಂದಾರೋs
ಬಾರಾಮತಿ ನೋಡೀss
ಜಕ್ಕಪ್ಪ ಮಾಳಪ್ಪ ಜೋಡೀss
ಜನಸಿ ಬಂದಾರೋss
ಹಾಲಮತಾ ನೋಡೀss
ಅಕ್ಕರ್ತಿಯಿಂದss
ಅಕ್ಕನ ಮಕ್ಕಳಿಗೀs
ತಾಯಿ ಕಣ್ಣಬಾಯಿs
ಜ್ವಾಕೀ ಮಾಡಿ ಮಾಡೀss ॥ ಜಕ್ಕಪ್ಪ ಮಾಳಪ್ಪ....॥

ಸತ್ಯ ಧರಮರ
ಸಮ ಜೋಡೀ
ಬಾರಾಮತಿಯಾಗ
ಇರತಾರ ಕೂಡೀss

ನಿತ್ಯ ಲಿಂಗ
ಪೂಜಾ ಮಾಡೀss
ಆಟ ಆಡ್ತಾರ
ಇಬ್ಬರು ಕೂಡೀs
ಅಕ್ಕರ್ತಿಯಿಂದs
ಆಟಾ ಆಡ್ಯಾರಲ್ಲೀss
ಹುಡುಗರ ಸಂಗಾಟ
ಕೂಡಿ ಕೂಡೀss ॥ ಜಕ್ಕಪ್ಪ ಮಾಳಪ್ಪ....॥

ಸಂಗ್ಯಾ ನಿಂಗ್ಯಾ
ಇದ್ದರಪ್ಪ ಜೋಡೀss
ಊರ ಹೊರಗ
ಅವರು ಆಟಾ ಹೂಡೀss
ನಿತ್ಯ ಚಿನಕೋಲ
ಆಟಾ ಆಡೀss
ಸರ್ಪ ಬಂತಪ್ಪ
ಬಂದು ಬೋರ್ಯಾಡೀss
ಸರಪೀನ ಸಪಳಾss
ಅರಬಾಟ ಕೇಳಿ
ಹುಡಗರು ಹೋದಾರು
ಓಡಿ ಓಡೀss ॥ ಜಕ್ಕಪ್ಪ ಮಾಳಪ್ಪ....॥

ಎಡವಿ ಸಂಗ್ಯಾ ಬಿದ್ದs
ಹಾದಿ ಕೂಡೀss
ಹಾವು ಕಚ್ಚಿತವ್ಗ ನೋಡೀss
ದಿಟ್ಟಾಗಿ ಮಾಳಪ್ಪ ನೋಡೀs
ಹೋಗಿ ಹಿಡಿದಾನ
ಹಾವಿನ ಹೆಡೀss
ದಿಟ್ಟಾಗಿ ನಿಂತಾss
ದೀರುಳ್ಳ ಮಾಳಿಂಗರಾಯ್ನs

ಜಿಗಿದಾವು ಕಣ್ಣಾನ
ಕಿಡಿ ಕಿಡೀss ॥ ಜಕ್ಕಪ್ಪ ಮಾಳಪ್ಪ....॥

ಗಾಬ್ರ್ಯಾಗಿ ಜನರೆಲ್ಲ ನೋಡೀss
ಧನ್ಯ ಧನ್ಯ ಜಯಘೋಷ
ಅವರು ಮಾಡೀss
ಸರಪಿಗಿ ಸಿದ್ಧ ಮಾತಾಡೀss
ನಾಗಬೆತ್ತಾಗಿ ಇರುವಂಗ ನೋಡೀss
ಸತ್ತ ಸಂಗ್ಯಾನss
ಎಬಸಿದಾಗ ಸಂಗ್ಯಾ
ಪಾದ ಹಿಡದನೊ
ನೋಡಿ ನೋಡೀss ॥ ಜಕ್ಕಪ್ಪ ಮಾಳಪ್ಪ...॥

ಧನ್ಯ ಧನ್ಯ ಜಯಘೋಷ
ಅವರು ಮಾಡೀss
ಕೂಗ ಹೊಡಿತಾರ
ದೇವ್ರಂತ ನೋಡೀss
ಮಾಳಪ್ಪನ ಪಾದ ಹಿಡೀss
ಕವಿ ಅಡಿವೆಪ್ಪ ಪದಗಳ ಮಾಡೀss
ಬಂಗಾರ್ದ ಬಾರಾಮತಿ
ಶೃಂಗಾರ್ದ ತೇರಾಮತಿ
ಹೋಗಿ ಬಾರಪ್ಪ ನೀs
ನೋಡಿ ನೋಡೀss ॥ ಜಕ್ಕಪ್ಪ ಮಾಳಪ್ಪ....॥

*****

ಕರುಣದಿಂದ ಕೈಯ ಹಿಡದ
ಕಾಪಾಡೊ ಗುರವೇss
ಶರಣ ಹೊಂದುವೆ ಪಾದಕs
ವರಕೊಟ್ಟ ಗುರು
ಇರಬೇಕ ಕಡೀತನಕs

ಗುಪ್ತದಿಂದ ಗುರು ನುಡಿಯs
ಪಡಿಯೊ ಮತ್ತು ದುಡಿಯೋss
ಜನ್ಮ ಆಗೂದು ಸಾರ್ಥಕs

ಆರ್ಗುಣ ಅಳಿದುs
ಮೂರ್ಗುಣ ತಿಳಿದುs
ಮಾಳಪ್ಪ ಬಂದ ಮರತ್ಯಾಕೋss
ಹುಟ್ಟಿ ಬಂದs
ಬಾರಾಮತಿ ಸ್ಥಳಕೋss

ಹುಟ್ಟಿ ಮೂರs
ವರುಷಕ ಮಾಳಿಂಗರಾಯs
ಮಹಿಮಾ ತೋರಿದ
ಅದೇ ಸ್ಥಳಕೋss

ಮೇನಗಾರ ನಾಯಿ
ನಿನ್ನಮೆ ಕಣ್ಣಮೆs
ನಿನ್ನ ಬ್ಯಾಟೀss
ನಿತ್ಯ ಆಡ್ತಿದ್ದ
ಅದೇ ಸ್ಥಳಕs
ಎರಡ ಮೀನ ಹಿಡ್ದs
ತಂದೀತ ಮೆಲ್ಲಕs
ಮೇನಿನ ಹೊಟ್ಟಿ ಹರದು
ಕಳ್ಳ ಕರಚ ತಗದು
ಮೇನ ತೊಳಿತಿದ್ದೋss
ಕಡಿಯಾಕಾs

ಆಟ ಆಡೂದು ಬಿಟ್ಟುs
ನೋಡುತ ಮಾಳಿಂಗರಾಯಾs
ಬಂದ ನಿಂತೋ ಬಲ್ಯಾಕs
ಗಾಬ್ರ್ಯಾಗಿ ಮೇನ್ಗಾರ
ಬಿದ್ದೋ ಪಾದಕs

ಸತ್ತ ಮೀನ
ನೀನು ಏನ ಮಾಡತೀಽ
ಎಂದು ಮಾಳಪ್ಪ
ಕೇಳ್ಯಾನ ಆ ಕ್ಷಣಕಽ
ಹೊಟ್ಟಿ ಬಟ್ಟಿಗಾಗೀಽ
ಮೇನಿನ ಮಾರಾಟ ಮಾಡೀಽ
ಕಾಲ್ಕಳಿತೇವೆ ಈ ಭವಕಽ

ಏನ ಕಿಮ್ಮತ ಐತಿ
ಮೇನ ಕೊಡುವುದಕಽ
ಒಂದ ದುಡ್ಡ ಇದರ ಬೆಲೆ
ಆಗೊದು ಗುರುವೇಽ
ಏನ ಬೇಕ ನಿನಗ್ಯಾತಕಽ
ಮಾಯಿದಿಂದ ದುಡ್ಡಽ
ತಗದು ಕೊಟ್ಟಾನೋಽ
ಮೇನ ನೀರಾಗ ಬಿಡುವಂದಽ
ಹೊಳಿಯಾಕಽ

ಗಾಬ್ರ್ಯಾಗಿ ಮೇನಗಾರಽ
ಎದ್ದು ಮುಂದಕಽ
ಸತ್ತ ಮೀನ ಹೊತ್ತು ಒಯ್ದು
ಒಗದಾನ ಅವನು
ನಿಂತ ನೋಡುದಕಽ

ಸತ್ತ ಮೀನ ಪ್ರಾಣಾಽ
ಬಂದು ಆಡುತಾವೋಽ
ಜನ ನಿಂತು ನೋಡುದಕಽ
ಧನ್ಯ ಧನ್ಯ ಮಾಳಪ್ಪ
ಹೆಚ್ಚ ಮರತ್ಯಕಽ

ಪರಶಿವ ಮಾಳಿಂಗರಾಯs
ಪರಬ್ರಹ್ಮ ಇವನೇs
ಮಾನವನಾಗಿ ಬಂದs
ನಮ್ಮ ಸ್ಥಳಕs
ಜಯಸೀರಿ ಮಾಳಿಂಗರಾಯಾs
ಜಯಘೋಷ ಮಾಡುತs
ಜನ ಹತ್ಯಾರೊ ಕೂಗುದಕs

ಮಹಿಮಾ ಪುರುಷ ಮಾಳಪ್ಪs
ಹೆಚ್ಚಿನವ ಮರತ್ಯಕs
ಮೆರವುಣಗಿ ಮಾಡುತs
ಮನಿಗಿ ಹೋದಾರೋ ಜನಾs
ಶರಣ ಹೊಂದ್ಯಾರೋ ಪಾದಕs

ಅವತಾರ ಪುರುಷ ಮೂರ
ವರುಷದ ಮಾಳಪ್ಪs
ಮಹಿಮಾ ತೋರಿದೋs
ಹುಟ್ಟಿದ ಸ್ಥಳಕs

ಉದ್ಧಾರ ಮಾಡ್ಯಾನ ಕೇಳರೀs
ಎಲ್ಲಾ ಜನಕs
ನಾನಾ ತರದ ಲೀಲಾs
ಮಾಡ್ಯಾನೊ ಮಾಳಪ್ಪಾs
ಅಡಿವೆಪ್ಪ ಹೇಳ್ಯಾನೋs
ಎಲ್ಲಾ ಜನಕs

****

ಜಕ್ಕಣ ತಮ್ಮಾ ಮಾಳಣ್ಣಾs
ಸತ್ಯ ಧರಮರs
ಅವರ ಮನಿತಾನಾs ॥ ಜಕ್ಕಣ ತಮ್ಮಾ...॥

ಸತ್ಯ ಧರಮರ
ಸಿದ್ಧಾಟ್ಗಿ ನುಡಿಗಳ
ಶಾಂತ ಕೇಳರಿ ಸರ್ವ ಜನಾs

ಬಾರಾಮತಿಗಳ ಹುಟ್ಟಿದ ಸ್ಥಾನಾs
ತೇರಾಮತಿಗಳ ಬೆಳದ ಠಿಕಾಣಾs ॥ ಬಾರಾಮತಿಗಳ....॥

ಅಣ್ಣ ತಮ್ಮರಽ
ಅವತಾರ ಸ್ಥಾನಾಽ
ಅದು ಹೆಚ್ಚಿಂದ
ಪುಣ್ಯ ಠಿಕಾಣಾಽ ॥ ಅಣ್ಣ ತಮ್ಮರಽ.....॥

ಪುಣ್ಯವಂತರು ಹುಟ್ಟಿ ಬಂದಾರಾಽ
ಮರುತ್ಯಕ ಮಿಗಿಲವರೇನಽ
ಐದು ವರುಷದವ ಜಕ್ಕಣ್ಣಽ
ಮೂರು ವರುಷದವ
ಇದ್ದೊ ಮಾಳಣ್ಣಾಽ
ತುಕ್ಕಪ್ಪರಾಯಂದು ಅನಿಸಿ ಸಂತಾನಾಽ
ಜಗ ಉದ್ಧಾರ ಕತ್ತು ಅವರೇನಾಽ

ಜಾತ ಜೋತಿ ಜಕ್ಕಪ್ಪ ಮಾಳಪ್ಪಽಽ
ಜಗ ವಿಖ್ಯಾತರಾದ್ರು ಅವರೇನಾಽ
ಹಳದಿ ಹಸರಽ
ನಿಶಾನಿ ಕೂನಾಽ
ಕತ್ತಿ ಡಾಲ

ಕೈಯಾಗ ಹಿಡದಾರೇನಾಽ
ದುಷ್ಟ ಮಂದಿ
ಚಂಡ ಕಡದಾರೇನಾಽ
ಸಜ್ಜನ ಜನರನು
ಮಾಡಿ ರಕ್ಷೇನಾಽ

ಹರನಕಿಂತ ಗುರುಽ
ಶ್ರೇಷ್ಟಂದ ಗುರುವಿನ
ಕೂಡಿಕೊಂಡ್ರು ಅವರೇನಾಽ
ಗುರು ಭಕ್ತಿಯ ಮಾಡಿ ಸಂಪೂರ್ಣಾಽ
ಭವ ಬಾದಿ ಬಿಡಸಿ ಎಲ್ಲಾರ್ನಽ
ಉದ್ಧಾರ ಮಾಡ್ಯಾರ
ಸರ್ವ ಜನಾಽ

ಸತ್ತ ಜೀವಿಯ
ಪಡಿಸ್ಯಾರಾ ಪ್ರಾಣಾs
ಹಾಲಮತಕ ಮೂಲ
ಒಡೆಯರ ಅನಿಸಿs
ಏರಿಸ್ಯಾರ ಕೋರಿ ಮೀಸಿ ಏನಾs
ದೇಶಕ ಹುಲಜಂತಿ ವಾಯೇಣಾs
ಅಡಿವೆಪ್ಪ ಮಾರಾಯರ ರಚನಾs
ಸುತ್ತಿ ಸಾರತೈತಿ ನೋಡುವಾ ಏನಾs
ಹಗಲ ರಾತರಿ
ಮಾಳಪ್ಪನ ಧ್ಯಾನಾs

****

ಕಂದ ಹುಡಗರು
ಬಂದ ಹಾಡತೇವುs
ದೈವ ಕೂಡರಿ ದೇವರೇನಾs
ಹಿರಿಯರಿಲ್ಲದ ಮನಿತನ
ಅಲ್ಲ ನೋಡು
ಗುರುವ ಇಲ್ಲದ
ಮಠಾ ಸುಳ್ಳೋs
ಗುರುವಿನ ಹೊರತು
ದಾರಿ ಸಿಗುವುದಿಲ್ಲೊ ಮಳ್ಳಾs
ಗುರು ಮಾರ್ಗ ಮರತ್ಯಕs
ಬೆಳಿಯಲೆಂದಾನ ಭವಕs
ಜಂಬೂನೀಲ ಚಕ್ಕಪ್ಪ ಸರಳs
ಅರಸೂತ್ತಿ ಜಕ್ಕಪ್ಪನ
ಭಕ್ತಿಗಿ ಒಲಿತೋs
ಅನಿಸಿಕೊಂಡ ಅವನು ಬಹಳಾs
ಅಮೃತಬಾಯಿ ಮಲಿಹಾಲ
ಸವಸ್ಯಾನೋ ಸಳ ಸಳs

ಸಣ್ಣ ತಮ್ಮ ಮಾಳಪ್ನಽ
ಅಣ್ಣನಾಗಿ ಮೆರದಾನಾಽ

ಜಂಭೂ ದ್ವೀಪ ಅನ್ನೂ ಸ್ಥಳಕಽ
ಹುಣವಿ ಚಂದ್ರನಂಗ
ಜಕ್ಕಪ್ಪ ಬೆಳದಾನೋಽ
ದಿವ್ಸ ಆಗಲಿಲ್ಲೊ ಬಹಳಾಽ
ಆ ಮೇಲೆ ಮಾಳಪ್ಪ
ಹುಟ್ಟಿ ಬಂದ ಜವಳಾಽ
ಎರಡು ಮೂರು ವರ್ಷದ
ಅಣ್ಣ ತಮ್ಮರವರುಽ
ಮರತ್ಯಕ ಹೊಳದಾರಽ
ಥಳ ಥಳಾಽಽ

ಏಳ ತೆಲಿ ಗುರುವಽ
ಸೋನಾರ ಸಿದ್ಧ ಇದ್ದೊಽ
ಸೋನಾರಿ ಗ್ರಾಮ
ಅವ್ನ ಸ್ಥಳಾಽ
ಸೋನಾರಿ ಬಿಟ್ಟು
ಬಂದ್ರು ಗುರುಗಳಾಽ
ಜಾತ ಜೋತಿ

## ಹುಲಿಯ ಫಜೀತಿ

ಕುರುಬ ಗುಡ್ಡದಾಗ ಕುರಿಯ ಮೇಸತಿದ್ದಾ
ಬೇಗು ಬೆಳಗು ರಾತರಿ ಹಗಲಾ ||ಪಲ್ಲ ||

ಗುಡ್ಡದ ವಾರ್‍ಯಾಗ ದಡ್ಡಿಹಾಕಿ ಮೆಟ್ಟಮಾಡಿದ್ದೊ ಗುಡಿಸಲಾ
ರೊಟ್ಟಿ ಬರತಿದ್ದು ಮ್ಯಾಲ ಮ್ಯಾಲ
ಹಿಂಡಕೊಂಡ ಬಡವತಿದ್ದ ಹಸಿ ಹಾಲಾ
ಕುರಿಮೇಸುದರೊಳಗೊಂದು ದಿನ ಬಿತ್ತೊ ಮಾಡಗತ್ತಲಾ
ಗಡ್ಡದ ಹೋತೊಂದು ದೊಡ್ಡಾ ಜನಾವರ ಕುರ್‍ಯಾಗಿತ್ತೊ ಮಿಗಿಲಾ
ತೆಪ್ಪಸಕೊಂಡ ಸರದ ನಿಂತಿತೋ ಮದಲಾ
ಬಿಟ್ಟ ಹ್ವಾದ ತಿರುಗಿ ನೋಡಲಿಲ್ಲ ಕುರುಬ
ಒಂದ ತಾಸಿನ್ಯಾಗ ಮಳಿಯನಿಂತ ತುಸು ಮಾಡತೋ ಬಯಲಾ
ಕುರಿ ಹುಡುಕುತ ಹರಿಹಿಡದ ಗಾಬರಿ ನಡೆದಿತ್ತಲ್ಲಾ
ಮುಂದ ಹುಲಿಗವಿ ಇತ್ತೊ ಅಸಲಾ
ಬಳಗ ಹೊಕ್ಕ ಝಾಡಿಸಿತೋ ಕೂದಲಾ
ಹುಲಿಗುಡ್ಡಕ ಮೈಲಾಕ ಹೋಗಿತ್ತು ಇನಾ ಬಂದಿದ್ದಿಲ್ಲಾ
ಬಂತ ಹುಲಿ ಗುಡಗ ಹೊಡಕೋತ ಆರಭಟ ಸರವತ್ತಿನ ಅಮಲಾ
ಗವಿ ಹಳಗ ನೀ ಯಾರ ಕರಗಾಲಾ
ಹೊರಬೀಳಂತ ಮಾಡತೈತಿ ಗುಲ್ಲಾ
ಧೈರ್ಯಮಾಡಿ ಹೋತಪ್ಪ ಮಾತಾಡತಾನ
ನಾ ಏನಾ ಕಡಿಮಿಲ್ಲಾ
ನಿನ್ನಂಥ ಹುಲಿಗೋಳ ಸಹಜ ನುಂಗುತೀನಿ
ಕಿವಿ ಸಹಿತ ಬಾಲಾ

ತಪಾಸ ತಕ್ಕೊ ಕೇಳೋ ನಾಡಮ್ಯಾಲಾ
ನನ್ನ ಕಣ್ಣ ನೋಡೋ ಕೆಂಪ ರಂಗಲಾಲಾ
ಖರೇ ಆದೀತಂತ ಹುಲಿರಾಜ ಸರಸಿ ಇಟ್ಟ
ಹಿಂದಕ ಕಾಲಾ
ಇಷ್ಟಮಾತ ಕೇಳಿ ಅಂತರ ಜಿಗಿತೋ
ಆಗಿ ಅಡವಿ ಪಾಲಾ
ಬಿದ್ದ ಎದ್ದ ಬಡದಾವೋ ಮಳಕಾಲಾ
ಆಕಡಿದೊಂದ ನರಿಯ ಬಂತೋ ಮುಂಗೋಲಾ
ಯಾಕೋ ಹುಲೆಪ್ಪ ಓಡು ಕಾರಣೇನ ಬಂತೋ
ಜೀವದಮ್ಯಾಲಾ

ಏನ ಹೇಳಲ್ಯೋ ನನ್ನ ಸಡಗರಾ ನಡಗತಾವೋ ಕಾಲಾ
ಹೋತಪ್ಪ ಕುಂತಾನೋ ಗವಿ ಮ್ಯಾಲಾ
ನುಂಗತೀನಂತ ಆಡ್ಯಾನೋ ಸಲ್ಲ
ಹುಲಿರಾಜ ಅಂದರ ರಾಜಕ ದೊಡ್ಡವ ನಿನ್ನ ಸರಿಯಾರಿಲ್ಲ
ಅದು ಎಂಥ ಮಿಕಾ ಐತಿ ನೋಡುನು ನಡಿಯೋ ಅಲ್ಲಾ
ಹಾಕಿಕೋ ನಂದು ನಿಂದ ಬಾಲಗಂಟಾ
ಅಂಜಬ್ಯಾಡ ತುಸು ಹಿಡಿಯೋ ಅಸಲಾ

ಹೋತ ನೋಡಿ ದೂರಿಂದ ಕೇಳತೈತಿ ಜೀವಮಾಡಿ ಕಲ್ಲಾ
ಯಾರೋ ನರೆಪ್ಪ ಬಂದೀತಂದೆಲ್ಲ ಒಂದ್ಹುಲಿ ನನಗ ಸಾಲೂದಿಲ್ಲ
ಮಾತಿನ್ಯಾಗ ಮಾತಿಲ್ಲದವ ತಗಲಾ
ಎಲೋ ಹಡಸಿ ತಮ್ಮಾ ಫಾಸಿ ಹಾಕಲಾಕ ತಂದ್ಯೋ ನನ್ನ ಸೂಲಾ
ಇಷ್ಟ ಕೇಳಿ ಅಂತರ ಜಿಗಿತೋ ಆಗಿ ಅಡವಿ ಪಾಲಾ
ನರಿಗಿ ಬಡದಾವೋ ಆಕಲ್ಲ ಈಕಲ್ಲ
ಪೆಟ್ಟ ಹತ್ತಿ ಕಿಸಿದ ಸತ್ತಿತೋ ಹಲ್ಲ
ಹರ್‍ಯಾಗೆದ್ದ ಕುರಿ ಮೈಲಾಕ ಬಂದಾವ ಹಿಂಡ ಕೂಡಿತಲ್ಲ
ತದಲಬಾಗಿ ಒಳಗೆ ಆದ ರಿವಾಯಿತ ಮಾಡಿ ಹೇಳ್ಯಾನೋ ನಕಲ ರಾಮಣ್ಣಾ

# ಗುರುವಿನ ಮಾರ್ಗಪದ

ಒಂದನೇ ಸಂಧಿ

ಗುರುವಿನಾ ಶರಣಕೆ ಶಿರ ಬಾಗುತ ನಾನು ಎರಗುವೆನೋ
ಶಿವ ಶರಣರಿಗೋ ಕರವ ಮುಗಿದು ಶರಣರಿಗೆ ಎರಗುವೇನೋ

ಶ್ರೀಗುರು ರೇವಣ್ಣಸಿದ್ಧನ ಮಹಿಮಾವು ತಿಳಿಸುವೆನೋ
ನಾನು ಶರಣರಿಗೋ ಶಿರಬಾಗಿ ಶರಣರಿಗೆ ತಿಳಿಸುವೆನೋ

ನಾಗಭೂಷಣನು ನಾರಾಯಣ ಪ್ರಿಯನು ಭೋಗ ಮಲ್ಲೇಶನು ರಕ್ಷಿಪನೋ
ಕರಿಯ ಕಂಬಳಿಯ ಕಂತೆ ಕರದಲ್ಲಿ ಕಪ್ಪರಾ ವರನಾಗದ ಬೆತ್ತ ಪಿಡಿದಾವನೋ
ಮರುಳಸಿದ್ದೇಶನು ಮನದಲ್ಲಿ ತಾ ಬಂದು ತಿಳಿಸಿ ಹೇಳಿದಾನೋ ಈ
ಕಥಿಯವನೋ
ಇರತ್ತಿರಲೊಂದು ದಿನಾ ಹರನ ಓಲಗಕ್ಕೆ ಹರಿ ಬ್ರಹ್ಮ ಇಂದ್ರ ಮೊದಲ
ಇದ್ದವರೋ
ಸುರಮುನಿಗಳು ಕೂಡಿ ವರಗಣಂಗಳೆಲ್ಲ ನೆರೆಯಿಂದಾ ಈ ಸಭೆಗೆ ಬಂದಿದರೋ
ಎಡಬಲದಲ್ಲಿ ಹರಿಬ್ರಹ್ಮಕ ಓಲಗ ತೊಡಿಮ್ಯಾಗ ಪಾರ್ವತಿ ಇರುತ್ತಿದ್ದಳೋ
ಮೃಡಮೂರ್ತಿ ಶಂಕರಾ ಇರುವಾಗ ಭೃಂಗೇಶಾ
ಧೃಡ ಭಕ್ತಿಯಿಂದ ಬಂದೋ ಈ ಸಭಿಗೋ

ದೀಡ ಭಕ್ತಿಯಿಂದ ಭೃಂಗೇಶ ಶಂಕರನ ನೋಡಿ
ಮಾಡಿದಾನೋ ಒಂದ ಕೈಯಿಲೇ ಶರಣವನೋ
ಭರತ ಕಟ್ಟಳೆ ನೆರೆ ನಾಟ್ಯವ ಮಾಡಿ ಕರವು ಮುಗಿದದ್ದು ಗಿರಿಜಾ ಕಂಡಿದ್ದಾಳೋ

ಕರವೆರಡು ಇರಲಾಕ ಕರವಂದು ಮುಗಿಯುವ
ಪರಿಯೇನ ಅಂತ ಕೇಳ್ಯಾಳ ಶಂಖರಗೋ

## ಮೈಲಾರ ಲಿಂಗ

ಅಪ್ಪ ಲಿಂಗಣ್ಣನ ನೆನೆದೇವೆ !

ಲಿಂಗಣ್ಣ ದೈವಾಗೊ ನೀಲಣ್ಣದೈವಾಗೊ
ಗಂಗೆ ಮಾಳಮ್ಮ ದೈವಾಗೊ ।

ಅಣ್ಣನ ನೆನೆದೇವೆ ಅಣ್ಣಯ್ನ ನೆನೆದೇವೆ
ಅಣ್ಣ ಲಿಂಗಣ್ಣನ ನೆನೆದೇವೆ-ನಮ್ಮೀಗೆ
ತಡವಿಲ್ಲದೆ ಪದವೆ ಬರಬೇಕು- ॥ ಲಿಂ ॥

ಅಪ್ಪನ ನೆನೆದೇವೆ ಅಪ್ಪಯ್ನ ನೆನೆದೇವೆ
ಅಪ್ಪ ಲಿಂಗಣ್ಣನ ನೆನೆದೇವೆ-ನಮ್ಮೀಗೆ
ಕೊಗ್ಗುದಲೆ ಧ್ವನಿಯೆ ಬರಬೇಕು ॥ ಲಿಂ ॥

ಏನೇಲೆ ಗಂಗೆ ಎಷ್ಟೊತ್ತು ಮಾಡುತಿ
ಅಡಿಗೇಯ ನೀನು ಮಾಡು ಬಾರೇ-ಸಿರಿಗಂಗೆ
ಭಗುತಾರ ಮನೆಗೆ ಹೋಗಿ ಬರುವೆ ॥ ಲಿಂ ॥

ಹಿಂದಾಕೆ ಇಲ್ಲದೋರೆ ಮುಂದಾಕೆ ಇಲ್ಲದೋರೆ
ಈಗ್ಯಾಕ್ರೀ ಸ್ವಾಮಿ ಭಗುತಾರೀ ಇಲ್ಲದೋರೆ ॥ ಲಿಂ ॥

ಕುಂತು ಉಂಡಾರೆ ಕುಡಿಕೆ ಹೊನ್ನುಸಾಲದು
ಹೋಗಿ ಬರುವೆ ಗಂಗೆ ಭಗುತರ ಮೇಲೆ
ಅಡಿಗೇಯ ನೀನು ಸಲು ಬಾರೇ ॥ ಲಿಂ ॥

ಏರೀಯ ಹಿಂದಾಕೆ ಹೋದಾಳು ಸಿರಿಗಂಗೆ
ಬುಟ್ಟ ಬದನೆಕಾಯ ತರುತಾಳೇ -ಸಿರಿಗಂಗೆಂ

ಹೋಳಿಗ್ಗೆ ಹೊಯ್ದು ಕರುದಾಳೆ -ಗಂಗಮ್ಮ
ಮಹಾರಾಯ್ರ ಅಡಿಗೆ ಸವುದಾಳೆ ॥ ಲಿಂ ॥

ಕಟ್ಟೇಯ ಹಿಂದಾಕೆ ಹೋದಾಳೆ ಗಂಗಮ್ಮ
ಸುರುವನ್ನೆ ಜವಳಿ ತರುತಾಳೆ ॥ ಲಿಂ ॥

ಸುರುವನ್ನೆ ಜವಳಿ ತಂದಾಳೆ ಗಂಗವ್ವ ॥
ಬುಟ್ಟೆಣ್ಣೆ ಹೊಯ್ದಿ ಕರುದಾಳೆ -ಸಿರಿಗಂಗಾ ॥ ಲಿಂ ॥

ಗಂಡಾಗೆ ಅಡಿಗೆ ಸವುಗಳೆ-ಸಿರಿಗಂಗಾ
ಸ್ವಾಮೀಯ ತಾನೇ ಕರುದಾಳೆ ಸಿರಿಗಂಗಾ ॥ ಲಿಂ ॥

ಬನ್ರಪ್ಪ ಮೈಲಾರ ಲಿಂಗ ಬಚ್ಚಲಿಗೆ ನೀರ
ನಾನು ಹಿಡಿದ್ದೀನಿ-ಲಿಂಗಣ್ಣ ॥ ಲಿಂ ॥

ಅಲ್ಲಿಂದ ಮೈಲಾರಲಿಂಗ ಹೊಳೆಯಾಕೆ ಬಂದಾನೆ
ಅಲ್ಲಿಂದ ಮೈಲಾರಲಿಂಗ-ಲಿಂಗಣ್ಣ
ಜಳಕವ ತಾನೆ ಮಾಡುತಾನೆ ॥ ಲಿಂ ॥



ಬಾರೆಲೆ ಸಿರಿಗಂಗೆ ಎಷ್ಟೊತ್ತು ಮಾಡುತಿ
ಪಂಚೆಯ ನೀನು ಕೊಡು ಬಾರೇ ॥ ಲಿಂ ॥
ಅಲ್ಲಿಂದ ಸಿರಿಗಂಗೆ ಬೋರಾಡಿ ಅಳುವೂತ
ಗಂಡಗೆ ಪಂಚೆ ಕೊಡುತಾಳೆ ಸಿರಿಗಂಗೆ ॥ ಲಿಂ ॥

ಅಡಿಗೆ ಕೋಣೆಗೆ ಬರುತಾಳೆ- (ಬಂದಾಳೆ) ಗಂಗಮ್ಮ
ಬೋರಿ ಬೋರಾಡಿ ಅಳುತಾಳೇ ॥ ಲಿಂ ॥

ಅಲ್ಲಿಂದ ಮೈಲಾರಲಿಂಗ ಹೊಳಾಕೆ ಬಂದಾನೆ
ನೀನ್ಯಾಕೆ ಅಳುತೀಯ ಸಿರಿಗಂಗೆ ॥ ಲಿಂ ॥

ನೀನ್ಯಾಕೆ ಅಳುತೀಯ ಸಿರಿಗಂಗೆ ಶಿವದೇವಿ
ಅಡ್ಡುಣೆಗೆ ನೀನು ಇಡುಬಾರೇ ॥ ಲಿಂ ॥

ಅಳುವೂತ ಕರೆವೂತ ಬಂದಾಳೆ ಸಿರಿಗಂಗೆ
ಸ್ವಾಮಿಗೆ ಅಡ್ಡುಣೆಗೆ ಇಡುತಾಳೆ ॥ ಲಿಂ ॥

ಸ್ವಾಮಿಗೆ ಅಡ್ಡುಣೆಗೆ ಇಡುತಾಳೆ-ಗಂಗಮ್ಮ
ಹಾಲು ಸಕ್ಕರೆ ಇಡುತಾಳೆ ॥ ಲಿಂ ॥

ಹಾಲು ಸಕ್ಕರೆ ಇಡುತಾಳೆ-ಗಂಗವ್ವ
ಸ್ವಾಮಿಗೆ ತಾನೆ ಸಲಿಸ್ಯಾಳೇ ॥ ಲಿಂ ॥

ಸ್ವಾಮಿ ಮೈಲಾರಲಿಂಗ ಸಲಿಸಿ ಊಟಮಾಡಿ
ಸ್ವಾಮಿ ಮಠದಾಗೆ ಹೋಗುತಾನೆ
ಸ್ವಾಮಿ ಮಠದಾಗೆ ಹೋಗುತಾನೆ ॥ ಲಿಂ ॥

## ಕಾವಿ ಕಾಮಂಡ್ಲ ಧರಿಸ್ಯಾನೆ !

ಕಾವಿ ಕಾಮಂಡ್ಲ ಧರಿಸ್ಯಾನೆ-ದೇವನಾ ದೇವಾ
ಕಾವಿ ಕಾಮಂಡ್ಲ ಧರಿಸ್ಯಾನೆ ಮೈಲಾರಲಿಂಗ
ಏಳು ಕೋಟೆಂದು ಹೊರಟಾನೆ ॥ ದೇ ॥
ಏಳು ಕೋಟೆಂದು ಹೊರಟಾನೆ ಮೈಲಾರಲಿಂಗ
ಹಡುಗಲಿ ಸೀಮಿಗೆ ಬರುತಾನೆ ॥ ದೇ ॥

ಹಡುಗಲಿ ಸೀಮೆಗೆ ಬಂದಾನೆ ಮೈಲಾರಲಿಂಗ
ದೇವಾರ ಗುಡಿಯಾಗೆ ಕುಳೆತಾನೆ ॥ ದೇ ॥

ಸಾದೀನ ಸೀರೆ ಹುಟ್ಟಾಳೆ ತಲೆ ಮಟ್ಟಿ ಕಟ್ಟಾಳೆ
ಮಂಚದ ಮೇಲೆ ಮನಿಗ್ಯಾಳೆ ॥ ದೇ ॥
ಮಂಚದ ಮೇಲೆ ಮನಿಗ್ಯಾಳೆ ಸಿರಿಗಂಗ
ಗಂಗಮ್ಮನ ಗೋಳೆ ಬಲು ಗೋಳೆ ॥ ದೇ ॥

ಗಂಗಮ್ಮ ಅಳುವೋದ ಮತ್ಯಾರ ಕೇಳ್ಯಾರೆ
ಅಣ್ಣ ಹೆಗ್ಗಣ್ಣ ಕೇಳ್ಯಾನೇ- ॥ ದೇ ॥
ಅವ್ರು ಓಡೋಡಿ ಅರಮನೆಗೆ ಬರುತಾನೆ
ಯಾಕವ್ವ ಸಿರಿಗಂಗೆ ನೀನ್ಯಾಕೆ ಅಳುತೀಯಾ ॥ ದೇ ॥
ಅಳುವ ಕಾರಣವ ನನಿಗೇಳೆ- ॥ ದೇ ॥
ನಾನು ಅಳುವ ಸುದ್ದಿ ನೀನೇವ ಕೇಳಿರಣ್ಣ
ಸ್ವಾಮಿ ಹೋಗ್ಯವ್ನೆ ಮರಿತಾಕೆ- ॥ ದೇ ॥
ಅವ್ರು ಹಡುಗಲಿ ಸೀಮಿಗೆ ಹೋಗ್ಯವ್ರೆ ॥ ದೇ ॥

ಅವ್ರು ಕೋಮಲೆ ತರುವೋಕ ಹೋಗ್ಯವ್ರೆ ॥ ದೇ ॥
ಹೋದಾರೆ ಹೋಗಲಿ ಅಳುದೀರೆ ನನತಂಗಿ ॥ ದೇ ॥
ಅಳೋರಿಗೆ ಐವತ್ತೆ ಜನರವ್ವ ॥ ದೇ ॥
ಅಳೋರಿಗೆ ಐವತ್ತೆ ಜನರವ್ವ ಗಂಗಮ್ಮ
ನೀನ್ಯಾಕೆ ಅಳುತಿ ಬಿಡು ತಂಗಿ ॥ ದೇ ॥

ಬುದ್ದಿಲ್ಲವೆಂದು ಬುದ್ದೀಯ ಹೇಳಲು ಬಂದೆ
ಎದ್ದೋಗೊ ಅಣ್ಣಾ ಅರಮನೆಗೆ ॥ ದೇ ॥
ಗ್ಯಾನವಿಲ್ಲವೆಂದು ಗ್ಯಾನ ಹೇಳಲು ಬಂದೇ
ಗ್ಯಾನಗೇಡಿ ಅಣ್ಣಾ ಮನೆಗೋಗೊ ॥ ದೇ ॥
ತಂಗೀ ಅಂದ ಮಾತ ಕೇಳ್ಯಾನೆ ಹಿರಿಯಣ್ಣ
ಎದ್ದೋಗುತಾನೆ ಅರಮನೆಗೆ ॥ ದೇ ॥

ಅಲ್ಲಿಂದ ಮೈಲಾರಲಿಂಗ ಹಡುಗಲಿಗೆ ಹೋದಾನೆ
ದೇವಾರ ಗುಡಿಯಾಗೆ ಉಳಿದಾನೆ ॥ ದೇ ॥

ದೇವಾರ ಗುಡಿಯಾಗೆ ಉಳಿದಾನೆ ಮೈಲಾರಲಿಂಗ
ಊರೇ ಆಡುತಲೆ ಹೊರಟಾನೆ ॥ ದೇ ॥
ಊರೆ ಆಡುತಲೆ ಹೊರಟಾನೆ ಮೈಲಾರಲಿಂಗ
ಕುರುಬರಗೇರಿಗೆ ಹೋಗುತಾನೆ ಮೈಲಾರಲಿಂಗ
ಬಾಜು ಬಾಜಾರ ತಿರುಗುತಾನೆ- ॥ ದೇ ॥
ಬಾಜು ಬಾಜಾರ ತಾನೆ ತಿರುಗ್ಯಾನೆ ಮೇಲಾರಲಿಂಗ
ಕೋಮಲೆ ಮನಿಯ ಹುಡುಕುತಾನೆ ॥ ದೇ ॥

ಕೋಮಲೆ ಮನಿಯ ಹುಡುಕುತಾನೆ ಮೈಲಾರಲಿಂಗ ॥ ದೇ ॥
ಭಗುತಾರ ಮನೆಗೆ ಹೋಗುತಾನೆ ಮೈಲಾರಲಿಂಗ ॥ ದೇ ॥
ಬಗ್ಗಿ ಬಗ್ಗಿ ತಾನೆ ನೋಡುತಾನೆ ॥ ದೇ ॥

ಯಾರು ಇದಿರಪ್ಪ ಮತ್ಯಾರು ಇದಿರಪ್ಪ
ಬಾಯಾರ್ಕೆ ಆಗಯಿತೆ ಹೊಯ್ಸಿ ನೀರ ॥ ದೇ ॥
ನನ್ನ ಸೊಸೆ ಹಡೆದ ಐದೆ ದಿವ್ಸ
ನಾನೆಂಗೆ ನೀರ ತರಲಪ್ಪ ॥ ದೇ ॥

ನಾನೆಂಗೆ ನೀರ ಹೊಯ್ಯಿಲಪ್ಪ ಗೊರವಯ್ಯ
ಮುಂದಾಲ ಮನೆಗೆ ದಯಮಾಡೋ ॥ ದೇ ॥
ಮುಂದಾಲ ಮನೆಗೆ ನಾನು ಹೋಗಲಾರೇ
ನನ್ಗೆ ನೀರನೆ ಹೊಯ್ಯಿ ಬಾರೇ ॥ ದೇ ॥
ಅಲ್ಲಿಂದ ಅವರತ್ತೆ ಮಂಚಗಳ ಇಳಿದಾಳೆ
ಬೆಳ್ಳೀಯ ಗಿಂಡಿ ತಿಳಿನೀರು ॥ ದೇ ॥
ಬೆಳ್ಳೀಯ ಗಿಂಡಿ ತಿಳಿನೀರು ತಗೊಂಡೆ
ಗೊರವಯ್ಯ ನೀರ ಕುಡಿಬಾರೋ ॥ ದೇ ॥

ತಲೆಯು ನಡುಗುತಾವೆ ಕೈಯ್ಯಿ ನಡುಗುತಾವೆ
ನೀನೆಂಗೆ ನೀರ ಹೊಯ್ಯಿತೀಯ ॥ ದೇ ॥
ನೀನೆಂಗೆ ನೀರ ಹೊಯ್ಯಿತೀಯ ಹಡೆದಮ್ಮ
ಕೋಮಲೆ ಸೊಸೆಯ ತರಿಹೇಳು ॥ ದೇ ॥
ಅಲ್ಲಿಂದ ಅವರತ್ತೆ ಹೊಳೆಯಾಕೆ ಹೋದಾಳೆ
ಸೊಸೆಯ ಮುಂದೆ ಹೇಳುತಾಳೆ ॥ ದೇ ॥

ಕಾಡಸಿದ್ದರಂಗೆ ಕಾಡಿಕಂತ ನಿಂತಾನೆ
ನಾನೆಂಗೆ ಮಾಡಲೆ ನನ ಸೊಸೆ ॥ ದೇ ॥
ಐದೆ ದಿನದ ಬಾಣತಿ ॥ ದೇ ॥
ತಲೆ ಮಟ್ಟೆ ಕಟ್ಟಿದ್ದೀನಿ ನಾನೆಂಗೆ ಹೋಗಾಲಿ ಅತ್ತೆ
ಪಟ್ಟೆದ ಸೀರೆ ತಲೆ ಮಟ್ಟೆ ಕಟ್ಟಿದ್ದೀನಿ ॥ ದೇ ॥
ಅರಳೇನೆ ಬೆಳ್ಳುಳ್ಳಿ ಕಿವಿಯೊಳ್ಗೆ ಇಟ್ಟುಕೊಂಡು
ತೂಗೋ ಮಂಚಾದ ಇಳಿದಾಳೇ ॥ ದೇ ॥

ತೂಗೋ ಮಂಚಾವ ಇಳಿದಾಳೇ ಕೋಮಲೆ
ಬೆಳ್ಳಿ ಗಿಂಡ್ಯಾಗೆ ತಿಳಿನೀರು-ಕೋಮಲೆ ॥ ದೇ ॥
ಬೆಳ್ಳಿ ಗಿಂಡ್ಯಾಗೆ ತಿಳಿನೀರು ತಗೊಂಡೆ ॥ ದೇ ॥
ಬಾಗಲಿಗೆ ತಾನೆ ಬರುತಾಳೇ ॥ ದೇ ॥

ಬಾಗಲಿಗೆ ತಾನೆ ಬರುತಾಳೇ ಕೋಮಲೆ ॥ ದೇ ॥
ಕೊಳ್ಳಯ್ಯ ಗೊರವಯ್ಯ ಕುಡಿನೀರಾ ॥ ದೇ ॥
ದಾನದೋರು ಧರುಮದೋರ ಮಕ್ಕಳೆ ನೀವು

ಒಳ್ಳೆ ಬಾಗಲಾಗೆ ನೀರ ಹೊಯ್ಯಬಹುದೆ ॥ ದೇ ॥
ಒಳ್ಳೆ ಬಾಗಲಾಗೆ ನೀರ ಹೊಯ್ಯಬಹುದೆ ಕೋಮಲೆ
ಹೊರಿಯಾಕೆ ಬಂದು ನೀರ ಹೊಯ್ಯಿಬಾರೇ ॥ ದೇ ॥



## ಹೊರಿಯಾಕೆ ಬಂದು ನೀರ ಹೊಯ್ಯಿಬಾರೇ !

ಹೊರಿಯಾಕೆ ಬಂದು ನೀರ ಹೊಯ್ಯಿ ಬಾರೇ ಕೋಮಲೆ । ಲಿಂಗಣ್ಣ ದೈವಾಗೋ ।
ಒಳಗೆ ನಿಂತು ನೀನು ಹೊಯ್ಯಿಬಾರದು-ಕೋಮಲೆ । ಲಿಂಗಣ್ಣ ದೈವಾಗೋ ।
ಜಿನಿ ಜಿನಿ ಮಳೆಯಾಗೆ ತಂಗಾಳಿ ಬೀಸ್ಯಾವೆ । ಲಿಂಗಣ್ಣ ದೈವಾಗೋ ।
ಹೊರಿಯಾಕೆ ನಾನು ಬರುಲಾರೇ । ಲಿಂಗಣ್ಣ ದೈವಾಗೋ । । ಲಿಂಗಣ್ಣ ದೈವಾಗೋ ।
ಹಡೆದವ್ವ ನಾನು ಐದು ದಿವ್ಸ ಹೊರಿಯಾಕೆ ಬರಲಾರೆ । ಲಿಂಗಣ್ಣ ದೈವಾಗೋ ।
ನೀವು ಮುಂದಾಲ ಮನೆಗೆ ದಯುಮಾಡಿ । ಲಿಂಗಣ್ಣ ದೈವಾಗೋ ।
ದೇಶ ದೇಶವ ತಿರುಗಿ ಬೇಸತ್ತಿ ನಾ ಬಂದೇ । ಲಿಂಗಣ್ಣ ದೈವಾಗೋ ।
ಬಾಯಾರಿಕಾಗಯಿತೆ ಹೊಯ್ಯಿ ನೀರಾ । ಲಿಂಗಣ್ಣ ದೈವಾಗೋ ।
ಕಾಡ ಸಿದ್ದರಂಗೆ ಕಾಡಿಕಂತೆ ನಿಂತಾನೆ । ಲಿಂಗಣ್ಣ ದೈವಾಗೋ ।
ಕೋಮಲೆ ಹೊರಿಯಾಕೆ ಬರುತಾಳೆ । ಲಿಂಗಣ್ಣ ದೈವಾಗೋ ।

ಕೋಮಲೆ ಹೊರಿಯಾಕೆ ಬಂದು ನಿಂತೈದಾಳೆ । ಲಿಂಗಣ್ಣ ದೈವಾಗೋ ।
ಮುತ್ತಿನ ಸಪಪೆರಗ ಹಿಡಿದಾನೆ । ಲಿಂಗಣ್ಣ ದೈವಾಗೋ ।
ಮುತ್ತಿನ ಸೆರಗ ನೀನ್ಯಾಕೆ ಹಿಡಿದಯ್ಯ । ಲಿಂಗಣ್ಣ ದೈವಾಗೋ ।
ಗಂಡ ಬರುತ್ತಾನೆ ಕೈಯ್ಯ ಬಿಡೋ । ಲಿಂಗಣ್ಣ ದೈವಾಗೋ ।
ಗಂಡ ಬಂದರು ಬರಲಿ ಮೈದಯ್ಯ ಬಂದರು ಬರಲಿ । ಲಿಂಗಣ್ಣ ದೈವಾಗೋ ।
ಮುತ್ತಿನ ಸೆರಗ ನಾ ಬಿಡಲಾರೇ । ಲಿಂಗಣ್ಣ ದೈವಾಗೋ ।
ಮುತ್ತಿನ ಸೆರಗ ನಾ ಬಿಡಲಾರೇ ಕೋಮಲೆ । ಲಿಂಗಣ್ಣ ದೈವಾಗೋ ।
ನೀನೆ ನನ್ನಿಂದೆ ಬರಬೇಕು । ಲಿಂಗಣ್ಣ ದೈವಾಗೋ ।
ನೀನೆ ನನ್ನಿಂದೆ ಬರಬೇಕು ಕೋಮಲೆ । ಲಿಂಗಣ್ಣ ದೈವಾಗೋ ।
ಹಡೆದು ಐದು ದಿವಸ ನಾನೆಂಗೆ ಬರಲಿ । ಲಿಂಗಣ್ಣ ದೈವಾಗೋ ।
ನಾನೇ ನಿನ್ನಿಂದೆ ನಾ ಒರಲಾರೇ । ಲಿಂಗಣ್ಣ ದೈವಾಗೋ ।

ನಾನೇ ನಿನ್ನಿಂದೆ ಬರಲಾರೆ ಗೊರವಯ್ಯ । ಲಿಂಗಣ್ಣ ದೈವಾಗೋ ।
ಮುತ್ತಿನ ಸೆರಗ ಕೈಯ್ಯ ಬಿಡೋ । ಲಿಂಗಣ್ಣ ದೈವಾಗೋ ।

ಅಲ್ಲಿಂದ ಕೋಮಲೆ ಬೋರಾಡಿ ಅಳುತಾಳೆ । ಲಿಂಗಣ್ಣ ದೈವಾಗೋ ।
ಮಗನಿಗೆ ಮಲೆ ಕೊಟ್ಟು ಬರುವೆ । ಲಿಂಗಣ್ಣ ದೈವಾಗೋ ।
ಬರುತಾಳೆ ಅಂಬೋಕೆ ನನಿಗೇನ ನಂಬೀಕೆ । ಲಿಂಗಣ್ಣ ದೈವಾಗೋ ।
ಬಲಗೈಯ್ಯ ಭಾಷೆ ಕೊಡು ಬಾರೇ । ಲಿಂಗಣ್ಣ ದೈವಾಗೋ ।

ಅಲ್ಲಿಂದ ಕೋಮಲೆ ಬರುತೀನಿ ಅಂದೇಳಿ । ಲಿಂಗಣ್ಣ ದೈವಾಗೋ ।
ಭಾಷೆಯ ತಾನೇ ಕೊಡುತಾಳೇ । ಲಿಂಗಣ್ಣ ದೈವಾಗೋ ।
ಬಲಗೈಯ್ಯ ಭಾಷೆಯ ಕೊಟ್ವಾಳೆ ಕೋಮಲೆ । ಲಿಂಗಣ್ಣ ದೈವಾಗೋ ।
ಹೆಬ್ಬೊಟ್ಟೆ ಹೊರಗೆ ಆದಾವೆ ಕೋಮಲೆ । ಲಿಂಗಣ್ಣ ದೈವಾಗೋ ।
ಹೆಬ್ಬೊಟ್ಟೆ ಹೊರಗೆ ಆದಾವೆ ಹೊರಗೆ ಸಿರಿಗಂಗೆ । ಲಿಂಗಣ್ಣ ದೈವಾಗೋ ।
ಭಂಡಾರದ ಸೀಲು ಬಡಿ ಬಾರೇ-ಸಿರಿಗಂಗೆ । ಲಿಂಗಣ್ಣ ದೈವಾಗೋ ।
ಅಲ್ಲಿಂದ ಕೋಮಲೆ ಸೀಲುಗಳ ಬಡಿದಾಳೆ । ಲಿಂಗಣ್ಣ ದೈವಾಗೋ ।
ಮೈಲಾರಲಿಂಗಾಗೆ ಹೇಳುತಾಳೆ । ಲಿಂಗಣ್ಣ ದೈವಾಗೋ ।
ಎಲ್ಲಿ ಹೋಗಲಿ ಬೇಡ್ರೀ । ಲಿಂಗಣ್ಣ ದೈವಾಗೋ ।
ಸೆಳ್ಳವು ಸಪ್ಪಣೆ ದಯಮಾಡಿ । ಲಿಂಗಣ್ಣ ದೈವವೂ
ಸೆಳ್ಳವ್ರು ಸಪ್ಪರಕೆ ಅಡಿಗ್ಯಾನೆ ಮೈಲಾರಲಿಂಗ । ಲಿಂಗಣ್ಣ ದೈವಾಗೋ ।
ಬಾಲಗೆ ಮಲೆಯ ಕೊಟ್ಟುಬರುವೆ । ಲಿಂಗಣ್ಣ ದೈವಾಗೋ ।
ಅಲ್ಲಿಂದ ಕೋಮಲೆ ಹೊಳೆಯಾಕೆ ಹೋದಾಳೆ । ಲಿಂಗಣ್ಣ ದೈವಾಗೋ ।
ಗೊರವಯ್ನ ಶಭತ ಮರಿತಾಳೆ । ಲಿಂಗಣ್ಣ ದೈವಾಗೋ ।
ಗೊರವಯ್ನ ಶಭತ ಮರೆತಾಳೆ ಕೋಮಲೆ । ಲಿಂಗಣ್ಣ ದೈವಾಗೋ ।
ತೂಗೋ ಮಂಚದ ಮೇಲೆ ಮನಿಗ್ಯಾಳೆ । ಲಿಂಗಣ್ಣ ದೈವಾಗೋ ।
ಅಲ್ಲೀಗೆ ಅವರತ್ತೆ ಏನೆಂದು ಹೇಳುತಾಳೆ । ಲಿಂಗಣ್ಣ ದೈವಾಗೋ ।



## ಕಡಗಾದ ಕಯ್ಯ ಹಿಡಿದಾನೆ

ತಿಪ್ಪೆಗೆ ಸಗಣಿ ಹೊರುಬಾರೇ । ದೇವನೆ ಹೇ ದೇವಾ ।
ಅತ್ತೆ ಹೇಳಿದ ಮಾತ ಕೇಳ್ಯಾನ ಗೊರವಯ್ಯ ॥ ದೇ ॥
ತಿಪ್ಪೆಗೆ ಹೋಗಿ ಅಡಿಗ್ಯಾನೆ ಗೊರವಯ್ಯ ॥ ದೇ ॥

ಬಾಗುತ ಬಳುತುತ ಜಾಗುತ ಜಲುಕುತ
ತಿಪ್ಪೆಗೆ ಸಗಣಿ ಹೊರುತಾಳೇ ॥ ದೇ ॥
ತಿಪ್ಪೆಗೆ ಹೇ ಸಗಣಿ ಹೊತ್ತಾಳೇ ಕೋಮಲೆ
ಹಿಂದಿರುಗಿ ತಾನೇ ಬರುವಾಗ ಕೋಮಲೆ ॥ ದೇ ॥
ಹಿಂದಿರುಗಿ ತಾನೇ ಬರುವಾಗ ಕೋಮಲೆ
ಹಿಂದಿರುಗಿ ಹೇ ತಾನೇ ಬರುವಾಗ ಗೊರವಯ್ಯ
ಕಡಗದ ಕಯ್ಯ ಹಿಡಿದಾನೆ ॥ ದೇ ॥
ಕಡಗದ ಕೈಯ್ಯ ಹಿಡಿದಿರುವ ಗೊರವಯ್ಯ ॥ ದೇ ॥
ಅತ್ತೆ ಬರುತಾಳೆ ಕೈಯ್ಯ ಬಿಡೋ- ॥ ದೇ ॥
ಅತ್ತೆ ಬಂದಾರೆ ನಾ ಕೈಯ್ಯ ಬಿಡಲಾರೆ ॥ ದೇ ॥

ಬರುತಾಳೆಂದು ಹಗಲೆಲ್ಲ ನಾ ನೋಡಿದೆ
ಸಿಗಲಿಲ್ಲ ನೀನು ಬರಲಿಲ್ಲಾ ॥ ದೇ ॥
ಸಿಗಲಿಲ್ಲ ನೀನು ಬರಲಿಲ್ಲಾ ಕೋಮಲೆ ॥ ದೇ ॥
ಅಂದಲವ ನೀನು ಹತ್ತು ಬಾರೇ ॥ ದೇ ॥

ಅಂದಲವ ನಾನೆಂಗೆ ಹತ್ತಲಯ್ಯ ॥ ದೇ ॥
ನಾನು ಬಾಣಾತಿ ನಾ ಬರಲಾರೇ ॥ ದೇ ॥
ಬಾಣಾತಿ ನಾನೆಂಗೆ ಬರಲಾರೇ ಮೈಲಾರಲಿಂಗ
ಬಾಲಾಗೆ ಮಲೆಯ ಕೊಟ್ಟು ಬರುವೆ ॥ ದೇ ॥
ಬರುತಳೆಂಬೋಕೆ ನಂಬಿಕೆ ಸಾಲದು
ನೀನೆ ನನ್ನಿಂದೆ ಬರಬೇಕು ॥ ದೇ ॥
ನಾಳೇನೆ ನಿನ್ನಿಂದೆ ಬರುತೀನಿ ಮೈಲಾರಲಿಂಗ ॥ ದೇ ॥
ಬಾಲಯ್ಯ ಅಳುತಾನೆ ಕೈಯ್ಯ ಬಿಡೋ ॥ ದೇ ॥
ಬಾಲಯ್ಯ ಅಳುತಾನೆ ಕೈಯ್ಯ ಬಿಡೋ ಮೈಲಾರಲಿಂಗ
ಗಾಢೋಗಿ ನಾನು ಬರುತೀನಿ ॥ ದೇ ॥
ನೀನೇನೆ ಹೋಗುತೀಯ ನಾನೆಲ್ಲಿ ಇರುವ ತಳವೇಳೆ ॥ ದೇ ॥
ಎಲ್ಲಿ ಹೋಗದಿರ್ರೀ ಮತ್ತೆ ಹೋಗದಿರ್ರೀ
ತಿಪ್ಪಾಗೆ ನೀವು ಅಡಗಯ್ಯ ॥ ದೇ ॥
ತಿಪ್ಪಾಗೆ ನೀವು ಅಡಗಿರಿ ಮೈಲಾರ ಲಿಂಗಸ್ವಾಮಿ
ಗಾಢೋಗಿ ನಾನು ಬರುತೀನಿ ॥ ದೇ ॥

ಅಲ್ಲಿಂದ ಕೋಮಲೆ ಅರಮನೆಗೆ ಬಂದಾಳೇ
ಮಂಚಾಕೆ ತಾನೆ ಕುಂತಾಳೇ ॥ ದೇ ॥
ಮಂಚಾಕೆ ತಾನೆ ಕುಂತಾಳೇ ಕೋಮಲೆ
ಗೊರವಯ್ಯನ ಸೊಬಗ ಮರೆತಾಳು ॥ದೇ ॥
ಗೊರವಯ್ಯನ ಸೊಬಗ ಮರೆತಾಳೆ ಅಂದೇಳಿ
ಎದ್ದೆ ಬರುತಾನೆ ಗೊರವಯ್ಯ ॥ ದೇ ॥
ಎದ್ದೇನೇ ಬರುತಾನೇ ಗೊರವಯ್ಯ ಮೈಲಾರಲಿಂಗ
ಸೆಳ್ಳೇರ ಸಪ್ಪರಕೆ ಬರುತಾನೇ ॥ ದೇ ॥
ಅಲ್ಲಿಂದ ಅವರತ್ತೆ ಏನೆಂದು ಹೇಳುತಾಳೇ

ಭಾವಿ ನೀರಿಗೆ ಹೋಗು ಬಾರೇ ॥ ದೇ ॥
ಅತ್ತೆ ಅಂದ ಮಾತ ಕೇಳ್ಯಾನೆ ಗೊರವಯ್ಯ
ಭಾವೀಗೆ ತಾನೆ ಹೋಗುತಾನೇ ಗೊರವಯ್ಯ ॥ ದೇ ॥
ಭಾವಿ ದಾರ್‍ಯಾಗೆ ಅಡಗ್ಯಾನೇ ॥ ದೇ ॥
ಅಲ್ಲಿಂದ ಕೋಮಲೆ ಭಾವೀಗೆ ಹೋದಾಳೇ ॥ ದೇ ॥

ಮುತ್ತಿನ ಕೊಡುವ ಹಿಡಿದಾಳೇ । ಲಿಂಗಣ್ಣ ದೈವಾಗೋ ।
ಕೊಡುವ ಹಿಡಿಕೊಂಡೆ ಸಿಂಬಿಯ ತಕ್ಕೊಂಡೆ
ಹಾರುವ್ರಕೇರಿಗೆ ಹೋಗುತಾಳೆ ॥ ಲಿಂ ॥
ಹಾರುವ್ರ ಅಕ್ಕದಿರಾ ಹಾರುವ್ರ ತಂಗೆದಿರಾ
ನೀವು ಭಾವಿ ನೀರಿಗೆ ಬರುತೀರಾ ॥ ಲಿಂ ॥
ಆಗ ಹೋದೇವವ್ವ ಈಗ ಒಂದೇವವ್ವ
ಕೊಡಗಳ ನಾವು ಇಳಿವೇವೆ ॥ ಲಿಂ ॥

ಒಕ್ಕಲಿಗರಕೇರಿಗೆ ಹೋದಾಳೆ ಕೋಮಲೆ
ಅಕ್ಕಯ್ಯ ನೀರಿಗೆ ಬರುತೀರಾ ॥ ಲಿಂ ॥
ಆಗ ಹೋದೇವವ್ವ ಈಗ ತಂದೇವವ್ವ
ಈಗಲೆ ಕೊಡವ ಇಳಿವೇವವ್ವ ॥ ಲಿಂ ॥
ಅಲ್ಲಿಂದ ಕೋಮಲೆ ಭಾವಿಗೆ ಹೋದಾಳೆ
ಒಂದೊಂದೆ ಮೆಟ್ಟಿಗೆ ಇಳಿದಾಳೇ ॥ ಲಿಂ ॥
ಒಂದೊಂದೆ ಮೆಟ್ಟಿಗೆ ಇಳಿದಾಳೆ ಕೋಮಲೆ
ತೆರೆವಡೆದೆ ನೀರ ತುಂಬುತಾಳೇ ॥ ಲಿಂ ॥
ತೆರೆವಡೆದೆ ನೀರ ತುಂಬ್ಯಾಳೇ ॥ ಲಿಂ ॥
ಕೊಡಗಳ ತಾನೇ ಎತ್ತುತಾಳೇ ॥ ಲಿಂ ॥

ಕೊಡಗಳ ತಾನೇ ಎತ್ಯಾಳೇ ಕೋಮಲೆ
ಮೇಲಕೆ ಕೊಡವ ಇಳಿವವ್ವ ಲಿಂಗಣ್ಣ ॥ ಲಿಂ ॥
ನೀರಿನೊಳಗೆ ಅಡಗೇನು ಮೈಲಾರ ಲಿಂಗ
ಇದರಿಗೆ ಬಂದೇ ನಿಲ್ಲುತಾನೇ ॥ ಲಿಂ ॥

ಯಾವೂರು ಅಣ್ಣಾ ಯಾವ ದೇಶ ನಿನ್ನದು
ಬಾರಣ್ಣಕೊಡುವ ಹೊರವೀಸು ॥ ಲಿಂ ॥

ಅಣ್ಣನೆಂಬೋಕೆ ಬನ್ನೀಲಿ ಒಂದನೇನೆ
ನಾನೆಂಗೆ ಕೊಡವ ಹೊರಿಸಾಲೆ ॥ ಲಿಂ ॥
ನಾನೆಂಗೆ ಕೊಡವ ಹೊರಿಸಾಲೆ-ಕೋಮಲೆ
ಕೆಳಕೆ ಕೊಡವ ಇಳಿವಾಳೆ ॥ ಲಿಂ ॥
ಕೆಳಕೆ ಕೊಡವ ಇಳಿವಾಳೆ-ಕೋಮಲೆ
ಅಂದಲದ ನೀನು ಹತ್ತು ಬಾರೇ ॥ ಲಿಂ ॥

ಅಂದಲ ಹತ್ತುತೀನಿ ನಾನೇನೆ ಬರುತೀನಿ ॥ ಲಿಂ ॥
ಬಾಲಾಗೆ ಮಲೆಯ ಕೊಟ್ಟು ಬರುವೆ ॥ ಲಿಂ ॥
ಬಾಲಾಗೆ ಮಲೆಯ ಕೊಟ್ಟು ಬರುವೆ-ಮೈಲಾರಲಿಂಗ
ಗಾಥೋಗಿ ನಾನು ಬರುತೀನಿ ॥ ಲಿಂ ॥

ಇಂಥ ಒಂದ ಸುದ್ದಿ ಬಾಳ ಬಾಳ ಹೊತ್ತು
ಎಂತೆಂಬ ಸುದ್ದಿ ಬಾಳ ಹೊತ್ತೆ ಕೇಳಿ ॥ ಲಿಂ ॥
ಅಂದೇಳಿ ಗೊರವಯ್ಯ ನಿಲ್ಲುತಾನೇ ॥ ಲಿಂ ॥

ಎಷ್ಟೊನೆ ಹೇಳಿದ್ರೆ ಕೇಳಲಿಲ್ಲಾ ಮೈಲಾರಲಿಂಗ
ಚಿನ್ನದಲಿ ಮಾಡಿ ಹಿಡಿದಾನ ಮೈಲಾರಲಿಂಗ
ಚಿನ್ನದಲಿ ಮಾಡಿ ಹಿಡಿದಾನೆ ಕೋಮಲೆಯ
ಭಂಡಾರದ ಸೀಲು ತುಂಬುತಾನೇ ॥ ಲಿಂ ॥
ಭಂಡಾರದ ಸೀಲು ತುಂಬ್ಯಾನೇ-ಮೈಲಾರಲಿಂಗ
ಮಾಯ ಮಾಡಿಕೊಂಡೆ ಹೋಗುತಾನೇ ॥ ಲಿಂ ॥
ಅಂದಲ ಏರಿಕೊಂಡೆ ಕೋಮಲೆ ಕರೆಕೊಂಡೆ
ಮೈಲಾರಕೆ ಲಿಂಗಣ್ಣ ಹೋಗಾತಾನೆ ॥ ಲಿಂ ॥

ಸ್ವಾಮಿ ಅಂದಲವ ಬರುತಾವೆಂದು
ಅಳಿಯ ಹೆಗ್ಗಣ್ಣ ನೋಡುತಾನೆ ॥ ಲಿಂ ॥
ಅಳಿಯನೆ ಹೆಗ್ಗಣ್ಣ ನೋಡಿ ಹೋಗುತಾನೆ
ತಂಗಿ ಗಂಗಮ್ಮ್ಗೆ ಹೇಳುತಾನೆ ॥ ಲಿಂ ॥

**ಕೋಮಲೆ ತಂದಿರುವುದು ನಿಜಕಾಣೇ !**

ಏಳವ್ವ ಸಿರಿಗಂಗೆ ಎಷ್ಟೊತ್ತು ಮಲಗಿದ್ದಿ । ದೇವಾನೆ ಹೇ ದೇವಾ ।
ಮಾವನಂದಲವೆ ಬರುತಾವೆ ॥ ದೇ ॥
ಮಾವನಂದಲವೆ ಬರುತಾವೆ_ಸಿರಿಗಂಗೆ ॥ ದೇ ॥
ಮುತ್ತಿನ ಆರತಿ ಕಟ್ಟುಬಾರೇ-ಸಿರಿಗಂಗೆ ॥ ದೇ ॥
ಏನಪ್ಪ ನಮ್ಮಣ್ಣ ಹೊಸ ಸುದ್ದಿ ತಂದಲ್ಲೊ ॥ ದೇ ॥
ಯಾರ್‍ಯಾರು ಅವ್ರು ಬರುತಾರೇ ॥ ದೇ ॥
ಯಾರ್‍ಯಾರು ಅಲ್ಲಿಲ್ಲಾ ಮತ್ತೊಬ್ರು ಯಾರಿಲ್ಲಾ
ಮಾವಯ್ಯೊಬ್ಬನೆ ತಾನೆ ಬರುತಾನೆ ॥ ದೇ ॥
ಮಾವಯ್ಯ ಹೇ ಒಬ್ಬನೆ ಬರುತಾನೆ ಸಿರಿಗಂಗೆ
ಮುತ್ತಿನ ಆರತಿ ಹೊಯ್ಯಿ ಬಾರೇ -ಸಿರಿಗಂಗೆ ॥ ದೇ ॥
ಅಲ್ಲಿಂದ ಸಿರಿಗಂಗೆ ಮೇಲಕೆ ಎದ್ದಾಳೆ
ಗಂಡಗಾರುತಿ ಹೊಯ್ಯುತಾಳೇ ॥ ದೇ ॥
ಬಾಗುತ ಬಳುಕುತ ಜಾರುತ ಜಳುಕುತ



ಎಡವೀದ ಬೆರಳೊಂದಡಿಯಾಗಿ
ಎಡವೀದ ಹೇ ಬೆರಳೊಂದಡಿಯಾಗಿ ।। ದೇ ।।

ಗಂಡಾಗೆ ಆರತಿಯ ಹೊಯ್ಯಿತಾಳೆ ।। ದೇ ।।
ಗಂಡಾಗೆ ಆರತಿಯ ಹೊಯ್ಯಿತೀನಿ ನಿಂತುಕೊಂಡು
ಸ್ವಾಮೀಗೆ ಆರತಿಯ ಬೆಳಗುತಾಳೆ ।। ದೇ ।।
ಅಡಕೆಯಿತೆ ಎಲೆಯಯಿತೆ ಲವಂಗ ಪತ್ರಯಿತೆ
ಯಾಲಕ್ಕಿ ಇಲ್ಲಾ ಎಲೆಯಾಗೆ ।। ದೇ ।।
ಯಾಲಕ್ಕಿ ಇಲ್ಲವಲ್ಲೆ ಎಲೆಯಾಗೆ ಎಲೆ ಹೆಣ್ಣೇ
ಯಾವನ್ನ ನೋಡಿ ಮರೆತೀಯೆ ।। ದೇ ।।
ಯಾರ ನೋಡಲಿಲ್ಲಾ ಯಂತು ನೋಡಲಿಲ್ಲಾ
ಫಾಲಕಿ ಮೇಲೆ ನನಗ್ಯಾನ ।। ದೇ ।।

ಬ್ಯಾಸಿಗೆ ಬಿಸಿಲಯ್ಯ ಕೂಸಿನ ತಾಯಯ್ಯ
ತಾಸತ್ತಿನ ಸಿಟ್ಟ ತಡಮಾಡೋ ।। ದೇ ।।
ಮುಂದೆ ಮುಂದೆ ಗಂಗಮ್ಮ
ಹಿಂದೆ ಹಿಂದೆ ಮೈಲಾರ ಲಿಂಗ ।। ದೇ ।।
ಹೋದಾರೆ ಅವ್ರು ಮಠಕಿನ್ನ ।। ದೇ ।।
ಹೋದಾರೆ ಅವ್ರು ಹೊಳೆಯಾಕೆ ಮಾಲಾರ ಲಿಂಗ
ತೂಗೋ ಮಂಚದಲಿ ಕುಂಡ್ರುತಾರೇ ।। ದೇ ।।
ಬಾರಲೆ ಸಿರಿಗಂಗೆ ಎಷ್ಟೊತ್ತು ಮಾಡುತಿ
ಬಚ್ಚಲಿಗೆ ನೀರು ಹಿಡಿಬಾರೇ ।। ದೇ ।।

ಅಲ್ಲಿಂದ ಗಂಗ್ಯಮ್ಮ ಗೋಳಾಡಿ ಅಳುವುತ
ಗಂಡಾಗೆ ನೀರ ಹಿಡಿದಾಳೇ ।। ದೇ ।।
ಯಾಕಲೆ ಸಿರಿಗಂಗೆ ಗೋಳಾಡಿ ಅಳುವುತ
ಮನ್ನಾಗಳ ದುಃಖ ನನಗೇಳೆ ।। ದೇ ।।
ಮನ್ನಾಗಳ ದುಃಖವ ನೀವೀನ ಕೇಳೀರಿ ರಾಯ
ನನ ಮೇಲೊಬ್ಬಳ ರಾಣೆ ತಂದಿದ್ದೀರ ।। ದೇ ।।
ಅಲ್ಲಿಂದ ಸಿರಿಗಂಗೆ ಸ್ವಾಮೀಗೆ ನೀರ ಎರೆದೆ
ಅಡಿಗೆ ಕೋಣೆಗೆ ಬರುತಾಳೆ ।। ದೇ ।।

ಅಡಿಗೆ ಕೋಣೆಗೆ ಬಂದಾಳೆ ಗಂಗಮ್ಮ
ಮಹಾರಾಯಗೆ ಅಡಿಗೆ ಸವುದಾಳೆ ॥ ದೇ ॥
ಮಹಾರಾಯಗೆ ಅಡಿಗೆ ಸವುದಾಳೆ ಗಂಗಮ್ಮ
ಗಂಡಾಗ ಉಣ್ಣಾಕೆ ನೀಡುತಾಳೆ ॥ ದೇ ॥

ಹಾಲೀನ ಸಕ್ಕರೆ ಸಲಿಸ್ಯಾನೆ ಮೈಲಾರ ಲಿಂಗ
ತೂಗೋ ಮಂಚದಲಿ ಕುಂಡ್ರು ತಾನೇ ॥ ದೇ ॥

ಅಲ್ಲಿಂದ ಸಿರಿಗಂಗೆ ಹೊಳಿಯಾಕೆ ಹೋದಾಳೆ
ತಬಿಕೀಲಿ ವಿಳ್ಯೇವ ತರುತಾಳೇ ॥ ದೇ ॥
ಗಂಡನ ಮಂಚಾಕೆ ಇಡುತಾಳೇ ॥ ದೇ ॥
ವಿಳ್ಯೇವ ಇಟ್ಟಾಳೆ ಹೊಳಿಯಾಕೆ ಹೋದಾಳೆ ॥ ದೇ ॥
ನಂದದೇವಿಗ್ಗೆ ಹೂ ಮುಡಿಸ್ಯಾಳೆ ಸಿರಿಗಂಗೆ
ಗಂಡನ ಮಂಚಕ್ಕೆ ಹಾಕ್ಯಾಳೆ ಸಿರಿಗಂಗೆ ॥ ದೇ ॥
ಗಂಡನ ಮಂಚಕೆ ಕುಂತಾಳೆ ಸಿರಿಗಂಗೆ
ಗಂಡನ ಮಂಚಕೆ ಬರಲಿಲ್ಲಾ ಅಂದೇಳಿ
ಮಾಳಿಗೆ ಹತ್ತಿ ಹೇ ನೋಡ್ಯಾಳೇ ॥ ದೇ ॥
ಮಾಳಿಗೆ ಹತ್ತಿ ಹೇ ನೋಡುವಾಗ ॥ ದೇ ॥
ಸಿರಿಗಂಗೆ ಕೋಮಲೆ ಶಿವನು ಮಲಗಿದ್ದರು ॥ ದೇ ॥
ಕೋಮಲೆ-ಶಿವನು ಮಲಗಿದ್ದರೆಂಬೋದ ಕೇಳಿ
ಗೋಳು ಗೋಳಾಡಿ ಅಳುತಾಳೆ ॥ ದೇ ॥

ಅಲ್ಲಿಂದ ಮಾಳಿಗೆ ಇಳಿದಾಳೆ ॥ ದೇ ॥
ಅಡಿಗೆ ಕೋಣೆಗೆ ಬರುತಾಳೆ ॥ ದೇ ॥
ಅಡಿಗೆ ಕೋಣೆಗೆ ಬರುತಾಳೆ-ಸಿರಿಗಂಗೆ
ಗಂಗಮ್ಮ ಐದಾಳೆಂಬೋದ ಕೇಳಿ
ಮೈಲಾರ ಲಿಂಗನೆ ಬರುತಾನೇ ॥ ದೇ ॥
ಏನೇಲೆ ಸಿರಿಗಂಗೆ ನೀನ್ಯಾಕೆ ಅಳುತೀಯ
ಅಳುವ ಕಾರಣವ ನನಿಗೇಳೆ ॥ ದೇ ॥
ಅಳುವ ಕಾರಣವ ನನಿಗೇಳೆ ॥ ದೇ ॥
ತೂಗೋ ಮಂಚಾಕೆ ಬರಲಿಲ್ಲಿ ॥ ದೇ ॥

ದೇಶ ದೇಶವ ತಿರುಗಿ ಬ್ಯಾಸತ್ತೆ ನಾ ಬಂದೇ
ಬ್ಯಾಸರ ಹಿಡಿದೆ ನಾ ಮನಿಗೇನೆ ॥ ದೇ ॥
ಬ್ಯಾಸರ ಹಿಡಿದೆ ನಾ ಮನಿಗೇನೆ ॥ ದೇ ॥
ತಾಸತ್ತಿನ ಸಿಟ್ಟು ತಡಮಾಡೆ ॥ ದೇ ॥
ತಾಸತ್ತಿನ ಸಿಟ್ಟು ತಡಮಾಡೆ-ಸಿರಿಗಂಗೆ
ಕೋಮಲೆ ತಂದಿರುವುದು ನಿಜ ಕಾಣೇ ॥ ದೇ ॥
ಕೋಮಲೆ ತಂದಿರುವುದು ನಿಜ ಕಾಣೇ ನನ ಮಡದಿ

ಬಲಗಾಡೆಲವಳು ಇರುತಾಳೆ ॥ ದೇ ॥
ಬಲಗಾಡೆಲವಳು ಇರುತಾಳೆ ಸಿರಿಗಂಗೆ
ಎಡಗಡೆಗೆ ನೀನು ಇರುವಂತೆ ॥ ದೇ ॥

ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ
ಇಲ್ಲಿಗೆ ಈ ಸಂಧಿ ಪದ ಮುಂದೆ ॥ ದೇ ॥
ಇಲ್ಲಿಗೆ ಈ ಸಂಧಿ ಪದ ಮುಂದೆ-ಮೈಲಾರ ಲಿಂಗ
ಇನ್ನ ಹೇಳಿದರೆ ಬೆಳಗಾಗಿ ॥ ದೇ ॥



# ಹಾಲಕ್ಕಿ ಒಕ್ಕಲಿಗರ ಕಾವ್ಯ



## ಮಾದೇವರಾಯ

ಸೊಮಿ ಹುಟ್ಟುದಕ್ಕಿಂದಲೂ[1] ಭೂಮಿ ಹುಟ್ಟೂದಕ್ಕಿಂದಲೂ
ಮಾದೇವರಾಯಾ ಕಲ್ಯಾಣ ಪಟ್ಟಣದೊಳಗ ಹತ್ತಿ
ಮೂಡಿ ಬಂದನೊ ಮಾದೇವರಾಯಾ
ಸೊಮಿ[2] ಹುಟ್ಟೂದಕ್ಕಿಂತಲು ಭೂಮಿ ಹುಟ್ಟೂದಕ್ಕಿಂದಲು ಮಾದೇವರಾಯಾ
ಕಲ್ಯಾಣ ಪಟ್ಟಣದೊಳಗ ಹತ್ತಿ ಮೂಡಿ ಬಂದನೊ ಮಾದೇವರಾಯಾ
ತಂದಾನಾನ್ ತಂದೂ ನಾನಾಲೊ

| | | |
|---|---|---|
| ದಿಕ್ಕೇಳೂ[3] ಸುತ್ತಾಡಿ[4] ಬರುವಾ | ತಂದಾನಾನ್ | ತಂದೂ ನಾನಾಲೋ |
| ದಿಕ್ಕೇಳು ಸುತ್ತಾಡಿದಾ ಒಳಗೋಲ್ | ” | ” |
| ದಿಕ್ಕದಲ್ಲಿ ನೋಡುತೇವುಳಿದಾ | ” | ” |
| ಎಲ್ಲೂ ಯಾರೇನು ಕಾಣಾನೇಯಿಲ್ಲಾ[5] | ” | ” |
| ಹಣಕೇಳು[6] ರಾಜೀಕೇ[7] ಬರುವಾನ್ | ” | ” |
| ಹಣಕೇಳ್ ರಾಜೀದಾ ಒಳಗೋಲ್ | ” | ” |
| ಎಲ್ಲೂ ಯಾರೇನು ಕಾಣಾನೇನಿಲ್ಲ | ” | ” |
| ಮೈಲಕೇಳು ರಾಜೀಕೇ ಬರುವಾನ್ | ” | ” |
| ಮೈಲಕೇಳು ರಾಜೀದಾ ಒಳಗೋಲ್ | ” | ” |
| ಎಲ್ಲೂ ಯಾರೇನು ಕಾಣನೇನಿಲ್ಲ | ” | ” |
| ಲಾಗೇನಾ ಮಾಡೂತ್ತೇ ಒಳಿದಾನ್ | ” | ” |
| ಮಯ್ಗಿದ್ದ ಕೆಸುರಾನೇ[8] ಬರುಗ್ಯಾನ್[9] | ” | ” |
| ಕೆಸರೀನ್ ಗುಂಡಾನೇ ನೆಯಿದಾನ್[10] | ” | ” |

---

1. ಹುಟ್ಟುವುದಕ್ಕಿಂತಲೂ 2. ಸ್ವಾಮಿ 3. ದಿಕ್ಕನ್ನು ಏಳು 4. ಸುತ್ತು ತಿರುಗಿ 5. ಕಾಣಲಿಲ್ಲ 6. ಬಗ್ಗಿ ಏಳು 7. ರಾಜ್ಯಕ್ಕೆ 8. ಕೆಸರನ್ನು 9. ಬರಗಿದನು. 10. ಮಾಡಿದ 11. ಪಾರಿವಾಳ ಹಕ್ಕಿ 12. ಬರುತ್ತ 13. ಉಳಿದ 14. ಹಕ್ಕಿಗೆ 15. ಪಡೆದನು,

| | | |
|---|---|---|
| ಪಾರಗೋಳಕ್ಕಿ[11] ಬರುವೂತೆ[12] ಒಳಿದಾ[13] | ” | ” |
| ಲಕ್ಕೀಗಾರೇ[14] ಜೀವಾನೇ ಪಡಿದಾನ್[15] | ” | ” |
| ನೀನೇ ಕೇಳೇ ಲಕ್ಕೀನೇ ಲಂದಾ | ತಂದಾನಾನ್ | ತಂದೂ ನಾನಾಲೋ |
| ನೀನೇ ಸುತ್ತೇಳೂ ರಾಜೀ ತಿರುಗೆಲ್ಲಾ ಬರುಬೇಕ್ ” | | |
| ಸುತ್ತೇಳೂ ರಾಜೀದಾ ಒಳಗೋಲ್ | ” | ” |
| ಮನಸರು[16] ಮಾನೋರು ಕಾಣುದೇತರಲೇ | ” | ” |
| ಮನಸರು ಮಾನೋರು ಕಂಡುಂಟೇಲಾದರೆ[17] | ತಾಳಲಲ್ಲೀ | ಲಲ್ಲೇಲೊ |
| ನನಗಾದರೆ ಬಂದಲಿ ತಿಳಿಸೇ | ” | ” |
| ಲಟ್ಟೊಂದು ಹೇಳೀದಾ ಮೈನೇ | ” | ” |
| ಮಾದೇವರಾಯಾನಾ ಮಾತಾನೇ ಕೇಳೀನ್ | ” | ” |
| ಲಕ್ಕೀಲಾರೇಳು ಮೂಡೇಳು[18] ರಾಜೀಕೇ | ” | ” |
| ಸುತ್ತೆಲ್ಲಾ ರಾಜೀಲೀ ತಿರುಗ್ಯೇಲೆ[19] | ” | ” |
| ಎಲ್ಲೂ ಯಾರನೇ[20] ಕಾಣಾನೇನಿಲ್ಲ | ” | ” |
| ಮೂಡಾನೊಂದು ರಾಜೀದಾ ಒಳಗೋಲ್ | ” | ” |
| ಕನ್ನೆಲೀ[21] ಹೆಣ್ಣೊಂಬದೇವೊಂದು | ” | ” |
| ಬಾಳೆಯಲಿಯಾ ಹಿಡಿಯಾಲೇ[22] | ” | ” |
| ಸುಬಂಗಿನಾ[23] ಸಮುರದಾ[24] ಮೈನೋ | ” | ” |
| ಕುಡಿಯು ಒಂದೇ ಬಾಳೆಲಿಯಾ ಮೈನೋ | ” | ” |
| ಏಳು ಸೂಜಿ ಪೊಂದಾನೇ[25] ಊರೇ | ” | ” |
| ಸೂಜಿ ಒಂದೇ ಮೊನಿಯಾಲೇ ಮೈನೋ | ” | ” |
| ತಾನೇ ಕುಳಿತಾಲೀ ಜಪ ಮಾಡೂತೇ ಒಳಿದಾಳ | ” | ” |
| ಮದ್ದೀದಲ್[26] ಏನಂತೇಳ ಹೇಳೂತೇ ಒಳಿದಾಳ[27] ” | | ” |
| ತಾನೇ ಹುಟ್ಟಿದಲ್ ಹೊಲಿಯಾರ[28] ಹುಡುಗೇ | ” | ” |
| ಬುಡದಲ್ಲೇ ಬಟ್ಟಾರ ಹುಡುಗೇ | ” | ” |
| ಊರುಕೇರಿ ನನ್ನದೇ ಅಂದಾಳ | ” | ” |

---

16. ಮನುಷ್ಯರು 17. ಕಂಡದ್ದಾದರೆ 18. ಪೂರ್ವದ ಏಳು 19. ತಿರುಗಿತು 20. ಯಾರನ್ನೂ 21. ಕನ್ನೆ 22. ಹಿಡಿದುಕೊಂಡು 23. ಸೊಬಗಿನ? 24. ಸಮುದ್ರ 25. ಬುಡ 26. ಮಧ್ಯದಲ್ಲಿ 27. ಉಳಿದಳು 28. ಹೊಲೆಯರ 29. ತನಗಿಂತ 30. ಅಷ್ಟೊಂದು

ತನಕೀನ[29] ಹೆಚ್ಚೀನೋರ ಯಾರಿಲ್ಲಾ    "    "
ಲಾಗೇಲೇ ಲಾವಾಲೇ ಲಕ್ಕಿ    "    "
ಲಟ್ಟೊಂದೇ[30] ಮಾತಾನೇ ಕೇಳ್ಯಾಳೊ    "    "
ಲಲ್ಲಿಂದೆ ಹಿಂದಾನೇ ಬರುವಾಳೋ    ತಾಳಲಲ್ಲೀ    ಲಲ್ಲೇಲೊ
ಮಾದೇವರಾಯಾಯಿದ್ದಲ್ಲೇ ಬರುವಾಳೋ    "    "
ಇಲಕೇಳೋ ಒಡಿಯಾಲೇಲಂದಾಳ    "    "
ನಾನಂಬಾ ದಿನುದಾಲೇ ಒಳಗೋಳ    "    "
ಊರು ಕೇರ್‍ಯಲ್ಲಾ ಸುತ್ತಾಡೇ ಬಂದೇ    "    "
ಎಲ್ಲೂ ಯಾರೇನ ಕಾಣಾನೇನಿಲ್ಲಾವೋ    "    "
ಮೂಡನೊಂದೇ ರಾಜೀದಾ ಒಳಗೋ    "    "
ಕೋಲ್ ಕ್ವೊಲೇ ಕೋಲ್ ಕ್ವೊಲೇ ಕೋಲೆನ್ನು ಕ್ವೊಲೇ    "    "
ಇಲಕೇಳೋ ಒಡಿಯಾಲೇ ಲದುವೊಂದು[31] ಲಕ್ಕಿ[32]    ಕೋಲೆನ್ನು ಕ್ವೊಲೇ
ಮೂಡಣಾ ರಾಜೀದಾ ಒಳಗೇ ಒಡಿಯಾ ಕೇಳೋ    "
ಕನ್ನೆವೊಂದ್ ಹೆಣ್ಣೀಲೆ ಲೇಳೀಲು[33] ನೋಡಿನ್ನೆ    "
ಆವೊಂದು ಕನ್ನೀಲೇ ಹೆಣ್ಣೀಲೇ ಲಂಬಾದೇ    "
ತಾನ್ಹೆಚ್ಚು[34] ತನಕಿಂತು ಹೆಚ್ಚಿನೋರ್‍ಯಾರಿಲ್ಲಲಂದೇ    "
ಲಟ್ಟಂತೇ ಹೇಳೂತೇ ಒಳಿದಾಲೆಲೊಲಾ ಹೆಣ್ಣೆ[35]    "
ಲಾಗೇನಾ ಮಾಡೂತಾಲೆ ಉಳಿದಾ ಮಾದೇವುರಾಯಾ    "
ಬಸವೇಸನ ಪಡೆವೂತೆ[36] ಉಳಿದಾ ಮಾದೇವುರಾಯಾ    "
ಇಲಕೇಳೋ ಬಸವಾಲೇಲಂದಾ[37] ಮಾದೇವುರಾಯಾ    "
ಮೂಡಣದ ರಾಜೀದ ಒಳಗೇ ಬಸವೇಸುನೇ    "
ಕನ್ನೆವೊಂದು ಹೆಣ್ಣೀಲೇ ಒಳಿದೇಲು[38] ನೋಡಿನ್ನೆ    "
ಲಾವೊಂದು ಕನ್ನೆಲೇ ಹೆಣ್ಣೀಲೇ ಲಂದ    "
ನೀನೇ ಬಸಮಾನೇ[39] ಮಾಡೇಲೆ ಬರಬೇಕೋ ಬಸುವಯ್ಯಾನೇ    "
ನೀನೇ ಒಂದಂಬಾ ಇಟಲಾನೇ[40] ಹೊಡಿಯೆ ಬಸುವಯ್ಯನೆ    "
ಬಲಗಾಲ ಕೆದರಾಬೇಕೇ ಬಸುವಯ್ಯಾನೇ    "

---

31. ಅದೊಂದು 32. ಹಕ್ಕಿ 33. ಹೇಳಿದ್ದಾಳೆ 34. ತಾನು ಹೆಚ್ಚಿನವಳು 35. ಉಳಿದಳು ಆ ಹೆಣ್ಣು 36. ಪಡೆದ 37. ಬಸವಾ ಎಂದ 38. ಇದ್ದಾಳೆ 39. ಭಸ್ಮ 40 ಬಸವ, ಗೂಳಿಯ ಕೂಗು, ಹುಂಕಾರ ಧ್ವನಿ



ಎರಡಂಬು ಇಟಲಾನೇ ಹೊಡಿಯೋ ಬಸುವಯ್ಯಾನೇ ”
ಎಡಗಾಲ ಕೆದರೇಲೇ ಬೇಕೇ ಬಸುವಯ್ಯಾನೇ ”
ಮೂರಂಬಾ ಇಟಲಾನೇ ಹೊಡೆದಾಗ ಬಸವಯ್ಯಾನೇ ಕೋಲು ಕ್ವೊಲೇ ಕೋಲೆನ್ನಕ್ವೊಲೇ
ಕನ್ನೆನೇ ಮಾಯಾಗೇಲಾವಾಗೇ ದೋಗೂದೇ[41] ನೋಡಿನ್ನೆ ”
ನೀನಲ್ಲಿಗಾರೇ ಹೋಗಬೇಕೇ ಬಸವಯ್ಯಾನೇ ”
ಮಾದೇವರಾಯಾನ ಮಾತಾನೇ ಕೇಳಿ ಬಸವಯ್ಯಾನೇ ”
ಒಂದೆರಡು ಗಾವಿರದಲೆ[42] ನಡೆದಾ ಬಸವಯ್ಯಾನೇ ”
ಹೋಗು ಮುಟ್ಯಾ ಮೂಡಣಾ ರಾಜೀಗ್ ಬಸವಯ್ಯಾನೇ ”
ಕಾಳೆಮ್ಮೆ ಒಂದಂಬು ಇಟಲಾನೇ ಹೊಡೆದಾ ಬಸವಯ್ಯ ”
ಬಲಗಾಲ ಕೆದರೂತ ಒಳಿದಾ ಬಸವಯ್ಯಾನೇ ”
ಎರಡಂಬ ಇಟಲಾನೇ ಹೊಡೆದಾ ಬಸವಯ್ಯನೇ ”
ಎಡಗಾಲಾ ಕೆದರೂತ ಒಳಿದಾ[43] ಬಸವಯ್ಯಾನೇ ”
ಮೂರಂಬಾ ಇಟಲಾನೆ ಹೊಡೆದಾಗ ಬಸವಯ್ಯಾನೇ ”
ಕನ್ನೆ ಮಾಯಾಗೇ ಹ್ವೊದೊ[44] ಬಸವಯ್ಯನೇ ”
ಲಲ್ಲಿಂದೇ ಹಿಂದಾಗೇ ಬರುವಾ ಬಸವಯ್ಯನೇ ”

---

41. ನಾಶವಾಗುತ್ತಾಳೆ 42. ಗಾವುದ 43. ಉಳಿದ 44. ಹೋದಳು

ಮಾದೇವ್ ರಾಯಿದ್ದಲ್ಲೀ ಬರುವಾ ಬಸವಯ್ಯನೇ ”
ಇಲಕೇಳೋ ಒಡಿಯಾಲಂದಾ ಬಸವಯ್ಯನೇ ”
ಬಸಮಾಲೀ ಮಾಡೇಲಿ[45] ಬಂದಿ[46] ಒಡಿಯಾ ಕೇಳೋ ”
ಒಂದಾನೊಂದ್ ಒಂದಾನಾ ದಿನದಲ್ಲೇ ನೋಡಿನ್ನೇ ”
ಇಟ್ಟಾಲಾ[47] ಇನ್ನೇನೇಲಾದೂಲು[48] ನೋಡಿನ್ನೇ ”
ಲಾವೊಂದು ಲಕ್ಕೀಲಿ ಲಂಬುದಕೇ ನೋಡಿನ್ನೇ ”
ಮೊಟ್ಟೀಲಾಕೂವಾ[49] ದಿನವೇ ಬಂದವು ಲಾಲಕ್ಕೀಗೇ ”
ಇಲಕೇಳೋ ಒಡಿಯಾಲೇಲಂದೂ ಲಾಲಕ್ಕೀ ”
ಹಿಂದಾನಂಬ[50] ದಿನದಲ್ಲಿ ಒಳಗೇ ಒಡಿಯಾ ಕೇಳೋ ”
ಮೊಟ್ಟೀಯಾಕುವ[51] ದಿನವೇ ಬಂದು ನೋಡಿನ್ನೇ ”
ಮರಗೋಳೇ ಕಾಂಬೂದೆನಿಲ್ಲಾ[52] ಒಡಿಯಾ ಕೇಳೋ ”
ಜಗ್ಗೆ[53] ಸೊಪ್ಪಿನ್ನು ಕಾಂಬೂದೆನಿಲ್ಲಾ ಒಡಿಯಾ ಕೇಳೋ ”
ನಾನೆಲ್ಲೀ ಮೊಟ್ಟೀಯಾಲಿಡಲೋ[54] ಒಡಿಯಾ ಕೇಳೋ ”

ಲಾಗೆಲೀ[55] ಮಾದೇವುರಾಯಾ ಲಂಬವ್ನು ಕೋಲು ಕ್ವೋಲೇ ಕೋಲೆನ್ನ ಕ್ವೋಲೇ
ಕಯ್ಯಾದ್ರೆ ನೀಡೇಲಿ ಕೊಡುವಾ ಮಾದೇವುರಾಯಾ ”
ಲಾಗೇಲೋ ಪರಗೋಳಲಕ್ಕೀ[56] ಲಂಬೂದೇ ”
ತಳಗಯ್ಯಾ ಮ್ಯೆನ್ ಮೊಟ್ಟೀಯಾಲಿಡುವಾದ ಲಾಲಕ್ಕಿ ”
ಲಾವೊಂದು ಮೊಟ್ಟೀಲಿ ತಳದಾ[57] ಮಾದೇವುರಾಯ ”
ಲಾವೊಂದು ಮೊಟ್ಟೀನೇ ಒಡಿದಾ ಮಾದೇವುರಾಯ ”
ಕೆಂಪೊಂದು ಪಲವನೇ ತಡದಾ ಮಾದೇವುರಾಯ ”
ಭೂಮೀಲಿ ಪಡೆವೊತೇ[58] ಒಳಿದಾ ಮಾದೇವುರಾಯಾ ”
ಬಿಳಿವೊಂದೇ ಪಲವಾನೇ ತಡದಾ ಮಾದೇವುರಾಯಾ ”
ಲಾಕಾಸಾ[59] ಪಡೆವೂತೇ ಒಳಿದಾ ಮಾದೇವುರಾಯಾ ”
ಲಾಗೇ ಬೂಮ್ಯೆಲ್ಲಾಲಂದೂತೇ[60] ಉಳಿದು ಮಾದೇವುರಾಯಾ ”

---

45. ಮಾಡಿ 46. ಬಂದಿದ್ದೇನೆ. 47. ಇಷ್ಟೆಲ್ಲಾ 48. ಇನ್ನೇನಾಯಿತು 49. ಮೊಟ್ಟೆಹಾಕುವ 50. ಹಿಂದೆಂಬ, ಇಂದೆಂಬ 51. ಮೊಟ್ಟೆಹಾಕುವ 52. ಕಾಣುವುದೇ ಇಲ್ಲಾ 53. ಮುಳ್ಳುಕಡ್ಡಿ 54. ಮೊಟ್ಟೆಯಿಡಲಿ 55. ಆಗ 56. ಪಾರಿವಾಳ ಹಕ್ಕಿ 57. ತೆಗೆದುಕೊಂಡು 58. ಪಡೆದ 59. ಆಕಾಶ 60. ಕಂಪಿಸುತ್ತ 61. ಕಲ್ಲು ಕಂಟವನ್ನು 62. ಮುಳ್ಳುಹಿಂಡು



ಬೂಮೀನೇ ನಾಮಾಡು ತಳಿದಾ ಮಾದೇವುರಾಯಾ ”
ಕಲ್ಲೊಂದೇ ಕಂಟಾನೇ[61] ಕೊಡುವಾ ಮಾದೇವುರಾಯಾ ”
ಮರವೊಂದೇ ಜೆಗ್ಯೆಲ್ಲಾ[62] ಕೊಡುವಾ ಮಾದೇವುರಾಯಾ ”
ಲಾಗೇ ಬೂಮ್ಯೆಲೇ ಗಟ್ಟಾಗು ತುಳಿದು[63] ಮಾದೇವುರಾಯಾ ”
ಲಾತೊಬ್ಬಾ ಲಂದೂತೇ ಉಳಿದಾ ಮಾದೇವುರಾಯಾ ”
ತಾನೇನಾ ಮಾಡೂತೇ ಉಳಿದಾ ಮಾದೇವುರಾಯಾ ”
ಮುಚ್ಚಪ್ರ[64] ಕೊಡುತೇ ಉಳಿದಾ ಮಾದೇವುರಾಯಾ ”
ಸೂರ್ಯಾಲೇ ಚಂದ್ರಾಲೇ ಕೊಡುವಾ ಮಾದೇವುರಾಯಾ ”
ಲಾಗೇ ಲಾಕಾಸಾ ಗಟ್ಯಾಗೇ ಒಳಿದು ಮಾದೇವುರಾಯಾ ”
ಲಾಗೇ ಮಂದೀನು ಮಾನವರು ಪಡವೂ ತುಳಿದಾ ಮಾದೇವುರಾಯಾ ”
ದನಕರು ಪಡುವೂತೇ ಉಳಿದಾ ಮಾದೇವುರಾಯಾ ”
ಮುಕ್ಯರನೆಲ್ಲಾ[65] ಪಡೆದಾ ಮಾದೇವುರಾಯಾ ”
ಎರಗೆಂಬತ್ತು[66] ಕೋಟ್ಯೆಲ್ಲಾ ಪಡೆದಾ ಮಾದೇವುರಾಯಾ ”

---

63. ಗಟ್ಟಿಯಾಗುಳಿಯಿತು 64. ಮೂರು ಚಪ್ಪರ ಮೂರು ಲೋಕ? 65. ಮುಖ್ಯರನ್ನು 66. ಇರುವೆಯೆಂಬತ್ತು.

## ದೇವತೆಗಳ ಸುಗ್ಗಿ


ತಾಲಾಲೆಲ್ಲೇ ಲೆಲ್ಲೇಲೋ ಲಲ್ಲಾಮ ಹತ್ತಾಲಾ, ಲಲ್ಲೇ, ಲಲ್ಲೇಲೋ
ಒಂದಲ್ಲಾ ಒಂದಾನಾ ದಿನದಲ್ಲೀ ಮಾದೇವುರಾಯಾ ತಾಲಾಲಲ್ಲೇ ಲಲ್ಲೇಲೋ
ಸುಗ್ಗಿಯಾಟ ತೆಗಿಯಾಬೇಕೆಂದೇ ಮಾದೇವುರಾಯಾ ”
ತಾನೇನ ಮಾಡೂತೇ ಉಳಿದಾ ಮಾದೇವುರಾಯಾ ”
ದೇವತೆಗೋಳಾ ಕರವೂ ತುಳಿದಾ ಮಾದೇವುರಾಯಾ ”
ತಾಯೇನಾ ಮಾಡೂತೆ ಉಳಿದಾ ಮಾದೇವುರಾಯಾ ”
ಕನಸೀನ[1] ಮದ್ದೂಳಿಗೆಯಿದಾ[2] ಮಾದೇವುರಾಯಾ ”
ಕನಸೀನ ದ್ಯೆವೂಂಟೆ ಗೆಯಿದಾ ಮಾದೇವುರಾಯಾ ”
ಕನಸೀನಲಿ ದ್ಯೆವೂಂಟೆನೆ ಗೆಯಿದಾ ಮಾದೇವುರಾಯಾ ”
ಬೆಳ್ಳೀಯ ಸಜ್ಜಿನೇ[3] ಗೆಯಿಸ್ಯಾ[4] ಮಾದೇವುರಾಯಾ ”
ಚಿನ್ನದಾ ಕೋಲಾನೇ ಗೆಯಿದ್ಯಾ ಮಾದೇವುರಾಯಾ ”
ಹೀಲಿದೊಂದ್[5] ಕುಂಚಾನೇ ಗೆಯಿಸ್ಯಾ ಮಾದೇವುರಾಯಾ ”
ಸುಗ್ಗಿಯೊಂದೇ ದಶಮೀಯಾ ದಿನದಲ್ಲೀ ಮಾದೇವುರಾಯಾ ”
ದೇವತೆಗೋಳಾ ಕರೆವೂತುಳಿದಾ[6] ಮಾದೇವುರಾಯಾ ”
ಲಾಗೆಲೋ ದೇವತೆಗೊಳೇಲೇನಂಬೂರು ”
ಸುಗ್ಗಿಯೊಂದೇ ದಶಮಿಯ ದಿನದಲ್ಲೇ ದೇವತೆಗೋಳು ”
ಮಾದೇವುರಾಯಾ ಲಂಗ್ಳಕೆ[7] ಕೂಡ್ಯಾರ್[8] ದೇವತೆಗೋಳು ”
ಲಾಗೇನಾ ಮಾಡೂತೇವುಳಿದಾ ಮಾದೇವುರಾಯಾ ”
ಕಾಳಿಂಗ್ರಾಜನ[9] ಕರುವೂ ತುಳಿದಾ ಮಾದೇವುರಾಯ ”
ಕಾಳಿಂಗ್ರಾಜಗೆ ದ್ಯೆಂವಟಿ ಕೊಡುವಾ ಮಾದೇವುರಾಯಾ ”

1. ಕಂಚಿನ ? 2. ಆ ಮಾಡಿದಾ 3. ನವಿಲು ಗರಿಗಳನ್ನು ಒಟ್ಟಾಗಿಸುವ ಜಾಳಿಗೆಯ ಚೀಲ, ಸಂಚಿ 4. ಮಾಡಿಸಿದ 5. ನವಿಲುಗರಿ 6. ಕರೆದನು 7. ಅಂಗಳದಲ್ಲಿ 8. ಕೂಡಿದರು 9. ಕಾಳಿಂಗರಾಜನನ್ನು

ಮಾದೇವುರಾಯ ಮದ್ದಳೆ ತಡೆದಾ ಮಾದೇವುರಾಯಾ ”
ದೇವತೆಗೋಳೀಗೇ ಕುಂಚಾ ಕೊಡುವಾ ಮಾದೇವುರಾಯಾ ”
ಕೋಲೋಂದೇ ಕುಂಚಾನೇ ತೆಗೆದರೆ ದೇವತೆಗೋಳು ”
ಸುಗ್ಗಿವೊಂದು ಲಾಗಾನೇಲಾಡ್ಯಾರ ದೇವತೆಗೋಳುತಾ ”
ಯಾರಾವೊಂದು ಮನಗೇಲಿ ಹೋದರ್ ದೇವತೆಗೋಳು ತಾಲಾಲಲ್ಲೇ ಲಲ್ಲೇಲೋ
ಮಾಲಕ್ಷ್ಮಿ ಮನಿಯಾಲೇಲಂಗಾಳಾ ಮುಂದೇಲೋ ”
ಸುಗ್ಗಿವೊಂದೇ ಕುಣಿತಾನೇ ಕುಣಿದರ್ ದೇವತೆಗೋಳು ”
ನೆತ್ತಿಲಿಂದೆಲು ಕಾಲಿಗಿಳಿದವು ದೇವತೆಗೋಳೀಗೆ ”
ಲಾವಾಗಲಿ ರೆಜಗ ಜಾಗರಿದು ದೇವತೆಗೋಳಿಗೆ ”
ಲಾಗೇನಾ ಮಾಡೂತೇವೂಳಿದಾ ಮಾಲಕ್ಷುಮಿ ”
ಮಾಳೂಗಿ ಒಳಗಾನೇ ನಡೆದಾ ಮಾಲಕ್ಷುಮಿ ”
ಮಂಡಿಬಾಚಿ ಮುಡಿ[10] ಯಾ ಬಿಗಿದಳ ಮಾಲಕ್ಷುಮಿ ”
ಮುಡಿಯಾ ತುಂಬೇ ಹೂವಾ ಮುಡಿದಳ್ ಮಾಲಕ್ಷುಮಿ ”
ಬಾಳೇದಡಿಯಾ[11] ಬಣ್ಣಾ[12] ವುಡವುವಳ ಮಾಲಕ್ಷುಮಿ ”
ಹಣಿಗೊಳ್ಳೀ ಕುಂಕುಮ ತಟ್ಟಿಳ್[13] ಮಾಲಕ್ಷುಮಿ ”
ಮುತ್ತೀನೊಂದಾರುತಿ ತಡದಳ ಮಾಲಕ್ಷುಮಿ ”
ಬೆಳ್ಳೀ ಚಂಬೀನ[14] ನೀರಾ ತಡದಳ ಮಾಲಕ್ಷುಮಿ ”
ಮಾಳಿಗೆ ಮನಿಯಾ ಒಳಗಾಗೇ ಬರುವಳ ಮಾಲಕ್ಷುಮಿ ”
ತಾನೇನಾ ಮಾಡುತೇ ಒಳಿದಳು ಮಾಲಕ್ಷುಮಿ ”
ಅರುತದ ಬಾಗಿಲಲಿ ನಿಂತಾಳ ಮಾಲಕ್ಷುಮಿ ”
ಲಾವೊಂದೇ ಲಾರುತಿಲಂಬದೇ[15] ಮಾದೇವುರಾಯಾ ”
ತಾನಾದರ ತಡದೇಲೀಕೊಂಡಾ ಮಾದೇವುರಾಯಾ ”
ಲಾಗೂಲೇ ಮಾಲಕ್ಷ್ಮೀ ಲಂಬೂದೇ ತಾನಿನ್ನೇ ”
ಸುಗ್ಗೀ ಮಕ್ಕಳಿಗಾರುತಿ ಬೆಳಗ್ಯಾಳು ನೋಡಿನ್ನೆ ”
ಲಾಗೇನ ಮಾಡೂತೆ ಉಳಿದಾ ದೇವತೆಗೋಳು ”
ಸುಗ್ಗೀನ ಕೋಲಾಡುವ ನಿಲಸ್ಯಾರು[16] ದೇವತೆಗೋಳು ”

---

10. ಕೂಡಲು 11. ಬಾಳೆಪಟ್ಟೆಯ 12. ಸೀರೆ 13. ಇಟ್ಟಳು 14. ತಂಬಿಗೆ 15. ಆ ಆರತಿಯನ್ನು 16. ನಿಲ್ಲಿಸಿದರು 17. ಸಲಕರಣೆಗಳನ್ನು



ತಮ್ಮುಂದೇ ಸಾಹಿತ್ಯಲ್ಲ[17] ಮಡಗ್ಯಾರು ದೇವತೆಗೋಳು '
ಕಯ್ಯೊಂದೇ ಕಾಲಿಲ್ಲಾ ತೊಳದ್ಯಾರು ದೇವತೆಗೋಳು "
ಮಾಲಕ್ಷ್ಮೀ ಮನಿಯಾಲೇ ಒಳಗೇಲೇ ದೇವತೆಗೋಳು "
ಊಟೊಂದೇ ಉಪಚಾರ ಮಾಡ್ಯಾರ ದೇವತೆಗೋಳು ತಾಲಾಲಲ್ಲೇ ಲಲ್ಲೇಲೋ
ಮಾದೇವರಾಯಾ ಊಟಾಗೇ ಕಳಿತಂತಾ ಸಮಿದಲ್ಲು[18] "
ಲಾಗೊಂದು ಹಾಲಕ್ಕಿ ಒಕ್ಕಾಲಾ ಮಗನೇಲೋ "
ದನಕಾವು ಗೋಲೂರ[19] ಮಾನೋರಾ ಮಗನೇಲೋ "
ಲಲ್ಲಿಗಾರು[20] ಅರುಗೇಲು[21] ಮುತ್ಯಾ "
ಮಾದೇವುರಾಯಾ ಊಟಾಕೇ ಹೋದಂತಾ ಸಮೆದಲ್ಲು "
ಮಾನೋರು ಮಗನೆ ಏನಾಲೋ ಮಾಡ್ಯಾ ಮಾನೋರು ಮಗನು "

18. ವೇಳೆಯಲ್ಲಿ 19. ಗೊಲ್ಲರೆ 20. ಅಲ್ಲಿಗೆ 21. ಹಣಕಿ 22. ಮದ್ದಳೆ ಮೇಲೆ 23. ಧುಮುಕಿತು 24. ದೊಡ್ಡ ಧ್ವನಿ


ಮದ್ದಲಿ ಮ್ಯೆನ್[22] ಕಯ್ಯಾನೇ ಹೊಡೆದಾ ”
ಅವೊಂದೇ ಮದ್ದೂಲಿ ದನಿಯೋಲಂಬಾದು ”
ಮ್ಯೆನೇಳಾ ಕಡೆಯೆಲ್ಲಾ ದುಮಕ್ಯೋಲಾ[23] ಮಾದನಿಯೋ[24] ”
ಲಡಗೇಳು[25] ಪಾತಾಳಕೆಲ್ಲಾ ದುಮಕ್ಯೋಲಾ ಮಾದುನಿಯೋ ತಾಲಾಲಲ್ಲೇ
ಲಲ್ಲೇಲೋ
ನಡುಗೇಳು ನಡುಲೋಕಾಕೇ ದುಮಕ್ಯೋಲಾ ಮಾದುನಿಯೇ ”
ಲಾವೊಂದೇ ದುನಿಯಾನ[26] ಕೇಳೇ ಮಾದೇವುರಾಯಾ ”
ಊಟಾಕೇ ಕೂತಂತಾ ಮಾದೇವುರಾಯಾನೋ ”
ಉಟಾವೊಂದುಪಚಾರಾ[27] ಮುಗಿಸೇ ಮಾದೇವುರಾಯಾ ”
ಮಾಳೂಗೊಂದರಗಾಗೇ ಬರುವಾ ಮಾದೇವುರಾಯಾ ”
ಕಯ್ಯೊಂದೇ ಬಾಯೆಲ್ಲಾ ತೊಳಿದಾ ಮಾದೇವುರಾಯಾ ”
ತಾನೋಗೇ ಹಸಿಮ್ಯೆನೇ ಕುಳಿತಾ ಮಾದೇವುರಾಯಾ ”
ತಾನೇನಾ ಮಾಡೀಯಾ ಮಾದೇವುರಾಯಾ ”
ಮಾನೋರೆಲೆ ಮಗನೇಕಂಡಾ ಮಾದೇವುರಾಯಾ ”
ಇಲಕೇಳೋ ಮಾನೋರಾ ಮಗನೆಲೋ ಲಂದಾನೋ ”
ಈವೊಂದೇ ಸುಗ್ಗೀದ ಕುಣಿತಾಲೇಂಬೋದೆ ”
ಈವೊಂದೇ ಸುಗ್ಗೀದೇ ಕುಣಿತಾ ಲೇಲಂಬಾದೆ[28]
ತಾಲಾಲಲ್ಲೇ ಲಲ್ಲೇಲೋ
ತಮಗೇನು ತರವೇನೆನಲ್ಲಾ ಲೀವಾಸುಗ್ಗಿ[29] ”
ಇದುವೊಂದು ಮಾನೋರಾ ಮಕ್ಕಳಿಗಂದಾವೋ[30] ”
ಮಾದೇವರಾಯಾ ಏನಾಲೇ ಮಾಡ್ಯಾ ಮಾದೇವುರಾಯಾ ”
ಮಾನೋರೊಂದೆ ಮಗನೀಗೆ ಕೊಡುವಾಲಾವಾ ಸುಗ್ಗಿ[31] ”
ಲಾವಾಗೇ ಮಾನೋರಾ ಮಗನೇಲೆಲಂಬೋನು ”
ದೇವತೆಗೋಳು ಕೊಟ್ಟಂತಾ ಬಿರುದಾಲೇ ಲಂಬಾದೇ[32] ”
ಸುಗ್ಯೊಂದೇ ಶಿವರಾತ್ರಿ ದಿನದಲ್ಲೇ ನೋಡಿನ್ನೇ ”
ಸುಗ್ಯೊಂದೇ ಕುಣಿತಾನೇ ಕುಣಿಯಲೇ ಬೇಕಂದೇ ”
ಮಾನೋರು ಮಗನೀಗೇಳು ತುಳಿದಾ ಮಾದೇವುರಾಯಾ ”

25. ಕೆಳಗಿನ ಏಳು 26. ಧ್ವನಿಯನ್ನು 27. ಊಟ-ಉಪಚಾರ 28. ಕುಣಿತವೆನ್ನುವುದು 29. ಈ ಸುಗ್ಗಿ 30. ಮಕ್ಕಳಿಗೆ ಚೆಂದವು 31. ಆ ಸುಗ್ಗಿ 32. ಬಿರುದನ್ನು 33. ಗುಮಟೆ

ಇಲಕೇಳೋ ಮಾನೋರಾ ಮಗನೇಲೆಲಂದಾನೋ ”
ಕಂಚೀನಾ ಗುಮ್ಮಟೇ[33] ನಿಮಗೇಲೋ ತರವಲ್ಲಾ ”
ಮಣ್ಣೀನದೆ ಗುಮ್ಮಟೆ[33] ನಿಮಗೇ ಮಾನೋರ್ ಮಗನೆ ”
ಕಂಚೀನೊಂದು ದ್ಯೆವೂಟೆ[34] ನಿಮಗೇ ಮಾನೋರ್ ಮಗನೆ ”
ಚಿನ್ನದ ಕೋಲೇಲೋ ತರವಲ್ಲಾ ನಿಮಗೆಲೋ ”
ಕೊಡಸೀನಾ[35] ಕೋಲೆಲೇ ನಿಮಗೆ ಮಾನೋರ್ ಮಗನೆ ”
ಲಟ್ಟೊಂದೇ ಹೇಳಿಲೇ ಕೊಡುವಾ ಮಾದೇವರಾಯಾ ”
ಸುಗ್ಯೊಂದೇ ದಸಮೀಯಾ ದಿನದಲ್ಲೇ ಮೀರಸಿ ಮಗನೋ ”
ಊರೊಂದೇ ಜನರಾನೇ ಕರೆದಾ ಮೀರಸಿ ಮಗನೊ[36] ”
ಸುಗ್ಗೀಯಾಟಾ ತೆಗಿಯಾಲೇ ಬೇಕಂದೇ ಮೀರಸಿ ಮಗನೋ ”
ಎಲ್ಲೊಂದೇ ಜನಕಾಗೇ ಹೇಳ್ಯಾ ಮೀರಸಿ ಮಗನೇ ”

## ಕೊಡಸಿನ ಕೋಲು ಹುಟ್ಟು

ಕೊಡಸಿನ ಕೋಲು ಕಣಗುಟ್ಟು ಬೆಳ್ಳಿಕೋಲೆ ಜಣಗುಟ್ಟು
ಚಿನ್ನದ ಕೋಲೆ ಸಿಗರೊಡೆದೊ[1] ತಾನಾ
ಚಿನ್ನದ ಕೋಲೆ ಸಿಗರೊಡದಿ ಚಿನ್ನದ ಚಿಗರೆ[2]
ಚಿಗರೆದ್ದಿ ಹಾರಿ ಮೂಡಣ ಗುಡಿಗೆಲೊ ತಾನಾ
ಕೂಡೆ ಹಾರ್‍ಯೊ ಮೂಡಣ ಗುಡಿಗೆ ಚಿನ್ನದ ಚಿಗುರೆ
ಕೊಡಸೀನ ಕೋಲಾಗೇ ಬೆಳದ್ಯಲೊ[3] ತಾನಾ
ಕೊಡಸೀನ ಕೋಲಾಗಿ ಬೆಳೆದು ಲಾವಾಕೋಲೆ[4]



34. ಝೂಗಟೆ. 35. ಕೊಡಸಿನ 36. ಸುಗ್ಗಿಯ ಮುಖಂಡ
1. ಬಿರುಬಿಟ್ಟಿತು, ಒಡೆಯಿತು 2. ಚೂರು, ತುಂಡು 3. ಬೆಳಿಯಿತು 4. ಆ ಕೋಲು



ಗೊಂಡ ಚೆಲುವೆ

## ಕುಂತುಮ್ಮಿಯ ಮಕ್ಕಳು

ಕುಂತುಮ್ಮಿಯಂಬವ್ಳೇ ರಘುರಾಮ
ಐದೇ ಜನರುಲದ್ಕೆ ಹುಡುಗರು ರಘುರಾಮ
ಐದೇ ಜನರುಲದ್ಕೆ ಕುಂತುಮ್ಮಿಗೆ
ಗಂಗೇಲೆಂಬವಲು ವಂದು ಕಿರಿಯ ಮಗಲು ೧

ಗಂಗೇಲೆಂಬವಲು ವಂದು ಕಿರಿಯ ಮಗಲು ಕುಂತುಮ್ಮಿಗೆ
ಮಡಕೆ ಮುsssಟ್ಟಾಗೀ ಇರತದೆಯೇ
ಮಡಕೆ ಮುsssಟ್ಟಾಗಿ ಲಿರತದೆಯೇ ಗಂಗೆ ಮಗಲು
ಕುಂತುಮ್ಮಿತಾಯೀ ಯೇನ್ಹೇಲಿ ಹೇಲ್ತದೆಯೋ ? ೨

"ಕೇಲೇsss ನೀನು ಗಂಗೇ, ರಗುರಾಮುss
ಹರವಂದುs ಹಲ್ಲಕೆ ಹೋಗುಬೇಡವೆ
ಹರವಂದುs ಹಲ್ಲಕೆ ನೀನು ಹೊಗುಬೇssಡ ಗಂಗೆ ಮಗುಲೇ
ಇಲ್ಲೇ ಜಲಬಾವಿ ತೆಗೆದು ನೀರ ತಂದು ಕೊಡುತೀನೆ ೩

ದೂರೀನ ಜಲದೀಗೆ ಹೋಗ ಬೇಡವೇ
ಇಲ್ಲೇss ಜಲನಾರು ತೆಗದಿs ಕೊಡತೀನೇ ಗಂಗೆ ಮಗಲೇ,
ಹರವಂದುs ಹಲ್ಲಕೆ ಹೋಗುಬೇಡವೆ ನೀನು"
ತಾಯೀss ಹೇಲಿದ್ದ ಮಾತೇ ಗಂಗೇ ಕೇಲಲಿಲ್ಲ ೪

---

ಪದ್ಯ ೨. ಮಡಕೆ ಮುಟ್ಟಾಗಿ, ಹೊಸದಾಗಿ ಮೈನೆರೆದು ?
ಪದ್ಯ ೩. ಹರವಂದು, ಹರಿಯುವ, ಹಲ್ಲ, ಹಳ್ಳ
ಪದ್ಯ ೪. ಜಲದಿ, ನದಿ, ಸಮುದ್ರ,



ತಟಮೊಟ್ಟೆಽ ಕಟ್ಟಿವ್ಲೆ ಕಯ್ಯಲ್ಲಿ ತಂಬೂಗಿ ಹಿಡಿದವಲೇ
ಕಯ್ಯಲ್ಲಿ ತಂಬುಗಿ ಹಿಡಿದವಲೇ ಗಂಗೆ ಮಗುಲು
ನವಲೊಂಽಽದು ನಡಗೀ ನಡೆದವಲು
ನವಲೊಂಽಽದು ನಡಗಿ ನಡೆದಾಲುಽ ಗಂಗೆ ಮಗಲು ೫

ಹರವ ಒಂದು ಜಲದಿಗೆ ನಡೆದಾಽಽಲೊಽ
ಹರವಽ ಒಂದು ಜಲದಿಗೆ ನಡೆದಾಲು ಗಂಗೆ ಮಗಲು
ದಿಂಬೇಽಽಽ ಮೇನ್ಹೊೀಗೇ ನಿಲ್ಲುತಲೆಯೋ
ದಿಂಬೇಽಽಽ ಮೇನ್ಹೊೀಗೇ ನಿಲತಾಲೆ ಗಂಗೆ ಮಗಲು ೬

ಮುಟ್ಟಾಽಽದ ಮೈಲೋಗಿ ವಂದುಽ ಜಲಕಾದಽ
ಮುಟ್ಟಾಽಽದ ಮೈಲೋಗಿ ಜಲಕಾಽಽದಽ
ದಿಂಬೇ ಮೇಲ್ಹಿತ್ತಿ ಕುಲುತವಲುಽ
ದಿಂಬೇ ಮೆಲ್ಹತ್ತೇ ಕುಲುತವಲೆ ಗಂಗೆ ಮಗಲು ೭

---

ಪದ್ಯ ೫ ತಟಮೊಟ್ಟೆ, ತೊಟ್ಟ ವಸ್ತ್ರದ ಮೊಟ್ಟೆ.
ಪದ್ಯ ೬ ಹರವ ಒಂದು ಜಲದಿಗೆ ನಡೆದಾಽಽಲೊಽ
ಪದ್ಯ ೭ ಮೈಲೊಗಿ, ಮೈಲಿಗೆ (ಹೋಗಿ) ಜಲಕಾದ, ಜಳಕ ಆಯಿತು.

ಸೆಲೆದೊಂದು ಶಂಟುಕಿ ಇಡವವಲು
ಸೆಲೆದೊಂದು ಶಂಟುಕಿ ಇಡವಲು ಗಂಗೆ ಮಗಲು
ಮೊತ್ತೊಂಽದು ಶಾಲೆ ಉಡುವವಲೇ
ಮೊತ್ತೊಂದು ಶಾಲೆ ಉಡುವಲು ಗಂಗೆ ಮಗಲು ೮

ಶಕ್ಕಽರ ಗಾಲ್ಹೊಯ್ದೀ ಕುಽಲುತವಲು
ಶಕ್ಕಽರ ಗಾಲ್ಹೊಯ್ದೀ ಕುಽಲು ತವಲು ಗಂಗೆ ಮಗಲು
ನೆರಲೊಂಽಽದು ಕನ್ನಡಿ ಹಿಡುದವಲು
ನೆರಲೊಂಽಽದು ಕನ್ನಡಿ ಹಿಡದವಲೇ ಗಂಗೆ ಮಗಲು ೯

ಕೂಕುಮದಽ ಬಟ್ಟಽಲೊಂದು ಇಡುವವಲು
ಕೂಕುಮದಽ ಬಟ್ಟಽಲೊಂದು ಇಡುವಲು ಗಂಗೆ ಮಗಲು
ಶೂರ್ಯರ್ಽದಲಣ್ಣ ಕನ್ನಡಿ ನೆರಲಲ್ಲಿಽ ಇಲದವನೇ
ಕನ್ನೂಽಽಡಿ ನೆರಲಲ್ಲಿ ಇಲದೀಽ ಬಂದಿದನೆ ಶೂರಿಯಲಣ್ಣ ೧೦

ಗಂಗೇಽಽ ಹಿಂದೆ ಬಂದೇ ನಿಲತಾಽನ
ಗಂಗೇಽಽ ಹಿಂಗೆ ಬಂದೇ ನಿಲತಾನ ಶೂರ್ಯಽಲಣ್ಣ
ಲಿಂದೇ ಬಂದೇಽ ನಿಲವಂತಾ ಹೊತ್ತೀಗೇ
ಹಿಂತೀರುಗಿ ಗಂಗೆ ನೋಡಿದವಲು ೧೧

"ಲಯ್ಯೋಽಽ ಶೂರ್ಯ ನನ್ನಣ್ಣ, ನೀನುಽ
ಇಲ್ಯಾಽಽತಕ ನೀನು ಬಂದಿದಿಯೋಽಽ ?"
"ಕೇಲಾಽಽಲೆ ಗಂಗೆ, ನೀನು (ರಗುರಾಮ)
ಅಣ್ಣಂಽಽದೆ ನೀನು ಕರಿಯಲು ಬೇಡವೇಽಽಽ ೧೨

---

ಪದ್ಯ ೮ ಕಂಟುಕಿ, ಕಂಟ್ರಿಕೆ, ಗುಂಟುಹಾಕುವುದು
ಪದ್ಯ ೯ ಶಕ್ಕರ, ಚಕ್ರ : ಶಕ್ಕರಗಾಲ ಹೊಯ್ದೀ, ಚಕ್ರಗಾಲು ಹಾಕಿ.
ಪದ್ಯ ೧೦ ಕೂಕುಮ, ಕುಂಕುಮ ; ಶೂರ್ಯದಲಣ್ಣ, ಅಣ್ಣ ಸೂರ್ಯ.
ಪದ್ಯ ೧೧ ಗಂಗೇಽಽ ಹಿಂದೆ ಬಂದೇ ನಿಲತಾಽನ
ಪದ್ಯ ೧೨ "ಲಯ್ಯೋಽಽ ಶೂರ್ಯ ನನ್ನಣ್ಣ, ನೀನುಽ

ಅಣ್ಣಂssದೆ ನೀನು ಕರ್ರ್‍ಯೋಬೇಡss ಗಂಗೆ, ನೀನುs
ಗಂಡsssನೆಂದೇಲಿ ನೀನು ಕರ್ಯಬೇಕೇ"
"ಲಯ್ಯೋssss ಶೂರ್ಯ ನೀನು ನನ್ನsಣ್ಣsss
ಪಾಪಾsssದ ಮಾತು ವಂದು ಹೇಲುಬೆಡವ್ವೋ" ೧೩

ಪಾಪಾsssದ ಮಾತೇ ನೀನು ಹೇಲುಬೇಡ ಶೂರ್ಯಲಣ್ಣ,
ಆ ಪಾssಪಕೆ ನಾನು ವಲಿನsರವ್ವೋss
ಕೇಲಾssಲೆ ಗಂಗೆ ನೀನು (ರಗುರಾಮ)
ಪಾsssಪಕನ್ನೆರಡು ತಾಸು ದಾತುರೇ ಪಡೆಸ್ತಿನೆವ್ವೋ ೧೪

ಲನ್ನೇಡು ತಾಸು ದಾತುರೇsss ಪಡೆಸಿ ಬಿಡ್ತೇ
ಇಲ್ಲೆ ಇನ್ನು ಸಾವಾಸಿ ಮಾಡಿ ಹೊಗುತೇನೆ"
ಅಟ್ಟೈssಲ್ಲ ಮಾತೇss ಹೇಲೀನೆ ಶೂರ್ಯಲಣ್ಣs
ಹನ್ನೈಡು ತಾಸು ದಾತರೆ ಪಡೆಸಿ ಬಿಟ್ಟನೆಯೇ ೧೫

ಲನ್ನೆssಡು ತಾಸು ದಾತರೆ ಪಡೆಸಿಬಿಡ್ತೀನೆ ನಾನು
ನಿನ ಶಾವಾಸ ಮಾಡಿ ಹೊಗತೀನೆಯೇ ನಾನು
ಲಟ್ಯೇsಲ್ಲ ಮಾತೇ ಗಂಗೇ ಕೂಡ್ಡೇಲಿನೆ ಶೂರ್ಯಲಣ್ಣ
ಹನ್ನೈಡು ತಾಸು ದಾತ್ರೆ ಪಡಿದಿ ಬಿಟ್ಟನೆಯೋ ೧೬

ಹನ್ನೈಡು ತಾಸು ದಾತ್ರೆ ಪಡಿದಿ ಬಿಟ್ಟಾನೆ ಶೂರ್ಯಲಣ್ಣ
ಬೆಲ್ಲss ಮೂಡಿ ಬೆಲಕಾಗುಕೆ ನೆಡsದನೆಯೋ
ಬೆಲ್ಲss ಮೂಡಿ ಬೆಲಕಾಗುಕೆ ನೆಡೆದಾsನೊ ಶೂರ್ಯಲಣ್ಣ
ಗಂಗೇsಲನ್ನೆರಡು ತಾಸು ರಾತುರಿ ಗಲುದಿತ್ತು ೧೭

---

ಪದ್ಯ ೧೩ ಅಣ್ಣಂssದೆ ನೀನು ಕರ್ರ್‍ಯೋಬೇಡss ಗಂಗೆ, ನೀನುs
ಪದ್ಯ ೧೪ ಪಾಪಾsssದ ಮಾತೇ ನೀನು ಹೇಲುಬೇಡ ಶೂರ್ಯಲಣ್ಣ,
ಪದ್ಯ ೧೫ ಶಾವಾಸಿ, ಸಹವಾಸ.
ಪದ್ಯ ೧೬ ಲನ್ನೆssಡು ತಾಸು ದಾತರೆ ಪಡೆಸಿಬಿಡ್ತೀನೆ ನಾನು
ಪದ್ಯ ೧೭ ಬೆಲ್ಲಮೂಡಿ, ಬೆಳ್ಳಿ ಮೂಡಿ ; ಬೆಲಕಾಗುಕೆ ಬೆಳಗಾಗುತ್ತಲೇ

ಹೊತ್ತು ಮೂಡುದರೊಲಗೆ ಯೆದ್ದಿ ಕುಲಿತಿತ್ತು
ಹೊತ್ತುss ಮೂಡುರೊಲಗೆ ಯೆದ್ದಿ ಕುಲಿತಿತ್ತು ಗಂಗೆ ಮಗಲು
ತಟಮೊsssಟ್ಟೆ ಕಟ್ಟವ್ಲೆ ಕಯ್ಯಲ್ ತಂಬುಗಿ ಹಿಡದವಲೆ
ಕಯ್ಯsಲ್ಲೆ ತಂಬವಗಿ ಹಿಡಿದವಲೆ ಗಂಗೆ ಮಗಲು ೧೮

ನವsಲೊಂssದ ನಡಗಿ ನಡೆದಿ ಬಂತೋ
ನವsಲೋಂsದ ನಡಗೆ ನೆಡೆದಿ ಬಂತೇ ಗಂಗೆ ಮಗಲು
ಕುಂತುಮ್ಮಿs ತಾಯಿ ಯೇನು ಹೇಲತಿಲಯೇ ?
"ಹೋಗುವಾsssಗೆ ಹೂಗಿನ ಬಾರss ಬರುವಾsಗೆ ಶಿನ್ನದ ಬಾರs ೧೯

ಯಾ ಮಿಂಡ ಕೊಟ್ಟೇ ನಿನಗೆ ಕಲುಗೀನೇsss ?
ಯಾ ಮಿಂಡ ನಿನಗೆ ಕೊಟ್ಟೀನೆ ಗಂಗೆ ಮಗುಲೇ ?
ಹೆಬ್ಬಾಕಾಲಲ್ಲೆ ನೀನು ಕುಲ್ಲುಬೇಕೇ'
ಲುಗುರsಲ್ಲೊಂದೋಲೆ ಬರೆದೋಲೆ ಕುಂತುಮ್ಮಿ ತಾಯೀ, ೨೦

ಶುಕ್ರೂssಗೊಂದೋಲೆ ಬರೆದೋಲೆ ಕುಂತುಮ್ಮಿ ತಾಯೀ,
ಲುಗುರೋssಲೆ ನೋಡಿಕೊಂಡಿ ಶುಕ್ರು ವೋಡೊಡೇ ಬಂದಿನೋ
ಯಾವss ಕಟ್ಟ ನಿನಗೆ ಬಂದಿತ್ತು ತಾಯೀ?"
"ಯೇನುsss ಕಟ್ಟsಗೋಲುss ಬರಲಿಲ್ಲ ಶುಕ್ರು ಮಗನೇ, ೨೧

ನೀನಾssದರು ಯಾವ ವರsದಲಿ ವಲಿತಿದ್ದೇ
ಯಾವಾssದೊಂದು ವರsವದಲ್ಲಿ ವಲೀತಿದ್ದೆ ಶುಕ್ರು ಮಗನೇ,
ನರಲೋsskದ ಜನರು ನಿಂಗೆ ಯೇನಂದೀ ಕರೇತಿದ್ರು ?"
"ಹೊತ್ತುsss ಕಂತುವಾಗೇss ತಾಯೀ, ೨೨

---

ಪದ್ಯ ೧೮ ಹೊತ್ತು ಮೂಡುದರೊಲಗೆ ಯೆದ್ದಿ ಕುಲಿತಿತ್ತು
ಪದ್ಯ ೧೯ ಹೂಗಿನ ಭಾರ. ಹೂವಿನ ಭಾರ ; ಶಿನ್ನದ ಬಾರ, ಚಿನ್ನದ ಭಾರ.
ಪದ್ಯ ೨೦ ಯಾ ಮಿಂಡಯ ಯಾವ ಮಿಂಡ ; ಕಲುಗೀನೇ, ಕಳಿಸಿದನು.
ಪದ್ಯ ೨೧ ಶುಕ್ರೂssಗೊಂದೋಲೆ ಬರೆದೋಲೆ ಕುಂತುಮ್ಮಿ ತಾಯೀ,
ಪದ್ಯ ೨೨ ನೀನಾssದರು ಯಾವ ವರsದಲಿ ವಲಿತಿದ್ದೇ

ಶುಕ್ರಾsssಗಿ ಮೂಡಿ ನಾ ಬsರುತಿದೆನೇ
ನರಲೋsskದವರು ಕಂಡುಕಂಡೀ ಶುಕ್ರಂದೀ ಕರೇತೀರು
ಶುಕ್ರಂದೇsss ನನಗೆ ಕರೆದಿರೇ ಕುಂತುಮ್ಮ್ಮಿ ತಾಯೀ,
ನೀ ಕೊsಟ್ಟ ವsರದಲ್ಲಿ ನಾನು ವಲಿತಿದೆನೇss" ೨೩

ಉಗುರssಲ್ಲೊಂದೋಲೆ ಬರೆದೊಲೇ ಕುಂತುಮ್ಮಿ ತಾಯೀ,
ಬೆಲ್ಲುssಗೆ ವಂದೊ ವೋಲೆ ಬರೆದsಲೆ ಕುಂತಮ್ಮಿ ತಾಯೀ,
ಉಗುರೋssಲೆ ನೋಡಿಕಂಡೀs ಬಂದಿದ್ದನೆಯೆ ಬೆಲ್ಲುಮಗs
"ಕೇಲಾssಲೆ ಕುಂತ್ಮುಮ್ಮಿ ತಾಯೆ, ನೀನುss ೨೪

ಯಾವssದೊಂದು ಕಟ್ಟ ನಿನಗೆ ಬಂದಿತ್ತೇ?"
"ಯಾವssದೊಂದು ಕಟ್ಟs ಬರನಿಲ್ಲ ಬೆsಲ್ಲ ಮಗನೇ
ನೀನಾssದರೆ ಯಾವ ವರುsದಲ್ಲಿ ವಲಿತಿದಿಯೋ?
"ಕೇಲಾssಲೆ ಕುಂತುಮ್ಮಿ ತಾಯೆ, ನೀನುs ೨೫

ಬೆಲ್ಗುss ಜಾಮೀಲೆ ಮೂಡಿ ಬರತಿದನೇ ತಾಯೀ,
ಬೆಲ್ಗಾssಗೆ ನಾನುs ಮೂಡಿ ಬರತಿದೆನೆ ಕುಂತುಮ್ಮಿ ತಾಯೀ,
ನರಲೋssಕದವರು ನನಗೆ ಬೆಲ್ಲೆಂದೇ ಕರೆತಿದರೇ
ನರಲೋssಕದ ಜನರು ನನಗೆ ಬೆಲ್ಲೆಂದೇ ಕರೆತಿದರೇ ಕುಂತುಮ್ಮಿ ತಾಯೀ,
೨೬

ನೀ ಕೊssಟ್ಟ ವರದಲ್ಲಿ ನಾವssಲಿತಿದೆನೇ" ಕುಂತುಮ್ಮಿ ತಾಯೀ,
ಲುಗುರೋssಲೆ ಬರೆದಾಲೆs ಕುಂತುಮ್ಮಿ ತಾಯಿ,
ಚಂದ್ರssಗೊಂದ್ವೋಲೆ ಬರೆದಿದಲು ಕುಂತುಮ್ಮಿ ತಾಯೀ,

---

ಪದ್ಯ ೨೩ ಶುಕ್ರಾsssಗಿ ಮೂಡಿ ನಾ ಬsರುತಿದೆನೇ
ಪದ್ಯ ೨೪ ಉಗುರssಲ್ಲೊಂದೋಲೆ ಬರೆದೊಲೇ ಕುಂತುಮ್ಮಿ ತಾಯೀ,
ಪದ್ಯ ೨೫ ಯಾವssದೊಂದು ಕಟ್ಟ ನಿನಗೆ ಬಂದಿತ್ತೇ?"
ಪದ್ಯ ೨೬ ಬೆಲ್ಗು ಜಾಮೀಲೆ, ಬೆಳಗಿನ ಜಾವದಲ್ಲಿ
ಪದ್ಯ ೨೭ ನೀ ಕೊssಟ್ಟ ವರದಲ್ಲಿ ನಾವssಲಿತಿದೆನೇ" ಕುಂತುಮ್ಮಿ ತಾಯೀ,

ಉಗುರೋಲೆ ನೋಡಿಕಂಡಿ ಚಂದ್ರು ಮಗನೇ ೨೭

ಓಡೋಽಽಡೆ ಹೋಗಿ ಬಽರುತಿದನೇ
ಓಡೋಽಡೆ ಚಂದ್ರಮಗ ಬರುವಂತ ಹೊತ್ತಿಗೆ
ಬಾಲೇಽಽ ವನದಲ್ಲಿ ಬಾಲೆ ಹಣ್ಣು ಲಲುದಿತ್ತು
ಬಾಲೇಽಽ ವನದಲ್ಲಿ ಬಾಲೆ ಹಣ್ಣುಽ ಲಲಿವಂತ ಹೊತ್ತೀಗೆ ೨೮

ಎರಡ್ಡುಽಽಣ್ಣು ತೆಗೆದಿ ತೊಡೆ ಶಿಗಿದಿ ಹಾಕಿದನೇ
ಎರಡ್ಡುಽಽಣ್ಣು ತೊಡೆ ಶಿಗದಿ ಹಾಕಿನೇ ಚಂದ್ರು ಮಗನೇ
ಕುಂತುಽಮ್ಮಿ ತಾಯೀ ಬಲಿಗೆ ಬಽರುತಿದನೇ
"ಕೇಲಾಽಽಲೆ ಕುಂತುಮ್ಮಿಽ ತಾಯೀ, ನೀನುಽಽ ೨೯

ಯಾವಽಽದೊಂದು ಕಟ್ಟ ನಿನಗೆ ಬಂದಿತ್ತೇ?
ಯಾವಽಽದೊಂದು ಕಟ್ಟ ನಿನಗೆ ಬಂದಿತ್ತೇ? ಕುಂತುಮ್ಮಿ ತಾಯೇ,
ಬಾಲೇಽಽ ಹಣ್ಣನ್ನೇ ತಂದಿದ್ದೆ ತಿನ್ನಲುಽ ಬೇಕೇ"
"ಲಯ್ಯೋಽಽ, ಶಂದ್ರು ಮಗನೇ, ನೀನು ೩೦

ಯಾವಽದ್ವೊಂದು ವಽರದಲ್ಲಿ ನೀನು ವಲಿತಿದಿಯೋ?
ಯಾವಽದ್ವೊಂದು ವಽರದಲ್ಲಿ ವಲಿತಿದಿಯೊ ಚಂದ್ರು ಮಗನೇ?
ನರಲೋಽಽಕದವರು ನಿನಗೆ ಯೇನಂದಿ ಕರಿತಿದ್ದರು?"
"ಆಮಾಶೇಽಽಗೆ ಶನ್ನಾಗೀ ತಿರುಗುತಿದ್ದೆ ನಾನು ೩೧

ಹುಣಮೇಽಽಗೆ ದೊಡ್ಡಾಗಿ ನಾನು ಬರುತಿದೆನೇ
ಹುಣಮೇಽಽಗೆ ನಾನು ದೊಡ್ಡಾಗಿ ಬರುತಿದೆನೇ
ನರಲೊಽಽಕ ಜನರು ಚಂದ್ರೆಂದಿ ಕಽರೆತಿದರೇ
ನರಲೊಽಽಕ ಜನರು ಚಂದ್ರೆಂದಿ ಕರೆತಿದರೆ ಕುಂತಮ್ಮಿ ತಾಯೀ, ೩೨

---

ಪದ್ಯ ೨೮ ಓಡೋಽಽಡೆ ಹೋಗಿ ಬಽರುತಿದನೇ
ಪದ್ಯ ೨೯ ಎರಡ್ಡುಽಽಣ್ಣು ತೆಗೆದಿ ತೊಡೆ ಶಿಗಿದಿ ಹಾಕಿದನೇ
ಪದ್ಯ ೩೦ ಯಾವಽಽದೊಂದು ಕಟ್ಟ ನಿನಗೆ ಬಂದಿತ್ತೇ?
ಪದ್ಯ ೩೧ ಯಾವಽದ್ವೊಂದು ವಽರದಲ್ಲಿ ನೀನು ವಲಿತಿದಿಯೋ?
ಪದ್ಯ ೩೨ ಹುಣಮೇಽಽಗೆ ದೊಡ್ಡಾಗಿ ನಾನು ಬರುತಿದೆನೇ

ನೀ ಕೊಽಽಟ್ಟ ವರಽವದಲ್ಲಿ ವಲೀತಿದನೇ ಕುಂತುಮ್ಮಿ ತಾಯೀ,"
"ತಂಪೀಽಽಗೋಗುಬೇಕು ಮಗನೇ ತಂಪಿನಲೆ ಬರಬೇಕೋ ಮಗನೇ,
ಅದು ವಂದು ವರಽವದಲ್ಲಿ ವಽಲೀಬೇಕೋ"
ಲುಗುರೋಽಽಲೆ ಬರೆದಽಲೆ ಕುಂತುಮ್ಮಿ ತಾಯೀ, ೩೩

ಶತಿ ನಾಽಽರ್ಯೆಣಗ್ವೊಂದು ವೋಲೆ ಕಲುಽಗಿದಲೇ ಕುಂತುಮ್ಮಿ ತಾಯೀ,
ಲುಗುರೊಽಽಲೆ ನೋಡಿಕಂಡೀ ಶತಿನಾರಾಯಣ ಓಡೋಡಿ ಬಂದೀದಾನೆ
"ಯಾವಾಽಽದೊಂದು ಕಟ್ಟಽಽ ಬಂದಿತ್ತೇ ಕುಂತುಮ್ಮಿ ತಾಯೇ?
ಅದು ವೊಽಽಂದು ವೋಲೆ ನೀನು ಬರೆದಿದೆಯೇ" ೩೪

"ಯಾವಽಽದೊಂದು ಕಟ್ಟಽ ನಽನಗೆ ಬರುಲಿಲವೋ ಶತಿನಾರಾಯಣ
ನೀನಾಽಽದರೆ ಯಾವ ವಽರವದಲ್ಲಿ ವಲೀತಿದ್ದೆ?
ಯಾವೊಽಽದು ವರವಽದಲ್ಲಿ ವಲೀತಿದಿಯೋ ಶತಿನಾರಾಯಣ?
ನರಲೋಽಕದವರುಽ ನಿಂಗ್ಯೇನಂದೀ ಕರೆತೀರು?" ೩೫

"ನಾನೂಽಽಲಾದರೆ ಕುಂತುಮ್ಮಿ ತಾಯೇ,
ಅಶುವಂಽತನ ಮರನಲ್ಲಿ ವಡಲಲ್ಲಿ ವಲೀತಿದೆನೇ
ಅಶುವಂತನ ಮರನಽ ವಡನಲಿ ವಽಲೀತಿದ್ದೆ ಕುಂತುಮ್ಮಿ ತಾಯೀ,
ಮುತ್ತೈಽಽದೆ ಹೆಂಗ್ಸರು ಪರದಕ್ಷಿಣೆಗೆ ಬಽರುತಿದರೇ
ಮುತ್ತೈಽಽದೆ ಹೆಂಗ್ಸರು ಕಟ್ಟೆ ಪರದಕ್ಷಿಣೆಗೆ ಬರುತಿದರೆ ಕುಂತುಮ್ಮಿ ತಾಯೀ, ೩೬

ಶತಿ ನಾರಾಯಣಂದೇ ಕರೆತಿದರೇ (ರಗುರಾಮಾ)
ಶತಿನಾರಾಯಣ ಅಂದೇ ಕಽರೇತಿದರೇಕುಂತುಮ್ಮಿ ತಾಯೀ,
ಅದು ವಂದು ವಽರದಲ್ಲಿ ನಾನುಽ ವಽಲಿತಿದನೇ"

---

ಪದ್ಯ ೩೩ ನೀ ಕೊಽಽಟ್ಟ ವರಽವದಲ್ಲಿ ವಲೀತಿದನೇ ಕುಂತುಮ್ಮಿ ತಾಯೀ,"
ಪದ್ಯ ೩೪ ಶತಿ ನಾಽಽರ್ಯೆಣಗ್ವೊಂದು ವೋಲೆ ಕಲುಽಗಿದಲೇ ಕುಂತುಮ್ಮಿ ತಾಯೀ,
ಪದ್ಯ ೩೫ "ಯಾವಽಽದೊಂದು ಕಟ್ಟಽ ನಽನಗೆ ಬರುಲಿಲವೋ ಶತಿನಾರಾಯಣ
ಪದ್ಯ ೩೬ "ನಾನೂಽಽಲಾದರೆ ಕುಂತುಮ್ಮಿ ತಾಯೇ,
ಪದ್ಯ ೩೭ ಶತಿನಾರಾಯಣಂದೇ ಕರೆತಿದರೇ (ರಗುರಾಮಾ)


ಉಗುರsಲ್ಲೊಂದ್ಲೋಲೆ ಬsರೆತಿದಲೇ ಕುಂತುಮ್ಮಿ ತಾಯೇ, ೩೭
ಶೂರ್ಯಗ್ನೊಂದ್ಲೋಲೆ ಕಲುಗೀಲು ಕುಂತುಮ್ಮಿ ತಾಯೇ

ಉಗುರೊssಲೆ ನೋಡಿಕಂಡೀsss ಶೂರ್ಯ ಮಗನೇs,
ಓಡೋssಡಿ ಬಂದಿದಾನೋ ಶೂರ್ಯ ಮಗನೇ,
ಓಡೋssಡಿ ಬರವ ಹೊತ್ತೀನಲ್ಲಿ ಕುಂತುಮ್ಮಿ ತಾಯೀ ೩೮
ಯೇನಂದೇ ಹೇಲತೀದು ಕುಂತುಮ್ಮಿ ತಾಯೀ?
"ಯೇನss ಹೊಲಚು ಶೂರ್ಯ ನೀನುs
ನೀನಾssರು ಯಾವ ವsರದಲ್ಲಿ ವsಲಿತಿದಿಯೊ?"
"ಲಣ್ಣುssಕಂಡಲ್ಲಿ ಮೆಂದೇ ತಾಯೇ, ಹೆಣ್ಣು ಕಂಡಲ್ಲೀ ಅನುಬ್ಯಾಶಿ ಬಂದೆ ತಾಯೇ,
ಅದು ವಂದು ವsರವದಲ್ಲಿ ನಾನು ವಲಿತಿದೆನೇ" ೩೯
"ಕೇಲೋsss ಹೊಲಶು ಶೂರ್ಯss, ನೀನುs
ಬಿಶಲssಲ್ ಬೆಂಕೀಲ್ ಹೋಗಿ ತಿರುಗಬೇಕು ನೀನು
ಲೂsಟ ಉಪಶಾರ ನಿನಗೆ ಲಿಲವೋsss ಶೂರ್ಯ ಮಗನೇ,
ಲುರಕಂತs ಕರಕಂತs ತಿರುಗಬೇಕೋ ನೀನು ೪೦
ಲುರಕಂತs ಕರಕಂತೀ ನೀನು ತಿರುಗಬೇಕೋ ಶೂರ್ಯ ಮಗನೇ,
ಗಂಗೇs ನದಿಯಲ್ಹೋಗೇ ಮುಲುಕಬೇಕೋ"
"ಕೇಲೆss ಹೊಲಶು ಗಂಗೇ ಮಗಲೇ, ನೀನು
ನೀನೂssಯಾವ ವಂದು ಮಾಯದಲ್ಲಿ ವಲಿಯಬೇಕೇ? ೪೧
ಯಾವssದ್ಹೊಂದು ರೂಪsದಲ್ಲಿ ವಲಿಯಬೇಕೇ ನೀನು ಗಂಗೆ ಮಗುಲೇ,
ಗಂಗೇss ನದಿಯಲ್ಲಿ ವಲಿಯುಬೇಕೇ ಗಂಗೇ ಮಗುಲೇ,
ವಡಕಂತ ಬಡಕಂತ ವsಲಿಯುಬೇಕೇs ನೀನು
ಗಂಗೇ ನದಿಯಲ್ಲಿ ನೀನು ವಡಕಂತ ಬಡಕಂತ ವಲಿಯಬೇಕೇ ನೀನು ೪೨

---

ಪದ್ಯ ೩೮ ಶೂರ್ಯಗ್ನೊಂದ್ಲೋಲೆ ಕಲುಗೀಲು ಕುಂತುಮ್ಮಿ ತಾಯೇ
ಪದ್ಯ ೩೯ ಯೇನಂದೇ ಹೇಲತೀದು ಕುಂತುಮ್ಮಿ ತಾಯೀ?
ಪದ್ಯ ೪೦ "ಕೇಲೋsss ಹೊಲಶು ಶೂರ್ಯss, ನೀನುs
ಪದ್ಯ ೪೧ ಲುರಕಂತs ಕರಕಂತೀ ನೀನು ತಿರುಗಬೇಕೋ ಶೂರ್ಯ ಮಗನೇ,
ಪದ್ಯ ೪೨ ಯಾವssದ್ಹೊಂದು ರೂಪsದಲ್ಲಿ ವಲಿಯಬೇಕೇ ನೀನು ಗಂಗೆ ಮಗುಲೇ,
ಪದ್ಯ ೪೩ ವಡದೇದ್ದ ಬಾಯಿ ಮುಚ್ಚುಕಗವೇs ಗಂಗೆ ಮಗಲೇ,

ವಡದೇದ್ದ ಬಾಯಿ ಮುಚ್ಚುಕಗವೇs ಗಂಗೆ ಮಗಲೇ,
ವರುಶsಕೆ ಮೂರು ಶರತಿ ಮುಟ್ಟಾಗಿ ಮೀಯುಬೇಕೇ
ವರುಶೀsssಗೆ ಮೂರುಗತಿ ಮುಟ್ಟಾಗಿ ಮೀಯುಬೇಕೇ
ನರಲೋsssಕದವರು ಕಂಡು 'ಕರಿನೀರು ಕರಿನೀರು' ಹೇಲಿ ಕsರ್ಯಬೇಕೇ" ೪೩



# ಮುಕ್ರಿಯರ ಕಾವ್ಯ



## ಯಲು ರಾಜನ ಮಡದಿ

(ಪ್ರತಿ ಸಾಲಿಗೂ ಸಿವಽ ಸಿವಽ ಅನ್ನಬೇಕು)
ಅಕ್ಕ ನೂಽ ತಂಗೀಽಽ ನೂಽಽ ಸಿವಽಽಽಸಿವಽಽಽ
ಹೊಳೆ ನೀರೀಗ್ ಹೋಗೀರೂ"
ಹೊ[೧]ಳ್ಯಽ ದಿಂಬು[೨]ದು ಮೇವೆ"
ಹಲಿ[೩] ಮಾಡೇಽ ಹಽಽಚ್ಚೀರೂ ॥ ೧ ॥

ಕೇಳಲ್ಲೇ ನಽನ್ನಕ್ಕಾಽಽ
ಹಲಿಯಽ ಚಿಽತ್ತ್ರಽರಽ ನೋಡೇಽಽ
ಹಲಿಯಽ ಚಿಽತ್ತ್ರಽರಽ ನೋಡೇಽಽ
ಮರುಳೀಗೇ[೪] ಆಽಽಽದೆಽನೇಽ ॥ ೨ ॥

ಕೇಳಲೇ ನಽನ್ನಕ್ಕಾಽಽ
ಹೊಳಿನ್ನ್[೫] ಸಂಽಗಽಡ್ ಹೋಗುತೇನ
ಹೊಲಿನ್ ಸಂಽಗಽಡ್ ಹೋಗುತೇನೆ
ಯೇನಾದಾಽರೇನಽ-ಕ್ಕಾಽಽಽ ? ॥ ೩ ॥

---

೧. ಹೊಳ್ಯ, ಹೊಳೆಯ,
೨. ದಿಂಬದು, ದಿಂಬದ, ದಡದ.
೩. ಹಲಿ, ನೆಲದ ಮೇಲೂ ಗೋಡೆಯ ಮೇಲೂ ಬರೆದ ಚಿತ್ರ
೪. ಮರುಳೀಗೇ, ಈಗ ಮರುಳು
೫. ಹೊಲಿನ್, ಹೊಲೆಯನ

ಹೊಲಿನ್ ಸಂಗsಡ ಹೋಗುತೆನೆ
ಕೇಳಲ್ಲೇ ನನು ತಂಗೀss,
ಹೊಲಿನ್ ಸಂಗಾsಡ್ ಹೋsದಾsರೇ
ಜಾಲೇಯಾs ಬಿಡುವ್ಯಾಲೆs[೧] || ೪ ||

ಕೇಳೇಲೇs ನsನ್ನಕ್ಕಾs,
ಜಾತೀs ಹೋದಾsರೇನೇs ?
ಅಟ್ಟಂಬೂ[೨] ಮ್ಯಾಲೇsಗೇ
ಕೇಳಿತ್ತೇ ನsನ್ನಕ್ಕಾs || ೫ ||

"ಕೇಳಲ್ಲೇ ನನು ತಂಗೀ,
ನಂದೊಂದೂ ಮಾsತಿರಸೇ"
ಕೇಳಲ್ಲೇ ನsನ್ನಕ್ಕಾss
ಮಾsತಿಗೆs ಉsತ್ತಿsರವೇss || ೬ ||

"ಕೇಳಲ್ಲೇ ನನು ತಂಗೀs
ನಿನು ದಂಡಿಗ್ಹೋsದ ಗಂsಡನೆ
ನಿನು ದಂಡಿಗ್ಹೋsದ ಗಂsಡನೆ
ಬಂದಾsರೇss ಹೊಡುನಾsಲೇs" || ೭ ||

"ಹೊಡುದಾsರೇ ಯೇನಕ್ಕಾs ?
ಬಯ್ದಾರೇss ಯೇನಕ್ಕಾs
ಬಯ್ದಾರೇss ಯೇನಕ್ಕಾs
ಹೊಲಿನ್ ಸಂಗಾsಡಾ ಹೋಗುತೇನೆ" || ೮ ||

ಲಟ್ಟಂಬೂss ಮಾss ತೀಗೇsss
ಕೇಳಿತ್ತೆ ನsನ್ನsಕ್ಕಾs
ಮುತ್ತಿನ್ ಕಣ್ಣೀರಾs ಬಿಡುವಾssಳೂ
ಮುತ್ತಿನ್ ಕಣ್ಣೀರಾsರು ಬಿಡುವಾssಳೂ || ೯ ||

---

೧. ಬಿಡುವ್ಯಾಲೇ, ಬಿಡುದಿಯಲ್ಲೇ
೨. ಅಟ್ಟಂಬೂ, ಅಷ್ಟು ಹೇಳುವ



ತಂಗೀಯಾಽ ಲಾಽಽದಾ ರೇಽಽಽ
ತಂಗೀಯಾಽ ಲಾಽಽದಾ ರೇಽಽಽ
"ಹೊಲಿನ್ ಸಂಗಽಡ್ ಹೋಗುತೇನೇ"
ಅಸುವಂತನ[೧] ಕಟ್ಟೆ ಮೇಲೇ ॥ ೧೦ ॥

ಹೊಲಿಯಽನು ಅಂಽಬಾನೂ
ಕರ್‍ಯಽ ಕಂಬುಳಿ ಹಾಽಸಾ[೨]ಽನೂ

ಹೋಳೂ[೩] । ಬೆಳಿಯಲ್ಯ ಮೆಲಽದಾಽನೂ
ಹೋಳೂ । ಬೆಳಿಯಲ್ಯ ಮೆಲಽದಾಽನೂ
ಕಯ್ಯಲ್ ಕೊರುಳ್[೪] ಹಿಡಿದಾಽನೂ ॥ ೧೧ ॥

---

೧. ಅಸುವಂತನ, ಅಶ್ವತ್ಥದ
೨. ಹಾಸಾನು, ಹಾಸಿದನು
೩. ಹೋಳು ಬೆಳಿಯೆಲ್ಯ, ಅಡಿಕೆಯ ಹೋಳು ಮತ್ತು ಬಿಳಿಯೆಲೆಗಳನ್ನು, ವೀಳ್ಯವನ್ನು
೪. ಕೊರುಳ್, ಕೊಳಲು

ಕಯ್ಯಲ್ ಕೊರುಳು ಹಿಡಿದಾಽನೂ
ನಾಽಚು[1] ಮಾಽಡೀ ಕರಿದಾಽನೂ
"ಕೇಳಲ್ಲೇಽಽ ನಽನ್ನಽಕ್ಕಾಽಽಽ
ನಾಽ । ಆಽಚೆ ನಾಽದಾರ್ ಹೊಗುತೇನೆ" ॥ ೧೨ ॥

ಅಟ್ಟಂಬೂ ಮಾಽತಿಗೇಽಽ
ಕೇಳಿತ್ತು ಯಲು ತಂಗೀಽಽ
ಕೇಳಿತ್ತೆ ಯಲು ತಂಗೀಽಽ
ಊರ ಮುಂದಿನ ಕಟ್ಟೆಗೀಗೇಽಽ ॥ ೧೩ ॥

ಕಟ್ಟೆಗೇಗೇಽ ಬರುವಾಽಳೇ
ಕಟ್ಟೆಮೇನೇ ಹತ್ತುವಾಽಳೂ
ಕಟ್ಟೆಮೇನೇ ಹತ್ತುವಾಽಳೂ
"ಕೇಳೀರೆಽ ಸ್ವಾಽಮ್ಯವು ॥ ೧೪ ॥

ಕೇಳೀರೆಽ ಸ್ವಾಽಮ್ಯವು
ನನ್ನ ಪತಿಯೇ ನೀವ್ಯೇಗೇ
ನನ್ನ ಪತಿಯೇ ನೀವ್ಯೇಗೇ
ನಿಮ್ಮ ಸತಿಯೇ ನಾನೀಗೆಽ" ॥ ೧೫ ॥

ನಿಮ್ಮ ಸತಿಯೇ ನಾನೀಗೆಽ
ಲಂದ್ಹೇಳೀಽಽ ನುಡುದಾಽಳೂ
ಲಂದ್ಹೇಳೀಽಽ ನುಡುದಾಽಳೂ
ಹೋಳು ಬೆಳಿಯೆಲಿ ಮೆಲಿದಾರೂ ॥ ೧೬ ॥

ಹೋಳು ಬೆಳಿಯೆಲಿ ಮೆಲಿದಾರೂ
ತನ್ನ ಮನಿಗೇಽ ಕರ್ಕಂಡ್ ನೆಡುದಾ
ತನ್ನ ಮನಿಗೇಽ ಕರ್ಕಂಡ್ ನೆಡಿದಾಽ
ಅತ್ಲಾಽಗೇಽ ಲಾಽದಾಽರೇಽ ॥ ೧೭ ॥

---

೧. ನಾಚು, ಕುಣಿತ

ದಂಡಿಗ್ಹೋದಾ ಗಂಡಾ ಗೂ
ಸಪನೀಗೇ[1] ಬಿಳುವಾದೋ
ಸಪನೀಗೇ ಬಿಳುವಾದೋ
ನಿನ್ನ । ಮಡಿದಿಯಾದಾ ಹೆಂಡುತಿಯಾ ॥ ೧೮ ॥

ನಿನ್ನ । ಮಡದಿಯಾದಾ ಹೆಂಡುತಿಯಾ
ಮಡದೀಗೆ ಹೋಗದೇ
ಹರ ಹೇರ ಲಂದೀದಾ
ಸಿವ ಸಿವ ಲಂದೀದಾ ॥ ೧೯ ॥

ಗಾಬುರೀ[2] ಬಿಳುವಾನೂ
ಕುದುರೀಗೆ ಜಿನ[3] ಬಿಗಿದಾ
ಕೊದರಿಗೇ ಜಿನ ಬಿಗಿದಾ
ಕೊದರಿಗೇ ಜಿನ ಬಿಗಿದಾ
ಕುದ್ರು ಮೆನೆ ಕುಂತಿದವನೂ ॥ ೨೦ ॥

ಕೊದ್ರಿ ಮೇನೆ ಹಂತಿ[4] ಕುಂತಾ
ಮನಿದಾರೀ ಹಿಡುದಾನೂ
ಮನಿದಾರೀ ಹಿಡುದಾನೂ
ಮನಿಗೇಗೇ ಬರುವಾನೂ ॥ ೨೧ ॥

ಮನಿಗೇಗೇ ಬರುವಾ ನೂ
ಅತ್ತೂಗೀ ಲಂಬಳೂ
ಅತ್ತೂಗೀ ಅಂಬಳೂ
ಮುತ್ತಿನಾರುಲೆ ತರುವಾಳೂ ॥ ೨೨ ॥

---

೧. ಸಪನೀಗೇ, ಸ್ವಪ್ನ ಈಗ
೨. ಗಾಬುರಿ, ಗಾಬರಿ
೩. ಜಿನ, ಜೀನನ್ನು
೪. ಹಂತಿ, ಹತ್ತಿ

"ಕೇಳ್ಯಾಲೇ ನನ್ನತ್ಗೇs,
ನಿನ್ ತಂಗಿಯಾರs ಯೆಲ್ ಹೊಯ್ತೋ ?
ನೀನು ಆsರತಿ ತಂದೇ
ನೀನ್ಯೇಗೇ[1] ನೀರೂ ತಂದೇ || ೨೩ ||

ನೀನ್ಯೇಗೇ ನೀರೂ ತಂದೇ
ನಿನ್ನ ತಂಗಿಯಾsರೇ ಯೆಲ್ಲಿಗ್ ಹೋಯ್ತೇ ?"
"ಕೇಳಾsಲೋ ಬಾsವಯ್ಯಾs,
ನಿನ । ಮಡದೀಯಾs ಸುದ್ದೀಯು || ೨೪ ||

ನಿನ । ಮಡದೀಯಾs ಸುದ್ದೀಯು
ನಿನ ನೆಂಟsರ ಮನಿಗ್ಹೋಗು"
ಅಟ್ಟಂಬೂ ಮಾತ್ಯೇಗೇ
ಕೇಳಿದs ಯಲು ರಾಜಾs || ೨೫ ||

ಕೇಳಿದs ಯಲು ರಾಜಾs
ಮುತ್ತಿನ ಕಣ್ಣೀರಾs ಬಿಡುವಾsನೂs
ಮುತ್ತಿನ ಕಣ್ಣೀರು ಬಿಡುವಾsನೂs
ಹಿಂತಿರುಗಿ ಕುದುರೀಯೂ ||೨೬ ||

ಹೀತಿರುಗಿ ಕೊದುರೀಗೇ
ನೆಂಟರಾss ಮನಿಗ್ ಹೊಡುದಾs
ನೆಂಟರಾss ಮನಿಗ್ ಹೋದಾs[2]
ಅಲ್ಹೋಗೀ ನುಡುದಾsನೂ || ೨೭ ||

"ಕೇಳಲ್ಲೇ ನsನ್ನತ್ತೇ,
ನಿನ । ಮಗುಳಾsರುs ಯೆಲ್ ಹೋಯ್ತೇ ?"
"ಯೇನಂದೀs ಹೇಳು ಬೇಕೋ ?
"ಯೇನಂದೀs ಮರುಗಾsಲೋs || ೨೮ ||

---

೧. ನೀನ್ಯೇಗೆ, ನೀನು ಈಗ

ನಿನ ಮಡುದೀ ನಿನ್ನಲ್ಲೇ
ಹೊsಳಿ ನೀರಿಗ್ ಹೋಗಿದುರೋ
ಹೊsಳಿ ನೀರಿಗ್ ಹೋಗೀರೂ
ಹೊಳಿಯಾs ದಿಂಬದ ಮೇನೇ ‖ ೨೯ ‖

ಹೊಳಿಯಾs ದಿಂಬದ ಮೇಲೇ
ಹಲಿಮಾಡೀss ಹsಚ್ಚಿದನೂ
ಹಲಿಮಾಡೀss ಹsಚ್ಚಿದನೂ
ಮೋದ್ಯೇಗೇ[1]ss ನೋsಡಾsಳೂs ‖ ೩೦ ‖

ಮೋದ್ಯೇಗೇss ನೋsಡಾsಳೂs
ಅಕ್ಕನ ಕೂಡೇ ಯೋಗಿನ್ನೇ[2]
ಅಕ್ಕನ ಕೋಡೇ ಯೋಗಿನ್ನೇ
"ಹೊಲಿನ್ ಸಂಗಾsಡ್ ಹೊಗುತೇನೆ" ‖ ೩೧ ‖

ಲಂದ್ಹೇಳಿ ಯೇಗಿನ್ನೇ
ಹೊಲಿನ್ ಸಂಗಾsಡ್ ಹೋಗಾsಳೆ"
ಅಂಟ್ಟಂಬೂs ಮಾsಲೇಗೇs
ಹೇಳೀದಾs ಯಲುರಾಜಾs ‖ ೩೨ ‖

ಹೇಳೀದಾs ಯಲುರಾಜಾ
ಹೊಲಿನ್ ಮsನಿ ದಾsರಿ ಹಿಡಿದಾs
ಹೊಲಿನ್ ಮsನಿ ದಾsರಿ ಹಿಡುದಾs
ಅಲ್ಲಿಗಾsದಾsರ್ ಹೋದಾsನೂ ‖ ೩೩ ‖

ಅಲ್ಲಿಗಾsದಾsರ್ ಹೋದಾsನೋ
"ಕೇಳಲೊ ಹೊsಲಿರವನೇs
ವೋಡೂ ಬೇಡಾs ಅಡುಗ ಬೇಡಾs
ವೋಡೂ ಬೇಡಾs ಲಡಗಬೇಡಾs ‖ ೩೪ ‖

---

೧. ವೋದ್ಯೇಗೆ, ಈಗ (ಆಗ) ಓದಿ
೨. ಯೇಗಿನ್ನೆ, ಈಗ ಇನ್ನು

ನಿನಗೇನೂ ಹೊಡುದಿಲ್ಲ್ವೋಽ
ನಿನಗೇನೂ ಹೊಡುದೆಲ್ಲಾಽ
ಬಾಯೆತ್ತೇ[೧] ಬವ್‌ದಿಲ್ಲಾಽಽ
ಬಾಯೆತ್ತೇ ಬವ್‌ದೆಲವ್ವೋ ॥ ೩೫ ॥

ನನ್ನಾಽಲು ಹಿಂಡುತಿಯೂ
ನನ್ನಾಽಲು ಹಿಂಡುತಿಯೂ
ಜೋಪಾಽನಽ ಮಾಽಡುಬೇಕೋ
ಜೋಪಾಽನಽ ಮಾಽಡುಬೇಕೋ ॥ ೩೬ ॥

ಯಾವ ದಿನಕೆ ಮಡಿತಾಽಳೋ
ಯಾವ ದಿನಕೆ ಮಡಿತಾಽಳೋ
ಅಗಣೀಗೇ[೨]ಽ ಹಾಕುಬೇಡಾಽ
ಅಗಣೀಗೇಽ ಹಾಕುಬೇಡಾಽ ॥ ೩೭ ॥

ಮಣ್ಣೀಗೇಽಽ ಹಾಕುಬೇಕೋ
ಮಣ್ಣೀಗೇಽಽ ಹಾಕುಬೇಕೋ
ನಲವತ್ತ್ಹೊಂದು ದಿವಸಾಽಕೇ
ನಲವತ್ತ್ಹೊಂದು ದಿವಸಾಽಕೋ
ತಲಿಯೇಗೇ[೩] ತೆಗುಬೇಕೋ ॥ ೩೮ ॥

ತಲಿಯೇಗೇ ತೆಕ್ಕಂಽಡೀಽ
ಹರುವ ಹಳ್ಳಽಕ್ಹೋಗೀಽ
ಹರವಾಽ ಹಳ್ಳಕೆ ಹೋಗೀಽ
ಚೆಂದಾಽಗೀ ತೊಳಿಬೇಕೋ ॥ ೩೯ ॥

---

೧. ಬಾಯೆತ್ತೇ, ಬಾಯಿ ಎತ್ತಿ
೨. ಅಗಣಿ, ಅಗ್ನಿ, ಬೆಂಕಿ
೩. ತಲಿಯೇಗೇ, ತಲೆಯನ್ನು ಆಗ

ಚೆಂದಾಽಗೀ ತೊಳಿಬೇಕೊ
ನನ ಕೈಲೀಽ ತಂದಿ ಕೊಽಡೋ
ಲಚ್ಚಂಬೂ ಮಾತೇಗೇ
ಕೇಳೀದಽ ಹೊಲಿರವ್ನೂ ॥ ೪೦ ॥

ಕೇಳೀದಽ ಹೊಲಿರವ್ನೂ
ಅವ್ನ ಮಡದೀಽ ತೀರ್ ಹೋಯ್ತೋ
ಅವ್ನ ಮಡದೀ ತೀರ್ ಹೋಯ್ತೋ
ಮಣ್ಣಿಗಾದಾಽರ್ ಹಾಽಕಿದನೋ ॥ ೪೧ ॥

ಮಣ್ಣಿಗಾದಾಽರ್ ಹಾಽಕಿದ್ನೋ
ರಾಜ ಹೇಳಿದ ನೆಕ್ಕಪತ್ರಾಽಽ[೧]
ರಾಜ ಹೇಳಿದ ನೆಕ್ಕಪತ್ರಾಽಽ
ತಲಿ ವಳಗೇ ಜಾಽನಿಟದಾಽ[೨] ॥ ೪೨ ॥

ತಲಿ ವಳಗೇ ಛಾನಿಸಿದಾ
ಮಣ್ಣಿಗಾಽದ್ರೇ ಹಾಽಕಿದನೋ
ಮಣ್ಣಿಗಾದಽರ್ ಹಾಽಕಿದನೋ
ನಲವತ್ತೊಂದ್ ದಿವಸಾಽವ್ರೋ ॥ ೪೩ ॥

ನಲವತ್ತೊಂದ್ ದಿವಸಾಽಕೋ
ಸೋಸಾಽ[೩]ಣಕೇ ಹೋಗಿದನೋ
ಸೋಸಾಽಣಕೇ ಹೋಗಿದನೋ
ಮಣ್ಣಿನಾಽದಾರ್ ಬಗು[೪]ದಾಽನೋ ॥ ೪೪ ॥

---

೧. ನೆಕ್ಕಪತ್ರಾ, ಲೆಕ್ಕಪತ್ರ, ಇಲ್ಲಿ ದಿನಗಳ ಲೆಕ್ಕ
೨. ಜಾನಿಟದಾ, ನೆನಪಿಟ್ಟನು, ಧ್ಯಾನ (ಜ್ಞಾನ) ದಲ್ಲಿ ಇಟ್ಟಿದ್ದನು
೩. ಸೊಸಾಣ, ಸ್ಮಶಾನ
೪. ಬಿಗುದಾನು, ಬಗಿದನು, ಓರೆ ಮಾಡಿದನು, ಆಚೆ ಈಚೆ ಮಾಡಿದನು

ಮಣ್ಣಿನಾಽದಾರೇ ಬಗುದಾಽನೋ
ತಲಿಯೇಗೇ ತೆಗುದಾಽನೆಽ
ತಲಿಯೇಗೇ ತೆಗುದಾಽನೆ
ಹರು ಹಳ್ಳಕೆ ನೆಡಿದಾಽನೋಽ || ೪೫ ||

ಹರು ಹಳ್ಳಕೇ ನೆಡುದಾಽನೋ
ಚೆಂದಾಽಗೀ ತೊಳುದೀನೇ
ಚೆಂದಾಽಗೀ ತೊಳುದಾಽನೋ
ರಾಽಜಽನಾಽ ಮನಿಗ್ಹೋದಾಽ || ೪೬ ||

ರಾಽಜಽನಾಽ ಮನಿಗ್ಹೋದಾಽ
ರಾಜಾಽನಾಽ ಕರುದಾಽನಽ
ರಾಜಾಽನಾಽ ಕರಿದಾಽನೋ
ನಿನ ಮಡದೀಗಾಽ ತೀರ್ ಹೋಗೀ || ೪೭ ||

ಮಡದೀಯಾ ತೀರ್ ಹೋಗೀ
ನಲವತ್ತೊಂದೂ ದಿವಸಾಽಽ
ನಲವತ್ತೊಂದಾ ದಿವಸಾಽಽ
ಆಜಾಣೀ[೧] ಪರುಕಾರಾ[೨] || ೪೮ ||

ಲಾಽಜೂಣಿ ಪರುಕಾರಾ
"ತಲಿಯೇಗೇ ತಂದಿದೇನೇ"
"ತಲೆಯೇಗೇ ತಂದಿದೇನೇ"
ಲಂದ್ಹೇಳೀಽ ಕೊಡುವಾಽನೋ || ೪೯ ||

ಲಂದ್ಹೇಳೀಽ ಕೊಡುವಾಽನೋ
ರಾಜಾಽನು ಬೇಡುಕಂಡಾಽ
ರಾಜಾನೇ ಬೇಡುಕಂಡಾಽ
ಯೋಳುಪ್ಪೂರಗೀ ಮೇಲೆ
ಹೋಗೀಲೂಽ ಕೂತಿಕಂಡಾಽ || ೫೦ ||

---

೧. ಆಜಾಣೀ, ಆಜ್ಞೆ, ೨. ಪರುಕಾರಾ, ಪ್ರಕಾರ

ಹೋಗೋಳೂ ಕೂತಿಕಂಡಾs
ತಲಿ ತೆಗದಿ ಓದಿದನೋ
ಅರಸೂಗೇs ಹುಟುಬೇಕೋ
ರಾಜರೀಗೇ ಮದ್‌ಯಾಗ್ಬೇಕೊ ॥ ೫೧ ॥

ರಾಜಾಗೇ ಮದಿಯಾsಗೀ
ಮೂರು ವರ್ಸಾ ಆಳುಬೇಕೇ
ಮೂರು ವರ್ಸಾ ಆಳುಬೇಕೋ
ನಾಕ್ನೆ ವರ್ಸಕೆ ದಂಡಿಗ್ಹೋದಾ ॥ ೫೨ ॥

ನಾಕ್ನೆ ವರ್ಸಕೆ ದಂಡಿಗ್ಹೋದಾ
ಹೊಲಿನ್ ಸಂಗಾsಡ್ ಹೋಗುಬೇಕೇ
ಹೊಲಿನ್ ಸಂಗಾsಡ್ ಹೋಗುಬೇಕೇ
ಆಂದ್ಹೋಳೀ ಬಿರ್ಮ[1] ಬರುವಾsss ॥ ೫೩ ॥

ಲಂದ್ಹೋಳೀ ಬಿರ್ಮ ಬರುದಾsss
ವೋದೀಗೇs ನೋಡಾನೇs
ವೋದೀಗೇs ನೋಡೀದಾs
ಮುತ್ತಿನ್ ಕಣ್ಣೀರಾs ಬಿಡುವಾsನೋ ॥ ೫೪ ॥

ಮುತ್ತಿನ್ ಕಣ್ಣೀರಾs ಬಡುವಾsನೋ
ತಲಿಯೇಗೆ ಹಿಡಿದಾsನೊ
ತಲಿಯೇಗೆ ಹಿಡಿದಾsನೊ
ಲಾsಚೇರೀ[2] ಮನಿಗ್ಹೋದಾsss ॥ ೫೫ ॥

ಲಾsಚೇರೀ ಮನಿಗ್ಹೋದಾsss
ಆಚೆರಿ ಕೋಡೇ ಯೆನ ನುಡಿದಾs ?
"ಕೇಳsಲೋ ಆಚೇರೀs,
ಗಂದsದಾs ಪೆಟುಗೀಗೇs ॥ ೫೬ ॥

---

೧. ಬಿರ್ಮ, ಬ್ರಹ್ಮ
೨. ಲಾಚೇರಿ, ಆಚಾರಿ, ಬಡಿಗ

ಗಂದsದಾs ಪೆಟ್ಗಿಯೇಗೇ
ಗೆಯ ಕೊಡೋ[1] ಆsಚೇರಿ
ಗೆಯ ಕೊಡೋ ಲಾsಚೇರಿ
ಲಂದ್ಪೋಳೀ ನುಡಿದಾsನೋ || ೫೭ ||

ಅಂದ್ಪೋಳೀ ನುಡಿದಾsನೋ
ಗಂದಂದ್ ಪೆಟ್ಗೆ ಗೆಯ್ ಕೊಟ್ಟಾ
ಗಂದಂದ್ ಪೆಟ್ಗೆ ಗೆಯ್ ಕೊಟ್ಟಾ
ಕೇಳಲ್ಲೊ ಲಾsಚೇರೀ,
ಕೇಳಲ್ಲೊ ಲಾsಚೇರೀ, || ೫೮ ||

ನೀವು ತಾಗಿದಾs ಹಣ ತೆಕ್ಕೋ
ಪೆಟ್ಗೆ ನಾsದರೆ ತಕಂಡೋದಾs
ಪೆಟ್ಗೆ ನಾsದರೆ ತsಕ್ಕಂಡೂ
ಮನಿಗ್ ಸೀದಾs ಬರುವಾsನೂ
ಮನಿಗ್ ಸೀದಾs ಬರುವಾsನೂ || ೫೯ ||

ಪೆಟ್ಗೆಯೋಳೂ ಉಪ್ಸರ್ಗಿ ಮೇನೇ
ಯೇಳೂ ಉಪ್ಸರ್ಗಿ ಮೇನೇ
ಇಟ್ಟದs ರಾಜಾsನೇ
ಇಟ್ಟದs ರಾಜಾsನೇ || ೬೦ ||

ಸಂಪೂಗೀs[2] ಹೂಂಗ್ ಕೊಯ್ದು
ಸಂಪೂಗೀs ಹೂಂಗ್ ಕೊಯ್ದು
ಸಂಪೂಗೀs ಸರಮಾಡ್ದಾs
ಸಂಪೂಗೀs ಸರಮಾಡ್ದಾs
ಮಲ್ಲೂಗೀ ಬನsಕ್ಹೋದಾs || ೬೧ ||

---

೧. ಗೆಯಕೊಡು, ಮಾಡಿಕೊಡು
೨. ಸಂಪೂಗಿ, ಸಂಪಗೆ

ಮಲ್ಲೂಗೀ ಬನಽಕ್ಹೋದಾಽ
ಮಲ್ಲೂಗೀ ಹೂಂಗ್ ಕೊಯ್ದಾಽ
ದಂಡಿ[೧]ನಾಽರೇ ಕಟುತಾಽನೂ
ದಂಡಿ ನಾರೇ ಕಟುತಾಽನೂ || ೬೨ ||

ಹಿಂತಿರಗಿ ಮನಿಗ್ ಬಂದಾ
ಕೊಬುರಿ[೨]ಯಾ ಕಾಯ್ ತೆಗೆದಾಽಽ
ಗಾಣಗೀಽರ[೩] ಮನಿಗ್ಹೋದಾಽ
ಗಾಣಗೇರಾಽ ಮನಿಗ್ಹೋದಾಽ
ಗಾಣಗೇರಾಽ ಕೋಡ್ಯೇನೂಽ || ೬೩ ||

ಗಾಣಗೇರಾಽ ಕೋಡ್ಯೇನೂಽ
ಯೇನಂದೀಽ ನಡುದಾಽನೂಽ ?
ಇದ್ । ಹತ್ತುವಾಽ[೪] ಕಾಯ್ ಯೇಗೆ
ಗಾಽಣಽಕೇ ಹಾಕ್ಯೇಽಗಽ || ೬೪ ||

ಗಾಽಣಽಕೇ ಯೇಗ್ ಹಾಕೇಽ
ಚೆಂಬೆಣ್ಣೇ[೫]ಽಽ ತೆಕ್ಕೋಡೋ[೬]
ಚೆಂಬೆಣ್ಣೇಽಽ ತೆಕ್ಕೊಽಡೀಽ
ತಾಗಿದ್ ಹಣವಾಽ ನಾಽ ಕೊಡ್ತೇ || ೬೫ ||

ತಾಗಿದ್ ಹಽಣಾಽ ಕೊಡುತೇನೇ
ಲಂಽದ್ಹೇಳೀ ನುಡಿದಾಽನೇ
ಲಂಽದ್ಹೇಳೀ ನುಡುದಾಽನೋ
ಗಾಣ್ಗರ ಶೆಟ್ಟಿ ಲಂಬಽವ್ನೂ || ೬೬ ||

---

೧. ದಂಡಿ, ದಂಡೆ
೨. ಕೊಬುರಿ, ಕೊಬರಿ
೩. ಗಾಣಗೀರಾ, ಗಾಣಿಗರ
೪. ಹತ್ತುವಾ, ಹತ್ತು
೫. ಚೆಂಬೆಣ್ಣೆ, ಚೆಂಬು ಎಣ್ಣೆ
೬. ತಕ್ಕೊಡೊ, ತೆಗೆದು ಕೊಡೊ

ಗಾಣ್ಗರ ಶೆಟ್ಟಿ ಲಂಬಽವ್ನೂ
ಕಾಯ್ ಗಾಣಕೆ ಹಾಽಕಿದನೂ
ಕಾಯ್ ಗಾಣಕೆ ಹಾಽಕಿದನೂ
ಯೆಣ್ಣೆ ನಾದ್ರೆ ತೆಗಿದಾಽನೋ ॥ ೬೭ ॥

ಯೆಣ್ಣೆ ನಾಽದರೆ ತೆಗುದಾಽನೋ
ರಾಽಜ್ರಿಗೇ ಕೊಡುವಾಽನೋಽ
ರಾಽಜ್ರಿಗೇ ಕೊಡುವಾಽನೋಽ
ರಾಜರ್ ಹಽಣಽ ಕೊಡುವಾರೋ ॥ ೬೮ ॥

ರಾಜಾಽರೂಽ ಲಂಬಾಽರೂಽ
ಯೆಣ್ಣೆಚಂಬೇಽ ಹಿಡುದಾಽರೂಽ
ಯೆಣ್ಣೆಚಂಬೇಽ ಹಿಡುದಾಽರೂಽ
ಹಿಂತಿರ್ಗ್ ಮನಿಗೆ ಬರುವಾಽರೂ ॥ ೬೯ ॥

ಹಿಂತಿರ್ಗ್ ಮನಿಗೆ ಬರುವಾಽರೋ
ಚಿನ್ನಽದಂಗುಡಿಗ್ ಹೋದ್ರೂಽ
ಚಿನ್ನಽದಂಗುಡಿಗ್ ಹೋದ್ರೂಽ
ಕೊರುಳೀಗೇ ಹಾಽಕೂವಾಽ ॥ ೭೦ ॥

ಚಿನ್ನಾಽನೇ ತಕ್ಕಂಡ್ರೂಽ
ತಕ್ಕಂಡೀ ರಾಽಜಾಽರೇ
ತಾಗಿದ್ ಹಽಣಾಽ ಕೊಡುವಾಽರೂ
ತಾಗಿದ್ ಹಽಣಾಽ ಕೊಡುವಾಽರೂ
ಜವಳೀ ಅಂಗಡೀಗ್ ಹೋದ್ರೂಽ ॥ ೭೧ ॥

ಜವಳೀಽ ಲಂಗುಡಿಗ್ ಹೋಗೀ
ಶೇರೀಯಾಽ[1] ತೆಗುದಾಽರೂಽ
ಶೇರೀಗೆಽ ತೆಗುದಾರೂ
ತಾಗಿದ್ ಹಽಣಾಽ ಕೊಡುವಾಽರೋ ॥ ೭೨ ॥

---

೧. ಶೇರಿ, ಸೀರೆ

ತಾಗಿದ್ ಹಽಣಾಽ ಕೊಡುವಾಽರೋ
ಹಿಂತಿರ್‍ಗ ಮನಿಗೇ ಬರುವಾರೊ
ಹಿಂತಿರ್‍ಗ ಮನಿಗೇ ಬರುವಾಽರೋ
ಗುಡುಗಾರ್‍ನ ಮನಿಗ್ಹೋದ್ರೂ ॥ ೭೩ ॥

ಗುಡುಗಾರಾಽ ಮನಿಗೋದ್ರೂ
"ಕೇಳೀರೀ ಗುಡುಗಾಽರೇ,
ಕೇಳೀರೀ ಗುಡುಗಾಽರೇ,
ಹೆಣ್ಣ ಬೊಂಬೇ ಗೈಬೇಕೋ ॥ ೭೪ ॥

ಹೆಣ್ಣ ಬೊಂಬೇ ಗೈಬೇಕೋ
ತಲಿನಾಽದ್ರೇ ಗೈವ್ ಕೆಲ್ಲಽ[1]
ತಲಕಿಂದಾಽ ಕೆಳಗೀಗೇಽಽ
ಹೆಣ್ಣ ಬೊಂಬೆ ಗೈ ಬೇಕೋ" ॥ ೭೫ ॥

ಹೆಣ್ಣ ಬೊಂಬೆ ಗೈ ಬೇಕೋ"
ಅಂದ್ಹೇಳೀಽ ನುಡುದಾಽರೋಽ
ಅಂದ್ಹೇಳೀಽ ನುಡುದಾಽರೋಽ
ಗುಡುಗಾಽರಾಽ ಲಂಬಾರೋ[2] ॥ ೭೬ ॥

ಗುಡುಗಾಽರಾಽ ಲಂಬಾರೋ
ಹೆಣ ಬೊಂಬೇ ಗೈದಾಽರೋಽ
ಹೆಣ ಬೊಂಬೇ ಗೈದಾಽರೋಽ
ತಾಗಿದ್ ಹಽಣಾಽ ಕೊಡುವಾಽರೋ ॥ ೭೭ ॥

ತಾಗಿದ್ ಹಽಣಾಽ ಕೊಡುವಾಽರೋ
ಹಿಂತಿರ್‍ಗ ಮನಿಗೇ ಬರುವಾಽರೋ
ಹಿಂತಿರ್‍ಗ ಮನಿಗೇ ಬರುವಾಽರೋ
ಬೊಂಬೀಯಾ ಹಿಡಿದಾಽರೋಽ ॥ ೭೮ ॥

---

೧. ಗೆವ್‌ಕಲ್ಲ, ಗೆಯ್ಯುಬಾರದು, ಮಾಡಬಾರದು
೨. ಲಂಬಾರೋ, ಎನ್ನವವರು

ಬೊಂಬೀಯಾ ಹಿಡಿದಾಽರೋಽ
ಬೊಂಬಿಗೇ ತಲಿಹಚ್ಚೇ
ಬೊಂಬಿಗೇ ತಲಿಹಚ್ಚೇ
ಕುರುಬಾಽರಾಽ ಮನಿಗ್ ನೆಡದ್ರೂ || ೭೯ ||

ಕುರುಬಾಽರಾಽ ಮನಿಗ್ ಹೋಗೀಽ
ಚವಲಾನೇ[೧]ಽಽ ತರುವಾಽರೋಽ
ಚವಲಾನೇಽಽ ತರುವಾಽರೋಽ
ತಾಗಿದ್ ಹಽಣಾಽ ಕೊಡುವಾಽರೋ || ೮೦ ||

ತಾಗಿದ್ ಹಽಣಾಽ ಕೊಡುವಾಽರೋ
ಹಿಂತಿರ್‍ಗ ಮನಿಗೇ ಬರುವಾಽರೋ
ಹಿಂತಿರ್‍ಗ ಮನಿಗೇ ಬರುವಾಽರೋ
ತಲಿಗ್ ಚವ್ಲಾಽಽಽ ಬಗುದಾಽರೋ || ೮೧ ||

ತಲಿಗ್ ಚವ್ಲಾಽಽಽ ಬಗುದಾರೋ
ಯೆಣ್ಣೆ ಹಾಕೀಽಽಽ ಕಂಟ್ವಾಽಽರೋಽಽ
ಯೆಣ್ಣೆ ಹಾಕೀಽಽಽ ಕಂಟ್ವಾಽಽರೋಽಽ
ಸಂಪ್ಗಿ ಮಾಽಽಲೀಽಽ ಕೊಳ್ಳೀಗ್ ಹಾಽಕೀಽ || ೮೨ ||

ಸಂಪ್ಗಿ ಮಾಽಽಲೀಽಽ ಕೊಳ್ಳೀಗ್ ಹಾಽಕೀಽ
ಮಲ್ಲಿಗಿ ಹೂಂಗೂ ಮುಡಿಸಾಽರೋಽ
ಮಲ್ಲಿಗಿ ಹೂಂಗೂ ಮುಡಿಸಾಽರೋಽ
ಶೇರೀಗೆ ಉಡುಸಾಽರೋಽ || ೮೩ ||


ಶೇರಿ ಈಗೇ ಉಡುಸಾಽರೋಽಽ
ಕೂಕುಮ್ಮಾಽಽ[೨] ಹಚ್ಚಾರೋಽ
ಕೂಕುಮ್ಮಾಽಽ ಹಚ್ಚಾರೋಽ
ಗಂದೆಣ್ಣೇಽಽ[೩] ದರುಸಾಽರೋಽಽ || ೮೪ ||

---

೧. ಚವಲಾ : ಕೂದಲು
೨. ಕೂಕಮ್ಮಾ : ಕುಂಕುಮ
೩. ಗಂದೆಣ್ಣೆ : ಶ್ರೀಗಂಧದ ಎಣ್ಣೆ

ಗಂದೆಣ್ಣೇss ದರುಸಾsರೋss
ಪೆಟ್ಗಿಮೇನೇ ಕುಳುಸಾsರೋs
ಪೆಟ್ಗಿಮೇನೇs ಕುಳುಸೀದಾs
ಪರದಕ್ಸ್ಣೀ[1] ಮಾಡಿದರೋ ॥ ೮೫ ॥

ಪರದಕ್ಸ್ಣೀ ಮಾಡೀsದಾs
(ದಿವಸಾಕೂ ಅದ್ರ ಮುಂದೆ
ಮುತ್ತಿನ ಕಣ್ಣೀರ ಬಿಡುವಾನೋ)
"ತಾನು ಮಡುದೀ[2] ಹೋದೀನೋ" ॥೮೬ ॥



೧. ಪರದಕ್ಸ್ಣೀ : ಪ್ರದಕ್ಷಿಣೆ
೨. ಮಡುದಿ : ಮಡಿದು
೧. ಸತು. ಗಿ, ಸತ್ತಿಗೆ, ಕೊಡೆ
೨. ವಡೆದೀರು, ಒಡೆಯರ
೩. ಲಾಳಿಗ್ವಂದು, ಆಳಿಗೆ (ಒಬ್ಬೊಬ್ಬರಿಗೆ) ಒಂದು

# ಗದ್ದೆ ನೆಟ್ಟಿಯ ಹಾಡು

ಆದು ಲಿಂದಾಗೇಽಽ[೧] ಸತ್ತುಗಿ ಮುಂದಾಗೇಽಽ
ಬೀಜದ ಮುಟ್ಟೀಽಽ ನೆಡುಗಾಗೇಽ ॥ ವಡಿದೀರೇ
ನೆಡುದಾರೆ ಮೂಡೀನಽಽ ಹೊಲಕಿನ್ನೇಽ ॥ ವಡಿದೀರು
ಹೂಡಿ ಬಿತ್ತರಿಯೇಽಽ ಬೆಳೆದಾಽನ್ನೀಽ ॥[೨] ವಡೆದೀರಽ
ಗಾಳಿ ಬೀಸಿ ಕದುರಽ ಸೊಗಿಲಂದೇಽ ॥ ವಡಿದೀರಽ
ತೋಳ ಬೀಸಿ ಮನಿಗೇಽ ಬರುವರಽ
ತೋಳ ಬೀಸಿ ಮನಿಗೇಽ ಬರುವರೇ ವಡೆದೀರಽ
ಲಿಂಡುತಿ ಮಾಽಲಕ್ಷ್ಮ್ರೀಽಽ ಕರುಽದರೇಽ ॥ ವಡೆದೀರಽ
ಹೂಗಿನ್ಹಿತ್ತಿಲುಗೇಽಽ ನಡುದಾರೆಽ ॥ ವಡೆದೀರೇ
ನಿನ್ನಾಗಾದ್ಲೂಗಽ ಕೊಯ್ಯ್ದಾರಽ ॥ ವಡೆದೀರೇ
ದಂಡೆ ಮೇನೆ ದಂಡೇಽಽ ಸುರುಽದಾರೇಽ ॥ ವಡೆದೀರೇ
ಲಾಳಿಗ್ವಂದು[೩] ದಂಡೇಽಽ ಕೊಡುವ್ರೋರೇಽ ॥ ವಡೆದೀರೇ
ಹಾಗೆ ಮಾಳುಗಿಗೇಽ ನಡೆದರೇಽ ॥ ವಡೆದೀರೇ
(ಲ್ಲಾಗೆ) ಮಾಳುಗಿಗೇಽ ನಡೆದರೇಽ ॥ ವಡೆದೀರೇ
ಎಣೆಯ ಗಿಂಡೀಽ ತೊಡುದಽರೇಽ ॥ ವಡೆದೀರೇ
ಲಾಳಿಗೆ ಯಣ್ಣೇಽಽ ಯರುದಾರೆಽ ॥ ವಡೆದೀರೇ
ಲಾಗೆ ಮಾಳುಗಿಗೇಽ ನಡುದಾರೆಽ ॥ ವಡೆದೀರೇ

---

೧. ಗಂದದರುವಣ, ಶ್ರೀಗಂಧವಿದ್ದ ಹರಿವಾಣ
೨. ಬುಟ್ಟಿ. ಗಂಧದ ಬೊಟ್ಟನ್ನು
೩. ಶಶಿ, ಸಸಿ
೪. ರಂಬೆ ಚಂಪ್ಪರ, ಸುಂದರ ಚಪ್ಪರ
೫. ಕೊರುಳ, ಕೊರಳಿನ, ಬಂಗಾರದ ಆಭರಣ ಧರಿಸಿದ
೬. ದರುಮೆ ಮಾಡೇ, ದಾನ ಧರ್ಮಮಾಡಿ
೭. ಪಾತರ, ನರ್ತನ



ಗಂದದರುವಣ[೧] ವೇss ತಡುsದsರs ॥ ವಡೆದೀರೆ
ಲಾಳಿಗ್ವಂದು[೨] ಬುಟ್ಟುssಲಿಡುವರೇss ॥ ವಡೆದೀರೆ
ಲಾಗೇ ಮಾಳುಗಿಗೇss ನೆಡುದಾರೆs ॥ ವಡೆದೀರೆ
ಹಾದಿಗೆ ಹೊನ್ ಹೊಯ್ಯೋ ಬೀದೀಗೂ ಚಿನ್ನನೆ ಹೊಯ್ಯೋ
ನೀವೀರಿs ಹೊನ್ನs ಶಶಿ[೩]ಯಂತೇs ॥ ವಡೆದೀರೇ
ಹಿಂದ್ ಹೋಗಿ ಮುಂದಕೇs ಬರುತೀರೊs ॥

## ಬತ್ತ ಬೇಡುವ ಹಾಡು

ಅಂಗಳಕೂ ಮನಿಗೇs ರಂಬೆ[೪] ಚಪ್ಪರ ನೆಟ್ಟೇs
ಬಂಗಾರದ ಕೊರುಳs[೫] ವಡುತೀಯುs ॥ ಮಾಲಕ್ಸುಮೀ
ಮುತ್ತಿನ ಗೆರುಸೇss ತಡುದರೇs ॥ ವಡುತ್ಯವ್ರೇ
ಮುತ್ತಿನ ಕೊಳುಗ್ಯಿಟ್ಟೇss ಅಳುದಾರೆ ॥ ವಡುತ್ಯವ್ರೇ
ಬಡವರು ಬಂದವರೇss ಮನಿಯಲ್ಲೇss ॥ ವಡುತ್ಯವ್ರೇ
ಬಡವರಿಗೂ ದಾನs ದರುಮೇ[೬] ಮಾಡೇss ॥ ವಡುತ್ಯವ್ರೇ

ಬಡವರು ಲಂಡೇss ಲೊಗುಳೂರs
ಸೀತಾಳಿ ಚಪ್ಪರವೇs ಸಿರಿಮೊಕದಂಗಳs
ಮತ್ತೆ ವಡಿದೀರs ಲರs ಮನೆss ॥ ಲಂಗಳದಲ್ಲೇ
ಪಾತರಾ[೭] ಡಿದವ್ರೋs ಗಿಳಿರಾಮುs ॥ (ರು) ಕಾಲೀಗೇs
ಮೂವತ್ವೊಂದ್ ಹೊನ್ನಿನss ಲುರಿಗೆಜ್ಜೋs ॥


---

೧. ಕಂಟ್ಯಲು ಮೇನೆ ದಂಡೆಯ ಮೇಲೆ
೨. ಸೆಬುನ, ಶುಭ
೩. ದಣ್ಣೇನೆ, ದಣ್ಣೆಂದು ಶಬ್ದಮಾಡಿ

ಲಾ ಬೂಮಿಲದು ನೋಡೇ ಲೀ ಬೂಮಿಲಿದು ನೋಡೇ
ಬಾಗಿಲಲಿರುವss ಹೊಸ ಬೂಮೀ II ಕಂಟ್ಯಲು ಮೇನೇ
ಈಳಿ ಹಣ್ಣೊಡುದೀss ಹರುಗಾರೇ II ಒಡಿದೀರೋ
ಲಾ ಬೂಮಿ ನಿಮಗೇss ನಿಜುವಾಗೇss II ಒಡಿದೀ ರೋ

ನಿಮ್ಮಲು ಬೂಮಿಲೇs ಸಣ್ಣಕ್ಕಿ ದಾನ್ಯನೋ ಬೆಳದೀಲೇs
ಲಾs ದಾನಿ ನಮಗೇss ಕೊಡುಬೇಕೇs II ಒಡುತ್ಯವ್ರೇ
ಲಾ ದಾನಿ ಲುಂಡೇs ಲೊಗುಳೂರುs II

ಲಟ್ಟಲು ತುಂಬಿದ ಲಿಕ್ಕೀs ಗೆಟ್ಟುಗಿ ತುಂಬಿದ ಬಣ್ಣs
ಕೊಟ್ಟುಗೀ ಸಿರೀ ಬಲಗೊಳ್ಳೀs
ಕೊಟ್ಟುಗಿ ಸಿರಿಯೇs ಬಲಗೊಳ್ಳಿ ವಡುತ್ಯವ್ರೇ,
ಮಕ್ಕಳೆಚ್ಚಿ ಮನಿಗೇss ಸೆಬುನಾಂಗೇss I
ಸೀತಳಿ ಚಪ್ಪರ ಸಿರಿಮೊಕದಂಗಳ
ಮತ್ತೆ ವಡಿದೀರs ಲರಮನೆs II
ಮೂಡಿಲು ಬಾಗಿಲುಗೇs ಜೋಡಿನ ದಾರಿಂದ್ರs
ದಣ್ಣೇನೇs ಕದವss ತೆಗsದಾರೇs II ವಡುತ್ಯವ್ರೇ,
ಬಡವರು ಬಂದವರೇs ಮನಿಯಲ್ಲೇ II ವಡುತ್ಯವ್ರೇ
ಬಡವರಿಗೇ ದಾನs ದರುಮೇ ಮಾಡೀs II ವಡುತೀಯ
ಬಡವರು ಲುಂಡೇs ಹೊಗಳೂರೇ II



# ಗೊಂಡರ ಕಾವ್ಯ



## ರಾಮಾಯಣ

ನಾಡೂ ದಾರೀನೇ ಬಿಟ್ಟಿದುರು ಈಗಿನ್ನು
ಕಾಡೂ ದಾರೀನೇ ಹಿಡಿದುದರಾ ತಾನ । ತಂದಾನ ।
ಕಾಡು ದಾರೀನೇ ಹಿಡಿದುದರು ಈಗಿನ್ನು
ಗೋರೂ ಅಡವೀಯ ಒಳಗಾಲಾ ತಾನ । ತಂದಾನ ।
ಗೋರೂ ಅಡವೀಯ ಒಳಗಲಾವೀಗಿನ್ನು
ನರಮನುಷರು ಹುಳುಲು ಅಲ್ಲಿಲ್ಲ ತಾನ । ತಂದಾನ ।
ನರಮನುಷರು ಹುಳುಲು ಅಲ್ಲಿಲ್ಲ ವೀಗಿನ್ನು
ಗೋರೂ ಅಡವೀಯ ಒಳಗಾಲ ತಾನ । ತಂದಾನ ।
ಗೋರು ಅಡವೀಯ ಒಳಗಲಾವೀಗಿನ್ನು
ಅಲ್ಲಿಗೂತಾವೀಗೂ ಅದರಾಳ ತಾನ । ತಂದಾನ ।
ಅಲ್ಲಿಗೂತಾವೀಗೂ ಅದರಾಳುವೀಗಿನ್ನು
ಅಣ್ಣಾತಮ್ಮೇಡು ಜನರಾಲಾ ತಾನ । ತಂದಾನ ।
ಅಣ್ಣಾತಮ್ಮೇಡು ಜನರಾಳು ವೀಗಿನ್ನು
ರಾಮಾಲಚ್ಚುಮಣ್ಣ ಎಂಬುವರಾ ತಾನ । ತಂದಾನ ।
ರಾಮಾಲಚ್ಚುಮಣ್ಣ ಎಂಬುವರು ಈಗಿನ್ನು
ಆರಣ್ಣೆದಲ್ಲೇ ಉಳಿದರಾಲಾ ತಾನ । ತಂದಾನ ।
ಆರಣ್ಣೆದಲ್ಲೇ ಉಳಿದಿದುರು ಈಗಿನ್ನು
ಅಲ್ಲೊಂದು ಮನೆಯ ಮಾಡ್ಯಾರಾಲಾ ತಾನ । ತಂದಾನ ।
ಅಲ್ಲೊಂದು ಮನೆಯ ಮಾಡಿದರುವೀಗಿನ್ನು
ಸೊಪ್ಪನು ತುಂಡೀನೆ ಮುರುದರ್ಯಾಲಾ ತಾನ । ತಂದಾನ ।
ಸೊಪ್ಪನು ತುಂಡೀನ ಮುರಿದುದರು ಈಗಿನ್ನು
ಕಡುವೋನೆಂದುರು ಕತ್ತಿಯಿಲ್ಲಾ ತಾನ । ತಂದಾನ ।

ಕಡುವ್ಹೋನೆಂದುರು ಕತ್ತಿಯಿಲ್ಲಾವೀಗಿನ್ನು
ಕೊಯ್ಯುನಂದರು ಚೂರಿಯಿಲ್ಲಾ ತಾನ । ತಂದಾನ ।
ಕೊಯ್ಯೋನಂದರು ಚೂರಿಯಿಲ್ಲ ವೀಗಿನ್ನು
ಕೈಯಲೂ ತಾವಿಗೋ ಮುರಿದುದುರಾ ತಾನ । ತಂದಾನ ।
ಕೈಯಲ್ಲೂ ತಾವೀಗೋ ಮುರಿದುದರಾ ಈಗಿನ್ನು
ಸೊಪ್ಪನು ತುಂಡೀನೆ ಮುರಿದುದರಾ ತಾನ । ತಂದಾನ ।
ಸೊಪ್ಪನು ತುಂಡೀನೆ ಮುರಿದಿದರಾ ಈಗಿನ್ನು
ಅಲ್ಲೊಂದು ಮನೆಯ ಮಾಡಿದುರಾ ತಾನ । ತಂದಾನ ।
ಅಲ್ಲೊಂದು ಮನೆಯ ಮಡಿದುರಾಈಗಿನ್ನು
ಸೊಪ್ಪನ್ನು ತುಂಡೀಯ ಮನಿಯಾಲಾ ತಾನ । ತಂದಾನ ।
ಸೊಪ್ಪನ್ನು ತುಂಡೀಯ ಮನಿಯಾಲಾ ವೀಗಿನ್ನು
ಅಲ್ಲೇ ತಾವೀಗೂ ಉಳುವವರಾ ತಾನ । ತಂದಾನ ।
ಅಲ್ಲೇ ತಾವೀಗೂ ಉಳುವವುರು ಈಗಿನ್ನು
ಉಳುವವುರು ಕಾಲ ಕಳುವವುರಾ ತಾನ । ತಂದಾನ ।
ಉಣುತೇನಂದಾರು ಅನ್ನಿಲ್ಲಾತಾನ । ತಂದಾನ ।
ಉಣುತೇನೆಂದರೂ ಅನ್ನಿಲ್ಲಾ ಈಗಿನ್ನು
ತಿನುತೇನಂದಾರು ಹಣ್ಣಿಲ್ಲಾ ತಾನ । ತಂದಾನ ।
ತಿನುತೇನಂದಾರೂ ಹಣ್ಣಿಲ್ಲಾವೀಗಿನ್ನು
ಕುಡಿತೇನೆಂದಾರೂ ಹಾಲಿಲ್ಲಾ ತಾನ । ತಂದಾನ ।
ಕುಡಿತೇನೆಂದರೂ ಹಾಲಿಲ್ಲಾವೀಗಿನ್ನು
ಹಾಲಿಲ್ಲಾ ಅಲ್ಲೂ ನೀರಿಲ್ಲಾ ತಾನ । ತಂದಾನ ।
ಹಾಲಿಲ್ಲಾ ಅಲ್ಲೂ ನೀರಿಲ್ಲಾ ವೀಗಿನ್ನು
ಯಾವುರೀತಿಯಲ್ಲು ಉಳಿಬೇಕಾ ತಾನ । ತಂದಾನ ।
ಲಾಗೂ ತಾನೀಗೆ ಇರುವನಲ್ಲೋ ಈಗಿನ್ನು
ರಾಮಸ್ವಾಮಿನೇ ಎಂಬನಾಲಾ ತಾನ । ತಂದಾನ ।
ಕೇಳು ಕೇಳೂ ನನ್ನ ತಮ್ಮ ನೀಕೇಳುವೀಗಿನ್ನು
ಲಚುಮಣ್ಣ ನೀನೇ ಕೇಳುವಾಲಾ ತಾನ । ತಂದಾನ ।
ಲಚುಮಣ್ಣಾ ನೀನೇ ಕೇಳುವಾಲಾವೀಗಿನ್ನು
ಹಣ್ಣು ಹುಡುಕೊಂಡೆ ಬರಬೇಕಾ ತಾನ । ತಂದಾನ ।

ಹಣ್ಣೊ ಹುಡುಕೊಂಡೇ ಬರಬೇಕು ಅಂದ್ಹೇಳಿ
ತಮ್ಮನು ಕೂಡೊಂದೆ ನುಡಿದನಾಲಾ ತಾನ । ತಂದಾನ ।
ಲಚುಮಣ್ಣ ತಾನೆ ಇದ್ದನಲ್ಲೋ ವೀಗಿನ್ನು
ಹಣ್ಣೀಗೂ ತಾನೆ ಹೋಗುತಾನಾ ತಾನ । ತಂದಾನ ।
ಹಣ್ಣೀಗೂ ತಾನೇ ಹೋಗುತಾನೆ ಈಗಿನ್ನು
ಕಾಡೀನೊಳಗೊಂದೆ ಹೋಗುತಾನಿಯೋ ತಾನ । ತಂದಾನ ।
ಲಚುಮಣ್ಣ ಕಾಡಿಗೂ ಹೋಗುತಾನೆಯೊ ವೀಗಿನ್ನು
ಕಾಡಿನೊಳುಗೊಂದೆ ಹುಡಕುತಾನಿಯೋ ತಾನ । ತಂದಾನ
ಕಾಡಿನೊಳಗೊಂದೆ ಹುಡುಕುತಾನೆಯೋ ವೀಗಿನ್ನು
ಹಣ್ಣೊವಿಗೊಂದೆ ಹುಡುಕುತಾನೆಯೋ ತಾನ । ತಂದಾನ ।
ಹಣ್ಣುವಿಗೊಂದೆ ಹುಡುಕುತಾನೆಯೋ ವೀಗಿನ್ನು
ಲವುನೀಗುಗೊಂದೆ ಸಿಕ್ಕುವದಾಲಾ ತಾನ । ತಂದಾನ ।
ಲವುನೀಗುಗೊಂದೆ ಸಿಕ್ಕುವದಾಲಾ ವೀಗಿನ್ನು
ದಿವುಸಗೂ ಎಲ್ಡಣ್ಣೆ ಸಿಕ್ಕುತ್ತದೆಯೇ ತಾನ । ತಂದಾನ ।
ದಿವುಸಗೂ ಎಲ್ಡಣ್ಣೆ ಸಿಕ್ಕುತ್ತದೆಯೋ ವೀಗಿನ್ನು
ಲದುರೂವಿಗೊಂದೆ ತರತಾನೆಯಾ ತಾನ । ತಂದಾನ ।



ಲದುರೂವಿಗೊಂದೆ ತರತಾನೆಯಾ ವೀಗಿನ್ನು
ಅಣ್ಣನೂ ಕೂಡುತಂದು ಕೊಡುತಾನೆಯೋ ತಾನ । ತಂದಾನ ।
ಲಣ್ಣವಿಗೊಂದೆ ಇರುವನಾಲವೂಗಿನ್ನೂ
ಎರಡು ಹಣ್ಣಿಗೂ ಇರುವುದಾಲಾ ತಾನ । ತಂದಾನ ।
ಎರಡು ಹಣ್ಣಿಗೊಂದೆ ಇರುವುದಾಲಾ ವೀಗಿನ್ನು
ಲದರು ಎಡು ಭಾಗ ಮಾಡುತಾನೆಯೋ ತಾನ । ತಂದಾನ ।
ಒಂದಣ್ಣು ಎಡು ಭಾಗ ಮಾಡುತಾನೆಯೋವೀಗಿನ್ನು
ಒಂದೂ ಬಾಗಾದಣ್ಣು ಇರುವದಾಲಾ ತಾನ । ತಂದಾನ ।
ಒಂದೂ ಬಾಗದಣ್ಣು ಇರುವದಾಲಾವೀಗಿನ್ನು
ದೇವರಿಗೂ ನೀವೇದ್ಯ ಮಾಡುತಾನೆಯೋ ತಾನ । ತಂದಾನ ।
ದೇವರಿಗೂ ನೀವೇದ್ಯೆ ಮಾಡುತಾನೆಯೋ ವೀಗಿನ್ನು
ಒಂದೆ ಬಾಗಾನೆ ಕೊಡುತಾನೆಯೋ ತಾನ । ತಂದಾನ ।
ತಮ್ಮಾಗೊಂದು ಬಾಗ ಕೊಡುತಾನೆ ವೀಗಿನ್ನು
ತಾನೂ ಇಡಿ ಹಣ್ಣು ತಿನ್ನುತಾನೆಯೋ ತಾನ । ತಂದಾನ ।
ತಾನೂ ಇಡಿಹಣ್ಣು ತಿನ್ನುತಾನೆಯೋ ವೀಗಿನ್ನು
ತಮ್ಮಾ ಲಚ್ಚುಮಣ್ಣಾ ಎಂಬುವವ ನಲಾ ತಾನ । ತಂದಾನ ।
ತಮ್ಮಾ ಲಚ್ಚುಮಣ್ಣಾ ಎಂಬುವನಲಾ ವೀಗಿನ್ನು
ಒಂದು ದಿವಸೊಂದೆ ಕಂಡನಾಲಾ ತಾನ । ತಂದಾನ ।
ಒಂದು ದಿವಸೊಂದೆ ಕಂಡಿದುನು ವೀಗಿನ್ನು
ಎಲ್ಲು ದಿವಸೊಂದೆ ಕಂಡನಾಲ ತಾನ । ತಂದಾನ ।
ತನಗೇ ಬಾಗಣ್ಣು ಕೊಡುತಾನೆಯೋ ವೀಗಿನ್ನು
ತಾನು ಇಡಿ ಹಣ್ಣೆ ತಿನ್ನುತಾನೆಯೋ ತಾನ । ತಂದಾನ ।
ಲಚ್ಚುಮಣ್ಣಗು ಸಿಟ್ಟು ಬಂದದ್ಯಾಲವೀಗಿನ್ನು
ಅಣ್ಣಾ ಕೊಟ್ಟಂತ ಬಾಗಣ್ಣಾ ತಾನ । ತಂದಾನ ।
ಅಣ್ಣಾ ಕೊಟ್ಟಂತ ಬಾಗಣ್ಣುಲೋ ವೀಗಿನ್ನು
ತಾನೂವಿಗೊಂದೆ ತಿನ್ನಲಿಲ್ಲಾ ತಾನ । ತಂದಾನ ।
ತಾನುವಿಗೊಂದೆ ತಿನ್ನುಲಿಲ್ಲೆ ವೀಗಿನ್ನು
ತನ್ನಾ ತೊಡಿಯೊಂದೆ ಸಿಗದನ್ಯಾರಾ ತಾನ । ತಂದಾನ ।
ತನ್ನಾ ತೊಡಿಯೊಂದೆ ಸಿಗುದಿದುನುವೀಗಿನ್ನು

ಅಣ್ಣಾ ಕೊಟ್ಟು ಬಾಗು ಹಣ್ಣಲಾ ತಾನ । ತಂದಾನ ।
ಅಣ್ಣಾ ಕೊಟ್ಟು ಬಾಗು ಹಣ್ಣಲೂ ವೀಗಿನ್ನು
ತೊಡೆಯೊಳುಗು ತಾನೆ ಇಟ್ಟನ್ಯಾಲಾ ತಾನ । ತಂದಾನ ।
ಲಾರೀತಿ ಕಾಲ ಕೆಳೆವೊವಂಗುವೀಗಿನ್ನು
ಕಳಿತಾರೆ ಅಲ್ಲೆ ಉಳಿತಾರೆ ತಾನ । ತಂದಾನ ।
ಕಳಿತಾರೆ ಅಲ್ಲೆ ಉಳೆತಾರೆ ವೀಗಿನ್ನು
ಆರೂ ವರುಷಾನೆ ಕಳೆದಮ್ಯಾಲೆ ತಾನ । ತಂದಾನ ।
ಆರೊರುಷ ಅರಣ್ಣೇಲಿ ಕಳುವಂಗೋವೀಗಿನ್ನು
ಕಳುವಾಂಗೋ ಕಾಲ ಕಳಿತಾರೆಯೋ ತಾನ । ತಂದಾನ ।
ಕಳುವಂಗೋ ಅಲ್ಲೆ ಉಳಿವಂಗೋವೀಗಿನ್ನು
ಅಲ್ಲೆ ಮುಂದೀನ ರಾಜ್ಯದಲ್ಲಿ ತಾನ । ತಂದಾನ ।
ಅಲ್ಲೆ ಮುಂದೀನ ರಾಜ್ಯದಲ್ಲು ವೀಗಿನ್ನು
ಜನಕಾರಾಜನ ಗಡಿಯಲ್ಲೋ ತಾನ । ತಂದಾನ ।
ಜನಕುಮಾರಾಜ ಎಂಬವುನಲ್ಲೋ ಈಗಿನ್ನು
ಅಲ್ಲೂವಿಗೊಂದೆ ಇರುವನಾಲಾ ತಾನ । ತಂದಾನ ।
ಅಲ್ಲೂವಿಗೊಂದೆ ಇರುವನಾಲಾ ವೀಗಿನ್ನು
ಇರುವಂಗೊ ಕಾಲ ಕಳೆವಂಗಾ ತಾನ । ತಂದಾನ ।
ಜನಕುರಾಜನೇ ಉಳುವಂಗೋವೀಗಿನ್ನು
ಅಲ್ಲೂವಿಗೊಂದೆ ಇರುವೋದಾಲಾ ತಾನ । ತಂದಾನ ।
ಅಲ್ಲೂವಿಗೊಂದೆ ಇರುವೋದಾಲಾ ವೀಗಿನ್ನು
ಜನಕು ರಾಜುಗೂ ಸಿಕ್ಕೆದ್ಯಾಲಾ ತಾನ । ತಂದಾನ ।
ಜನಕು ರಾಜುಗೂ ಸಿಕ್ಕದ್ಯಾಲಾ ವೀಗಿನ್ನು
ಭೂಮಿ ಒಳುಗೊಂದೆ ಸಿಕ್ಕದ್ಯಾಲಾ ತಾನ । ತಂದಾನ ।
ಭೂಮಿ ಒಳುಗೊಂದು ಸಿಕ್ಕದ್ಯಾಲೋ ವೀಗಿನ್ನು
ಒಂದು ಪೆಟ್ಟುಗೇನೆ ಸಿಕ್ಕದ್ಯಾಲಾ ತಾನ । ತಂದಾನ ।
ಒಂದು ಪೆಟ್ಟುಗೇನೆ ಸಿಕ್ಕದ್ಯಾಲಾವೀಗಿನ್ನು
ಅ ಪೆಟ್ಟುಗೆ ಒಡದು ಕಂಡಿದುರಾ ತಾನ । ತಂದಾನ ।
ಅ ಪೆಟ್ಟುಗೆ ಒಡದು ಕಂಡಿದುರಾವೀಗಿನ್ನು
ಹೆಣ್ಣು ಶಿಸುವೊಂದೇ ಅದಿಯಾಲಾ ತಾನ । ತಂದಾನ ।

ಹೆಣ್ಣು ಶಿಸುವೊಂದೇ ಅದಿಯಾಲಾವೀಗಿನ್ನು
ಜನಕೂ ರಾಜನೆ ಕಂಡನಾಲಾ ತಾನ । ತಂದಾನ ।
ಜನಕು ರಾಜಾನೆ ಕಂಡಿದುನು ವೀಗಿನ್ನು
ಅದಕೊಂದು ಹೆಸರೆ ಇಟ್ಟನ್ಯಾಲಾ ತಾನ । ತಂದಾನ ।
ಶಿಸುಗೊಂದು ಹೆಸುರೆ ಇಟ್ಟನ್ಯಾಲಾ ವೀಗಿನ್ನು
ಏನೇಂದ್ಹೇಳಿ ಹೆಸುರೆ ಇಟ್ಟನ್ಯಾಲಾ ತಾನ । ತಂದಾನ ।
ಏನೇಂದ್ಹೇಳಿ ಹೆಸುರೆ ಇಟ್ಟನ್ಯಾಲಾ ವೀಗಿನ್ನು
ಭೂಮಾ ದೇವೀಯ ಮಗುಳಾಲಾ ತಾನ । ತಂದಾನ ।
ಭೂಮಾ ದೇವಿಯ ಮಗಳಾಲವೀಗಿನ್ನು
ಸೀತಾದೇವಿಯ ಎಂಬುವುಳಾ ತಾನ । ತಂದಾನ ।
ಸೀತಾದೇವಿಯ ಎಂಬುವಳುವೀಗಿನ್ನು
ಅಂದೂ ಹೆಸಹ್ರೊಂದೆ ಇಟ್ಟಿಯ್ರಾಲಾ ತಾನ । ತಂದಾನ ।
ಲಂದ್ಹೇ ಹೆಸುಹ್ರೊಂದೆ ಇಟ್ಟಿದುರು ಈಗಿನ್ನು
ಸೀತಾದೇವಿಯೊಂದೆ ಕರಿತಾರಿಯಾ ತಾನ । ತಂದಾನ ।
ಸೀತಾದೇವಿಯೊಂದೆ ಕರಿತಾರಿಯಾ ವೀಗಿನ್ನು
ಜನಕಾರಾಜಾನೇ ಸಾಕುತಾನೆಯೋ ತಾನ । ತಂದಾನ ।
ಜನಕಾರಾಜಾನೇ ಸಾಕುತಾನೆಯೋ ವೀಗಿನ್ನು
ಸಾಕುತಾನೆಯೋ ಲವುನೆ ಸಲುಗುತಾನೆಯೋ ತಾನ । ತಂದಾನ ।
ಸೀತಾದೇವಿನೇ ಸಾಕುತಾನೆಯೋ ಈಗಿನ್ನು
ಬುದ್ದು ಬಲುವಾಗೆ ಬಂದಳಾಲಾ ತಾನ । ತಂದಾನ ।
ಬುದ್ದಿ ಬಲುವಾಗಿ ಬಂದಿದುಳು ಈಗಿನ್ನು
ಸೀತಾದೇವಿನೆ ಎಂಬುವುಳಾ ತಾನ ತಂದಾನ
ಜನಕುರಾಜಾನೇ ಇರುವವನು ಈಗಿನ್ನು
ನಿತ್ಯ ಸಾನಾನೆ ಮಾಡುಕೊಂಡು ತಾನ । ತಂದಾನ ।
ನಿತ್ಯ ಸಾನಾನೆ ಮಾಡುಕೊಂಡವೀಗಿನ್ನು
ಜನಕು ಜಪವೊಂದೆ ಮಾಡುತಿದುನೋ ತಾನ । ತಂದಾನ ।
ಜನಕು ಜಪವೊಂದೆ ಮಾಡುತಿದುನು ಈಗಿನ್ನು
ಒಂದಲ್ಲ ಒಂದೇ ದಿನುವಲ್ಲಾ ತಾನ । ತಂದಾನ ।
ಒಂದಲ್ಲ ಒಂದೇ ದಿನದಲ್ಲೂ ವೀಗಿನ್ನು

ಜನಕನು ಜಪ ಮಾಡುವ ಕಾಲವಾಲ ತಾನ । ತಂದಾನ ।
ಲಾಕಸೂ ಕಾಕೀನೆ ಎಂಬುವುದು ಈಗಿನ್ನು
ಆ ಕಲ್ಲು ಮ್ಯಾಲೆ ಹೇತಾಲಾ ತಾನ । ತಂದಾನ ।
ಜನಕು ಜಪವೊಂದೇ ಮಾಡುವಂಗೋ ಈಗಿನ್ನು
ಆಕಾಸು ಕಾಕೀ ಬಂದದ್ಯಾಲಾ ತಾನ । ತಂದಾನ ।
ಲಾಕಾಸು ಕಾಕೀ ಬಂದದಿಯೋ ಈಗಿನ್ನು
ಜನಕನು ಜಪವೊಂದೇ ಕೆಡುಸದೆಯೋ ತಾನ । ತಂದಾನ ।
ಜನುಕನು ಜಪವೊಂದೆ ಕೆಡುಸೆದೆಯೋವೀಗಿನ್ನು
ಜನುಕ ಮಾರಾಜ ಎಂಬವುನಾ ತಾನ । ತಂದಾನ ।
ಜನುಕ ಮಾರಾಜ ಅಲ್ಲಿರುವನು ಈಗಿನ್ನು
ಅವನಿಗೂ ಸಿಟ್ಟೊಂದೆ ಬಂದದ್ಯಾಲಾ ತಾನ । ತಂದಾನ ।
ಲವನಿಗು ಸಿಟ್ಟೊಂದೆ ಬಂದದೆಯೊವೀಗಿನ್ನು
ಆಕಾಸು ಕಾಕಿನೆ ಹೊಡಿಬೇಕೋ ತಾನ । ತಂದಾನ ।
ಆ ಕಾಕಿಗೂ ಹೊಡಿಬೇಕು ಈಗಿನ್ನು
ಲದರುವಿಗೊಂದೆ ಕೊಲಬೇಕಾ ತಾನ । ತಂದಾನ ।
ಆಕಾಸು ಕಾಕಿನೆ ಕೊಲುವುದುಕವೀಗಿನ್ನು
ಬೂಮು ತೂಕುದಾ ಬಿಲ್ಲಾಲ ತಾನ । ತಂದಾನ ।
ಬೂಮು ತೂಕುದಾ ಬಿಲ್ಲಾಲ ಈಗಿನ್ನು
ಲಕಾಸು ತೂಕುದ ಬಾಣವಲಾ ತಾನ । ತಂದಾನ ।
ಲದರುವಿಗೊಂದೆ ಹೊಡಿದುನು ಈಗಿನ್ನು
ಜನಕು ರಾಜನೇ ಹೊಡಿದುನೂ ತಾನ । ತಂದಾನ ।
ಜನುಕು ರಾಜನೇ ಹೊಡಿದನುವೀಗಿನ್ನು
ಊರೂರಿಗು ಸುದ್ದಿ ಕಳಿಸನ್ಯಾಲಾ ತಾನ । ತಂದಾನ ।
ಏನು ಡಂಗುರ ಹೊಡಿಸಿದನು ಈಗಿನ್ನು
ಎನೂ ಡಂಗೂರ ಸಾರಿದುನೂ ತಾನ । ತಂದಾನ ।
ಬೂಮು ತೂಕುದು ಬಿಲ್ಲಾಲ ಈಗಿನ್ನು
ಆಕಾಸು ತೂಕಾದು ಬಾಣವಲ್ಲಾ ತಾನ । ತಂದಾನ ।
ಇದುರು ಎತ್ತೊಂದೆ ಕೊಂದಿದುರಾ ಈಗಿನ್ನು
ಆಕಾಸ ಕಾಕಿ ಕೊಂದಿದುರಾ ತಾನ । ತಂದಾನ ।

ಆಕಾಸ ಕಾಕಿನೆ ಕೊಂದಿದುರಾ ಈಗಿನ್ನು
ನನ್ನ ಮಗಳು ಸೀತಾದೇವಿ ಎಂಬುವಳು ತಾನ । ತಂದಾನ ।
ನನ್ನ ಮಗಳು ಸೀತಾದೇವಿ ಇರುವೂಳು ಈಗಿನ್ನು
ದರುಮಾ ಲಗ್ಗಿನಿನೇ ಮಾಡತೇನಿ ತಾನ । ತಂದಾನ ।
ದರುಮಾ ಲಗ್ಗಿನಿನೇ ಮಾಡುತೇನಿ ಈಗಿನ್ನು
ಊರೂರಿಗೂ ಡಂಗೂರು ಹೊಡಿಸಿದನೂ ತಾನ । ತಂದಾನ ।
ಊರೂರಿಗೆ ಡಂಗೂರು ಹೊಡಿಸಿದನೂ ಈಗಿನ್ನು
ಜನಕು ರಾಜನು ಹೊಡಿಸಿದನೂ ತಾನ । ತಂದಾನ ।
ಲಾಗುತಾನೀಗು ಇರುವಂಗೆ ಈಗಿನ್ನು
ಲಕ್ಷುಮಣ್ಣ ಹಣ್ಣೀಗೋಗಿದುನೋ ತಾನ । ತಂದಾನ ।
ಲಕ್ಷುಮಣ್ಣ ಹಣ್ಣೀಗೋಗಿದುನೋವೀಗಿನ್ನು
ಅಲ್ಲೊ ಸುದ್ದೀನೇ ಸಿಕ್ಕುತಲ್ಲಾ ತಾನ । ತಂದಾನ ।
ಅಲ್ಲೊ ಸುದ್ದೀನೇ ಸಿಕ್ಕುತಲ್ಲಾ ಏನೆಂದು
ಇಲ್ಲೆ ಮುಂದಿನು ರಾಜ್ಯದಲ್ಲೋ ತಾನ । ತಂದಾನ ।
ಇಲ್ಲೆ ಮುಂದಿನು ರಾಜ್ಯದಲ್ಲೋ ಈಗಿನ್ನು
ಜನಕು ರಾಜನ ಗಡಿಯಲ್ಲಾ ತಾನ । ತಂದಾನ ।
ಜನಕು ರಾಜನ ಗಡಿಯಲ್ಲಾ ವೀಗಿನ್ನು
ಬಿಲ್ಲೀನ ಹಬ್ಬಾವೆ ಇದ್ದಾತು ಎಂಬರಲ್ಲಾ ತಾನ । ತಂದಾನ ।
ಅಂದು ಸುದ್ದಿಯ ಸಿಕ್ಕುತಲ್ಲೋ ಈಗಿನ್ನು
ಲಕ್ಷ್ಮಣ್ಣಾವಿಗೂ ಕೇಳಿದನು ತಾನ । ತಂದಾನ ।
ಲಕ್ಷ್ಮಣ್ಣಾವಿಗೂ ಕೇಳಿದನು ವೀಗಿನ್ನು
ಕೇಳು ಕೊಂಡಿದ್ದು ಬಂದಿದುನು ತಾನ । ತಂದಾನ ।
ಕೇಳು ಕೊಂಡಿದ್ದು ಬಂದಿದುನು ಈಗಿನ್ನು
ಅಣ್ಣನುಗೂ ಹುಡುಕೊಂಡೆ ಬಂದನಾಲಾ ತಾನ । ತಂದಾನ ।
ಅಣ್ಣನುಗೂ ಹುಡುಕೊಂಡೆ ಬಂದಿದನು ಈಗಿನ್ನು
ಅಲ್ಲೊವಿಗೆ ಬಂದು ನುಡಿತಾನಾ ತಾನ । ತಂದಾನ ।
ಕೇಳು ಕೇಳು ನನ್ನಣ್ಣ ನೀ ಕೇಳು ಈಗಿನ್ನು
ಇಲ್ಲೆ ಮುಂದಿನ ರಾಜ್ಯದಲ್ಲೋ ತಾನ । ತಂದಾನ ।
ಇಲ್ಲೆ ಮುಂದಿನ ರಾಜ್ಯದಲ್ಲೋ ಈಗಿನ್ನು

ಜನಕು ರಾಜನ ಗಡುಯಲ್ಲೋ ತಾನ । ತಂದಾನ ।
ಜನಕು ರಾಜನ ಗಡಿಯಲ್ಲೋ ಈಗಿನ್ನು
ಬಿಲ್ಲಿನ ಹಬ್ಬವು ಅಂದುರಲ್ಲೋ ತಾನ । ತಂದಾನ ।
ನಾನು ಕೇಳಿಗೊಂಡ ಬಂದಿದುನು ನನ್ನಣ್ಣಾ
ಕೇಳು ಕೇಳು ನನ್ನಾಣ್ಣಾ ನೀ ಕೇಳುತಾನ । ತಂದಾನ ।
ಕೇಳು ಕೇಳು ನನ್ನಣ್ಣಾ ನೀ ಕೇಳು ಈಗಿನ್ನು
ಬಿಲ್ಲೀನ ಹಬ್ಬಕೆ ಹೋಗುವಾನ ತಾನ । ತಂದಾನ ।
ಕೇಳೂ ನನ ತಮ್ಮ ನಿ ಕೇಳೋ ಈಗಿನ್ನು
ಬಿಲ್ಲೀನ ಹಬ್ಬೊಂದೂರಲ್ಲೂ ತಾನ । ತಂದಾನ ।
ಅಲ್ಲೂವಿಗೊಂದೇ ಹೊಡವಕೀ ಈಗಿನ್ನು
ಬೂಮು ತೂಕದ ಬಿಲ್ಲಾಲಾ ತಾನ । ತಂದಾನ ।
ಬೂಮು ತೂಕದ ಬಾಣವಲಾ ಈಗಿನ್ನು
ಆಕಾಸು ತೂಕದ ಬಾಣವಲಾ ತಾನ । ತಂದಾನ ।
ಇಡಿಯೋ ಬೂಮಿನೇ ಎತ್ತಬೇಕ ತಾನ । ತಂದಾನ ।
ಇಡಿಯೋ ಬೂಮಿನೇ ಎತ್ತಬೇಕ ಈಗಿನ್ನು
ಅದುರಾ ಎತ್ತೊಂದೆ ಹೊಡುವರುಸಾ ತಾನ । ತಂದಾನ ।
ನಮ್ಮ ಕೂಡಲ್ಲ ಸಾಧ್ಯವಿದೆಯೊ ಈಗಿನ್ನು
ಬಾಳ ಸೇಮಾನೆ ಆಗಬೇಕು ತಾನ । ತಂದಾನ ।
ಅದುರೋ ಎತ್ತೊಂದೆ ಹೊಡುವುದು ಈಗಿನ್ನು
ಆಕಾಸ ಕಾಕಿ ಕೊಲುವುದುಕೂ ತಾನ । ತಂದಾನ ।
ಬಾಳ ನೇಮನೇ ಬೇಕಲ್ಲವೀಗಿನ್ನು
ಹನ್ನೆರಡೊರುಸೊಂದೆ ಬಿಡಬೇಕಾ ತಾನ । ತಂದಾನ ।
ಅನ್ನ ಆಹಾರ ಮುಟ್ಟಬೇಡ ಈಗಿನ್ನು
ಹಣ್ಣೊಂದೇಳವು ತಿನ್ನಬೇಡಾ ತಾನ । ತಂದಾನ ।
ಹಣ್ಣೊಂದೇಳವು ತಿನ್ನಬೇಡಾ ಈಗಿನ್ನು
ಏನೂ ಈಗೊಂದೇ ತಿನಬೇಡಾ ತಾನ । ತಂದಾನ ।
ಏನೂ ಈಗೊಂದೇತಿನೂಬೇಡಾ ವೀಗಿನ್ನು
ಕಂಕ್ಕಲೂ ಕವುಡೇನೆ ಕಟ್ಟಬೇಕು ತಾನ । ತಂದಾನ ।
ಕಂಕ್ಕಲೂ ಕವುಡೇನೆ ಕಟ್ಟಬೇಕು ಈಗಿನ್ನು

ಮೂಗುನಲು ನೆಲಮುಸರಿ ಕಟ್ಟಬೇಕಾ ತಾನ । ತಂದಾನ ।
ಮೂಗುನಲು ನೆಲಮುಸುರಿ ಕಟ್ಟಬೇಕಾ ಈಗಿನ್ನು
ಬೆನ್ನೂ ಮ್ಯಾಲೊಂದೆ ಬೆಳಿಬೇಕಾ ತಾನ । ತಂದಾನಾ ।
ನಾಗುಬೆತ್ತಾನೇ ಬೆಳಿಬೇಕಾ ತಾನ । ತಂದಾನ ।
ನಾಗುಬೆತ್ತಾನೇ ಬೆಳಿಬೇಕಾ ಈಗಿನ್ನು
ಗಂಟ್ಲಲ್ಲಿಗೊಂದೆ ಕಟ್ಟುಬೇಕಾ ತಾನ । ತಂದಾನ ।
ಗಂಟ್ಲಲ್ಲಿಗೊಂದೆ ಕಟ್ಟುಬೇಕಾವೀಗಿನ್ನು
ಸಾವಿಗನೆ ಬಲೆಯೊಂದೆ ಕಟ್ಟಬೇಕಾ ತಾನ । ತಂದಾನ ।
ಅಷ್ಟುವಿಗೊಂದೆ ಇದ್ದುದ್ದರೆ ನನ್ನ ತಮ್ಮ
ನಾವು ಈಗೊಂದು ಹೋಗಬಹುದೋ ತಾನ । ತಂದಾನ ।
ಅಷ್ಟು ಮಾತೊಂದು ಕೇಳಿದನು ಈಗಿನ್ನು
ಲಕ್ಷುಮಣ್ಣಾನೇ ಕೇಳಿದನಾ ತಾನ । ತಂದಾನ ।
ಲಕ್ಷುಮಣ್ಣಾನೆ ಕೇಳಿದನಾ ಈಗಿನ್ನು
ಆಗೂತಾನೀಗೂ ಬಿಡುಸಿದನೂ ತಾನ । ತಂದಾನ ।
ತನ್ನು ಒತೊಡಿನೆ ಬಿಡುಸಿದನೋವೀಗಿನ್ನು
ಹಣ್ಣು ಭಾಗಾನೇ ತೆಗೆದಿದುನೂ ತಾನ । ತಂದಾನ ।
ಕೇಳು ಕೇಳಲಾ ನನ್ನಣ್ಣ ಈಗಿನ್ನು
ಆರೂವರುಷಕೂ ಎಷ್ಟು ಭಾಗಾ ತಾನ । ತಂದಾನ ।
ಇದರೂ ಲೆಕ್ಕಾನೆ ಮಾಡಿದುರು ಈಗಿನ್ನು
ಅಣ್ಣ ಕೊಟ್ಟಂತ ಹಣ್ಣಲಾ ತಾನ । ತಂದಾನ ।
ಅಣ್ಣ ಕೊಟ್ಟಂತ ಹಣ್ಣಲಾ ಈಗಿನ್ನು
ತಮ್ಮವಿಗೊಂದೆ ಮುಟ್ಟಲಿಲ್ಲಾ ತಾನ । ತಂದಾನ ।
ಕೇಳು ಕೇಳು ನನ್ನ ತಮ್ಮ ನೀ ಕೇಳು ಈಗಿನ್ನು
ನನ್ನ ಮ್ಯಾಲೆ ಬೇದ ಮಾಡಿದೇನಾ ತಾನ । ತಂದಾನ ।
ನನ್ನ ಮ್ಯಾಲೆ ಬೇದ ಮಾಡಿದೆಯೆ ಈಗಿನ್ನು
ಇನ್ನು ಮುಂದೆಂದು ಮಾಡಬೇಡಾ ತಾನ । ತಂದಾನ ।
ಕೇಳು ಕೇಳು ನನ್ನಾಣ್ಣಾ ನೀ ಕೇಳು ಈಗಿನ್ನು
ನಾನು ಹಣ್ಣಿಗೂ ಹೋಗುವಾನಾ ತಾನ । ತಂದಾನ ।
ನಾನು ಹಣ್ಣಿಗೂ ಹೋಗುವನೂ ಈಗಿನ್ನು

ಅರಮನೆಯಲೂ ನೀನೆ ಉಳಿವವನೂ ತಾನ । ತಂದಾನ ।
ನನಗೂ ಸಿಕ್ಕುವುದು ಈಗಾಲೂವೆ ಈಗಿನ್ನು
ದಿವಸಗೆ ಎರಡಣ್ಣು ಸಿಕ್ಕುತ್ತದೆಯೋ ತಾನ । ತಂದಾನ ।
ಒಂದು ಹಣ್ಣೊಂದೆ ಸಿಕ್ಕುಲಿಲ್ಲಾ ತಾನ । ತಂದಾನ ।
ಲದರೂ ತಂದು ನಾನುಕೊಟ್ಟುದುರೆ ಈಗಿನ್ನು
ನೀನು ಆಗ ಏನು ಮಾಡುತಿದಿಯೋ ತಾನ । ತಂದಾನ ।
ದೇವರಿಗೊಂದು ಭಾಗ ಅಭಿಷೇಕಾ ಈಗಿನ್ನು
ನನಗೊಂದು ಭಾಗ ಕೊಡುತಿದೆಯಾ ತಾನ । ತಂದಾನ ।
ನೀನು ಇಡಿಹಣ್ಣು ತಿನುತಿದೆಯೋ ಈಗಿನ್ನು
ಲದರಲ್ಲೂ ಒಂದು ತುಂಡು ಕೊಟ್ಟಿದುರು ತಾನ । ತಂದಾನ ।
ಲದರಲ್ಲೂ ಒಂದು ತುಂಡು ಕೊಟ್ಟಿದುರೆ ನನ್ನಣ್ಣ
ನನಗೂ ಭೇದಾನೆ ಇಲ್ಯಾಲಾ ತಾನ । ತಂದಾನ ।
ಕೇಳೂ ನನ್ನು ತಮ್ಮ ನಿನ್ಯಾಲು ಈಗಿನ್ನು
ಹಣ್ಣಿಗೂ ನೀನೆ ಹೋಗುವವನೇ ತಾನ । ತಂದಾನ ।
ಹಣ್ಣಿಗೂ ನೀನೆ ಹೋಗುವವನು ಈಗಿನ್ನು
ಒಂದು ಹೆಚ್ಚಾದರೂ ಸಿಕ್ಕಿದುರೇ ತಾನ । ತಂದಾನ ।
ಒಂದು ಹೆಚ್ಚಾರು ಸಿಕ್ಕಿದುರೇ ಈಗಿನ್ನು
ತಿಂದುಕೊಂಡು ನೀನೆ ಬಂದಿವೆಂದಾ ತಾನ । ತಂದಾನ ।
ನಾನು ನಿನಗೊಂದೇ ಕೊಡಲಿಲ್ಲಾವೀಗಿನ್ನು
ಇನ್ನು ಮುಂದಿಗೂ ಮಾಡಬ್ಯಾಡಾ ತಾನ । ತಂದಾನ ।
ಇನ್ನು ಮುಂದಿಗೂ ಮಾಡಬ್ಯಾಡಾ ಈಗಿನ್ನು
ಈಗೂ ಈ ಬೇದ ಮಾಡಬೇಡಾ ತಾನ । ತಂದಾನ ।
ನಾನು ತಪ್ಪಿದರೂ ನೀನು ಹೇಳುಬೇಕೂ ಈಗಿನ್ನು
ನೀನು ತಪ್ಪಿದರೂ ನೀನು ಹೇಳುಬೇಕು ತಾನ । ತಂದಾನ ।
ಇನ್ನುಮುಂದು ಈ ಬೇದ ಮಾಡಬೇಡ ವೀಗಿನ್ನು
ನಮ್ಮೊಳಗು ಬೇದ ಆಗಬಾರ್ದೂ ತಾನ।ತಂದಾನ।
ಅಷ್ಟು ಈಗೊಂದೆ ತರುಸಿದೆನು ಈಗಿನ್ನು
ಕೇಳು ಕೇಳಾಲ ನನ್ನಣ್ಣಾ ತಾನ । ತಂದಾನ ।
ಕೇಳು ಕೇಳಾಲ ನನ್ನಣ್ಣಾ ವೀಗಿನ್ನು



ನನ್ನ ಕಂಕ್ಳು ನೋಡುವಾಲಾ ತಾನ । ತಂದಾನ ।
ಕಂಕ್ಳೊಳಲು ಈಗೊಂದೆ ಕಂಡಿದರೆ ವೀಗಿನ್ನು
ಕಂಕಳಲು ಕವುಡೇನೆ ಕಟ್ಟಿದಾಲ ತಾನ । ತಂದಾನ ।
ಕಂಕಳಲು ಕವುಡೇನೆ ಕಟ್ಟುದೆಯೊ ಈಗಿನ್ನು
ಮೂಗಿನಲೂ ನೆಲಮುಸಿರಿ ಕಟ್ಟಿದೆಯೋ ತಾನ । ತಂದಾನ ।
ಮೂಗಿನಲೂ ನೆಲಮುಸಿರಿ ಕಟ್ಟಿದೆಯೋ ವೀಗಿನ್ನು
ಬೆನ್ನು ಮ್ಯಾಲೊಂದು ಬೆಳೆದಿದೆಯೋ ತಾನ । ತಂದಾನ ।
ಬೆನ್ನು ಮ್ಯಾಲೊಂದು ಬೆಳೆದಿದೆಯೋ ವೀಗಿನ್ನು
ಬೆನ್ನು ಮ್ಯಾಲೊಂದು ಬೆಳಿದಿದುಯಾ ತಾನ । ತಂದಾನ ।
ಬೆನ್ನು ಮ್ಯಾಲೊಂದು ಬೆಳೆದಿದುಯೋ ಈಗಿನ್ನು
ನಾಗಬೆತ್ತನೇ ಬೆಳೆದಿದೆಯಾ ತಾನ । ತಂದಾನ ।
ನಾಗಬೆತ್ತನೇ ಬೆಳೆದಿದೆಯಾ ಈಗಿನ್ನು
ಗಂಟ್ಲಲ್ಲಿಗೊಂದೆ ಕಂಡಿದುರಾ ತಾನ । ತಂದಾನ ।
ಗಂಟ್ಲಲ್ಲಿಗೊಂದೆ ಕಂಡಿದುರು ಈಗಿನ್ನು
ಸಾಲುಗನ ಬಲಯೊಂದೆ ಕಟ್ಟಿದಾಲಾ ತಾನ । ತಂದಾನ ।
ಕೇಳು ಕೇಳಾಲ ನನ್ನಣ್ಣಾ ಈಗಿನ್ನು


ಮತ್ತೂ ನಮಗೇನು ಆಗಬೇಕಾ ತಾನ । ತಂದಾನ ।
ಅಷ್ಟು ಇದ್ದುದುರೂ ಸಾಲದೇನ ಈಗಿನ್ನು
ಮತ್ತೂ ನಮಗೇನು ಆಗಬೇಕು ತಾನ । ತಂದಾನ ।
ಮತ್ತೂ ನಮಗೇನು ಆಗಬೇಕು ಈಗಿನ್ನು
ಬಿಲ್ಲೀನಬ್ಬಕು ಹೋಗುವಾಗ ತಾನ । ತಂದಾನ ।
ಅಂದು ತಾನೀಗೂ ನುಡಿತಾನೆಯೋ ಈಗಿನ್ನು
ಅಣ್ಣನ ಕೂಡೊಂದೆ ಹೇಳುತಾನೆಯೋ ತಾನ । ತಂದಾನ ।
ಅಣ್ಣನ ಕೂಡೊಂದ ಹೇಳುತಾನೆಯೋ ಈಗಿನ್ನು
ಲಾಗೂ ತಾನಿಗೂ ಹೇಳುವಾನ ತಾನ । ತಂದಾನ ।
ರಾಮಸ್ವಮಿನೇ ಎಂಬುನೇ ವೀಗಿನ್ನು
ಲಾಗುವಿಗೊಂದು ನುಡಿದನಾಲಾ ತಾನ । ತಂದಾನಾ ।
ರಾಮಾಸ್ವಾಮಿನೇ ನುಡಿದಿದುನು ವೀಗಿನ್ನು
ಬಿಲ್ಲುನಬ್ಬುಕೂ ಹೋಗುವಾನಾ ಅಂದಿದನು
ತಮ್ಮನು ಕೂಡೆಂದು ಹೇಳುವವನಾ ತಾನ । ತಂದಾನ ।
ರಾಮಾ ಲಚ್ಚುಮಣ್ಣ ಎಂಬುವರು ವೀಗಿನ್ನು
ಅಣ್ಣ ತಮ್ಮೇಡು ಜನರಾಲಾ ತಾನ । ತಂದಾನಾ ।
ಅಣ್ಣ ತಮ್ಮೇಡು ಜನರಾಲಾವೀಗಿನ್ನು
ಗೋರು ಅರಣ್ಯೇದಾ ವಳಸಾರಾ ತಾನ । ತಂದಾನ ।
ಗೋರು ಅರಣ್ಯೇದಾ ವಳಸಾರಾ ವೀಗಿನ್ನು
ಅನಸು ಕಾಡೀನ ಮದ್ಯದಲ್ಲೋ ತಾನ । ತಂದಾನ ।
ಅನಸು ಕಾಡೀನ ಮದ್ಯದಲ್ಲೋ ವೀಗಿನ್ನು
ಸೊಪ್ಪುನ ತುಂಡೀಯಲರಮನೆಯೋ ತಾನ । ತಂದಾನ ।
ಲಲ್ಲೂ ತಾವಿಗೂ ಉಳಿವಂಗೂ ವೀಗಿನ್ನು
ಅಲ್ಲಿಂದ ತಾವೇ ಸರುತಾರಿಯೋ ತಾನ । ತಂದಾನ ।
ಅಲ್ಲಿಂದ ತಾವೇ ಸರುತಾರಿಯೋ ವೀಗಿನ್ನು
ಬಿಲ್ಲಿನಬ್ಬಕ್ಕೂ ಹೋಗುತಾರಿಯೋ ತಾನ । ತಂದಾನ ।
ಬಿಲ್ಲಿನಬ್ಬಕ್ಕೂ ಹೋಗುತಾವರೆ ವೀಗಿನ್ನು
ಅಣ್ಣ ತಮ್ಮೇಡು ಜನರಾಲಾ ತಾನ । ತಂದಾನ ।
ಅಣ್ಣ ತಮ್ಮೇಡು ಜನರಾಲಾ ವೀಗಿನ್ನು

ರಾಮ ಲಕ್ಷಮಣ್ಣ ಎಂಬುವರು ತಾನ । ತಂದಾನ ।
ದಾರಿಯಲ್ಲಿಗೂ ಹೋಗುವಂಗು ವೀಗಿನ್ನು
ಹೋಗು ಹೋಗುತವರೇ ಅಕರಾಲಾ ತಾನ । ತಂದಾನ ।
ದಾರಿ ಮ್ಯಾಲೊಬ್ಬ ಸಿಕ್ಕನೆಲ್ಲವೀಗಿನ್ನು
ಕಳ್ಳ ಗುರುದೇವ ಎಂಬನಾಲಾ ತಾನ । ತಂದಾನ ।
ಕೇಳು ಕೇಳಲಣ್ಣ ಕೇಳುವಾಗಲೀಗಿನ್ನು
ಇಲ್ಲೆ ಮುಂದಿನ ರಾಜ್ಯದಲ್ಲೋ ತಾನ । ತಂದಾನ ।
ಇಲ್ಲೆ ಮುಂದಿನ ರಾಜ್ಯದಲ್ಲೋ ವೀಗಿನ್ನು
ಬಿಲ್ಲೀನಬ್ಬ ಅಂಬುರಾಲಾ ತಾನ । ತಂದಾನ ।
ಬಿಲ್ಲೀನಬ್ಬ ಅಂಬುರಾಲಾ ವೀಗಿನ್ನು
ಅಲ್ಲೊಗಡುನಾವೆ ಹೋಗುಬೇಕಾ ತಾನ । ತಂದಾನ ।
ಕೇಳಿ ಕೇಳಿರಿ ತಮ್ಮದೀರು ನೀವೀಗ
ಸಣ್ಣ ಸಣ್ಣವರು ಹುಡುಗರೂ ತಾನ । ತಂದಾನ ।
ಸಣ್ಣ ಸಣ್ಣವರು ಹುಡುಗರೂ ನೀವೀಗ
ಬಿಲ್ಲಿನಬ್ಬುಕೂ ಅಲ್ಯಾಲಾ ತಾನ । ತಂದಾನ ।
ಬಿಲ್ಲಿನಬ್ಬುಕೂ ಅಲ್ವಾಲಾ ಅಂದರಲ್ಲಾ ವೀಗಿನ್ನು
ಉಂಬೂಕು ಅಲ್ಲ ಮಾಡರಿಲ್ಲಾ ತಾನ । ತಂದಾನ ।
ಆಕಾಸು ತೂಕದು ಬಾಣವಲಾ ಈಗಿನ್ನು
ಬೂಮು ತೂಕದು ಬಿಲ್ಲಾಲ ತಾನ । ತಂದಾನ ।
ಬೂಮು ತೂಕದು ಬಿಲ್ಲಾಲ ಈಗಿನ್ನು
ಅದಕು ಎತ್ತೊಂದೆ ಹೊಡಿಬೇಕಾ ತಾನ । ತಂದಾನ ।
ಅದಕು ಎತ್ತೊಂದೆ ಹೊಡಿಬೇಕಾ ಈಗಿನ್ನು
ಆಕಾಸು ಕಾಕಿನೆ ಕೊಲಬೇಕೂ ತಾನ । ತಂದಾನ ।
ಆಕಾಸು ಕಾಕಿನ ಕೊಲಬೇಕೂ ಈಗಿನ್ನು
ಬಿಲ್ಲು ನೀವೊಂದೆ ಎತ್ತುಬಹುದಾ ತಾನ । ತಂದಾನ ।
ಬಿಲ್ಲು ನೀವೊಂದೆ ಎತ್ತುಬಹುದಾ ಈಗಿನ್ನು
ಬಾಣಾನ ಆಗುದೊಂದೆ ಹೊರಬಹುದೇ ತಾನ । ತಂದಾನ ।
ಲದರು ಎತ್ತೊಂದೆ ಹೊಡೆದಿರಲಿ ಈಗಿನ್ನು
ನನ್ನ ಕೊಡ್ಲಿಯೊಂದೆ ಅದೆಯಾಲ ತಾನ । ತಂದಾನ ।

ನನ್ನ ಕೊಡ್ಲಿಯೊಂದೆ ಅದೆಯಾಲೋ ವೀಗಿನ್ನು
ಭೂಮಿಮ್ಯಾಲೆ ನಾನು ಇಡುತೀನಿ ತಾನ । ತಂದಾನ ।
ಭೂಮಿ ಮ್ಯಾಲೆ ನಾನು ಇಡುತೀನಿ ಈಗಿನ್ನು
ಅದನ್ನು ಎತ್ತೊಂದೆ ಕೊಡುರ್ಯ್ಲಾಲಾ ತಾನ । ತಂದಾನ ।
ಕೊಡ್ಲಿ ಎಂದಿದುರು ಅಲ್ಲವಲ್ಲೋ ಈಗಿನ್ನು
ಹನ್ನೇಡು ಶಿರುವಾಗಿ ಇದಿಯಲ್ಲಾ ತಾನ । ತಂದಾನ ।
ಲಾಗುತಾನೇಯ ಕೇಳುತಾನೆ ಈಗಿನ್ನು
ಲಚ್ಚುಮಣ್ಣಾನೆ ಹೇಳುತಾನೆಯೋ ತಾನ । ತಂದಾನ ।
ಕೇಳು ಕೇಳು ನನ್ನಣ್ಣಾ ನೀ ಕೇಳು ಈಗಿನ್ನು
ಅವನಕೊಡ್ಲಿನೆ ಇರುವುದಾಲಾ ತಾನ । ತಂದಾನ ।
ನಾನು ಎತ್ತೊಂದೆ ಕೊಡಿತಿದುನೋ ಈಗಿನ್ನು
ನಿನ್ನು ಅಪ್ಪುಣೆನೇ ಆಗೂಬೇಕೂ ತಾನ । ತಂದಾನ ।
ಕೇಳು ನನ್ನ ತಮ್ಮ ನೀನಾರು ಈಗಿನ್ನು
ಕೈಯಲು ನಿನೊಂದು ಮುಟ್ಟುಬೇಡಾ ತಾನ । ತಂದಾನ ।
ಕೈಯಲು ನೀನೆ ಮುಟ್ಟುಬೇಡಾ ವೀಗಿನ್ನು
ಕಾಲಲು ಹೆಕ್ಕೊಂದೆ ಕೊಡುವಾಲಾ ತಾನ । ತಂದಾನ ।
ಲಾಗೂತಾನೀಗೂ ನುಡಿದಿದುನು ಈಗಿನ್ನು
ರಾಮಸ್ವಾಮಿನೇ ನುಡಿದಿದುರಾ ತಾನ । ತಂದಾನ ।
ಲಚ್ಚುಮಣ್ಣಾನೆ ಇರುವನಲ್ಲಾ ಈಗಿನ್ನು
ಎಡಗಾಲು ಕೊಡ್ಲಿ ಎತ್ತಿದನೋ ತಾನ । ತಂದಾನ ।
ಎಡಗಾಲ ಕೊಡ್ಲಿ ಎತ್ತಿದನೋವಿಗಿನ್ನು
ತೆಗೆದುವಿಗೊಂದೆ ಒಗೆದನಲ್ಲೋ ತನಾ । ತಂದಾನ ।
ತೆಗೆದುವಿಗೊಂದೆ ಒಗೆದನಲ್ಲೋ ವೀಗಿನ್ನು
ಏಳು ಸಮುದುರಾದಾಚೆಲೂ ತಾನ । ತಂದಾನ ।
ಏಳು ಸುಮುದುರಾ ಆಚಯಲ್ಲೋ ವೀಗಿನ್ನು
ಕೀಳು ಸಮುದ್ರ ಕೊಡಿಯಲ್ಲೋ ತಾನ । ತಂದಾನ ।
ಅಲ್ಲಿ ಕೊಡ್ಲಿನೇ ಬಿದ್ದುದಲ್ಲೋ ವೀಗಿನ್ನು
ಲಾಗುತಾನೆಯೋ ಮರಕುತಾನೆಯೋ ತಾನ । ತಂದಾನ ।
ಕೇಳಿ ಕೇಳಿ ತಮ್ಮಂದೀರಾ ನೀವಾಳ ವೀಗಿನ್ನು

ನಿಮ್ಮ ತಳ್ಳೀನೆ ನಂಗೂ ಬ್ಯಾಡಾ ತಾನ । ತಂದಾನ ।
ನಿಮ್ಮ ತಳ್ಳೀನೆ ನಂಗೂ ಬ್ಯಾಡಾ ವೀಗಿನ್ನು
ಹೊಟ್ಟೆಗಂಜೀನೆ ಕಳುಕೊಂಡಾ ತಾನ । ತಂದಾನ ।
ನನ್ನೊಟ್ಟೆ ಗಂಜಿ ಕಳಕೊಂಡೆ ಈಗಿನ್ನು
ದಾರಿಮ್ಯಾಲೆ ನೀವೆ ಹೋಪರಾಳ ತಾನ । ತಂದಾನ ।
ನಿಮ್ಮಾ ತಳ್ಳೀನೆ ನನಗೂ ಬ್ಯಾಡವೀಗಿನ್ನು
ಇದೇ ದಾರೀಲಿ ಹೋಗಿರೆಂಬಾ ತಾನ । ತಂದಾನ ।
ಇದೆ ದಾರೀಲಿ ಹೋಗಿರೆಂಬಾ ವೀಗಿನ್ನು
ಇಲ್ಲೇ ಮುಂದಿನ ರಾಜ್ಯದಲ್ಲಿ ತಾನ । ತಂದಾನ ।
ಇಲ್ಲೇ ಮುಂದಿನ ರಾಜ್ಯದಲ್ಲಿ ಈಗಿನ್ನು
ಜನಕು ರಾಜುನ ಗಡಿಯಲ್ಲಾ ತಾನ । ತಂದಾನ ।
ಜನಕುರಾಜನ ಗಡಿಯಲ್ಲಾ ವೀಗಿನ್ನು
ಬಿಲ್ಲೀನ ಹಬ್ಬೊಂದೆ ನಡಿತದೆಯೋ ತಾನ । ತಂದಾನ ।
ಲಂದು ದಾರಿನೇ ತೋರಿಸಿದನು ವೀಗಿನ್ನು
ರಾಮಲಚ್ಚುಮಣ್ಣ ಎಂಬುವರಾ ತಾನ । ತಂದಾನ ।
ಮುಂದ ಮುಂದೊಂದೆ ಅದಕಾಲಾ ತಾನ । ತಂದಾನಾ ।
ಮುಂದ ಮುಂದೊಂದೆ ಅದರಾಲಾ ಹೋಗಿದುರು ಈಗಿನ್ನು
ಅಲ್ಲೂವಿಗೊಂದೆ ಬಂದು ಕೂಡರಿಯೋ ತಾನ । ತಂದಾನ ।
ಅಲ್ಲೂವಿಗೊಂದೆ ಕೂಡರಿಯೆ ಈಗಿನ್ನು
ಬಿಲ್ಲಿನಬ್ಬಕೂ ಬಂದರಿಲಾ ತಾನ । ತಂದಾನ ।
ಬಿಲ್ಲಿನಬ್ಬಕೂ ಬಂದರಿಯೋ ಈಗಿನ್ನು
ರಾಜುಮಕ್ಕಳು ಬಂದರಿಯೋ ತಾನ । ತಂದಾನ ।
ರಾಜುಮಕ್ಕಳು ಕೂಡರಿಯೋ ಈಗಿನ್ನು
ಅರಸು ಮಕ್ಕಳು ಕೂಡರಿಯಾ ತಾನ । ತಂದಾನ ।
ಅರಸು ಮಕ್ಕಳು ಕೂಡರಿಯ ಈಗಿನ್ನು
ಅದರಲ್ಲೂ ಈಗೂ ಬಂದನಾಲಾ ತಾನ । ತಂದಾನ ।
ಅದರಲ್ಲೂ ಈಗೂ ಬಂದನಿಯೋ ಈಗಿನ್ನು
ಲಂಕಾ ಪಟ್ನಾದ ರವಣಾನೋ ತಾನ । ತಂದಾನ ।
ಲಂಕಾ ಪಟ್ನಾದ ರವಣನೋ ಈಗಿನ್ನು

ಹತ್ತು ಅವನಿಗಾಲ ತಲೆಯೊಂದೆ ತಾನ । ತಂದಾನ ।
ಹತ್ತು ತಲೆಯೊಂದೇ ಅವನಿಗಾಲ ಈಗಿನ್ನು
ಇಪ್ಪತ್ತು ತೋಳು ಅವನಿಗಾಲಾ ತಾನ । ತಂದಾನ ।
ಇಪ್ಪತ್ತು ತೋಳು ಅವನಿಗಾಲಾ ಈಗಿನ್ನು
ಎಲ್ಲರಿಗಿಂತವನೆ ಹುದಿಯಾಳಾ ತಾನ । ತಂದಾನ ।
ಎಲ್ಲರಿಗಿಂತವನೆ ಹುದಿಯಾಳಾ ಈಗಿನ್ನು
ಕೊಚ್ಚುತಾಲವನೆ ಕೊಯ್ತುವನೇ ತಾನ । ತಂದಾನ ।
ಕೊಚ್ಚುತಾಲವನೆ ಕೊಯ್ತುವನೇ ಈಗಿನ್ನು
ಈ ಬಾಣ ಎತ್ತುಹೊಡೆದೆಂಬ ತಾನ । ತಂದಾನ ।
ಈ ಬಾಣ ಎತ್ತು ಹೊಡೆದೆಂಬ ವೀಗಿನ್ನು
ಆಕಾಸು ಕಾಕಿನ ಕೊಲುತೆಂಬಾ ತಾನ । ತಂದಾನ ।
ಆಕಸು ಕಾಕಿನೆ ಕೊಲುತೆಂಬಾ ಈಗಿನ್ನು
ಸೀತಿ ಲಗ್ಗುನಿನೆ ಆಗುತೆಂಬಾ ತಾನ । ತಂದಾನ ।
ಕೊಚ್ಚತಾವನೆ ಕೊಯ್ತುವನೇ ಈಗಿನ್ನು
ಲಂಕಾ ಪಟ್ನಾದ ರಾವಣನೋ ತಾನ । ತಂದಾನ ।
ಲಾಗುತಾವಿಗೋ ಹೋಗಿದರು ಈಗಿನ್ನು
ರಾಮ ಲಚುಮಣ್ಣ ಎಂಬುವರಾ ತಾನ । ತಂದಾನ ।
ಲಚುಮಣ್ಣರಾಮನಿಗೂ ನುಡಿತವನೇ ವೀಗಿನ್ನು
ಕೇಳು ಕೇಳಾಲ ನನ್ನಣ್ಣಾ ತಾನ । ತಂದಾನ ।
ಕೇಳು ಕೇಳಾಲ ನನ್ನಾಣ್ಣಾ ಈಗಿನ್ನು
ಲೇಸಾ ನಮ್ಮಿಂದ ಆಗಿದುರೆ ತಾನ । ತಂದಾನ ।
ಲೇಸಾ ನಮ್ಮಿಂದ ಆಗಿದ್ರು ಈಗಿನ್ನು
ಕೂಸಿ ಮೊದುಲೊಂದೆ ನೋಡಬೇಕಾ ತಾನ । ತಂದಾನ ।
ಕೂಸಿ ಮೊದುಲೊಂದೆ ನೋಡಬೇಕಾ ವೀಗಿನ್ನು
ಕೂಸಿ ನಾ ಒಂದೆ ನೋಡಬೇಕಾ ತಾನ । ತಂದಾನ ।
ಕೂಸಿ ನಮ್ಮಿಗೂ ನೋಡಬೇಕಾ ಈಗಿನ್ನು
ಯಾವುಪಾಯನೇ ಮಾಡಬೇಕಾ ತಾನ । ತಂದಾನ ।
ಯಾವುಪಾಯಲೇ ಮಾಡಬೇಕಾ ಈಗಿನ್ನು
ಜನಕುರಾಜನ ಲರಮನೆಯೋ ತಾನ । ತಂದಾನ ।



ಜನಕುರಾಜನ ಅರಮನೆಗು ಈಗಿನ್ನು
ಅಲ್ಲಿಗೂ ನಾವೀಗ ಹೋಗಬೇಕೂ ತಾನ । ತಂದಾನ ।
ಅಲ್ಲೀಗೂ ನಾವೀಗ ಹೋಗಬೇಕು ಈಗಿನ್ನು
ನೀರು ಕುಡಿಯೂಕು ಕೇಳುಬೇಕೂ ತಾನ । ತಂದಾನ ।
ನಾವು ನಿರೋಂದೆ ಕುಡಿವಂಗು ಈಗಿನ್ನು
ಎಲ್ಲಾ ಹೆಣಮಕ್ಕಳು ಬರುತಾರಿಯೋ ತಾನ । ತಂದಾನ ।
ಅಲ್ಲೂ ಸೀತೀನ ನೋಡಬೇಕೋ ಈಗಿನ್ನು
ಎಂದೂ ತಾನೀಗ ನುಡಿದನಲಾ ತಾನ । ತಂದಾನ ।
ಅಣ್ಣ ತಮ್ಮೇಡು ಜನರಾಲು ಈಗಿನ್ನು
ಎಲ್ಲಿಗೂ ಅವರು ಹೋದರೇನಾ ತಾನ । ತಂದಾನ ।
ಎಲ್ಲಿಗೂ ಅವರು ಹೋದರೇನಾ ವೀಗಿನ್ನು
ಜನಕುರಾಜನ ಅರಮನೆಗೂ ತಾನ । ತಂದಾನ ।
ಜನಕುರಾಜನ ಅರಮನೆಗೂ ಹೋಗಿದರು
ಅಲ್ಲೂ ಹೋಗೊಂದೇ ನಿತ್ತುಕೊಂಡಾ ತಾನ । ತಂದಾನ ।
ಅಲ್ಲೂ ಹೋಗೊಂದೇ ನಿತ್ತುಕೊಂಡು ಈಗಿನ್ನು
ನಮಗಿಟ್ಟು ನೀರೆ ಕೊಡಿರೆಂಬಾ ತಾನ । ತಂದಾನ ।
ನಮಗಿಟ್ಟು ನೀರೆ ಲಾಗುಬೇಕು ಈಗಿನ್ನು
ಎಂದು ತಾನೆ ನುಡಿದನಾರಾ ತಾನ । ತಂದಾನ ।
ಕುಡಿವಕೂ ನೀರೊಂದೆ ಕೊಡುತಾರಿಯೋ ಈಗಿನ್ನು
ಆಗುಲಚ್ಚುಮಣ್ಣ ಎಂಬುವನೂ ತಾನ । ತಂದಾನ ।
ಲಚ್ಚುಮಣ್ಣ ಸ್ವಾಮಿ ಎಂಬುವನೂ ಈಗಿನ್ನು
ಬಾಯಲ್ಲೂ ನೀರೆ ಕುಡಿತಾನಿಯೋ ತಾನ । ತಂದಾನ ।
ಬಾಯಲ್ಲೂ ನೀರೆ ಕುಡಿತಾನಿಯೋ ಈಗಿನ್ನು
ಮೂಗುನಲ್ಲೂ ಒಂದೇ ತರುತಾನಿಯೋ ತಾನ । ತಂದಾನ ।
ಮೂಗುನಲ್ಲೂ ಒಂದೇ ನೀರೇ ಕುಡಿತಾನಿಯೋ ಈಗಿನ್ನು
ಬಾಯೊಳಗೂ ನೀರೆ ಬಿಡುತಾನಿಯೋ ತಾನ । ತಂದಾನ ।
ಎಲ್ಲವರು ಈಗೂ ಬಂದಿರಿಯೋ ಈಗಿನ್ನು
ಸೀತಿ ದೇವೀನೆ ಕಂಡಿರಿಯೋ ತಾನ । ತಂದಾನ ।
ಸೀತಿದೇವೀನೇ ಕಂಡಿದುರು ವೀಗಿನ್ನು

ಅಲ್ಲಿಂದ ಲವರೆ ಬಂದಿದುರೂ ತಾನ । ತಂದಾನ ।
ಅಲ್ಲಿಂದ ಲವರೆ ಬಂದಿದುರೂ ಪೀಗಿನ್ನು
ಅಣ್ಣ ತಮ್ಮೇಡು ಜನರಾಲಾ ತಾನ । ತಂದಾನ ।
ಬಿಲ್ಲನು ಬುಡವಾಗ ಬಂದಿದುರು ಈಗಿನ್ನು
ತಾನೂವಿಗೊಂದೇ ಅಡಕ್ಯಾನೂ ತಾನ । ತಂದಾನ ।
ತಾನೂವಿಗೊಂದೇ ಹೂಡಿತೆಂಬು ಪೀಗಿನ್ನು
ಸೀತೆ ಲಗ್ಗುನೊಂದೆ ಆಗುತೆಂಬಾ ತಾನ । ತಂದಾನ ।
ಲಚ್ಚುಮಣ್ಣ ಸ್ವಾಮಿ ಹೋಗಿದನು ಈಗಿನ್ನು
ಲಂಬುನು ತುದಿಯಲೂ ಬರೆದಿದನು ತಾನ । ತಂದಾನ ।
ಏನೊಂದೆಲಳಿಗೂ ಬರೆದಿದುನು ಈಗಿನ್ನು
ಲೇಸಾ ನನ್ನಿಂದ ಆಗಿದುರಾ ತಾನ । ತಂದಾನ ।
ಲೇಸಾ ನನ್ನಿಂದ ಆಗಿದುರಾ ಪೀಗಿನ್ನು
ಸಿಲಣ್ಣಗೆ ಗೊಡಬೇಕಾ ತಾನ । ತಂದಾನ ।
ಬೂಮೂ ತೂಂದ ಬಿಲಾಳ ಈಗಿನ್ನು
ಆಕಾಸು ತೂಂದ ಬಾಣನಲಾ ತಾನ । ತಂದಾನ ।
ಆಕಾಸು ತೂಂದ ಬಾಣವಲಾ ಈಗಿನ್ನು
ಎತ್ತುವಿಗೊಂದೆ ಹೊಡೆದನಲಾ ತಾನ । ತಂದಾನ ।
ಎತ್ತುವಿಗೊಂದೆ ಹೊಡೆದಿದುನು ಈಗಿನ್ನು
ಆಕಾಸು ಕಾಕಿನೊಂದಿದುನು ತಾನ । ತಂದಾನ ।
ಆಕಾಸು ಕಾಕಿನೊಂದಿದುನೂ ಈಗಿನ್ನು
ಜನುರಾಜನೇ ಎಂಬುವನಾಲಾ ತಾನ । ತಂದಾನ ।
ಜನುರಾಜನೇ ಎಂಬುವನಾಲಾ ಈಗಿನ್ನು
ತಾನೂವಿಗೊಂದೆಂಡಿದನೂ ತಾನ । ತಂದಾನ ।
ತಾನೂವಿಗೊಂದೆಂಡಿದನೂ ಪೀಗಿನ್ನು
ಅಡಿದುಮಾತೊಂದೆ ಅದಲಯಲಾ ತಾನ । ತಂದಾನ ।
ಆಡಿದುಮಾತೊಂದೆಅದೆಯಲಾ ಈಗಿನ್ನು
ಭುಮೂದೇವಿಯ ಮಗಳಾಲಾ ತಾನ । ತಂದಾನ ।
ಭೂಮೂದೇವಿಯ ಮಗಳಾಲೋ ಈಗಿನ್ನು
ಸೀತಾ ದೇವಿನೇ ಎಂಬುವಳಾ ತಾನ । ತಂದಾನ ।

ಸೀತಾದೇವಿನೇ ಎಂಬುವಳಾ ಈಗಿನ್ನು
ರಾಮುಗೂ ಲಗ್ಗಿನನೆ ಮಾಡಿದರು ತಾನ । ತಂದಾನ ।
ರಾಮುಗೂ ಲಗ್ಗಿನನೆ ಮಾಡಿದರಾ ಈಗಿನ್ನು
ದರುಮು ದರುಮು ದಾರೀನೇ ಎರಿದಿದುರಾ ತಾನ । ತಂದಾನ ।
ದರುಮು ದಾರೀನೇ ಎರಿದಿದುರಾ ಈಗಿನ್ನು
ರಾಮೂನೂ ಸೀತೇನೆ ಆಗಿದುರಾ ತಾನ । ತಂದಾನ ।
ಲಂಕಪಟ್ನಾದ ರವಣಾನು ಈಗಿನ್ನು
ಹತ್ತೂ ತೆಲೆಯವನು ಕವಣ ತಾನ । ತಂದಾನ ।
ಹತ್ತೂ ತಲೆಯ ರವಣಾನು ಈಗಿನ್ನು
ಚ್ಚುತನೆ ಅವನೊಯ್ತುಲವನೇ ತಾನ । ತಂದಾನ ।
ತಾನು ಲಗ್ಗಿನೇ ಆಗುತ್ತಿದ್ದೆ ಈಗಿನ್ನು
ರಾಮ ಲಚ್ಚುಮಣ್ಣ ಎಂಬುವರೆ ತಾನ। ತಂದಾನ ।
ಸೀತೆ ನನಗೊಂದ ತಪ್ಪಿಸಿದರು ಈಗಿನ್ನು
ರಾಮನ ಸೀತೆನೆ ಎಂಬುವಳಾ ತಾನ । ತಂದಾನ ।
ರಾಮನ ಸೀತೆನೆ ಎಂಬುವಳ ಈಗಿನ್ನು
ಮೂರು ದವಸಾರು ಆಳುದಿದುರೇ ತಾನ । ತಂದಾನ ।
ಮೂರು ದಿವಸಾರು ಆಳುದಿದುರೆ ಈಗಿನ್ನು
ಲಂಕಾಪಟ್ನಾದ ರವಣ ನಾನಲ ತಾನ । ತಂದಾನ ।
ಲಂಕಾ ಪಟ್ನಾದ ರವಣ ನಾನಲ ಈಗಿನ್ನು
ಹತ್ತು ತಲೆಯೊಂದೆ ನಂದಲಾ ತಾನ । ತಂದಾನ ।
ಹತ್ತು ತಲೆಯೊಂದೆ ನಂದಲಾ ಈಗಿನ್ನು
ಇಪ್ಪತ್ತು ಭುಜವೆ ನಂದಲಾ ತಾನ । ತಂದಾನ ।
ಇಪ್ಪತ್ತುಭುಜವೆ ನಂದಲಾ ಈಗಿನ್ನು
ರಾಮುನು ಸೀತಿನೆ ಡಿಸದಿದುರೆತಾನ । ತಂದಾನ ।
ರಾಮುನು ಸೀತಿನೆ ಡಿಸದಿದುರೆ ಈಗಿನ್ನು
ಲಂಕಾ ಪಟ್ನದವನೆ ನಾನಲ ತಾನ । ತಂದಾನ ।
ಲಂಕಾ ಪಟ್ನದವನೆ ನಾನಲಾ ಈಗಿನ್ನು
ರವಣಾ ಎಂಬೆಸರು ತೆಗೆಬೇಕಾ ತಾನ । ತಂದಾನ ।
ಅಂದೂವಿಗೊಂದೆ ಹೊತ್ತನಲ ಈಗಿನ್ನು

ಅಲೂ ಪಣವೊಂದೆ ಹೊತ್ತನಲಾ ತಾನ । ತಂದಾನ ।
ಅಲೂ ಪಣವೊಂದೆ ಹೊತ್ತಿದುನೋ ಈಗಿನ್ನು
ಲಂಕಾ ಪಟ್ನಾದ ರಾವಣನು ತಾನ । ತಂದಾನ ।
ಲಂಕಾಪಟ್ನಾದ ರಾವಣನು ಈಗಿನ್ನು
ಎಲಿಗೂ ಒಂದಂ ಅದರೇಳಾ ತಾನ । ತಂದಾನ ।
ಎಲಿಗೂ ಒಂದೆ ಹೋಗಿದನು ಈಗಿನ್ನು
ಲಂಕಾಪಟ್ನಾ ಹೋದನಾಲಾ ತಾನ । ತಂದಾನ ।
ರಾಮಾಲಚ್ಚುಮಣ್ಣ ಎಂಬುವರು ಈಗಿನ್ನು
ಇಲೂ ಈಗೊಂದೆ ಇದ್ದರಾಲಾ ತಾನ । ತಂದಾನ ।
ಇಲೂ ಈಗೊಂದೆ ಇದ್ದಿದುರು ಈಗಿನ್ನು
ಮೂರುದಿವಸೊಂದೆ ಳುದಿದುರು ತಾನ । ತಂದಾನ ।
ಮೂರು ದಿವಸೊಂದೆ ಳುದಿರುವೀಗಿನ್ನು
ಅಲುವಿಗೊಂದೆ ಇರುವವರಾ ತಾನ । ತಂದಾನ ।
ಅಲುವಿಗೊಂದೆ ಳದಿದುರ ಈಗಿನ್ನು
ಸೀತೀ ಡು ಒಂದು ನುಡಿದನಾಲಾ ತಾನ । ತಂದಾನ ।
ಸೀತೀ ಡು ಒಂದು ನುಡಿದಿದುರು ಈಗಿನ್ನು
ಏಳೇಳು ಎಲೆ ಸೀತಿನೀನಾಗ ತಾನ । ತಂದಾನ ।
ನನ್ನ ಮಡುದೀನೆ ನೀಏಳು ಈಗಿನ್ನು
ನನ್ನ ಮಾತೀಗೂ ಏಳುಬೇಕಾ ತಾನ । ತಂದಾನ ।
ನಾವ ಎಡು ಜನವೂ ಹೋಗಿತೇವ ಈಗಿನ್ನು
ಲಲೂವಿಗೊಂದೆ ಹೋಗುನಿಲಾ ತಾನ । ತಂದಾನ ।
ಆರೊರುಷ ವನವಾಸ ಳೆದವೆಯೋ ಈಗಿನ್ನು
ಆರೊರುಷ ಅಜ್ಞಾಸಳಿಬೇಕಾ ತಾನ । ತಂದಾನ ।
ಆಜ್ಞಾಸಳುದಿ ಬರುವರೆಗೂ ಈಗಿನ್ನು
ಇಲ್ಲೇ ನಿನೊಂದೆ ಉಳಿಬೇಕಾ ತಾನ । ತಂದಾನ ।
ಇಲ್ಲೇ ನೀನೀಗ ಉಳಿಬೇಕಾ ಈಗಿನ್ನು
ಹೋಗುವಂದು ನಾವೇ ಬರುತೀವಾ ತಾನ । ತಂದಾನ ।
ಹೋಗುವಂದು ನಾವೇ ಬರುತೀವಿ ಈಗಿನ್ನು
ನಿನ್ನ ರೂಂಡು ಹೋಗುತೀವಾ ತಾನ । ತಂದಾನ ।

ಏಳೇಳು ನನ್ನ ಸ್ವಾಮಿ ರಾಮದೇವ್ರ ಈಗಿನ್ನು
ನಿಮ್ಮ ಬೆನ್ನಗೂ ಬರುತೆಂಬಾ ತಾನ । ತಂದಾನ ।
ನಿಮ್ಮ ಬೆನ್ನಗೂ ಬರುತೆಂಬಾ ಈಗಿನ್ನು
ನೀವ ಉಳಿದಂಗೆ ಉಳಿತೆಂಬೋ ತಾನ । ತಂದಾನ ।
ನೀವ ಉಳಿದಂಗೆ ಉಳಿತೆಂಬಾವೀಗಿನ್ನು
ನೀವ ಹೇಳಿದಂಗೇಳಿತೆಂಬಾ ತಾನ । ತಂದಾನಾ ।
ನಿಮ್ಮ ಬೆನ್ನಿಗೂ ಬರುತೆಂಬಾ ತಾನ । ತಂದಾನ ।
ಏಳು ಏಳಲಾ ಮಡಿದಿ ನೀಳು ಈಗಿನ್ನು
ಉಳಿಲಾರೆ ಕಾಲಳಿಲಾರೆ ತಾನ । ತಂದಾನ ।
ಉಳಿಲಾರೆ ಕಾಲಳಿಲಾರೆ ಈಗಿನ್ನು
ಅನ್ನಿಲೆ ಅಲು ನೀರಿಲಾ ತಾನ । ತಂದಾನ ।
ಅನ್ನಿಲೆ ಅಲು ನೀರಿಲೆ ಈಗಿನ್ನು
ಹಣ್ಣಿಲೆ ಅಲು ಹಾರಿಲೇ ತಾನ । ತಂದಾನ ।
ಹಣ್ಣಿಲೆ ಅಲು ಹಾಲಿಲೇ ಈಗಿನ್ನು
ಉಳಿಲಾರೆ ಕಾಲಳಿಲಾರೆ ತಾನ । ತಂದಾನ ।
ಎಷ್ಟು ಹೇಳಿದರೂ ಕೇಳುವಲದಿ ಈಗಿನ್ನು
ನಿಮ್ಮ ಬೆನ್ನೀಗೂ ಬರುತೆಂಬಾ ತಾನ । ತಂದಾನ ।
ನಿಮ್ಮ ಬೆನ್ನೀಗೂ ಬರುತೆಂಬಾ ಈಗಿನ್ನು
ನೀವ ಉಳುದಂಗೆ ಉಳಿತೆಂಬಾ ತಾನ । ತಂದಾನ ।
ನೀವ ಉಳುದಂಗೆ ಉಳುತೆಂಬಾ ಈಗಿನ್ನು
ನೀವ ಉಳುದಂಗೇಳಿತಂಬಾ ತಾನ । ತಂದಾನಾ ।
ನಿಮ್ಮ ಬೆನ್ನೊಂದೆ ಬಿಡುವದಿಲಾ ತಾನ । ತಂದಾನ ।
ರಾಮನು ಸೀತೀನೇ ಎಂಬುವಳು ಈಗಿನ್ನು
ರಾಮನು ಬೆನ್ನೊಂದೆ ಬಿಡನಿಲಾ ತಾನ । ತಂದಾನ ।
ಏನು ಹೇಳಿದರು ಏಳುವದಿಲಾ ಈಗಿನ್ನು
ರಾಮನು ಬೆನ್ನೊಂದೆ ಬಿಡುವದಿಲಾ ತಾನ । ತಂದಾನ ।
ರಾಮನು ಬೆನ್ನೊಂದೆ ಬಡುವದಿಲಾ ಈಗಿನ್ನು
ರಾಮ ಲಚ್ಚು ಮಣ್ಣ ಎಡು ಜನುವಾ ತಾನ । ತಂದಾನ ।
ರಾಮಲಚ್ಚುಮಣ್ಣೆಡುಜನರು ಈಗಿನ್ನು

ಸೀತೆ ಒಬ್ಬೊಳು ಬೆನ್ನಿಗಾಲಾ ತಾನ । ತಂದಾನ ।
ಸೀತೆ ಒಬ್ಬೊಳು ಬೆನ್ನಿಗಾಲಾ ಈಗಿನ್ನು
ಮೂರು ಮಂದೀನೆ ಹೋಗುವಾರಾ ತಾನ । ತಂದಾನ ।
ಮೂರು ಮಂದೀನೆ ಹೋಗುವಾರಾ ಈಗಿನ್ನು
ಬಿದ್ದು ದಾರೀನೆ ಹಿಡಿದರವರಾ ತಾನ । ತಂದಾನ ।
ಬಿದ್ದು ದಾರೀನೆ ಹಿಡಿದುರು ಈಗಿನ್ನು
ಎಲೀಗಾದರೂ ಹೋಗಿದುರಾ ತಾನ । ತಂದಾನ ।
ಎಲೀಗಾದರೂ ಹೋಗಿದುರಾ ಈಗಿನ್ನು
ಅನಸು ಕಾಡೀಗೂ ಹೋಗಿದುರಾ ತಾನ । ತಂದಾನ ।
ಅನಸು ಕಾಡೀನ ಒಳಗಾಲು ಈಗಿನ್ನು
ಗೊರು ಅಡವೀಯ ಅಲಿಲಾ ತಾನ । ತಂದಾನ ।
ಗೊರು ಅಡವೀಯ ಅಲಾಲಾ ಈಗಿನ್ನು
ನರಮನುಷರಳಲು ಅಲಿಲಾ ತಾನ । ತಂದಾನ ।
ನರಮನುಷರಳಲು ಅಲಿಲಾ ಈಗಿನ್ನು
ಅಲೂ ಮುಂದೊಂದೆ ಬಂತಾಲಾ ತಾನ । ತಂದಾನ ।
ರಾಸುರು ಹಿಂಡು ಅದಿಯಲೊ ಈಗಿನ್ನು
ಗೋರು ಅಡವೀಯ ಒಳಗಾಲು ತಾನ । ತಂದಾನ ।
ಗೋರು ಅಡವಿಯ ಒಳಗಾಲ ವೀಗಿನ್ನು
ಸೊಪ್ಪನು ತುಂಡೀ ಮನೆಯಾಲಾ ತಾನ । ತಂದಾನ ।
ಸೊಪ್ಪನು ತುಂಡೀಯ ಮನೆಯಲು ಈಗಿನ್ನು
ಅಲೂ ತಾವಿಗಾ ಉಳಿದುದುರಾ ತಾನ । ತಂದಾನ ।
ಅಲೂ ತಾವಿಗೂ ಉಳಿದುದುರಾ ಈಗಿನ್ನು
ರಾಮಾಲಚ್ಚುಮಣ್ಣ ಎಂಬವರು ತಾನ । ತಂದಾನ ।
ರಾಮಲಚ್ಚುಮಣ್ಣ ಎಂಬವರು ಈಗಿನ್ನು
ರಾಮನೂ ಸೀತೇನೇ ಇರುವಳಾಲಾ ತಾನ । ತಂದಾನಾ ।
ಅಲೋ ತಾನೀಗೂ ಇರುವಂಗಾ ತಾನ । ತಂದಾನ ।
ಅಲೋ ತಾನೀಗು ಇರುವಂಗು ಈಗಿನ್ನು
ಉಳುವಂಗೊ ಕಾಲ ಉಳಿವಂಗಾ ತಾನ । ತಂದಾನ ।

ಉಳವಂಗು ಕಾಳ ಳಿವಂದು ಈಗಿನ್ನು
ರಾಮಸೀತೆನರಮನೆಯಾ ತಾನ । ತಂದಾನ ।
ರಾಮಸೀತೆನರಮನೆಯ ಈಗಿನ್ನು
ಲಚ್ಚ್ಮಣ್ಣ ಹಣ್ಣಿಗೂ ಹೋಗುವ ತಾನ । ತಂದಾನ ।
ಲಚ್ಚ್ಮಣ್ಣ ಹಣ್ಣಿಗೂ ಹೋಗುನಾತಾನೆಯೋ ಈಗಿನ್ನು
ದಿವಸಿಗೂ ಎಲಡಣ್ಣು ಸಿಕ್ಕುತ್ತೆದೆಯೋ ತಾನ । ತಂದಾನ ।
ದಿವಸಿಗೂ ಎಲಡಣ್ಣು ಸಿಕ್ಕುತ್ತೆದೆಯೋ ಈಗಿನ್ನು
ಅಣ್ಣನು ಕೊಡುತಂದು ಕೊಡುತನಿಯಾ ತಾನ । ತಂದಾನ ।
ಅಣ್ಣನು ಕೊಡುತಂದು ಕೊಡುತನಿಯಾ ಈಗಿನ್ನು
ಅಣ್ಣಾ ರಾಮಸ್ವಾಮಿ ಎಂಬುವನಾ ತಾನ । ತಂದಾನ ।
ಅಣ್ಣಾ ರಾಮಸ್ವಾಮಿ ಎಂಬುವನು ಈಗಿನ್ನು
ಒಂದಣ್ಣಾ ಏರಡು ಭಾಗ ಮಾಡುತನೆಯಾ ತಾನ । ತಂದಾನ ।
ಒಂದಣ್ಣಾ ಏರಡು ಭಾಗ ಮಡುತಾನೆಯಾ ಈಗಿನ್ನು
ಒಂದು ಭಾಗ ಹಣ್ಣ ಇರುವದಾಲಾ ತಾನ । ತಂದಾನ ।





# ಹುಲಿಬೇಟೆ

ಹುಲಿಬಂತಲೋ ದೊಡ್ಡ ಹುಲಿಬಂತಲೋ
ಆ ಗುಡ್ಡಿ ಮಾಽಗುಡ್ಡಿ ಹಾರಿ ಬಂದದ್ಯೋ
ಗುಡ್ಯಂದು ಹುಲಿಸೇರಿ ಬಂದ್ವಾಗೀಗೂಽ
ಗೋಕಾವನಾಽಗೋವಾಽ ಮೆಯ್ಸಕ್ಹೊಂಟಾಽನೇ
ಮಾಽನಾಽಡಾಽ ಬೈಲಿಗೆ ಹೊಡಿವವ್ನಾದಾಽ
ನೂರೊಂದೂ ಗೋವ ಗಂಟೆ ಮೇವದಾಯ್ತು
ಹೂಗಿನಾಽದಾಽ ಮೊಳೆ ಹೊಯ್ವಾದೀಗೇ
ಹೊತ್ಕಾಂಡೀದಾಽ ವಂದೂ ಮೂರ್ ಕಪ್ಪಿಲ್ಲೇ
ನೂರೊಂದು ಗೋವಗೆಂಟಿ ವಂದ್ ಮಾಡ್ವನೇ
ಹಿಂದೋಪಾಸಿ ಹೊಡ್ದಿ ಕಳ್ಗ್ ಮೋವ್ನಾದಾಽ
ಆ ಸನ್ನಿನೇ ಹುಲಿ ತೆಳ್ಕಂಡೀಗಾಽ
ಹಿಂಡ್ನೊಳಗೆ ಅಂಡೀ ನಿಲ್ವವ್ನಾದಾಽ
ಹಿಂದೀನಾಽದಾಽ ಗೋವು ಹಿಂದೆವಳ್ದೋ
ಮುಂದಿನಾಽದಾಽ ಗೋವು ಮುಂದೆ ಹೋದೋ
ನೆಡುಗೋಲಿಯಾ ಮೇನೇ ಹಾರ್‍ವವ್ನಾದಾಽ
ವೋಡ್ ಲಾರ್ದಿದ್ದಾ ವಂದು ಬಡ್ಕರುವೇ
ಹುಲ್ಯಣ್ಣನಾಽ ಕೈಗೆ ಸಿಕ್ ಬಿದ್ದಾವೇಽ
ಅದ್ರೀಗಾಽ ಕುತ್ಗೀನಾಽ ಮುರ್‍ವದಾಯ್ತೋ
ಗೋವಕಾರಣ್ಣಾಽ ಬೊಬ್ಬೀ ಕೊಡ್ವವ್ನಾದಾಽ
ಊರವರೂ ಊರ ಗಿರವಾದವರೂ
ಕೊವ್ ಕತ್ತಿ ಜಲ್‍ದೊಣಪೆ ಹಿಡಿದವರೇ
ಮೆಟ್ಟತ್ತೀಗೂಽ ತಾವು ವೋಡಿಬಂದಾರೇ
ಅಸನ್ನಿನೇ ಹುಲ್ಯ ತೆಳ್‍ಕೊಂಡದೇಽ

ಆ ಸರಮಾನೇ ಬಿಟ್ಟಿ ವೋಡ್ವದಾಯ್ತೂ
ಹಿಂಡಿನೊಳಗೇ ಅಂಡಿ ಸಲವೋದಾಯ್ತು
ಲಿವ್ರುವ್ರೊಳಗೆ ಮಾತಾಽ ಆಡಿಕೊಂಡವ್ರೇ
ಹುಲಿಗಾಗುವಾಽ ಜಂತ್ರಾ ಹೂಡ್ ಬೇಕಂದ್ರೂ
ಗಳುಮಿಳಿನೇ ತಾವು ಕಡಿಸಾವರೇ
ಹುಲಿಗಾಗುವಾಽ ಜಂತ್ರಾ ಹೂಡ್ವವ್ರಾದ್ರೂ
ಹೆರಿಜಂತ್ರ ಕಿರಿಜಂತ್ರ್ಯಾಽ ಹೂಡವರೇಽ
ನೂರೊಂದೂ ಕಲ್ಲುಗಳು ಹೇರಿದವರೇ
ಹುಲ್ ದೇವ್ರಿಗೇಽ ಹರಕೇ ಕಟದಂತವ್ರೂಽ
"ಹುಲ್ಯಣ್ಣಾ ಇಲ್ ಸತ್ ಹೋದಾಽರೇಽಽ
ಕೋಳಿ ಕೊಡ್ತೋ ನಿಂಗೆ ಕಽರಿಯಽ ಕೊಡ್ತೋ
ಹಣ್ಣುಗದಿಂದಾಽ ಪೂಜೆ ಸಲ್ಸೇ ಕೊಡ್ತೊ"
ಅಂತ್ ಹೇಳಿದಾಽ ಹರ್ಕಿ ಹಿಡಿದಂತವ್ರೂ
ಹೊತ್ ಕಂತಿದಾಽ ವಂದೂ ದಂವ್ ದಾತ್ರಿಲೇ
ಆಽಸರಮನೇ ಲಿವ ಬಡಲಾರಡೇ
ಸಂಗಾಽಡೆ ಮರಿಹುಲಿ ಇರುವಾದೀಗೇ
ಮರಿಹುಲಿಗೂ ಬುದ್ದೀ ವರುವವ್ನಾಽದಾಽ
"ನೀನಾದರೂ ಇಲ್ಲಿ ಕುಳಿತಿಽರಂಬಾಽಽ
ತಾನ್ ಹೋಗಿ ಅಸರ್ಮ ತರತೇ" ನಂದಾ
ಗಂಡ್ ಹುಲಿಯೂ ತಾವು ಲಾಗಿದಂತಾದೇ
ಅಸರ್ಮದಾ ಬುಡಕೂ ಬರ್ವವನಾಽದಾಽ
ಯೆಸಳತಟ್ಟಿಗೂಽಽ ಕಲ್ಯಽಽ ಹಾಕುವವ್ನಾದಽ
ಹೆರದಾಽಗೂವಾಽಽ ಜಂತೆ ತಪ್ ಬಿದ್ಧವೇ
ಮಂಡೇ ಶಿಕ್ಕೀಽಽ ಬಾಽಲ ಬಡ್ಕಂಬವ್ನೇ
ಮೇಲ್ ಉಳಿಯೊವ್ರೂಽಽ ಬಂದೀ ಹೊಡುವವ್ರಾಽದ್ರೂ
ಹೆಣ್ ಹುಲಿಯೂಽಽ ತಾನೂ ಇರ್‍ವುದೀಗೇ
ಅ ಸನ್ನೀನೇ ಅದೂಽ ಕಂಡ್ವಾದೀಗೇ
ಅಲ್ಲಿದೂಽ ಬಿದ್ ಹಾಕಿ ವೋಡ್ವೊದಾಽಯ್ತು
ಇನ್ನೊಂದೂರೂಽ ಹೋಗಿ ಸೇರ್‍ವದಾಽಯ್ತೂ

ಕೋಳಿ ಕುನ್ನಿನೇ ಹಿಡ್ದಿ ತಿನ್ವದಾsಯ್ತೊ
ಊರವರಾssಲಾss ಗಿರಮದವರೂ
ಇದ್ಯೇನು ವಂದ್ ಮೈಮ ಬಂದ್ವಾದೀಗೂ
ಹಲ್ಯಣ್ಣ ಶೇರೀಗೆ ಬಂದsದೀಗೇ
ಹಲ್ ದೇವ್ರಿಗೇs ಹರ್ಕೆ ಕಟ್ ತಾರೀಗೇ
“ಹಲ್ಯಣ್ಣಾs ಈ ಊರಾs ಬಿಟದಂತಾದ್ರೇ
ಕೋಳಿ ಕೊಡ್ತ್ತೋ ನಿಮ್ಗೆ ಕುರಿಯ ಕೊಡ್ತ್ತೋs
ಹಲ್ಯಣ್ಣ ಈ ಊರಾs ಬಿಡಬೇಕಂದ್ರೂ”
ಅs ಸನ್ನಿ ಹಲ್ಯಣ್ಣಾs ತಿಳ್ಕೊಂಡೀಗಾs
ಹಲ್ ದೇವರಾs ಬುಡ್ಕೆ ಹೋಗ್ವವ್ನಾದಾs
ಚೋಟಿನಲ್ಲಿ ಸರಣss ಗೊಳ್ವವನಾsದಾs
“ದರ್ಮದಿಂದ್ ತನ್ಗದಾರಿ ಬಿಡಿರಂದಾನೇ
ಹಲ್ಯಣ್‌ನಾs ಬಂಗಾs ತಾಳಲಾರದೇ
ದರ್ಮದಿಂದೇ ದಾರಿ ಬಿಡಿದಂತವ್ನೂ
ಬಾರಿ ಶಂದಿಗೇ ಹಲ್ಯೇ ಶೇರ್ವೊದಾಯ್ತೇ
ಕುಂಬ್ ಕೊಯ್ತಾನೇ ಅಲ್ಲಿ ತಿನ್ವsದಾಯ್ತೊ
ಸೇಡ್ ಮಣ್ಣನೇ ತಿಂದಿ ಹೇಲ್ವದಾಯ್ತೊ
ಸ್ವಾತಿನೀರನೇ ಕುಡ್ದಿ ಇರ್ವದಾಯ್ತೇ





## ಪುಣ್ಯವಂತರು–ಪಾಪಿಗಳು

ಬೂತಾಳದಿಂದಾ ಬಂದಾ ಕೊಲೆಗಳೆಲ್ಲಾ
ನರಲೋಕಕೂ ಸೇರಿ ಬಂದಂತವ್ರೇ
ಮಾತನಗೂಽ ಮಾತಾ ಆಡಿಕೊಂಡಾರೇ
ಪಾತಾಳ್ ಲೋಕದಿಂದ ಬಂದ ಕೊಲಿಗೊಳಿಲ್ಲಾ
ಸುರಲೋಕಕೂ ನಾವು ಹೋಗಬೇಕಂದೇ
ಸುರಲೋಕಕೂ ತಾವು ನೆಡಿದಂತವ್ರೇ
ಸುರಲೋಕದಾಽ ಯಮನಾಽ ಬಾಗ್ಲಮುಂದೇ
ನರಕದ ಕೊಂಡನೇ ಅಲ್ಲಿ ಕದ್ದಿರವದೇ
ನುಗ್ಲ ಸಂಕಾನೇ ಅಲ್ಲಿ ತಡ್‌ದಿರ್ವದೇ
ಪಾಪ ಮಾಡಿದಾಽ ಹೆಣ್ಣೂ ಕೊತಿಗೊಳೆಲ್ಲಾ

ಪುಣ್ಯ ಮಾಡಿದಾ ಗಂಡೂ ಕೊಲಿಗಳೆಲ್ಲಾ
ನುಗ್ಲ ಸಂಕಾನಾಽ ಬುಡ್ಕು ಹೊಗಿದಂತವೂ
ಪುಣಿಮಾಡಿದಾಽ ಗಂಡೂ ಕೊಲಿಗೊಳಿಲ್ಲಾ
ನುಗ್ಲ ಸಂಕದಾಽ ಮೆನೆ ಹತ್ತಿದಂತವ್ರೆ

ಸುರಲೋಕಕೂ ಅವ್ರು ಸಿಡಿದಂತವ್ರೇ
ಪಾಪ ಮಾಡಿದಾऽ ಹೆಣ್ಣೂ ಕೊಲಿಗೊಳೆಲ್ಲಾ
ನುಗ್ಲ ಸಂಕದಾऽ ಮೆನೆ ಹತ್ತಿದಂತವ್ರೇ
ಮೂರ್ ಹೆಜ್ಜಿಯ ಮುಂದೆ ನೆಡಿದಂತವ್ರು
ನುಗ್ಲ ಸಂಕನೇ ಹರ್ದಿ ಬಿದ್ರಾಲೀಗೆ
ನರ್ಕದ ಕೊಂಡದಾऽಗೂ ಅವರು ಬಿದ್ದಂತವ್ರೇ

ಸುರಲೋಕದಾऽ ಯಮನೇ ದರ್ಮರಾಯऽऽ
ಪಾಪ ಮಾಡಿದಾऽ ಹೆಣ್ಣು ಕೊಲಿಗಳೆಲ್ಲಾऽ
ನುಗ್ಲ ಸಂಕಾऽನೇ ಹರ್ದು ಬಿದ್ರಾಲಿಗೇ
ಯಮನ ಬೊಜ್ಜಾನೇ ಈಗೆ ತಂದ್ರಲೀಗೇ
ನರಕಾऽ ಇಲ್ಲೇ ನಿಮಗೆ ಸೊರ್ಗ ಇಲ್ಲೆ
ನರಲೋಕದಲ್ಲೀऽ ಸೇರಿ ನಿಲ್ಲಂದಾऽರೂ
ಪುಣ್ಯ ಪಡದಾऽ ಗಂಡೂ ಕೊಲಿಗೊಳೆಲ್ಲಾ
ಸುರಲೋಕಕೇ ಅವು ಹೋಗಿದಂತವ್ರೇ
ಸುರಲೋಕದಾऽ ಯಮನಾ ಬಾಗಿಲಾಮುಂದೇ
ವನವೃಕ್ಷದಾऽ ವಂದು ಹಣ್ಣಿನೇ ಮರಾऽ

ಆऽ ಮರನೇ ತಾವು ಹತಿಬೇಕಂದ್ರೂ
ಪುಣ್ಣೆ ಮಾऽಡಿದಾऽ ಗಂಡು ಕೊಲಿಗೊಳೆಲ್ಲಾ
ಯಮದರ್ಮರಾಯ್ನೇ ತಾನೂ ಹೇಳತಾನಿಗೇ
“ಹತ್ ಬೇಡಿರೇ ಹಣ್ಣಾ ಕೊಯ್ಬೇಡಿರೇ
ದರ್ಮ ಹೇಳಿದಾऽ ಮಾತಾ ಕೇಳ್ವಾದಿಲ್ಲೇ
ಲಾऽ ಮರ ಅವ್ರ್ ಈಗೆ ಹತ್‌ದಂತವ್ರು
ಹಣ್ಣಿದ್ದಾऽ ಹೆಣೆ ಬಗ್ಸಿ ಕೊಯ್ದಂತವ್ರೂ
ಯೆಯ್ಡೆಡ ಹಾನ್ಯ ಹಣ್ಣ ಕೊಯ್ದಂತವ್ರೂ
ಮರಕಿಂದಾವಾऽ ಕೆಳ್ಗೆ ಇಳ್ದ್ ಬಂದವ್ರೇ
ದರ್ಮರಾಯಾರಾऽ ಬುಡಕೂ ಹೋಗಿದಂತವ್ರು

ದರ್ಮರಾಯಾಗೆ ಕಯ್‌ಗಾಣ್ಕೆ ಕೊಡಿವಂತವ್ರೂऽ
ದರ್ಮರಾಯನೂ ತಾನು ಹೇಳುತಾನೀಗ
ಪುಣ್ಣೆ ಮಾಡಿದಾऽ ಗಂಡು ಕೊಲಿಗೊಳೆಲ್ಲಾऽ
‘ಬನ್ನಿ ಮಕ್ಕಳೇ’ ಅಂದಿ ಕರಕೊಂಡಾನೇ

ಬಲದೆತ್ತೀ ತೊಡಿಮೇನೆ ಕುಳ್ಳ್ಯ ಕಂಡಾsನೇ
'ನಿವ್ ಮಾಡಿದಾ ಪುಣ್ಣೆ ಹೇಳಂ' ಬನೇ
"ತಾವ್ ಬಾsಳಿದಾs ವಂದೂ ಕಾಲದಲ್ಲೀ
ಹತ್ ಹಣ್ಣೀನಾs ಹೆರ್‍ಗೆ ಕೊಟ್ಟಂತವ್ರು
ಹತ್ ಹಣ್ಣೀನಾs ವಳ್ಗೆ ತಂದಂತವ್ರಾs
ಲರಿವಡದೀss ನೀರಾs ತಗಿದಂತವ್ರಾ ೫೦

ಅರಿ ಮೇನೆ ಯವದಾನ್ನಿ ಬೆಳದಂತವ್ರಾ
ಬಾಳ ಪುಣ್ಣೆನೇ ತಾವು ಪಡದಂತಂವ್ರಾ ೫೨



## ನಾಗದೇವತೆಯ ಹಾಡು

ದೇವ್ ಹೂಟ್ಟೂದ ದೇವ್ಲೋsಲೋಕದಲ್ಲಿ
ನಾಗ್ ಹೂಟ್ಟೂನೆ ನಾಗಲೋಕದಲ್ಲಿ
ನರ ಲೋಕಕೇ ನಾಗs ಬರಬೇಕಂದಾs
ಬೂಮ್ ತಾಯ್ ಕೈಲಿ ಮಾರ್ಗ ಬಿಡು ಅಂದಾನೆ
ಮಾ ನಾsಗನ ಬಂಗಾs ತಾಳಲಾರದೇ
ಬೂಮಿ ತಾಯಿಯೂ ದಾsರೀ ಬಿಟಕೊಟ್ಟಳೂ
ನರ ಲೋಕಕೂ ನಾಗಶಿರಿ ಬಂದಾನೇ
ನಾಗ ಚೌಡೀಲೀ ನಾಗs ಸುsಳದಾಡಾನೇ
ತುದ್ ಬಾಲದಾಗ ನಾಗ ನಿಕ್ಕಡತಾನೇ
ಕಣಮನಿಲಿss ನಾsಗ ಸುಳದಾಡಾನೇ

ಕಜ್ಜಿ ತೋರಿ ಬಾವಬೊಕ್ಕೆ ಯೇಳ್ಸವವನಾದಾs
ಈ ಊರ ಈ ಊರ ಗಿರಾಮದಾವರೂ
ಇದು ಯೇನೂ ವಂದ್ ಮೈಮೇ ಬಂದ್ ವೇನೀಗs?
ಗಾsಡಗ್‌ಕಾರನ ಮನ್ಗೆಹೋಗಿ ಕೇಳ್ವವ್ರಾದ್ರೂ
ಮಾನಾsಗ ನರಲೋಕಕೆ ಸೇರಿಬಂದಾನೇ
ತಳs ಮsನೀಗೇ ಹರ್ಕೆs ಹಿಡಿಬೇಕಂದೂ
ಮಾsನಾsಗ ಈ ಊರಾs ಬಿಡ್ತಾನೀಗ್
ತಳಮನಿಗೂ ಹರ್ಕೆ ಹಿಡಿದಂತವ್ರು
ಮಾ ನಾsಗಗೇ ಹರಕೆ ಕಟತಾರೀಗಾs
ಮರಿಮೊಟ್ಟೆ ಮಗಿಹಣ್ಣು ಮಾಡ್ಸಿ ಹಾಕ್‌ದ್ರು

ತಳ ಮನಿಗೆ ಹರಕೇ ಹಿಡಿದಂತವ್ರೇ
ಮಾ ನಾsಗ ಈ ನರಲೋಕಾs ಬಿಡಬೇಕಂದ್ರೂ ೨೩
ಮಾನಾsಗ ನರಲೋಕಾ ಬಿಡ್ವವನಾದಾs

# ತುಳು ಕಾವ್ಯ



## ಕೊರಗತನಿಯ

ಓಯೆ ಡೆನ್ನನ ಡೆನ್ನನ ಡೆನ ಡೆನ್ನನಯೇ
ಕೊರಗರು ಹುಟ್ಟಿದ ರಾಜ್ಯವೆಂದರೆ ಕಾಂತಣ ಕದ್ರದೇಶದಲ್ಲಿ
ಓ ಮೇಲುಮಲೆ ಕೊಪ್ಪದಲ್ಲಿ, ಚಿಕ್ಕದೊಂದು ಪ್ರಾಯದಲ್ಲಿ
ದೊಡ್ಡ ಬಳವಿ ಬಳೆಯುತ್ತಿದ್ದಾನೆ ಮಗು ವುರವನ ಓಡಿ
ಏಳುಮಂದಿಯ ಬೆಳವಣಿಗೆ ನಾಲ್ವರ ಬುದ್ಧಿ ನೆರೆದಾಗ
ಹೇಳುತ್ತಾನೆ ವುರವನ ಓಡಿ
ನನಗೊಪ್ಪುವ ಚಿಕ್ಕದೊಂದು ಹೆಣ್ಣನ್ನು ನೋಡಬೇಕು
ಮದುವೆ ಆಗಬೇಕು ಎನ್ನುತ್ತಾನೆ
ಜಾತಿಯ ಇಷ್ಟರು ಕುಟುಂಬದ ನೆಂಟರನ್ನು ಸೇರಿಸಬೇಕು
ಹೆಣ್ಣಿನ ಮಾತುಕತೆಗೆ ಹೋಗಬೇಕು ಎಂದ
ಮುಂಜಾನೆ ಎದ್ದ ಏಳು ಕೊಪ್ಪದಗ ಕೊರಗರನ್ನು ಸೇರಿಸಲೆಂದು
ಮೇಲುಮಲೆ ಕೊಪ್ಪದಿಂದ ಇಳಿದು ಪಯಣಿಸಿದ
ಕಾಂತಾವರ ಕವತ್ತಾರು ಉಡುಪಿ ಮೂಲಿಕೆಯ
ಏಳು ಕೊಪ್ಪಗಳ ಕೊರಗರಿಗೆ ಹೇಳಿಕೆ ಮಾಡಿ ಬಂದ
ಕಿವಿಗೆ ಒಡವೆ ಇಟ್ಟರು ತಲೆಗೆ ಹೊಂಬಾಳೆಯ ಗೋಂಪರು ಇಟ್ಟರು
ಸೊಂಟಕ್ಕೆ ಕಪ್ಪು ಬಟ್ಟೆ ಉಟ್ಟುಕೊಂಡರು
ನಡುವಿಗೆ ಪೀಂಪಿಲಿಕತ್ತಿ ಸಿಕ್ಕಿಸಿಕೊಂಡರು
ಏಳು ಕೊಪ್ಪದ ಕೊರಗರು ಮೇಲುಮಲೆಕೊಪ್ಪದಲ್ಲಿ
ಒಟ್ಟುಕೂಡಿದರು ಯಾರೊ ವುರವನ ಓಡಿಯೆ ಕೇಳಿದೆಯ
ಯಾವ ಕಜ್ಜ ಕಾರ್ಯದಲ್ಲಿ ನಮ್ಮನ್ನು ಸೇರಿಸಿದೆ ಎಂದು ಕೇಳಿದರು
ಹೆಚ್ಚಿನ ಕೆಲಸ ಇಲ್ಲವಯ್ಯ ನೆಂಟರೆ
ನೀವು ಬಂದ ನೆಂಟರು ಹೋಗುವುದಕ್ಕೆ ಮೊದಲು

ನನಗೆ ಚಿಕ್ಕದೊಂದು ಹೆಣ್ಣು ನೋಡಬೇಕು
ಮದುವೆ ನೆರವೇರಿಸಿ ಹೋಗಬೇಕು ಎಂದ
ಏಳು ಕೊಪ್ಪದ ಕೊರಗರು ಆಗ ಹೇಳುತ್ತಾರೆ
ಅಯ್ಯಾ ವುರವನ ಓಡಿಯೆ
ನೋಡಿದ ಹೆಣ್ಣು ಉಂಟೇನೋ ತಿಂದ ಎಂಜಲನ್ನ ಉಂಟೇನೋ
ವುರವನ ಓಡಿ ಹೇಳುತ್ತಾನೆ ನೋಡಿದ ಹೆಣ್ಣು ಇಲ್ಲ ನೆಂಟರೆ
ತಿಂದ ಎಂಜಲನ್ನವಿಲ್ಲ
ಇರಲಿಕ್ಕೆ ಇದ್ದಾಳೆ ನೆಂಟರೆ ಕಾಂತಣ ಕದ್ರುದೇಶದಲ್ಲಿ
ಕೆಳಮಲೆ ಕೊಪ್ಪದಲ್ಲಿ ಚಿಕ್ಕ ಪ್ರಾಯದ ಮಗಳು
ದೊಡ್ಡ ಬಳವಿ ಬಳೆಯುತ್ತ ಇದ್ದಾಳೆ

ಅಲ್ಲಿಗೆ ಹೋದ ನೆಂಟರು ಹಿಂದಿರುಗಿ ಬರಬೇಕಾದರೆ
ಮಾತುಕತೆ ಮದುವೆ ಮುಹೂರ್ತ ಮುಗಿಸಬೇಕು ನೆಂಟರೆ
ಕೀಜಿಯ ಕಡಗ ಇಡಬೇಕು ನೆಂಟರೆ
ಹಿತ್ತಾಳೆಯ ತಾಲಿ ಕರಿಮಣಿ ಕಟ್ಟಿಯೇ ಬರಬೇಕೆಂದ

ಆ ವೇಳೆಯಲ್ಲಿ ಏಳು ಕೊಪ್ಪದ ಕೊರಗರು
ಗಂಜಿ ಕುಡಿದರು ಕೆಳಮಲೆ ಕೊಪ್ಪಕ್ಕೆ ಪಯಣಿಸಿದರು
ಜಪ್ಪು ನಂದೊಳಿಗೆ ಬೈಲ ಬೇಜರ ಕಳೆದರು
ಕಾಂತಣ ಕದ್ರುದೇಶಕ್ಕೆ ಹೋದರು
ಕೆಳಮಲೆ ಕೊಪ್ಪದ ಸಮೀಪ ಮುಟ್ಟಿದರು
ಆಗ ಕೊರಪಳು ಮೈರೆ ತಂದೆಯ ತಲೆಯ
ಹೇನು ಹಿಕ್ಕುತ್ತಾಳೆ[೨]
ದೂರಕ್ಕೆ ನೋಡಿದಳು ಅಪ್ಪಾ ನೋಡು ನಮ್ಮ ಕೊಪ್ಪಕ್ಕೆ
ನೆಂಟರು ಬರುವ ಚಂದ ನೋಡು ಎಂದಳು
ಇಷ್ಟು ಚಿಕ್ಕ ಮಗಳು ನಿನಗೆ ಗಂಡಿನ ನೆನಪಾಯಿತೇನೆ
ಹಾದಿಗೆ ಕಣ್ಣಾಯಿತೇನೆ ಎಂದು ಕೇಳಿದ
ನಿನ್ನ ಅಂಗೈಯ ಅಂಗೈಗೆರೆ ಮಾಸಲಿಲ್ಲ[೩]
ಕಂಕುಳಡಿಯ ಹುಟ್ಟುಕಂಪು ಅಡಗಲಿಲ್ಲ ಎಂದ
ಅದಕ್ಕೆಂದಳು ಮಗಳು ನಿನ್ನ ತಲೆಯ ಹೇನು ನೋಡಿ

ಕೊರಳಿಗೆ ಆಯಾಸವಾಯಿತೆಂದು ತಲೆಯೆತ್ತಿ ನೋಡುವಾಗ
ನೆಂಟರು ಬರುವ ಚಂದ ತೋರಿತೆಂದಳು ಮೈರೆ
ಒಳಗೆ ಹೋಗು ಬಾಜಿರವನ್ನು ಉಜ್ಜಿ
ಕಸು ಉಡುಗು (ಕುಳ್ಳಿರಲು) ಅತ್ತರು ಹಾಕು
ವರಂಕದಲ್ಲಿ ನೀರು ತಾ ಮಾಡಿನಡಿಯಲ್ಲಿ ಇಡು ಎಂದ
ಬಂದ ನೆಂಟರು ವರಂಕದ ನೀರು ತೆಕ್ಕೊಂಡರು
ಕೈಕಾಲು ತೊಳೆದರು ಮೋರೆಯ ಮುತ್ತುಬೆವರು ತೊಳೆದರು
ಬಂದ ನೆಂಟರಿಗೆ ಮುಟ್ಟಪ್ಪಾಳೆಯಲ್ಲಿ ಚಿಗುರುವೀಳ್ಯ
ಎಳೆ ಅಡಿಕೆಹೋಳು ಕೊಟ್ಟರು
ಗಡಿಗೆಯ ಕಳ್ಳು ಬಗ್ಗಿಸಿ ಕೊಟ್ಟರು
ಎಲೆ ಅಡಿಕೆ ಹಂಚಿ ತಿನ್ನುವಾಗ
ಆ ಸುದ್ದಿ ಈ ಸುದ್ದಿ ಪಕ್ಕದ ಹಲವು ಸುದ್ದಿ
ಊರ ವರ್ತಮಾನ ಮಾತಾಡುತ್ತಾರೆ
ಕೊಡುವ ಕೊರಪಳು ಸುದ್ದಿ ಮಾತಾಡುತ್ತಾರೆ
ಕೊಡುವ ಕೊರಪಳು ಉಂಟೋ ಮಾರುವ ಡೋಲು[೪] ಉಂಟೋ ಎಂದು
ಕೇಳಿದರು
ಕೊಡುವ ಹೆಣ್ಣನ್ನು ಕೊಟ್ಟು ಹೋಗಿದೆ
ಮಾರುವ ಡೋಲನ್ನು ಮಾರಿ ಆಗಿದೆ
ಕೊಟ್ಟ ಕೊರಪಳುವಿನ ಸಂಗ ಹಿಡಿಯಲು ಬಂದದ್ದಲ್ಲ
ಮಾರಿದ ಡೋಲಿನ ಕ್ರಯ ಕೇಳಲಾರೆವು
ಇರುವ ಹುಡುಗಿಯನ್ನು ಕೊಡುತ್ತೀರೋ ಎಂದು ಕೇಳಿದರು
ಒಬ್ಬಳೇ ಹುಡುಗಿ ಕೊಪ್ಪಕ್ಕೆ ಅಡಕವಾದವಳು
ಅತ್ತರುತಟ್ಟಿಗೆ ಅಡಿ ಬಳ್ಳಕ್ಕೆ ಬಾಯಿ ಗೆರಸೆಗೆ ಮೂಲೆ ಮೀನುಬೋನಿಗೆ ಮೂಲೆ
ಗಾಟಿಗೆ ಬುಟ್ಟಿಗಳಿಗೆ ಕೈಹಾಕಲು ತಿಳಿಯದವಳು
ನಾಲ್ಕು ಮೂಲೆಯ ಕಸವನ್ನು ಒಂದು ಮೂಲೆಗೆ
ಸೇರಿಸಲು ತಿಳಿಯದ ಕೊರಪಳು ಎಂದರು
ನಮ್ಮ ಕೊಪ್ಪದಲ್ಲಿ ಮೊದಲು ಬಂದ ಕೊರಪಳುಗಳು ಇದ್ದಾರೆ
ಒಂದು ವರ್ಷ ಆರು ತಿಂಗಳು ಹೇಳಿ ಕಲಿಸುತ್ತಾರೆ
ಸಲಹಿ ಆದರಿಸುತ್ತಾರೆ ನಮಗೆ ಕಾಲ ತಡವಾಗುತ್ತದೆ ವೇಳೆ ತಪ್ಪುತ್ತದೆ

ಮದುವೆಗೆ ದಿನವನ್ನು ಕುರಿಯಬೇಕೆಂದರು
ಅಡಿಕೆ ವೀಳ್ಯ ಬದಲಿಸಿಕೊಂಡರು[೫]
ಗಂಡಿನ ಹೆಣ್ಣಿನ ಬಳಿಬಣ್ಣ ಕೇಳಿದರು
ಈರೋಡಿಯನ್ನು ಬಳಿಯುವನು ವುರವನ ಓಡಿಯೆಂದು ಹೇಳಿದರು
ಸೋಮನದನ್ನ ಬಳಿಯವಳು ಕೊರಪಳು ಮೈರೆ ಎಂದು ಹೇಳಿದರು
ದೂರದ ಅವಧಿಯೋ ಹತ್ತಿರದ ಅವಧಿಯೋ ಎಂದು ಕೇಳಿದರು
ದೂರದ ಅವಧಿಯೆಂದರೆ ಪಗ್ಗು ತಿಂಗಳು ಹದಿನೆಂಟು ಹೋಗುವಂದು
ಗುರುವಾರ ದಿನ ಹತ್ತಿರದ ದಿನವೆಂದರೆ
ಶನಿವಾರ ಸೇರಿ ಆದಿತ್ಯವಾರ
ಹತ್ತಿರದ ಅವಧಿ ಅದೀತೆಂದರು
ಮಾತು ಮುಗಿಸಿದರು ಮುಹೂರ್ತ ಕಟ್ಟಿದರು
ಅಡಿಕೆ ವೀಳ್ಯ ಬದಲಿಸಿಕೊಂಡರು ಮದುವೆಯ ನಿಶ್ಚಯಮಾಡಿದರು
ವಾರದಲ್ಲಿ ವಾರ ಶನಿವಾರ ದಿನದಲ್ಲಿ
ವುರವನ ಓಡಿಯ ಸಡಗರದ ದಿಬ್ಬಣ ಬರಬೇಕೆಂದರು
ಆದಿತ್ಯವಾರ ಮುಂಜಾನೆ ಬೆಳ್ಳಿ ಬೆಳಗುವ ಹೊತ್ತು
ಬೊಳ್ಳೆರೆಮಾಣಿಗ ಹಕ್ಕಿಯ ಸ್ವರ ಹೊಮ್ಮುವಾಗ
ಹುಡುಗಿಯನ್ನು ಒಪ್ಪಿಸಿಕೊಡುವೆವೆಂದರು
ಬಂದ ಬಿದ್ದಿನರಿಗೆ ಊಟ ಉಪಚಾರ ಬೇಗ ಮಾಡಿಸಿದರು
ಬಿಸಿಬಿಸಿ ಉಂಡರು ಬಗಬಗ ಬೆವರಿದರು
ಉಂಡ ಎಂಜಲ ಶುದ್ಧಿಗೆ ವೀಳ್ಯ ತಿಂದರು
ಇಳಿದು ಹೊರಟುಹೋದರು ಮೇಲುಮಲೆ ಕೊಪ್ಪಕ್ಕೆ ಬಂದರು
ಯಾರಯ್ಯ ವುರವನ ಓಡಿಯೆ ಕೇಳಿದೆಯ
ಮಾತು ಮುಗಿಸಿದೆವು ಮುಹೂರ್ತ ಕಟ್ಟಿದೆವು ನಾವು
ವಾರದಲ್ಲಿ ವಾರ ಶನಿವಾರ ದಿನದಲ್ಲಿ
ಸಡಗರದ ದಿಬ್ಬಣ ಹೋಗಬೇಕು ಎಂದರು
ಜೋಡಿಸುವ ಸನ್ನಾಹ ಜೋಡಿಸಿದ ಓಡಿ
ಅಂದಿನ ದಿನ ಸರಿಯುತ್ತ ಬಂತು
ಗಂಡಿನ ಕಡೆಯಲ್ಲಿ ಪಾಲೆಮರ ಕಡಿದು ಚಪ್ಪರದ ಕೆಲಸ ಮುಗಿಯಿತು
ಹೆಣ್ಣಿನ ಕಡೆಯಲ್ಲಿ ಬಾಳೆ ಕಡಿದು ಚಪ್ಪರದ ಕೆಲಸ ಮುಗಿಯಿತು

ಮೇಲುಮಲೆ ಕೊಪ್ಪದಲ್ಲಿ ಮಂದಿ ಇರುವೆ ಧಾರೆ ಹಿಡಿದಂತೆ ಬಂದು ಸೇರಿದರು
ಹೆಣ್ಣ ಕಡೆಯಲ್ಲಿ ಎಳೆಯ ಅಡಿಕೆ ಹೂವಿನ ಅಕ್ಕಿ ಚೆಲ್ಲಿದಂತೆ
ಜನ ಬಂದು ಸೇರಿದರು
ಮೇಲುಮಲೆ ಕೊಪ್ಪದಲ್ಲಿ ಮಾಡದಿರುವ ಅಡುಗೆ ಆರೋಗಣೆ ಮಾಡಿಸಿದ
ವುರವನ ಓಡಿ ಊಟ ಉಪಚಾರ ಮಾಡಿಸಿದ
ಕೊರಗನ ತಲೆಗೆ ನೀರು ಹಿಡಿದರು
ಉಡುಗೆತೊಡುಗೆ ಹಿರಿಯ ಸಿಂಗಾರ ಮಾಡಿಸಿದರು
ಊಟ ಉಪಚಾರ ಮಾಡಿಸಿದರು
ಏಳು ಕೊಪ್ಪದ ಕೊರಗಳು ಸಲಾಕೆಯ ಕೋಲಿನ ಕೋಲಾಟವಾಡಿದರು
ಬೆತ್ತದ ಆಟ ಆಡಿದರು
ಓಟಿ ಕೊಳಲಿನಲ್ಲಿ ಈರಣ ಡೋಲು ವಾದ್ಯದಲ್ಲಿ ದಿಬ್ಬಣ ಹೊರಟಿತು
ಒಂದು ಗುಡ್ಡ ಒಂದು ಬಯಲು ದಾಟಿಕೊಂಡು ಹೋದರು
ಕಾಂತಣ ಕದ್ರದೇಶ ಬೈಲ ಬೇಜಾರ ತಾವರೆಕೆರೆ ಕಳೆದರು
ಕೆಳಮಲೆ ಕೊಪ್ಪದ ಹತ್ತಿರಹತ್ತಿರ ಮುಟ್ಟಿದರು
ಆ ಸಮಯದಲ್ಲಿ ಹೋದ ದಿಬ್ಬಣ ಚಪ್ಪರಕ್ಕೆ ಹೊಗುವಾಗ
ಎದುರಿಗೆ ಆರತಿ ಕಾಲಿಗೆ ನೀರು ಬಂದಿತು
ಚಪ್ಪರಕ್ಕೆ ಅಕ್ಕಿ ಎರಚಿಸಿದರು ಚಪ್ಪರ ಹೊಗಿಸಿದರು
ಚೌಕದಲ್ಲಿ ಕಳಕಟ್ಟಿ ಕುಳಿತರು
ನಮ್ಮ ಕಟ್ಟಳೆಯಲ್ಲಿ ಊಟ ಮೊದಲೋ ಧಾರೆ ಮೊದಲೋ ಎಂದು ಕೇಳಿದರು
ನಮ್ಮ ಕಟ್ಟಳೆಯಲ್ಲಿ ಊಟ ಮೊದಲು ಎಂದರು
ಹಂತಿ ಹಸೆ ಹಾಕಿದರು ಮಾನಿವ ಬಾಳೆಲೆಯ ಸೀಳು ಹಾಕಿದರು
ಎಲೆಗೆ ನೀರು ಹಾಕಿದರು ಹಂತಿಗೆ ಉಪ್ಪಿನಕಾಯಿ ಬಡಿಸಿದರು
ಅನ್ನ ಬಡಿಸಿದರು ಸೌತೆಯ ಪಳದ್ಯ ಬಡಿಸಿದರು
ಬಿಸಿಬಿಸಿ ಉಂಡರು ಬಗಬಗ ಬೆವರಿದರು
ಉಂಡ ಉಚ್ಚಿಷ್ಟಕ್ಕೆ ಅಡಿಕೆ ವೀಳ್ಯ ಮೆದ್ದರು
ಧಾರೆಯ ಮುಹೂರ್ತ ಆಗುತ್ತ ಬರುವಾಗ ಮೈರೆಯನ್ನು
ಉಡುಗೆತೊಡುಗೆಗಳಿಂದಹಿರಿಯ ಸಿಂಗಾರ ಮಾಡಿದರು
ಕೈಹಿಡಿದುಕೊಂಡು ಚಪ್ಪರಕ್ಕೆ ಕರೆತಂದರು
ವುರವನ ಓಡಿಯನ್ನೂ ಕೊರಪಳು ಮೈರೆಯನ್ನೂ

ಸೇಸೆಗೆ ಪ್ರದಕ್ಷಿಣೆ ಮಾಡಿಸಿದರು ಧಾರೆಯ ಮಣೆಯಲ್ಲಿ ಕುಳ್ಳಿರಿಸಿದರು
ಮೈಯ್‌ಮುಟ್ಟಿ ಮೆಯ್‌ಸೇಸೆ ಕೈಮುಟ್ಟಿ ಕೈಧಾರೆ ಪೂರೈಸಿದರು
ಬೆಳ್ಳಿ ಬೆಳಗಿದಾಗ ಬೊಳ್ಳೆರೆಮಾಣಿಗ ಹಕ್ಕಿಯ ದನಿಯ ವೇಳೆಗೆ
ಕೊರಪಳನ್ನು ಒಪ್ಪಿಸಿಕೊಟ್ಟರು
(ಒಳ್ಳೆಯ) ವೇಳೆಗಳಿಗೆಯಲ್ಲಿ ಚಪ್ಪರ ಇಳಿಸಿದರು
ಮೇಲುಮನೆ ಕೊಪ್ಪಕ್ಕೆ ದಿಬ್ಬಣ ಒಯ್ದರು
ಚಪ್ಪರ ಹೊಗಿಸಿ ಪುರವನ ಓಡಿಯನ್ನೂ ಕೊರಪಳು ಮೈರೆಯನ್ನೂ
ಒಳಮನೆಗೆ ಒಲುಮೆಯಿಂದ ಹೊಗಿಸಿದರು

ಮದುವೆಯಾಗಿ ಆರು ಮೂರು ದಿನ ಆಗುವಾಗ
ಒಮ್ಮೆ ಹೋದ ಮದುಮಗಳು ಹಿಂದೆ ಬರಬೇಕಾದರೆ
ಮೊದಲ ಮುಟ್ಟಾಗಿ ಸ್ನಾನದ ದಂಡೆಗೆ ಹತ್ತಿರವಾಗಿ ಕುಳಿತಳು[೬]
ಎರಡು ಮೂರು ಕಳೆದು ನಾಲಕ್ಕರಲ್ಲಿ ಶುದ್ಧದ ತಿಳಿನೀರು ಮೀಯಲು
ತೋಡು ಹರಿವಲ್ಲಿಗೆ ಹೊಲದ ಅಂಚಿಗೆ ಹೋದಳು
ಮುಟ್ಟಾಳೆಯಲ್ಲಿ ತರೂಲಿ ಸೊಪ್ಪನ್ನು ಹಿಂಡಿಕೊಂಡಳು
ಮೈಲಿಗೆಯ ಹೊಳೆಬದಿಯಲ್ಲಿ ಮೈಲಿಗೆಬಟ್ಟೆ ಕಳಚಿದಳು
ಶುದ್ಧದ ಹೊಳೆಬದಿಯಲ್ಲಿ ಶುದ್ಧನೀರು ಮಿಂದಳು
ತನ್ನ ಕೊಪ್ಪಕ್ಕೆ ಬಂದಳು
ಬಿಸಿಬಿಸಿ ತಿಳಿಗಂಜಿ ಕುಡಿದಳು ಬಗಬಗ ಬೆವರಿದಳು
ಬೆನ್ನುಕೊಟ್ಟಳು ಭೂಮಿತಾಯಿಗೆ ಬಾನ ದೇವರಿಗೆ ಹೊಟ್ಟೆ ಕೊಟ್ಟಳು
ಇದೊಂದು ನೀರು ನಿಂತಿತು ಎಂದಾದರೆ
ಕಾಂತಾವರದ ದೇವರನ್ನು ನೋಡುವೆ ಹಿಡಿಹಣ ಹರಕೆ ಹಾಕುವೆ
ಉಳ್ಳಾಯನನ್ನು ನೋಡುವೆ ಮೂಲಕ್ಕೆ ನೀರು ಹೊಯ್ಯುವೆ ಎಂದಳು
ಅದೊಂದು ನೀರು ನಿಂತಿತು
ಒಂದು ತಿಂಗಳು ಕಳೆಯಿತು ಎರಡು ತಿಂಗಳು ಸರಿಯಿತು
ಎರಡು ಹೋಯಿತು ಮೂರು ತಿಂಗಳಾಯಿತು
ನಾಲ್ಕೈದು ಆರು ತಿಂಗಳಾಯಿತು ಏಳು ತಿಂಗಳು ನೆರೆಯಿತು
ಏಳು ತಿಂಗಳ ಕಾಲದಲ್ಲಿ ಏಳು ಕೊಪ್ಪಗಳ ಕೊರಗರೆಂದರು
ನಮ್ಮ ಕೊರಪಳು ಮೈರೆ ಚೊಚ್ಚಲ ಬಸುರಿ

ಹಳೆಯ ಬಟ್ಟೆ ಬದಲಿಸಿ ಹೊಸ ಸೀರೆ ಉಡಿಸಬೇಕು
ಬಾಯಿಯ ಆಸೆ ಹೊಟ್ಟೆಯ ಬಯಕೆ ತೀರಿಸಬೇಕು
ತಿನಿಸು ಕಾಯಿಸಬೇಕು ತಿನಿಸಿದ ಉಪಚಾರ ನಡೆಸಬೇಕು
ಕೋಳಿ ಕೊಲ್ಲಬೇಕು ಕೋಳಿಯ ಸಮ್ಮಾನ ತೀರಿಸಬೇಕು
ಹೊದಲು ಹುರಿಯಬೇಕು ಹೊದಲು ಸಮ್ಮಾನ ತೀರಿಸಬೇಕೆಂದರು
ಹಳೆಯ ಬಟ್ಟೆ ಬದಲಿಸಿದರು ಹೊಸ ಬಟ್ಟೆ ಉಡಿಸಿದರು
ಹೂ ತಂದರು ಹೂವಿನ ಸಮ್ಮಾನ ತೀರಿತು
ಹೊದಲು ಹುರಿದರು ಹೊದಲು ಸಮ್ಮಾನ ಮಾಡಿದರು
ಹೊಟ್ಟೆಯ ಬಯಕೆ ಬಾಯಿಯ ಆಸೆ ತೀರಿಸಿದರು
ಎಂಟು ಹೋಗಿ ಒಂಬತ್ತು ತಿಂಗಳು ಒಂಬತ್ತು ಹೋಗಿ
ಹತ್ತು ತಿಂಗಳು ಹಿಡಿಯಿತು
ಹತ್ತು ತಿಂಗಳ ಕಾಲದಲ್ಲಿ ಬೆನ್ನಿನಲ್ಲಿ ಬರುತ್ತದೆ
ಬ್ರಹ್ಮದೇವರ ಬೇನೆ ಹೊಟ್ಟೆಯಲ್ಲಿ ಬರುತ್ತದೆ ಮಗುವಿನ ಬೇನೆ
ಕಾಟುಕಲ್ಲು ತಂದು 'ಅಮೆಕಟ್ಟೆ' ಕಟ್ಟಿದರು
ಅತ್ತರು ತಂದು ಮರೆ ಹಿಡಿದರು ಕೈಹಗ್ಗ ಹಾಕಿದರು
ಸುತ್ತಿದ ಬಟ್ಟೆ ಸುಲಿದರು ಕುಳಿತ ಕಲ್ಲಿನಲ್ಲಿ ಹಿಡಿದ ಕೈಹಗ್ಗದಲ್ಲಿ
ಕಂಡ ಬೇನೆಯಲ್ಲಿ ನಮ್ಮ ಕೊರಪೊಳು ಮೈರೆ
ಮಗುವನ್ನು ಪಡೆದರೆ[೭] ನಾವು ನಂಬಿದ ಕುಲೆದೈವಗಳಿಗೆ
ಕೋಳಿ ಅಟ್ಟು ಔತಣ ಬಡಿಸುತ್ತೇವೆಂದು ಹರಕೆ ಹೇಳಿಕೊಂಡರು
ಹೇಳಿಕೊಂಡ ನಾಲಗೆ ಮಡಚುವುದಕ್ಕೆ ಮೊದಲು ಕೊರಪೊಳು ಮೈರೆ
ಮಗುವನ್ನು ಹಡೆದು ನೆಮ್ಮದಿ ಹೊಂದಿದಳು
ಮಣ್ಣಿನಲ್ಲಿ ಹುಟ್ಟಿದ ಹುಡುಗ ಕೌಂಗಿನ ಹಾಳೆಯಲ್ಲಿ ತುಂಬಿಕೊಂಡ
ಹೊಕ್ಕುಳ ಬಳ್ಳಿ ಕಡಿದರು ಸರೊಳಿಯಲ್ಲಿ ತಂಪುಮಾಡಿದರು
ಬಿಸಿನೀರಲ್ಲಿ ಬೆಚ್ಚಗೆ ಮಾಡಿದರು
ಐದರಲ್ಲಿ ಐದನೇ ಅಮೆ ಪೂರೈಸಿದರು
ಏಳರಲ್ಲಿ ಏಳನೆ ಅಮೆ ಮಾಡಿಸಿದರು
ಹದಿನಾರರ ಅಮೆಗೆ ಜಾತಿಯ ಕೊರಗರು ಸೇರಬೇಕು
ಸೇರಿದ ಕೊರಗರು ಹೋಗಬೇಕಾದರೆ,
ಇಟ್ಟ ಅನ್ನದ ಗಡಿಗೆ ಕೆಳಗಿರಿಸಬೇಕಾದರೆ
ಆಯದಲ್ಲಿ ಹುಟ್ಟಿದ ಮಗನಿಗೆ ಅಕ್ಕರೆಯ ಹೆಸರನ್ನು ಕರೆಯಬೇಕೆಂದರು

ಕೊರಗತನಿಯನೆಂದು ಹೆಸರು ಕರೆದರು
ಮಗುವುತನ ಕಳೆದು (ಕೊರಗತನಿಯ) ಬೇಗಬೇಗನೆ ಬಳೆದ
ಒಬ್ಬನ ಬುದ್ಧಿ ನಾಲ್ವರ ನಡತೆ ಆಯಿತು
ಹಲವು ದಿನ ಕಳೆದು ಬಲುದಿನ ಬಂದಾಗ
ತಾಯಿಯ ಮೊಲೆಯುಣ್ಣುವ ಕಾಲದಲ್ಲಿ ತಾಯಿಗೆ ಅಳಿವು ಬಂತು
ಕಪಿಲೆ ದನದ ಹಾಲುಣ್ಣುವ ಕಾಲದಲ್ಲಿ
ಕಪಿಲೆ ಹಸುವಿಗೂ ಕರುವಿಗೂ ಅಳಿವು ಬಂತು
ತಂದೆ ಹಿಡಿ ಅನ್ನ ಉಣ್ಣುವ ಕಾಲದಲ್ಲಿ
ತಂದೆಗೆ ಅಳಿವು ಬಂತು
ಕೊರಗತನಿಯನಿಗೆ ದಿಕ್ಕುತಪ್ಪಿತು ದೆಸೆ ಅಳಿಯಿತು
ಏಳು ಕೊಪ್ಪದ ಕೊರಗರಿಗೆ ನಾಲ್ಕು ದಿಕ್ಕಿನ ಮಾರಿಬಂದು ಹೊಕ್ಕಿತು
ಏಳು ಕೊಪ್ಪದ ಕೊರಗರು ಅಳಿದುಹೋದರು
ಕೊರಗತನಿಯ ಒಬ್ಬನೇ ಉಳಿದ
ಕುಳ್ಳಿರುವೆನೆಂದರೆ ಕೊಪ್ಪವಿಲ್ಲ
ಏಳು ಕೊಪ್ಪದ ಡೋಲು ಕರಂಡೆಯನ್ನು ಒಂದು ಕೊಪ್ಪಕ್ಕೆ ಇಕ್ಕಿದ
ಕೊಪ್ಪಕ್ಕೆ ಚೂರಿಮುಳ್ಳಿನ ಕಟ್ಟನ್ನು ಹಾಕಿದ್
ದಿಕ್ಕು ಬಿಟ್ಟು ದೇಶಾಂತರ ಹೋಗುವೆ ಎಂದ
ನಡುವಿರುಳ ಜಾವದ ಹೊತ್ತಿಗೆ
ಊರುಬಿಟ್ಟು ಹೋಗುವೆನೆಂದು ಹೊರಟ
ಸಾರತ್ತ ಬಡಗುದೇಶಕ್ಕೆ ಬಂದ
ಬಂದುಬಂದು ಮುಟ್ಟಿದ ಕಲ್ಲಾಪು ಮುಟ್ಟಿದ
ಅಲ್ಲಿಗೆ ಮುಟ್ಟುವಾಗ ಬೆಳ್ಳಿಮೂಡಿ ಬೆಳಕು ಏರಿತು
ಐದುಸಾವಿರ ಮೂರುಸಾವಿರ ಜನ ಹೋಗುವ ದಾರಿಯಲ್ಲಿ ಕುಳಿತ
ಬಿಳಿಯ ಮರಳನ್ನು ಅಕ್ಕಿಯೆಂದು ಪಸರಿಸಿದ
ದಡ್ಡಾಲದ ಕಾಯಿಯನ್ನು ತೆಂಗಿನಕಾಯಿಯೆಂದು ಇರಿಸಿದ
ಕಾಸರಕನ ಸೊಪ್ಪನ್ನು ವೀಳ್ಯದೆಲೆಯೆಂದು ಇಟ್ಟ
ಕಾಸರಕನ ಹಣ್ಣನ್ನು ಅಡಕೆಯೆಂದು ಇಟ್ಟ
ಮೂಡು ದಿಕ್ಕಿಗೆ ನೋಡಿದ ದೇವರೆಂದು ಕೈಮುಗಿದ
ಮರಳಿನಲ್ಲಿ ಬಸ್ರಾಣಿ ಆಟ ಆಡುತ್ತಿದ್ದ
ಒಮ್ಮೆ ನೋಡಿದರೆ ನಗುತ್ತಾನೆ ಒಮ್ಮೆ ನೋಡಿದರೆ ಅಳುತ್ತಾನೆ

ಆ ಸಮಯದಲ್ಲಿ ಕದಿರೆಯ ಮಂಜದಿಂದ ಬಿದಿರೆಯ ಮಂಜಕ್ಕೆ
ದಂಡಿನಲ್ಲಿಯೂ ಮಂಡಿನಲ್ಲಿಯೂ ಕಳ್ಳುಹೇರಿಕೊಂಡು ಬರುತ್ತಿದ್ದರು
ತಾಯಿ ಬೈರಕ್ಕೆ ಮಗಳು ಮಂಜಕ್ಕೆ ತಮ್ಮ ಚೆನ್ನಯ
ಕುತ್ತಿಕಳ್ಳು ಪಡುಕಳ್ಳು ಕೊಂಡೊಯ್ಯುವ ಬೈದ್ಯರ ಮೋರೆ ನೋಡಿ
ಒಮ್ಮೆ ನಗುತ್ತಾನೆ ಒಮ್ಮೆ ಅಳುತ್ತಾನೆ
ನಗುವಾಗ ಬಾಯಿಯ ಹಲ್ಲು ತೋರುವುದಿಲ್ಲ
ಅಳುವಾಗ ಕಣ್ಣೀರು ಬರುವುದಿಲ್ಲ
ಮಗಳು ಮಂಜಕ್ಕೆ ಹೇಳುತ್ತಾಳೆ ಅದೋ ಅಮ್ಮಾ ನೋಡಿದಿರಾ
ಅದೊಂದು ಮಗುವು ಒಮ್ಮೆ ನೋಡುವಾಗ ನಗುವ
ಒಮ್ಮೆ ನೋಡುವಾಗ ಅಳುವ ಅಂದವನ್ನು ನೋಡಿ
ಹಾಗೆ ಹತ್ತಿರಹತ್ತಿರ ಬಂದರು
ಕೊರಗತನಿಯ ಓಡಿಹೋಗಿ ತಡಮೆಯಲ್ಲಿ ನಿಂತ
ಬೈರಕ್ಕೆ ಬೈದ್ಯೆದಿ ನೋಡಿದರು ಯಾರೋ ಮಗು ತಡಮೆ ಬಿಡು
ಹಾದಿ ತೆರವುಮಾಡು ಎಂದರು
ತಡಮೆ ಬಿಡಲು ಹಾದಿ ತೆರವುಮಾಡಲು
ನನಗೆ ಸೊಂಟಕ್ಕೆ ಬಟ್ಟೆ ಇಲ್ಲ ಎಂದ
ಕಳ್ಳಿನ ಗಡಿಗೆ ಇಳಿಸಿದರು 'ಸಿಂಬಿ'ಯ ಬಟ್ಟೆ ತೆಗೆದರು
ಸೊಂಟಕ್ಕೆ ಅರಿವೆ ನೀಡಿದರು ಸೊಂಟಕ್ಕೆ ಒಟ್ಟೆ ಕಟ್ಟಿಕೊಂಡ
ಬಿರಬಿರನೆ ಅತ್ತ ಕೊರಗತನಿಯ
ಎಲ್ಲಿಂದ ಬರುತ್ತೀ ಮಗಾ ನೀನು ಎಲ್ಲಿಗೆ ಹೋಗುವೆಯೆಂದು ಕೇಳಿದರು
ಕಾಡ ಕೊರಗರ ಹುಡುಗ ನಾನು ತಾಯಿ ಸತ್ತಳು ತಂದೆ ಅಳಿದ
ಏಳು ಕೊಪ್ಪದ ಕೊರಗರು ಅಳಿದುಹೋದರು
ಕುಳ್ಳಿರುವೆನೆಂದರೆ ಕೊಪ್ಪವಿಲ್ಲ ದಿಕ್ಕುಬಿಟ್ಟು ದೇಶಾಂತರ ಹೋಗುವೆ
ದುಡಿಯಲು ಬೇಕಾದಷ್ಟು ಇರುವ ರಾಜ್ಯಕ್ಕೆ ಉಣ್ಣಲು ಬೇಕಾದಷ್ಟು ಇರುವ ಸೀಮೆಗೆ
ಹೋಗುವೆನೆಂದು ಹೇಳಿದ
ಹಾಗೆ ಹೋಗುವ ಮಗನಾದರೆ ನನ್ನೊಡನೆ ಬರುವೆಯಾ ಎಂದು ಕೇಳಿದರು
ನನಗೆ ಇಬ್ಬರು ಮಕ್ಕಳಿದ್ದಾರೆ ನೀನೂ ಸೇರಿ ಮೂವರು ಆದಿರಿ ಎಂದರು
ಆಗ ಮಗಳು ಮಂಜಕ್ಕೆ ಹೇಳುತ್ತಾರೆ ಅವನ ಬಳಿಬಾಂದ್ರ ಕೇಳಬೇಕು

ಅವನ ಸಾಲ ಕೇಳಬೇಕು ಮೂಲ ಕೇಳಬೇಕು
ಆ ವೇಳೆಯಲ್ಲಿ ಕೇಳುತ್ತಾರೆ ಬೈರಕ್ಕೆ ಬೈದ್ಯೆತಿ
ನೀನು ಯಾವ ಬಳಿಯವನು ಮಗೂ ಯಾವ ಮೂಲದವನು[೧೦]
ಯಾವ ಸಾಲದವನು
ನನಗೆ ಸಾಲವೆಂದರೆ[೧೧] ತಾಯಿ ಕದ್ರುಕಾಂತಣದೇವರದು
ಮೂಲವೆಂದರೆ ಎಣ್‌ಸೂರಮೂಲ ಬಳಿಯೆಂದರೆ ಸೋಮನತ್ತಬಳಿ
ಹಾಗಾದರೆ ನೀನು ನಮ್ಮ ಬಳಿಯವನು ಬಾ ಹೋಗೋಣ ಎಂದು ಕರೆದರು
ಚೆನ್ನಯನಲ್ಲಿ ಹೇಳಿದರು ಮಗು ಚೆನ್ನಯ
ಬುತ್ತಿಯ ಉಣಿಸನ್ನು ಬಿಚ್ಚು ಅವನಿಗೆ ಉಣ್ಣಲು ಕೊಡು
ಬುತ್ತಿಯನ್ನು ಉಂಡರು ಬುತ್ತಿಯ ಹಾಳೆಯನ್ನು ಕೊರಗನಿಗೆ ಕೊಟ್ಟರು
ದಡ್ಡಾಲದ ನಾರು ಎಬ್ಬಿಸಿದ ತುದಿಬುಡಗಳಿಗೆ ಕಟ್ಟುಹಾಕಿದ
ಗೋಂಪರು ಮಾಡಿದ ಕಳ್ಳಿನ ಗಡಿಗೆ ಹೊತ್ತು
ಎದುರಿನಿಂದ ಬೈದ್ಯರು ಹಿಂದಿನಿಂದ ಕೊರಗತನಿಯ
ಮಂಜಕ್ಕೆ ಕಳ್ಳು ಕೊಂಡೊಯ್ದರು
ಹೋಗುವಾಗ ತಾಯಿ ಬೈರಕ್ಕೆ ಬೈದೆತಿಗೆ ತಲೆಯಲ್ಲಿ ಬೆಂಕಿ ಬಂತು
ನಿನಗೆ ತೆರಿಯೆ ಕೊಟ್ಟು ನನ್ನ ತಲೆ ಕಾದಿತು ಮಗ
ನನಗೆ ತೆರಿಯೆ ತಂದುಕೊಡು ಎಂದರು
ತೋಡಿನ ಬಳಿಗೆ ಹೋಗಿ ಬಿಳಿ ಉರ್ಕಿಯ ನಾರು ತಂದು
ಹಾದಿ ನಡೆಯುತ್ತಿದ್ದಂತೆ ಸಿಂಬಿ ಕಟ್ಟಿಕೊಟ್ಟ
ಎಣ್‌ಸೂರ ಬಾರಿಕೆಗೆ ಹೋಗಿ ಮುಟ್ಟಿದರು
ಯಾರೋ ಮಗು ಚೆನ್ನಯ ನೆಡಿಲು ಗಿಡದ ಕೋಲು ಕಡಿ
ಅವನಿಗೆ ಒಂದು ಕೊಟ್ಟಿಗೆ ಕಟ್ಟಿಕೊಡು ಎಂದರು
ನೆಡಿಲುಕೋಲು ತಂದ ಸಣ್ಣ ಬಾಳೆಯ ತೋಟದಲ್ಲಿ
ಕೊಟ್ಟಿಗೆ ಕಟ್ಟಿಕೊಟ್ಟ
ಒಂದು ವರ್ಷ ಆರು ತಿಂಗಳು ಕರಟದಲ್ಲಿ ಅನ್ನ ಕೈಯಲ್ಲಿ ಉಪ್ಪು
ಕೊಟ್ಟು ಕೊರಗರ ಹೈದನನ್ನು ಸಾಕಿದರು
ಚಿಕ್ಕವನಾಗಿದ್ದತನಿಯ ದೊಡ್ಡವನಾದ
ಕೊರಗ ಹುಡುಗ ಬಂದ ಲಕ್ಷಣದಲ್ಲಿ ಎಣಿಕೆ ಮಿಕ್ಕಿದ ಹಣ ಹೆಚ್ಚಿತು
ಅಳತೆಗೆ ಮೀರಿ ಅಕ್ಕಿ ಬತ್ತ ಹೆಚ್ಚಿತು

ಒಂದು ಹಟ್ಟಿ ದನಕರು ಇದ್ದಲ್ಲಿ ನಾಲ್ಕು ಹಟ್ಟಿ ಆಯಿತು
ಒಂದು ಹಗಲು ಮುಗಿಯುವ ಕಳ್ಳು ಏಳು ರಾತ್ರಿ ಎಂಟು ಹಗಲು ಮುಗಿಯಲಿಲ್ಲ
ಆಗ ತಾಯಿ ಹರಕೆ ಹೇಳಿದರು ಇದೊಂದು ಕಳ್ಳು ಮುಗಿದರೆ
ಬಡಗು ಬಾಕೂರಮ್ಮದೇವರಿಗೆ ಪಾತ್ರದಲ್ಲಿ ಹಾಲು ಮುಷ್ಟಿಹಣ
ತೊಟ್ಟಿಲು ಮಗುವನ್ನು ಕೊಂಡೊಯ್ದು ಒಪ್ಪಿಸುತ್ತೇನೆ
ಕದಿರೆಕಾಂತು ಮಂಜುನಾಥ ದೇವರಿಗೆ ಕಂಚಿನ ದೀಪಸ್ತಂಭ[೧೨] ಇರಿಸುತ್ತೇನೆ
ಇಟ್ಟ್ಯೋವು ದೇವತೆ ಹುಲಿಭೂತ
ಮಾಡದ ಮಯಿಸಂದಾಯನಿಗೆ ನೇಮನೆರಿ ಕೊಡುತ್ತೇನೆ
ಅಷ್ಟು ಹರಕೆ ಹೇಳುವಾಗ ಅಂಗಳದಲ್ಲಿದ್ದ ಕೊರಗತನಿಯನಿಗೆ ಕೇಳಿಸಿತು
ಆಗ ಹೇಳುತ್ತಾನೆ ಕೊರಗ ಅಮ್ಮಾ ಹರಕೆ ಹೇಳಬೇಡಿ
ನಾನು ಅಂದು ಕೊಟ್ಟ 'ತೆರಿಯೆ'ಯನ್ನು ಗಡಿಗೆಯ ಅಡಿಯಿಂದ ತಪ್ಪಿಸಿರಿ ಎಂದ
ತೆರಿಯೆ ತಪ್ಪಿಸಿದ ಗಳಿಗೆಯಲ್ಲೆ ಕಳ್ಳು ಮಾರಿ ಮುಗಿಯಿತು
ಆ ಕಾಲದಲ್ಲಿ ನನ್ನ 'ಕುಲಜನ್ಮ'ದ ಕೆಲಸ ಕಲಿಯುವೆನೆಂದ
ನನಗೊಂದು ಪೀಂಪಿಲಿಕತ್ತಿ ಕೊಡಿ ಎಂದ ಕತ್ತಿ ತಂದಿತ್ತರು
ಬಿದಿರ ಮಲೆಗೆ ಹೋದ ಒಂದು ತುಂಡು ಬಿದಿರು ತಂದ
ಪೊದರುಪೊದರು ಬೀಳಲು ಕಡಿದುಕೊಂಡ
ಬಿದಿರಿನ ಒಳಭಾಗ ಕಡಿದ ಹೊರ ಸಿಪ್ಪೆ ಎಬ್ಬಿಸಿದ
ದಿಣ್ಣೆಯಲ್ಲಿ ಕುಳಿತ ಅತ್ತಿರಿಗೆ ಅಡಿ ಬಳ್ಳಕ್ಕೆ ಬಾಯಿ
ಗೆರಸೆಗೆ ಮೂಲೆ ಗಾಟಿಗೆಕುಕ್ಕೆಗಳಿಗೆ ಕೈ ಇರಿಸಿದ
ಕಣಜಬುಟ್ಟಿ 'ಕೈಕುಡುಪು' ಸಿದ್ಧಗೊಳಿಸಿದ
ಊರಿಗಿಳಿದು ಊರ ಕೇರಿಯಲ್ಲಿ ಮಾರಲು ತೊಡಗಿದ
ಆ ಕಾಲದಲ್ಲಿ ಹಲವು ದಿನ ಹೋಗಿ ಬಲುದಿನ ಬರುವಾಗ
ಅವರ ಮೂಲಸ್ಥಾನದಲ್ಲಿ ಮರ್ಲ್‌ಜುಮಾದಿ ಮಾಡಮೈಸಂದಾಯ
ಕಿನ್ನಿಕೊಡಂಗೆದಾರು ಪದವುಲೆಕ್ಕೇಸಿರಿಗಳಿಗೆ
ಅಂಕ ಅಯನ ಕೋಳಿ ಕಂಬಳ ನೇಮ ನೆರಿ ಆಗುವುದೆಂದಾಯಿತು
ಎಣಸೂರು ಬಾರಿಗೆಯಿಂದ ಏಳು ಜನ ಹೊರುವಷ್ಟು
ತೆಂಗಿನ ಎಳೆಯ ಗರಿ ಬಾಳೆ ಸೀಯಾಳ ಹೋಗಬೇಕು[೧೩]
ಎಳೆಯ ಗರಿ ಬಾಳೆ ಹೊರಲು ಜನವನ್ನು ಹುಡುಕಲು ಕಳುಹಿಸಿದರು
ಬೈಲ ಬಾಕುಡನನ್ನು ಹುಡುಕಲು ಹೋದಾಗ ಬೈಲ ಬಾಕುಡ[೧೪] ಸಿಕ್ಕಲಿಲ್ಲ

ಓಣೆಯ ಮುಗ್ಗೇರನನ್ನು ಹುಡುಕಲು ಹೋಗುವಾಗ ಓಣೆಯ ಮುಗ್ಗೇರ ಸಿಕ್ಕಲಿಲ್ಲ
'ಹುಣಿಮುಟ್ಟು' ಮುಂಡಾಲದವನು ಸಿಕ್ಕಲಿಲ್ಲ
ಹುಡುಕಲು ಹೋದವರು ಹಿಂದೆ ಬಂದು ಹೇಳಿದರು
ಆಗ ಹೇಳುತ್ತಾರೆ ಚೆನ್ನಯ ಬೈದ್ಯರು
ಹೊರಗಿನ ಆಳು ಮಂದಿ ಬೇಡ ನಮಗೆ
ನಾವು ಸಾಕಿದ ಮಗ ಇದ್ದಾನೆ ಕೊರಗತನಿಯ
ಅವನಲ್ಲಿ ಎಳೆಗರಿ ಸೀಯಾಳ ಹೊರಿಸುವ ಎಂದರು
ಎಳೆಗರಿ ಸೀಯಾಳ ಹೊರುವೆಯಾ ಎಂದು ಕೇಳಿದರು ತಾಯಿ
ಒಯ್ಯಲು ಒಯ್ಯುತ್ತೇನೆ ನಾನು
ಏಳು ಜನರ ಹೊರೆ ಒಬ್ಬನೇ ಹೊರುವೆ
ಏಳು ಜನ ಕುಡಿಯುವ ಏಳು ಕುಡಿಕೆ ಕಳ್ಳು ಕೊಡಿರಿ
ಏಳು ಕುಪ್ಪಿ ಶರಾಬು ಬೇಕೆಂದು ಹೇಳಿದ
ಏಳು ಜನ ತಿನ್ನುವ ತಿಂಡಿ ಕೊಡಬೇಕೆಂದ
ಏಳು ಜನರ ಊಣಿಸು ಕೊಡಬೇಕೆಂದ
ಮೂವತ್ತು ಬಂಗುಡೆಯ ಪಲ್ಯ ಬೇಕೆಂದ
ಏಳು ಜನರ ಅಡಿಕೆವೀಳ್ಯ ಬೇಕೆಂದ
ಏಳು ಜನರ ಬತ್ತ ಬೇಕೆಂದ
ಹಾಗೇ ಆಗಲೆಂದು ಹೇಳಿದರು
ಅಲ್ಲಿಂದ ಎದ್ದ ಒಂದು ತೆಂಗಿನ ಮರಕ್ಕೆ ಹೋದವನು
ಎಪ್ಪತ್ತು ತೆಂಗಿನ ಎಳೆಯಗರಿ ಸೀಯಾಳ ತೆಗೆದ
ಒಂದು ಕವುಂಗಿಗೆ ಹೋದವನು ಎಪ್ಪತ್ತು ಕೌಂಗಿನ ಸಿಂಗಾರ ಹೂವು ತೆಗೆದ
ಏಳು ಜನರ ಹೊರೆಯನ್ನು ಒಂದು ಹೊರೆಯಾಗಿ ಕಟ್ಟಿದ
ಎತ್ತಿ ಹೆಗಲಿಗಿರಿಸಿ ಎಣ್ಮೂರ ಅಂಗಳಕ್ಕೆ ತಂದುಹಾಕಿದ
ತಾಯಿ ಕೊಟ್ಟ ಏಳು ಕುಡಿಕೆ ಕಳ್ಳು ಕುಡಿದ
ಏಳು ಕುಪ್ಪಿ ಶರಾಬು ಕುಡಿದ
ಏಳು ಜನ ತಿನ್ನುವ ತಿಂಡಿ ತಿಂದ
ಏಳು ಜನರ ಊಣಿಸು ಉಂಡ
ಮೂವತ್ತು ಕಿರು ಬಂಗುಡೆ ಮೀನು ತಿಂದ ಏಳು ಜನರ ಅಡಿಕೆವೀಳ್ಯ ತಿಂದ
ಏಳು ಜನ ಹೊರುವ ಹೊರೆಯನ್ನು ಅಂಗಳದಿಂದ ಎತ್ತಿದ[೧೫]

ಪಾದಕ್ಕೆ ಇರಿಸಿದ ಪಾದದಿಂದ ಮೊಣಕಾಲಿಗಿಟ್ಟ
ಮೊಣಕಾಲಿಂದ ಹೆಗಲಿಗೆ ಇಟ್ಟ ಹೆಗಲಿನಿಂದ ತಲೆಗೆ ಇಟ್ಟ
ಅಂಗಳದಿಂದ ಕೆಳಗಿಳಿದ ಹಿಂದಿರುಗಿ ನೋಡಿದ
ಬಿಕ್ಕಿಬಿಕ್ಕಿ ಅತ್ತ ಈವರೆಗೆ ನನ್ನನ್ನು 'ಸೋಗದಲ್ಲಿ'
ಸಾಕಿಕೊಂಡು ಇದ್ದಿರಿ ತಾಯಿ ಇವತ್ತಿಗಾಗುವಾಗ ನಾನು
ಬೆನ್ನುಹಾಕಿ ಹೋದವನು ಹೊಟ್ಟೆ ತೋರಿಸಿಕೊಂಡು ಬರುವೆನೆಂದು ನಂಬದಿರಿ
ಅಯ್ಯೋ ಮಗಾ ನೀನು ಬರುವಾಗ ನಮಗೆ ದನಕರು
ಬದುರು ಭಾಗ್ಯ ಹೆಚ್ಚುತ್ತಾ ಬಂತು
ಇವತ್ತಿಗೆ ಇಂಥಾ ಮಾತು ಹೇಳಿ ಹೊರಟುಹೋಗುತ್ತಿ
ಎಳೆಗರಿ ಸೀಯಾಳ ಕೊಂಡೊಯ್ಯಲು ನಿನಗೆ ಹೀನ ಎನಿಸುವುದಾದರೆ
ಕುಟುಂಬಕ್ಕೆ ಅಪವಾದ ಬರುವುದಿದ್ದರೆ ನೀನು ಹೊರಬೇಡ ಎಂದರು
ತಲೆಗಿಟ್ಟ ಹೊರೆಯನ್ನು ಮತ್ತೆ ಕೆಳಗಿರಿಸಲಾರೆ ಎಂದ
ಹೊರೆ ಹೊತ್ತುಕೊಂಡು ಹೊರಟ
ಅಲ್ಲಿಂದ ಹೊತ್ತವನು ಕುಡ್ತಡ್ಕದಲ್ಲಿ ಇಳಿಸಿದ
ಅಲ್ಲಿ ಹೊತ್ತವನು ತಲೆಹೋದ ಹೊನ್ನೆಯ ಬುಡದಲ್ಲಿ ಇಳಿಸಿದ
ಅಲ್ಲಿಂದ ಹೊತ್ತವನು ಮಾಡಮೈಸಂದಾಯನ
ಕಿನ್ನಿಕೊಡಂಗೆದಾಯ ಇಷ್ಟದೇವತೆ ಲೆಕ್ಕೇಸಿರಿಯ
ಮಾಡಕ್ಕೆ ಹತ್ತಿರಹತ್ತಿರ ಮುಟ್ಟಿದ
ದೂರದಿಂದ ನೋಡಿದರು ನೇಮದ ಮಂದಿ
ಎಣ್ಣೂರ ಬಾರಿಕೆಯಿಂದ ಎಳೆಯಗರಿ ಸೀಯಾಳ ಯಾರು ತರುವುದು
ಓಣಿಯ ಮುಗ್ಗೇರನೊ ಬೈಲ ಬಾಕುಡನೊ
ಹುಣಿಮುಟ್ಟು ಮುಂಡಾಲದವನೋ
ಕಾಡ ಕೊರಗರ ಹೈದ ಎಳೆಯ ಗರಿ ಬಾಳೆ ತರುವುದಿದ್ದರೆ[೧೬]
ಮಾಡಕ್ಕೆ ಮುಟ್ಟಿಸಬಾರದು ಮಾಡಕ್ಕೆ ದೂರದಲ್ಲಿ ಇಳಿಸಬೇಕು
ದೂರ ಕುಳ್ಳಿರಬೇಕು ಎಂದರು
ನಾನು ತಂದ ತೆಂಗಿನ ಗರಿ ಬಾಳೆ ಆದೀತು
ಮಾಡಕ್ಕೆ ಮುಟ್ಟಿಸಲು ಯಾಕೆ ಆಗದು ಎಂದ
ಮಾಡಕ್ಕೆ ಹತ್ತಿರದಲ್ಲೇ ಕುಳಿತ
ಮಾಡದ ಮೇಲೆ ನೋಡುವಾಗ ಕೈಪುರ ಹುಳಿ ಕಂಡಿತು

ಅಮ್ಮ ಹೇಳಿದ್ದಾರೆ ಬಾರದ (ಅಪರೂಪದ) ನೆಂಟರಿಗೆ
ಮಾವಿನ ಉಪ್ಪಿನಕಾಯಿ ಮುಗಿದಿದೆ
ನೆಡಿಲ ತೋಟಕ್ಕೆ ಹೋದ ನೆಡಿಲಿನ 'ತೊಡಂಕು' ಕಟ್ಟಿದ
ಕೈಪುರದ ಮರಕ್ಕೆ ಹೋದ ಒಂದು ಕಾಲನ್ನು ಮಾಡದ ಕಲಶಕ್ಕೆ ಇರಿಸಿದ
ಗೆಲ್ಲು ಬಗ್ಗಿಸಿ ಹುಳಿ ಕೊಯ್ಯುವಾಗ
ಒಳಗೆ ತೂಗುಯ್ಯಾಲೆಯಲ್ಲಿ ಇದ್ದ ಮಾಡಮ್ಮೆಸಂದಾಯ
ಕಿನ್ನಿಕೊಡಂಗೆದಾಯ ಪದವುಲೆಕ್ಕೇಸಿರಿ
ಕಡೆಗಣ್ಣಿನಲ್ಲಿ ನೋಡಿ ತುದಿಗಣ್ಣಿನಲ್ಲಿ ಮಾಯಾಸ್ವರೂಪ ಮಾಡಿದರು
ಅವರ ಬಲಭಾಗದಲ್ಲಿ[೧೭] ನಿಂತ ಕೊರಗತನಿಯ
ಬೈರಕ್ಕೆ ಬೈದ್ಯೆತಿ ಪಾತ್ರೆಯಲ್ಲಿ ಗಂಜಿ 'ಗದ್ದಾವಿ'ನಲ್ಲಿ ಪಲ್ಯ
ಕೈಯಲ್ಲಿ ಉಪ್ಪಿನಕಾಯಿ ಕುಡಿಕೆಯಲ್ಲಿ ಕಳ್ಳು ತಂದು ಕರೆಯುತ್ತಾರೆ
ಕರೆಯುವಾಗ ಒಮ್ಮೆ ಮನೆಯ ಹಿಂದಿನಿಂದ ಓಗೊಡುತ್ತಾನೆ
ಒಮ್ಮೆ ಅಂಗಳದ ತುದಿಯಿಂದ ಓಗೊಡುತ್ತಾನೆ
ಒಮ್ಮೆ ಹಟ್ಟಿಕೊಟ್ಟಿಗೆಯಿಂದ ಓಗೊಡುತ್ತಾನೆ
ಒಮ್ಮೆ ಗುಡ್ಡದಿಂದ ಓಗೊಡುತ್ತಾನೆ ಕಣ್ಣಿಗೆ ಕಾಣಲು ಸಿಗುವುದಿಲ್ಲ
ನೀನು ಯಾಕೆ ಮಗೂ ಹೀಗೆ ಕಷ್ಟಪಡಿಸುತ್ತೀಯಾ
ಬಾ ಈ ಗಂಜಿನೀರು ಕುಡಿ ಎಂದರು
ಓ ತಾಯಿ ನನಗೆ ಗಂಜಿನೀರು ಇದೆ ಎಂದಾದರೆ
ಕಾಸರಕನ ಮರದ ಬುಡದಲ್ಲಿ ಗೆರಸೆಯಲ್ಲಿ ಇಡಿ ಎಂದ
ಮೂರು ಬಾರಿ ಅರಚಿದ ಮೂರು ಬಾರಿ ಹೂಂಕರಿಸಿದ
ತಾಯಿ ಅತ್ತರು ನೀನು ಕೊಂಡೊಯ್ಯಬೇಡ ಎಂದೆ ಮಗೂ
ಇಂದಿಗೆ ಹೀಗಾಯಿತಲ್ಲಾ ಎಂದರು
ಈವರೆಗೆ ನನ್ನನ್ನು 'ಸೋಗ'ದಲ್ಲಿ ನಂಬಿಕೊಂಡು ಇದ್ದಿರಿ
ನಿಮ್ಮಮೂಲಸ್ವಾಮಿದೈವಗಳು ನನ್ನನ್ನು ಮಾಯಾಸ್ವರೂಪ ಮಾಡಿದರು
ಅವರ ಬಲಭಾಗದಲ್ಲಿ ಇರಿಸಿಕೊಂಡರು
ನಾನು ಮಾಯಾಸ್ವರೂಪ ಆದರೂ
ಎಣ್ಣೂರ ಕಟ್ಟಳೆಯನ್ನು ಬಿಡಲಾರೆ
ಬಿತ್ತಿದ ಬೆಳೆಗೆ ಫಲವಸ್ತುಗಳಿಗೆ


ಕತ್ತರಿಕಳಕ್ಕೆ ನಾನು ಸಹಾಯಕ್ಕೆ ಇದ್ದೇನೆ
ಹದಿನಾರು ಉಳ್ಳಾಕುಲುಗಳ ಮಂದಿಗೆ ಸಹಾಯದ ಮಾನಿ ಆಗಿ ನಿಲ್ಲುವೆ
ಸೋಮಣಬಾರಿ ಬೈದ್ಯರ ಒಳ್ಳೆಯತನದಲ್ಲಿ
ಒಂದು ಕರೆಯುವ ದನಕ್ಕೆ ಎರಡು ಉಳುವ ಹೋರಿಗಳಿಗೆ
ಹಟ್ಟಿಗೆ ಬಾಗಿಲಾಗಿ ಹೊಲಕ್ಕೆ ಕಾವಲಾಗಿ ನಿಲ್ಲುವೆ
ನನ್ನನ್ನು ನಂಬಿಕೊಳ್ಳಿ ಎಂದ.



# ಮಲೆಕುಡಿಯರ ಪದಗಳು

## ಕೃಷ್ಣನ ಪಾಡ್ದನ

ಡೆನ್ನ ಡೆನ್ನನ ಡೆನ್ನ ಡೆನ್ನಾನ
ಓ ಡೆನ್ನ ಡೆನ್ನ ಡೆನ್ನ ಡೆನಡೆನ ಡೆನ್ನ ಡೆನ್ನಾನ
ದೇವಲೋಕೊಡು ಕೇವಕಿ ಪೆದ್ದದೆರ್ ಡೆನ್ನ ಡೆನ್ನ
ನಂದಗೋಕುಲೊಡು ಕೃಷ್ಣೆ ಪುಟ್ಟುದೇರ್
ಡೆನ್ನ ಡೆನ್ನನ ಡೆನ್ನ ಡೆನ್ನಾನ
ಓ ಡೆನ್ನ ಡೆನ್ನ ಡೆನ್ನ ಡೆನಡೆನ ಡೆನ್ನ ಡೆನ್ನಾನ
ಬಾಲೆ ತೂವರೆ ಪೋವೊಡುಂದೇರ್ ಡೆನ್ನ ಡೆನ್ನ
ಒರುಂಭ ಜನೋ ಗೊಲ್ಲೆರೆ ಪೊಣ್ಣುಲು
ಪುಲ್ಯಕಾಂಡೆ ಅಕುಲು ಲಕ್‌ದೇರ್, ಓ ಗೊಲ್ಲೆರಕುಲು
ಪದ್ದಾಯಿ ಬಂಗಾರ್ ಡಾಯಿತಲಾತೇರೋ
ಡೆನ್ನ ಡೆನ್ನನ ಡೆನ್ನ ಡೆನ್ನಾನ
ಓ ಡೆನ್ನ ಡೆನ್ನ ಡೆನ್ನ ಡೆನಡೆನ ಡೆನ್ನ ಡೆನ್ನಾನ
ಬೇಗನಾನ ಪೋತೆರಪ್ಪೋ ಓ ಗೊಲ್ಲರು ಪೊಣ್ಣುಲು
ದೇವೊ ಲೋಕೊಡು ಬಾಲೆ ತೂಯರೆ
ಡೆನ್ನ ಡೆನ್ನನ ಡೆನ್ನ ಡೆನ್ನಾನ
ಓ ಡೆನ್ನ ಡೆನ್ನ ಡೆನ್ನ ಡೆನಡೆನ ಡೆನ್ನ ಡೆನ್ನಾನ
ಈತ್ ದಿನೊಟ್ ಬರಂದಿ ಪೊಣ್ಣಲು ಓ ಗೋಪಿರಮ್ಮ
ಇನಿ ದಾನೆ ಬತ್ತರೆಂದೇರ
ಕುಲ್ಯರಂಚ ಮಣೆಲ ಕೊರಿಯರೆ ಓ ಗೋಪಿರಮ್ಮ
ಗಿಂಡೆಡಂಚ ಪೇರ್ ಕೊರುತೇರೆ
ಈರ್ ಪದ್ದಿನ ತೆರಿಂಡಮ್ಮ ಗೋಪಿರಮ್ಮ




ಈರೆ ಬಾಲೆನ್ ಎಂಕ್ಲೆ ತೂವೊಡೆ
ಡೆನ್ನ ಡೆನ್ನನ ಡೆನ್ನ ಡೆನ್ನಾನ
ಓ ಡೆನ್ನ ಡೆನ್ನನ ಡೆನ್ನ ಡೆನ್ನಾನ
ಓ ಡೆನ್ನ ಡೆನ್ನ ಡೆನ್ನ ಡೆನ ಡೆನ ಡೆನ್ನ ಡೆನ್ನಾನ
ಜೈದಿ ಬಾಲೆನ್ ಎಂಚ ತೂವರೆ ಪಂಡಿನಾರೆ
ಬಾಲೆನ್ ತೊನತ್ ಕೈಟ್ ಕೊರಿಯೆರೆ
ಈರೆ ಬಾಲೆನ್ ತೂವೊಡುಂದೇರೋ ಗೊಲ್ಲೆರಕುಲು
ಕೈಯಿದ್ದ್ ಕೈಕ್ ಬಾಲೆನ್ ಪತ್ಯೇರೊ
ಡೆನ್ನ ಡೆನ್ನನ ಡೆನ್ನ ಡೆನ್ನಾನ
ಓ ಡೆನ್ನ ಡೆನ್ನ ಡೆನ್ನ ಡೆನಡೆನ ಡೆನಡೆನ್ನಾನ
ಮೋನೆ ತೂದು ಕಿಟಕಿ ತೆಲಿತೇರ್ ಓ ಬಾಲಕೃಷ್ಣೆ
ಕೆಕ್ಕಿಲ್ ಕೈ ಪಾಡ್ದ್ ಸರೋನು ಕಡ್ತ್‌ದ್‌ನ
ತರೆಕ್ಕ್ ದೀದಿ ಪುಷ್ಪ ಪುರುಂಚುವೆರ್ ಓ ಬಾಲಕೃಷ್ಣೆ
ಕೈಕ್ ದೀದಿ ಕಾಜಿ ದರಿಪುವೆನೊ
ಡೆನ್ನ ಡೆನ್ನನ ಡೆನ್ನ ಡೆನ್ನಾನ
ಓ ಡೆನ್ನ ಡೆನ್ನ ಡೆನ್ನ ಡೆನಡೆನ ಡೆನಡ ಡೆನ್ನಾನ
ಬಾಲೆ ಬಾಲೆಂದ್ ಈರ್ ಪಂಡರ್‌ಯೇ ಓ ಗೋಪಿಯಮ್ಮ
ಬಾಲೆ ಪೊದು ಬಬ್ಬರಿಯಾತೇನೋ
ಬಾಲೆ ಬಾಲೆಂದ್ ಈರ್ ಪಂಡರ್‌ಂಡ ಓ ಬಾಲಕೃಷ್ಣೆ
ಬಾಲೆಲತ್ತ್ ಮದನ ಗೋಪಾಲೆ
ನಂದ ಗೋಕುಲೊದ ಅರಮನೆಕ್ ಓ ಬಾಲಕೃಷ್ಣೆ
ಮಾಯಕಾದ ದೇವೆರಾರ್‌ಯೆ
ಡೆನ್ನಡೆನ್ನನ ಡೆನ್ನ ಡೆನ್ನಾನ
ಓ ಡೆನ್ನ ಡೆನ್ನ ಡೆನ್ನ ಡೆನಡೆನ ಡೆನಡ ಡೆನ್ನಾನ
ಮೀಯರೆಂದೆ ಅಕುಲು ಪೋಯೆರ್ ಓ ಗೊಲ್ಲರೆ ಪೊಣ್ಣುಲು
ತುದೆತ ಬರಿಕ್ ಅಕುಲು ಪೋತೇರೊ
ಸೀರೆ ರವಕೆ ಮಿತ್ತ್‌ಡ್ ದೀತೆರ್, ಓ ಪೊಣ್ಣುಲಕುಲು
ಪೊರ್ಲು ನೀರ್‌ಡ್ ಅಕುಲು ಮೀಪೇರೊ
ಡೆನ್ನ ಡೆನ್ನನ ಡೆನ್ನ ಡೆನ್ನಾನ

ಓ ಡೆನ್ನ ಡೆನ್ನ ಡೆನ್ನ ಡೆನಡೆನ ಡೆನಡ ಡೆನ್ನಾನ
ಪೊಣ್ಣುಲೆ ಸೀರೆ ರವಕೆ ದೆಂಗದೆನೊ, ಓ ಬಾಲಕೃಷ್ಣೆ
ಮಲ್ಲ ಗೋಳಿದ ಮರಕ್ ಪೋತೇನೊ
ಮೀದ್ ನಾನ ಬೇಗ ಬನ್ನಾಗ ಓ ಗೊಲ್ಲರೆ ಪೊಣ್ಣುಲು
ಸೀರೆ ರವಕೆ ಅಲ್ಪಲ ಇಜ್ಜಾಂಡೆ
ಎಂಕ್ಲೆ ಸೀರೆ ಕೊರ್ಲೆ ದೇವರೆ ಓ ದೇವೆರೀರ್
ಪಂಡ್‌ದ್ ಪೊಣ್ಣುಲಕುಲು ಕೇನ್ವೇರೊ
ಕೃಷ್ಣೆ ತಿರ್ತ್ ತೂದು ತೆಲೆಪುವೆನ ಓ ಬಾಲಕೃಷ್ಣೆ
ಮಿತ್ತ್ ಕುಲ್ಲುದು ಪುರಲ್ ಉರಿಪ್ಪುವೆನೊ
ಡೆನ್ನ ಡೆನ್ನ ಡೆನ್ನ ಡೆನ್ನಾನ ಓ ಡೆನ್ನ ಡೆನ್ನ
ಡೆನಡ ಡೆನ್ನನ ಡೆನ್ನ ಡೆನ್ನಾನ

## ಕನ್ನಡಾನುವಾದ

ಡೆನ್ನ ಡೆನ್ನನ ಡೆನ್ನ ಡೆನ್ನಾನ
ಓ ಡೆನ್ನ ಡೆನ್ನ ಡೆನ್ನ ಡೆನಡೆನ ಡೆನ್ನ ಡೆನ್ನಾನ
ದೇವಲೋಕದಲ್ಲಿ ದೇವಕಿ ಹಡೆದಿದ್ದಾರೆ ಡೆನ್ನ ಡೆನ್ನ
ನಂದ ಗೋಕುಲದಲ್ಲಿ ಕೃಷ್ಣ ಹುಟ್ಟಿದ್ದಾನೆ
ಡೆನ್ನ ಡೆನ್ನನ ಡೆನ್ನ ಡೆನ್ನಾನ
ಓ ಡೆನ್ನ ಡೆನ್ನ ಡೆನ್ನ ಡೆನಡೆನ ಡೆನ್ನ ಡೆನ್ನಾನ
ಮಗುವ ನೋಡುಲು ಹೋಗಬೇಕಂದರು ಡೆನ್ನ ಡೆನ್ನ
ಒಂಬತ್ತು ಜನ ಗೊಲ್ಲರ ಹುಡುಗಿಯರು
ಮುಂಜಾವದಲ್ಲಿ ಅವರು ಎದ್ದಿದ್ದಾರೆ ಓ ಗೊಲ್ಲರವರು
ಆಭರಣ ಬಂಗಾರದಲ್ಲಿ ಸಿಂಗರಿಸಿಕೊಂಡಿದ್ದಾರೆ
ಡೆನ್ನ ಡೆನ್ನನ ಡೆನ್ನ ಡೆನ್ನಾನ
ಓ ಡೆನ್ನ ಡೆನ್ನ ಡೆನ್ನಡೆನಡೆನ ಡೆನ್ನ ಡೆನ್ನಾನ
ಬೇಗ ಇನ್ನು ಹೋಗುತ್ತಾರೊ ಓ ಗೊಲ್ಲರ ಹುಡುಗಿಯರು
ದೇವ ಲೋಕಕ್ಕೆ ಮಗುವನ್ನು ನೋಡಲು
ಡೆನ್ನಡೆನ್ನನ ಡೆನ್ನ ಡೆನ್ನಾನ
ಓ ಡೆನ್ನ ಡೆನ್ನ ಡೆನ್ನ ಡೆನಡೆನ ಡೆನ್ನ ಡೆನ್ನಾನ

ಇಷ್ಟು ದಿವಸ ಬಾರದ ಹುಡುಗಿಯರು, ಓ ಗೋಪಿರಮ್ಮ
ಇಂದು ಏನು ಬಂದಿರೆಂದಾರು
ಕುಳಿತುಕೊಳ್ಳಲು ಮಣೆಯನ್ನು ಕೊಟ್ಟರು, ಓ ಗೋಪಿರಮ್ಮ
ಗಿಂಡೆಯಲ್ಲಿ ಹಾಲು ಕೊಟ್ಟಿದ್ದಾರೆ
ನೀವು ಹೆತ್ತ ಸುದ್ದಿ ತಿಳಿಯಿತು ಗೋಪಿರಮ್ಮ
ನಿಮ್ಮ ಮಗುವನ್ನು ನಮಗೆ ನೋಡಬೇಕೆ
ಡೆನ್ನ ಡೆನ್ನನ ಡೆನ್ನ ಡೆನ್ನಾನ
ಓ ಡೆನ್ನ ಡೆನ್ನ ಡೆನ್ನ ಡೆನಡೆನ ಡೆನ್ನ ಡೆನ್ನಾನ
ಮಲಗಿದ ಮಗುವನ್ನು ಹೇಗೆ ನೋಡುತ್ತಿರಿ, ಎಂದವರೆ
ಮಗುವನ್ನು ತಂದು ಕೈಯಲ್ಲಿ ಕೊಟ್ಟರು
ನಿಮ್ಮ ಮಗುವನ್ನು ನೋಡಬೇಕೆಂದಾರೂ, ಓ ಗೊಲ್ಲರವರು
ಕೈಯಿಂದ ಕೈಯಿಗೆ ಮಗುವನ್ನು ಹಿಡಿದಾರೊ
ಡೆನ್ನ ಡೆನ್ನನ ಡೆನ್ನ ಡೆನ್ನಾನ
ಓ ಡೆನ್ನ ಡೆನ್ನ ಡೆನ್ನ ಡೆನಡೆನ ಡೆನ್ನ ಡೆನ್ನಾನ
ಮುಖನೋಡಿ ಕಿಟಿಕ ನಕ್ಕಾರು, ಓ ಬಾಲಕೃಷ್ಣ
ಕುತ್ತಿಗೆಗೆ ಕೈಹಾಕಿ ಸರವನ್ನು ತುಂಡು ಮಾಡಿದ
ತಲೆಗೆ ಮುಡಿದ ಹೂವ ಹಿಸುಕಿದರು ಓ ಬಾಲಕೃಷ್ಣ



ಕೈಗೆ ಇಟ್ಟ ಬಳೆಯನ್ನು ಒಡೆದಾನು
ಡೆನ್ನ ಡೆನ್ನನ ಡೆನ್ನ ಡೆನ್ನಾನ
ಓ ಡೆನ್ನ ಡೆನ್ನ ಡೆನ್ನ ಡೆನಡೆನ ಡೆನ್ನ ಡೆನ್ನಾನ
ಮುಗು ಮಗುವೆಂದೆ ನೀವೂ ಹೇಳಿದೀರಿ ಓ ಗೋಪಿರಮ್ಮ
ಮಗು ಹೋಗಿ ಬಬ್ಬರಿಯಾಗಿದ್ದಾನೆ
ಮಗು ಮಗುವೆಂದು ನೀವು ಹೇಳಿದರೆ ಓ ಬಾಲಕೃಷ್ಣ
ಮಗುವಲ್ಲ ಮದನಗೋಪಾಲ
ನಂದ ಗೋಕುಲದ ಅರಮನೆಗೆ ಓ ಬಾಲಕೃಷ್ಣ
ಮಾಯಕದ ದೇವರಾದ
ಡೆನ್ನ ಡೆನ್ನನ ಡೆನ್ನ ಡೆನ್ನಾನ
ಓ ಡೆನ್ನ ಡೆನ್ನ ಡೆನ್ನ ಡೆನಡೆನ ಡೆನ್ನ ಡೆನ್ನಾನ
ಸ್ನಾನಕ್ಕಾಗಿ ಅವರು ಹೋದರು ಓ ಗೊಲ್ಲರ ಹುಡುಗಿಯರು
ನದಿಯ ಬದಿಗೆ ಅವರು ಹೋಗಿದ್ದಾರೆ
ಸೀರೆ ರವಕೆ ಮೇಲೆ ಇಟ್ಟಿದ್ದಾರೆ, ಓ ಹುಡುಗಿಯರು
ಚೆನ್ನಾಗಿ, ನೀರಿನಲ್ಲಿ ಅವರು ಸ್ನಾನ ಮಾಡಿದರೊ
ಡೆನ್ನ ಡೆನ್ನನ ಡೆನ್ನ ಡೆನ್ನಾನ
ಓ ಡೆನ್ನ ಡೆನ್ನ ಡೆನ್ನ ಡೆನಡೆನ ಡೆನ್ನ ಡೆನ್ನಾನ
ಹುಡುಗಿಯರ ಸೀರೆ ರವಕೆ ಅಡಗಿಸಿದನೊ, ಓ ಬಾಲಕೃಷ್ಣ
ದೊಡ್ಡ ಗೋಳಿಯ ಮರಕ್ಕೆ ಹತ್ತಿದ್ದಾನೆ
ಸ್ನಾನಮಾಡಿ ಬೇಗ ಬರುವಾಗ ಓ ಗೊಲ್ಲರ ಹುಡುಗಿಯರು
ಸೀರೆ ರವಕೆ ಅಲ್ಲಿ ಇರಲಿಲ್ಲ
ನಮ್ಮ ಸೀರೆ ಕೊಡಿ ದೇವರೆ ಓ ದೇವರೆ ನೀವೂ
ಎಂದು ಹುಡುಗಿಯರು ಕೇಳುತಾರೆ
ಕೃಷ್ಣ ಕೆಳಗೆ ನೋಡಿ ನಗುತ್ತಾನೆ ಓ ಬಾಲಕೃಷ್ಣ
ಮೇಲೆ ಕೂತು ಕೊಳಲು ಊದುತ್ತಾನೆ
ಡೆನ್ನ ಡೆನ್ನನ ಡೆನ್ನ ಡೆನ್ನಾನ
ಓ ಡೆನ್ನ ಡೆನ್ನ ಡೆನ್ನ ಡೆನಡೆನ ಡೆನ್ನ ಡೆನ್ನಾನ

## ಅಪ್ಪೆ ದಾರಕ್ಕು ಸಂಧಿ

ಅಪ್ಪೆಂಚ ದಾರಕ್ಕು ಮಗಳಂಚ ದೈಯಕ್ಕು
ಬಾಯಾಂತ ಗುತ್ತುಡು ಉಲ್ಲೇರೊ
ಓ ಅಂದಾಯ ಮಗಳೇ ಕೇಂಡನ ಇಯಿ
ಓ ಸುಬ್ರಣ್ಯ ಜಾತ್ರೆಗೆ ಪೋವೊಡೆ ಮಗಳೆ
ಓ ಎರು ಕೂಡ ಗಾಡಿಯಾವೊಡು ಗಾಡಿ ಕೂಡ ಎರು ಆವೊಡು
ಓ ಸುಬ್ರಣ್ಯ ಜಾತ್ರೆಗೆ ಪೋವೊಡೆ ಮಗಾ..
ಓ ನಾಲೊಕ್ಕೆಲ್ ಮಾನಿಯೆರೆನೆ ಲೆಪ್ಪಾಲೆ ಮಗಳೆ
ಓ ಉನಚ್ಚಿನೆ ಬಲ್ಮನೊ ಕೊರ್ಲಾಯಾ
ಓ ನಾಲೊಕ್ಕೆಲ್ ಮಾನಿಯೆರೆ ಲೆಪ್ಪಾಯಳ್ ಮಗಳ್



ಓ ಉನಚ್ಚಿನೆ ಬಲ್ಮನೊ ಕೊರ್ಪಾಯಳ್ ಮಗಳ್
ಓ ಅಪ್ಪೆರೆ ಅಪ್ಪರೇ ಮೀಯಿಲೇ ಅಪ್ಪೆರೆ
ಓ ಪೇರಗಂಜಿ ಪೀರೆನೆ ಮಲ್ಪುಲೇ
ಓ ಬೆಂದ್‌ರ ಕೊಟ್ಯಾಗ ಪೋಯಲೆ ಮಗಳ್
ಓ ಬೆಂದ್‌ರ್‌ಡ್ ಅಪ್ಪೆನೆ ಮೀಪಯಲ್
ಓ ಮೀಪಾವೊಂದು ತನ್ನರಮನೆಕ್ ಕೊಡ್ರುವಳ್
ಓ ಉಳಾಯಿ ಸೂತ್ರೊಗು ಪೋತಳೆ ಮಗಳ್
ಓ ಉನ್ಪುನೆ ಬಳ್‌ಸ್ಸ್‌ದ್ ಕೊರ್ಪಳಾ
ಓ ಪೇರ್‌ಡೆ ಉಂಡೆರ್ ನೀರ್‌ಡೆ ಕೈದೆಕ್ಕೆರ್ ಅಪ್ಪೆರ್
ಓ ತೂಕಿನ ಉಜ್ಜಲ್‌ಡ್ ಪೋತು ಕುಲ್ಯೆರಾ
ಓ ಪೆಟ್ಯೆಡ್ದ್ ಮೇಲಾಯಿ ಸೀರೆನೆ ದೆಪ್ಪುನಗ
ಓ ಕರಡ್ಡಿಗೆಡ್ದ್ ಮೇಲಾಯಿ ಪೆದ್ದಾಯಿ ದೆತ್ತ್‌ದ್
ಓ ಅಪ್ಪೆಂಡ ದಾರಕ್ಕು ಪೊಂಜೊವು ಪಂಡೆರೊ
ಓ ಸೀರೆನ ಬೆರೆಪಾಡ್ ಉತ್ಯೋರಪ್ಪ ಪೊಂಜೊವು
ಓ ಕುಂಟಿತ ರವಕೆ ಪಾಡ್ಯೇರಾ..
ಓ ಕಲ್ಲಾ ಕಲೆಂಬಿತ ಬಾಕಿಲೆ ದೆತ್ತೆರ್
ಓ ಪುದಕ್ಕೆದ ಸರಂಗ್‌ಡೆ ದುಡ್ಡುನೆ ನಾನ
ಓ ಒಡ್ಡಿ ಒಡ್ಡಿ ರೂಪಾಯಿನ್ ಕಟ್ಯೋರೊಯೊ..
ಓ ನಾಲ್ ಕೇರಿದ ಮಾನ್ಯೆರೆನ್ನ ಲೆತ್ತೊಂಡೇರೆ ಅಪ್ಪೆರ್
ಓ ಸುಬ್ರಹ್ಮಣ್ಯೋಗು ನನಬೇಗೊ ಬರುವೆರೊ
ಓ ಸುಬ್ರಹ್ಮಣ್ಯೋಗು ನನಬೇಗೂ ಬರುವೆರೊ ನಾನ
ಓ ಬತ್ತ್‌ದ್ ನನಂದೆ ಕುಲುಕುಂದ ಮಜಲ್‌ಗ್ ಜತ್ತೇರೆ
ಓ ದಾನೆನೆ ದಾವನೆಗೆದಾರ್ ಕೂಡವೊಂಜಿ ದಾವನೆ ಮುಟ್ಟ ಪೋಯೆರ್
ಓ ಆರೆಗ್ ಒತ್ತುಜಿ ಮಾನೊಗು ಒತ್ತುಜಿ
ಓ ನರಮಾನಿ ನನಾ ಸುಬ್ರಹ್ಮಣ್ಯದ ದೇವಸ್ಥಾನೊಗುಯೇ
ಓ ಸುಬ್ರಹ್ಮಣ್ಯ ದೇವಸ್ಥಾನೊಗು ಪೋಯೆರೆ ನನ
ಓ ದೇವರೆ ಒಟ್ಟುಗು ದೇವಬಲಿ ಬತ್ತೇರ್
ಓ ಗಂಧೊನೆ ಪುರುಸದೊ ಬೊಟ್ಟುನೇ ಪಾಡೊಂದು
ಓ ನಾನಾನೇ ಬೇಗೂನೆ ಬರುವೆರೊ


ಓ ಕುಲುಕುಂದೊದ ಮಜಲ್‌ಗ್ ಬತ್ತ್‌ದ್ ಎತ್ತೈರ್
ಓ ಆತೇನ ಪೊರ್ತು ನನೊಂಜಿ ಜವನೋಡು
ಓ ರಡ್ಡ್‌ನೆ ಗಾಡಿದ ಬೋರ್ಲು ಉಲ್ಲೊನ
ಓ ನಂಕ್‌ಲ ಒತ್ತುಂಡ್ ಮಾನೊಂಜಿ ಒತ್ತ್‌ಂಡ್
ಓ ಅಂದಾಯ ಅಂದಾಯ ಗಟ್ಟದ ಗೌಡ
ಓ ಎರ್ಲೇಗೆ ಕಿರಯೋ ಪನ್ಲ
ಓ ಬೀಂಪುಗು ಸಾವಿರ ವರನ್ ಕೊರೊಡು
ಓ ಎರ್ಲೇಗೆ ಮೂನ್ನೂದು ವರನ್ ಕೊರೊಡು
ಓ ಗಟ್ಟದ ಗೌಡನೆ ಪನ್ಪನೋಯ
ಓ ಎಲರ್ಲೆನೇ ದೆತ್ತ್‌ದ್ ಕಾಯರ್ತ್ತ್ ಬೇರ್‌ಗೆ ಕಟ್ಟಪಾಡ್‌ಯೆರ್
ಓ ಗಟ್ಟದ ಮಿತ್ತ್‌ಗ್ ಮಲೆಯಾಳ ಆಚಾರಿಗ್
ಓ ಓಲೆನೆ ಬರೆದ್ ಕಜಪುಡ್‌ಯೆರಾ..
ಓ ಉಂಡುನ ಉನ್ಪುಡು ಉತ್ತುನ ಕುಂಟುಡು
ಓ ಪೋಯಿಮಾನ್ಯ ಬೆರಿಪತ್ತ್ ಬರೊಡುಯೆ
ಓ ತುಳುನಾಡ ಆಚಾರಿಲ ಬಾಳುನಾಡ್ ಗೊಲ್ಲೆರ್‌ಲ
ಓ ಅಕ್‌ಲ್‌ಲ ಬರೊಡುಂದು ಓ ಲೆಡ್ ಒಕ್ಕಣೆ ಬರೆಯೆರೆ
ಓ ಓಲೆತ್ತ ಜೇವುನು ಲೆಪ್ಪಯೇರೆ ನಾನ
ಓ ಸೆರಂಗ್‌ಡ್ ಪಡೆಯರಿ ಕೈಟ್ ಓಲೆ ಕೊರುದು
ಓ ಬೇಗೊನೆ ನನಬೇಗೂ ಕಡಪುಡುಯೆರೊ

## ಕನ್ನಡ ಅನುವಾದ

ತಾಯಿ ದಾರಕ್ಕು ಮಗಳು ದೈಯಕ್ಕು
ಬಾಯಾಂತ ಗುತ್ತಿನಲ್ಲಿ ಇದ್ದಾರೆ
ಓ ಹೌದ ಮಗಳೇ ಕೇಳಿದ್ದಿಯ ನೀನು
ಓ ಸುಬ್ರಹ್ಮಣ್ಯ ಜಾತ್ರೆಗೆ ಹೋಗಬೇಕು ಮಗಳೆ
ಓ ಎತ್ತು ಕೂಡ ಗಾಡಿಯಾಗಬೇಕು ಗಾಡಿ ಕೂಡ ಎತ್ತು ಆಗಬೇಕು
ಓ ಸುಬ್ರಹ್ಮಣ್ಯ ಜಾತ್ರೆಗೆ ಹೋಗಬೇಕು ಮಗ
ಓ ನಾಲ್ಕು ಒಕ್ಕಲು ಮಂದಿಯನ್ನು ಕರೆಸು ಮಗಳೆ
ಓ ಊಟ ಉಪಚಾರವನ್ನು ಕೊಡು

ಓ ನಾಲ್ಕು ಒಕ್ಕಲು ಮಂದಿಯನ್ನು ಕರೆಯಿಸಿದಳು ಮಗಳು
ಓ ಊಟ ಉಪಚಾರಗಳನ್ನು ಕೊಡಿಸಿದಳು ಮಗಳು
ಓ ತಾಯೇ ತಾಯೇ ಸ್ನಾನಮಾಡಿ ತಾಯಿ
ಓ ಹಾಲಿನ ಗಂಜಿ ಪೀರೆಯನ್ನು ಮಾಡಿ
ಓ ಬಚ್ಚಲು ಮನೆಗೆ ಹೋದಳು ಮಗಳು
ಓ ಬಿಸಿ ನೀರಿನಲ್ಲಿ ತಾಯಿಯನ್ನು ಸ್ನಾನಮಾಡಿಸಿದಳು
ಓ ಸ್ನಾನ ಮಾಡಿಸಿ ತನ್ನರಮನೆಗೆ ಕರೆತರುತ್ತಾಳೆ
ಓ ಒಳಗಿನ ಸೂತ್ರಕ್ಕೆ ಹೋದಳು ಮಗಳು
ಓ ಊಟವನ್ನು ಬಡಿಸಿ ಕೊಡುತ್ತಾಳೆ
ಓ ಹಾಲಲ್ಲೆ ಉಂಡರು ನೀರಲ್ಲಿ ಕೈ ತೊಳೆದರು ತಾಯಿ
ಓ ತೂಗುವ ಉಯ್ಯಾಲೆಯಲ್ಲಿ ಹೋಗಿ ಕುಳಿತರು
ಓ ಪೆಟ್ಟಿಗೆಯಿಂದ ಮೇಲಾದ ಸೀರೆಯನ್ನು ತೆಗೆಯುವಾಗ
ಓ ಕರಡಿಗೆಯಿಂದ ಮೇಲಾದ ಬಂಗಾರವನ್ನು ತೆಗೆದು
ಓ ತಾಯಿ ದಾರಕ್ಕು ಹೆಂಗಸು ಹೇಳಿದರೊ
ಓ ಸೀರೆಯನ್ನು ಬೆನ್ನುಹಾಕಿ ಉಟ್ಟರು ಹೆಂಗಸು
ಓ ಸಣ್ಣ ರವಕೆ ಹಾಕಿದರು
ಓ ಕಲ್ಲಿನ ಪೆಟ್ಟಿಗೆಯ ಬಾಗಿಲು ತೆಗೆದರು
ಓ ಹೊದ್ದ ಸೆರಗಿನಲ್ಲಿ ಹಣವನ್ನು ಇನ್ನು
ಓ ಒಡ್ಡಿ ಒಡ್ಡಿ ರೂಪಾಯಿಯನ್ನು ಕಟ್ಟಿದರೊ
ಓ ನಾಲ್ಕು ಕೇರಿಯ ಮಂದಿಯನ್ನು ಕರೆದುಕೊಂಡರು ತಾಯಿ
ಓ ಸುಬ್ರಹ್ಮಣ್ಯಕ್ಕೆ ಇನ್ನು ಬೇಗ ಬಂದಾರೊ
ಓ ಸುಬ್ರಹ್ಮಣ್ಯಕ್ಕೆ ಇನ್ನು ಬೇಗ ಬಂದಾರೊ ಇನ್ನೂ
ಓ ಬಂದು ಇನ್ನು ಕುಲುಕುಂದ ಮಜಲಿಗೆ ಇಳಿದರು
ಓ ಏನು ದಾವನೆಗೆಯವರು ಇನ್ನೊಂದು ದಾವನೆವರೆಗೆ ಹೋದರು
ಓ ಅವರಿಗೆ ಒಪ್ಪಿಗೆ ಆಗಲಿಲ್ಲ ಮನಸ್ಸಿಗೆ ಒಪ್ಪಿಗೆಯಾಗಲಿಲ್ಲ
ಓ ಮನುಷ್ಯರು ಇನ್ನು ಸುಬ್ರಹ್ಮಣ್ಯ ದೇವಾಸ್ಥಾನಕ್ಕಾಗೆ
ಓ ಸುಬ್ರಹ್ಮಣ್ಯ ದೇವಾಸ್ಥಾನಕ್ಕೆ ಹೋದರು ಇನ್ನು
ಓ ದೇವರ ಜೊತೆಯಲ್ಲಿ ದೇವಬಲಿ ಬಂದರು
ಓ ಗಂಧ ಪ್ರಸಾದ ಬೊಟ್ಟನ್ನು ಹಾಕಿಕೊಂಡು

ಓ ಇನ್ನು ಬೇಗಾನೆ ಬರುವರೋ
ಓ ಕುಲುಕುಂದದ ಮಜಲಿಗೆ ಬಂದು ತಲುಪಿದರು
ಓ ಅಷ್ಟು ಹೊತ್ತಿಗೆ ಇನ್ನೊಂದು ಕಡೆಯಲ್ಲಿ
ಓ ಎರಡು ಗಾಡಿಯ ಎತ್ತುಗಳು ಇವೆ.
ಓ ನಮಗೆ ಒಪ್ಪಿಗೆಯಾಯಿತು ಮನಸ್ಸಿಗೂ ಒಪ್ಪಿಗೆಯಾಯಿತು
ಓ ಹೌದ ಹೌದಾ ಘಟ್ಟದ ಗೌಡ
ಓ ಎತ್ತಿಗೆ ಕ್ರಯವನ್ನು ಹೇಳು
ಓ ಬಾಲಕ್ಕೆ ಸಾವಿರ ವರಹವನ್ನು ಕೊಡಬೇಕು
ಓ ಎತ್ತಿಗೆ ಮುನ್ನೂರು ವರಹವನ್ನು ಕೊಡಬೇಕೆಂದು
ಓ ಘಟ್ಟದ ಗೌಡ ಹೇಳಿದನೊ
ಓ ಎತ್ತುಗಳನ್ನು ತೆಗೆದು ಕಾಸರಕನ ಬೇರಿಗೆ ಕಟ್ಟಿ ಹಾಕಿದರು
ಓ ಘಟ್ಟದ ಮೇಲಿನ ಮಲೆಯಾಳಿ ಆಚಾರಿಗೆ
ಓ ಓಲೆಯನ್ನು ಬರೆದು ಕಳುಹಿಸಿದರು
ಓ ಉಂಡ ಊಟದಲ್ಲಿ ಉಟ್ಟ ಬಟ್ಟೆಯಲ್ಲಿ
ಓ ಹೋದ ಮಂದಿಯ ಬೆನ್ನು ಹಿಡಿದು ಬರಬೇಕು
ಓ ತುಳುನಾಡ ಆಚಾರಿ ಬಾಳುನಾಡ ಗೊಲ್ಲರು
ಓ ಅವರೂ ಬರಬೇಕೆಂದು ಓಲೆಯಲ್ಲಿ ಒಕ್ಕಣೆ ಬರೆದರು
ಓ ಓಲೆಕಾರನನ್ನು ಕರೆಯಿಸಿದರು ಇನ್ನು
ಓ ಸೆರಗಿನಲ್ಲಿ ಪಡಿ ಅಕ್ಕಿ ಕೈಯಲ್ಲಿ ಓಲೆ ಕೊಟ್ಟು
ಓ ಬೇಗನೆ ಇನ್ನು ಬೇಗ ಕಳುಹಿಸಿದರೊ



## ಕಾಡ್ಯನ ಹುಟ್ಟು (ಕನ್ನಡ ಮೇರರ ಕಾವ್ಯ)

ಹೊಯ ಹೊಯ್ಯುವಂಗೆ ಮೆಲು ಮೆಲು ಗಿನ್ನಾ
ಹೊಯ ಹೊಯ್ಯುವಂಗೆ ಮೆಲು ಮೆಲು ಗಿನ್ನಾ
ಕಾಡಾಗ್ ಹುಟ್ಟುವಳವ್ವು ಕಣರನ್ನೋಲುವಳು
ಊರಾಗ್ ಹುಟ್ಟುವಳವ್ವು ಊರವ್ರನ್ನೋಲುವಳು
ಕಾಡರಬ್ಬೆಯ ಮಗಳು ಬ್ಯಾಡರಬ್ಬೆಲವ್ವು
ಬ್ಯಾಡರಬ್ಬಿಯ ಮಗಳು ಮ್ಯಾರರ್ ಹೊನ್ನಿಲವ್ವು
ಲಗಳಿ ಕಂಡಳೆಲವ್ವು ಮ್ಯಾರರ ಹೊನ್ನಿ
ಹೆಣ್ಣು ಹೋಗಿ ಹೆಂಗುಸು ಅದಳೆಲವ್ವು
ಸೋಮವಾರ ಹೆಂಗಸು ಆದಳೆಲವ್ವು
ಗಾಳಿ ದೇವರ ಸಂಗವಾದುವಾಲೆ
ಮೂರು ದಿನದ ಮುಟ್ಟು ಬಂದುವಾಲೆ
ಆ ನೀರು ನಿತ್ತು ಈಗ ಬಸ್ರು ಬಂದುವಾಲೆ
ಒಂದೆ ಬಸ್ರಿಗೆ ಏಳ್ಮಂದಿ ಮಕ್ಕಳನ್ನ ಹಡಿದಾಳೆ
ಅರ್ಗಾಲೊ ಬರ್ಗಾಲೊ ಎಲ್ಲ ಬಂದುವಾಲೆ
ಹೊನ್ನಿಗೆ ಬರ್ಗಾಲೊ ಎಲ್ಲ ಬಂದುವಾಲೆ
ಉಂಬಲ್ಲ್ ಅನ್ನೊ ಉಡುವಲ್ಲ್ ವಸ್ತ್ರೊ ಇಲ್ಲುವಾಲೆ
ಈಗ ಬರ್ಗಾಲ್ದ ಕಾಲ್ದಲ್ಲ್ ಏಳ್ಮಂದಿ ಹುಟ್ಟುವಾರೆ
ಲಗಳಿ ಕಂಡಳೆಲವ್ವು ಮ್ಯಾರರ ಹೊನ್ನಿ
ಒಡಿಯರ ಮನಿಗಾಗಿ ತಾನು ಓಡಿದಾಳು
ಈಗ ಒಡಿಯರ ಮನಿಯಲ್ಲಿ ತಾನು ನೆಡಿದಾಳು
ಕೇಳು ಕೇಳ್ಯಯ್ಯ ನೀವು ಒಡಿಯರೆ
ನಾನೊಂದು ಸೊಕ್ಕಿಯೆ ನಿಮ್ಮ ಬಳಿ ಬಂದಿ
ಲಗಳಿ ಕಂಡರೆಲವ್ವು ಒಡಿಯಾರು

ಸೊಕ್ಕಿಂದೆ ಬಂದಾರು ನಿನ್ನ ಸಿಕ್ಕಿಂದೆ ಕಳುಹುವೆ
ಸಿಕ್ಕಿಂದೆ ಬಂದಾರು ನಿನ್ನ ಸೊಕ್ಕಿಂದೆ ಕಳುಹುವೆ
ಕೇಳಿ ಕೇಳ್ಯಯ್ಯ ನೀವು ಒಡಿಯರೆ
ಏಳ್ ಮಂದಿ ಬರ್‌ಗಾಲ್ದ ಕಾಲ್ದಲ್ಲಿ ನನ್ಗೆ ಹುಟ್ಟುವಾರು
ಉಂಬಲ್‌ಲ್ಲ ಅನ್ನೊ ಉಡುವಲ್‌ಲ್ಲ ವಸ್ತ್ರ ಇಲ್ಲಿಯಾಲೆ
ಕಡುಕಡು ದುಕ್ಕವ ಮಾಡುವಳೊ ಅವ್ಳು
ಕಣನೀರಾನೆ ಹೊನ್ನಿ ಸೆಡುವಳೊ
ಲಗಳಿ ಕಂಡರೆಲವ್ರು ಧನಿಗಳು
ಕೇಳು ಕೇಳ್ಯಯ್ಯ ನೀನು ಮ್ಯಾರರ ಹೊನ್ನಿ
ಮನಿಮುಂದಿನ ಮಲಗೆದ್ದಿ ನಿನಗೆ ಉಂಬುಳಿಯೊ
ಬಡಗಾನ ತೊರಿಯಲಿ ಅಂವ ಬಳಿಗಾರ
ಬಳಿಗಾರ್ನ ಅಂಗುಡಿಯು ನಿನಗೆ ಉಂಬಳಿಯೊ
ತೆಂಕಾನ ತೊರಿಯಲಿ ಅಂವ ಕಂಚುಗಾರ
ಕಂಚುಗಾರ್ನ ಅಂಗುಡಿಯು ನಿನಗೆ ಉಂಬುಳಿಯೊ
ಮೂಡಾನ ತೊರಿಯಲಿ ಅಂವ ಮುಗಿಲರ
ಮುಗಿಲರ್ನ ಅಂಗುಡಿಯು ನಿನಗೆ ಉಂಬುಳಿಯೊ
ಪಡುವಾನ ತೊರಿಯಲಿ ಅಂವ ಗಾಣದಂವ
ಗಾಣ್ದರನ ಅಂಗುಡಿಯು ನಿನಗೆ ಉಂಬುಳಿಯೊ
ಹೊನ್ನಿಗೆ ಉಂಬಳಿನೆಲ್ಲ ಕೊಟ್ಟುರಾಲೆ
ಚಕ್ರಕೆ ಒಕ್ಕುಳಬಾರ ಕೊಂಡುಳಾಲೆ
ತನ್ನಾರಮನಿಗಾಗಿ ತಾನು ಸೌಂನುವಾಗ
ಮಾಯದ ಮಳಿಗಾಳಿ ಎಲ್ಲ ಬಂದುವಾಲೆ
ಕಾಲ್‌ಹೊಳಿಯೆ ಹೋಗಿ ದೋಣಿಹೊಳಿ ಆದುವಾಲೆ
ಲಗಳಿ ಕಂಡಳೆಲವ್ಳು ಮ್ಯಾರರ ಹೊನ್ನಿ
ಮಾಯದ ಮಳಿಗಾಳಿ ಎಲ್ಲ ಬಂದುವಾಲೆ
ಜೋಗಾಳ್ದ ಕೆರಿ ಬಾಮಿ ಎಲ್ಲ ತುಂಬುವಾದೆ
ಲಗಳಿ ಕಂಡಳೆಲವ್ಳು ಮ್ಯಾರರ ಹೊನ್ನಿ
ನಾನು ಒಂದೆ ತಾಯ್ತುಂದೆಗ್ ಹುಟ್ಟಿದ್ದ್ ಹೌದಾದ್ರೆ
ಮಾಯದ ಮಳಿಗಾಳಿ ಎಲ್ಲ ಹಾರಿಹೋಯ್ಕೊ

ದೋಣಿ ಹೊಳಿಯೆ ಹೋಗಿ ಕಾಲ್ ಹೊಳಿ ಆಯ್ಕೊ
ಮಾಯದ ಮಳಿಗಾಳಿ ಎಲ್ಲ ಹಾರಿ ಹೋದೊ
ಜೋಗಾಳ್ದ ಕೆರಿಬಾಮಿ ಎಲ್ಲಾ ಆರಿ ಹೋದೊ
ದೋಣಿ ಹೊಳಿಯೆ ಹೋಗಿ ಕಾಲ್‌ಹೊಳಿಯಾದೊ
ಲಗಳಿ ಕಂಡಳೆಲವ್ವ ಮ್ಯಾರರ ಹೊನ್ನಿ
ತನ್ನಾರಮನಿಗಾಗಿ ತಾನು ಬಂದುಳಾಲೆ
ಚಕ್ರಕೆ ಒಕ್ಕುಳಬಾರ ತಂದುಳಾಲೆ
ಸುವ್ವಾಲೆ ಸೊಪ್ಪಾಲೆ ಎಂದು ಕುಟ್ಟುವಾಳು
ಬೆವ್ವಾಲೆ ಬೆಪ್ಪಾಲೆ ಎಂದು ಗೆರುವಾಳು
ತೆಂಗ್ ತೆಳ್‌ಗಂಜಿ ಮಾಡುವಾಳೊ
ಏಳ್ ಹೊಂಡುವಾದರು ಹೊನ್ನಿ ತೆಗುವಾಳೊ
ತೆಂಗ್ ತೆಳ್‌ಗಂಜಿ ಏಳ್ ಹೊಂಡುಕೆ ಎರುವಾಳೊ
ಈಗ ಏಳ್‌ಜನು ಮಕ್ಕುಳೆಲ್ಲ ಉಂಡು ಎದ್ದುರಾಲೆ
ಹೊನ್ನಿ ಏಳ್ ಹೊಂಡುನಾದರು ತಾನು ನೆಕ್ಕುವಾಳೊ
ಕೂತು ಯೇಚನಿ ತಾನು ಮಾಡುವಾಳೆ
ನಿತ್ತು ಯೋಚನಿ ತಾನು ಮಾಡುವಾಳೆ
ಹಾಗಂದೆ ಕೂತರೆ ನನ್ನ ಕಾಲ ಕಳಿಯ
ಹೀಗಂದೆ ನಿತ್ತರೆ ನನ್ನ ವ್ಯಾಳಿ ಹೋಗ
ಕೂತು ಯೇಚನಿ ತಾನು ಮಾಡಿದಾಳು
ನಿತ್ತು ಯೇಚನಿ ತಾನು ಮಾಡಿದಾಳು
ಹಣರ್ನ ಮನಿಗಾಗಿ ತಾನು ನಡಿದಾಳು
ಲಗಳಿ ಕಂಡಳೆಲವ್ವ ಮ್ಯಾರರ ಹೊನ್ನಿ
ಹೊನ್ನಿ ಹಣರ ಹಣರ ಎಂದು ಕರೆದಾಳು
ಎರಡು ಕರೀಗೆ ಯಾರೆಂದು ಕೇಳಲಿಲ್ಲೆ
ಮೂರು ಕರೀಗೆ ಯಾರೆಂದು ಕೇಂಡುನಾಲೆ
ಕೇಳು ಕೇಳ್ಯಯ್ಯ ನೀನು ಹಣರನ ಮಗನೆ
ಒಂದೇ ಕಾಸಿಗೆ ಒಂದೇ ಹಣುತಕ್ಕೆ ನೀನು
ಏಳ್ ಜೋಡು ಜೋಡಣಿಯನು ಹಣ್ದ್ ಕೊಡ್ಕು
ಅಕ್ಕಾಲಿ ಎಂದಾನೆಲಂವ ಹಣರನ ಮಗ

ಒಂದೇ ಕಾಸಿಗೆ ಒಂದೇ ಹಣುತಕ್ಕೆನಂವ
ಏಳ್ ಜೋಡು ಜೋಡಣೆಯನು ಹಣ್ಣುಕೊಟ್ಟಲಂವ
ಕೀಳ್ ಕಡು ಕೀಳ್‌ಕತ್ತಿ ಹಣ್ದ್ ಕೊಟ್ಟ
ಬೇರ್ ಕಡು ಬೇರ್‌ಮಚ್ಚ್ ಹಣ್ದ್ ಕೊಟ್ಟ
ಮಣ್ಣ್ ಕಡು ಬಂಗಾರ್‌ಹಾರಿ ಹಣ್ದ್ ಕೊಟ್ಟ
ಕಲ್ಲ್ ಕಡು ಕಲ್ಲ್‌ಮಚ್ಚ್ ಹಣ್ದ್ ಕೊಟ್ಟ
ಏಳ್ ಜೋಡು ಜೋಡಣೆಯನು ಹಣ್ದ್ ಕೊಟ್ಟ
ಜೋಡು ಜೋಡಣೆ ಕರೂದಿಯ ಕೊಟ್ಟುಳಾಲೆ
ಹೊನ್ನಿ ತನ್ನಾರಮನಿಗಾಗಿ ತಾನು ಬಂದುಳಾಲೆ
ಲಗಳಿ ಕಂಡಳೆಲವ್ವು ಮ್ಯಾರರ ಹೊನ್ನಿ
ಕೂತು ಯೇಚನಿ ತಾನು ಮಾಡುವಳು
ನಿತ್ತು ಯೋಚನಿ ತಾನು ಮಾಡುವಳು
ಹೊನ್ನಿ ಏಳ್ ಜೋಡು ಜೋಡಣಿ ತೆಕ್ಕಂಡಾಳು
ಹೊನ್ನಿ ಗೆಣ್ಸಿನ ಹೊಲಕೆ ತಾನು ನಡಿದಾಳು
ಕಾಡ ಗೆಣ್ಸನು ತಾನು ಅರ್ರುವಾಳು
ಗೆಣ್ಸಿನ ಹೊಲಕೆ ಅವ್ವು ಹೋದುಳಾಲೆ
ಅವ್ವು ಮೂಡಣ ಮಲ್ಪತ್ತಿಗೆ ಹೋದುಳಾಲೆ
ಗೆಣ್ಸಿನ ಬೀಳೆಂಬುದೆಲ್ಲ ಕಂಡುಳಾಲೆ
ಕೀಳ್ ಕಡು ಕೀಳ್‌ಕತ್ತಿ ತೆಗಿದಾಳೆ ಹೊನ್ನಿ
ಕೀಳ್ ಕಡ್ದ್ ದಿಡುಕೊಮ್ಮೆ ಒತ್ತುವಾಳೊ
ಮಣ್ಣ್ ಕಡು ಬಂಗಾರ್‌ಹಾರಿ ತೆಗುವಾಳೊ
ಮಣ್ಣ್ ಕಡ್ದ್ ದಿಡುಕೊಮ್ಮೆ ಒತ್ತುವಾಳು
ಕುದುರಿ ನೀಟಾದ ಬೇರು ಬಂದುವಾಲೆ
ಬೇರ್ ಕಡು ಬೇರ್‌ಮಚ್ಚ್ ತೆಗಿದಾಳೆ
ಬೇರ್ ಕಡ್ದೆ ದಿಡುಕೊಮ್ಮೆ ಒತ್ತುವಾಳು
ಆನೆ ತಾರಾದ ಕಲ್ಲು ಬಂದುವಾಲೆ
ಕಲ್ಲ್ ಕಡು ಕಲ್ಲ್‌ಮಚ್ಚ ತೆಗಿದಾಳೆ
ಕಲ್ಲ್ ಕಡ್ದೆ ದಿಡುಕೊಮ್ಮೆ ಒತ್ತುವಾಳು
ಅಡಗಲ್ಲ್ ತಾಡಗಲ್ಲ್ ಬಂದುವಾಲೆ

ಮೂರ್ತಕೆ ಮೂರ್ ಹಾರಿ ಅವ್ಳು ಕಡಿದಾಳೆ
ಹೊನ್ನ ಕಳಸ ಚಿನ್ನ ಕಳಸ ಬಂದುವಾಲೆ
ಮತ್ತೊಂದು ಹಾರಿ ತೆಗುದಾಳೊ ಹೊನ್ನಿ
ಮಣ್ಣ ಕಳಸ ಎಂಬುದೀಗ ಬಂದುವಾಲೆ
ಒಡಿಯರ ಮನಿಗಾಗಿ ತಾನು ಓಡಿದಾಳು
ಒಡಿಯಾರೆ ಒಡಿಯಾರೆ ಅಂದು ಕರೆದಾಳು
ಏನು ಬಂದೆ ಎಂತು ಬಂದೆ ಅಂದುರಾಲೆ
ಕೇಳಿ ಕೇಳ್ಯಯ್ಯ ನೀವು ಧನಿಗಳೆ
ಗೆಣ್ಸಿನ ಹೊಲಕೆ ನಾನು ಹೊಗುತಿದ್ದೆ
ಕಾಡಗೆಣ್ಸಿನ ನಾನು ಹಯ್ದುತಿದ್ದೆ
ಅಡಗಲ್ಲ ತಾಡಗಲ್ಲ ಬಂದುವಾಲೆ
ಹೊನ್ನ ಕಳಸ ಚಿನ್ನ ಕಳಸ ಬಂದುವಾಲೆ
ಮಣ್ಣು ಕಳಸ ಎಂಬುದೀಗ ಬಂದುವಾಲೆ
ಲಗಳಿ ಕಂಡರೆಲವ್ಳು ಧನಿಗಳು
ಕೇಳು ಕೇಳಯ್ಯ ನೀನು ಮ್ಯಾರರ ಹೊನ್ನಿ
ಅಡಿಗರ ಮನಿಗಾಗಿ ನೀನು ಹೊಗುಲೆಬೇಕು
ಅಡಿಗರ ಕೈಲೀಗ ಹೇಳುಬೇಕು
ಲಗಳಿ ಕಂಡಳೆಲವ್ಳು ಮ್ಯಾರರ ಹೊನ್ನಿ
ಗೆಣ್ಸಿನ ಹೊಲಕೆ ನಾನು ಹೋದುನಲೆ ಅಡಿಗರೆ
ಕಾಡ ಗೆಣ್ಸನು ನಾನು ಹಯ್ದುತಿದ್ದಿ ಅಡಿಗಳೆ
ಅಡಗಲ್ಲ ತಾಡಗಲ್ಲ ಬಂದುವಾಲೆ
ಹೊನ್ನ ಕಳಸ ಚಿನ್ನ ಕಳಸ ಬಂದುವಾಲೆ
ಮಣ್ಣ ಕಳಸ ಎಂಬುದೀಗ ಸಿಕ್ಕಿದ್ವಾಲೆ
ಲಗಳಿ ಕಂಡರೆಲವ್ರು ಅಡಿಗಳು
ಹೊನ್ನಿ ಮುಂದೆ ಅಡಿಗಳ್ ಹಿಂದೆ ಹೊಯ್ಟುರಾಲೆ
ಲಗಳಿ ಕಂಡಳೆಲವ್ಳು ಮ್ಯಾರರ ಹೊನ್ನಿ
ತನ್ನಲಿ ಒಡಿಯರನೀಗ ಕೂಡಿಕೊಂಡು
ಗೆಣ್ಸಿನ ಹೊಲುಕೆ ಈಗ ಹೊದುರಾಲೆ
ಕಾಡ ಗೆಣ್ಸನೀಗ ಕಂಡುರಾಲೆ

ಚಿನ್ನ ಕಳಸ ಹೊನ್ನ ಕಳಸ ಕಂಡುರಾಲೆ
ಚಿನ್ನ ಕಳಸದ ನಾಗ ತನಗೆಂದಾರು ಅಡಿಗಳು
ಹೊನ್ನ ಕಳಸದ ಸ್ವಾಮಿ ತನಗೆಂದಾರು ಒಡಿಯರು
ಮಣ್ಣು ಕಳಸದ ಕಾಡ್ಯ ತನಗೆಂದಾಳು ಮ್ಯಾರರ ಹೊನ್ನಿ
ಮನಿ ಮುಂದಿನ ಮಲುಗೆದ್ದಿ ಕಂಡುಳಾಲೆ
ಹೊಸಗೆದ್ದಿ ತಡಿಯಲ್ಲಿ ಹೊಸ ಬಲ್ಲಿಯಾಲೆ
ಹೊಸಗೆದ್ದಿ ಬಲ್ಲಿಯಾಲಿ ಕಳಸ ಇರುಮಾಡುವಳು
ಒಡಿಯರು ಮನಿ ಮುಂದೆ ಸ್ವಾಮಿಯ ಇರು ಮಾಡುವರು
ಅಡಿಗಳು ನಾಗದೇವತೆನ ಅಸ್ವಂತ ಕಟ್ಟೀಲಿ ಇರುಮಾಡುವರು
ಮಂಡ್ಲ ಎಂಬುದೆಲ್ಲ ನಾಗದೇವತಿಗೆ
ಪಾಣರ ಅಣಿಯೆಂಬದೀಗ ಸ್ವಾಮಿಗಾಲೆ
ಕಾಡ್ಯನ ಆಟವೆಂಬದು ಮ್ಯಾರರಿಗೆ
ಕೇಳು ಕೇಳ್ಯಯ್ಯ ನೀವು ಒಡಿಯರೆ ನೀವು
ಕಾಡ್ಯನ ಆಟಗಳೆಂಬುದ ಆಡಬೇಕೊ ನಾನು
ಕೇಳು ಕೇಳ್ಯಯ್ಯ ನೀನು ಮ್ಯಾರರ ಹೊನ್ನಿ
ಕಾಡ್ಯನ ಆಟಗಳೆಲ್ಲ ಮಾಡಬೇಕೊ ನೀನು
ಕೇಳು ಕೇಳ್ಯಯ್ಯ ನೀವು ಒಡಿಯರೆ
ಕೇಳು ಕೇಳ್ಯಯ್ಯ ನೀವು ಧನಿಗಳೆ
ಕಾಡ್ಯನ ಆಟಗಳೆಲ್ಲ ಈಗ ಯಾರು ಬಲ್ಲರೊ
ಕೇಳು ಕೇಳ್ಯಯ್ಯ ನೀನು ಮ್ಯಾರರ ಹೊನ್ನಿ
ಬಡಗಾನ ತೊರಿಯಲ್ಲಿಲಂವ ಅಜ್ಜ ಬೈದ್ಯ
ಅಜ್ಜ ಬೈದ್ಯನ ಕೈಲಿ ಹೋಗಿ ಕೇಳು ಹೊನ್ನಿ
ಅದ್ಕ್ ಆಪ ಬಣ್ಣಾಣಿ ಎಲ್ಲ ಅಂವ ಬಲ್ಲ
ಲಗಳಿ ಕಂಡಳೆಲವ್ವು ಮ್ಯಾರರ ಹೊನ್ನಿ
ಬಡಗಾನ ತೊರಿಗಾಗಿ ಅವ್ವು ಹೋದುಳಾಲೆ
ಅಜ್ಜ ಬೈದ್ಯನ ಕೈಲಿ ಹೋಗಿ ಹೇಳುವಾಳೊ
ಕೇಳು ಕೇಳ್ಯಯ್ಯ ನೀನು ಅಜ್ಜ ಬೈದ್ಯ
ನನ್ನಲ್ಲಿ ನೀನೀಗ ಬರಬೇಕು
ಕಾಡ್ಯನ ಆಟಗಳೆಲ್ಲ ಮಾಡಬೇಕೊ

ಧನಿಗಳ ಕೈಲೀಗ ನೀನು ಹೇಳಬೇಕೊ
ಲಗಳಿ ಕಂಡನೆಲಂವ ಅಜ್ಜ ಬೈದ್ಯ
ಹೊನ್ನಿ ಮುಂದೆ ಅಜ್ಜ ಹಿಂದೆ ಬಂದುರಾಲೆ
ಧನಿಗಳ ಮನಿಗಾಗಿ ಬಂದುರಾಲೆ
ಕೇಳು ಕೇಳ್ಯಯ್ಯ ನೀವು ಧನಿಗಳೆ
ಏನು ಕಾರಣದಿಂದ ಕರುದೀರಿ ನನ್ನ
ಎಂತು ಕಾರಣದಿಂದ ಕರುದೀರಿ ನನ್ನ
ಕೇಳು ಕೇಳ್ಯಯ್ಯ ನೀನು ಅಜ್ಜ ಬೈದ್ಯ
ಕಾಡ್ಯನ ಆಟಗಳೆಲ್ಲ ಆಡಬೇಕೊ
ಅದ್ಕ್ ಆಪ ಬಣ್ಣಾಣಿ ಎಲ್ಲ ಹೇಳಬೇಕೊ
ಅದ್ಕ್ ಆಪ ಸಾಯತ ಎಲ್ಲ ಹೇಳಬೇಕೊ
ಅದ್ಕ್ ಆಪ ಸಾಯತ ಎಲ್ಲ ಹೇಳಬೇಕೊ
ಕೇಳು ಕೇಳ್ಯಯ್ಯ ನೀವು ಒಡಿಯಾರೆ
ಏಳ್ ವರಹ ಏಳ್ಮುಡಿ ಅಕ್ಕಿ ಆಗಬೇಕೊ
ಮೂರೆ ದಿನದ ಆಟ ಆಡಬೇಕೊ
ಲಗಳಿ ಕಂಡರೆಲವ್ರು ಒಡಿಯಾರು
ಏಳ್ ವರಹ ಏಳ್ಮುಡಿ ಅಕ್ಕಿ ಕೊಟ್ಟುರಾಲೆ
ಲಗಳಿ ಕಂಡನೆಲಂವ ಅಜ್ಜ ಬೈದ್ಯ
ಏಲ್ ವರಹ ಏಳ್ಮುಡಿ ಅಕ್ಕಿ ತಕಂಡುನಾಲೆ
ತನ್ನಾರಮನಿಗಾಗಿ ತಾನು ಬಂದುನಾಲೆ
ಲಗಳಿ ಕಂಡಳೆಲವ್ವು ಮ್ಯಾರರ ಹೊನ್ನಿ
ತನ್ನಾರಮನಿಗಾಗಿ ತಾನು ಬಂದುಳಾಲೆ
ಜಾತಿ ಕಟ್ಟನು ಈಗ ಕೂಡಿದಾಳು ಅವ್ವು
ನೆಂಟರಿಷ್ಟರನೆಲ್ಲ ಕೂಡಿಕೊಂಡುಳಾಲೆ
ಆಟಕೆ ದಿನವೆಂಬುದೆಲ್ಲ ಇಟ್ಟುಳಾಲೆ
ಶನಿವಾರ ದಿನದಲ್ಲೆ ಮೂರ್ತ ಇಟ್ಟುಳಾಲೆ
ಲಗಳಿ ಕಂಡರೆಲಂವ ಅಜ್ಜ ಬೈದ್ಯ
ಎಂಟು ದಿವ್ಸದ ಚೌತ ಬಿದ್ದುರಾಲೆ ಅವ್ರು
ಮೇಲ್ಬರು ಶನಿವಾರ ಗೂಡೆಂಬುದೆಲ್ಲ ಹೊಗಬೇಕೊ

ಲಗಳಿ ಕಂಡನೆಲಂವ ಅಜ್ಜ ಬೈದ್ಯ
ಕಾಡ್ಯನ ಪೂಜಗಳೆಲ್ಲ ಮಾಡಿದಾನೊ
ಆಯಿತ್ಯವಾರ ದಿನದಲ್ಲೆ ಕಂಬಿನ್ ಮೂರ್ತುವಾಲೆ
ಆಯಿತ್ಯವಾರ ದಿನದಲ್ಲೆ ಈಗ ಅರ್ಧ ಮಂಡ್ಲವಾಲೆ
ಬೈದ್ಯ ಮಂಡ್ಲಕೆ ವೀಳ್ಯವನೆಲ್ಲ ಹಚ್ಚಿದಾನು
ನಾಲೂಕು ತೊರಿಯ ದೇವುರುಗಳನೆಲ್ಲ
ಮಂಡ್ಲಕೆ ಈಗ ಕರಿದಾನು
ಮಂಡ್ಲದ ಪೂಜವನೆಲ್ಲ ಮಾಡುವಾನು
ಲಗಳಿ ಕಂಡನೆಲಂವ ಅಜ್ಜ ಬೈದ್ಯ
ಹಾಂಡರ ಮನಿಗಾಗಿ ನಡಿದಾನುಲಂವ
ಹೊನ್ನ ಕಳಸಗಳನೆಲ್ಲ ತಂದಾನು
ಹೊನ್ನ ಕಳಸದ ಪೂಜ ಮಾಡುವಾನು
ಲಗಳಿ ಕಂಡಲಲಂವ ಅಜ್ಜ ಬೈದ್ಯ
ದಾಸ್ರ ಕೋಲ ಕೊರ್ರ ಕೋಲ ಮಾಡುವಾನು
ಸೋಮಾರ ದಿನದಲ್ಲಿ ಕೋಲ ಮಾಡುವಾನು
ಸೋಮಾರ ಸೈಂಕಾಲ ಈಗ ಅಜ್ಜ ಬೈದ್ಯ
ದೊಡ್ಡ ಮಂಡ್ಲವೆಂಬುದನೀಗ ಬರಿದಾನು
ಮಂಡ್ಲಕೆ ವೀಳ್ಯಗಳನೆಲ್ಲ ಹಚ್ಚುವಾನು
ನಾಲೂಕು ದೇಶದ ದೈಯುಗಳನೆಲ್ಲ
ಮಂಡ್ಲಕೆ ತಾನು ಕರಿದಾನು
ಲಗಳಿ ಕಂಡಳೆಲವ್ವು ಮ್ಯಾರರ ಹೊನ್ನಿ
ಹೈಟ್ ಮಂಡಿ ಗುಂಯ್ಟ್ ಕಟ್ಟುವಾಳು
ತಲಿಗೆ ಹೂಗಳನೆಲ್ಲ ಮುಡುವಾಳು
ಹೊನ್ನಿ ಸಿಂಗಾರವೆಂಬುದೆಲ್ಲ ಮಾಡಿದಾಳು
ಹೊನ್ನ ಕಳಸವೆಂಬುದೀಗ ಹೊತ್ತುಳಾಲೆ
ಲಗಳಿ ಕಂಡನೆಲಂವ ಅಜ್ಜ ಬೈದ್ಯ
ಕೇಳು ಕೇಳಯ್ಯ ನೀನು ಮ್ಯಾರರ ಹೊನ್ನಿ
ಹೊನ್ನ ಕಳಸ ಹೊತ್ಕಂಡ್ ಬಾರೊ ಹೊನ್ನಿ
ಮಂಡ್ಲದಲ್ಲಿ ನೀನು ಬಂದು ನಿಲ್ಲು ಹೊನ್ನಿ

ಲಗಳಿ ಕಂಡರೆನಂವ ಅಜ್ಜ ಬೈದ್ಯ
ಹೊನ್ನ ಕಳಸಕೆ ಪೂಜನೆಲ್ಲ ಮಾಡುವಾನು
ಲಗಳಿ ಕಂಡಳೆಲವ್ಪು ಮ್ಯಾರರ ಹೊನ್ನಿ
ಹೊನ್ನ ಕಳಸವೆಂಬುದೀಗ ಇರು ಮಾಡುವರುತಿ
ಮಂಗ್ಳಾರ ದಿನದಲ್ಲಿ ಈಗ ಅಜ್ಜ ಬೈದ್ಯ
ಡಕ್ಕಿಯಬಲಿ ಎಂಬುದೆಲ್ಲ ಮಾಡುವಾನು
ಹುಲಿ ಹಂದಿಯ ಕೋಲ ಮಾಡುವಾನು
ಲಗಳಿ ಕಂಡರೆನಂವ ಅಜ್ಜ ಬೈದ್ಯ
ಮಂಗ್ಳಾರ ಸೈಂಕಾಲ ಈಗ ಅಜ್ಜ ಬೈದ್ಯ
ಜಕ್ಕಿಯರನೆಲ್ಲ ಕುಣಿಸುವಾನೊ
ಕುದುರಿ ಕೋಲಗಳನ್ನೆಲ್ಲ ಮಾಡುವಾನೊ
ಲಗಳಿ ಕಂಡರೆಲಂವ ಅಜ್ಜ ಬೈದ್ಯ
ಗಂಗೆ ಸಾನವ ಮಾಡಬೇಕು ಈಗ
ಹೊನ್ನ ಕಳಸಕೆ ಸಾನ ಆಗಬೇಕು
ಲಗಳಿ ಕಂಡರೆಲಂವ ಅಜ್ಜ ಬೈದ್ಯ
ಗಂಗೆ ಸಾನಕೆ ಅಂವ ಹೊರಟಾನು
ಹೊನ್ನ ಕಳಸವನೆಲ್ಲ ಕೂಡಿಕೊಂಡು
ಕುದುರೆ ಸಾರೋಟನೆಲ್ಲ ಕೂಡಿಕೊಂಡು
ಈಗ ಗಂಗೆ ಸಾನಕೆ ಅಂವ ಹೊರಟಾನು
ಗಂಗೆ ಸಾನವನೆಲ್ಲ ಮಾಡಿಕೊಂಡು ಈಗ
ಕಾಡ್ಯನ ಮನೆಗೆಲ್ಲ ಬಂದುರಾಲೆ
ಚಿಟ್ಟಿ ಪೂಜವನೆಲ್ಲ ಮಾಡಿದಾನು ಅಜ್ಜ
ಭೂತ್ ಮಂಡ್ಲಗಳನೆಲ್ಲ ಬರಿದಾನು
ಹರ್ಸೈ ಎಂಬುದನೆಲ್ಲ ಕಟ್ಟುವಾನು
ಹನ್ನೆಯ್ಡು ಗಂಟೆಯ ರಾತ್ರಿ ಕಾಲದಲ್ಲಿ
ಗೂಡು ನಮ್ಮರಮನೆಗೆ ಹೋಗಬೇಕೊ
ಗೂಡೆಂಬುದೆಲ್ಲ ಹೊನ್ನಿಗೆ ನೆಗಿದಾನೊ
ತನ್ನಾರಮನಿಗಾಗಿ ತಾನು ಬಂದುನಾಲೆ
ಬೈದ್ಯನ ಸಮ್ಮಾನುವೆಲ್ಲ ಆದುವಾಲೆ

ಕೇಳು ಕೇಳ್ಳಯ್ಯ ನೀನು ಮ್ಯಾರರ ಹೊನ್ನಿ
ಮೇಲ್ಬರು ಶನಿವಾರ ದಿನುದಲ್ಲಿಯಾಲೆ
ಮೂರ್ತಾದ ಕಂಬಾನು ಈಗ ಕೀಳಬೇಕೊ
ಮೇಲ್ಬರು ಶನಿವಾರ ದಿವ್ಸ ಬಂದುವಾಲೆ
ಮೂರ್ತದ ಕಂಬುನೆಲ್ಲ ಪೂಜ ಮಾಡಿದುರಾಲೆ
ಈಗ ಮೂರ್ತದ ಕಂಬುನೆಲ್ಲ ಕಿತ್ತುರಾಲೆ
ಲಗಳಿ ಕಂಡರೆಲಂವ ಅಜ್ಜ ಬೈದ್ಯ
ಒಡಿಯಾರ ಮನಿಯಲ್ಲಿ ಇರುಮಾಡುವಾರು
ಲಗಳಿ ಕಂಡರೆಲವ್ರು ಒಡಿಯಾರು
ಏಳ್ ವರ ಏಳ್ಮುಡಿ ಅಕ್ಕಿ ಕೊಟ್ಟುರಾಲ

(ಹೇಳಿದವರು : ಬಚ್ಚಮೇರ)



* ಹಾಡುಗಾರನ ಮರವೆಯಿಂದಾಗಿ ಅಚರಣೆಯ ಕ್ರಿಯಾ ವಿಧಿ ವಿಧಾನಗಳ ಕ್ರಮಾನುಗತಿ ಹಾಡಿನಲ್ಲಿ ವ್ಯತ್ಯಾಸಗೊಂಡಿದೆ.

## ಕರಂಗೋಲು

ಕರಂಗೋಲು ಕುಣಿತದ ಪಠ್ಯವನ್ನು ಬಂಟ್ವಾಳ ತಾಲೂಕಿನ ಬಾಳೆಪುಣಿಗ್ರಾಮದ ನಾರ್ಯ, ಮುದುಂಗಾರು ಕಟ್ಟೆ ಮತ್ತು ಕನ್ಯಾನ ಗ್ರಾಮಗಳಿಂದ ಸಂಗ್ರಹಿಸಲಾಗಿದೆ. ನಾರ್ಯ ಮತ್ತು ಮುದುಂಗಾರು ಕಟ್ಟೆಯಿಂದ ಸಂಗ್ರಹಿಸಿದ ಪಾಠನದಲ್ಲಿ ಸಾಮ್ಯತೆ ಇದೆ. ಕನ್ಯಾನ ಗ್ರಾಮದಿಂದ ಸಂಗ್ರಹಿಸಿದ ಪಾಠನದಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಕರಂಗೋಲು ವಿಶ್ಲೇಷಣೆಗೆ ಮುಂಚೆ ಅದರ ಸಾಹಿತ್ಯಕ ಪಠ್ಯದಲ್ಲಿ ಕಂಡುಬರುವ ಅಂಶಗಳನ್ನು ಚರ್ಚಿಸಬೇಕಾಗುತ್ತದೆ. ಕರಂಗೋಲು ಪಾಠನದ ಆರಂಭದ ಭಾಗದಲ್ಲಿ ಕರಂಗೋಲು ಹುಟ್ಟಿದ ನಾಡಿನ ಉಲ್ಲೇಖ ಮತ್ತು ಕರ್ಂಗೋಲು ತರುವ ರೀತಿಯನ್ನು ತಿಳಿಸಲಾಗಿದೆ.

ಕರ್ಂಗೋಲು ಕರ್ಂಗೋಲು ಮಾಯಿದ ಪುಣ್ಣಮೆ
ಮಾಯಿದ ಪುಣ್ಣಮೆ ಕೋಡೆ ಕೇನಿದರ ಇನಿ ಕೇನಿದರ
ಕರ್ಂಗೋಲು ಪುಟ್ಟುನ ಒವ್ವಾ ನಾಡ್‌ಡ್‌ಯಾ
ಕರಿಯ ಬಡೆಕ್ಕಾಯಿ ಪೆರಿಯ ನಿಲೆಟ್ಟ್
ಕರ್ಂಗೋಲು ಕೊಂಡರುನೆ ಒವು ಕುಸೆಲ್ಡ್
ನೆಕ್ಕಿನ ತಪ್ಪುಡು ಎದಿಕೊಂಡರೊಡು
ಬಾರೆನ ಬಲ್ಲುಡು ಕಟ್ಟ್ ಕನರೊಡು
ಕುಲೊವುನ ಬಲ್ಲುಡು ಬಿಗಿತ್ ಕನವೊಡು
ಕುಂಟಿನ ಮಯಿಪುಡು ಅಡಿತ್ ಕೊನರೊಡು
ಕಂಚಿನ ತಡ್ಪೆಡ್ ಗಾಳಿತ್ ಕೊಂಡರೊಡು.

ಕನ್ನಡ:- ಕರ್ಂಗೋಲು ಕರ್ಂಗೋಲು ಮಾಯಿಯ ಹುಣ್ಣಿಮೆ
ಮಾಯಿಯ ಹುಣ್ಣಿಮೆ ಯಾವತ್ತೆಂದು ತಿಳಿದಿರಿ
ಕರ್ಂಗೋಲು ಹುಟ್ಟಿದುದು ಯಾವ ನಾಡಿನಲ್ಲಿ
ಬಡಗು ದಿಕ್ಕಿನ ಕಡೆಗೆ ಶ್ರೇಷ್ಠವಾದ ಜಾಗದಲ್ಲಿ
ಕರ್ಂಗೋಲು ತರುವ ತಂತ್ರ ಯಾವುದು

ನೆಕ್ಕಿಯ ಸೊಪ್ಪಿನಲ್ಲಿ ಬೀಸಿ ತರಬೇಕು
ಬಾಳೆಯ ಹಗ್ಗದಲ್ಲಿ ಬಿಗಿದು ತರಬೇಕು
'ಕುಲೊವಿ'ನ ಹಗ್ಗದಲ್ಲಿ ಬಿಗಿದು ತರಬೇಕು
ಗಿಡ್ಡದಾದ ಪೊರಕೆಯಲ್ಲಿ ಗುಡಿಸಿ ತರಬೇಕು
ಕಂಚಿನ ಗೆರಸೆಯಲ್ಲಿ ಗಾಳಿಸಿ ತರಬೇಕು.

ಪಾರ್ತನದ ಆರಂಭಭಾಗದಲ್ಲಿ 'ಕರ್ಂಗೋಲು' ಬರುವ ಕಾಲವನ್ನು ಸೂಚಿಸಲಾಗಿದೆ. ಮಾಯಿ ತಿಂಗಳ ಹುಣ್ಣಿಮೆಯಿಂದ ಕುಣಿತ ಆರಂಭಗೊಳ್ಳುತ್ತದೆ ಎಂಬ ಸೂಚನೆಯನ್ನು ಇಲ್ಲಿ ನೀಡಲಾಗಿದೆ. 'ಕರ್ಂಗೋಲು' ಹುಟ್ಟಿದುದು ಬಡಗು ದಿಕ್ಕಿನಿಂದಲೂ ಆ ಕಡೆಗೆ ಶ್ರೇಷ್ಠವಾದ, ಪವಿತ್ರವಾದ ನೆಲೆಯಲ್ಲಿ ಎಂದು ಮಾತ್ರ ಇಲ್ಲಿ ತಿಳಿಸಲಾಗಿದೆ. 'ಕರ್ಂಗೋಲು'ವಿನ ಪಾವಿತ್ರ್ಯತೆ ಮತ್ತು ಪ್ರಾಮುಖ್ಯತೆಯನ್ನು ತಿಳಿಸಲು ಈ ರೀತಿ ದೂರದ ಕಲ್ಪನೆಯನ್ನು ತರಲಾಗಿದೆ. 'ಕರ್ಂಗೋಲು'ನ್ನು ತರುವ ತಂತ್ರವನ್ನು ಮುಂದೆ ಪಾರ್ತನಕಾರ ನೀಡುತ್ತಾನೆ. ಈ ತಂತ್ರಗಳನ್ನು ಹೇಳುವಾಗ ಕೃಷಿಗೆ ಪೂರಕವಾದ, ಕೃಷಿಕರು ಪವಿತ್ರವೆಂದು ನಂಬಿದ ವಸ್ತುಗಳನ್ನು ತಿಳಿಸುತ್ತಾನೆ. 'ನೆಕ್ಕಿಯ ಸೊಪ್ಪು' ಕೃಷಿಕರಿಗೆ ಪವಿತ್ರವಾದುದು. ಹೊಸವರ್ಷದ ಆರಂಭ ದಿನದಂದು ಗದ್ದೆಗೆ 'ಬರೆ' ಹಾಕುವ ದಿನ ಗದ್ದೆಯಲ್ಲಿ ನೆಕ್ಕಿ ಸೊಪ್ಪನ್ನು ಹಾಕುತ್ತಾರೆ ಮತ್ತು ಎತ್ತುಗಳನ್ನು ಹೂಡುವಾಗ ಅಂದು ನೆಕ್ಕಿಯ ಬೆತ್ತವನ್ನೇ ಬಳಸುತ್ತಾರೆ. ಅಲ್ಲದೆ ಭತ್ತ ರಾಶಿ ಹಾಕಿದ ನಂತರ, ಆ ರಾಶಿಯ ಮೇಲೆ ನೆಕ್ಕಿಯ ಸೊಪ್ಪನ್ನು ಇರುಸುವ ಪದ್ಧತಿಯೂ ಇದೆ. ಜನಪದರ ಒಂದು ನಂಬಿಕೆಯಂತೆ ನೆಕ್ಕಿ ಗಿಡ ಬೆಳೆಯುವ -ಜಾಗದಲ್ಲಿ ನೀರಿನ ಸೆಲೆ ಇರುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ನೆಕ್ಕಿ ಸೊಪ್ಪು, ಸಮೃದ್ಧಿಯನ್ನು ಹೆಚ್ಚಿಸುವ ವಸ್ತುವಾಗಿ ಜನಪದರಲ್ಲಿ ಬಳಕೆಯಾಗಿದೆ. ಅಂತಹ ನೆಕ್ಕಿಯ ಸೊಪ್ಪಿನಲ್ಲಿ ಕರ್ಂಗೊಲುನ್ನು ತರಬೇಕು. 'ಬಾಳೆಹಗ್ಗ'ದಲ್ಲಿ ಬಿಗಿದು ತರಬೇಕು. ಜನಪದರಲ್ಲಿ ಬಾಳಿಗೂ ವಿಶೇಷವಾದ ಮತ್ತು ಪವಿತ್ರವಾದ ನಂಬಿಕೆಯಿದೆ. ಸುಗ್ಗಿ ಬೆಳೆಯ ನಾಟಿಯ ಸಂದರ್ಭದಲ್ಲಿ ಗದ್ದೆ ಹದವಾದ ನಂತರ ಮುಗೇರರ 'ಕಾಪಾಡ' ನಿಂದ ಕೆಲವು ಗದ್ದೆಗಳಿಗೆ ಬಾಳೆಹಾಕಿಸುವ ಪದ್ದತಿ ಇದೆ. ಬಾಳೆ ಇಲ್ಲಿ ದೈವತ್ವದ, ಸಂಕೇತದಂತೆ ಬಳಸಲ್ಪಟ್ಟಿದೆ. ಅಲ್ಲದೆ ಭತ್ತವನ್ನು ಮತ್ತು ಬೀಜವನ್ನು ಸಂರಕ್ಷಣೆ ಮಾಡುವಾಗ ಬಾಳೆಹಗ್ಗದಿಂದ ಪೂರ್ತಿಯಾಗಿ ಸುತ್ತಿ 'ಮುಡಿ' ಕಟ್ಟಿ ಇಡುತ್ತಾರೆ. ಆದುರಿಂದ ಬಾಳೆಹಗ್ಗ ಕೂಡ ಕೃಷಿ ಸಂಬಂಧಿ ವಸ್ತುವೆಂದು ಕಂಡುಬರುತ್ತದೆ. 'ಕುಲೊವು'ನ ಬಳ್ಳಿ ಒಂದು ಜಾತಿಯ ಹಾಲು ಬರುವ ಬಳ್ಳಿ. ಇದನ್ನು ಭತ್ತದ ಮೇಲೆ ತಂದಿಟ್ಟರೆ ಭತ್ತ ವೃದ್ಧಿಯಾಗುತ್ತದೆಂಬ ನಂಬಿಕೆಯಿದೆ. ಅಲ್ಲದೆ ನೊಗನೇಗಿಲುಗಳ ಮೇಲೆ ದೀಪಾವಳಿಯ ಸಂದರ್ಭದಲ್ಲಿ ಇದನ್ನು ತಂದಿಡುತ್ತಾರೆ. ಹೊಳೆ ಬದಿಯಲ್ಲಿ ಮಾತ್ರ ಬೆಳೆಯುವ ಈ ಬಳ್ಳಿಯಲ್ಲಿ ಹಾಲು ಬರುವುದರಿಂದ ಮತ್ತು ಕೃಷಿಯ ಸಂದರ್ಭದಲ್ಲಿ ಬಳಸಿರುವುದರಿಂದ

ಅದಕ್ಕೂ ಪ್ರಾಮುಖ್ಯತೆ ಸಿಕ್ಕಿದೆ. ಭತ್ತವನ್ನು ಸರಿಯಾಗಿ ಗುಡಿಸಿ ತೆಗೆಯಬೇಕಾದರೆ ಗಿಡ್ಡದಾದ ಪೊರಕೆಯೇ ಬೇಕಾಗುತ್ತದೆ. ಕಟಾವು ಸಂದರ್ಭದಲ್ಲಿ ಭತ್ತ ಗುಡಿಸಲೆಂದೇ ಈ ರೀತಿಯ ಗಿಡ್ಡದಾದ ಪೊರಕೆಗಳನ್ನು ಮಾಡಿ ಇಟ್ಟುಕೊಂಡಿರುತ್ತಾರೆ. 'ಕಂಚಿನ ಗೆರಸೆ'ಯನ್ನು ಬಿದಿರಿನಿಂದ ಮಾಡಿರುತ್ತಾರೆ. ೨ ಅಡಿ ಅಳತೆಯ ಚೌಕಾಕಾರದ ಆಕೃತಿಯಲ್ಲಿರುತ್ತದೆ. ಸ್ವಲ್ಪ ದೊಡ್ಡ ದೊಡ್ಡ ತೂತುಗಳನ್ನು ಇದು ಹೊಂದಿರುತ್ತದೆ. ಕಟಾವು ಸಂದರ್ಭದಲ್ಲಿ ಕಲ್ಲು, ಮರಳು ಮತ್ತು ಭತ್ತ ಸೇರಿಕೊಂಡಿದ್ದಾಗ, ಈ ಗೆರಸೆಯಲ್ಲಿ ಗಾಳಿಸಿ ಭತ್ತವನ್ನು ಬೇರ್ಪಡಿಸುತ್ತಾರೆ. ಇಲ್ಲಿ ಬಳಸಲಾಗಿರುವ ಎಲ್ಲಾ ವಸ್ತುಗಳೂ ಕೃಷಿ ಸಂಬಂಧವನ್ನು ಪಡೆದುಕೊಂಡಿವೆ. ಅವುಗಳೆಲ್ಲ 'ಪೊಲಿ'ಯ(ಸಮೃದ್ಧಿಯ) ಸಂಕೇತವಾದ ಭತ್ತವನ್ನು ಎಷ್ಟು ಜಾಗರೂಕತೆಯಿಂದ ತರಬೇಕೆಂದು ಸೂಚಿಸುತ್ತವೆ. ಒಂದು ಭತ್ತ ಕೂಡ ಸಮೃದ್ಧಿಯ ಸಂಕೇತ. ಅಂತಹ ಭತ್ತವನ್ನು ಹಾಳು ಮಾಡದೆ, ವೃಥಾ ಕಳೆದು ಹಾಕದೆ, ಸಂರಕ್ಷಿಸಿಕೊಂಡು ಬರಬೇಕೆಂಬ ಆಶಯ ಈ ಭಾಗದಲ್ಲಿರುವಂತೆ ಕಂಡುಬರುತ್ತದೆ.


ಮುಂದಿನ ದೀರ್ಘವಾದ ಭಾಗ ಸಂಪೂರ್ಣವಾಗಿ ಕೃಷಿಯ ವಿವಿಧ ಹಂತಗಳು, ಅದರಲ್ಲಿ ಬಳಸಲಾಗುವ ವಿವಿಧ ವಸ್ತುಗಳು, ಕೃಷಿ ಕೆಲಸವನ್ನು ಮಾಡಬೇಕಾದ ರೀತಿ ಇವುಗಳ ಕುರಿತಾಗಿದೆ.

ಅಂಗರ ಬಾಕುಡ ಮೂಜನೇ ಲೆಪ್ಪುಡು
ಮೂಜೆಕ್ ಓಕೊಂದು ಅಂಗರೆ ಬರುವೆನೆ
ಕೋಡಿ ಮಜಲ್ದ ಬೆನ್ನಿ ಬೆನೊಡುಯಾ
ಬೆನ್ನಿ ಬೆನಿಯರೆ ನಾಯೆರಿದ್ದಿಂದಲತೇ
ಮೂಡಾಯಿ ಪೋಲಯಾ ಮುದಲೆ ಪತ್ತ್‌ಯಾ
ಮುದಲೆ ಪತ್ತ್‌ದ್ ನಾಯೆರ್ ತೀರ್‌ಂಡ್
ಸಂಕಮಲೆ ಪತ್ತ್‌ದ್ ನುಗತೀರ್‌ಂಡ್
ಕೇರಿನೇ ಪತ್ತ್‌ದ್ ಕೋಡಿಬಲ್ಲ್ ತೀರ್‌ಂಡ್
ಪಗಲನೇ ಪುತ್ತ್‌ದ್ ಕಟ್ಟುಬಲ್ಲ್ ತೀರ್‌ಂಡ್
ಅರನೇ ಪತ್ತ್‌ದ್ ಪನೊರು ತೀರ್‌ಂಡ್
ಕೊಡ್ಯನ್ನೇ ಪತ್ತ್‌ದ್ ಆನಿಯೇ ತೀರ್‌ಂಡ್
ಕೇರಂಟೆ ಪತ್ತ್‌ದ್ ಗುಡಲ ತೀರ್‌ಂಡ್
ಕೋಡಿಮಜಲ್ ಒಂಜಿಸಾಲ್ ರಡ್ಡ್ ಸಾಲಾತ್‌ಂಡ್
ಮೂಜಿಸಾಲ್ ಡತ್ತ್‌ದ್ ಒಂಬ್ರೊ ಸಾಲಾತ್‌ಂಡ್
ತಪ್ಪು ಕಡ್ಯೆರೆ ಕತ್ತಿದ್ದಿಂದಲತೇ

ಬೊಲ್ಲಿನ ಕೊಯಿಲತ್ತಿ ತಾನುದ್ಯಬೆಂದ್‌ಡ್
ತಪ್ಪುಂಚ ಕಡ್ತ್‌ದ್ ಮೂಜಿಸಾಲಡತ್ತೇ
ಒಂರ್ಬ ಸಾಲಂಚಡತ್ತೆ ಕಂಡಂಚ ಕೋರಿಯೇ
ತೆನ್ಕಾಯಿ ಬಡೆಕ್ಕಾಯಿ ಕೋರಿಕುರುಂಟು
ಮೂಡಾಯಿ ಪಡ್ಡಾಯಿ ತನ್ನೆ ತಾರಿಂಚೊಲು

ಕನ್ನಡ: ಅಂಗರ ಬಾಕುಡ ಮೂರನೇ ಕೂಗಿಗೆ
ಓ ಗೊಟ್ಟು ಅಂಗರ ಬರುವನೆ
ಕೋಡಿಮಕ್ಕಿಯ ಬೇಸಾಯ ಮಾಡಬೇಕು
ಬೇಸಾಯ ಮಾಡಕ್ಕೆ ನೇಗಿಲು ಇಲ್ಲವೆಂದ
ಮೂಡುದಿಕ್ಕಿಗೆ ಹೋಗು ಮೊಸಳೆ ಹಿಡಿಯಯ್ಯಾ
ಮೊಸಳೆ ಹಿಡಿದು ನೇಗಿಲು ಆಯಿತು.
ಕರಿಯನಾಗರ ಹಿಡಿದು ನೊಗವು ತೀರಿತು
ಕೇರೆಹಾವು ಹಿಡಿದು ನೋಗವು ತೀರಿತು (ನೊಗದ) ಕೇರೆಹಾವು ಹಿಡಿದು ತುದಿ ಹಗ್ಗ ತೀರಿತು
'ಪಗೆಲ' 8ನನ್ನು ಹಿಡಿದು ಕಟ್ಟುವ ಹಗ್ಗ ತೀರಿತು
'ಅರನೆ' 9ಯನ್ನು ಹಿಡಿದು 'ಪನೊರು'ತೀರಿತು
'ಕೊಡ್ಯ' 10ನ್ನೇ ಹಿಡಿದು ಮೊಳೆಯು ತೀರಿತು
ಚೇರಂಟೆ ಹಿಡಿದು 'ಗುಂಡಲ'11 ತೀರಿತು
ಕೋಡಿಮಕ್ಕಿ ಒಂದು ಬಾರಿ, ಎರಡು ಬಾರಿ ಆಯಿತು
ಸೊಪ್ಪು ಕಡಿಯಲು ಕತ್ತಿ ಇಲ್ಲವೆಂದ
ಬೆಳ್ಳಿಯ 'ಕೊಯಿಲುಗತ್ತಿ' ಸೃಷ್ಟಿಯಾಯಿತು
ಸೊಪ್ಪು ಕಡಿದು ಮೂರುಬಾರಿ ಉತ್ತನು
ಒಂಬತ್ತು ಬಾರಿ ಉತ್ತನು ಗದ್ದೆ ಕೆಲಸ ಪೂರೈಸಿದ
ತೆಂಕು ಬಡಗುಗಳಿಗೆ 'ಕೋರಿಕುರುಂಟು'12
ಮೂಡು ಪಡು ದಿಕ್ಕಿಗೆ 'ತನ್ನೆತಾರಿಂಚೊಲು'.

ಈ ಭಾಗದಲ್ಲಿ ಅಂಗರ ಬಾಕುಡನೆಂಬ ವ್ಯಕ್ತಿ ಕೈಗೊಳ್ಳುವ ಬೇಸಾಯದ ಚಿತ್ರಣವಿದೆ. ಈ ಚಿತ್ರಣದ ಮೂಲಕ ತುಳುನಾಡಿನ ಕೃಷಿಯ ಸಂದರ್ಭದಲ್ಲಿ ಬಳಸಲಾಗುವ ಎಲ್ಲಾ ವಸ್ತುಗಳು ಮತ್ತು ಗದ್ದೆಯನ್ನು ಹದ ಮಾಡುವ ರೀತಿಯನ್ನು ತಿಳಿಸುತ್ತಾರೆ. ಇಲ್ಲಿ ಬರುವ ಅಂಗರ ಬಾಕುಡ



ಒಬ್ಬ ಕೃಷಿ ಕಾರ್ಮಿಕನಾಗಿ ಕಂಡುಬರುತ್ತಾನೆ. ತನ್ನ ಒಡೆಯನ ಅಪ್ಪಣೆಯಂತೆ ಆತ ಕೃಷಿಯಲ್ಲಿ ತೊಡಗುತ್ತಾನೆ. ಬಂಟ್ವಾಳ ತಾಲೂಕಿನಲ್ಲಿ ಮುಗೇರ್ಲ ಕೋಲ  ನಡೆಯುವ ಮುಂಚೆ ಪ್ರದರ್ಶಕರಾದ ನಲಿಕೆಯವರು ಅಂಗಾರ ಬಾಡುಕ ಅಥವಾ 'ಅಂಗಾರ ಕಲ್ಕುಡ'ನಿಗೆ ಭೂತಕಟ್ಟುವ ಪದ್ದತಿಯಿದೆ. ಪ್ರದರ್ಶಕರು ಮುಖಕ್ಕೆ ಹಳದಿಬಣ್ಣವನ್ನು ಬಳಿದುಕೊಂಡು ಹಾಳೆಯಿಂದ ರಚನೆ ಮಾಡಿದ ಎರಡು ತುದಿಗಳ ಟೊಪ್ಪಿಗೆ (ಮುಟ್ಟಾಲೆ)ಯನ್ನು ತಲೆಯಲ್ಲಿ ಧರಿಸಿ, ದೊಣ್ಣೆ ಹಿಡಿದುಕೊಂಡು, ನಾಲ್ಕು ಸಂದಿಯನ್ನು ಹೇಳುವ ಪದ್ಧತಿ ಇದೆ. ಬಂಟ್ವಾಳ ತಾಲೂಕಿನ ಇನ್ನು ಕೆಲವು ಕಡೆ ಅಂಗಾರ ಬಾಕುಡನ ಬದಲು 'ಕುಣಲೆ ಬಾವದ ಕುಕ್ಕ' (ಕುಣಲೆ ಪ್ರಾಂತದ ಕುಕ್ಕ) ಎಂಬ ಪಾತ್ರವನ್ನು ಅಭಿನಯಿಸಿ ತೋರಿಸುತ್ತಾರೆ. ಅಲ್ಲದೆ ಸಾಮಾನ್ಯವಾಗಿ ಸವರ್ಣೀಯರ ದನದ ಕೊಟ್ಟಿಗೆಯ ಎದುರುಗಡೆ ಮರದ ಬುಡದಲ್ಲಿ ಒಂದು ಕಲ್ಲು ಇರುತ್ತದೆ. ಇದನ್ನು 'ಅಂಗಾರ ಕಲ್ಲು' ಎಂದು ಕರೆಯುತ್ತಾರೆ. ದನಗಳ ಹಾಲು ಕರೆದು ಮನೆಯ ಒಳಗಡೆ ಕೊಂಡು ಹೋಗುವ ಮುಂಚೆ ಆ ಕಲ್ಲಿನಲ್ಲಿ ಒಂದು ಎಲೆಯಲ್ಲಿ ಹಾಲನ್ನು ಇಡುವ ಪದ್ದತಿ ಇದೆ. ಈ ರೀತಿ ಮಾಡಿದರೆ

ದನಕರುಗಳನ್ನು 'ಅಂಗಾರ' ಸುರಕ್ಷಿತವಾಗಿ ಮನೆಗೆ ತರುತ್ತಾನೆ ಎಂಬ ನಂಬಿಕೆ. ಇಲ್ಲೆಲ್ಲಾ ಕೃಷಿಗೆ ಸಂಬಂಧಿಸಿದಂತೆ, ಇಲ್ಲವೇ ದನಕರುಗಳಿಗೆ ಸಂಬಂಧಿಸಿದಂತೆ ಕೆಳಜಾತಿಯ ವ್ಯಕ್ತಿಗಳನ್ನು ನಂಬುವ ಸಂಪ್ರದಾಯ ಕಂಡು ಬರುತ್ತದೆ. ಆದುದರಿಂದ ಈ ಕರ್ ಂಗೋಲು ಪಾರ್ತನದಲ್ಲಿ ಬಂದಿರುವ ಅಂಗಾರ ಬಾಕುಡ ಕೂಡಾ ಒಬ್ಬ ನಿಷ್ಠಾವಂತ ಆಳು ಎಂದು ಕಂಡುಬರುತ್ತದೆ. ಗದ್ದೆಯನ್ನು ಉಳಬೇಕಾದರೆ ಹಲವಾರು ಪರಿಕರಗಳು ಬೇಕಾಗುತ್ತದೆ. ಅವುಗಳ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ. ಅವುಗಳ ಪರಿಚಯವನ್ನು ಮಾಡಿಕೊಡುವಾಗ ಆಯಾ ವಸ್ತುಗಳ ರೂಪವನ್ನು ಹೋಲುವ ಪ್ರಾಣಿಗಳನ್ನು ಹೋಲಿಸಿಕೊಂಡು ಹೇಳಿರುವುದೇ ಇಲ್ಲಿನ ವಿಶೇಷ. ಜಾನಪದರ ಔಚಿತ್ಯ ಪ್ರಜ್ಞೆ ಎಷ್ಟು ಖಚಿತವಾಗಿತ್ತೆಂಬುದು ಈ ಭಾಗದಿಂದ ತಿಳಿಯುತ್ತದೆ. ಇಲ್ಲೆಲ್ಲಾ ರೂಪಕಗಳ ಮೂಲಕ ಕೃಷಿ ವಸ್ತುಗಳ ಪರಿಚಯವನ್ನು ಮಾಡಲಾಗಿದೆ. ಆಯಾ ಪ್ರಾಣಿ ಮತ್ತು ವಸ್ತುಗಳ ಸ್ಪಷ್ಟ ಪರಿಚಯ ಮತ್ತು ಜ್ಞಾನ ಇದ್ದರೆ ಮಾತ್ರ ಅವುಗಳನ್ನು ಅರ್ಥೈಸಲು ಸಾಧ್ಯವಾಗುತ್ತದೆ. ಮೊಸಳೆ=ನೇಗಿಲು, ಶಂಖಪಾಲ (ಕರಿಯನಾಗರ) ನೊಗ, ಕೆರೆಹಾವು=ನೊಗದ ತುದಿ ಹಗ್ಗ, 'ಪಗೆಲೆ'=ನೊಗಕಟ್ಟುವ ಹಗ್ಗ, ಅರನೆ='ಪನೊರು', 'ಕೊಡ್ಯನ್ನೆ'=ಮೊಳೆ, ಚೇರಂಟೆ= 'ಗುಂಡಲ' ಹೀಗೆ ಪ್ರಕೃತಿಯ ವಿವಿಧ ಪ್ರಾಣಿಗಳ ಮತ್ತು ಜಂತುಗಳ ಸ್ಪಷ್ಟ ಪರಿಚಯದೊಂದಿಗೆ ಕೃಷಿ ಉಪಕರಣಗಳ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ. ಮುಂದೆ, ಗದ್ದೆಯನ್ನು ಉತ್ತು ಹದ ಮಾಡುವ ರೀತಿಯನ್ನು ತಿಳಿಸಲಾಗಿದೆ. ಎತ್ತುಗಳಿಂದಲೇ ಉಳುವ ಪದ್ದತಿ ಇದ್ದ ತುಳುನಾಡಿನಲ್ಲಿ ಕೃಷಿಗೆ ಮುಂಚೆ ಒಂದು ಗದ್ದೆಯನ್ನು ಒಂಬತ್ತು ಬಾರಿ ಉಳಬೇಕು. ಆಗ ಮಾತ್ರ ಅದು ಕೃಷಿಗೆ ಹದವಾಗುತ್ತದೆ. ಈ ಉಲ್ಲೇಖವನ್ನು ಈ ಭಾಗದಲ್ಲಿ ಮಾಡಲಾಗಿದೆ. ಗದ್ದೆಗೆ ಸೊಪ್ಪು ಕಡಿದು, ಆನಂತರ ಉತ್ತು ಗದ್ದೆ ಹದಮಾಡಿ ಆ ಗದ್ದೆಗೆ ತೆಂಕುಬಡಗು ದಿಕ್ಕುಗಳಿಗೆ ಕೋರಿಕುರುಂಟುಗಳನ್ನು ಹಾಕುತ್ತಾನೆ. ಮೂಡು-ಪಡು ದಿಕ್ಕುಗಳಿಗೆ 'ತನ್ನೆ ತಾರಿಂಚೊಲು' ನೆಡುತ್ತಾನೆ. ಈ ಭಾಗವನ್ನು ಗಮನಿಸಿದಾಗ ಇದು ಪೂರ್ತಿಯಾಗಿ ಕೃಷಿಯ ಪರಿಚಯವನ್ನು ಮಾಡಿಕೊಡುವ ರೀತಿಯಲ್ಲಿ ಕಂಡುಬರುತ್ತದೆ.

ಗದ್ದೆ ಉತ್ತು ಹದವಾದ ನಂತರ ಯಾವ ಜಾಗದಲ್ಲಿ ಯಾವ ಬೀಜವನ್ನು ಬಿತ್ತಬೇಕು ಮತ್ತು ಬಿತ್ತಿದ ಬೆಳೆ ಬೆಳೆದ ರೀತಿಯನ್ನು ಮುಂದಿನ ಭಾಗದಲ್ಲಿ ಪರಿಚಯಿಸಲಾಗಿದೆ.

ಬಿತ್ತುಂಡ ಬಿತ್ತುಂಡ ಪಂಚಾಂಗ ದೇವರೇ
ದಾನಿನ ಬಿತ್ ್ತ ಬೋಡು ಅಂಗಾರ ಬಾಕುಡಾ
ಕಂಪೊಗು ಕಜೆಅರಿ ಬೇಗಬಾರಿಪುಲೇ
ದೇವೆರೆಗ್ ಕೊಡಿಪಾಡ್ ಬಿತ್ತೊನು ಬಲಂದ್
ಬಿತ್ತಿ ಮೂಜೆಡ್ ಮೂಜಿ ಇರೆ ಆತ್ ಂಡ್

ಬಿತ್ತಿನ ಬಂರ್ಬೊಟು ಆಜೀಣರೆ ಆತ್‌ಂಡ್
ಕಂಗ್ನ ಪಿಂಗರ್ದ ಲೆಕ್ಕ ಬಾರ್ ಪಾಯಾಂಡ್
ಮಂಜಲಿನ ಕೊಂಬುವ ಲೆಕಬಾರ್ ಪರ್‌ಂದ್‌ಂಡ್

ಕನ್ನಡ: ಬೀಜವಿದೆಯೇ ಬೀಜವಿದೆಯೇ ಪಂಚಾಂಗದೇವರೇ
ಯಾವತೆರದ ಬೀಜ ಬೇಕು ಅಂಗಾರ ಬಾಕುಡಾ
'ಕಂಪ' ಗದ್ದೆಗೆ ಕಜೆ ಅಕ್ಕಿ ಬೇಗ ಒಡೆದುಕೊಡಿರಿ
ದೇವರಿಗೆ ಎಡೆ ಇಟ್ಟು ಬಿತ್ತಿ ಬಾ ಎಂದರು
ಬಿತ್ತಿದ ಮೂರರಲ್ಲಿ ಮೂರು ಎಲೆ ಕಂಡಿತು
ಬಿತ್ತಿದ ಒಂಬತ್ತರಲ್ಲಿ ಆರು ಎಲೆ ಕಂಡಿತು
ಅಡಿಕೆಯ ಹೂವಿನ ಹಾಗೆ ಭತ್ತವು ಬೆಳೆಯಿತು
ಅರಶಿನದ ಕೋಡಿನ ಹಾಗೆ ಭತ್ತವು ಹಣ್ಣಾಯಿತು.

ಈ ಭಾಗದಲ್ಲಿ ಅಂಗಾರ ಬಾಕುಡ 'ಕಂಪ' ಗದ್ದೆಗೆ ಕಜೆಅರಿ ಭತ್ತವನ್ನು ಬಿತ್ತುವ ಪ್ರಸಂಗದಿಂದ ಬೇರೆ ಬೇರೆ ಭೂಮಿಯಲ್ಲಿ ಬೇರೆ ಬೇರೆ ಬೀಜವನ್ನು ಬಿತ್ತಬೇಕೆಂಬ ಸೂಚನೆಯಿದೆ. ಬಿತ್ತುವ ಮುಂಚೆ ದೇವರಿಗೆ ಎಡೆ ಇಟ್ಟು ನಮಸ್ಕರಿಸುವ ರೀತಿಯನ್ನು ನೀಡಲಾಗಿದೆ. ಬಿತ್ತಿದ ಬೆಳೆ ಬೆಳೆದು ಅಡಿಕೆಯ ಹೂವಿನ ಹಾಗೆ ಭತ್ತ ಬಿಟ್ಟಿತು ಮತ್ತು ಅರಶಿನದ ಕೋಡಿನ ಹಾಗೆ ಭತ್ತ ಹಣ್ಣಾಯಿತು ಎಂದು ಹೇಳುವುದರಿಂದ ಜನಪದರ ಉಪಮೆಗಳ ರೀತಿಯನ್ನು, ಸಾದೃಶ್ಯ ಜ್ಞಾನವನ್ನು ತಿಳಿದುಕೊಳ್ಳಬಹುದು.

ಗದ್ದೆಯಲ್ಲಿ ಒಳ್ಳೆಯ ಫಸಲು ಬಂದಾಗ ಅದಕ್ಕೆ ಒದಗುವ ವಿವಿಧ ತೊಂದರೆ, ಕಾಟಗಳ ಪರಿಚಯವನ್ನು ಮುಂದಿನ ಭಾಗದಲ್ಲಿ ಮಾಡಿಕೊಡಲಾಗಿದೆ.

ಯಾ ಸುದ್ದಿ ಕೇನಿದ ಆರಿಯಾ ಗಿಳಿಕುಲು
ಯಾರಿಯಾ ಗಿಳಿಕುಲು ಕಡ್ತೊನು ಪೋಪೊನೇ
ಆ ಸುದ್ದಿ ಕೇನಿದ ಮಂಡೆ ಗಿಳಿಕುಲು ಯಾ ಸುಕ್ಕಿ ಕೇನಿದ
ಮಾಯಿದ ಪಂಜಯೆ
ಬೇಲಿ ಬರಿ ಬರಿ ಪಂಜಿ ಬರುವೆ
ಪುನಿ ಬರಿ ಬರಿಯೆ ಒಲಿಕಟ್ಟ್ ಕುಲ್ಯೆರ್ ಬಲ್ಲಾಳೆರ್
ಪಂಜಿಗ್ ಎಯಿನವು ಬಲ್ಲಾಳೆರೆ ತಾಗ್‌ಂಡ್
ಬಲ್ಲಾಲೆನ್ ತುಂಬೊನು ದೆಕ್ಕಾಂದ ಪಲ್ಲಗ್
ಪಂಜಿ ಪುರುಪೊಗು ಏರ್ಬರುವೆಯೇ

ಸಣ್ಣಬಟ್ರೆ ಬೈದ್ಯೆರೆ ಪುರುಪ್ಪೊಗು ಲೆಪ್ಪೊಡು
ಸೂಳೆಗ್ ಸೂಂಟಿಯಿ ಬೇಗ ಬಾರಿಪುಳೇ

ಕನ್ನಡ: ಆ ಸುದ್ದಿ ಕೇಳಿದ 'ಆರಿಯ' ಗಿಳಿಗಳು
ಆರಿಯಾ ಗಿಳಿಗಳು ಕತ್ತರಿಸಿಕೊಂಡು ಹೋಗುತ್ತವೆ
ಆ ಸುದ್ದಿ ಕೇಳಿದ ಮಂಡೆ ಗಿಳಿಗಳು
ಆ ಸುದ್ದಿ ಕೇಳಿದ ಮಾಯದ ಹಂದಿಯು
ಬೇಲಿ ಬದಿ ಬದಿ ಹಂದಿ ಬರುತ್ತಾದೆ
ಗದ್ದೆ ಬದಿ ಬದಿಯಲ್ಲಿ ಮರೆಮಾಡಿ ಕುಳಿತರು ಬಲ್ಲಾಳರು
ಹಂದಿಗೆ ಬಾಣ ಬಿಟ್ಟದ್ದು ಬಲ್ಲಾಳರಿಗೆ ತಾಗಿತು
ಬಲ್ಲಾಳರನ್ನು ಹೊರಬೇಕು 'ದೆಕ್ಕಾಂದ' ಹಳ್ಳಕ್ಕೆ
ಹಂದಿ ಗುರುತಿಗೆ ಯಾರು ಬರುತ್ತಾರೆ
ಸಣ್ಣ ಬಟ್ರೆ ಬೈದ್ಯರನ್ನು ಗುರುತಿಗೆ ಕರೆಯಬೇಕು
ಸೂಳೆಗೆ 'ಸೂಂಟಯಿ' ಬೇಗ ತೆಗೆಯಿರಿ.

ಬೆಳೆದು ನಿಂತ ಪೈರುಗಳಿಗೆ ಗಿಳಿ, ಹಂದಿಯ ಕಾಟದ ಬಗೆಗಿನ ಚಿತ್ರಣ ಮತ್ತು ಹಂದಿಬೇಟೆಗೆ ಮರೆಯಲ್ಲಿ ನಿಂತ ಬಲ್ಲಾಳರ ಚಿತ್ರಣ ಇವುಗಳು ಇಲ್ಲಿಕಂಡು ಬರುತ್ತವೆ.

ಹಂದಿಗೆ ಬಿಟ್ಟಬಾಣ ಬಲ್ಲಾಳರಿಗೆ ತಾಗಿತು ಎಂಬಲ್ಲಿಂದ ಮುಂದಿನ ಭಾಗದ ಅಸ್ಪಷ್ಟತೆಯಿದೆ. ಒಟ್ಟು ಈ ಭಾಗದಲ್ಲಿಕೂಡಾ ಕೃಷಿಗೆ ಸಂಬಂಧಿಸಿದ ವಿವರಗಳೇ ಸಿಗುತ್ತವೆ.

ಮುಂದಿನ ನಾಲ್ಕು ಸಾಲುಗಳು ಕುಣಿತದ ಆಶಯದ ದೃಷ್ಟಿಯಿಂದ ಪ್ರಮುಖವಾಗುತ್ತವೆ. ಯಾವುದೇ ರೋಗ, ಮುಂಡೆ ಮಾರಿಗಳಿದ್ದರೂ ಅವುಗಳು ಪರಿಹಾರವಾಗಲಿ ಎಂಬ ಆಶಯ ಆ ಭಾಗದಲ್ಲಿದೆ.

ನಾಯಿದ ಕುತ್ತನ ತಾರಾಯಿಡೇ ಪೋಂಡ್ಯಾ
ಪುಚ್ಚೆನ ಕುತ್ತನಾ ಪೇರ್ಡೇ ಪೋಂಡ್ಯಾ
ನರಮಾನ್ಯ ಕುತ್ತನಾ ಕಡಲೇ ಮಾಯಿಂಡ್
ಸನ್ಯರಿಪು ಮಂಡೆಮಾರಿ ಮೂಡಾಯಿ ಕೂsss

ಕನ್ನಡ: ನಾಯಿಯ ರೋಗವಾದರೆ ತೆಂಗಿನಕಾಯಿಯಲ್ಲಿ ಹೋಯಿತು
ಬೆಕ್ಕಿನ ರೋಗವಾದರೆ ಹಾಲಿನಲ್ಲಿ ಹೋಯಿತು
ಮನುಷ್ಯರ ರೋಗವಾದರೆ ಕಡಲಲ್ಲಿ ಹೋಯಿತು
ಸನ್ಯರಿಪು ಮಂಡೆಮಾರಿ ಮೂಡು ದಿಕ್ಕಿಗೆ ಕೂsss

ಇಡೀ ಪಾರ್ತನವನ್ನು ಗಮನಿಸಿದಾಗ ಇದು ಪೂರ್ತಿಯಾಗಿ ಕೃಷಿ ಸಂಬಂಧವನ್ನು ಪಡೆದುಕೊಂಡಿದೆ. ಆರಂಭದಲ್ಲಿ 'ಪೊಲಿ'ಯನ್ನು ತರಬೇಕಾದ ರೀತಿಯ ಚಿತ್ರಣವಿದ್ದರೆ, ಅನಂತರ ಭತ್ತದ ಬೆಳೆಯನ್ನು ಮಾಡುವ ರೀತಿ, ಅದರ ಸಲಕರಣೆಗಳು ಮತ್ತು ಬೆಳೆದ ಭತ್ತಕ್ಕೆ ಒದಗುವ ಕಾಟಗಳನ್ನು ಪಾರ್ತನಕಾರ ತಿಳಿಸುತ್ತಾನೆ.


## ಕರ್‌ಂಗೋಲು ಕುಣಿತ ಮತ್ತು ಪಠ್ಯ:

ಕರ್‌ಂಗೋಲು ಕುಣಿಯುವವರ ಮಧ್ಯೆ ಗಂಟೆಯನ್ನು ಹಿಡಿದ ಹಾಡುಗಾರನಿರುತ್ತಾನೆ. ಈತ ಕೇವಲ ಹಿಂದೆ ಮತ್ತು ಮುಂದೆ ಸಮಾನಾಂತರ ಹೆಜ್ಜೆಗಳನ್ನು ಮಾತ್ರ ಹಾಕುತ್ತಿರುತ್ತಾನೆ. ಉಳಿದಂತೆ ಕುಣಿತಗಾರರು, ಹಾಡಿಗೆ ಅನುಗುಣವಾಗಿ ದೊಣ್ಣೆಯನ್ನು ಕುಟ್ಟುತ್ತಾ, ಮೈ ಬಳುಕಿಸಿಕೊಂಡು, ಬಗ್ಗಿ ಕುಣಿಯುತ್ತಿರುತ್ತಾರೆ. ಈ ಕುಣಿತದ ಜೊತೆಯಲ್ಲಿರುವ ಪಠ್ಯ ಮತ್ತು ಪ್ರದರ್ಶಕರಿಗೆ ಮತ್ತು ಕುಣಿತಗಳ ಮಧ್ಯೆ ಯಾವುದೇ ಸಂಬಂಧವಿರುವಂತೆ ಕಂಡುಬರುವುದಿಲ್ಲ.

## ಕರ್‌ಂಗೋಲು ಪ್ರದರ್ಶನ ಮತ್ತು ಕರ್‌ಂಗೋಲು ಪೂಜೆಯ ಸಂಬಂಧ:

ಕರ್‌ಂಗೋಲು ಕುಣಿತದ ಪ್ರದರ್ಶನವನ್ನು ಗಮನಿಸಿದಾಗ ಇದೊಂದು ರಂಜನೀಯ ಕುಣಿತದಂತೆ ಕಂಡುಬರುತ್ತದೆ. ಆದರೆ ಕುಣಿತದ ಕಾಲವನ್ನು ಮತ್ತು ಸಂದರ್ಭನ್ನು ಗಮನಿಸಿದಾಗ ಈ ಅಂಶವನ್ನು ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ. ರಾತ್ರಿಯ ಹೊತ್ತಿನಲ್ಲಿ, ಹಗಲ ದುಡಿಮೆಯಿಂದ ಬೇಸತ್ತು ವಿಶ್ರಾಂತಿಯನ್ನು ಪಡೆಯುತ್ತಿರುವ ಸಂದರ್ಭದಲ್ಲಿ ಕರ್‌ಂಗೋಲು ಮನರಂಜನೆಯ ದೃಷ್ಟಿಯಿಂದಬಂದರೆ ಖಂಡಿತವಾಗಿಯೂ ಕುಣಿತಕ್ಕೆ ಯಾರೂ ಅವಕಾಶವನ್ನು ನೀಡುತ್ತಿರಲಿಲ್ಲ. ಈ ಕುಣಿತದ ಹಿಂದೆ ಸಾಮಾಜಿಕ ಒಳಿತಿನ ಆಶಯವಿರುವುದರಿಂದಲೇ ಪ್ರತಿಯೊಬ್ಬರು ಕರ್‌ಂಗೋಲನ್ನು ಬರಮಾಡಿಕೊಳ್ಳುತ್ತಾರೆ.. ಕರ್‌ಂಗೋಲು 'ಪೊಲಿ'ಯನ್ನು (ಸಮೃದ್ಧಿಯನ್ನು) ಮನೆಗೆ ತರುವ ಕುಣಿತ. ಸಂಗ್ರಹಿತವಾದ ದವಸ-ಧಾನ್ಯಗಳು ಹೆಚ್ಚಲಿ ಎಂಬ ಆಶಯದೊಂದಿಗೆ ಬರುವ ಈ ಕುಣಿತ, ಆ ಸಮೃದ್ಧಿಗೆ ವಿರುದ್ಧವಾದ ಮಾರಿಬೀರಿಯನ್ನು ಕಳೆಯುವುದೂ ಅದರ ಆಶಯದ ಇನ್ನೊಂದು ಭಾಗ ವಾಗುತ್ತದೆ. ಈ ಭಾಗವೇ ಕರ್‌ಂಗೋಲು ಪೂಜೆಯ ಜೊತೆಯಲ್ಲಿ ಸಂಬಂಧವನ್ನು ಪಡೆದಿದೆ. ಮನೆಮನೆಗಳಿಗೆ ಪೊಲಿಯನ್ನು ಕೊಟ್ಟು ಅಶುದ್ಧಿಯನ್ನು, ಮಾರಿಬೀರಿಯನ್ನು ವಸ್ತುಗಳ ರೂಪದಲ್ಲಿ ಪಡೆದುಕೊಂಡು ಬರುತ್ತಾರೆ. ಅವುಗಳನ್ನು ಅಡುಗೆ ಮಾಡಿ ಬಡಿಸಿ, ನದಿಯ ಆ ಕಡೆ ಕೊಂಡುಹೋಗಿ ಇಡುವುದರಿಂದ ಊರಿನ ಮಾರಿಯನ್ನು ಅಟ್ಟಿದಂತಾಗುತ್ತದೆ. ಇಲ್ಲಿ 'ನದಿ' ಒಂದು ಗಡಿಸೂಚಕ ಪ್ರದೇಶ. ಈ ಪ್ರಕ್ರಿಯೆ ತುಳುನಾಡಿನಲ್ಲಿ ಇನ್ನೊಂದು ರೀತಿಯಲ್ಲಿಯೂ ಕಂಡುಬರುತ್ತದೆ. ಯಾವುದಾದರೂ ಸವರ್ಣೀಯರ ಮಗುವಿಗೆ ಹುಟ್ಟಿನಿಂದಲೇ ಅಸೌಖ್ಯವಿದ್ದರೆ, ಮುಗೇರರ ಹೆಂಗಸು ಅಥವಾ ಕೊರಗರ ಹೆಂಗಸನ್ನು

ಮನೆಗೆ ಬರಮಾಡಿ ಅಸೌಖ್ಯವಿರುವ ಮಗುವನ್ನು ಆಕೆಯ ಕೈಗೆ ಕೊಡುತ್ತಾರೆ. ಆ ಹೆಂಗಸು ಮಗುವಿಗೆ ತನ್ನ ಎದೆಹಾಲೂಡಿ, ತನ್ನ ಜಾತಿಯ ಯಾವುದಾದರೂ ಹೆಸರಿಟ್ಟು ಮಗುವನ್ನು ಹಿಂತಿರುಗಿಸುತ್ತಾಳೆ. ಆನಂತರ ಆಕೆಗೆ ಊಟಹಾಕಿ, ತಲೆಗೆ ಎಣ್ಣೆಹಾಕಿ, ದುಡ್ಡು ಅಥವಾ ವಸ್ತುಗಳನ್ನು ಕೊಟ್ಟು ಕಳುಹಿಸುತ್ತಾರೆ. ಈ ರೀತಿ ಮಾಡುವುದರಿಂದ ಅಸೌಖ್ಯದ ಮಗು ಗುಣಮುಖವಾಗುತ್ತದೆಂಬ ನಂಬಿಕೆ. ಈ ನಂಬಿಕೆಯ ಹಿನ್ನೆಲೆಯಲ್ಲಿಯೇ ಕರ್ಂಗೋಲು ಕುಣಿತವನ್ನು ನೋಡಬಹುದು. ಮನೆಮನೆಗಳಿಗೆ ಕುಣಿಯುತ್ತಾ ಹೋಗಿ 'ಪೊಲಿ' (ಸಮೃದ್ಧಿ)ಯನ್ನು ನೀಡಿ; ಧಾನ್ಯ, ವಸ್ತುಗಳ ರೂಪದಲ್ಲಿ ಅವುಂಗಳ ಮಾರಿಬೀರಿಯನ್ನು ಪಡೆದುಕೊಂಡು ಬಂದು ಊರಿನ ಗಡಿದಾಟಿಸುವ ಪ್ರಕ್ರಿಯೆಯಲ್ಲಿ ಕರ್ಂಗೋಲು ಪ್ರದರ್ಶನ ಮತ್ತು ಕರ್ಂಗೋಲು ಪೂಜೆಯ ಸಂಬಂಧವನ್ನು ಗುರುತಿಸಬಹುದಾಗಿದೆ.



# ಕಾಡುಕುರುಬರ ಕಾವ್ಯ




## ದಿದ್ದಿಮಲೆ (ತೆನೆಪದ)

ದಿದ್ದಿಮಲೆ ನಗುಲಿ ಹಸುಜಂಭ ಆಡಬ್ಯಾಡದು ದಿದ್ದಿಮಲೆ
ದಿದ್ದಿಮಲೆ ನಗುಲ ಮುಟ್ಟಳಂತೆ ಸೂಳೆಮಗುವೊ
ದಿದ್ದಿಮಲೆ ನಗುಲ ಜಂಭನಾದರು ತೋರಬ್ಯಾಡಹೈದ
ದಿದ್ದಿಮಲೆ ನಗುಲ ಮುಟ್ಟಳಂತೆ ಸೂಳೆಮಗವೊ
ದಿದ್ದಿಮಲೆ ಬುಗುರುಚಿ ಸೂಳೆಮಗವೊ

ದಿದ್ದಿಮಲೆ ನಗುಲ ಮುಟ್ಟಳಂತೆ ಸೂಳೆಮಗವೊ
ದಿದ್ದಿಮಲೆ ನಗುಲ ಜಂಭತರಲು ತೋರಬೇಡವೇ ಹೈದ
ದಿದ್ದಿಮಲೆ ನಗುಲ ಮುಟ್ಟಳಂತೆ ಸೂಳೆಮಗುವೊ

ದಿದ್ದಿಮಲೆ ನಗುಲಿಚೂರು ಕೊಡಲು ನೆನೆತ್ತಿವಿ
ದಿದ್ದಿಮಲೆ ನಗುಲ ಮುಟ್ಟಳಂತೆ ಸೂಳೆಮಗವೊ


ದಿದ್ದಿಮಲೆ ನಗಲಿ ಬಾರಿದುಃಖ ಮಾಡಬೇಡವ್ವ ದಿದ್ದಿಮಲೆ...
ದಿದ್ದಿಮಲೆ ನಗಲಿ ಬಾರಿದುಃಖ ಮಾಡಬೇಡವ್ವ ದಿದ್ದಿಮಲೆ..
ದಿದ್ದಿಮಲೆ ನಗಲಿ ನೋಡಿ ನೋಡಿ ಬಾನೆಅಪ್ಪು ದಿದ್ದಿಮಲೆ..
ದಿದ್ದಿಮಲೆ... ನೀ ತೆನೆ ತುಳಿಯಾದು ಚೆಂದ ಕಾಣೆ ದಿದ್ದಿಮಲೆ...



## ಜೇನು ಪದಗಳು

೧. ಜೇನೆ ಜೇನೆ ಆಕಾಶದ ಅರಮನೆ
ಜೇನೆ ಮರೆಕಾರ ಬಂದಾನಲ್ಲೊ
ಜೇನುಯ್ಯೋ ಬುಣು ಬುಣು ಬುಣು ಬುಣು
ಜೇನೆ ಹೊಂಬಾಳೆ ಹೂವಕೀಯ್ದು
ಜೇನೆ ನೀ ಹಿಂಬಾಳೆ ಹೋಗಾದು ಸಂದ (ಚೆಂದ)
ಜೇನೆ ಹೊಂಗೆಯ ಹೂವಕೀಯ್ದು
ಜೇನೆ ಹೊನ್ನಾಡಿ ಲಾರಗಿದೆ
ಜೇನುಯ್ಯೋ ಬುಣು ಬುಣು ಬುಣು ಬುಣು
ಜೇನೆ ಆಕಾಶದ ಅರಮನೆ
ಜೇನೆ ಮರೆಕಾರ ಬಂದನಲ್ಲ...
ಜೇನೆ ಹುಟ್ಟುವಾಗ ಅಣ್ಣತಮ್ಮ
ಜೇನೆ ನೀ ಬೆಳಿವಾಗ ದಾದಿಪಾಲು

೨. ಜೇನೆ ನೀ ಹುಟ್ಟುವಾಗ ಅಣ್ಣ-ತಮ್ಮ
ಜೇನೆ ನೀ ಬೆಳೆವಾಗ ದಾದಿಪಾಲು
ಜೇನೆ ನೀ ಹೋಗುವಾಗ ಒಂದೇ ಹಾದಿ
ಜೇನೆ ನೀ ಬರುವಾಗ ಚಲ್ಲಾಪಿಲ್ಲಿ
ಜೇನೆ ನೀ ರಾಗಿಯ ಹೂವ ಎತ್ತಿ
ಜೇನೆ ನೀ ರಾಗ ಮಾಡಲೊರಗಿದೆ
ಜೇನೆ ನೀ ತಾರಿಯ ಹೂವ ಎತ್ತಿ
ಜೇನೆ ನೀ ತಾರಾಡಿಲಾರಗಿದೆ
ಜೇನೆ ನೀ ಸುಳಿಗೊಡು ನೀರೆ ಎತ್ತಿ
ಜೇನೆ ನೀ ಸುಳುದಾಡಿಲಾರಾಗಿದೆ
ಜೇನೆ ನೀ ಕೈ ಜೋಕೆ ಕಾಲು ಜೋಕೆ
ನಿನ್ನ ಅರಮನೆಗೋ ಬಂದನೀಗ



ಜೇನೆ ನಿನ್ನ ಮರಕಾರ ಬಂದನೀಗ
ಜೇನೆ ಮುಂದೆ ಬರೋದು ಹೂವಿನತಟ್ಟೆ
ಜೇನೆ ಹಿಂದೆ ಬರೋದು ತಲೆಯತುಪ್ಪ
ಜೇನೆ ಮರಕಾರನ ಹೆಡ್ತಿ ಹಡೆಬಾಳೆ

೩. ಜೇನು ಬರೆಕಾರ ಬಂದನೀಗ || ೨ ||
ಜೇನುಯ್ಯೋ
ನೂರೊಂದು ಏಣಿ ಕಟ್ಟಿ
ಜೇನು ಕಾಲು ಜೋಕೆ ಕೈಯ ಜೋಕೆ
ಜೇನುಯ್ಯೋ
ಜೇನು ಮತ್ತಿಯಾದ ಹೂವಲೆತ್ತಿ
ಜೇನು ಮತ್ತಿದಾಟ್ಟಿ ಲಾರಗಿದೆ.
ಜೇನುಯ್ಯು..... (ಸಿಳ್ಳು ಹೊಡೆಯುವುದು)
ಜೇನು ಕಾಲು ಜೋಕೆ ಕೈಯಾ ಜೋಕೆ ||
ಜೇನುಯ್ಯು....
ಜೇನು ಮುಂದೆ ಬರೋದು ಹೂವಿನ ತಟ್ಟೆ


ಜೇನು ಹಿಂದೆ ಬರೋದು ತಲೆಯ ತುಪ್ಪ
ಜೇನುಯ್ಯು....
ಜೇನು ಮತ್ತಿ ಮೊಳ್ಗೆಮನೆಯಲೆತ್ತಿ
ಜೇನು ಮತ್ತಿಮಾಳ್ಗೆಮನೆಯ ಬೆಂದು
ಜೇನುಯ್ಯು...
ಜೇನು ಬಿಟಿಯಾದ ಹೂವಾಲೆತ್ತಿ
ಜೇನು ಬಿಟಿಕಟ್ಟಿ ಲರಗಿದೆ
ಜೇನುಯ್ಯು
ಜೇನು ಆಕಾಶದರಮನೆ
ಜೇನು ಬರೆಕಾರ ಬಂದನೀಗ
ಜೇನು ಬರೆಕಾರನ ಹೆಂಡ್ತಿ ಮುಂಡೆಗೋಳು
ಬತ್ತೀನಿ.... ನೋಡೋಗು ನೋಡೋಗು (ಮಧ್ಯೆ ಮಧ್ಯೆ ಮಾತು)
ಈ ಮರ ಸರಿ ಕಾಣೆ
ಜೇನು ಕುಂಬಳದ ಹೂವಲೆತ್ತಿ
ಜೇನು ಕುಂಬಕಟ್ಟಿಲರಗಿದೆ
ಜೇನು ಕುಂಬಳದ ಹೂವಲೆತ್ತಿ
ಜೇನು ಕುಂಬಮೊಳ್ಗೆ ಮನೆಯಲೆತ್ತಿ
ಜೇನು ಕುಂಬಮೊಳ್ಗೆ ಮನೆಯಬೆಂದು
ಜೇನು ಕಾಲುಜೋಕೆ ಕೈಯಜೋಕೆ ಜೇನೆ...
ಸಾಕು ಕಣೋ ಬಾಳ ಉರಿ (ಮಧ್ಯೆ ಮಧ್ಯೆ ಮಾತು)
ಕಿಚ್ಚಿತ್ತಾದೆ ಜೇನು
ಜೇನೋ ಹುಚ್ಚಳಾದ ಹೂವಲೆತ್ತಿ
ಜೋನೋ ಹುಚ್ಚ ಮಾಳ್ಗೆ ಮನೆಯಲೆತ್ತಿ
ಜೇನು ಬಿಟಿಯಾದ ಹೂವಲೆತ್ತಿ
ಜೇನು ಬಿಟಿಮಾಳ್ಗೆ ಮನೆಯಲೆತ್ತಿ
ಜೇನುಯ್ಯು
ಜೇನು ಕಾಲು ಜೋಕೆ ಕೈಯ ಜೋಕೆ
ಜೇನು...
ಜೇನು ತೇಕುಮಾಳ್ಗೆ ಮನೆಯಲೆತ್ತಿ
ಜೇನು ತೇಕು ಮಾಳ್ಗೆ ಮನೆಯಬೆಂದು
ಜೇನುಯ್ಯು

ಜೇನು ಕಾಲು ಜೋಕೆ ಕೈಯಜೋಕೆ
ಜೇನು ಬರೆಕಾರನ ಹೆಡ್ತಿ ಮುಂಡೆಗೋಳು
ಜೇನುಯ್ಯು
ಜೇನು ಭಿಲ್ಲವರ ಹೂವಲೆತ್ತಿ
ಜೇನು ಬಿಲ್ಲವರ ಮಾಳ್ಗೆ ಮನೆಯಲೆತ್ತಿ
ಜೇನು ಬಿಲ್ಲವರ ಮಾಳ್ಗೆ ಮನೆಯಬೆಂದು
ಜೇನುಯ್ಯು
ಆಗೋಯ್ತು ಕಣೋ ಜೇನು ಕೀಯ್ದು
ಇಳಿತೀನಿ....
ಮೆಲ್ಲ ಇಳಿ ಮೆಲ್ಲ ಇಳಿ.

೪. ಜೇನೆ ಹುಟ್ಟುವಾಗ ಅಣ್ಣ ತಮ್ಮ
ಜೇನೆ ಬೆಳಿವಾಗ ದಾದಿಪಾಲ
ಜೇನೆ ರಾಗಾಡಿಲರಗಿತೋ
ಜೇನೆ ನಾ ಕುಯ್ಯೋದು ಬಂಡೆಕೊಟ್ಟೆ
ಜೇನೆ, ನೀ ಕುಯ್ಯೋದು ನೂಲುರ್ಜ
ಜೇನೆ
ಜೇನೆ ನೂರೊಂದು ಏಣಿಕಟ್ಟಿ
ಜೇನೆ ನೂರೊಂದು ಒತ್ತೆ ಕಟ್ಟಿ
ಜೇನೆ ರಾಗಾಡಿಲರಗಿತೊ
ಜೇನೆ ಮರೆಕಾರ ಬಂದನೀಗ ॥
ಜೇನೆ ಕೈ ಜೋಕೆ ಕಾಲುಜೋಕೆ ।
ಜೇನೆ ಮತ್ತಿಯ ಹೂವಕುಯ್ದು ॥
ಮೆತ್ತಲರಗಿತೊ
ರಾಗಿಯ ಹೂವ ಕುಯ್ದು ॥
ರಾಗಾಡಿಲರಗಿತೋ
ಜೇನೆ ತಾರಿಯ ಹೂವ ಕುಯ್ದು ॥
ಜೇನೆ ರಾಗಾಡಿಲರಿಗಿತೂ ಜೇನುಯ್ಯಾ ಜೇನೆ

೫. ಜೇನೆ ಕುಂಬಳದ ಕುಸ್ಮಾಲೆತ್ತಿ
ಜೇನೆ ಬಾಗಿ ಬಾಗಿಲರಗಿವೊ
ಜೇನೆ ಚೆಲುವಿನ ಕುಸ್ಮಾಲೆತ್ತಿ

ಜೇನೆ ಜಲುರಾಗಿಲರಗಿದೆಯ ಜೇನುಯ್ಯೋ
ಜೇನೆ ಹೊನ್ನೆಹೂವ್ನ ಕುಸ್ಮಾಲೆತ್ತಿ
ಜೇನು ಹೊನ್ನುರಾಗಿಲರಗಿವೊ
ಜೇನೆ ಮತ್ತಿಹೂವ್ನ ಕುಸ್ಮಾಲೆತ್ತಿ ॥ ೨ ॥ ಜೇನುಯ್ಯೊ ॥
ಜೇನು ಹೊನ್ನುರಾಗಿಲರಗಿವೊ
ಜೇನೆ ಜಲುವಿನ ಕುಸ್ಮಾಲೆತ್ತಿ ॥ ೨ ॥ ಜೇನುಯ್ಯಾ ॥
ಜೇನೆ ಆಲೂಹೂವ್ನ ಕುಸ್ಮಾಲೆತ್ತಿ
ಜೇನೆ ಆಲೂರಾಗಿಲರಗಿವೊ
ಜೇನೆ ಚೆಲುವಿನ ಕುಸ್ಮಾಲೆತ್ತಿ
ಜೇನೆ ಹೊನ್ನೆ ಹೂವ್ನ ಕುಸ್ಮಾಲೆತ್ತಿ
ಜೇನೆ ಆಕಾಶದ ಅರಮನೆಯೋ ।
ಜೇನೆ ನಿಂಗೆ ಕೀಯಾದು ಬಂಡ್ಯಪಟ್ಟಿ
ಜೇನೆ ನಿಂಗೆ ಕುಯ್ಯಾದು ಬೆಳ್ಳಿಯ ಉರ್ಜು
ಜೇನೆ ಮುಂದೆ ಬರಾದು ಮರೆಯತಟ್ಟಿ
ಜೇನೆ ಹಿಂದೆ ಬರಾದು ತಲೆಯತುಪ್ಪ
ಜೇನೆ ಒರಕಾರ್ನ ಹೆಡ್ತಿ ಮುಂಡೆಗೋಳು ॥
ಜೇನುಯ್ಯೊ ಗುಣು ಗುಣು



## ಕೋಲುಪದಗಳು


೧. ಕೋಲು ಸುವ್ವಿನಾಲೆ ಕೋಲೆ
ಕೋಲೊಂದವತಾರ ನೀಲೆ
ಹದ್ನಾರ್ವರ್ಷದ ಬಾಲೆ
ಸನಗುಜ್ಜಾರಿ ಮೆಚ್ಚಿನ ಮೇಲೆ
ಬೆಟ್ಟದ ಮೇಗಲ ಬೆಂಡೆ
ಬಿದ್ದಿದ್ದು ನಾನೊಂದ ಕಂಡೆ
ಬಿದ್ದಿದ್ದು ನಾನೊಂದ ಕಂಡೆ
ನೀ ಯಾರ್ಕುಟ್ಟೆ ಹೇಳಬೇಡ ರಂಡೆ । ಕೋಲು ।

ಆಕಾಶದಲ್ಲಿ ಆಡೋದು ಹದ್ದು
ಕೋವಿಗೆ ತುಂಬೋದು ಮದ್ದು
ಕೋವಿಗೆ ತುಂಬೋದು ಮದ್ದು
ನಮ್ಮ ಕಾಳವ್ವ ಬತ್ತಾಳೆ ಸದ್ದು । ಕೋಲು ।

೨. ಯಾರೆಲೋ ಕೊರವಂಜಿ
ಬಾರಲೋ ಮನೆಗೆ
ಬಾಳೆಯ ಮರದಡುತ
ಕುಂತಿದ್ದಾಳೆ ಕೊರವಂಜಿ
ಯಾರಲೋ....
ನಿಂಬಿಯ ಮರದಡುತ
ಕುಂತಿದ್ದಾಳೆ ಕೊರವಂಜಿ
ಯಾರಲೋ....
ಬಾಳೆಯ ಮರದುಡಿ
ಕುಂತಿದ್ದಾಳೆ ಕೊರವಂಜಿ
ಯಾರಲೋ....

೩. ಕೋಲು ಕೋಲು ಕಡ್ಡಿಗೆ
ಸ್ವಾಮಿ ಕೋಲಯ್ಯ ಕೋಲು ಕಡ್ಡಿಗೆ
ಎಲೆಮುಂದಲಾಡಿ ಬಾ ಕೋಲುಕಡ್ಡಿಗೆ
ಕೋಲಣ್ಣ ಗಂಗೀಗೆ ಕೋಲಣ್ಣ ಗೌರಿಗೆ
ಕೋಲು ಕೋಲುನಾದ ಬಸವನ ಕೋಲೆ
ಕೋಲು ಕೋಲುನಾದ ಬಸವನ ಕೋಲೆ
ಕೋಲು ಕೋಲುನಾದ ಬಸವನ ನೆನೆದರೆ
ಬರಾದ ಕೋಲು ಬೆಳೆಯಲಿ ಕೋಲು

೪. ಮಾವಿನ ಹೊಲಕೆ ಹೋದಳು ಗಿಣಿರಾಮ
ಮಾವಿನ ಕಾಯಿ ಕಡುದಾಳೊ
ರಾಮಾಲೆ ಗಿಣಿ ರಾಮಾಲೆ
ರಾಮಾಲೆ ಸುಳಿ ರಾಮಾಲೆ
ನಿಂಬಿಯ ಹೊಲಕೆ ಹೋದಳು ಗಿಣಿರಾಮ
ನಿಂಬಿಯ ಕಾಯಿ ಕಡುದಾಳೊ
ರಾಮಾಲೆ ಗಿಣಿ ರಾಮಾಲೆ
ರಾಮಾಲೆ ಸುಳಿ ರಾವ



# ಹಗಲು ವೇಷದವರ ಪದಗಳು



## ಗಂಗಮ್ಮ ಗೌರಮ್ಮ

ಗಂಗಮ್ಮ ಗೌರಮ್ಮ ವಾದಿ ಮಾಡುವರು
ಗಂಗಮ್ಮ ಗೌರಮ್ಮ ಜೂಜುನಾಡುವರು
ಯಾಕಯ್ಯ ಶಿವರಾಯ ಇಬ್ಬರು ಹೆಂಡಿರು?
ವಾದಾಡಿ ಶಿವರಾಯ ಸವತಿನೇ ತಂದ
ಹೋಗುಬ್ಯಾಡೆಂದೆ ಹೋದೆಲ್ಲೋ ಶಿವನೆ
ತರಬ್ಯಾಡದ ಗಂಗೇನ ನೀನು ತಂದೀಯ
ವಾದಿಲ್ಲದ ಮನಿಯಲ್ಲಿ ವಾದಿ ತಂದೀಯ
ಇಬ್ಬರಿಗೂ ಈ ವಾದ ನೀನ್ಹೇಳಲಾರೆ
ಇಬ್ಬರಿಗೂ ಜಗಳ್ಹಚ್ಚಿ ನಗುತ್ತಿದ್ದೀಯ
ಗಂಗೆನನ್ನಾ ಬಿಡು ನನ್ನನ್ನ ಬಿಡು
ಆ ಮಾತಿಗಾ ಶಿವ ಏನಂಬುತಾನ
ಬೇಕಂತ ತಂದೇನು ನಾನ್ಹೆಂಗೆ ಬಿಡಲಿ
ಬೇಕಾದ್ರೆ ಗೌರಮ್ಮ ನೀನು ಬ್ಯಾರೆ ಹೋಗು
ಆ ಮಾತಿಗೆ ಗೌರಮ್ಮಗೆ ಸಿಟ್ಟುಬಂತು
ಮೆಚ್ಚಿ ಬಂದವಳೆಲ್ಲ ಹೆಚ್ಚಾದಳೇನೋ?
ಕೂಡಿಕೊಂಬುವರೆಲ್ಲ ಹೆಚ್ಚಾದರೇನೋ?
ಮದುವೆ ಹೆಂಡತಿ ನಿನಗೆ ಮದ್ದಾಯಿತೇನೋ?
ಮದುವೆ ಹೆಂಡತಿಯೆಲ್ಲ ವಿಸಾಯಿತೇನೋ?
ನೀಚವಳೆ ಗಂಗವ್ವ ನಾಚಿಗಿಲ್ಲೇನೆ!
ಐನೋರು ಕುಲಕೆಂದು ನೀನು ಬಂದೀಯ
ಜಂಗಮ ಕುಲ ಅಂತ ಕೂಡಿ ಬಂದೀಯ
ನನಪಾಲ ದೇವರಿಗೆ ಎದ್ದು ಬಂದೀಯ
ಶಿವನ ಪಾದಗಳನ್ನು ಮೆಚ್ಚಿ ಬಂದೀಯ
ಉಟ್ಟಿದ್ದ ಹುಲಿಚರ್ಮ ನೋಡಿ ಬಂದೀಯ

ಕೊಳ್ಳಾಗ ಲಿಂಗಪ್ಪ ಕಂಡು ಬಂದೀಯ
ನನಪಾಲ ಸ್ವಾಮಿಗೆ ಕೂಡಿಕೊಂಡೀಯ
ಗುದ್ದೇನ ನನಸವತಿ ರೊಂಡಿ ಮುರಿಯಾನ
ಗುದ್ದೇನ ನನಸವತಿ ಹಲ್ಲು ಮುರಿಯಾನ
ಮೀನ ಮಾರುವಳೆಲ್ಲ ಹೆಚ್ಚಾದಳೇನೋ
ಆ ಮಾತಿಗೆ ಗಂಗಮ್ಮ ಏನಂಬುತಾಳೆ
ಕೇಳಿಯ ಗೌರಕ್ಕ ನನ್ನ ಮಾತನ್ನು
ಮೆಚ್ಚೀಯ ನಾನೇನು ಬಂದಿಲ್ಲವಕ್ಕ
ಕೂಡೀಯ ನಾನೇನು ಬಂದಿಲ್ಲವಕ್ಕ
ನಿನ್ನ ತಂದ ಶಿವ ನನ್ನ ತಂದಾನ
ಮದುವೆ ಮಾಡಿಕೊಂಡು ಬಂದೆನಕ್ಕಯ್ಯ
ನನ್ನಕೂಟ ನಿನಗೆ ವಾದಿ ಬ್ಯಾಡಕ್ಕ
ನನಕೂಟ ಜಗಳ ಬ್ಯಾಡಕ್ಕ
ಆ ಮಾತಿಗೆ ಗೌರಮ್ಗೆ ಸಿಟ್ಟು ಬಂತಮ್ಮ
ಕೇಳೆಯ ಶಿವರಾಯ ಗಂಗೆ ಮಾತೆಲ್ಲ
ನಿನ ಚಿಕ್ಕ ಹೆಣತಿ ಮಾತು ಕೇಳಯ್ಯ
ನಿನಮುದ್ದು ಹೆಣತಿ ಮಾತು ನೋಡಯ್ಯ
ಇಬ್ಬರಲಿ ಒಬ್ಬಾಕೆ ಬಿಡಬಾರದೇನಯ್ಯ
ಗಂಗೆ ನನ್ನಾ ಬಿಡು ಬಾ ನನ್ನನ್ನ ಬಿಡು ಬಾ
ಆ ಮಾತಿಗಾ ಶಿವ ಏನಂಬಾತಾನ
ಇಬ್ಬರಿಗೂ ಈ ವಾದ ನೀ ಹೇಳಲಾರೆ
ಇಬ್ಬರಲಿ ಒಬ್ಬಾಕೆ ಬಿಡಬಾರದೇನಯ್ಯ
ಆ ಮಾತಿಗಾ ಶಿವ ಏನಂಬುತಾನ
ಬೇಕಂತ ತಂದೇನು ನಾನ್ಹೆಂಗೆ ಬಿಡಲಿ
ಮಲ್ಲಿಹೂವ ತಂದಂಗೆ ನಾನು ತಂದೀನಿ
ಚಂಡ್ಹೂವ ದಾಸೆಂಗ ನಾನು ದಾಸೀನಿ
ಬೇಕಾದ್ರೆ ಗೌರವ್ವ ನೀನು ಬ್ಯಾರೆಹೋಗು
ಮೆಚ್ಚಿ ಬಂದವಳೆಲ್ಲ ಹೆಚ್ಚಾದಳೇನೋ
ನೀಚ ಗಂಗೆ ಇಲ್ಲಿ ಹೆಚ್ಚಾಯಿತೇನೋ



ಬಂಧು ಬಳಗವ ಬಿಟ್ಟು ಬಂದವಳೆ ಗಂಗಾ
ನನಪಾಲ ಶಿವಗೆ ಕೂಡಿಕೊಂಡೀಯ
ಮೀನ ಮಸಳಿ ಮಾರವಳೆ ಗಂಗಾ
ಸಂತ್ಯಾಗೆ ಕಾಯಿಪಲ್ಲೆ ಮಾರುವಳೆ ಗಂಗಾ
ನನಪಾಲ ಶಿವಗೆ ನೀನು ಬಂದೀಯ
ನೀವೆ ಇರಿ ಸ್ವಾಮಿ ನಾನ್ಹೋಗುತೀನಿ
ಮೆಚ್ಚಿ ಬಂದವಳೆ ಹೆಚ್ಚಾಯಿತು ನಿನಗೆ
ನೀಚ ಗಂಗೀನ ತಂದು ವಾದಕಚ್ಚೀಯ
ಇಬ್ಬರೇ ಇರಿಸ್ವಾಮಿ ಈ ಮಠದೊಳಗೆ
ಗೌರವ್ವನ ಮನಿಗೆ ಗೌರವ್ವ ಬಂದಾಳ
ಇಬ್ಬರು ಮಕ್ಕಳ ಹಿಂದೆ ಕರಕಂಡು

ಗಂಗೆಯ ಮನೆಗೆ ಗಂಗೆ ಬಂದಾಳ
ಕೈಲಾಸದ ಶಿವ ಕೈಲಾಸಕೋದ
ಗೌರವ್ವ ಮಠದಲ್ಲಿ ಏನು ಮಾಡ್ಯಾಳ
ಹೇಳಕ್ಕ ಹುಣ್ಣಿವಿ ಎಲ್ಲ ನೋವಿದಳ
ಕಡಗಕ್ಕೆ ಹುಣ್ಣಿವಿ ಕಡಿಯಾದಳವ್ವ

ಮುಟ್ಟಾಗಿ ಗೌರವ್ವ ಮೂಲೆ ಕುಂತ್ಯಾಳ
ಮುಟ್ಟಾದ ಸುದ್ದೆಲ್ಲ ಯಾರು ಕೇಳವರು?
ತನ ತಂಗಿ ಗಂಗವ್ವ ಕಿಲಕಿಲ ನಕ್ಕೀತು
ಫಕ್ಕನೆ ನಗುತ್ತಾಳೆ ಪಾತಾಳ ಗಂಗಾ
ನಮ್ಮಕ್ಕನ ಪಂಥಾವ ಈಗ ನೋಡೇನು
ನಮ್ಮಕ್ಕನ ಶ್ಯಾಣತನ ಈಗ ನೋಡೇನು
ಮೀನು ಮಾರುವಳಂತ ಬೈದಾಳ ನನ್ನ
ನೀಚ ಗಂಗಿ ಅಂತ ಬೈದಾಳ ನನ್ನ
ನಮ್ಮಕ್ಕನ ಪಂಥಾವ ನಾನು ನೋಡೇನು
ಮಳರಾಯ ಬಾರ ಮೇಲೆ ತಮ್ಮಯ್ಯ
ಅರ್ಜುನ ಬಾರೋ ನನಕಾಸತಮ್ಮ
ಮಳೆರಾಯ ಬಾರೋ ನನಕಾಸತಮ್ಮ
ಕರೆದಾಳೋ ಗಂಗವ್ವ ಬೇಡಿ ಹಾಕ್ಯಾಳೋ
ಮಳೆ ಬರದಂಗೆ ಮಾಯ ಮಾಡ್ಯಾಳೋ
ಗಾಳಿ ಬೀಸದಂಗೆ ಕಟ್ಟು ಕಟ್ಯಾಳೋ
ಎಲ್ಲೆಲ್ಲೂ ನೋಡಿದರೂ ಸ್ಯಾರೆ ನೀರಿಲ್ಲ
ರಾಜ್ಯದಾ ಒಳಗೇನ ನೀರು ಇಲ್ಲಮ್ಮ
ಹರೆಯದಾ ಗೌರಮ್ಮ ಮನೆಯಲ್ಲಿ ನೋಡಿ
ಮಗನೋ ಈರಣ್ಣ ಬುದ್ದಿವಂತಾನೆ
ಮನೆಯೊಳಗೆ ನೀರು ಕಾಸಿಕೊಡಪ್ಪ
ಹರೆಯದ ಈರಣ್ಣ ಮನೆಯಲ್ಲಿ ನೋಡಿ
ಮನೆಯಲ್ಲಿ ನೀರು ಸ್ಯಾರೆನು ಇಲ್ಲ
ಮನೆಯೊಳಗೆ ನೀರು ಈಸನ್ನ ಇಲ್ಲ

ಬೆಳ್ಳಿಯಾ ಕೊಡದಲ್ಲಿ ನೀರು ತಾ ಮಗನೆ
ಬೆಳ್ಳಿಯಾ ಕೊಡಗಳೇ ಒಣಗಿ ಹೋಗ್ಯಾವೆ
ಸೇದೋ ಬಾವಿಯಲಿ ಸೇದು ಈರಣ್ಣ
ಸೇದೋ ಬಾವಿಯಲಿ ಸ್ಯಾರೆ ನೀರಿಲ್ಲ
ತುಂಬೋ ಬಾವಿಯಲಿ ತುಂಬು ಈರಣ್ಣ
ತುಂಬೊ ಬಾವಿಯಲಿ ಬೊಗಸೆ ನೀರಿಲ್ಲ

ಎಲ್ಲಿ ನೋಡಿದರೂ ಸ್ಯಾರೆ ನೀರಿಲ್ಲ
ರಾಜ್ಯದೊಳಗೇ ನೀರು ಇಲ್ಲಮ್ಮ
ಆಗ ಗೌರಮ್ಮ ಏನನ್ನುತಾಳ
ಅಂಗೈಯೊಳಗೆ ಅಂಜನ ಹಾಕ್ಯಾಳ
ವಿಷ್ಣು ದೇವರ ಮಾಯ ಇದು ಅಲ್ಲ ಮಗನೆ
ಬ್ರಹ್ಮದೇವರ ಮಾಯ ಇದು ಅಲ್ಲ ಮಗನೆ
ನಿಮ್ಮಪ್ಪ ಶಿವರಾಯ ಮೋಸಮಾಡಿಲ್ಲ
ನನ ಸವತಿ ಗಂಗೀ ಮೋಸಮಾಡ್ಯಾಳೆ
ನೀಚ ಗಂಗೀ ನೀರು ಬೇಕಿಲ್ಲ ಮಗನೆ
ಕವಚು ಗಂಗೀ ನೀರು ಬೇಕಿಲ್ಲ ಮಗನೆ
ನಮ್ಮಪ್ಪನಲ್ಲಿಗೆ ಹೋಗಿ ಬಾ ಮಗನೆ
ಹಾಲೇನು ಕಮ್ಮಿ ತುಪ್ಪೇನು ಕಮ್ಮಿ
ಹಾಲಿನ ಕಾವ್ಡಿ ಹೇಳಿ ಕೊಟ್ಟವಳು
ತುಪ್ಪದ ಕಾವ್ಡಿ ಹೇಳಿ ಕೊಟ್ಟವಳು
ಈರಣ್ಣ, ಗಣೇಶ ಅಜ್ಜನಲ್ಲಿಗೆ ಬಂದಾರು
ಅಜ್ಜರೋ ಓ ಅಜ್ಜ ಗಣರಾಯ ನೀನು
ಶರಣು ಶರಣಜ್ಜ ಶರಣು ನಿನಗೆ
ನಿನ್ನ ದೊಡ್ಡ ಮಗಳು ವಾರಿಗಾಗ್ಯಾಳೆ
ಕಡಿಗಾಗಿ ಗೌರಮ್ಮ ಕಳ್ಳೆ ಕುಂತ್ಯಾಳ
ಮುಟ್ಟಾಗಿ ಗೌರಮ್ಮ ಮೂಲೆ ಕುಂತ್ಯಾಳ
ಸ್ಯಾರೆ ನೀರುಕೊಡು ಓ ಪುಣ್ಯವಜ್ಜ
ಬೊಗಸೆ ನೀರುಕೊಡು ಓ ಪುಣ್ಯವಜ್ಜ
ನಿಮಗಿಲ್ಲದಾ ನೀರು ನಮಗೆಲ್ಲಿ ಬಂತು
ದೇಶಕ್ಕೆ ದೊಡ್ಡವಳು ಗಂಗೆ ದೊಡ್ಡವಳು
ಲೋಕಕ್ಕೆ ದೊಡ್ಡವಳು ಗಂಗೆ ದೊಡ್ಡವಳು
ಜಗಳದಲಿ ನಿಮ್ಮಮ್ಮ ಜಾಲಾಡಿಸೀರಿ
ಗಂಗಿಕೊಟ ನಾನು ವಾದಿ ಬ್ಯಾಡಂದಿ
ಗಂಗಿಕೊಟ ನಿಮ್ಮಮ್ಮ ಜಾಲಾಡಿಸೀರಿ
ದೇಶಕ್ಕೆ ದೊಡ್ಡವಳು ಗಂಗೆ ದೊಡ್ಡವಳು

ರಾಜ್ಯದಾ ಒಳಗೆ ನೀರು ಇಲ್ಲಪ್ಪ
ದನಕರ ಸಾಯ್ತಾವೆ ಮಗನೆ
ಹೆಣ್ಣುಮಗಳು ಗೌರಮ್ಮ ಬೈದಾಡುತಾಳೆ
ಹಾಲಿನಾ ಕಾವ್ಡಿ ಹೇಳಿ ಕಟ್ಟ್ಯಾನು
ತುಪ್ಪದಾ ಕಾವ್ಡಿ ಹೇಳಿ ಕಟ್ಟ್ಯಾನು
ಹಾಲಿನಾ ಕಾವ್ಡಿ ತಗಂಡು ಬಂದ್ರು
ತಾಯಿ ಗೌರಮ್ಮ ಕಣ್ಣೀಲೆ ನೋಡಿ
ಹಾಲು ಬಂತಂತ ಖುಷಿ ಬಂತು
ಹಾಲುಕೊಟ ತಾಯಿ ಮೈ ತೊಳೆದುಕೊಂಡು
ತುಪ್ಪಕೊಟ ತಾಯಿ ಶಿವಪೂಜೆ ಮಾಡಿ
ಇರುವಿ ನೊಣ ಮುಸುರಿಕುಂತ್ಯಾವೋ
ಮಗನೋ ಈರಣ್ಣ ಬುದ್ದಿವಂತಾನೆ
ಮದ್ದನ್ನ ಕೊಡಪ್ಪ ಮಾಯವಾಗಾನ
ವಿಷವನ್ನು ಕೊಡಪ್ಪ ಕುಡ್ದು ಸಾಯಾನ
ಮಗನು ಆ ತಾಯಿಗೆ ಎಷ್ಟು ಬುದ್ದಿ ಹೇಳವನು
ಮುಂದಕೂ ನರಲೋಕ ಹಾಳಾಗುತೈತೆ
ಚಿಗಮ್ಮನ ಕೂಟೆ ವಾದಿ ಬ್ಯಾಡಮ್ಮ
ಚಿಗಮ್ಮನ ಕೂಟೆ ಜಗಳ ಬ್ಯಾಡಮ್ಮ
ಹೋಗಾನ ನಡಿಯನ್ನು ಚಿಗಮ್ಮನ ಮನಿಗೆ
ನೀಚ ಗಂಗೇತಾಗೆ ಎಂಗೆ ಬರಲಪ್ಪ
ಹೋಗಾನ ನಡಿಯಮ್ಮ ಚಿಗಮ್ಮನ ಮನಿಗೆ
ಬಂಗಾರು ಪಲ್ಲಕ್ಕಿಮ್ಯಾಲೆ ಕುತಕಂಡು
ಮಾಳಿಗೆ ಹತ್ತಿ ನೋಡವ್ವ ಮೇಲೆ ಗಂಗವ್ವ
ಯಾರಾಜು ಮದುವೆವ್ವ ಇಷ್ಟು ಸುಂಗಾರ

ಯಾರಾಜು ಮದುವಿಗಲ್ಲ ಇಷ್ಟು ಸುಂಗಾರ
ನಮ್ಮಕ್ಕ ಬರುತಾಳೆ ನನ ಮನಿಗೆ
ನಮ್ಮಕ್ಕನ ಪಂಥಾವ ನಾನು ನೋಡ್ಯಾನ
ಬಾಗಿಲೇ ಸಾರಿಸ್ಯಾಳ ಬಣ್ಣ ಕೊಟ್ಟ್ಯಾಳ
ಅಂಗಳ ಸಾರಿಸ್ಯಾಳ ಮುಗ್ಗು ಹೊಯ್ದ್ಯಾಳ

ಸಣಸಣ್ಣ ಮೀನೆಲ್ಲ ರಾಸಿಗಾಕ್ಯಾಳ
ದೊಡ್ಡದೊಡ್ಡ ಮೀನೆಲ್ಲ ಬಾಗಿಲಿಗೆ ಕಟ್ಟ್ಯಾಳ
ಹೆಂಡದಾ ಶೀಸೆಗಳ ಸಾಲಿಗಿಟ್ಟಾಳು
ಅಕ್ಕ ಬಡಬಡಾ ಬಂದು ಕಿವಿ ಮುಚ್ಚ್ಯಾಳ
ಶಿವಶಿವ ಅಂತ ಮೂಗು ಮುಚ್ಚ್ಯಾಳ
ಮಗನೋ ಈರಣ್ಣ ಬುದ್ದಿವಂತಾನೆ
ಈ ನೀಸುವಳಿಗೆ ಎಂಗೆ ಹೋಗಲೋ
ಆವಾಗ ಮಗ ಏನು ಹೇಳುತಾನ
ತಾಯಿ ಗೌರಮ್ಮ ನನಮಾತು ಕೇಳು
ಮೂಗು ಮುಚ್ಚಿದರೆ ಆಕಿ ತಪ್ಪು ಇಡುತಾಳೆ


ಬಾಯಿ ಮುಚ್ಚಿದರೆ ಆಕಿ ತಪ್ಪು ಇಡುತಾಳೆ
ಶರಣು ಮಾಡಮ್ಮ ಚಿಗಮ್ಮನಿಗೆ ಹೋಗಿ
ಎರಡು ಕೈ ಜೋಡಿಸಿಡು ತಾಯಿ
ಶರಣಮ್ಮ ಓ ಗಂಗ ನಿನಗೆ ಶರಣಮ್ಮ
ಆ ಮಾತಿಗೆ ಗಂಗ ಏನಂಬುತಾಳೆ
ನಿನ ಶರಣು ನನ ಶರಣು ಶಿವಗೆ ಇರಲಕ್ಕ
ಸ್ಯಾರೆ ನೀರುಕೊಡು ಓ ಪುಣ್ಯಗಂಗ
ನೀಚ ಗಂಗಿಗೆ ನೀರೇನು ಗೊತ್ತು
ಏನು ಮಾಡಿಕೊಂಡೆ ಈಗಲೇ ಬಂದೆ

ನಿನಗಿಲ್ಲದಾ ನೀರು ನನಗೆಲ್ಲಿ ಬಂತು
ಬಂಗಾರು ಪಲ್ಲಕ್ಕಿ ಕೊಟ್ಟೇನು ಸ್ಯಾರೆ ನೀರುಕೊಡು
ನಿನ್ನ ಪಲ್ಲಕ್ಕಿಯಂತ ತೊಟ್ಲು ಐದಾವೆ ನನ್ನ ಮನಿಯಾಗೆ
ಪೀತಾಂಬರ ಸೀರೆ ಕೊಟ್ಟೇನು ಸ್ಯಾರೆ ನೀರು ಕೊಡು ಗಂಗ
ನೀನು ಕೊಡುವಂತ ಸೀರೆ ನನಗೆ ಮಸ್ತೈದಾವೆ ಅಕ್ಕ
ಮಕ್ಕಳಾ ಕೊಟ್ಟೇನು ಸ್ಯಾರೆ ನೀರುಕೊಡು ಓ ಪುಣ್ಯಗಂಗ
ನಿನ ಮಕ್ಕಳು ನನಗು ಮಕ್ಕಳೆ ಅಕ್ಕ
ಮಗನೋ ಈರಣ್ಣ ಬುದ್ದಿವಂತಾನೆ
ಏನು ಕೊಟ್ರೂ ಗಂಗವ್ವ ಒಪ್ಪುವಲ್ಲದಲ್ಲ
ಇನ್ನೇನು ಕೊಡಲೋ ಮಗನೆ ಈರಣ್ಣ

ನಿನಪಾಲ ದೇವರಿಗೆ ಆಕಿ ಬಂದಾಳ
ಗಂಡನ್ನ ಕೊಟ್ಟೇನು ಒಪ್ಪಿಕೋಳಮ್ಮ
ಗಂಡನ್ನ ಕೊಟ್ಟೇನು ಮದುವೆ ಮಾಡೇನು
ಸ್ಯಾರೆ ನೀರುಕೊಡು ಓ ಪುಣ್ಯಗಂಗ
ಫಕ್ಕನೆ ನಗುತಾಳೆ ಪಾತಾಳ ಗಂಗಾ
ಸಿಕ್ಕಿದೇನಮ್ಮ ನನ್ನ ಕೈಯ್ಯಲ್ಲಿ
ಆಡಿದ್ದ ಮಾತುಗಳು ತಪ್ಪು ಬ್ಯಾಡಕ್ಕ
ಹಾಲುಕೂಟ ಭಾಷೆ ತಗುದಾಳು
ತುಪ್ಪಕೂಟ ಭಾಷೆ ತಗುದಾಳು
ಆಕಾಶಕೆ ಹಂದರವ ಹಾಕ್ಯಾಳು
ಶಿವನ ಕರೆದು ಗೌರಮ್ಮ ಮದುವೆ ಮಾಡ್ಯಾಳ
ಮದುವೆ ಜರುಗಿದಮ್ಯಾಲೆ ನೀರು ಕೊಟ್ಯಾಳೋ ಗಂಗಮ್ಮ
ಲೋಕಕ್ಕೆ ನೀರು ಕೊಟ್ಯಾಳೋ ಈ ಪುಣ್ಯಗಂಗ



# ದೊಂಬರ ಪದಗಳು



## ಬಾರೋ ರಾಮಯ್ಯ

ಬಾರೋ ರಾಮಯ್ಯ ನಿಮ್ಮ ಬಾಳ ನೆಂಬಿದೇ ನಾನು
ಬಾಳ ನೆಂಬಿದೇ ನಾವು
ದೂರ ಮಾಡುವರೇನಯ್ಯ ರಾಮಯ್ಯ ನೀವು
ಎಸಳಸಂಪಿಗೆ ಹೂವ ನೊಸಲೊಳಗಿಟ್ಟುಕೊಂಡು
ನೊಸಲೊಳು ಮುಡಕೊಂಡು
ಹಸುಮಗನಾಗಿ ಬಾರಯ್ಯ ರಾಮಯ್ಯ ನೀವು
ದುಂಡು ಮಲ್ಲಿಗೆ ಹೂವ ಮಂಡೆಯೊಳಗಿಟ್ಟುಕೊಂಡು
ಮಂಡೆಯೊಳ ಮುಡಕೊಂಡು
ಚೆಂಡನಾಡುತ ಮನೆಗೆ ಬಾರಯ್ಯ ರಾಮಯ್ಯ ನೀವು
ಚೂಜುಮಲ್ಲಿಗೆ ಹೂವು ಮೂಗಿನೊಳು ಮೂಸಿಕೊಂಡು
ಮೂಗಿನೊಳು ಮೂಸಿಕೊಂಡು
ಜೂಜನಾಡುತ ಮನೆಗೆ ಬಾರಯ್ಯ ರಾಮಯ್ಯ ನೀವು
ಬಾರೋ ರಾಮಯ್ಯ ನಿಮ್ಮ ಬಾಳ ನೆಂಬಿದೇ ನಾವು
ಬಾಳ ನೆಂಬಿದೇ ನಾವು
ದೂರ ಮಾಡುವರೇನಯ್ಯ ರಾಮಯ್ಯ ನೀವು


## ಗಿಣಿರಾಮ ಚೆಲ್ವಗಿಣಿರಾಮ

ಗಿಣಿರಾಮ ಗಿಣಿರಾಮ ಚೆಲ್ವಗಿಣಿರಾಮ
ಕಂಚಿನಂಥಾ ಮಾರಿ ನಿನ ಮಾರಿ
ಕಂಚಿನಂಥಾ ಮಾರಿ ಕರಗಿ ಬೆಂಡಾಯಿತೊ
ಎರವಾಯಿತೊ ಮಾವ ಗಿಣಿರಾಮ
ಒಂದು ಲೇಸಾಯಿತೊ ಗಿಣಿರಾಮ
ಬಂದು ಮೋಸಮಾಡಿ ಹೋದ ಗಿಣಿರಾಮ
ಹಂಬಲಾರದ ಜೀವ ಕರೆದಾರೇತಕು ಬಾರೊ
ಹಂಬಲ್ಲ ಬೇವಲ್ಲ ಗಿಣಿರಾಮ

ನಂಬಿದೆ ನಾ ನಿನ್ನ ಗಿಣಿರಾಮ
ಕಂಚಿನಂಥಾ ಮಾರಿ ಕರಗಿ ಬೆಂಡಾಯಿತೊ
ಎರವಾಯಿತೊ ಮಾವ ಗಿಣಿರಾಮ
ಒಂದು ಲೇಸಾಯಿತೊ ಮಾವ ಗಿಣಿರಾಮ

## ಜೋಡಿನ ಪಕ್ಷಿ ಅಗಲ್ಯಾವು

ಬೆಳ್ಳನೆ ಬೆಳೆಗಾದವು ನಲ್ಲಾನೆ ನಂದಾವು
ಜಲ್ಲದ ಹರವು ಜಲದೀಯ
ಜಲ್ಲನ ಹರವು ಜಲದಿ ತೊಡೆಯ ಮ್ಯಾಲೆ
ಕೊಳ್ಯಾನೆ ಕೊಟ್ಟಿ ಬಲಗೈಲಿ
ಮೂಡಲ ಮೂಡ್ಯಾವು ಪಡಗಲ ಉದಯಾದಾವು
ತಾವೂರಿಯ್ಯಾಗಿ ಚಿಗುರ್ಯಾವು
ತಾವೂರಿಯ್ಯಾಗಿ ಚಿಗುರ್ಯಾವ್ ಸೂರ್ಯದೇವ
ನೀ ಮೂಡಿ ಮಂಜು ಕವುದಾವು
ಮಂಜು ಕವುದಾವೊ ಮಾಗಾಯಿನ್ ಗುಡ್ಡಕ್ಕೆ
ಮಂಜಲ್ಲ ಕಾಣೊ ಸಕಣೀಯ
ಮಂಜಲ್ಲ ಕಾಣೊ ಸಕಣೀಯನ ಗುಡ್ಡಕ್ಕೆ
ದೂಪಾದವಾಗಿ ತಗುಲ್ಯಾವು
ಆಕಾಶದಾಗೆ ತುಂಬೆಯ ಹೂಗೇನಾತು
ಸಂಬುರಾಮಯ್ಯನ ಶಿವಪೂಜೆ
ಸಂಬುರಾಮಯ್ಯನ ಶಿವಪೂಜೆ ಹೊತ್ತೀಲಿ
ಸಂಭ್ರಮದ ಘಂಟೆ ನುಡಿದಾವು
ಆರತಿ ಮುನ್ನೂರು ಕೀರುತಿ ಮುನ್ನೂರು
ದೇವರ ಘಂಟೆ ಹದಿನಾರು
ದೇವರ ಘಂಟೆ ಹದಿನಾರ್ ರಾಮಯ್ನ
ಶಿವಪೂಜೆ ಮಾಡೊ ಸಡಗಾರ
ಕೆಮ್ಮಣ್ಣ ಮ್ಯಾಲೆ ಡಂಬಮ್ಮರೇನಯ್ಯ
ಅಲ್ಲಿ ರಾಮಯ್ಯ ಹೊಳೆ ಮಿಂದು
ಅಲ್ಲಿ ರಾಮಯ್ಯ ಹೊಳೆ ಮಿಂದು ಬರುವಾಗ
ಸನ್ನೆಯ ಡೊಳ್ಳು ನುಡಿದಾವು
ಮಂಚದ ಮೇಲ್ ಕುತುಕೊಂಡು ಮಾತನಾಡು ರಾಮಯ್ಯ



ವಂಚನೆ ಬಿಡು ನಿಮ್ಮ ಮನದಾಗೆ
ವಂಚನೆ ಬಿಡು ನಿಮ್ಮ ಮನದಾಗೆ ನಾ ನಿಮ್ಮ
ಮುಂಚಾಡಿದ ಮಾತೀಲ್ಯೆದೀನಿ
ಹಣ್ಣ ತರುಸುವೆ ಹರಿಹಬ್ಬ ಮಾಡಿಸುವೆ
ಸಾವಿರ್ದೊಂದ ತೇರ ಎಳಸುವೆ
ಸಾವಿರ್ದೊಂದ ತೇರ ಎಳಸೂವೆ ರಾಮಯ್ನ
ಕಣ್ಣ ಮುಂದೈತೆ ಕೈಲಾಸ
ದೇವರ ಮಂಡೆ ಮೇಲೆ ಹೂವ್ಯಾಕೆ ಬಾಡ್ಯಾವೆ
ರಾಜ್ಯಂಗಳ್ಯಾಕೆ ಗುಡುಸಾವೆ
ರಾಜ್ಯಂಗಳ್ಯಾಕೆ ಗುಡುಸ್ಯಾವ್ ರಾಮಯ್ಯನ
ಪೂಜಾರಿಗೆ ನಿದ್ದೆ ಕವುದಾವೆ
ಈ ಊರಿಗೆ ಊರಲ್ಲ ಈ ಕೇರಿಗೆ ಕೇರಲ್ಲ
ಈ ಊರು ನಮಗೆ ಸ್ಥಿರವಲ್ಲ
ಈ ಊರು ನಮಗೆ ಸ್ಥಿರವಲ್ಲ ನಾಳೆ ನಾವಿಟ್ಹೊತ್ತಿಗೆ

ಯಾವಲ್ಲಿದ್ದೇವು ಶಿವಬಲ್ಲ
ನಾಳೆ ಇಷ್ಟೊತ್ತಿಗೆ ನಾಡ ಮ್ಯಾಲಿನ ಪಕ್ಷಿ
ಕೂಡಿ ಮನೆಮಾರು ಗಿಣಿರಾಮ
ಕೂಡಿ ಮನೆಮಾರು ಗಿಣಿರಾಮ ನಾವಿಬ್ಬರೂ
ಜೋಡಿನ ಪಕ್ಷಿ ಅಗಲ್ಯಾವು


## ಕನ್ನಾ ಕೊರೆದು ಎನ್ನ ತಂದೆ

ಬೈಯ್ಯಾ ಬೇಡಿರಣ್ಣಗಳಿರ
ಕೈಯ್ಯಾ ಮುಗಿದು ಪೇಳುವೆ ನಿಮಗೆ

ಎಲ್ಲಿ ಇದ್ದ ಕಳ್ಳ ಕೊರಮ
ಕನ್ನಾ ಕೊರೆದು ಎನ್ನ ತಂದ

ಒಂದು ಸುತ್ತಿನ ಕಲ್ಲಿನ ಕ್ವಾಟಿ
ಎಲ್ಡಾ ಸುತ್ತಿನ ಕಂಚಿನ ಕ್ವಾಟಿ

ಆದರಾಯಡನಲ್ಲಿ ಆದರಾಯಡನಲ್ಲಿ
ಏಳುಪ್ಪರಿಗೆ ಮನೆ ಕಾಣೊ



# ಎರವರ ಕಾವ್ಯ



## ಚಿಕ್ಕಮ್ಮ

* "ಹೂ ಅಮ್ಮ ಇರುವೋದು ಹೂವಸ್ಥಾನಾವೇ
ಗಂಗಮ್ಮ ಇರುವೋದು ಗಂಗಸ್ಥಾನವೇ
ನೀಲಮ್ಮ ಇರುವೋದು ನಿಲಗಿರಿ ಬೆಟ್ಟಾವೇ
ಅಕ್ಕಮ್ಮ ಇರುವೋದು ಹನ್ನೆರಡು ಬೆಟ್ಟವೇ
ಚಕ್ಕಮ್ಮ ಇರುವೋದು ಚಿಲ್ಕುಂದ ಬೆಟ್ಟವೇ
ಚಿಲ್ಕುಂದ ಕೊನೆಬೆಟ್ಟದ್ಮೆಲ್ನೋಡಿದರೆ
ದೇವಿದೇವಕಳು ಕೂಟಕೂಡಿ, ಜಾಗನೋಡುವರೆ
ಜಾಗನೋಡುವರು-ತಳವನೋಡುವರು
ಕುಟ್ಟನೋಡುವರು-ಬೆಟ್ಟನೋಡುವರು."


ಚಿನ್ನದಲೆ ಕುಂಬದಲಿ ನೋಡಿದರೆ ದೇವಿ
ರತ್ನದಾಲೆ ತೊಟ್ಲು ಹುಟ್ಟಿತ್ತಲ್ಲೊ,
ರತ್ನದಾಲೆ ತೊಟ್ಲಲ್ಲಿ ನೋಡಿದರೆ
ಎಳೆಯ ಮಗುವಾಗಿ ಹುಟ್ಟಿ-ಹುಟ್ಟಿದಳೋ
ಸೂರ್ಯ ಚಂದ್ರರಾಗಿ ಹುಟ್ಟಿದಳೊ ದೇವಿ
ಕಾಮ-ಭೀಮನಾಗಿ ಹುಟ್ಟಿದಳೊ
ದಾಳಿಂಬೆ ಹೂವಾಗಿ ಬೆಳುದಾಳು ದೇವಿ
ದಾನಾದ ಕೋಲಂಗೆ ಬೆಳುದಾಳು ದೇವಿ.
ರಸುಬಾಳೆಂಕಂದಾಗಿ ಬೆಳುದಾಳು ದೇವಿ
ಕರಿಯ ಕಬ್ಬಿನ ಜಲ್ಲೆ ಎಳೆಯ ಮಾವಿನ ಪತ್ರೆ

ಕಡ್ಡಿಯಾಲೆ ಕಂಬಾದ ಮೇಲೆ ನಿಂದು ಮೆರುವಾಳೋ
ಎಣ್ಣೆಕೆಂಪಿನವಳಾರಮ್ಮ, ಚಿಕ್ಕಮ್ಮ ಸಿರಿದೇವಿ
ಬಟ್ಟೆ ಮುಖದವಳಾರಮ್ಮ ಚಿಕ್ಕಮ್ಮ ಸಿರಿದೇವಿ


ಏಳುಪ್ಪರಿಗೆ ಮನೆ ಒಳಗೆ
ಕಣಗಾಲ್ಲುವಿನ ತಳಿ ಮಂಚ

ಕಣಗಾಲ್ಲುವಿನ ತಳಿ ಮಂಚದ ಮ್ಯಾಲೆ
ನಾನೊಬ್ಬಳೆ ಮಲಾಗಿದ್ದೆ.


ಮಾರುದ್ದ ಮಂಡೆಯ ವದರುತ್ತ ನಿಂದಾಳೊ
ಬಣ್ಣದಾ ಬಾಚಣಿಗೆ ಕೈಯಲ್ಲಿ ಪಿಡಿದಾಳೊ
ಚಿನ್ನದಾ ಸೀರಣಿಗೆ ಕೈಯಲ್ಲಿ ಪಿಡಿದಾಳೊ
ಚಿನ್ನ ಸೀರಣ್ಗೆಲಿ ಸೀರಿ ಸಿಕ್ಕ ಬಿಡಿಸಾಳೊ
ಬಣ್ಣಬಾಚಣೇಗಿ ಬಾಚಿ ಬಗುತಾಲೆ
ಒಂದುವಾ ತಲಾಗೆ ಒಂಬತ್ತು ಬೈತಾಲೆ
ಮಾರುದ್ದ ಮಂಡೆಯ ತುರುಬು ಕಟ್ಟವಳೆ
ಹಲ್ಲಿಗೆ ಹಲ್ಕಪ್ಪು, ಕಣ್ಣಿಗೆ ಕಣ್ಕಪ್ಪು ಹಣೆಗೆ ಕುಂಕುಮವ
ಇಕ್ಕಿ ನಿಂದಾಳು
ಕಾಗಿನ ಸೀರೆಯ ನೆರ್ಗೆಯ ಪಿಡ್ಡವಳೆ
ಚೀಟಿಯ ರವಿಕೆಯ ತೋಳಲಿ ತೊಟ್ಟವಳೆ



ತನ್ನ ಚಂದಾವ ತಾನೇ ನೋಡಿ ನಗುತಾಳೆ
ಸಾಕಿನ ಕುದುರೇಗೆ ತೋಪಿನ ಬಣ್ಣಾವೇ
ಕೆಂದಾವ ಕುದುರೇಗೆ ಜೀನಿಯ ಬಿಗುದವರೆ
ಹೂವಿನಾ ಸಬ್ರಾವ ಬೆನ್ನಿಗೆ ಕಟ್ಟವರೆ
ಕುದುರೆಯ ಮೇಲೀಗ ಮೂರುತವಾದಾಳು
ಎಂಟುನಾ ದಿಕ್ಕುನೇ ಸೋದನೆ ಮಾಡುವಳು
ಆಡೋರ್ಗೆ ಆರ್‍ಮಾತು, ದೇವರಿಗೆ ಮೂರ್‍ಮಾತು
ಒಂದಳ್ಳಿ ಉಳಿಸವಳೆ ಒಂದಳ್ಳಿ ಕೆಡಿಸವಳೆ
ಎಂಟುವ ದಿಕ್ಕಿಗೆ ಎಸ್ರುವಾ ಪಡೆದವಳೆ
ಮಕ್ಕಿಲ್ಲದವರಿಗೆ ಮಕ್ಕಕೊಡಿಸುವಳೆ
ಕಂದ್ನಿಲ್ಲದವರಿಗೆ ಕಂದ್ನಕೊಡಿಸುವಳೆ



# ಇಲ್ಲಿಗರ ಕಾವ್ಯ



## ‘ದೊಡ್ಡಮ್ಮ’

ಗುಡ್ಡೆ ಗುಡ ಗುಡ ಮದ್ದಿನ ಧಿಮಿ ಧಿಮಿ
ಮುದ್ದು ದೊಡ್ಡಮ್ಮ ಗುಡಿಯಲ್ಲಿ । ಶಿವಪೂಜೆ
ಬೆಳ್ಳಿಯ ಗಂಟೆ ಗಲಿರೆಂದೋ ॥

ಯಾರು ಕರೆದರೂ ಎದ್ದುಬರಲಲ್ಲೇ ದೊಡ್ಡಮ್ಮ
ಮಡಿವಾಳಿ ಬಂದು ಮಡಿಬುಟ್ಟು । ಕರೆದಾನೆ
ಎದ್ದು ಬಂದಳುತಾಯಿ ಮಜ್ಜನಕೆ ॥
ಪೂಜೆಗೆ ಹೊತ್ತಾಯ್ತು ಪೂಜಾರಿಯೆಲ್ಲಿಗ್ಹೋದ
ತಾನದ ಹೊಂಬಾಳೆ ತರುಲ್ಹೋದ । ಪೂಜಾರಿ
ದುಂಡು ಮಲ್ಲಿಗೆ ವನಕ್ಹೋದ ॥

ದುಂಡು ಮಲ್ಲಿಗೆ ಬಿಡಿಸಿ ದಂಡೇಯ ಮಾಡಿ
ತಾಯ ಪೂಜೆಗೆ ತರುತಾನೆ । ದೊಡ್ಡಮ್ಮನ
ಪಾದಕೆ ಹೊಂಬಾಳೆ ತರುತಾನೆ ॥

ಕೋಳಿಕೂಗೋದ್ಕು ಮುನ್ನ ನಾರೇರುಏಳದಕ ಮುನ್ನ
ಹೂವಿನ ಕುಕ್ಕೆ ಬಲಗೈಲಿ । ಹಿಡಕೊಂಡು
ಪೂಜವೊತ್ತಿಗೆ ಹದುವಾದ ॥

ದೇವರಿಗೆ ಆಗಬೇಕು ಹೂವಕೊಡು ಪೂಜಾರಿ
ಹೂವಿಲ್ಲಮಗಳೆ ಬರಿಮೊಗ್ಗು ।
.......................................

ಕರಿಯ ಅಂಚಿನ ಸೀರೆ ಕಣಕಾಲ್ಗೆಹರಿಸಿಣ
ಕೆಣಕಿ ನೋಡವಳ ಕಿಡುಗಣ್ಣು । ದೊಡ್ಡಮ್ಮ
ಮಲೆತೋರ ಮನೆಯ ಮುರಿಯೋಳು ॥



ಕಾದ ಅರೆಮ್ಯಾಲೆ ಈದ್ದೂಲಿ ನಿಲಿಸಿಕೊಂಡು
ಹಂಡೇಲಿ ಹಾಲ ಕರೆಯೋಳೆ । ದೊಡ್ಡಮ್ಮ
ಹಂಡೆ ತುಂಬಿದ ಹಾಲು ನೆಲ ಸಾಲು ತಾಯವ್ವ
ಹುಲಿಹಾಲು ನಿನಗೆ ಸಲುವಾದೋ ॥

ಸಂಜೆ ಮಳೆ ಉಯ್ದು ಗಂಧದ ಕೆರೆತುಂಬಿ
ದೊಡ್ಡಟ್ಟಿಗೆ ದನ ಬರಲಿಲ್ಲ । ದೊಡ್ಡಮ್ಮ
ನಿನ್ನೆದೆ ತುಂಬಿದ ಹಾಲು ನೆಲಪಾಲು

ಪಿಲ್ಲಿಕಾಲಿನೋಳೆ ಚಲ್ಲಿದ ನಿರಿಯೋಳೆ
ಕಲ್ಲಮ್ಯಾಲೆ ಕಾಲ ತೊಳೆಯೋಳೆ । ದೊಡ್ಡಮ್ಮ
ಪಿಲ್ಲಿ ಹೊಳೆದಾವು ಬಿಸಲೀಗೆ

ಪಿಲ್ಲಿ ಬೆಲೆಯಾದೋ ಸಾವುರಕೆ ದೊಡ್ಡಮ್ಮ
ಸಾವುರಕೆ ತಂದಿನ್ನಿ ಸಣ್ಣಸೀರೆ । ತಾಯವ್ವ
ನನ್ನೊಂದಿಗೇಕೆ ಮಕ ಮುನಿಸು

ಕೊಂಗನಾಡಿಗೆ ಹೊರೆಟವ್ನೆ ದೊಡ್ಡಮ್ಮ
ಕೊಂಡು ಕೊಟ್ಟಾರವ್ರು ಕುದುರೆಯ । ತಾಯವ್ವಗೆ

ಅವ್ವು ಕೆಂಧೂಳ ಕೆದರಿ ಬರುತಾಳೆ

ಕೆಂಧೂಳ ಕೆದರಿ ಬರುವಾಗ ತಾಯವ್ವ
ಹಸು ಮಕ್ಕಳಾರು ಬೀದಿಲಿರಬೇಡಿ । ಕುದುರೇಯ
ಕಾಲಿಗೆ ನೀವು ಸಿಕ್ಕಬೇಡಿ

ಕ್ಯಾಸಕ್ಕಿ ಅನ್ನ ದಾಸುಬದನೇಕಾಯಿ
ಹಸಿ ಹಸಿ ಮಡಿಯ ಪರುಸಾದ । ತಾಯವ್ವ
ಮೋಸಮಾಡಿದೋರ ಸಿರಿಹರಿಯೇ

ಕ್ಯಾಸಕ್ಕಿಯನ್ನ ಸಲುಸೀರೆ ದಾಸಯ್ಗೆ
ದಾಸಯ್ಯನಲ್ಲ ಯಾಸುಗಾತಿ । ದೊಡ್ಡಮ್ಮ
ಯಾಸಕ್ಕೆ ದೇಸ ತಿರುಗೋಳು

ದೊಡ್ಡಮ್ಮನ ಗುಡಿಸುತ್ತ ಸಾಲು ತೆಂಗಿನ ವನ
ಕಳ್ಳರು ಕುಯಿವಾಗ ಎಳುಗಾಯಿ । ಸುಳುಗಾಯಿ
ಹಬ್ಬದ್ಹೊತ್ತಿಗೆ ಇಡು ಗಾಯೋ

ಒಡೆಗಾಯಿ ಒಡಸೂ ಈಡುಗಾಯ ಹಾಕಿಸೂವೆ
ಎಳನೀರ ಕೋಡಿ ಹರಸೂವೆ । ದೊಡ್ಡಮ್ಮ
ಹಸು ಮಕ್ಕಳಲ್ಲಿ ಹಸಗಾತಿ

ಹದಿನೆಂಬು ದೀಪ ಉರಿಸುವೆ ದೊಡ್ಡಮ್ಮ ತಾಯೇ
ಪಟ್ಟೇಯ ಸೀರೆ ಉಡಿಸೂವೆ । ತಾಯವ್ವ
ನನ್ನೊಂದಿಗೇಕೆ ಮಕ ಮುನಿಸು

ಬಡವೀಯ ಮನೆಗೆ ಯಾಕ ಬಂದೆ ತಾಯಮ್ಮ
ಮಡಿಲಲ್ಲಿ ಕಟ್ಟಿವ್ನಿ ಪಡಿಧೂಪ । ದೊಡ್ಡಮ್ಮ
ನಾನು ಬಡವಿಕಣವ್ವ ದಯವೀಡೆ

ಹೆಣ್ಣು ಮಕ್ಕಳಲ್ಲಿ ಹಸಗಾತಿ ತಾಯಲ್ಗೆ
ಹೆಣ್ಣು ಮಕ್ಕಳು ತಂದೀವಿ ಮಡಿಯಾರತಿ । ದೊಡ್ಡವ್ವ
ಅಕ್ಕಮಡಿಲಲ್ಲಿ ಕಟ್ಟವಳೆ ಹುರಿಗಡಲೆ ॥ ತಾಯವ್ವ
ಹಸು ಮಕ್ಕಳ ಸಲುವಾಗಿ ತಂದವಳೆ

ಸಂಜೇಲಿ ನೀರಿಗೆ ಸಂಗಡ ಯಾರಮ್ಮ
ಹಿಂದೆ ಬರತಾಳೆ ಕಿಡುಗಣ್ಣಿ । ದೊಡ್ಡಮ್ಮ
ಕೆಣಕುಬ್ಯಾಡ ಮಗಳೆ ಮಗಿ ನೀರ

ಗುಡ್ಡಗುಡಗೀತು ನಡುಬಣ್ಣ ಮಿಂಚೀತು
ಮಳೆಬಂದರೆಲ್ಲಿ ತಪಸಿರುವೆ । ತಾಯವ್ವ
ಅಡಕೆ ಹೊಂಬಾಳೆ ಸುಳಿಯಲ್ಲಿ । ಕೂಕಂಡು
ಕಿರಿಜೆಡೆಗೆ ಮೊಗ್ಗ ಹೆಣೆದವಳೆ

ಸಂಜೆ ನೀರಿಗೆ ಸಂಗಡ ವೋಗುವಾಗ
ಹೆಬ್ಬೂಲಿ ಮ್ಯಾಲೇರಿ ಮೆರುದಾಳೆ । ಸವಾರಿ
ಹಸು ಮಕ್ಕಳು ಕಂಡು ಹೆದಿರ್‍ಯಾವೆ

ಪುಟ್ಟೀಲಿ ಹಣ್ಣು ಹೆಡಗೇಲಿ ಕಾಯಿ ಬಂದೋ
ತಾಯನಿಗ ಕೊಂಡಕೆ ಸವುದೆ ಬಂದು । ನಿಂತಾವೆ
ಮೂಗಂಡುಗದಕ್ಕಿ ಮುಯ್ಯಿ ಬಂದು

ಮೂಗಂಡುಗದಕ್ಕಿ ಮುಯ್ಯಿ ಬಂದೋ ತಾಯವ್ವ
ನಿನ್ನ ಮುಂಕೊಂಡ ಹಾಯೋ ಮಗನಿಗೇ । ಪೂಜಾರಿಗೆ
ಕೊಂಡದ ಸವುದೆ ಚಿಗುರಾದೋ

ಕುಣಿವಾಗ ಕಚ್ಚಿನ ಸೀರೆ ಮೆರೆವಾಗ ಮದುರೆ ಬಣ್ಣ
ಕುಣಿದು ಮೆರೆದು ಕೊಂಡಾಕೆ । ವೋಗುವಾಗ
ಚಂದ್ರುಗಾವಿಯ ಬಣ್ಣ ಹೂವಿನ ಸೀರೆ

ಚಂದ್ರು ಗಾವಿಯ ಬಣ್ಣ ಉಟುಕೊಂಡು ತಾನಕ್ಕೆ ಹೋಗಿ
ಮಲಗಿ ನಿದಿರೆ ಮಾಡುವಾಗ ತಾಯವ್ವ ।....
ನಮ್ಮನ್ನು ನೀನು ಮರಿಬ್ಯಾಡ । ದೊಡ್ಡವ್ವ

ಜಾರಿ ಬಿದ್ದರೆ ನಮ್ಮ ಹಿಡಿಬೇಕು ॥ ತಾಯವ್ವ
ಸೆರಗೊಡ್ಡಿ ಬೇಡುವೆ ನಿಮಪಾದ

ಮೂಗುತಿ ಮುಂಭಾರ ಹೆಣೆಗಂಟು ಹಿಂಭಾರ
ಎಳುಎಳೆ ಗುಂಡು ಎದೆ ಭಾರ । ತಾಯವ್ವ
ತಾನುಟ್ಟ ಸೀರೆಭಾರನಿರಿ

ಹೆಬ್ಬಿದಿರು ಕಿರುಬಿದಿರು ಹಬ್ಬಿದ ಸೀಗೆ ಮುಳ್ಳು
ನಿನ ಪೂಜೆ ಮೆರೆಯೋಕೆ ತಳವಿಲ್ಲ । ದೊಡ್ಡವ್ವ
ಚಿಳ್ಳುಗುರಲ್ಲೇ ಬಯಲಾಗೇ....

ಒಂದೇ ಅಚ್ಚಿನ ಬೆಲ್ಲ ಒಂದೇ ತೆಂಗಿನಕಾಯಿ
ಕಡಸೆಮ್ಮೆ ಕರೆದ ನೊರಿಯಾಲು । ದೊಡ್ಡವ್ವ
ಗಿಣ್ಣಮಾಡಿ ನಿಂಗೆ ಸಲುಸೇನು



## ಕಾಳವ್ವನ ಹಾಡು

ಕಬ್ಬಾಳವ್ವಂಗೆ ಕಬ್ಬುಣದ ಉಯ್ಯಾಲೆ
ದರುಬೆ ಹುಲ್ಲಿನ ನಡುಮನೆ । ಕಾಳವ್ವ
ಜಲಜಲನೆ ಬೆವುತಾಳಲ್ಲೇ ಕಾಳವ್ವ
ಜಲದ ಬ್ಯಾಟೆ ಹೊರಟಾಳಲ್ಲೇ
ದರುಬೆ ಹುಲ್ಲಿನ ನಡು ಮನೆ । ಕಾಳವ್ವ
ಮರೆತೋರ ಮನೆಯ ಮುರಿಯೋಳೆ

ಕರಿಯಂಚಿನಸೀರೆ ಕಣಕಾಲಿಗರಿಷಿಣ
ಕೆಣಕಿ ನೋಡವಳ ಕಿಡಿಗಣ್ಣೆ । ಕಬ್ಬಾಳವ್ವ
ಮರೆತೋರ ಮನೆಯ ಮುರಿಯೋಳೆ

ದುರ್ಗದಲಿ ನಿಂತುಕೊಂಡು ಯಾರಾರ್ನ ಕೂಗಲಿ
ದೂರ ಹೋಗವನೆ ನಿನ್ನ ಮಗ । ಸಿಡಿರಾಯ
ಕಲ್ಲುಕಂಬವ ತರುವೋಕೆ

ಒಕ್ಕಳಕ್ಕೆ ಅನ್ನ ಚುಚ್ಚಿದ ಬಾಯಿಬೀಗ
ಹೊಕ್ಕು ಹೊಳೆಯಲ್ಲಿ ಬರುಲಾರೆ । ಕಾಳವ್ವ
ಒಪ್ಪಿಸಿಕೊಳ್ಳವ್ವ ಹರಕೇಯ

ಒಪ್ಪಿಸಿಕೊಳ್ರೋದಕೆ ಚಿಕ್ಕವ್ನ ಮಗಳೇನೆ
ಬಾಮಗಳೆ ಬಾರೆ ನನ್ನಗಿರಿಸುತ್ತ ।

..........................................

ಮೂಗುತಿ ಮುಂಭಾರ ಹೆಣೆಗಂಟು ಹಿಂಭಾರ
ಎರಡೆಳೆ ಗುಂಡು ಎದೆಭಾರ । ಕಾಳವ್ವನ
ಚಂದರ ಕಾಳವ್ವನ ತವರೂರು

ಕಬ್ಬಾಳ ಗುಡಿಮುಂದೆ ಇಟ್ಟಂಗಿ ಚೌದಂಗಿ

ಪಟ್ಟಿದೋತುರದ ಸಿಡಿರಾಯ । ಮೆರೆದಾನೆ
ಅವರಕ್ಕ ತಂಗೇರ್‍ಗೆ ಹುಸಿರ್ಬಾಗ

ಕಬ್ಬಾಳವ್ವನ ಗುಡಿಸುತ್ತ ಸಾಲು ತೆಂಗಿನಮರ
ಹಬ್ಬದೊತ್ತಿಗೆ ಎಳಗಾಯಿ । ಸುಳಗಾಯಿ
ನಿನ್ನ ಸಿಡಿ ಹೊತ್ತಿಗೆ ಈಡಗಾಯಿ

## ಮಾದಯ್ಯ

ಮಾದಯ್ಯ ಮಲ್ಲಿಗೆ ಸರಗೂರಯ್ಯ ಸಂಪಿಗೆ
ಇಬ್ಬರೈಗೋಳು ಜತೆಗೂಡಿ । ಹೋಗುವಾಗ
ನಾನೊಬ್ಬಳ್ಹೋಗಿ ಸರಣೆಂದೆ

ಎಲ್ಲಿಗ್ಹೋದ್ರಿಸ್ವಾಮಿ ಮರುದೇವ್ರೇ
ಮೊಗ್ಗು ತಂದಿದ್ದೆ ನಾನು

ಹಾಲರವಿಚಂದ ಅರೆದ ಗಂಧಚಂದ
ಕರೆದ ಹಾಲಿನ ನೊರೆ ಚಂದ । ಮಾದಯ್ಯ
ನಿನ್ನೊಪ್ಪತ್ತಿನ ಪೂಜೆ ಬಲು ಚಂದ

ಹಾಲರವಿ ಕೊಟ್ಟರೆ ವಾಲೆ ಭಾಗ್ಯವ ಕೊಡುವೆ
ಸಂತನ ಪುತ್ರನ ಕೊಡುಸ್ವಾಮಿ

ಎಲ್ಲಿಂದಲೋ ಬಂದು ಎಲ್ಲೆಲ್ಲಿಗೆ ತಳುಗ್ಯವರೆ
ಎರಡು ಬೆಟ್ಟದ ಎಡೆಯಲ್ಲಿ । ಮಾದಯ್ಯ
ದೊಡ್ಡ ಅರೆಯಲ್ಲಿ ತಳುಗ್ಯವರೆ

ಹಣ್ಣುಲಿ ಹಾಸಿಗೆ ಗಂಡ್ಹುಲಿ ಗದ್ದಗೆ
ಏಳೆಡೆಸರುಪ ತಲೆದಿಂಬು । ಹಾಕ್ಕೊಂಡು
ಸ್ವಾಮಿ ಸುಖನಿದ್ರೆ ಮಾಡುತಾನೆ

ಅಂಚಿವಾಳಲ್ಲಿ ಹೊಂಚಾಕೋನವನಾರೆ
ಹೆಂಡರಿಲ್ಲದ ಪುಂಡುಗಾರ । ಮಾದಪ್ಪ
ಗಂಡ್ಹುಲಿ ಮ್ಯಾಲೆ ಮೆರೆದಾರೋ.......

## ಗವುರಿ ಶಂಕರ ಸಂವಾದ

ಹೊಂಗೆ ಕಾಯಿ ಬಂದೋ ಗವುರಿಯ ಹಬ್ಬಬಂದೋ
ನಾ ನೋಯ್ತೀನಿ ಸ್ವಾಮಿ ತವರಿಗೆ । ಅಂದsರೆ
ನಿನ್ನ ತವರೋರು ಅಂಬರಿಗೂ ಬಡವಾರು
ನೀನಾವ ತವರೆಂದು ಬೆರೆತೀಯೆ

ಆನೆಮ್ಯಾಲೋಗೋರ್ನ ದಾನಕ್ಕೆ ಕೈ ನೀಡಿ
ದಾನವ ಹಾರುವಯ್ಯನ ಮಗಳಲ್ಲೆ । ಸಿರಿಗೌರಿ
ನೀನಾವತರೆಂದು ಬೆರೆತೀಯೆ?

ಒಂಟಿಮ್ಯಾಲೋಗೋರ್ನ ಬಂಟರಿಗೆ ಕೈ ನೀಡಿ
ನೀನು ಬಂಟ ಹಾರುವಯ್ನ ಮಗಳಲ್ಲೆ । ಗೌರಿ
ನೀನಾವ ತವರೆಂದು ಬೆರೆತೀಯೇ

ನಿನ್ನಪ್ಪನ ಮನೆಯೋರು ಅಂಬಲೀಗು ಬಡವರಲ್ಲೆ
ಕೊರಳ ಪದಕ ಕಳದಿಟ್ಟು । ಅರಮನೇಲಿ
ಬಿಚ್ಚಿಟ್ಟು ಹೋಗೆ ಸಿರಿ ಗೌರಿ

ಕಂದನ ಕೈಲಿರುವೋ ಚಿನ್ನದುಂಗುರವ
ನೀಕಳದಿಟ್ಟು ಹೋಗೆ ಅರಮನೇಲಿ । ಸಿರಿಗೌರಿ
ಮೋರೆ ತಿರುವೋರ ತವರಲ್ಲೇ

ಹಾಗಲಕಾಯಂಗೆ ನಮಗದವರು ಹಗೆಯೋರು
ಆಗದೋರ ಎದುರೀಗೆ ಹಟವ । ಗೆಲಿಸೂವೆ
ಹೋಗದೀರೆ ಗೌರಿ ತವರೀಗೆ

ನನ್ನ ತವರೋರು ಅಷ್ಟಕೂ ಬಿಡವಾರು ಸ್ವಾಮಿ
ತವರೂರ ನೆಪ್ಪೆ ಹಗೆಯಾದೋ । ನಿಮಗೆ
ತವರ ಜರೆಯೋದು ತರವಲ್ಲ

ನನ್ನ ತವರೋದು ಅನ್ನಕ್ಕೂ ಬಡವಾರು
ನನ್ನ ತವರೋರು ನಿಮಗೆ ಹಗೆಯಾದೋ ಶಿವರಾಯ
ನನ್ನ ತವರೂರ ಜರಿಬ್ಯಾಡಿ

ನೀನುಟ್ಟ ಪಟ್ಟೆಸೀರೆ ನನದಲ್ಲೆ ಸಿರಿಗೌರಿ
ನಿನ್ನ ತವರೋರು ಬಡವರು ಕಣೆ । ಗೌರಿ
ಬಿಚ್ಚಿಟ್ಟು ಹೋಗೇ ತವರೀಗೆ

ಆಂಬಲಿ ಕುಡಿದರೂ ತರಗೆಲೆ ತಿಂದರೂ
ನನ್ನ ಮ್ಯಾಲಿರೋ ಒಡವೆ ಮುಟ್ಟೋರಲ್ಲ । ಶಿವರಾಯ
ನನ್ನ ತವರೂರ ಜರೀಬೇಡ
ಕಾಕೀಕಾಯಿ ತಿಂದಾರೂ ಕಂಬಾಳಿ ಹೊದ್ದಾರೂ
ನನ್ನ ಮಯ್ಯಾಗಳ ಒಡವೆ ಕಳೆಯೋರಲ್ಲ । ಶಿವರಾಯ
ನೀವು ಕಳುಗಿರಿ ನನ್ನ ತವರೀಗೆ

ನಿನ್ನಪ್ಪನ ಮನೆಯೋರು ಉಪ್ಪಿಗು ಬಡವರಲ್ಲೆ
ನೀನಾವ ತವರೆಂದು ಬೆರೆತೀಯ । ಗೌರಿ
ವೋಗದೀರೆ ನಾರಿ ತವರೀಗೆ

ಹೆಣ್ಣು ಮಕ್ಕಳು ತವರ ನೋಡಬೇಕು ಶಿವರಾಯ
ನಗುನಗುತ ಹೋಗಿ ಬರುತೇನು । ಸ್ವಾಮಿ
ಒಪ್ಪತ್ತು ನಾನಿದ್ದು ಬರುತೇನು

ಬಟ್ಟೆಯ ನನ್ನದಲ್ಲೇ ಒಡವೆಯು ನನ್ನದಲ್ಲೇ
ಹೆಂಗೆ ನಂಬಿ ನಿನ್ನಕಳುಗಾಲೆ । ಸಿರಿಗೌರಿ
ಹೋಗದಿರೇ ನಾರಿ ತವರೀಗೆ

ಅಂಬಲಿ ಕುಡಿದೇನು ಉಪಾಸ ಇದ್ದೇನು
ನಾನೊಪ್ಪತ್ತೆ ಇದ್ದ ಬರುತೇನು । ಶಿವರಾಯ
ಕಳುಗೀರಿ ನನ್ನ ತವರೀಗೆ

# ಸಿದ್ದಿಯರ ಕಾವ್ಯ



## ಮದ್ದೂರಮ್ಮ

ಅವ್ವನ ಗುಡಿ ಮುಂದೆ ಸಾಲು ತೆಂಗಿನಮರ
ರೆಂಬೆ ಕೊಂಬೆಲ್ಲ ಎಳಗಾಯಿ । ಸೊಳಗಾಯಿ
ಹಬ್ಬದ್ಹೊತ್ತಿಗೆ ಈಡಗಾಯಿ

ಕರಕಡಗ ಇಕ್ಕೊಂಡು ಕಿರಿಮಡಿಕೆ ಕಟಿಯಾಗೆ
ವಾರಣವೇನೇ ಮನೆಯಾಗ ಮದ್ದೂರಮ್ಮ
ಸುಕುರಾರವೇನೆ ನಿನ ಪೂಜೆ

ಅಂಜಬ್ಯಾಡಿರಿ ಗಂಧದ ಬಳಕೊಳ್ಳಿ
ಚಂದಕ್ಹೊಂಬಾಳೆ ಹಿಡಕೊಳ್ಳಿ । ಅಮ್ಮ
ಚಂದಕ್ಹೊಂಬಾಳೆ ಹಿಡಕೊಳ್ಳಿ

ಕೊಂಡದ ಸುತ್ತೂರ ಹಿಂಡೆಮ್ಮೆ ಮೇಸೋಳೆ
ಗಿಂಡೇಗೆ ಹಾಲು ಕರಿಯೋಳೆ । ಮದ್ದೂರಮ್ಮ
ಗಿಂಡಿ ತುಂಬಿ ಕೋಡಿ ಹರಿದಾವೆ

## ಸಾರಾಯಿ ಹಂಬಲ

ಅದ್ರ್ಯಾ ರಾತಿಕುದಾರೂ
ಪಿಯುಚೆ ಯಾದ ಯಲಿಕಾಯ
ನಿಗಂಪ್ಪಚ ಅಂಗಡಿಕು ಒಂದು ಅಸ
ಅರ್ಧ ರಾತ್ರಿಯಲ್ಲಿ ಸಾರಾಯಿ ಕುಡಿಯುವ ಹಂಬಲ ಬಂತು
ಆದರೆ ನಿಂಗಪ್ಪನ ಅಂಗಡಿ ಬಂದಾಗಿದೆ

೨. ಅನಿಬರಿ ಸುಕ್ಕಿ ಬಡಾಯ ಮಾಜಾ ಬಾವಡಿ
ಉಡೆಲ್ಲೆ ಸಾಟಿ ಪೈಸೆ ತಾಬ್ಯಾಚೆ
ಬರಿ ಸುಕ್ಕಿ ಬಡಾಯ ಮಾಜಾ ಮಾಮ

ಒಣ ಸೊಕ್ಕನ್ನು ತೋರುಸುತ್ತಾ ಜನರ ಮೇಲೆ ಕುಸ್ತಿಗೆ
ಹೋಗುತ್ತಿದ್ದವನಿಗೆ ಇಂದು ೬೦ ಪೈಸೆ ಬಂಗಾರವಾಗಿ ಕಾಣುತ್ತಿದೆ

೩. ಅರ್ದ್ಯ ರಾತಿಕು ಯಯಚೆ ಕುಕಾಡು ಮಾಗಚೆ
ಗಣಪೈಯಚಾ ಅಂಗಡು ಬಂದ್ ಅಸಬೀ
ಉಡೆಲ್ಲೆ ಸಾಟ ಪೈಸೆ ಲೋಕಡಚೆ.
ಅರ್ಧರಾತ್ರಿಯಲ್ಲಿ ಕೋಳಿ ಕೊಡಿ, ಒಂದು ರೂಪಾಯಿ
ಕೊಡುತ್ತೇನೆ ಅಂದಾಗ ಮೊದಲ ಬಾಕಿಕೊಡು ಅನ್ನುತ್ತಾರೆ.
ಅದಕ್ಕಿವನು ರೂಪಾಯಿ ಕೇವಲ ಕಬ್ಬಿಣದ್ದು ಎನ್ನುತ್ತಾನೆ.

ಸೂಚನೆ: ಭಾಷೆಯ ತೊಡಕಿನಿಂದಾಗಿ ಪದ್ಯಗಳಿಗೆ ಕೊಟ್ಟಿರುವ ಅರ್ಥ ಸ್ಪಷ್ಟವಾಗಿಲ್ಲದಿರುವ ಅನುಮಾನಗಳಿವೆ. ಕ್ಷಮೆಯಿರಲಿ.



## ಮೇರಿ

ಮಾಜಿ ಮೆರಿಗೆ ಬಾಯ
ಮಾಜಿ ಮೆರಿಗೆ ಬಾಯ್
ಒಬ್ಬ ತಂದೆಗೆ ಒಬ್ಬಳೇ ಮಗಳು ಮೇರಿ

ಪಳ ಪಳ ಬಡಾಕ್ಯಾ ಪಳುಕು ಲಾಗಲೂ
ಮರಿಚಿ ಪಾಟತು ದರಲ್ಯಾನ
ಮಗಳಿಗೆ ಚಿಂತೆ ಹತ್ತಿ ಓಡಿ ಹೋಗಲು ಯೋಚಿಸುತ್ತಾಳೆ
ತಂದೆ ಬಿಡುವುದಿಲ್ಲ

ಮೆರಿ ಬಸ್ಸು ಚಡಲಿ
ಮೆರಿ ಗೋವಾಕು ಗೇಲಿ
ಮೇರಿ ಬಸ್ಸು ಹತ್ತಿ
ಗೋವಾಕ್ಕೆ ಹೋಗಬೇಕೆಂದು ತವಕಿಸುತ್ತಾಳೆ

ಮೆರಿಕು ವಾಟು ಚುಕಾಲಾ
ಮೆರಿ ವನದೇಶ ಜಾಲಿ
ಮೇರಿ ಚಿಂತೆ ಮಾಡುತ್ತಾ ಓಡುವ ಸಮಯದಲ್ಲಿ ದಾರಿ ತಪ್ಪುತ್ತದೆ

ಮೆರಿ ಗರಾಕು ಯಲಿ
ಮೆರಿ ಚಿಂತ್ತಾ ಕರತಾ
ಮತ್ತೆ ಮೇರಿ ಹಿಂತಿರುಗಿ ಬರುತ್ತಾಳೆ
ಆದರೆ ಅವಳನ್ನು ಚಿಂತೆ ಆವರಿಸುತ್ತದೆ

## ವಿಮಾನ

ಗರಾ ವೈನಾ ವಿಮಾನುಗೆಲೆ
ಬಗಲ್ಯಾಸಿ ಕಾಯರೆ
ಬಗಲ್ಯಾಸಿ ಕಾಯರೆ
ಬಗುಚೆ ಜಾಲಾರು ಯಯಾಗೆ
ವಿಮಾನ ಮನೆಯ ಮೇಲೇ ಹಾರಿಹೋಗುತ್ತಿದೆ
ನೋಡುವುದಿದ್ದರೆ ಬಂದು ನೋಡು

ದೊನು ಪಂಕು ಗೇನು
ಗರಾ ವೈನಾ ಹುಡುನುಗೇಲೆ
ಗಜಾರು ಲೋಕು ಬಸುನು ವೈಜೆ ವಿಮಾನ
ಬುರ ಮೂಣುನ್ ಹುಡುನು ವೈತಾ
ಎರಡು ರೆಕ್ಕೆಯನ್ನು ಮನೆಗೆ ತಾಗಿಸುತ್ತ
ಸಾವಿರ ಜನರ ಹೊತ್ತೊಯ್ಯುವ ವಿಮಾನವ
ನೋಡ ಬನ್ನಿ

ಗರಾ ವೈನಾ ವಿಮಾನು ಗೆಲೆ
ಬಗುಚೆ ಜಾಲಾರು ಯೋಗೆ
ಗರಾಕು ಲಾಗುಗೇತು ಯಡಚೆ
ವಿಮಾನು.
ಮನೆ ಮೇಲಿಂದ ಹಾರಿ ಹೋಗುತ್ತಿದೆ
ನೋಡುವುದಿಲ್ಲವಾದರೆ ಹಾರಿ ಹೋಗುತ್ತದೆ
ಓಡಿ ಬಾ ನೋಡು ಅತ್ತಿಗೆ

## ಚೆನ್ನು

ಚೆನ್ನು ಚೆನ್ನುಗಳೇ ಚೆನ್ನು ಪುಟ್ಟಿ ನೋಲುಗಳೆ
ಪುಟ್ಟಿ ನೋಲುಗಳೇ ಚೆನ್ನು ಬಳತಿ ನೋಲುಗಳೆ
ಪುಟ್ಟು ಬಡೆಕಾಯಿ ದೆತ್ತಿಯಾನ್ ತೆನ್ಕಾಯಿ
ಕಟ್ಟು ಮೂಡಾಯಿ ಯಾನ್ ಕಂಚಿನ ಸಾಲೆಟ್
ಅಂಚಿಡ್ದಿಂಚೋಪಾ ಚೆನ್ನು ಇಂಚಿಡ್ದಂಚೋಪಾ
ಮೂಡಾಯಿ ಪೋಪೆಯೇ ದೆತ್ತಿ ಮುನ್ಚಿ ಬುಳೆಪುಂಡು
ಪಡ್ದೊಯಿ ಪೋಪೆಯೇ ದೆತ್ತಿ ಮೀನ್ಯೆಪುಂಡು
ಮೂಡಯಿದ ಮುಂಚಿ ತಿಂದ್ದ್ ಮೂಂಕುಟು ನೀರಾಂಡ್
ಪಡ್ದೊಯಿನ ಮಿನಿಂದ್ದ್ ಕುರಳ್ಟ್ ಮುಳ್ಳಾಂಡ್
ಅಪ್ಪೆನ ಪುದರೆಂಚ ಚೆನ್ನು ಅಮ್ಮನ ಪುದರೆಂಚ
ಅಪ್ಪೆನ ಪುದರ್ಯೆ ದೆತ್ತಿ ಆರಂಬೊ ಲೀರಂಬೊಲು
ಅಮ್ಮನ ಪುದರ್ಯೆ ದೆತ್ತಿ ಕೋಟೆತ ಬಬ್ಬೊಂದು
ಬಾಲೆಲಿದ್ಯನಾ ಚೆನ್ನು ಬಪ್ಪೊಲಿದ್ಯನಾ
ಬಾಲೆಲಿದ್ಯನಾ ಕಾಲೊಟು ಬಾಲೆಲೆ ಬಂಗಿರೊ
ನುಪ್ಪು ಇದ್ಯನಾ ಕಾಲೊಟು ನುಪ್ಪುತ ನಿಗಿರೊ
ಚೆನ್ನುನ ದಟಿಗೆಗ್ ಚೆನ್ನು ಬಿನ್ನೆರ್ ಬತ್ತೆರ್
ಕಾಂಟ್ಯಗಡ್ಯೆಗೆಳೇ ಚೆನ್ನು ಕಡ್ಯದ ಕಳಿಗಳೆ
ದಾಲ ಇದ್ದಿಂದ್ ಚೆನ್ನು ಇಲ್ಲಡೆ ಪಾರ್ಬನಾ
ಇದ್ದೀಂದ್ ಬರೆಲ್ನಗಾ ಚೆನ್ನು ಬೈತಡಿ ಒಕ್ಕುಬನಾ
ಲಾಯಿರೆ ಬೇಂಗಮರ ಚೆನ್ನು ಈಯೆರೆ ಬೇಂಗಮರ
ಬೇಂಗಮರದ ನುಡುಟು ಚೆನ್ನು ಒಟಿಲ್ ಕಟ್ಯಲೊ
ಬಂಗಾರ್ ಬಾಲೆ ಆಂಡ್ ಚೆನ್ನು ಕರ್ಬೊನ ಒಟಿಲಾಂಡ್
ದೂರೊ ಒಚ್ಚಿ ಬುಡು ಚೆನ್ನು ಮೆಲ್ಲ ಮಾನಾಲ

ಬಾಲೆ ಅರ್ಪುಂಡು ದೆತ್ತಿ ಬಾಲೆ ಅರ್ಪುಂಡು
ಬಾಲೆಗ್ ಮಿರೆ ಕೊರು ಚೆನ್ನು ತೊಟ್ಟಿಲ್ ಪಂದಾಲ
ಬಾಲೆತಲ್ಲೇರುಂಡು ಚೆನ್ನು ಬಾಲೆತಲ್ಲೇರುಂಡು
ಕಂಟ ಪುಚ್ಚೆ ಉಂಡು ದೆತ್ತಿ ಕರಿಯ ನಾಯುಂಡು
ಮಾಯಿತ ಪುಣ್ಣಮೆಟ್ ಚೆನ್ನು ಮಾಯೊಟು ಪೋತಲ್
ಓ ಸುಗ್ಗಿತ ಪುಣ್ಣಮೆಟ್ ಚೆನ್ನು ನಟ್ಟು ಬರುವಳೊ



# ಅಡವಿ ಚೆಂಚರ ಕಾವ್ಯ



## ಇಕೋತಿದೇವಿ ಪುರಾಣ

ಧಣಿ (ಶಿವ) ನನ್ನ ಕುರಿತು, ದೇವಿಯು ತನಗೊಂದು ಅಸ್ತಿತ್ವ ಇದೆ, ಒಂದು ಹೆಸರು ಕೊಡು ಎಂದು ಕೇಳುವ, ಪರಿಪರಿಯಾಗಿ ಬೇಡುವ, ಸಂವಾದ ರೂಪದಲ್ಲಿರುವ ಹಾಡನ್ನ ನಿರೂಪಕ ಶ್ರೀ ಶಿವಲಾಲ್ ಗಂಗೂ ಕಟ್ಟೀಮನಿ. ಸಾ I ಹೊಂಬಳ ಜಿ ಧಾರವಾಡ ಹೇಳಿದ ರೀತಿಯಲ್ಲಿ ದಾಖಲಿಸಲಾಗಿದೆ. ಹಂತ ಹಂತವಾಗಿ 'ಧಣಿ' ಇಕೋತಿಗೆ ಸವಾಲುಗಳ ಮೇಲೆ ಸವಾಲು ಹಾಕುತ್ತ ಪರೀಕ್ಷೆಗೆ ಒಡ್ಡುವ ಪರಿಯನ್ನ ವರ್ಣಿಸುವ ಪುರಾಣ ಇದು.

ನನಗೊಂದು ಹೆಸರು ಕೋಡೋ ದೇವನೇ
ಹೊಳೆಯ ಒಲ್ಲದು ಯಾವ ಹೆಸರೂ ಇಕೋತಿಯೇ

ನಿನ್ಗ
ಹೆಸರು ಬೇಕಂದ್ರ....

ಹಗಲು, ರಾತ್ರಿ ಮಾಡಿ ಬಾ
ರಾತ್ರಿ, ಹಗಲು ಮಾಡಿ ಬಾ
ಕತ್ತಲ ಬೆಳಕು ಮಾಡು
ಬೆಳಕು ಕತ್ತಲ ಮಾಡು !

ಇದೋ.....
ಮಾಡಿ ಬಂದೆ ! ದೇವಾ
ಹೆಸರು ಕೊಡೋ ದೇವಾ

ಏನಂತ.....
ಕೊಡಲೇ ನಿನ್ಗ ಹೆಸರ !

ಹುಡುಕಾಡಿದೆ ಏನೂ
ಹೊಳೆಯಬಲ್ಲದು
ಇಕೋತಿ !

ಏಳು ಹೆಡಿ ಸರ್ಪದ
ನಾಲಿಗೆ ಕೊಯ್ಕೊಂಡು ಬಾ
ಹೆಸರು
ಕೊಡತೀನಿ
ಇಕೋತಿ

ತಗೊಳ್ಳೋ ದೇವಾ.....
ಏಳು ಹೆಡಿ ಸರ್ಪದ
ನಾಲಿಗೆ !

ಬಿಚ್ಕೋನಿನ ನಾಲಿಗೆ
ಕೊಡೋ ನನಗೊಂದ
ಹೆಸರ !

ಹಬ್ಬ ಹದಿನಾರು
ವರ್ಷಕ್ಕೆ
ತಗೊಂಡು ಬಾ
ಇಕೋತಿ

ತಿಂಗಳು ಹನ್ನೆರಡು
ಹಬ್ಬ ಹದಿನಾರು !
ಹೋಗ್ತಾ ಎರಡು
ಬರ್ತಾ ಎರಡು
ಹಬ್ಬ ತಿಂದೆ.
ತಗೋ ಹನ್ನೆರಡು
ಹಬ್ಬ.

ಹಬ್ಬ ತಿನ್ನದಾ ನಿನ್ನ
ಎಲುಬು ತಿಂದ್ಕೊಂಡು
ಬದುಕಿರ ಬೇಕೇನು
ದೇವ !

ನೀನೇನು ಅಂಥಾ
ದೊಡ್ಡ ಕೆಲ್ಸ ಮಾಡಿಕೊಂಡು
ಬಂದೀ
ನಿನಗೇನು ಕೂಡಲೇ
ಹೆಸರು !

ಹೆಸರು ಕೊಡೋ
ದೇವಾ !
ನೀನೇನು ಕೊಟ್ಟಿ ಹೆಸರ
ಏಃಹಿಂದೂ ದಾಸರೀ
ನೀನೇನು ನನ್ಗ
ಕೊಟ್ಟೀ
ಹೆಸರ !

ನನ್ನ ಹೆಸರ ನಾನೇ
ಹೇಳ್ತೀನಿ ಕೇಳೋ
ಕಿವಿ ತೆರೆದು ಕೇಳೋ !
ಧರೆಯು ಕಂಪಿಸುವಂತೆ ನಾಟ್ಯವಾಡಿದಳು !
ನೀ

ನೀಚ ಅದೀದಿ !
ನೀನೇನು ಹೆಸರು ಕೊಟ್ಟಿ !
ಗಂಧದ ಕಟಗಿ ಕುಟರಿ
ಒಟ್ಟಿದಳೋ..... ದೇವಿ

ಹೆಸರು ಇಲ್ಲದ್ಕ
ಸುಟಗೊಂಡು ಸಾಯಾಕ ಹತ್ತ್ಯಾಳೋ !
ಏಳು ಡ್ರಂ ಎಣ್ಣೆ ಸುರಿವ್ಯಾಳೋ
ಇಕೋತಿ
ನನ್ನ ಹೆಸರ
ನಾನೇ ಹೇಳತೀನಿ

ಅಂದ್ಲು

“ಹನ್ನೆರಡು ಕೋಸಿ ದುರ್ಗಾಮಾತೆ”
ಹೆಸರೈತಿ
ಅಂದು
ಧಗ ಧಗ ಉರಿಯುವ ಬೆಂಕಿಗೆ ಹಾರ್‍ಯಾಳೋ !

ಹಾರಿದ್ದೇ
ತಡ
ಕರಿಗುಬ್ಬಿಯಾಗಿ
ಪಾರಾಗಿ ಹೊದಳೋ
ಹೊಗೆಯೊಳಗ !
ಇಕೋತಿ
ಹಾರಿ
ಹೋದಳೋ ದೇವಿ

ಹಾರಿದ
ಗುಬ್ಬಿ ಅಡವಿ
ಯಾಗ
ಬೆಳೆದು ನಿಂತೋ......
ನಡೆದಾಡಿದಲ್ಲಿ
ಭಂಡಾರ ಕುಂಕುಮದ
ಹೆಜ್ಜೆ
ಮೂಡಿದವೋ

ಬೆಳೆದು ನಿಂತ ದೇವಿ
ಅಡ್ಡಾಡಿ ಬ್ಯಾಸರ ಆದಾಗ
ನಿದ್ದಿಗೆ ಬಿದ್ದಳೋ
ಹನ್ನೆರಡು ವರ್ಷ

ಕೈಕಾಲಾಗ ಬಿದಿರಿನ ಫಳಿ
ಬೆಳೆದವೋ

ಗುಡ್ಡ ಬೆಳೆದು
ಕೆರೆಕಟ್ಟೆ ಆದವ್ರೋ

ದೇವಿ
ನಿದ್ದಿ ಹೋದಳೋ
ಹನ್ನೆರಡು ವರ್ಷ
ನಿದ್ದಿ ಹೋದಳೋ !

ಆಗ
ಏನಾತ್ ಆಂದ್ರ.......

ಪಾರ್ವತಿ ಪರಮೇಶ್ವರ
ಲೋಕ ಕಲ್ಯಾಣಕ್ಕ
ದಾನ ಧರ್ಮ ಮಾಡಾಕ
ಭೂಲೋಕಕ್ಕ ಇಳಿದಾರೋ

ದಾರ್‍ಯಾಗ ಕೋಣ ಗಂಟಾಗಿ
ಬಿದ್ದಿತ್ತೋ ಪಾರ್ವತಿ ಜಲಮ
ಕೊಟ್ಟು
ಕಣ್ಣಿಲ್ಲದವರಿಗೆ ಕಳ್ಸು
ಏನಾರ
ದಾನ ಧರ್ಮ ಕೊಡಾಣ
ಅಂದಳು.

ಜೀವ ತುಂಬಿ ಎದ್ದು
ನಿಂತ
ಕೋಣಾ ನೀರ ಕುಡಿಯಲು
ಹೋತೋ ಕೆರೆಗೆ....

ದೇವಗನ್ನೆಯರು
ನೋಡಿದರೋ ಕೊಬ್ಬಿದ
ಕೋಣಾ
ಆಶೀರ್ವಾದ

ತಗೊಳ್ಳಾಕ ಹತ್ತಿರ
ಹೋದ್ರೋ........
ದೇವಗನ್ನೆಯರು
ಕೆರಿ ಮುಂದ
ರಥ ತರಬಿ
ನೀರ ಕುಡಿಯಲು
ಕೆರಿಗೆ ಇಳಿದಾರೋ !

ನೋಡಿದ ಕಣ್ಣು ! ಕೈ
ಬಿಟ್ಟವು ಕುಡಿಯುವ
ನೀರ
ತಗೆದರೋ ಉದ್ಗಾರ !

ಒಳ್ಳೇ ತಿನ್ನೋ ಚೀಚ್
ತಮ್ಮ ಹತ್ತಿರ ಕಂಡು
ತಳಮಳಗೊಂಡರೋ ! ದೇವಗನ್ನೆಯರು !

ಕೋಣದ ಕರಳು
ತಿಂತೇನಿ !
ಕಣ್ಣು ಮೆದಳು
ತಿಂತೇನಿ !
ರಕ್ತಾ ಕುಡೀತೇನಿ !
ಕೊಬ್ಬಿದ ಮಾಂಸ
ತಿಂತೇನಿ
ಹಿಂಗ.... ಹಿಂಗ.....ಹಿಂಗ.....
ಅಂಗಾಂಗ ತಿನ್ನಲು.....
ಏಳು ಮಂದಿ
ಏಳು ರೀತಿ ತಿನ್ನೋ ಲೆಕ್ಕಾಚಾರ
ಹಾಕಿದರೋ !
ಹಸಿಯಾಗಿ ಮುಕ್ಕುವ
ಲೆಕ್ಕಾಚಾರ ಹಾಕಿದರೋ !

ಆಡಿಕೊಂಡು ಅನುಭವಿಸಿದರು
ಬಹಿರಂಗವಾಗಿ
ಸಾರಿದರೋ !

ದೇವಗನ್ನೆಯರ
ಮಾತ್ನ ಕೋಣ ಕೇಳ್ಯಾಕ
ಹತ್ತಿತು !

ಇನ್ನೆಷ್ಟು ವ್ಯಾಳೆ
ಅಂತಾ ಪರಮೇಶ್ವರ
ಆಶೀರ್ವಾದ ಮಾಡ್ದ

ಕೋಣದ
ಒಂದು ಕೋಡು
ಪೂರ್ವಕ್ಕೆ ಹೋತು
ಇನ್ನೊಂದು ಪಶ್ಚಿಮಕ್ಕೆ ಹೋತು,

ಆಕಾಶ ಭೂಮಿ
ಒಂದಾತು !
ಕೋಣ ದೊಡ್ಡ
ಗುಡ್ಡ ಆತು !

ಏಳು ಮಂದಿ ದೇವ
ಗನ್ನೆಯರು
ಮಲ್ನಾಡ ಸೇರಿದ್ರೋ
ಹೆದರಿಕೆಗೆ ಹಸೇವು
ಬಿಸೇವು ಹಡಕೊಂಡು......
ಮಲೆನಾಡು
ಸೇರಿದ್ರೋ.....

ಈ
ಕೋಣಗ ಹೊಡೆಯೋರ್ ಯಾರ್ ?
ಪಾರ್ವತಿ ಪರಮೇಶ್ವರನ

ರಥದ ಹಿಂದೆ ಹೊಂಟಳು
ಪಾರ್ವತಿ ಜೇನುತುಪ್ಪದ
ಹುತ್ತಾಗಿ ಬಿದ್ಲು !

ಪರಮೇಶ್ವರ ಬನ್ನಿ ಗಿಡದ
ಕೆಳಗೆ ಕಲ್ಲಾಗಿ ಕುಂತನೋ.....
ಜೇನು ತುಪ್ಪದ ಹುತ್ತ
ತುಳಿಯಾಕ ಹತ್ತಿತೋ
ಕೋಣ !

ನಾ

ಬ್ಯಾಡ ಅಂದ್ರೂ ಕೇಳಲಿಲ್ಲ !
"ಅದರ ಕೋಣ ಕೂಡ
ಹಡಸಿಕೋ"
ಅಂತಾ ಅಂದನೋ
ಪರಮೇಶ್ವರಾ.....

"ನನ್ನ
ಮೈಮ್ಯಾಗ ಹುಚ್ಚೀ ಒಯ್ದಿದೆ"
ಅಂದಳೋ
ಪಾರ್ವತಿ !

ಕೋಣಗ ಕಡಿಯಲು
ಈ
'ಭಟ'ರವಾಗ ಪಾನಪಟ್ಟಿ
ಮಾಡಿ ಇಟ್ಟರೋ !
ಸಾವಲು ಇಟ್ಟರೋ.... ದೇವತೆಗಳ
ಎಲಿ ಅಡಕಿ
ಪಾನಪಟ್ಟಿ ತಿಂದು
ಕಡಿಯಬೇಕೋ ಕೋಣನ್ನ
ಅಂತಾ .....

ದೇವತಿಗಳೆಲ್ಲ ಬಂದು
ಬಡಕೊಂಡು ಹೋದ್ರೋ.....
ಗಲ್ಲಾ ಗಲ್ಲಾ.

ಭಟರವಾ
ತಿಂದನೋ ಪಾನಪಟ್ಟಿ
ಅಂಗಲಾಚಿದ
ದೇವಾನುದೇವತೆಗಳಿಗೆ
ಹೊಡೆಯಲು
ಆಗಲ್ಲ ! ಕೋಣಗ !
ಅಂದಾ !

ಈ ಹಿಂದಕ ಕಲಮ್
ಮಾಡಿದ
ಆಯುಧ ಇದ್ರ ತಿಳ್ಸೋ.....
ಅಂತಾ ಭಟರವಾ
ಪರಮೇಶ್ವರನ ಹೇಳ್ದ

ಬೂದಿ ಹೆಜ್ಜೆ ಕಾಣಲಿಕ್ಕೆ
ಹತ್ತಿದವೋ......
ದೇವಿನ್ನ
ತೋರಿಸ್ದ ಪರಮೇಶ್ವರ !

ಕೋಣ ಕಡಿಯಲು
ದೇವಿ ಕರೆಯಲು ಹೊಂಟನೋ !
ಭಟರವಾ......
ಕಾಲಾಗ ಗೆಜ್ಜೆ ತಾಳ ಚೌಂಡ್ಕಿ
ಬಾಯಾಗ ಪಿಂಕಣಿ
ಹಿಡ್ದು
ಗುಡ್ಡಾನ ಏರಾಕ ಹತ್ತಿದನೋ

ದೇವಿ
ಮೈಮ್ಯಾಗ ಹೆಜ್ಜೆಊರಿ
ದಾಟಿ ಹೊಂಟಾನಾ
ಮುಗ್ಗರಿಸಿ ಬೀಳತ್ಲೆ ಗೊತ್ತಾತೋ

ಗೆಜ್ಜೆ ಹರಿದವೋ ಕುಣಿಕುಣಿದು
ಹೊಡೆದು
ತಾಳ ಚೂರು ಚೂರಾದ್ವು
ಆಗಲಿಲ್ಲ ಎಚ್ಚರ
ದೇವಿಗೆ
ದೊಡ್ಡ ಗುಂಗಿ ಹುಳ
ಸೃಷ್ಟಿಮಾಡಿ ಮೂಗಿನ
ಬಳ್ಳಿಯೊಳಗೆ ಗುಂಯ್ ಅಂತಾ
ಬಿಟ್ಟನೋ ಭಟರವಾ.....

ಕಡಿಯಿತಲ್ಲಾ ನೆತ್ತಿಗೆ
ಗುಂಗೀ ಹೂಳಾ !
ಎಚ್ಚರಾದಳೋ ದೇವಿ
ಅಕರಾಳ ಮಕರಾಳ ಆಗಿ

ಗುಡ್ಡಗಳು ಕುಪ್ಪಳಿಸಿ
ಬಿದ್ದವೋ !
ನಿದ್ದೆ ಕೆಡಿಸಿದವರ‍್ಯಾರು ?
ಭೂತಾನೋ ಪಿಶಾಚಿನೋ
ಅಂದಳೋ ದೇವಿ !

ಭಟರವಾ ರುಮ್ಮಾಲ ಹಾಕಿದನೋ
ಕೆಳಗ
ಕಾಲಿಗೆ ಉದ್ದಾಕ ಬಿದ್ದಾನೋ
ಏ ಹಿಂದೂ ದಾಸರಿ !

ಪರಮಾತ್ಮಾ ಏನ್ ಹೊತ್ತು ಬಂತು
ಅಂತಾ
ಹೇಳಿದನೋ ನಡೆದದ್ದನ್ನೆಲ್ಲಾ.....

ಬಿದ್ವೈತಿ
ಕೋಣ
ಗುಡ್ಡಾಗಿ
ನೀ ಬಂದು
ಎಬ್ಬಿಸು ದೇವಿ
ಅಂತಾ ಕೈ ಮುಗಿದಾನೋ

ದೂರದಾಗ
ಮಂಜ್ ಮಂಜಾಗಿ
ಕಾಣೋದು ಅದs
ಹೌದಲ್ಲೋ !
ಅಂದಳೋ ದೇವಿ

ಹೊಂಟಾಳೋ ದೇವಿ
ಕೋಣ ಇದ್ದ ಕಡೀಗೆ,

ಅಡ್ಡ ಹೊಳಿ ಬಂದಾಗ ಭಟರವಾನ್ನ
ತೊಣಸಿ ಮಾಡಿ ತೊಡಿಗೆ
ಹಚಿಕೊಂಡಾಳೊ
ದೇವಿ...

ಹನ್ನೆರಡು ಮಾರು ಉದ್ದ
ಹನ್ನೆರಡು ಮಾರು ಅಗಲ ಹಂಗ !
ಹಂಗಾ ! ಎದ್ದು ನಿಂತಳೋ
ದೇವಿ !
ತುಂಬಿದ ಹೊಳಿ ದಾಟಿ
ಹೊಂಟಾಗ
ಬಾಳ ದಿನಕ್ಕ ಅಕ್ಕ ಬಂದಾಳಂತಾ

"ಸಿಹಿ
ಅಡಿಗೆ ಊಟ
ಮಾಡಿ ಹೋಗು
ಅಕ್ಕಾ" ಅಂದಾಳೋ ಗಂಗವ್ವ

ಆಸೆ
ನನಗೇನು
ಇಲ್ಲ
ದೊಡ್ಡ ಬ್ಯಾಟಿಮ್ಯಾಗ
ನನಕಣ್ಣು ಐತಿ
ಅಪ್ಪಣೆ ಕೊಡು
ಅಂತಾ ಮುಂದ ಸಾಗಿದಳೋ
ದೇವಿ

ಮೊಣಕಾಲು ತೊಡಿಮಟಾ
ನೀರು ಬರ್‍ತಾವ
ನೀ ನಡಿ ಅಂದಳೋ ಭಟರವಾ
ಕೋಣ ನಾ ನೋಡಿಕೊಂತೀನಿ
ಎದರಸ್ತೀನಿ ಅಂದಳೋ ದೇವಿ !

ಏಳು ಬುಟ್ಟಿ ಬೂದಿ
ಹೆಡಿಗೆಯಷ್ಟು ನೊಣ ಹಿಡಿದಳೋ
ಕೋಣ ಇರೋ ಕಡೆ
ಬೂದಿ ನೊಣ ಕೂಡಿಸಿ
ತೂರಿಬಿಟ್ಟಾಳೋ.....
ಬೊಂಯ್ ಅಂತಾ ನಿಂತಾಗ
ಕೋಣ ಹೆದರದೇ ನಿಂತಿತೋ-

ಮತ್ತೊಮ್ಮೆ
ಬೂದಿ ನೊಣ ಹಾರಿಸಿದ್ಲೋ......
ಸನಿಹಕ ಬಂದು ಮಾರಿಗೆ
ಉಗ್ಗಿದಳೋ.....

ಮುಂದಕ ಹೋಗಿ ಜೋಗಮ್ಮನ
ವೇಷ
ತಗೊಂಡು ನಿಂತಳೋ
ಯಾರೂ ಕಾಣಲಿಲ್ಲ
ಕಾಣಲಿಲ್ಲವೋ ದೇವಕನ್ನೆಯರು !

ಕೋಣಾ ನೋಡಿತೋ
ದೇವಿನ್ನ, ಇಕೋತಿ ದೇವಿಯನ್ನ
ಲಗ್ನ ಮಾಡಿಕೋಬೇಕಂತಾ
ಅನಿಸಿತೋ ಕೋಣಕ್ಕ......

ಮನಸು ಮಾಡಿ
ಮುಂದಕ್ಕ ಹೋದಾಗ
ಲಗ್ನ ಆಕ್ಕೈತಿ ಮಾರ್‍ನಾಮಿ
ಮಂಗಳವಾಗಿ
ಲಗ್ನ ಮಾಡಿಕೊಳ್ಳೋಣ
ಅಂತಾ
ಭಾಷೆ
ಪಡೆದಾಳೋ ! ದೇವಿ
ಕೋಣದೊಡನೆ ಮದುವೇಗೆ !

ಕಂಬಾರನ ಹತ್ತಿರ ಹೋಗಿ
ಮಣ ಒಂದು ಕಂದಲಿ
ಮಣ ಒಂದು ತ್ರೀಶೂಲ
ಮಾಡಸಾಕ
ಹೋದಳೋ ದೇವಿ

"ಎಲ್ಲಾ ಐತಿ ದೇವಿ
ಅಡ್ಡ ಕಲ್ಲು ಇಲ್ಲ"
ಕಂಬಾರ ಅಂದದ್ಕ
ಕಾದ ಕಬ್ಬಿಣ ಹದ ಮಾಡಲು
ಮೊಣಕಾಲು ಕೊಟ್ಟಳೋ

ದೇವಿ......
ಇದ್ನ ಅಡ್ಡಕಲ್ಲು ಮಾಡಿಕೊಂಡು
ತ್ರಿಶೂಸ ಕಂದಲಿ ಮಾಡೋ ಎಂದಳೋ
ದೇವಿ

ಕಚ್ಚಿ ಹೊಡೆದದ್ದು ಕಬ್ಬಿಣ
ಕಸುವಿನಿಂದ ಹೊಡೆದದ್ದು ಉಕ್ಕು
ಆಕ್ಕೈತಿ
ಜಗ್ಗಿ ಹೊಡಿ ಅಂದಳೋ
ದೇವಿ

ಒಂದೊಂದು
ಮಣದ
ಕಂದಲಿ ತ್ರಿಶೂಲ ತಗೊಂಡ್ಲು

ಕಂಬಾರಗ
ಹೇಳಿದಳೋ ದೇವಿ
ದಿನಾ ಎರಡು ಊರು ಸುತ್ತಿ ಬಾ
ನಿನಗ
ಬದುಕು
ಆಗತೈತಿ !

ಹಗ್ಗದ ಅಂಗಡಿಗೆ ಹೋಗಿ ಹಗ್ಗ
ತಗೊಂಡಾಳೋ
ಚಿನವಾಲಗಟ್ಟಿ ಹತ್ತಿರ
ಗೆಜ್ಜೆ ತಗೊಂಡಾಳೋ !!
ಗಾಣಗೇರವನ
ಹಂತ್ಯಾಕ ಎಣ್ಣೆ
ಕೇಳ್ಯಾಳೋ ದೇವಿ.....

"ಬರಾಬಿದ್ದು ಕಾಳು
ಬೆಳೆದಿಲ್ಲ ದೇವಿ

ಎಣ್ಣೆ ಕೊಡಲಿ ಎಲ್ಲಿಂದ?"
ಗಾಣಗೇರಾಂವನ ಮಾತಿಗೆ
ಕಣಜದೊಳಗಿನ ನಾಲ್ಕಾರು

ನಾಲ್ಕಾರು ಕಾಳು
ತಾರೋ !
ಏಳು ಕಾಳು ಸಿಕ್ಕವೋ
ಗಾಣದಾಗ ಬರೀ ಏಳೇ
ಕಾಳುಹಾಕಿ ಗಾಣ ತಿರು
ವಿದ್ರ
ಏಳು ಡ್ರಂ ಎಣ್ಣೆ ಸುರದೈತೋ

ಇದ
ನಿನ್ನ
ಉದ್ಯೋಗ
ಇದ್ನ ಮಾಡಿಕೊಂಡು
ಬದುಕು ಮಾಡೆಂದಳಾ ದೇವಿ !

ಲಂಬಾಣಿ
ಚಿಗುರಿಕಾರರ ಹಂತ್ಯಾಕ
ಬಂದು
ಭಟ್ಟಿ ಸೆರೆ
ಕೊಡು ಎಂದಳಾ ದೇವಿ

ಸೆರೆ ಇಲ್ಲ ಅಂದದ್ಕ....
ತಿಪ್ಪಿಗೆಬರುವಳು ಟೂಬ್
ಸಿಕ್ಕಾವೋ

ಒಂದು ಚಿಪ್ಪು ಕುಡಿದಳೊ
ದೇವಿ......
ಮೊಲ ಆದಳೋ
ಅಮಲಿನೊಳಗ.....

ಮಾಯದ ದೇವಿ ಮೊಲ ಆದಳೋ !
ಕೋಣದ 'ಮದ್ವಿ'....ಗೆ
ಬಾಸಿಂಗದ ಕಟ್ಟು ಹೂಮಾಲೆ
ತರೋದು ಮರೆತಳೊ
ದೇವಿ

ಕಾರ್ಯ
ಎಲ್ಲಾ ಮಾಡಿ
ತುಪ್ಪದ ಕಡಾವಿಗೆ ಹಚ್ಚಿ
ಕೋಣದ ದಾರಿ 'ಲಗ್ನ'......ಕ್ಕ
ಕಾಯಾಕ ನಿಂತಳೋ
ದೇವಿ

ಕೋಣ ಎಮಕಾಗಿ ಬಂತೋ..... ಎಮಕಾಗಿ ಬಂತೋ ಕೋಣ
ಬಾವಿಯ ಹಗ್ಗ ಕೊಳ್ಳಿನ ಸುತ್ತ
ಸುತ್ತಿದಳೋ ದೇವಿ
ಏಳು ಸುತ್ತಾತು
ತೊಡಿಗೆ ಸುತ್ತಿದಳೊ
ಆರುವರಿ ಸುತ್ತಾತು
ವಳ್ಳಿ ಸುತ್ತಿದರೆ ಆರು ಸುತ್ತಾತು
ತೊಡಿಗೆ ಐದು ಸುತ್ತಾತು

ಸಿಟ್ಟು ಕೋಣಕ್ಕ
ಬರಾಕ ಹತ್ತಿತೋ.....
ಕೊಳ್ಳಿಗೆ ನಾಲ್ಕು ಸುತ್ತು
ತೊಡಿಗೆ ಮೂರು ಸುತ್ತು
ವಳ್ಳಿ ಎರಡು ಸುತ್ತು
ಒಂದು ಸುತ್ತು
ಹಿಂಗ ಹಿಂಗ
ಹಗ್ಗದ ಉದ್ದ ಕುಗ್ಗತ್ತ
ಹೋತು !

ಬೆಂಕಿ ಬೀಳಾಕ
ಹತ್ತಿತೋ ! ಕೋಣ ಗೆಬರಿತೋ ನೆಲಾ !
ಹಾದುಲಿಕ್ಕೆ ಹೋತೋ ಕೋಣ
ದೇವಿ
ಮಾಯ ಆಗಿ
ಹುಣಶಿ ಮರದ
ಕೆಳಗಿನ ಗುದ್ದಿನಾಗ ಸೇರಿದಳೋ
ದೇವಿ

ಹೊರ ಬಂದ ದೇವಿ, ಕಂಗಾಲಾದ
ಕೋಣದ ಹಿಂದಿನಿಂದ ಬಂದು
ಬಾಲ ಹಿಡುದು
ಬೀಳಿಸಿ ಬಗೆದು
ಎಡಮುರಗಿ ಬಿಗಿದಳೋ
ದೇವಿ ಕೋಣದ ಕತಿ
ಮುಗಿಸಿದಳೋ.....

ಪಾರ್ವತಿ ಪರಮೇಶ್ವರ
ಹೆಸರು ಕೊಟ್ಟವ್ರು....
ನನ್ನ ಹೆಸರಿಗೆ
ನನ್ನ ಪಾಲಿಗೆ ನೆತ್ತರ ಹಚ್ಚು !
ಹೂಮಾಲೆಗಾಗಿ ತೋಟಕ್ಕೆ ಬಟರವಾನ್ನ
ಕಳ್ಸಿದಾಗ ನಾಯಿ ಕಾವಲಿತ್ತು !

ತೊಡಿ ಬುಡಕ್ಕ ಹಾಸಿ ಹೋಗು
ಡುಬ್ಬದ ಮ್ಯಾಗ ಹಚ್ಚೀ ಒಯ್ತೀನಿ
ಅಂತೋ
ನಾಯಿ
ಆ ಮಾತು ಭಟರವಾ ಬಂದು
ಹೇಳಿದನೋ ದೇವಿಗೆ.....

ಅರ್ಜೆಂಟ
ಹೂ ಬೇಕು ಅಂದದ್ಕ ಮುಗಳು
ಮಿಡಕಿ ಬಲತದ್ವು
ಹರಕೊಂಡು
ಬಂದೀ.

ನಾಯಿ ಕಾಟಕ್ಕ ಹಿಂಗಾತು
ಅಂದದ್ಕ
ಏಳು ದಿವ್ಸ ಹುಚ್ಚು ಹಿಡ್ದು
ಏಳು ಊರು ಸುತ್ತಿ
ಸತ್ತು ಹೋಗಂತಾ
ನಾಯಿಗೆ
ಹಾಕಿದಳೋ ಶಾಪ
ದೇವಿ

ಎಡಮುರುಗಿ ಬಿಗಿದ
ಕೋಣನ್ನ ಕೊಯ್ದಾಗ
ಸಿಡಿದು ಹೋದವೋ
ಮೂರ್ಕೋಣ
ಒಂದು 'ಬಾಬಾಗಿರಿ ಬುಡನ್ ಗಿರಿಗೆ'
ಇನ್ನೊಂದು 'ಮಲ್ನಾಡಿಗೆ'
ಮತ್ತೊಂದು 'ಹರಾಳಿಗೆ'

ಉಳಿದ ಆರು ಕೊಣದೊಳಗ
ಮತ್ತೊಂದು
ಸಾಯಿಸಬೇಕು ಕೋಣ ಹೊಡೆದಳೋ
ದೇವಿ.... ಮತ್ತ ಸಿಡಿದವೋ.....ಕೋಣಗಳೋ.....ಕೋಣಗಳೋ.....
ಏಳು ದೇವಗನ್ನೆಯರು
ವಳ್ಳಿ ಬಂದು ಕೂಡಿಕೊಂಡರೋ !

ದೇವಿ ಅಂಗಲಾಚಿ ಕೋಣ

ಕಡೀಬೇಡ....ಇಕೋತಿ
ನಾವೇಳು ಜನ ಏಳುಕೋಣ
ಮದ್ವಿ ಮಾಡಿಕೊಂಡು
ದೇವಲೋಕಕ್ಕ ಹೋಗುತೇವೊ !
ಅಂದ್ರು.

ಯಾವು
ಯಾವು ಬೇಕು ಆರಿಸಿಕೊಳ್ಳಿರೆಂದು
ದೇವಿ ಸಿಡಿಯುವ ಕೋಣ ಹಂಗ
ಬಿಟ್ಟಳೋ....

ದೇವಗನ್ನೆಯರು
ರಮಿಸಿ ಕೈಯಾಗ
ತಗೊಂಡು ಕಟ್ಟಿದರೋ
ಕೋಣಗಳ....

ದಾರಿಗೆ ಅಡ್ಡಾದ
ಹೊಳಿ ದಾಟುವಾಗ
ಗಂಗವ್ವ ನೋಡಿದ್ದಳೋ
ಕೋಣಗಳ......

ಆಹಾಽ ಇದರ ಮೂಗ....
ಆಹಾಽ ಇದರ ಕಾಲಾ.....
ಆಹಾಽ ಇದರ ಬಾಯಿ.....

ದೇವಗನ್ನೆಯರು ತೊಟ್ಟಾರೋ
ಲಂಬಾಣಿ ವೇಷ
ಕೋಣ ಓಡಿ ಹೋದಾವೆಂದು
ಕುಣಿದಾಡಿ ಹಿಡಿದು
ಕೊಂಡಾರೋ.....

ರಾಜವಾಡಿಗೆ ಬಂದಾಗ
ಓಡಿತೋ ಕೋಣ ಒಳಗೆ....

ನೆತ್ತರ ಕೈಲೆ ಅಕರಾಳ ದಿಕರಾಳ ಆದ್ರು....
ದೇವತೆಗಳು
ಕೋಣ ಹೊಕ್ಕಿತೋ ಬ್ರಾಹ್ಮಣನ
ಮನಿಯೊಳಗ.....

ಹಿಡಕೊಂಡು ಬರಾಕ ಹೊಂಟರೋ....
ಕೆರೆಯೊಳಗ ಕೈ ತೊಳೆಯುವಾಗ
ನೀರಿಗೆ
ಗೀರು ಹೊಡೆದು
ತೊಳೆಯಿರಿಷ್ಟರಿಲಿ ! ಎಂದಿತೋ ಕೋಣ....

ಎಳಕೊಂಡು ಬಂದ್ರೂ ಬರಾಽಕ
ತಯ್ಯಾರಿಲ್ಲೋ.....
ಕೈಕಾಲು ಕೆತ್ತಿ ಹೊದ್ವು
ಕೆರೆಯಾಗ ನೀರ್
ಕೆಡಿಸಬೇಕು ಕುಡಿದು ಬಿಡೋ
ಗಂಗವ್ವಾ....ಗೋಗರೆದರೋ
ದೇವತೆಗಳು.....

ಮೀನು ಕೊಪ್ಪಿ ನೀರಿಲ್ಲದೆ
ಒದ್ದಾಡಾಕ ಹತ್ತಿದವ್ರೋ.....
ಒಂದು ವರ್ಷ ಓತು ಐತಿ
ಎಚ್ಚಾ ಬೆಲ್ಲಾ ಎಲ್ಲಾ ಕೊಡ್ತೀನಿ
ಶಾಂತಿ ಮಾಕೊಂಡು
ಹೋಗ್ರಿ ಎಂದಳೋ....ಗಂಗವ್ವಾ.....

ದೇವಗನ್ನೆಯರು
ಹಬ್ಬದೂಟ ಮಾಡಿ ಕೋಣದ
ಬೇಟೆಗೆ
ಹೊಂಟರೋ
ರಾಜವಾಡಿಯೊಳಗ.......

ದುರಗವ್ವ
ದ್ಯಾಮವ್ವ
ಏಳು ಬಾಗಲ ಚಕ್ಕಳ ಐತಿ
ನೀ ತಗೊಂಡು ಬಾ
ನಮಗ ಆಗೋದಿಲ್ಲ
ಎಂದರೋ ದೇವಿಯರು

ದುರಗವ್ವ ಬಗದು
ಬಾಲ ಹಿಡಿದು
ಒಗದ್ರ ಏಳು ಬಾಗಲ
ದಾಟಿ ಬಿತ್ತೋ.....

ದ್ಯಾಮವ್ವನ ಹೆಸರಿಗೆ
ಎಲುಬಿನ ಊರಾತು ಕೋಣ
ನೆಗೆದು ಬಿತ್ತು.
ಕೋಣದ ಕಳ್ಳು
ಲಂಗರ ಆತು
ಕೋಡು ಕಡಿದು ಬಗೆದರೆ
ಕೋಡೀನ ಉರಾತು

ಹಿಂಗ.....ಹಿಂಗ....
ಕೋಣ ಕಡಿದು ಲೋಕದ
ಕಣ್ಣಾಗಿ
ದುರಗವ್ವ, ದ್ಯಾಮವ್ವ
ಸ್ಥಾಪನಾ
ಆದ್ರು......



# ಲಂಬಾಣಿ ಕಾವ್ಯ



## ಸಂತ ಸೇವಾಲಾಲ

ಅವತಾರ ಲಿದೋ ನರನಾರಿ, ಧರ್ಮಣಿ, ಯಾಡಿರ ಉದರೇಮ
ಆದಿ ಮಾಯೇ ಬಾಪುನ ಸಾಥಲೇರಿ, ಭಕ್ತಿಕರ ಮಾರಿ
ಭೀಮಾ ಘರ ಲಿದೋ ಅವತಾರ, ಜಗೇಪ ಕಿದೋ ಉಪಕಾರ ||ಪ||

ಬಾರ ವರ್ಷ ವೇಗೇರ ವಾಯಾನ
ಪುತ್ರಸಂತಾನ ಛೇನಿ ಭೀಮಾನ
ತಪಾ ಮಾಂಡೋರ ಕಠಿಣ ||೧||

ತಪಾ ಮಾಂಡೋ ಭಯಾನಕ ವನೇಮ
ಸಾದು-ಸಂತ ಚಮಕೆರೇ ದೇಖನ
ವೈರಾಗ್ಯ ಮೂರ್ತಿರ ರೂಪಲೇನ ||೨||

ಕಠಿಣ ತಪಾ ದೇಕನ
ದಯಾ ಆವಗಿ ವೋ ದೇವಿನ
ಝುಪ ಝುಪ ಆಯಿ ಭೀಮಾಕನ ||೩||

ದೇವಿಕೇರಿ ಭೀಮಾ ನಾಯಕೇನ
ಕಾಂಯಿ ಕಾರಣ ತಾರಿ ತಪಾನ
ತಾರೋ ನಾಮ ಕುಲ ಛ ಕುಣಸೋ ||೪||

ಭೀಮಾ ಕೇರೋ ಜಗದಂಬಾನ
ಪುತ್ರ ಸಂತಾನ ಛೇನಿ ಯಾಡಿ ಮನ
ಕರನ ತಪಾ ಮಾಂಡೋ ವನೇಮ ||೫||

ಮಾರೇ ಕುಳೇಮ ಕುಲ ನಿಶಾನಿ
ರಾಮಜಿ ಮಂಗಳೂರ ಢಳಮಲೋ
ಉತ್ತಮ ಕುಲ ರಾಠೋಡೆರೋ ವೇನ ||೬||

ಈ ವಾತ ದೇವಿ ಸಾಮಳನ
ಪ್ರಸನ್ನ ವೇಗಿ ಭೀಮಾನ
ಸಣ ಭೀಮಾ ಮಾರಿವಾತೇನ ||೭||

ಅತ ಬೇಸ ಭೀಮಾ ತಪಾ ಮಾಂಡನ
ಗಂಗಾನ ಜಾಂವುಚು ಹಂಗೋಳಿ ಕರೇನ
ಪುತ್ರ ಘಟಿಕಾ ಲಾಂವು ಖಾಯೇನ ||೮||

ಗಂಗಾಮ ಹಂಗೋಳಿ ಕರನ
ಮೇಲೇರಿ ಗೋಳಿ ಬಣಾನ
ಲಾನ ದಿನಿ ಭೀಮಾನಾಯಕೇನ ||೯||

ಮಾರೋನಾಮಚ ಪುತ್ರ ಘಟಿಕಾ
ಸ್ತ್ರೀ ಮನಕ್ಯಾರೋ ಪೇಟ ಪಾಚೇರೋ ಘಟಿಕಾ
ಜ್ಞಾನ ದೇವ-ಧರ್ಮೇನ ಧೋಕನ ||೧೦||

ಭೀಮಾ ಲಾಯೋರೇ ಗೋಳಿ ಘರೇನ
ಲಾನ ದಿನೋ ಬೋಡಿ ಧರ್ಮಣಿನ
ಧರ್ಮಣಿ ಗೋಳಿ ಹಾತೇಮಾಯಿ ಲೇನ ||೧೧||

ಧರ್ಮಣಿ ಕ್ರೋಧಕರನ
ಹಾಕಮಾರಿರೇ ಬ್ರಹ್ಮದೇವೇನ
ಕಾಯಿಲಕೋ ಮಾರೇ ನಶಿಬೇಮ ||೧೨||

ಏ ಧರತಿ ಉದರೇರ ಮಾಯಿ
ಮಾರೇ ನಶಿಬೇಮ ಪುತ್ರ ಛೇನಿಕಾಂಯಿ
ಚಾರ ಧನ್ನ ಝೂರುಚು ಮನೇಮ ||೧೩||

ಅಸೋ ಬಾಳ ದೇದ ಭಗವಾನ
ಓರ ಪೃಥ್ವೀ ಪದೇಪರ ನಾಮ
ಹಾಂಕ ಚಲಿಗಿ ಆದಿಭಾಯಾನ ||೧೪||

ಧರ್ಮಣಿರೋ ಕ್ರೋಧ ಸಾಮಳನ
ಆದಿಶಕ್ತಿ ಆಯಿರೇ ದೇಕೇನ
ಓರೇ ಭಾವೇನ ದೇವಿ ಒಲನ ||೧೫||

ಧರ್ಮಣಿರ ಕ್ರೋಧ ಸಮಾಪ್ತವೇನ
ಯಾಡಿ ಖಟಗಿ ಗೋಳಿ ಖಾಲೇನ
ರಾಜುದಾಸ ಕರರೋ ವರ್ಣನ ॥೧೬॥

**ಸಾರಾಂಶ:**

ಲೋಕ ಕಲ್ಯಾಣಕ್ಕಾಗಿ ಸೇವಾಲಾಲ ಬಂಜಾರ ಕುಲದ ಭೀಮಾ ಧರ್ಮಣಿಯರಿಂದ ಜನ್ಮ ಪಡೆದನು. ಸೇವಾಲಾಲನಿಗೆ ಭಕ್ತಿ ಮಾಡಲು ದೇವಿ ಹೇಳುತ್ತಾಳೆ. ಭೀಮಾನಿಗೆ ಮದುವೆ ಆಗಿ ಹನ್ನೆರಡು ವರ್ಷಗಳು ಕಳೆದರೂ ಪುತ್ರ ಸಂತಾನ ಇರಲಿಲ್ಲ. ಅದಕ್ಕೆ ಅರಣ್ಯದಲ್ಲಿ ಕಠಿಣ ತಪಶ್ಚರ್ಯ ಮಾಡಿದನು. ಇವನ ಕಠಿಣ ತಪಶ್ಚರ್ಯ ನೋಡಿ ಸಾದು-ಸಂತರು ಬೆರಗಾದರು. ಭೀಮಾನ ಕಠಿಣ ತಪಶ್ಚರ್ಯ ನೋಡಿ, ಆದಿಮಾಯೆಗೆ ಕರುಣೆ ಬಂತು. ಯಾವ ಕಾರಣಕ್ಕೆ ಈ ಕಠಿಣ ತಪಶ್ಚರ್ಯ, ಕುಲಗೋತ್ರ ಯಾವುದು ಎಂದಳು. ಪುತ್ರ ಸಂತಾನ ಇಲ್ಲದಕ್ಕೆ ತಪಶ್ಚರ್ಯ ಕೈಕೊಂಡೆ, ತಾನು ಗಡಮಂಗಳೂರದ ಬಂಜಾರ ಗೋತ್ರದ, ರಾಠೋಡ ರಾಮಜಿ ನಾಯಕ ಮನೆತನದವ ಎಂದನು. ಭೀಮಾನಾಯಕನ ಮಾತು ಕೇಳಿ, ದೇವಿಗೆ ಕರುಣೆ ಬಂದು, ಗಂಗೆಯಲ್ಲಿ ಸ್ನಾನ ಮಾಡಿ ಪುತ್ರ ಸಂತಾನದ ಫಲ ತರುವೆ. ಅಲ್ಲಿಯವರೆಗೆ ತಪಶ್ಚರ್ಯಕ್ಕೆ ಕುಳಿತುಕೋ ಎಂದಳು. ಗಂಗೆಯಲ್ಲಿ ಸ್ನಾನ ಮಾಡಿ ಪುತ್ರ ಸಂತಾನದ ಫಲ ತೆಗೆದುಕೊಂಡು ಭೀಮಾನಲ್ಲಿಗೆ ಬಂದಳು. ಇದನ್ನು ಮಡದಿ ಧರ್ಮಣಿಗೆ ಕೊಡು ಎಂದು ಆಶೀರ್ವದಿಸಿ ಕಳುಹಿಸಿದಳು. ಭೀಮಾನಾಯಕ ಪುತ್ರ ಸಂತಾನದ ಫಲ ತೆಗೆದುಕೊಂಡು ಮನೆಗೆ ಬಂದನು. ಇದ್ದ ವಿಷಯ ಹೆಂಡತಿಯ ಮುಂದೆ ಹೇಳಿದನು. ವಿಷಯ ತಿಳಿದ ಧರ್ಮಣಿ, ಬ್ರಹ್ಮನನ್ನು ನೆನಸಿ “ದೇವ ಹಣೆಬರಹದಲ್ಲಿ ಏನು ಬರೆದಿರುವಿ. ಆದಷ್ಟು ಬೇಗ ಒಳ್ಳೆಯ ಮಗು ಕೊಡು, ಅವನ ಹೆಸರು ಎಲ್ಲರ ಬಾಯಲ್ಲಿ ಉಳಿಯಬೇಕು” ಎಂದು ಬೇಡಿಕೊಂಡಳು. ಧರ್ಮಣಿಯ ದುಃಖದ ಮಾತುಗಳು ಮರಿಯಮ್ಮಳಿಗೆ ಗೊತ್ತಾಗಿ ಅವಳಲ್ಲಿಗೆ ಬಂದಳು. ಧರ್ಮಣಿಯನ್ನು ಆಶೀರ್ವದಿಸಿ ಪುತ್ರ ಸಂತಾನದ ಪ್ರಸಾದ ಸ್ವೀಕರಿಸಲು ಹೇಳಿದಳು. ಮುಂದೆ ದಿನಗಳು ಕಳೆದಂತೆ ಧರ್ಮಣಿ ಗರ್ಭವತಿ ಆದಳು.

ಧರ್ಮಭರೋ ಜಯ ಜಯಕಾರ
ಅವತಾರ ಲಿದೋರ ॥ಪ॥

ಕಾಂಯಿ ಧನ್ನ ಚಲೆಗೇ ಸದಿಯಾ ಬಿತನ
ಮಾತಾ ಧರ್ಮಣಿರ ಗರ್ಭಭರಾನ
ಆನಂದೇಮ ಭಿಮಾರೋ ಕಾರಭಾರ ॥೧॥

ನವಮೀನಾ ನವಧನ ಪುರೋರೇ ಭರಾನ
ನಕ್ಷತ್ರ ಲಾಗೋರೇ ರೋಹಿಣಿರೋ ಧನ್ನ
ಮಾದೇವೆರೋ ಧನ್ನ ಸೋಮುವಾರರೇನ ॥೨॥

ತಾರೀಖ ಪಂದ್ರ ಮೀನಾ ದುಸರೇನ
ಸಾಲ ಸತ್ರ ಏಕ್ಕೋಣ ಚಾಳಿಸೇನ
ಜನ್ಮಲಿದೊ ಸೇವಾ ಸರದಾರ ॥೩॥

ಸೂಕಿ ರುಂಗಳಿ ವೇಗಿ ಜಲಥಲ
ಅಂದಳೇರೋ ಜೋತ ಹಾಲೋಹಾಲ
ಸೂರಖಂಡೇರೋ ಕಿಲೋ ವೆಗೋ ಗೋಲ ॥೪॥

ದುಸಮನೆರೋ ಛೀ ದುಸಮನ
ಸಂತೇನರೇ ತೂಯಿ ಕಾರಣ
ಮೋರ ವನೇಮ ನಾಚತಿ ಚಾಲರೇ ॥೫॥

ಭೂಮಿಮಾತಾ ಆನಂದವೇನ
ವಾಜಡಿರೋರೇ ಪೇಟ ಪಾಚನ
ಖರೋ ಖಾಸ ಛನಿ ನಂದಲಾಲ ॥೬॥

ಸಾತಿದೇವಿನೆ ಲಾಗಿರೇ ಖಬರ
ಸೇವಾರೋ ವೇಗೋ ಅವತಾರ
ಸಾತಿಭೇನೆ ವಿಚಾರ ಕರನ ॥೭॥

**ಸಾರಾಂಶ:**

ಹಲವಾರು ವರ್ಷಗಳು ಕಳೆದ ಬಳಿಕ, ಧರ್ಮಣಿ ಸೇವಾಲಾಲಾನಿಗೆ ಜನ್ಮಕೊಡುತ್ತಾಳೆ. ಎಲ್ಲ ಕಡೆಗಳಲ್ಲಿಯೂ ಜಯ ಜಯಕಾರ. ಧರ್ಮಣಿ ಗರ್ಭವತಿ ಇದ್ದುದನ್ನು ಕಣ್ಣಾರೆ ನೋಡಿದ ಭೀಮಾನಾಯಕನಿಗೆ ಅತೀವ ಸಂತೋಷ. ಒಂಭತ್ತು ತಿಂಗಳು ಒಂಭತ್ತು ದಿನಗಳು ತುಂಬಿದ ಬಳಿಕ ರೋಹಿಣಿ ನಕ್ಷತ್ರದ ಸೋಮವಾರ ೧೫-೨-೧೭೩೯ ರಂದು ಸೇವಾಲಾಲ ಜನ್ಮ ಪಡೆದನು. ಆ ಸಂದರ್ಭದಲ್ಲಿ ಬತ್ತಿದ ಹಳ್ಳ- ಕೊಳ್ಳಗಳಲ್ಲಿ ನೀರು ಹರಿಯುತ್ತದೆ. ಕುರುಡರಿಗೆ ಕಣ್ಣುಗಳು ಬಂದವು. ಸೂರಗೊಂಡನಕೊಪ್ಪದಲ್ಲಿ ಹಬ್ಬದ ವಾತಾವರಣ. ನವಿಲುಗಳು ಹರ್ಷದಿಂದ ನರ್ತಿಸಿದವು. ಒಳ್ಳೆಯವರಿಗೆ ರಕ್ಷಿಸಲು, ದುಷ್ಟರಿಗೆ ಶಿಕ್ಷಿಸಲು ಸೇವಾಲಾಲ ಜನ್ಮ ತಾಳಿದನು.

ಭೂತಾಯಿ ಹಸಿರು ಸೀರೆ ಉಟ್ಟವಳಂತೆ ಕಂಡಳು. ಬಂಜೆ ಹೆಣ್ಣುಮಕ್ಕಳು ಗರ್ಭ ಧರಿಸಿದರು. ಸತ್ಯಕ್ಕೆ ಜಯ ಇದೆ ಎಂಬುದು ಅರ್ಥವಾಯಿತು. ಸೇವಾಲಾಲ ಜನಿಸಿದ್ದು, ಏಳು ಜನ ದೇವಿಯರಿಗೆ ಗೊತ್ತಾದಾಗ, ಮನಸ್ಸಿನಲ್ಲಿ ಸಂತೋಷಪಟ್ಟರು.

ಚಂಚಲ ದೇವಿರೋ ಮನರ
ಆಯಿಭಾಯಾರೋ ನಾಮಪಾಡೇನ ||ಪ||

ಪಿಳೋ ಪಿತಾಂಬರ ಸಾಡೋಪೇರನ
ತಾಂಡೊ ತಾಂಡೇರಿ ಖಬರಲೇನ
ಭೀಕಾ ನಾಯಕೇರಿ ಘರಪುಚನ ||೧||

ಆವಗಿ ನಾಯಕೇರ ಘರೇನ
ಹುಬರಗಿ ಅಂಗಣೇಮ ಆನ
ಧರ್ಮಣಿ ಹಾಂಕಮಾರಿ ವನೂನ ||೨||

ತಮ ದಿಸೋಚೋ ಮೋಟ ಮನೇರಿ
ಕರನ ತಮೇನ ಹಾಂಕಮಾರಿ
ಮಾರೇ ಬಾಳಾರಿ ನಾಮಪಾಡೇನ ||೩||

ಧರ್ಮಣಿರ ವಾತ ಸಾಂಬಳನ
ಪಾಲಣೇಮ ಘಾಲೇರ ಸಾಮಾನ ಮಂಗಾನ
ಟೋಪರೋ, ಖಾರಿಕ, ಬದಾಮ ||೪||

ಸಾಮಾನ ಲಾನ ದಿನಿರೇ ದೇವಿನ
ಹುಂಸೇತಿ ಜೋಳಿಮ ಘಾಲನ
ಸೇವಾಲಾಲರ ನಾಮ ಪಾಡನ ||೫||

ಝೀಗಲಾ ಟೋಪಿ ಭಾಯಾನ ಪೇರಾನ
ಪಾಲಣೇಮ ಓನ ಬಸಾರನ
ಝುರ ಝುರ ಪಾಲಣೋ ಹಲಾನ ||೬||

ಸಾತಿದೇವಿ ಆಟವಿ ಧರ್ಮಣಿ
ಪಾಲಣೇರಿ ಗಾರಿ ಕಹಾನಿ
ರಾಜುದಾಸೇರಿ ಸಾಂಬಳೋ ವಾಣಿ ||೭||

**ಸಾರಾಂಶ:**

ಸೇವಾಲಾಲನ ನಾಮಕರಣಕ್ಕೆ ಏಳು ಜನ ದೇವಿಯರು ಪಿತಾಂಬರದ ಸೀರೆಯನ್ನುಟ್ಟುಕೊಂಡು ಭೀಮಾನಾಯಕನ ತಾಂಡೆಗೆ ಬರುತ್ತಾರೆ. ನಾಯಕನ ಮನೆಯ ಮುಂದೆ ಬಂದು ನಿಂತಾಗ ಧರ್ಮಣಿ ಅವರನ್ನು ನೋಡಿ, ನೀವು ನಿರ್ಮಲ ಮನಸ್ಸಿನವರು ಕಾಣುತ್ತೀರಿ. ತನ್ನ ಮಗನ ನಾಮಕರಣಕ್ಕೆ ಬನ್ನಿರಿ ಎಂದು ಕರೆದಳು. ಏಳು ಜನ ದೇವಿಯರು ಮನೆಯೊಳಗೆ ಬಂದು ಕುಳಿತರು. ಮಗುವಿನ ನಾಮಕರಣಕ್ಕೆ ಕೊಬ್ಬರಿ, ಉತ್ತತ್ತಿ, ಬಾದಾಮಿ ಮುಂತಾದ ಸಾಮಾನುಗಳನ್ನು ತರಿಸಿದರು. ಮುದ್ದಾದ ಮಗುವಿಗೆ ಹೊಸ ಬಟ್ಟೆಗಳನ್ನು ತೊಡಿಸಿ ತೊಟ್ಟಿಲಲ್ಲಿ ಹಾಕಿದರು. "ಸೇವಾಲಾಲ" ಎಂದು ನಾಮಕರಣ ಮಾಡಿ, ತೊಟ್ಟಿಲ ತೂಗುತ್ತ ಜೋಗುಳ ಪದಗಳನ್ನು ಹಾಡಿದರು.

ಜಗತಾರೋ ಲಿದೋ ಅವತಾರ
ವೋ ಭೀಮಾ ನಾಯಕೇರೆ ಘರ ||ಪ||

ಕಾಂಯಿ ಧನ್ನ ಭಾಯಾರ ಬಿತನ
ಹಾಂಪಾಭಾಯಿ ಆರೋ ಜಲಮನ
ಭೀಮಾಬಾಪುನ ಲಾಗೋರ ಘೋರ ||೧||

ತಿಸರೋ ನಂಬರ ಬದ್ದುರೋ ಲಾಗನ
ಚವತೇಮ ಭಾಣಾರ ಮಲನ
ಅಸೇ ಜಲಮೇರ ಚಾರವೀರ ||೨||

ಭೀಮಾಬಾಪು ಕರರೋ ವಿಚಾರ
ಚಾರ ಬಾಳಾ ಛ ಮಾರ ಚತುರ
ದೇವಿನರೇ ಮಾರೋ ನಮನ ||೩||

ಗೀತ ಗಾಂವುರೇ ತಾರೇ ನಾಮೇನ
ಭಾಯಾರೋ ದೇಶ ಪೋವರಾಗಾಮ
ಶಂಕರ ಬಾಲಕ ಕರರೋ ವಂದನ ||೪||

**ಸಾರಾಂಶ:**

ಭೀಮಾ ನಾಯಕನ ಮನೆಯಲ್ಲಿ ಜಗದುದ್ಧಾರಕ ಸೇವಾಲಾಲ ಜನ್ಮ ತಾಳಿದನು. ಕೆಲವು ವರ್ಷಗಳು ಕಳೆದ ಮೇಲೆ ಹಾಂಪಾ ಸಹೋದರ ಜನ್ಮ ತಾಳಿದನು. ಮೂರನೆಯವನು ಬದ್ದು ಸಹೋದರ,

ನಾಲ್ಕನೆಯವನು ಭಾಣಾ ಸಹೋದರ. ಹೀಗೆ ನಾಲ್ಕು ಜನ ಗಂಡುಮಕ್ಕಳು ಭೀಮಾನಾಯಕನಿಗೆ ಹುಟ್ಟುತ್ತಾರೆ. ನಾಲ್ಕು ಜನ ಮಕ್ಕಳ ಕಾರ್ಯಚಟುವಟಿಕೆಗಳನ್ನು ನೋಡಿ ಭೀಮಾನಾಯಕನಿಗೆ ಅತೀವ ಸಂತೋಷ ಆಗುತ್ತದೆ. ನಾಲ್ಕು ಜನ ಚತುರ ಮಕ್ಕಳಿದ್ದಾರೆ. ಆ ದೇವರು ತನ್ನ ಮೇಲೆ ಕರುಣೆ ತೋರಿದ್ದಾನೆ ಎನ್ನುತ್ತಾನೆ.

ಕಾಲೋ ಕಾಲರೇ ನಂದೋಲಾಲ, ನಂದೋಲಾಲರೇ
ಖೋಳಾಮ ಘೋರಾಯೋ ನಂಗಾರಾ ||ಪ||

ಘ್ಯಾರ ವರ್ಷೇರೋ ವೆಗೋರೆ ಭಾಯಾ
ಚಲೋಜಾರೋಚ ಗವಾಧನೇನ
ಬಾಲಗೋಪಾಲ ವೋರೆ ಸೋಬತೇನ ||೧||

ತೀನ ಹಜಾರ ಸಾತಸೇ ಪಂಚಾವನ
ಗವಾಧನ ಹವಾಲಕಿದೇ ಭಾಯಾನ
ಭೀಮಾಬಾಪುನ ಆನಂದವೇನ ||೨||

ಸೇವಾಕೆರೋ ಬಾಲ ಗೋಪಾಲೇನ
ಜಮಾಕರೋ ಖಾಡು ಬೋಲಾ ಭಜನ
ಸಕಾ ಭೀಕಾ ತಯ್ಯಾರವೇನ ||೩||

ಭಜನ ಬೋಲೇನ ಭೇನಿ ಝೂಂಜರ ಥಾಳಿ
ಸೇವಾ ವಿಚಾರ ಕಿದೋ ಮನೇಮಾಯಿ
ಜಾಡಿ ಜಟ್ಟ ತೋಡೋ ಝಾಡೇರಿ ಠೋಳಿ ||೪||

ಕಾಳೇ ಭಾಟಾರ ನಂಗಾರಾ ಬಣಾಯೋ
ಸಾಗವಾನಿ ಪಾನೇರ ಥಾಳಿ ಬಣಾನ
ಢಾಕಡಾ ಪಾನೇರಿ ಝೂಂಜ ಬಣಾನ ||೫||

ಜಂಗಲೆಮ ನಂಗಾರಾ ಘೋರಾನ
ಸೇವಾಲಾಲೇರಿ ಮೇಳ ಜಮನ
ಬಾಲ_ಗೋಪಾಲ ಢಾಳ ಭೇಳನ ||೬||


ಭಜನ ಬೋಲತೂರ ಲಾಗಿಚ ಭೂಕ
ಖರಾದ ಭಾಯಾ ಹಮೇನ ಭೋಜನ

ಭಾಯಾ ಕೆರೋ ಬಾಲಗೋಪಲೇನ ||೭||

ಭೋಜನ ಖರಾದು ತಮೇನ
ಮತ ಕಿಜೋ ತಾಂಡೇವಾಳೇನ
ಮಿತ್ರ ಭಾಯಾರಿ ವಾತ ಮಾನನ ||೮||

**ಸಾರಾಂಶ:**

ಸೇವಾಲಾಲ ಹನ್ನೊಂದು ವರ್ಷದವನಿದ್ದಾಗ, ತಂದೆಯ ಅಪ್ಪಣೆಯಂತೆ ಸಕಾ-ಭಿಕಾ ಮತ್ತು ಬಾಲ-ಗೋಪಾಲಕರೊಂದಿಗೆ ಗೋವುಗಳನ್ನು ಕಾಯಲು ಅಡವಿಗೆ ಹೋಗುತ್ತಾನೆ. ಒಂದು ದಿನ ಅಡವಿಯಲ್ಲಿ ಗೋವುಗಳನ್ನು ಮೇಯಲು ಬಿಟ್ಟು ದನಗಾಹಿಗಳನ್ನು ಕರೆದು ಭಜನೆ ಹಾಡೋಣ ಎಂದನು. ಅದಕ್ಕೆ ಅವರು ಒಪ್ಪಿಕೊಂಡರು. ಆದರೆ ಬಾರಿಸಲಿಕ್ಕೆ ವಾದ್ಯಗಳಿರಲಿಲ್ಲ. ಆಗ ಸೇವಾಲಾಲನು ಕರಿಕಲ್ಲಿನ ನಗಾರಿ, ಸಾಗವಾನಿ ಎಲೆಗಳ ಗಂಗಾಳ ಮತ್ತು ತಡಸಲಗಿಡದ ಎಲೆಗಳಿಂದ ತಾಳ ತಯಾರಿಸಿ ಅರಣ್ಯದಲ್ಲಿ ಭಜನೆ ಹಾಡಿದರು. ಬಹಳ ಹೊತ್ತಿನವರೆಗೆ ಭಜನೆ ಹಾಡಿ, ಬಾಲ- ಗೋಪಾಲಕರಿಗೆ ಹೊಟ್ಟೆ ಹಸಿವಾಯಿತು. ಅವರು ಸೇವಾಲಾಲನಿಗೆ ಹೊಟ್ಟೆ ಹಸಿವು ಆಗಿದೆ ಎಂದರು. ಸೇವಾಲಾಲ ಬಾಲಗೋಪಾಲಕರಿಗೆ ಹೇಳಿದ. ಊಟಕ್ಕೆ ಹಾಕುವೆ, ಆದರೆ ಈ ವಿಷಯ ಯಾರ ಮುಂದೆ ಹೇಳಬಾರದೆಂದು ವಚನ ಪಡೆದನು.



ಖಾಳಿಯಾರೋ ಪಾಣಿ ಕಾಳಿ ಧೂಡೇಮ ಭೇಳನ
ಬನಾ ಗೋಳೇರೋರೇ ಶಿರಾ ಕಿದೋ ನಿರಮಳ ||ಪ||

ಬಾಲ ಗೋಪಾಲ ಕೆರೇ ವೇಳ ವೇಗಿ
ಭಾಯಾ ಘೋಟೆಲಾಗೋ ಶಿರಾ ||೧||

ಘಡಿಮಾಯಿ ಭಾಯಾ ಶಿರಾ ಬಣಾನ
ಭೋಗ ಲಗಾವೋ ಮಾತಾದೇವಿನ ||೨||

ಪಾಲೇರ ಥಾಳಿ ತಯಾರ ಕರನ
ಪಂಕತಿ ಬಸಾರದಿನೊ ಬಾಲ-ಗೋಪಾಲೇರಿ ||೩||

ಭರ ಥಾಳಿ ಘಾಲೊರ ಶಿರಾನ
ಖಾನ ಆನಂದ ವೇಗೇ ಬಾಲ-ಗೋಪಾಲ ||೪||

ಸಕಾ-ಭಿಕಾ-ಪಟ್ಟು ಕೇರೆ ಭಾಯಾನ
ತಾರ ಮಹಿಮಾ ಕಳೇನಿ ಹಮೇನ ||೫||

ಭೋಳೋ ಬಾಲಕ ಕರರೋ ವಂದನ
ಆಶೀಸರೇದ ಗೋರಬಂದಾನ ||೬||

**ಸಾರಾಂಶ:**

ಸೇವಾಲಾಲ ಕರಿಮಣ್ಣಿನಲ್ಲಿ ಹಳ್ಳದ ನೀರು ಹಾಕಿ, ಬೆಲ್ಲ ಹಾಕದೆ ಶಿರಾ ತಯಾರಿಸಿದ. ಬಾಲಗೋಪಾಲಕರು ಹಸಿವಿನಿಂದ ಚಡಪಡಿಸುತ್ತಿದ್ದರು. ಒಂದು ಗಳಿಗೆಯಲ್ಲಿಯೇ ಶಿರಾ ತಯಾರಿಸಿ ಮರಿಯಮ್ಮ ದೇವಿಗೆ ನೈವೇದ್ಯ ಹಿಡಿದರು. ಎಲೆಗಳ ಮೇಲೆ ಬಾಲ ಗೋಪಾಲಕರಿಗೆ ಊಟಕ್ಕೆ ಹಾಕಿದನು. ಹೊಟ್ಟೆ ತುಂಬ ತಿಂದ ಬಳಿಕ, ಸಂತೋಷದಲ್ಲಿ ಸೇವಾಲಾಲನ ಗುಣಗಾನ ಮಾಡಿದರು.

ಚಿನಾ ಪಟಣೇಮ ದೇವಿವಸನ
ಹುಕುಮ ದಿನೀರೇ ಕಾಳ್ಯಾಮೇರೂನ ||ಪ||

ಜಗದಂಬಾ ರಥಾಪರ ಬೇಸನ
ಲೂಕಡ ಚಾಲ ಜೋರದಾರ

ಜಗದಂಬಾನ ಟಿಕೋ ಖಲನ ||೧||

ಚಿತ್ತೋಡ ಗಡೇನ ಲೂಕಡ ಆನ

ಬಲಾಯೋರೆ ಭೋಯಿ ಭೇನೇನ
ಭೋಯಿ ಭೇನ ಆಯಿ ದೇವಿಕನ ||೨||

ಕಾಂಯಿ ಕಾರಣ ಬಲಾಯಿ ಹಮೇನ
ಸಣೋ ಬಾಯಿ ಮಾರಿ ವಾತೇನ
ಸತ ಭಕ್ತಿರೋ ಬಾಲಕ ಛ ಅಸೋ ||೩||

ಸಾತಿಭೇನೆ ವಿಚಾರ ಕರನ
ಉದ್ಧಾರ ವೇಜಾಯ ಗೊರೂರೋ
ಅಸೋ ಬಾಲಕ ಅಪಣೇನ ಚಾವ ||೪||

ಚಲೇಜಾವ ಭಾಯಾನ ಧೂಂಡೇನ
ಖೋಳಾ ಖೋಳಾಮ ಭಾಯಾನ ದೇಕನ
ಕತಿ ಪತ್ತೋ ಲಾಗೇನಿರೇ ವೋರ ||೫||

ಮಾಂಜರಾ ನಂದಿ ಕಾಠಿ ದೇವಿ ಆವಗಿ
ಕಾಳಿ ಪೋಳಿರ ಪಾಲ ದಿಖಾರಿ
ಭೋಯಿ ಭೇನ ನೆವೋಲೇನಲಾಗಿ ||೬||

ತಮ ಘರೇನ ಜಾವೋಬಾಯಿ
ಶೋಧ ಲಾಮಾಚಿ ಹಮದೋಯಿ
ಭೋಯಿ ಭೇನ ಆಯಿ ಘಾಯಿ ಘಾಯಿ ||೭||

ಡೋಕರಿರ ಯಾಡಿ ರೂಪಲೇನ
ಲೂಕಡೇನ ಸೋಬತ ಲೇನ
ಮಾತೇಪರ ಕೋತಳಿ ಪಾಡನ

**ಸಾರಾಂಶ:**

ಚಿನ್ನಿಕಟ್ಟೆಯಲ್ಲಿರುವ ದೇವಿ, ಕಾಳ್ಯಾಮೇರುನಿಗೆ ಕರೆದು, ಚಿತ್ತೋರಗಡಕ್ಕೆ ಹೋಗುವುದಿದೆ. ಆರು ಜನ ದೇವಿಯರನ್ನು ಕರೆದುಕೊಂಡು ಬಾ ಎಂದಳು. ಕಾಳ್ಯಾ ಮೇರುದೇವಿಯರ ಹತ್ತಿರ ಹೋಗಿ ಕರೆದುಕೊಂಡು ಬಂದನು. ದೇವಿಯರು ಬಂದು ಯಾವ ಕಾರಣಕ್ಕೆ ಕರೆದಿರುವಿ ಎಂದರು. ಬಂಜಾರ

ಕುಲದಲ್ಲಿ ಒಬ್ಬ ಒಳ್ಳೆಯ ಭಕ್ತನಿದ್ದಾನೆ. ಅವನನ್ನು ಭೆಟ್ಟಿ ಆಗಿ ಬರೋಣ ಎಂದಳು. ಲೂಕಡ ರಥ ಸಿದ್ಧಪಡಿಸಿದ, ಏಳು ಜನ ದೇವಿಯರು ರಥದ ಮೇಲೆ ಕುಳಿತುಕೊಂಡರು. ಅವರ ಪಿತಾಂಬರದ ಸೀರೆ ಮತ್ತು ಹಣೆಯ ಮೇಲೆ ಹಚ್ಚಿದ್ದ ತಿಲಕ ಶೋಭಿಸುತಿತ್ತು. ದಾರಿಯುದ್ದಕ್ಕೂ ಸೇವಾಲಾಲನ ಶೋಧ ಮಾಡಿದರು, ಎಲ್ಲಿಯೂ ಕಾಣಲಿಲ್ಲ. ಕೊನೆಗೆ ಗುಡ್ಡಗಾಡುಗಳಲ್ಲಿ ಹುಡುಕಿದರು, ಅಲ್ಲಿಯೂ ಸಿಗಲಿಲ್ಲ. ಏಳು ಜನ ದೇವಿಯರು ಸೇವಾಲಾಲನನ್ನು ಹುಡುಕಿ ಸುಸ್ತಾದರು. ಜಗದಂಬಾ ಆರು ಜನ ದೇವಿಯರನ್ನು ರಥದ ಮೇಲೆ ಹಿಂತಿರುಗಿ ಕಳಿಸಿದಳು. ಜಗದಂಬಾ ದೇವಿ ಮುದುಕಿಯ ವೇಷ ಹಾಕಿಕೊಂಡು, ಕೈಯಲ್ಲಿ ಕೋಲು, ತಲೆಯ ಮೇಲೆ ಗಂಟು ಹೊತ್ತುಕೊಂಡು ಸೇವಾಲಾಲನನ್ನು ಹುಡುಕಲು ಹೊರಟಳು.

ಜಗದಂಬಾ ರೂಪ ಬದಲಾನ
ಚಲಿ ಜಾರಿಚ ಭಾಯಾನ ಧೂಂಡೇನ ||ಪ||

ಭೀಮಾರೇ ಅಂಗಣೇಮ ಜಾನ
ಹೋಬರಗಿ ಜಗದಂಬಾ ಆನ ||೧||

ಭೀಮಾ ಜಾನ ಬೋಲ ಸಗುಣೆನ
ಕಾಂಯಿ ಕಾರಣ ಆಯಿ ಮಾತಾಕರನ ||೨||

ಕತೇರಿ ಭೀಯೇ ದಾದಿ ತೂಯಿ
ತಾರೋ ಪತೋ ಕೇದ ಯಾಡಿಮನ ||೩||

ಮಾರೋಪತೋ ಸಮಾಧನೇತಿ ಕುಚು
ಪೇಲೋ ತಾರೋ ನಾಮ ಕುಲ ಮನ ||೪||

ಮಾರೋ ನಾಮ ಭೀಮಾನಾಯಕ
ಮಾತಾ ಮಂಗಲಿಯಾಡಿ ಪಿತಾ ರಾಮಜಿ ನಾಯಕ ||೫||

ಮಾರೋ ಕುಲ ರಾಮಾವತ ರಾಠೋಡ
ಚಾರ ಬೇಟಾ ಛ ಮಾರೇ ಚತುರ ||೬||

ಸಗುಣಿ ಬೋಲ ಭೀಮಾನಾಯಕೇನ
ಚಾರಿ ಬಾಳಾರ ನಾಮಕೇದ ಮನ ||೭||

ಸೇವಾ, ಹಾಂಪಾ, ಬದ್ದು, ಭಾಣಾರೇನ
ಅರ ಚಾರ ಪುತ್ರ ಛ ಯಾಡಿ ಮನ ||೮||

ಮನೆಮಾಯಿ ವಿಚಾರಕರನ
ಕನಾ ದೇಕು ಚಾರಿ ಬಾಳಾನ ||೯||

ಸೇವಾ ನಾಮೇರೋ ಬೇಟಾ ತಾರೋ
ಕತ ಗೇಚರೇ ಭೀಮಾನಾಯಕ ||೧೦||

ಸೇವಾ ನಾಮೇರೋ ಬೇಟಾಯೇ ಮಾತಾ
ಖಾಡು ಚರಾಯೇನ ಗೇಚ ಜಂಗಲೇನ ||೧೧||

**ಸಾರಾಂಶ:**

ಜಗದಂಬಾ ರೂಪ ಬದಲಿಸಿ ಮುದಕಿಯ ವೇಷ ಹಾಕಿ, ತಲೆಯ ಮೇಲೆ ಗಂಟು ಹೊತ್ತುಕೊಂಡು, ಭೀಮಾನಾಯಕನ ಮನೆಯ ಮುಂದೆ ಬಂದು ನಿಲ್ಲುತ್ತಾಳೆ. ಅವಳನ್ನು ನೋಡಿದ ಭೀಮಾನಾಯಕ, ಯಾವ ಊರು, ಏನು ಕೆಲಸ ಎಂದು ಕೇಳಿದನು. ಮೊದಲು ತಮ್ಮ ಹೆಸರು, ಕುಲಗೋತ್ರ, ಮಕ್ಕಳ ವಿವರ ಹೇಳು ಎಂದಳು. ಆಗ ಬಂಜಾರ ಕುಲದ ರಾಮಜಿ ನಾಯಕ ತಂದೆ. ರಾಠೋಡ ಮನೆತನ, ಹೆಸರು ಭೀಮಾನಾಯಕ, ಸೇವಾ, ಹಾಂಪಾ, ಬದ್ದು ಮತ್ತು ಭಾಣಾ ಹೀಗೆ ನಾಲ್ಕು ಮಕ್ಕಳಿದ್ದಾರೆ ಎಂದನು. ಜಗದಂಬಾಳಿಗೆ ಭೀಮಾನಾಯಕನ ಮಕ್ಕಳನ್ನು ನೋಡುವ ಆತುರ. ಹಿರಿಯ ಮಗ ಸೇವಾಲಾಲ ಎಲ್ಲಿಗೆ ಹೋಗಿದ್ದಾನೆ ಎಂದಾಗ, ಗೋವುಗಳನ್ನು ಕಾಯಲು ಅಡವಿಗೆ ಹೋಗಿದ್ದಾನೆ ಎಂದು ಭೀಮಾನಾಯಕ ಹೇಳುತ್ತಾನೆ.

ಲೂಕಡೇನ ಲೀದಿ ಸೋಬತೇನ
ದೇವಿ ಆರಿ ಚಂದಣ ಖೋಳಿನ ||ಪ||

ಸಾರಿ ಧನ್ನ ಹಿಂಡ ಖೋಳಾ ಖೋಳಾ
ತರಿ ಕೋನಿ ಲಾಬೋ ಧನಮಾಳಾ
ಪೆಲೋ ಖಾಡು ದಿಸಚ ನೇಣೇಮ ||೧||

ಕಾಂಯಿ ಕೇರಿ ಯಾಡಿ ಲೂಕಡೇನ
ಕೇರ ಖಾಂಡ ದಿಸಚ ವನೇಮ
ಜಾನ ಪೂಚನ ಆಜೋರೆ ಲೂಕಡ ||೨||

ಲೂಕಡ ಜಾನ ದೇಕರೇ ಖಾಂಡುನ
ಭಾಯಾ ಬೇಟೋರೇ ಕಾಳೇ ಭಾಟಾಮ
ಮುರಲಿ ಹಾತೇಮಾಯಿ ಝುಲನ ||೩||

ಲೂಕಡ ವಾಂಸಳಿರ ನಾದ ಸಾಮಳನ
ಗವಳ್ಯಾನ ಪುಚರೋ ಗೋವಿಂದ
ಕೇರ ಗವಾಧನ ಛರೇ ಘನಶ್ಯಾಮ ||೪||

ಭಾಯಾ ಕೆರೋ ಕಾಂಯಿ ಗರಜ ತೋನ
ಲೂಕಡ ಕೆರೋ ಗರಜ ಛ ಹಮೇನ
ಅಸೋ ಖಾಂಡ ಕೋನಿ ದಿಟೋ ಕರನ ||೫||

ಜೇರಸಾರು ಪುಚರೋಚು ತೋನ
ನಾಮ ಎರೋ ಗಾಮ ಕೇದ ಮನ
ಕತರಾಕ ಭಾಯಿಬಂದ ಛ ಕೇನ ||೬||

ಹಾಂಪಾ, ಬದ್ದು, ಭಾಣಾ ತೀನಭಾಯಿ
ರಹವಾಸಿ ಸೂರಗೊಂಡನಕೊಪ್ಪ
ಭೀಮರೋ ಮೋಟೋ ಬೇಟಾರೇನ ||೭||

ಸೇ ವಾತ ಲೂಕಡ ಪುಚನ
ಜಾನ ಕೆರೋರೇ ಮಾತಾದೇವಿನ
ಜೇರ ಸಾರೂ ಫರರೋ ವನೇಮ ||೮||

ಜಾರಿಯಾಡಿ ಖಾಡುವಾಳೇಕನ
ಜಾನ ಪುಚರಿಚ ಭಾಯಾರ ಖಬರ
ಮಿಠಿಮಾರಿ ಭಾಯಾರೇ ಗಳೇನ ||೯||

**ಸಾರಾಂಶ:**

ಜಗದಂಬಾ ದೇವಿ ತನ್ನ ಜೊತೆಗೆ ಲೂಕಡನನ್ನು ಕರೆದುಕೊಂಡು, ಚಂದಣ ಖ್ವಾರಿಗೆ ಬರುತ್ತಾಳೆ. ಇಡೀ ದಿವಸ ಕಾಡು-ಮೇಡುಗಳಲ್ಲಿ ಸೇವಾಲಾಲನನ್ನು ಹುಡುಕುತ್ತಾಳೆ. ಕೊನೆಗೆ ದೂರದಲ್ಲಿ ಗೋವುಗಳ ಹಿಂಡು ಮೇಯುತ್ತಿರುವುದು ಕಾಣಿಸುತ್ತದೆ. ಲೂಕಡನನ್ನು ನೋಡಿ ಬರಲು ಕಳಿಸುತ್ತಾಳೆ. ಲೂಕಡ ಹೋಗಿ ನೋಡಿದಾಗ, ಕರಿ ಬಂಡೆಯ ಮೇಲೆ ಕುಳಿತು ಕೊಳಲು ಊದುತ್ತ ಒಬ್ಬ ಇಂಪಾದ ಗಾಯನ ಹಾಡುತ್ತಿದ್ದನು.ಜೊತೆಗಿದ್ದ ಬಾಲ ಗೋಪಾಲಕರನ್ನು ವಿಚಾರಿಸಿದಾಗ ಏನು ಕೆಲಸ ಎಂದು ಕೇಳುತ್ತಾರೆ. ಮಹತ್ವದ ಕೆಲಸ ಆಗಬೇಕಾಗಿದೆ ಹೇಳಿರೆಂದಾಗ ಸೂರಗೊಂಡನಕೊಪ್ಪದ ಭೀಮಾನಾಯಕನ ಮಗ ಸೇವಾಲಾಲ ಎಂದುಹೇಳುತ್ತಾರೆ. ಲೂಕಡನಿಗೆ

ಸಂತೋಷ ಆಗಿ ಹಿಂತಿರುಗಿ ದೇವಿಯ ಹತ್ತಿರ ಬಂದು ಸೇವಾಲಾಲನ ಮಾಹಿತಿ ಕೊಡುತ್ತಾನೆ. ದೇವಿ ಲೂಕಡನನ್ನು ಜೊತೆಗೆ ಕರೆದುಕೊಂಡು ಸೇವಾಲಾಲನ ಬಳಿ ಬರುತ್ತಾಳೆ. ಸೇವಾಲಾಲ ಕೊಳಲು ಬಾರಿಸುತ್ತಿದ್ದುದನ್ನು ನೋಡಿ, ಅವನ ಗಂಟಲಿನಿಂದ ಸ್ವರ ಬರದಂತೆ ಮಾಡುತ್ತಾಳೆ.

ದೇವಿ ಮಾರದಿನಿ ಗಳೇನ ಮಿಠಿ
ಕಾಂಯಿ ತ್ರಾಸ ಭೋಗರೋ ಜುಠಿ
ಮೊರಲಿರೋ ನಾದ ವಜಾರೋರ
ಗವಾಧನ ಭಾಯಾ ಚರಾರೋರ ||ಪ||

ಭಾಯಿ ಭಂದ ದೇಮಲಿ ಭಾಯಾತೋನ
ಕಾ ತ್ರಾಸ ಭೋಗರೋ ನಂದನ ||೧||

ಭೋಡ ಪ್ರಪಂಚ ಕರಲ ಭಕ್ತಿ
ಭಾಯಾನ ಕೇರಿ ಮಾತಾ ಶಕ್ತಿ ||೨||

ಚಾಯೇನಿ ಭಕ್ತಿ ತಾರಿ ಮನ
ಹುಸಿಯಾರಿ ಕೆರೋರೆ ದೇವಿನ ||೩||

ಡುಬಗೋರ ಧನ ಘುರ ಜಾಮಾಚಾಲ
ಭಾಯಾ ಹಾಂಕಮಾರೋ ಬಾಲಗೋಪಲೇನ ||೪||


ಗವಾಧನ್ನ ಜಮಾರೇಕರನ
ಸೋಬತೇನರ ಬಾಲ-ಗೋಪಾಲ ||೫||

ಗವಾಧನ್ನ ಭಾಯಾರ ಸೋಬತ
ದೇವಿ ಆರಿ ಭಾಯಾರ ಆಡೋ ಆಡ ||೬||

ಭಾಯಾ ದೇವಿತಿ ಭೇಟಿ ಭೇಟಿ ಚಾಲ
ಗಾವಡಿ ಸೋಬತ ಘುರ ಗಾಟನ ||೭||

ಭಾಯಾ ಭಾಂದರೋ ಗಾವಡಿ ಖೀಲಾನ
ದೇವಿ ಮಾಕಿವೇನ ವಡಗಿ ಘುರೇನ ||೮||

ಗವಾ ಭಾಂದನ ಕಿದೋ ಭೋಜನ
ಆನ ಸುತೋ ಭೇಡಾರ ಘುರೇಮ ||೯||



**ಸಾರಾಂಶ:**

ಸೇವಾಲಾಲ ಗೋವುಗಳನ್ನು ಕಾಯುತ್ತ ಕೊಳಲು ಊದಲು ಆರಂಭಿಸಿದ. ಗಂಟಲ ಬೇನೆ ಹೆಚ್ಚಾದರೂ ಕೊಳಲು ಊದುವುದು ಬಿಡಲಿಲ್ಲ. ದೇವಿ ಸಮಾಧಾನದಿಂದ ಹೇಳಿದಳು, ನಿನಗೆ ಸಹೋದರರರನ್ನು ಕೊಟ್ಟಿರುವೆ. ಗೋವುಗಳ ಕಾಯುವ ಜವಾಬ್ದಾರಿ ಅವರಿಗೆ ವಹಿಸಿ, ತನ್ನ ಭಕ್ತನಾಗು ಎನ್ನುತ್ತಾಳೆ. ದೇವಿ ನಿಮ್ಮ ಭಕ್ತಿಗಿಂತಲೂ ಜನ್ಮ ಕೊಟ್ಟ ತಾಯಿ ತಂದೆಯರ ಸೇವೆ ಮಾಡುವುದು ಅತೀ ಮುಖ್ಯ, ಆದ್ದರಿಂದ ನಿಮ್ಮ ಭಕ್ತನಾಗುವುದು ಬೇಕಾಗಿಲ್ಲ ಎಂದು ಖಂಡತುಂಡ ಹೇಳುತ್ತಾನೆ. ಸಂಜೆ ಆದೊಡನೆ ಬಾಲಗೋಪಾಲಕರೊಂದಿಗೆ, ಗೋವುಗಳನ್ನು ಮನೆಗೆ ತರುತ್ತಾನೆ. ದೇವಿ ಸೇವಾಲಾಲನಿಗೆ ಕಾಣದಂತೆ ಮಾಯರೂಪದಲ್ಲಿ ಬರುತ್ತಾಳೆ. ಮನೆಯ ಚಾವಣಿಯಲ್ಲಿ ಗೋವುಗಳನ್ನು ಕಟ್ಟಿ ಸೇವಾಲಾಲ ಕೈಕಾಲು ಮುಖ ತೊಳೆದುಕೊಂಡು ಊಟಕ್ಕೆ

ಕೂಡುತ್ತಾನೆ. ಆಗ ಮಾಯಾರೂಪದಿಂದ ಬಂದ ದೇವಿ ನೊಣವಾಗಿ ಹಾರಿ ಹೋಗುತ್ತಾಳೆ. ಊಟವಾದ ಬಳಿಕ ಸೇವಾಲಾಲ ತಮ್ಮ ಕೊನೆಯ (ಭೇಡಾರ ಘರ) ಮನೆಯಲ್ಲಿ ಬಂದು ಮಲಗುತ್ತಾನೆ.

ಭಾಯಾ ಸುತೋರೇ ಘೋರಿ ನಿಂದೇಮ
ದೇವಿ ಆಯಿ ಭೇಡಾರ ಘರೇನ ||ಪ||

ದೇವಿ ಮನೇಮ ವಿಚಾರಕರನ
ಭಾಯಾ ಸುತೋರೇ ಸೇಲಾ ಫಾಲನ
ಗತಾಬ ಕೇರಿ ಬಚನೇಮ ||೧||

ಹಾಂಕ ಮಾರಿರೇ ಭಾಯಾನ ಜಾನ
ವುಟ ವುಟ ಕೇರಿರೇ ಸೇವಕ
ಕೋನಿ ಸಾಂಬಳೋ ಘೋರಿ ನಿಂದೇಮ ||೨||

ಹಾತ ಪಕಡನ ಮಾರದಿನಿ ಝುಟಕೋ
ಭಾಯಾ ವುಟನ ಬೆಸಗೋ ಪಟಕೋ
ಕಾಯಿ ಕೇರೋ ಶಕ್ತಿನ ಸಟಕೋ ||೩||

ಭಾಯಾರ ಮಾತೇಪರ ಹಾತಮೇಲನ
ತಾರಿ ದೇವಿ ಆಯಿರೇ ಬೋಲೇನ
ಭೂಲಗೋ ಕಾಯಿರೇ ಎಯಿ ಜಲಮೇಮ ||೪||

ಭಕ್ತಿ ಕರಲ ಸೇವಕ ಮಾರಿ
ತಾರಿ ಭಕ್ತಿ ಚಾಯೇನಿಯೇ ಮನ
ಫಸಾನಾಕಿ ಲಾರೇರ ಅವತಾರೇಮ ||೫||

ಅಬ ಕೋನಿ ಫಸಾವುರೇ ತೋನ
ಭಕ್ತಿ ಕರ ಕೇರಿ ಸೇವಕೇನ
ರಾಜುದುಸ ಗಾವರೇ ಭಜನೇಮ ||೬||

**ಸಾರಾಂಶ:**

ಸೇವಾಲಾಲ ಗಾಢನಿದ್ರೆಯಲ್ಲಿರುವಾಗ, ದೇವಿ ಬಂದು "ಏಳು, ಎದ್ದೇಳು ಸೇವಕ" ಎಂದು ಕೂಗಿದಳು. ಗಾಢನಿದ್ರೆಯಲ್ಲಿ ಎಚ್ಚರವಾಗಲಿಲ್ಲ. ಕೊನೆಗೆ ಕೈ ಹಿಡಿದು ಎಳೆದಳು. ತಕ್ಷಣವೇ

ಸೇವಾಲಾಲ ಎದ್ದು ಕುಳಿತನು. ಸಿಟ್ಟಿನಿಂದ ನೋಡಿದಾಗ, "ಸಿಟ್ಟಾಗಬೇಡ ಸಮಾಧಾನ ತಾಳು" ಎಂದು ತಲೆಯ ಮೇಲೆ ಕೈಯಾಡಿಸಿದಳು. "ನಿನ್ನ ದೇವಿ ಬಂದಿರುವೆ. ಈ ಜನ್ಮದಲ್ಲಿ ಮರೆತಂತೆ ಕಾಣುತ್ತಿದೆ. ಈಗಲಾದರೂ ಭಕ್ತನಾಗಲು ಒಪ್ಪಿಕೊ" ಎಂದಳು. ಆಗ "ದೇವಿ ಹಿಂದಿನ ಜನ್ಮದಲ್ಲಿ ಘಸಾಸಿರುವಿ, ಆದ್ದರಿಂದ ತಮ್ಮ ಭಕ್ತನಾಗಲು ಒಪ್ಪುವುದಿಲ್ಲ" ಎಂದನು.

ಭಕ್ತಿ ಕರ ಮಾರಿರೇ ಉದಾಸಿ
ಬನಾದಿಂವು ತಾರೋ ತಿರ್ಥಕಾಶಿ ||ಪ||

ಹಳ ಹಳ ಕರರಿ ಸಗುಣಿ
ಭಕ್ತಿ ಕರಲ ಸೇವಾ ನಂದನ
ಕೋನಿ ಕರೂ ಮಲಕೇಮ ಹಾಂಸಿ ||೧||

ಮುಂಡೇಮಾಯಿತಿ ಕಾಡ ಜಕೋ ವಾಕ್ಯ
ಖರೋ ಕರಿಂವು ತಾರೋರೇ ಸತ್ಯ
ಸೌಧ ಕರೇರೋ ಕಾಮರೇ ಮಾರೋ ||೨||

ಅನ್ನ ಧನ್ನೇರಿ ಕಮ ಕರೂನಿ
ಭಲೋ ಕರಲ ಗಥಾ ಜಲಮೇಮ
ಕೋನಿ ಮಳ ಅಸೋ ವೇಳಾ ತೋನ ||೩||

ಭಾಯಾ ಕೇರೋ ವಾತ ಸಗುಣಿನ
ಮತ ಸಿಜ ಮನ ದೇಕತಾಣಿ
ಅಸೋ ಆಪೋ ಆಪ ಆನ ಬೊಲಿ ಕಸಿ ||೪||

ತಡ ತಡ ರಿಸೇಮ ಭರಾನ
ಭಾಯಾನ ಬೋಲರಿ ಸಗುಣಿ
ಸಮಜೇರ ಕರ ಕೋಸಿಸ ತೂಯಿ ||೫||

ಕೋನಿ ಮಾನೋ ಹಟಿಲೋ ವಾತೇನ
ಜಗದಂಬಾರೇ ಕಳಾ ಫೇಲಾನ
ಭಾಯಾರಿ ಕರೂ ಮಲಕೇಮ ಹಾಂಸಿ ||೬||

**ಸಾರಾಂಶ:**

ಭಕ್ತನಾಗಲು ಸೇವಾಲಾಲ ಒಪ್ಪಿಕೊಂಡರೆ ಹೆಸರನ್ನು ತೀರ್ಥಕಾಶಿ ಮಾಡುವ ಎಂದು ದೇವಿ ಹೇಳಿದಳು. "ಹಟಮಾಡಬೇಡ ಸೇವಾನಂದನ ಲೋಕದಲ್ಲಿ ಅಪಹಾಸ್ಯ ಮಾಡಲಾರೆ. ನೀನು

ಹೇಳಿದ ವಾಕ್ಯ ಸತ್ಯ ಆಗುವಂತೆ ಮಾಡುವೆ. ಧನ ಧಾನ್ಯ ಯಾವುದಕ್ಕೂ ಕಡಿಮೆ ಮಾಡಲಾರೆ. ಒಳ್ಳೆಯ ಕೆಲಸ, ತಿರಸ್ಕರಿಸಬೇಡ. ಇಂಥ ಅವಕಾಶ ಮತ್ತೊಮ್ಮೆ ಬರುವುದಿಲ್ಲ". "ಹಲವಾರು ಬಾರಿ ತಮ್ಮ ಕೇಳಿಕೆ ತಿರಸ್ಕರಿಸಿರುವೆ. ಆದರೂ ನನ್ನ ಬೆನ್ನ ಏಕೆ ಹತ್ತಿರುವಿ. ತೊಂದರೆ ಕೊಡಬೇಡ" ಎಂದನು ಸೇವಾಲಾಲ. ಎಷ್ಟು ಹೇಳಿದರೂ ಒಪ್ಪುತ್ತಿಲ್ಲವೆಂದು ಕೋಪಿತಳಾಗಿ, ಗಡಗಡ ನಡುಗುತ್ತಾ "ಸೇವಾ ನಿನ್ನ ಹೆಸರಿಗೆ ಕಳಂಕ ತರುವೆ" ಎಂದು ಮಾಯವಾದಳು.

ಬಾಣಭರೂ ಚೌಸಟ ಜೋಗಣಿ ಹುಕುಮ ದಿನೀರೇ ಸಗುಣಿ
ಭಾಣಾಭಾಯಿನ ಲಾಯೋ ಮಾರನ ದಕಫೇಲಾದಿನಿ ಮಹಾಮಾರಿರೋ
ಭಾಣಾಭಾಯಿನ ಸ್ವರ್ಗಚಡಾಯಿ ||ಪ||

ಭಾಣಾಭಾಯಿನ ದೇವಿ ಮಾರತಾಣಿ
ಪಚ ಸೇವಾನ ಬೋಲ ಸಗುಣಿ
ಅಬ ಭಕ್ತಿರೋ ಛಂದ ಲಗಾಲನಿ ||೧||

ಭಾಯಾ ಕೆರೋ ಕಾ ಮಾರೀಚಿ ಭಾಯಿನ
ಅಬಹಾಲ ಲೇಲ ಪ್ರಾಣ ಮಾರೋ
ತಾರಿ ಭಕ್ತಿ ಚಾಯೆನಿ ಕಠಿಣ ||೨||

ಜಗದಂಬಾನ ಕೋಪ ಚಡನ
ತೀನ ಹಜಾರ ಸಾತಸೇ ಪಂಚಾವನ
ಗವಾಧನ ಸೇ ಮಾರನಾಕಿ ||೩||

ತಾರಿ ಕೋನಿ ಕರೂ ಭಗತೀನ
ದಾಮಣ ಛೋಡನ ಲಾಗಿ ಖಿಲೀನ
ಅಸೋ ಗರೀಬಿ ಆಯಿರ ಭಾಯಾನ ||೪||

ಹಾತೇಮ ಲಿದೋರ ಭಾಯಾ ದಾತಳಾ
ಖಡ ಕಾಟೇನ ಜಾವ ರಾನೋಮಾಳ
ರಾಜುದಾಸ ಕೇರೋ ಅಜ್ಞಾನ ಬಾಳ ||೫||

**ಸಾರಾಂಶ:**

ಜಗದಂಬೆ ಕುಪಿತಳಾಗಿ ಅರವತ್ನಾಲ್ಕು ವಿದ್ಯೆಯುಳ್ಳ ಬಾಣಭರೂನನ್ನು ಕರೆದು, ಸೇವಾಲಾಲನ ತಾಂಡಾದಲ್ಲಿ ಮಹಾಮಾರಿಯ ರೋಗ ಬರುವಂತೆ ಮಾಡು ಎಂದಳು. ದೇವಿಯ ಅಪ್ಪಣೆಯಂತೆ

ಮಹಾಮಾರಿಯ ರೋಗ ಬರುವಂತೆ ಮಾಡಿದನು. ಬೆಳಗಾಗುವುದರಲ್ಲಿ ಭಾಣಾಭಾಯಿ ಸತ್ತು ಸ್ವರ್ಗ ಸೇರಿದ. ಸೇವಾಲಾಲನನ್ನು ಕರೆದು ಈಗಲಾದರೂ ಭಕ್ತನಾಗು ಎಂದಳು. ಭಾಯಾ ಅದನ್ನು ಒಪ್ಪದೇ, ಭಾಣಾಭಾಯಿಯನ್ನು ಏಕೆ ಕೊಂದುಬಿಟ್ಟೆ. ಸಧ್ಯ ತನ್ನ ಪ್ರಾಣ ಬೇಕಾದರೆ ತೆಗುದುಕೋ ನಿನಗೆ ಭಕ್ತನಾಗುವುದು ಬೇಕಾಗಿಲ್ಲ ಎಂದನು. ಆಗ ದೇವಿ ಸೇವಾಲಾಲನ ಮೂರು ಸಾವಿರದ ಏಳನೂರಾ ಐವತ್ತೈದು ಗೋವುಗಳನ್ನು ಸಾಯಿಸಿದಳು. ಆದರೂ ದೇವಿಯ ಭಕ್ತನಾಗಲು ನಿರಾಕರಿಸಿದ. ಕೊನೆಗೆ ಊಟಕ್ಕೂ ಗತಿ ಇಲ್ಲದೆ ಇದ್ದಾಗ, ಸೇವಾಲಾಲ ಕೈಯಲ್ಲಿ ಕುಡಗೋಲು ಹಿಡಿದುಕೊಂಡು ಹುಲ್ಲು ಕೊಯ್ಯಲು ಹೊರಟನು.

ಭಾಯಾ ಜಾರೋರೇ ಖಡ ಕಾಟೇನ
ಲಾರೋ ಲೇರಿ ಭಗತಿ ಕಾರಣ ॥ಪ॥

ಹಾತೇ ಮಾಯಿ ದಾತಲಾ ಝುಲನ
ಜಂಗಲೇಮ ಜಾರೋ ಪ್ಯಾರೋಭಾಯಿ
ವೆಗೋ ಮಾಲಮ ಜ್ವಾಲಾಮುಖಿನ ॥೧॥

ಶೋಧ ಲೇತಿ ಜಾರಿರೇ ಸಗುಣಿ
ಖಡ ಕಾಟರೋ ಸೇವಾನಂದನ
ದೇಕನ ಜಪ ಝೂಡೇಕನ ॥೨॥

ಭಾಯಾ ಘಾಯಿಮ ಖಡ ಕಾಟರೋ
ಥಾಟೇತಿ ಭಾರೋರೇ ಭಾಂದರೋ
ಭಾರೋ ವಟಾನ ಆರೋ ಘರೇನ ॥೩॥

ಶಿರಸಿ ಕೋನಾರಿರ ಜೋಡ ಗಟಲಾ
ಜಗದಂಬಾ ಫೇಲಾಯಿರೇ ಕಳಾ
ವಿಕ್ರಾಳ ರೂಪ ದೇವಿಲೇನ ॥೪॥

ಆಕಾಶ ಪಾತಾಳ ಮುಂಡಿ ಭೀಡನ
ಅಡಾಲಿದಿರೇ ಸೇವಾಲಾಲೇನ
ಭಾಯಾ ಪಡಗೋ ಚಕ್ಕರ ಖಾನ ॥೫॥

ಥೋಡಿ ವೇಳಾನ ಭಾಯಾ ವುಟನ
ವುಟ ವುಟ ಕೇರಿರೇ ಸಗುಣಿ
ಖಾನ ಭಸ್ಮ ಬಣಾಂವುರೇ ತೋನ ॥೬॥

ನೀತಿ ಕಳನ ವೇಜೋ ಬಚನೇಮ
ಸೇವಾ ಕೇರೋರೆ ಮಾತಾದೇವಿನ
ಮತ ದೇಸ ದುಃಖ ದುಃಖಿಯಾನ ॥೭॥

ಯಾಡಿ ಬಾಪೇರಿ ಲೇದ ವಿಚಾರ
ಪಚ ಭಕ್ತಿ ಕರುಚುಯೇ ತಾರ
ರಾಜುದಾಸ ಗಾವ ಸೇವಾಲೀಲಾಮ ॥೮॥

**ಸಾರಾಂಶ:**

ಸೇವಾಲಾಲ ಹುಲ್ಲು ಕೊಯ್ಯಲಿಕ್ಕೆ ಅಡವಿಗೆ ಹೋಗುತ್ತಿದ್ದ. ಅದು ದೇವಿಗೆ ಗೊತ್ತಾಯ್ತು. ಅಡವಿಯಲ್ಲಿ ಹುಲ್ಲು ಕೊಯ್ದು ಒತ್ತಟ್ಟಿಗೆ ಇಡುತ್ತಿದ್ದ. ದೇವಿ ಶೋಧ ಮಾಡುತ್ತ ಭಾಯಾ ಇದ್ದಲ್ಲಿಗೆ ಬಂದು, ಕಾಣದಂತೆ ಗಿಡದ ಮರೆಯಾದಳು. ಸೇವಾಲಾಲ ಅವಸರದಲ್ಲಿ ಹುಲ್ಲುಕೊಯ್ದು ದೊಡ್ಡ ಹೊರೆ ಕಟ್ಟಿದನು. ಹೊರೆ ಹೊತ್ತು ಶಿರ್ಸಿ ಹತ್ತಿರದ ಎರಡು ಗುಡ್ಡಗಳನ್ನು ದಾಟಿ ಮನೆಗೆ ಬರುತ್ತಿದ್ದಾಗ ಆಕಾಶ- ಭೂಮಿ ಒಂದೇ ಕಾಣುವಂತಾಗಿ ತಲೆಸುತ್ತು ಬಂದು ನೆಲಕ್ಕೆ ಬಿದ್ದನು. ಇದು ದೇವಿಯ ವಿಚಿತ್ರ ರೂಪದ ಪರಿಣಾಮ. ಸ್ವಲ್ಪ ಸಮಯದ ನಂತರ ಎದ್ದು ಕುಳಿತನು. “ಸೇವಾಲಾಲ ಏಳು ಎದ್ದೇಳು ನಿನ್ನನ್ನು ತಿಂದು ಭಸ್ಮ ಮಾಡುವೆ” ಎಂದಳು. “ಈಗಾದರೂ ಭಕ್ತನಾಗಲು ಒಪ್ಪಿಕೋ” ಎಂದಳು. ಸೇವಾಲಾಲ
ಹ ಿ ೀ ಳಿ ದ ು .
“ದುಃಖದಲ್ಲಿದ್ದವನಿಗೆ ದುಃಖ ಕೊಡಬೇಡ ತಂದೆತಾಯಿಯ ಅಪ್ಪಣೆ ಪಡೆದು, ಭಕ್ತನಾಗುವುದರ ಬಗ್ಗೆ ತಿಳಿಸುವೆ” ಎಂದನು.

ಜಗತಾರೋ ಕೆರೋ ಮಾತಾ ದೇವಿನ
ಕೋನಿ ಪುಚೋ ಯಾಡಿ ಬಾಪೇನ ॥೯॥

ಕೂಂ ಗುತಾಂವು ಅಜ್ಞಾನೇರ ಮಾಯಿ
ವಾಟ ದೇದ ಜಾಯೇನ ತೂಯಿ
ಬಾಪು ಮಾತೇಪರ ಭಾರೋ ವಟಾನ ॥೧॥

ದಿನಿ ವಾಟ ಭಾಯಾನ ಜಾಯೇನ
ಭಾಯಾ ಭಾರೋ ಫೇಕೋ ಘರಲಾನ
ಜಲ್ಮೇವಾಳ ಆಡೆಲಾಗ ಭಾಯಾನ ॥೨॥

ಪೇಟ ದುಕೇಲಾಗೋರೆ ಭೂಕೇತಿ
ಬಾಲ ಬಚ್ಯಾರೋರೇ ಕ್ರೋಧೇತಿ
ಚಿಂತಾ ಛೇನಿ ಕಾಂಯಿ ಬೇಟಾ ಹಮೇತಿ ॥೩॥

ಬಾವಾಲಾಲ ಕೆರೋರೇ ಮಾತಾನ
ಖಡಕೋನಿ ಲಾಬೋ ವೇಳಾನ
ಕರನ ವೇಗೋ ವೇಳಾ ಮನ ॥೪॥

ಭಾಯಾ ಸಮಜಾಯೋ ಜನ್ಮೇವಾಳೇನ
ಸಾಮಳೋ ಮಾ-ಬಾಪ ಮಾರಿ ವಾತೇನ
ಖಾಣೋ ಖಾನ ಚಲೋಗೋ ಸೋಯೇನ ॥೫॥

ಮಾಯಾಜಾಳೇಮ ಭಾಯಾ ಗುತಾನ
ಚಲೋಜಾರೋರೇ ಖಡ ಕಾಟೇನ
ರಾಜುದಾಸ ಕೆರೋ ವರ್ಣನ ॥೬॥

**ಸಾರಾಂಶ:**

ಸೇವಾಲಾಲ ತಾಯಿ-ತಂದೆಯರನ್ನು ಕೇಳಿ ತಿಳಿಸುವೆ ಎಂದು ಹುಲ್ಲಿನ ಹೊರೆ ಹೊತ್ತು ನಿಂತಾಗ, ದೇವಿ ಹೋಗಲು ದಾರಿ ಬಿಟ್ಟಳು. ಸೇವಾಲಾಲ ಹೊರೆಯನ್ನು ತಂದು ಮನೆಯ ಮುಂದೆ ಒಗೆದನು. ಹಸಿವಿನಿಂದ ಹೊಟ್ಟೆ ಚುರುಗುಡುತ್ತಿತ್ತು. ತಾಯಿ-ತಂದೆಯರು ಸೇವಾಲಾಲನಿಗೆ ಇಷ್ಟು ಹೊತ್ತೇಕೆ ಎಂದು ಕೇಳಿದಾಗ ಸರಿಯಾದ ಸಮಯಕ್ಕೆ ಹುಲ್ಲು ಸಿಗಲಿಲ್ಲ ಅದಕ್ಕೆ ತಡವಾಯಿತೆಂದು ಸಮಜಾಯಿಸಿ ಹೇಳಿದನು. ಊಟ ಮಾಡಿ ಮಲಗಲು ಹೋದನು. ರಾತ್ರಿ ನಿದ್ರೆ ಮಾಡದೆ ಮಾಯಾಜಾಲದಲ್ಲಿ ಸಿಕ್ಕಿಕೊಂಡನು. "ದೇವಿಯ ಭಕ್ತನಾಗುವ ವಿಷಯ ತಾಯಿ-ತಂದೆಯರಿಗೆ ಹೇಗೆ ತಿಳಿಸುವುದು" ಎಂದು ಚಿಂತಿಸತೊಡಗಿದನು.

ಭಕ್ತಿ ಕಾರಣ ವೇಗೋ ಭೀಕಾರಿ
ಭಾರಿ ವಚನ ಸೇವಾ ಅವತಾರಿ ॥ಪ॥

ಮಾತೇಪರ ಭಾರೋರೇ ಮೇಲನ
ಲಾಯೋ ಶಿರಸಿ ಕೋಟಾರ ಹಾಟೇನ
ಲೋಕ ಕೆರೇ ಆರೋ ಹಾಟಕರಿ ॥೧॥

ಭಾರೋ ಮೇಲೋ ಹಾಟೇಮಾಯಿ ಜಾನ
ಗಿರಾಕಿ ಆನ್ ಕಿಮತ ಪುಚನ
ಭಾಯಾ ಕೆರೋ ಗಿರಾಕಿ ವನೂನ ||೨||

ಮಾರೇ ಮುಂಡೆ ಸಾಮುರೇ ದೇಖನ
ಮೂಲ ಮಜೂರಿ ದೇದೊರೇ ಮನ
ಗಿರಾಕಿರ ದರ ಆಯಿ ಭಾಯಾನ ||೩||

ಭಾರೀರ ಕಿಮತೇರ ಪರ
ದಿನೇ ರಪಿಯಾ ಭಾಯಾನರೇ ತೇರ
ಕಿದೋ ಹಾಟ ಘಂವು ಚಾವಳೇರ ||೪||

ಖೋಳೇಮಾಯಿ ಧಾನ್ಯರೇ ಘಾಲನ
ಚಲೋ ಆರೋರೇ ಭಾಯಾ ಘರೇನ
ಆದಿಮಾಯಾ ರೂಪ ಬದಲಾನ ||೫||

ಜಗತಾರೋ ರೂಪ ದೇಕನ
ಕೆಲಾಗೋರೆ ಮಾತಾ ದೇವಿನ
ವಾತ ಸಾಮಳ ಯಾಡಿ ಕರನ ||೬||

ವಾಟ ದೇದ ಜಾಯೇನಯೇ ಘರ
ಮಾ-ಬಾಪ ಮರರೇ ಭೂಕೇತಿ
ಜಗದಂಬಾ ರಿಸೇಮ ಭರಾನ ||೭||

ಭಯಾನಕ ದಾತರೇ ಕಾಡನ
ರಾಕ್ಷಸ ಸರಿಕ ಡೋಳಾರೇ ಕಾಡನ
ದೇವಿ ವಿಕ್ರಾಳ ರೂಪ ದಕಾಳನ ||೮||

ಧೂಣಿವಾಳೇನ ಕ್ರೋಧ ಭರಾನ
ಅಂದಳಿಖಾನ ಪಡಗೋ ಧರತಿನ
ಆನಂದ ವೇಗಿರ ದೇವಿನ ||೯||

ಥೋಡಿವೇಳಾನ ಅರೂರ ಆನ
ಕೆರೋ ಸಾತ ಸಗುಣಿನ
ಘಣೋ ಸತಾಮತ ದೇವಿ ತೂ ಮನ ||೧೦||

ಮಾರ ಭಕ್ತಿ ಕರ ಸೇವಾದಾಸ
ವಿನಾಕಾರಣ ಅಜಿ ದುಚು ತ್ರಾಸ
ಪದಗಾರೋ ಭಾಯಾರ ರಾಜುದಾಸ ||೧೧||

**ಸಾರಾಂಶ:**

ವಚನ ಪಾಲಕನಾದ ಸೇವಾಲಾಲನು, ತಲೆಯ ಮೇಲೆ ಹುಲ್ಲಿನ ಹೊರೆ ಹೊತ್ತು, ಶಿರ್ಸಿ-ಕೋಟಾ ಸಂತೆಗೆ ಮಾರಲು ತರುತ್ತಾನೆ. ಆಗ ಜನ ಇವನನ್ನು ನೋಡಿ ಸಂತೆಗಾರ ಬಂದನೆಂದು ಅಪಹಾಸ್ಯ ಮಾಡುತ್ತಾರೆ. ಹುಲ್ಲಿನ ಹೊರೆ ಸಂತೆಯಲ್ಲಿ ಇಡುತ್ತಿದ್ದಂತೆ, ಗಿರಾಕಿಗಳು ಭಾರವಾದ ಹೊರೆಯನ್ನು ಹದಿಮೂರು ರೂಪಾಯಿ ಕೊಟ್ಟು ಖರೀದಿಸುತ್ತಾರೆ. ಸೇವಾಲಾಲನು ಗೋಧಿ-ಕಡ್ಲಿಯ ಸಂತೆ ಮಾಡಿ ಜೋಳಿಗೆಯಲ್ಲಿ ಹಾಕಿಕೊಂಡು ಮನೆಗೆ ಬರುತ್ತಾನೆ. ಜಗದಂಬೆ ರೂಪ ಬದಲಿಸಿ ಸೇವಾಲಾಲನನ್ನು ತಡೆಯುತ್ತಾಳೆ. "ದೇವಿ, ನಿಲ್ಲಿಸಬೇಡ. ಮನೆಯಲ್ಲಿ ತಾಯಿ-ತಂದೆ, ಸಹೋದರರು ಉಪವಾಸ ಇದ್ದಾರೆ" ಎನ್ನುತ್ತಾನೆ. ದೇವಿ ದಾರಿ ಬಿಡಲಿಲ್ಲ. ಮತ್ತೇ ಮಹಾಕಾಳಿಯ ರೂಪ ತಾಳಿ ಹೆದರಿಸುತ್ತಾಳೆ. ಭಾಯಾ ಮೂರ್ಛೆ ಬಂದು ನೆಲಕ್ಕೆ ಬಿಳುತ್ತಾನೆ. ಆಗ ಶಾಂತವಾಯಿತು ದೇವಿಯ ಮನಸ್ಸು. ಸ್ವಲ್ಪ ಸಮಯದ ನಂತರ ಪ್ರಜ್ಞೆ ಬಂದು, ಎದ್ದು ಕುಳಿತನು. "ನನ್ನ ಭಕ್ತನಾಗು ಸೇವಾ" ಎಂದು ದೇವಿ ಹೇಳಿದಳು. ವಿನಾಕಾರಣ ತೊಂದರೆ ಕೊಡಬೇಡವೆಂದು ಸೇವಾ ಬೇಡಿಕೊಂಡನು.

ಲಗಾಲ ಲಾಗಲರೇ ಕೇಸರಿ ಗಂಧ
ಭಜಲ ಭಜಲರೇ ಹರಿಗೋವಿಂದ ||ಪ||

ಭಕ್ತಿ ಕರೇನ ವೆಜೋ ತಯಾರ
ದುಃಖ ದಶಾ ದೂರ ಕರೂ ತಾರ
ಬಾರ ಹಾತೇತಿ ಲಗಾದು ಆಧಾರ ||೧||


ಪ್ರಭು ಸೇವಾ ಕೆರೋರೇ ದೇವಿನ
ಫಸಾನಾಕಿ ಝೂಪಾ ಅವತಾರೇಮ
ವೋತಿ ವೆರೋಚು ಮ ನಾರಾಜ ||೨||


ವಿಶ್ವಾಸ ರೇದ ಕೇರಿ ದೇವಿ
ಸೇವಾಲಾಲ ವೆಜೋರೆ ಕಬೂಲ
ಭಲೋ ವೆಜಾಯ ತಾರೋ ಜಲಮೇಮ ||೩||


ಅವತಾರಿ ಕಬೂಲರೇ ವೇಗೋ
ಕಾಂಯಿ ವಾತ ದೇವಿನ ಕೇಲಾಗೋ
ತಾರ ಬಚನೇನ ಮಯಿ ಮಾನಗೋ ॥೪॥

**ಸಾರಾಂಶ:**

“ಗಂಧದ ತಿಲಕ ಹಚ್ಚಿಕೋ, ಹರಿಗೋವಿಂದನ ಹೆಸರಿನ ಮೇಲೆ ಧ್ಯಾನ ಮಾಡಲು ಮುಂದಾಗು. ದುಃಖ ದುಮ್ಮಾನ ದೂರ ಮಾಡುವೆ. ಹನ್ನೆರಡು ಕೈಗಳಿಂದ ಆಧಾರ ಕೊಡುವೆ” ಎಂದಳು. “ಝೂಪಾ ಅವತಾರದಲ್ಲಿ ಫಸಾಸಿರುವಿ. ಆದ್ದರಿಂದ ನಿನ್ನ ಭಕ್ತಿ ಬೇಕಾಗಿಲ್ಲ” ಎಂದನು. ಇನ್ನು ಮುಂದೆ ಫಸಾಸುವುದಿಲ್ಲ. ಈಗಲೇ ವಿಶ್ವಾಸ ಇಟ್ಟು ವಚನಕ್ಕೆ ಒಪ್ಪಿಕೊಳ್ಳು” ಎಂದಳು. ದೇವಿಯ ಮೇಲೆ ವಿಶ್ವಾಸವಿಟ್ಟು ಸೇವಾಲಾಲ ಭಕ್ತನಾಗಲು ಒಪ್ಪಿಕೊಳ್ಳುತ್ತಾನೆ.







## ಸಂಪಾದಕರು

# ಪ್ರೊ. ಕಾಳೇಗೌಡ ನಾಗವಾರ

**ಕಾ**ಳೇಗೌಡ ನಾಗವಾರ ಕನ್ನಡ ಸಾಂಸ್ಕೃತಿಕ ಲೋಕದ ಮಾನವೀಯ ಕತೆಗಾರ, ಅಪಾರ ಅಂತಃಕರಣದ ಕವಿ ಹಾಗೂ ದೇಶೀಸಂಸ್ಕೃತಿಗಳ ಬಗ್ಗೆ ತುಂಬು ಹೆಂಗರುಳುಳ್ಳ ಜಾನಪದ ತಜ್ಞ. ಕರ್ನಾಟಕದ ಉದ್ದಗಲಕ್ಕೂ ಅವಿರತವಾಗಿ ಸಂಚರಿಸುತ್ತಾ ಅಪಾರವಾದ ಲೋಕಾನುಭವವನ್ನು ಪಡೆದಿರುವ ಇವರು, ತಮ್ಮೊಳಗೆ ಜನಪರ ಆಲೋಚನೆಯ ಸೂಕ್ಷ್ಮ ಸೃಜನಶೀಲ ಮನಸ್ಸನ್ನು ಎಚ್ಚರದಿಂದ ಕಾಯ್ದುಕೊಂಡು ಬಂದಿರುವ ಪ್ರತಿಭಾವಂತ ಲೇಖಕ. ಅಚ್ಚಕನ್ನಡದ ಗ್ರಾಮೀಣ ಸತ್ವದಿಂದ ರೂಪುಗೊಂಡ ನಾಗವಾರ ಅವರು ಎಪ್ಪತ್ತರ ದಶಕದಿಂದೀಚಿನ ಕನ್ನಡ ಸೃಜನಶೀಲ ಪ್ರಜ್ಞೆಯ ಅವಿಭಾಜ್ಯ ಅಂಗವಾಗಿದ್ದಾರೆ.

ಕ್ರಿಯಾಶೀಲ ಸಂಘಟಕರಾದ ಕಾಳೇಗೌಡ ನಾಗವಾರ (೧೯೪೭) ಬೆಂಗಳೂರು ಗ್ರಾಮಾಂತರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕಿನ ನಾಗವಾರ ಗ್ರಾಮದವರು. ಕನ್ನಡದ ಪ್ರಗತಿಪರ ಚಳವಳಿಗಳೊಂದಿಗೆ ಬೆಳೆದುಬಂದ ಕಾಳೇಗೌಡ ನಾಗವಾರರ ಎಲ್ಲ ಬರವಣಿಗೆಗಳೂ ಸಮಾಜವಾದಿ ಆಶಯಗಳ ನೆಲೆಗಟ್ಟಿನ ಮೇಲೆ ನಿಂತಿವೆ. ಈಗ ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿದ್ದಾರೆ.

ರಾಮಮನೋಹರ ಲೋಹಿಯಾ ಅವರ ಚಿಂತನೆಯಿಂದ ಪ್ರಭಾವಿತರಾಗಿರುವ ಇವರು ಕರ್ನಾಟಕದ ಎಲ್ಲ ಪ್ರಗತಿಪರ ಚಳವಳಿಗಳೊಂದಿಗೆ ಬೆಳೆದು ಬಂದವರು. ಕನ್ನಡದ ಸಾಂಸ್ಕೃತಿಕ ಇತಿಹಾಸದಲ್ಲಿ ಪ್ರಮುಖ ಘಟ್ಟವಾದ ಬಂಡಾಯ ಸಾಹಿತ್ಯ

ಚಳವಳಿಯ ಸ್ಥಾಪಕ ಸಂಚಾಲಕರಲ್ಲೊಬ್ಬರು. ಭಾರತೀಯ ಭಾಷೆಗಳಲ್ಲೇ ಮೊದಲ ಬಾರಿಗೆ ಲೋಹಿಯಾ ಅವರ ಸಮಾಜವಾದಿ ವಿಚಾರಗಳನ್ನು ಸಮಗ್ರವಾಗಿ ಕನ್ನಡಕ್ಕೆ ತರುವ ಮಹತ್ವದ ಯೋಜನೆಯ ಸಾಂಸ್ಕೃತಿಕ ಹೊಣೆಗಾರಿಕೆಯನ್ನು ಕಾಳೇಗೌಡ ನಾಗವಾರ ಅವರು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ.

ವಸಾಹತುಶಾಹಿ ಮತ್ತು ನಮ್ಮ ಜಾನಪದ ವಯ್ಯಾಕರಣಿಗಳ ಸಿದ್ಧ ಮಾರ್ಗವನ್ನು ನಿರಾಕರಿಸಿ, ಜಾನಪದ ಸಂಗ್ರಹ ಹಾಗೂ ವಿಮರ್ಶೆಗಳಿಗೆ ಸೃಜನಶೀಲತೆಯ ಪ್ರಾಣಶಕ್ತಿಯನ್ನು ತುಂಬಿದವರು. ನಿರ್ಲಕ್ಷಿತ ಒಳಸಂಸ್ಕೃತಿಗಳ ಜ್ಞಾನಪರಂಪರೆಯ ಮಹಾಪ್ರಭೆಯನ್ನು ಶೋಧಿಸುತ್ತಾ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಮರ್ಶಾ ನೆಲೆಯಿಂದ ಹೊರಡುವ ಕಾಳೇಗೌಡ ನಾಗವಾರರ ಜಾನಪದ ವಿಮರ್ಶೆಯ ಮಾದರಿಯು ಕನ್ನಡಕ್ಕೆ ಇಂದು ಹೆಚ್ಚು ಪ್ರಸ್ತುತವಾಗಿದೆ. ವಿವಿಧ ಬಗೆಯ ಜಾನಪದ ಅಭಿವ್ಯಕ್ತಿಗಳು ಮತ್ತು ದೇಶೀಸಂಸ್ಕೃತಿಯ ಸೂಕ್ಷ್ಮಗಳ ಹರಿಕಾರರಾದ ಜನಪದ ಕಲಾವಿದರ ಬಗ್ಗೆ ಸದಾ ಕಟ್ಟಕ್ಕರೆಯಿಂದಿರುವ ನಾಗವಾರರು ಪ್ರಸ್ತುತ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಕ್ರಿಯಾಶೀಲ ಅಧ್ಯಕ್ಷರಾಗಿ, ಜಿಲ್ಲಾ ಕಲಾವಿದರ ಸಮಾವೇಶ, ಕರಾವಳಿ ತೀರದ ಒಂದುನೂರು ಜನ ಶ್ರೇಷ್ಠ ಯಕ್ಷಗಾನ ಕಲಾವಿದರಿಗೆ ಗೌರವ-ಸನ್ಮಾನ, ದೇಶೀ ಚಿಂತನೆಯ ಕಾರ್ಯಕ್ರಮಗಳು, ಜನಪದ ಕಲಾವಿದರ ಆತ್ಮಕತೆಗಳನ್ನು ನಿರೂಪಿಸಿ ಪ್ರಕಟಿಸುವ ಸಾಂಸ್ಕೃತಿಕ ಮಹತ್ವದ ಅರ್ಥಪೂರ್ಣ ಕಾರ್ಯದ ಮೂಲಕ ಜನಪದ ಕಲಾವಿದರಲ್ಲಿ ಆತ್ಮಸ್ಥೈರ್ಯವನ್ನು ಮೂಡಿಸುವ ತುಂಬು ಚಟುವಟಿಕೆಗಳನ್ನು ಕೈಗೊಳ್ಳುವುದರ ಮುಖೇನ ಜಾನಪದ ಅಕಾಡೆಮಿಯ ಕಾರ್ಯಶೈಲಿಗಳನ್ನು ವಿಸ್ತರಿಸಿದ್ದಾರೆ.

---

ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೫೭೦ ೦೦೬



## ಸಂಪಾದಕರು

### ಪ್ರೊ. ಹಿ ಚಿ ಬೋರಲಿಂಗಯ್ಯ

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಬುಡಕಟ್ಟು ಅಧ್ಯಯನ ವಿಭಾಗದ ಪ್ರಾಧ್ಯಾಪಕರು ಮತ್ತು ವಿಭಾಗ ಮುಖ್ಯಸ್ಥರೂ ಆಗಿರುವ ಹಿ. ಚಿ. ಬೋರಲಿಂಗಯ್ಯ (೧೯೫೫) ಅವರು ಬುಡಕಟ್ಟು ಸಂಸ್ಕೃತಿಯನ್ನು ಆಳವಾಗಿ ಅಧ್ಯಯನ ಮಾಡಿರುವ ವಿದ್ವಾಂಸರು. ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕಿನ ಹಿತ್ತಲಪುರ ಗ್ರಾಮದವರಾದ ಇವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಚಿನ್ನದ ಪದಕದೊಂದಿಗೆ ಕನ್ನಡ ಎಂ.ಎ. ಪದವಿ ಪಡೆದಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನ ನಿಕಾಯದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಸಚಿವ ಮತ್ತು ಸಮಾಜ ವಿಜ್ಞಾನಗಳ ನಿಕಾಯದ ಡೀನ್, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಹಾಗೂ ನಾಟಕ ಅಕಾಡೆಮಿಯ ರಿಜಿಸ್ಟ್ರಾರ್ ಆಗಿ ಅಪಾರವಾದ ಆಡಳಿತಾತ್ಮಕ ಅನುಭವವಿರುವ ಬೋರಲಿಂಗಯ್ಯ ಅವರು ಇಟಲಿ, ಫ್ರಾನ್ಸ್, ಹಾಲೆಂಡ್ ಮತ್ತು ಇರಾನ್‌ನ ರಾಜಧಾನಿ ಟೆಹರಾನ್‌ನಲ್ಲಿನಡೆದ ಅಂತಾರಾಷ್ಟ್ರೀಯ ಗೊಂಬೆಯಾಟ ಉತ್ಸವದಲ್ಲಿ ಭಾರತದ ಪ್ರತಿನಿಧಿಯಾಗಿ (೧೯೯೧ ಹಾಗೂ ೧೯೯೨) ಭಾಗವಹಿಸಿದ್ದಾರೆ. ಜಾನಪದ ಅಕಾಡೆಮಿಯ ಬುಡಕಟ್ಟು ಅಧ್ಯಯನ ಸಂಪುಟಗಳ ಸಲಹಾ ಸಮಿತಿ ಸದಸ್ಯ ಹಾಗೂ ಸಂಪಾದಕರಲ್ಲಿ ಒಬ್ಬರು. ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಮಹಾಕಾವ್ಯ ಮಾಲೆಯ

ಗೌರವ ಸಂಪಾದಕರು ಹಾಗೂ ಡಾ. ರಾಮಮನೋಹರ ಲೋಹಿಯಾ ಅಧ್ಯಯನ ಪೀಠದ ಸಂಚಾಲಕರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ.

**ಉಜ್ಜನಿ ಚೌಡಮ್ಮ, ದಾಸಪ್ಪ - ಜೋಗಪ್ಪ, ಗಿರಿಜನ ನಾಡಿಗೆ ಪಯಣ, ಸಿದ್ಧಿಯರ ಸಂಸ್ಕೃತಿ, ಕಾಡು - ಕಾಂಕ್ರಿಟ್ ಮತ್ತು ಜಾನಪದ, ಗಿರಿಜನರು, ಕರ್ನಾಟಕ ಜನಪದ ಕಲೆಗಳ ಕೋಶ, ಮಂಟೇಸ್ವಾಮಿ ಮಹಾ ಕಾವ್ಯ, ಗೊಂಡರ ರಾಮಾಯಣ, ಬುಡಕಟ್ಟು ದೈವಾರಾಧನೆ, ವಿಸ್ಮೃತಿ ಮತ್ತು ಸಂಸ್ಕೃತಿ** ಮುಂತಾದವು ಇವರ ಪ್ರಕಟಿತ ಕೃತಿಗಳು. **ಪ್ರಶಸ್ತಿ ಪಡೆದ ಮಹನೀಯರು, ಕರ್ನಾಟಕ ಜಾನಪದ, ಜಾನಪದ ಗಂಗೋತ್ರಿ** ಕೃತಿಗಳ ಸಂಪಾದಕರಾಗಿ ಕಾರ್ಯನಿರ್ವಹಿಸಿರುವ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರು ಗಿರಿಜನ ಸಂಸ್ಕೃತಿಯ ಅಧ್ಯಯನಕ್ಕಾಗಿ ಬರೋಡದ ಭಾಷಾ ಸಂಶೋಧನ ಪರಿಷತ್ತಿನ ಪ್ರತಿಷ್ಠಿತ ಪ್ರಶಸ್ತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಬಹುಮಾನ, ಗುಂಡ್ಮಿ ಜಾನಪದ ಪ್ರಶಸ್ತಿ ಹಾಗೂ ಆರ್ಯಭಟ ಸಾಹಿತ್ಯ ಪ್ರಶಸ್ತಿಗಳನ್ನು ಪಡೆದಿದ್ದಾರೆ.

೧೯೯೮ರಿಂದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ ಹಾಗೂ ೨೦೦೦ದಿಂದ ತಂಜಾವೂರಿನ ದಕ್ಷಿಣವಲಯ ಸಾಂಸ್ಕೃತಿಕ ಕೇಂದ್ರದ ಸದಸ್ಯರಾಗಿ ಇವರನ್ನು ನೇಮಕ ಮಾಡಲಾಗಿದೆ.

❍

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಬುಡಕಟ್ಟು ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಕಮಲಾಪುರ, ಹಂಪಿ - ೫೮೩ ೨೭೬

**ಸಹಸ್ರಮಾನ ಜಾನಪದ ಸಂಪುಟಗಳು**

೧. ಗಂಧರ್ವಲೋಕದ ಗೆಣೆಕಾರರು

೨. ಕರಾವಳಿ ಯಕ್ಷಗಾನ

೩. ಕರ್ನಾಟಕ ಬುಡಕಟ್ಟುಗಳು : ಸಂಪುಟ ಎರಡು

೪. ಗಿರಿಜನ ಕಾವ್ಯ
(ಪ್ರಾತಿನಿಧಿಕ ಗಿರಿಜನ ಕಾವ್ಯ)

೫. ಗಿರಿಜನ ಸಂಸ್ಕೃತಿ
(ಕರ್ನಾಟಕ ಗಿರಿಜನ ಸಂಸ್ಕೃತಿಯ ಬಗೆಗಿನ ಪ್ರಾತಿನಿಧಿಕ ಲೇಖನಗಳು)

೬. ಹಲವು ತೋಟದ ಹೂಗಳು
(ಪ್ರಾತಿನಿಧಿಕ ಜನಪದ ತತ್ತ್ವಪದಗಳು)

೭. ನಡುನೀರ ತಂಪು
(ಪ್ರಾತಿನಿಧಿಕ ಜನಪದ ಕಾವ್ಯ)

೮. ಜಾನಪದದ ತುಂಬುಹೊಳೆ
(ವಿವಿಧ ಜಾನಪದ ತಜ್ಞರ ಅಧ್ಯಯನ ಟಿಪ್ಪಣಿಗಳು)

೯. ಜೀಶಂಪ ಅವರ ಜಾನಪದ ಬರಹಗಳು

೧೦. ಕಲಾವಿದರ ಒಡನಾಟ

೧೧. ಎಳೆಯರಿಗಾಗಿ ಜಾನಪದ ಸಂಪುಟಗಳು